ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಲು ಸಿದ್ಧಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಅಶೋಕ್ ರಾಕೇಶ್ ಡಿ'ಸೋಜ
ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ನೋಂದಣಿ ಸಂಖ್ಯೆ: KTSM 00133

ಮಾರ್ಗದರ್ಶಕರು
ಡಾ. ಡೆನಿಸ್ ಫೆರ್ನಾಂಡಿಸ್
ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಮೂಲಕ
ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583276
2015

ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್

(ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಲು ಸಿದ್ಧಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಅಶೋಕ್ ರಾಕೇಶ್ ಡಿ'ಸೋಜ

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ನೋಂದಣಿ ಸಂಖ್ಯೆ: KTSM 00133

ಮಾರ್ಗದರ್ಶಕರು

ಡಾ. ಡೆನಿಸ್ ಫೆರ್ನಾಂಡಿಸ್

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಮೂಲಕ

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–583276

2015

ಮಾರ್ಗದರ್ಶಕರ ದೃಢೀಕರಣ ಪತ್ರ

ಅಶೋಕ್ ರಾಕೇಶ್ ಡಿ'ಸೋಜ ಇವರು 'ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್' ಎಂಬ ವಿಷಯದ ಮೇಲೆ ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಪಿಹೆಚ್.ಡಿ. ಪದವಿಗಾಗಿ ತಮ್ಮ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಮಹಾಪ್ರಬಂಧವು ಸಂಶೋಧನಾ ವಿದ್ಯಾರ್ಥಿಯ ಮೂಲ ಸಂಶೋಧನಾ ಪ್ರಬಂಧವಾಗಿದ್ದು, ಸ್ವಂತ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ, ಉದ್ದೇಶಗಳಿಗಾಗಲಿ ಇವರು ಬಳಸಿಕೊಂಡಿಲ್ಲವೆಂದೂ, ಇದನ್ನು ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ,
ಮಂಗಳೂರು
ದಿನಾಂಕ : 18/05/2015

ಡಾ. ಡೆನಿಸ್ ಫೆರ್ನಾಂಡಿಸ್
ಮಾರ್ಗದರ್ಶಕರು
ಕರ್ನಾಟಕ ತಿಯೊಲಾಜಿಕಲ್
ಸಂಶೋಧನಾ ಕೇಂದ್ರ, ಮಂಗಳೂರು.

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಹೆಚ್.ಡಿ. ಪದವಿಗಾಗಿ ಸಾದರಪಡಿಸಿದ 'ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಬಾಸೆಲ್ ಮಿಶನ್' ಶೀರ್ಷಿಕೆಯ ಈ ಮಹಾಪ್ರಬಂಧವು ನನ್ನ ಸ್ವತಂತ್ರ ಪ್ರಬಂಧವಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಮಾರ್ಗದರ್ಶಕರು ಹಾಗೂ ಸಂತ ಅಲೋಶಿಯಸ್ ಕಾಲೇಜಿನ ಇತಿಹಾಸ ಉಪನ್ಯಾಸಕರಾಗಿರುವ ಡಾ. ಡೆನಿಸ್ ಫೆರ್ನಾಂಡಿಸ್‌ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಮಹಾಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ,
ಮಂಗಳೂರು

ಅಶೋಕ್ ರಾಕೇಶ್ ಡಿ'ಸೋಜ

ದಿನಾಂಕ: 18/05/2015

ಪರಿವಿಡಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಸಂಶೋಧಕರ ಪ್ರಮಾಣ ಪತ್ರ

ಪರಿವಿಡಿ

ಅಧ್ಯಾಯ: ಒಂದು 1–27

ಪೀಠಿಕೆ

* ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
* ಅಧ್ಯಯನದ ಆಕರಗಳು
* ಅಧ್ಯಯನದ ಸ್ವರೂಪ

ಅಧ್ಯಾಯ: ಎರಡು 28–142

ಪ್ರಥಮ ಜಾಗತಿಕ ಯುದ್ಧ ಮತ್ತು ಬಾಸೆಲ್ ಮಿಶನಿನ ಸಂದಿಗ್ಧ ಕಾಲ (1914-1927)

* ಭಾರತದಲ್ಲಿನ ಜರ್ಮನ್ ಮಿಶನ್‌ಗಳ ಸ್ಥಿತಿ–ಗತಿ
* ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನ್ ಬಗ್ಗೆ ಬ್ರಿಟಿಷ್ ಧೋರಣೆ ಮತ್ತು ಕ್ರಮ
* ಮಿಶನ್ ಬಗ್ಗೆ ಪತ್ರಿಕೆಗಳ ಧೋರಣೆ
* ಬಳ್ಳಾರಿ ಕ್ಯಾಂಪ್‌ನಲ್ಲಿ ಬಾಸೆಲ್ ಮಿಶನರಿಗಳು
* ನೀಲಗಿರಿ ಪ್ರದೇಶದಲ್ಲಿ ಬಾಸೆಲ್ ಮಿಶನರಿಗಳ ಚಲನವಲನಗಳ ಮೇಲೆ ನಿರ್ಬಂಧ
* ಮಿಶನ್ ಮುಂದುವರಿಕೆಗೆ ಸ್ವಿಸರ ಪ್ರಯತ್ನ
* ಬ್ರಿಟಿಷ್ ಸರಕಾರದಿಂದ ಒಪ್ಪಿಗೆ ಪಡೆದ ಲೈಥರ ಯೋಜನೆ
* ಬಾಸೆಲ್ ಮಿಶನಿನ ಮಿಶನ್ ಠಾಣ್ಯಗಳ ಸ್ಥಿತಿ
* ಕೆನರೀಸ್ ಇವ್ಯಾಂಜಲಿಕಲ್ ಮಿಷನ್‌ನ ಆರಂಭ
* ಆರಂಭದಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸ್ಥಿತಿ
* 1920ರ ದಶಕದಲ್ಲಿ ಬದಲಾದ ಬ್ರಿಟಿಷರ ನೀತಿ
* ಜರ್ಮನ್ ಮಿಶನ್‌ಗಳ ವರ್ತನೆ
* 1922ರ ನಂತರದಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸ್ಥಿತಿ
* ಬಾಸೆಲ್ ಮಿಶನಿನ ಇತರ ಪ್ರದೇಶಗಳ ಸ್ಥಿತಿ–ಗತಿ
* ಬಾಸೆಲ್ ಮಿಶನ್ ಮತ್ತು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಂಬಂಧ
* ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿನ ಕಲಹಗಳು

* ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಲುಸಾನ್ ಕಮಿಟಿಯ ಮೇಲಿನ ಟೀಕೆಗಳು

* ಕೈಗಾರಿಕಾ ಮಿಷನ್

* ದೇಶಿಯ ಮಿಶನ್ ಹಾಗೂ ಮಡಗಾಸ್ಕರ್ ಮಿಶನ್

* ಮಿಶನ್ ಫಾರ್ಮ್

* ಶಿಕ್ಷಣ ಮತ್ತು ಕೆನರೀಸ್ ಇವ್ಯಾಂಜಲಿಕಲ್ ಮಿಶನ್

* ವೈದ್ಯಕೀಯ ಮಿಶನ್

ಅಧ್ಯಾಯ: ಮೂರು 143–201

ಬಾಸೆಲ್ ಮಿಶನರಿಗಳ ಪುನರ್ ಆಗಮನ (1927–1939)

* ಜರ್ಮನ್ ಮಿಶನ್‌ಗಳ ವರ್ತನೆ

* ಮಲಬಾರಿಗೆ ಬಾಸೆಲ್ ಮಿಶನರಿಗಳ ಪುನರ್ ಆಗಮನ

* ದಕ್ಷಿಣ ಕೆನರಾ ಮತ್ತು ಮರಾಠ ಪ್ರದೇಶಗಳಿಗೆ ಬಾಸೆಲ್ ಮಿಶನರಿಗಳ ಪುನರ್ ಆಗಮನ

* ಬಾಸೆಲ್ ಮಿಶನರಿಗಳು ಹಾಗೂ ಮಿಶನ್ ಕಾರ್ಯ

* ಹೊಸ ರೂಪ ಪಡೆದ ಮಿಶನ್ ಪತ್ರಿಕೆ ಕ್ರೈಸ್ತ ಹಿತವಾದಿ

* ಮಿಶನ್ ವ್ಯವಸ್ಥೆಯಲ್ಲಿನ ಅಸಮಾಧಾನ

* ಬಾಸೆಲ್ ಮಿಶನಿನ ಡೈರೆಕ್ಟರ್‌ರಾದ ಡಾ.ಕೆ.ಹರ್ಟೆನ್‌ಸ್ಟೈನ್‌ರ ಭಾರತ ಭೇಟಿ

* ಮಿಶನ್ ಶಿಕ್ಷಣ ವ್ಯವಸ್ಥೆ

* ಬಾಸೆಲ್ ಮಿಶನರಿಗಳಿಗಾಗಿ ಕೊಡಗು ಹಾಗೂ ನೀಲಗಿರಿ ಕ್ರೈಸ್ತರ ಬೇಡಿಕೆ

* ಶೊಸ್ಸರ್‌ರಿಂದ ಹೊಸ ಸಂವಿಧಾನದ ರಚನೆ

* ಬಾಸೆಲ್ ಮಿಶನ್ ಕಾಲದಲ್ಲಿನ ಕಲಹಗಳು

* 1930ರ ದಶಕದಲ್ಲಿ ಬಾಸೆಲ್ ಹೋಮ್ ಕಮಿಟಿಯ ಹಾಗೂ ಜರ್ಮನಿಯ ಸ್ಥಿತಿ–ಗತಿ

* ಬಾಸೆಲ್ ಮಿಶನ್ ಮೇಲೆ ನಾಝಿಗಳ ಪ್ರಭಾವ ಹಾಗೂ ಪರಿಣಾಮ

* ಸ್ಥಳೀಯ ಕ್ರೈಸ್ತರು ಮತ್ತು ಮಿಶನರಿಗಳು

ಅಧ್ಯಾಯ: ನಾಲ್ಕು 202–259

ಸ್ವಾಯತ್ತ ಚರ್ಚ್‌ನತ್ತ ಬಾಸೆಲ್ ಮಿಶನ್

* ಜಾಗತಿಕ ಸಮರದ ಕಾಲದಲ್ಲಿ ಮಿಶನಿನ ನಿರ್ವಹಣೆ

* ದೇಶಿಯ ಕ್ರೈಸ್ತರಿಗೆ ಮಿಶನ್ ಕಾರ್ಯಗಳ ಜವಾಬ್ದಾರಿ

* ದೇಶಿಯರಿಗೆ ನಾಯಕತ್ವ ವಹಿಸುವುದರ ಬಗ್ಗೆ ಸ್ವಿಸ್ ಮಿಶನರಿಗಳ ಚಿಂತನೆ

* ಚರ್ಚ್ ಮತ್ತು ಮಿಶನ್ ವ್ಯವಸ್ಥೆಯಲ್ಲಿನ ಕಲಹಗಳು

* ಸ್ವಾಯತ್ತ ಚರ್ಚ್ ಬಗ್ಗೆ ಬಾಸೆಲ್ ಮಿಶನಿನ ದೃಷ್ಟಿಕೋನ

* ಸ್ವಾಯತ್ತ ಚರ್ಚ್ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರ ನಿಲುವು

* ಕ್ರೈಸ್ತ ಸಭಾ ಐಕ್ಯತಾ ಚಳುವಳಿ

* ಕ್ರೈಸ್ತ ಸಭಾ ಐಕ್ಯತಾ ಚಳುವಳಿಯ ಬಗ್ಗೆ ಬಾಸೆಲ್ ಮಿಶನಿನ ನಿಲುವು

* ಕ್ರೈಸ್ತ ಸಭಾ ಐಕ್ಯತಾ ಚಳುವಳಿಯ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರ ನಿಲುವು

* ಚರ್ಚ್ ಆಫ್ ಸೌತ್ ಇಂಡಿಯಾದ ರಚನೆ

* ಮಲಬಾರ್‌ನ ಬಾಸೆಲ್ ಮಿಶನ್ ಸಭೆಗಳ ವಿಲೀನ ಮತ್ತು ಕ್ರೈಸ್ತರ ವಿರೋಧ

* ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ದಕ್ಷಿಣ ಕೆನರಾದಲ್ಲಿ ವಿರೋಧ

* ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದ ಉತ್ತರ ಕರ್ನಾಟಕದ ಸಭೆಗಳು

* ದಕ್ಷಿಣ ಕೆನರಾದಲ್ಲಿ ಮುಂದುವರಿದ ಬಿಕ್ಕಟ್ಟು

* ಬಾಸೆಲ್ ಮಿಶನ್‌ನಲ್ಲಿನ ಕಾನೂನು ಕಲಹಗಳು (ಮೊಕದ್ದಮೆಗಳು)

ಅಧ್ಯಾಯ: ಐದು 260–301

ರಾಷ್ಟ್ರೀಯ ಹೋರಾಟ ಮತ್ತು ಮಿಶನ್

* ಮಿಶನರಿಗಳತ್ತ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ನೀತಿ

* ಬಾಸೆಲ್ ಮಿಶನಿನತ್ತ ಬ್ರಿಟಿಷ್ ನೀತಿ

* ರಾಷ್ಟ್ರೀಯ ಹೋರಾಟದಲ್ಲಿ ಕ್ರೈಸ್ತರ ಪಾತ್ರ

* ಕಾಂಗ್ರೆಸಿನತ್ತ ಕ್ರೈಸ್ತ ಪತ್ರಿಕೆಗಳ ದೃಷ್ಟಿಕೋನ

* ರಾಷ್ಟ್ರೀಯ ಹೋರಾಟದಲ್ಲಿ ಮಿಶನರಿಗಳ ಭಾಗವಹಿಸುವಿಕೆ ನಿಯಂತ್ರಿಸಲು ಬ್ರಿಟಿಷರ ಪ್ರಯತ್ನ

* ರಾಷ್ಟ್ರೀಯ ಹೋರಾಟದ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರ ಹಾಗೂ ಪತ್ರಿಕೆಗಳ ಧೋರಣೆಗಳು

* ರಾಷ್ಟ್ರೀಯ ಹೋರಾಟದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರ ಪಾತ್ರ

ಅಧ್ಯಾಯ: ಆರು 302–316

ಉಪಸಂಹಾರ

ಆಕರ ಸೂಚಿ 317–343

ಅಧ್ಯಾಯ: ಒಂದು

ಪೀಠಿಕೆ

ಅಧ್ಯಾಯ: ಒಂದು

ಪೀಠಿಕೆ

20ನೇ ಶತಮಾನವು ಭಾರತದ ಇತಿಹಾಸದಲ್ಲಿ ಪ್ರಮುಖವಾದ ಘಟ್ಟವಾಗಿದ್ದು, ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಹೋರಾಟ ತೀವ್ರವಾಗಿ ಬೆಳವಣಿಗೆಯನ್ನು ಹೊಂದುತಿತ್ತು. ಅದೇ ರೀತಿ ಈ 20ನೇ ಶತಮಾನದಲ್ಲಿ ವಿಶ್ವವು ಎರಡು ಜಾಗತಿಕ ಸಮರಕ್ಕೂ ಸಾಕ್ಷಿಯಾಯಿತು. ಈ ರಾಷ್ಟ್ರೀಯ ಚಳುವಳಿ ಹಾಗೂ ಜಾಗತಿಕ ಸಮರಗಳು ಭಾರತದಲ್ಲಿದ್ದ ವಸಾಹತುಶಾಹಿಯ ಮೇಲೆ ಹಾಗೂ ಅದರ ಜೊತೆ ಜೊತೆಗೆ ಆರಂಭವಾದ ಮಿಶನರಿ ಚಟುವಟಿಕೆಗಳ ಮೇಲೆ ಗಾಢವಾದ ಪರಿಣಾಮವನ್ನು ಬೀರಿದೆ. ಈ ಅಧ್ಯಯನವು 20ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಕಾರ್ಯಾಚರಿಸಿದ್ದ ಬಾಸೆಲ್ ಮಿಶನಿಗೆ ಸಂಬಂಧಿಸಿದ್ದಾಗಿದ್ದು, ಜಾಗತಿಕ ಸಮರ ಹಾಗೂ ಭಾರತದಲ್ಲಿನ ರಾಜಕೀಯ ಬದಲಾವಣೆಗಳು ಬಾಸೆಲ್ ಮಿಶನಿನ ಮೇಲೆ ಯಾವ ಪರಿಣಾಮವನ್ನು ಬೀರಿದವು ಎಂಬುದನ್ನು ಕೂಲಂಕುಶವಾಗಿ ಚರ್ಚಿಸುತ್ತದೆ. ಭಾರತವು ತನ್ನ ಸುದೀರ್ಘವಾದ ಇತಿಹಾಸದುದ್ದಕ್ಕೂ ಕಾಲದಿಂದ ಕಾಲಕ್ಕೆ ಬಾಹ್ಯ ಶಕ್ತಿಗಳ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಭಾವಕ್ಕೆ ಒಳಪಟ್ಟಿರುವುದನ್ನು ಗಮನಿಸಬಹುದು. 15ನೇ ಶತಮಾನದ ಕೊನೆಗೆ ಪೋರ್ಚುಗೀಸರು ಭಾರತಕ್ಕೆ ಬರುವುದರೊಂದಿಗೆ ಭಾರತದಲ್ಲಿ ಪಾಶ್ಚಾತ್ಯ ವಸಾಹತು ಕಾಲ ಹಾಗೂ ಪಾಶ್ಚಾತ್ಯ ಸಾಂಸ್ಕೃತಿಕ ಪ್ರಭಾವದ ಕಾಲ ಆರಂಭವಾಯಿತು. ಕ್ರೈಸ್ತ ಧರ್ಮವು ಭಾರತದಲ್ಲಿ ಪಾಶ್ಚಾತ್ಯ ಸಾಂಸ್ಕೃತಿಕ ಪ್ರಭಾವದ ಒಂದು ಭಾಗವಾಗಿದೆ. ಭಾರತದಲ್ಲಿ ವಸಾಹತು ಕಾಲ ಆರಂಭವಾಗುವುದರೊಂದಿಗೆ ಕ್ರೈಸ್ತ ಮಿಶನರಿ ಚಟುವಟಿಕೆಗಳ ಕಾಲವೂ ಆರಂಭವಾಯಿತ್ತೆನ್ನಬಹುದು. ಮಿಶನರಿಗಳು ವಸಾಹತು ಸರಕಾರದೊಂದಿಗೆ ಬಹಳಷ್ಟು ನಿಕಟರಾಗಿದ್ದರು. ಆದುದರಿಂದ ವಸಾಹತುಶಾಹಿ ಹಾಗೂ ಮಿಶನರಿಗಳ ನಡುವಿನ ಸಂಬಂಧ ಮತ್ತು ಇವೆರಡರ ಇತಿಮಿತಿಗಳನ್ನು (Limitations) ಚರ್ಚಿಸುವುದು ಅಗತ್ಯವಾಗಿದೆ. ಮಿಶನರಿಗಳು ವಸಾಹತುಶಾಹಿ ಧ್ವಜವನ್ನು ಹಿಂಬಾಲಿಸಿದರು ಹಾಗೂ ಕ್ರೈಸ್ತಧರ್ಮವು ವಾಣಿಜ್ಯ ಮತ್ತು ಸಾಮ್ರಾಜ್ಯಶಾಹಿಯೊಂದಿಗೆ ಅನ್ಯೋನ್ಯವಾಗಿ ಬೆರತುಕೊಂಡಿರುವುದನ್ನು ಗಮನಿಸಬಹುದು. ಮಿಶನ್ ಮತ್ತು ವಸಾಹತುಶಾಹಿಯ ನಡುವಿನ ಸಂಬಂಧದ, ಸ್ವರೂಪ ಹಾಗೂ ಲಕ್ಷಣಗಳು, ಒಂದು ವಸಾಹತುಶಾಹಿ ಶಕ್ತಿಯಿಂದ ಮತ್ತೊಂದು ವಸಾಹತುಶಾಹಿ ಶಕ್ತಿಗೆ ಭಿನ್ನವಾಗಿದೆ. ವಸಾಹತು ಕಾಲದಲ್ಲಿ ಕ್ರೈಸ್ತ ಧರ್ಮವು ಪಾಶ್ಚಾತ್ಯ ಧರ್ಮವೆಂದು ಗುರುತಿಸಲ್ಪಡುತ್ತದೆ ಹಾಗೂ ಪಾಶ್ಚಾತ್ಯ ಶಕ್ತಿಯು ವಸಾಹತುವಿನ ಮೇಲೆ ನಿಯಂತ್ರಣ ಸಾಧಿಸಲು ಒಂದು ಸಾಧನವಾಗಿತ್ತು.[1] ಮಿಶನರಿಗಳ ಮುಖ್ಯ ಗುರಿ ವಸಾಹತುವಿನ ಸ್ಥಳೀಯರನ್ನು ಕ್ರೈಸ್ತಮತಕ್ಕೆ ಮತಾಂತರಿಸುವುದಾಗಿತ್ತು. ಅದೇ ರೀತಿ ಬಹುಪಾಲು ಮಿಶನರಿಗಳು ತಮ್ಮ

ನಿಯಂತ್ರಣದಲ್ಲಿದ್ದ ಸ್ಥಳೀಯ ಕ್ರೈಸ್ತರು ಬ್ರಿಟಿಷ್ ವಸಾಹತು ಸರಕಾರಕ್ಕೆ ವಿಧೇಯರಾಗಿರುವಂತೆ ನೋಡಿಕೊಂಡಿದ್ದರು.[2] ವಸಾಹತು ಕಾಲದಲ್ಲಿ ಭಾರತದಲ್ಲಿ ಮಿಶನರಿಗಳು ತಮ್ಮ ಮಿಶನರಿ ಚಟುವಟಿಕೆಗಳ ಮೂಲಕ ಹುಟ್ಟು ಹಾಕಿದ ಚರ್ಚುಗಳು ಕೇವಲ ಪಾಶ್ಚಾತ್ಯ ರೂಪ ಹಾಗೂ ವಿಚಾರಗಳನ್ನು ಹೋಲುವವಾಗಿರುತ್ತವೆ. ಈ ಚರ್ಚುಗಳು ಭಾರತದ ಮಣ್ಣಿನಲ್ಲಿ ಪ್ರಬಲವಾಗಿ ಬೇರೂರದೆ ಮಡಕೆಯಲ್ಲಿನ ನೆಟ್ಟ ಸಸಿಯ ತರದಲ್ಲಿರುತ್ತವೆ. ಈ ಚರ್ಚುಗಳು ಬಹುಬೇಗ ಸ್ವಾಯತ್ತವಾಗಿ ಬೆಳೆಯದೇ ಪ್ರತಿಯೊಂದು ವಿಚಾರದಲ್ಲೂ ಮಿಶನರಿಗಳನ್ನೇ ಅವಲಂಬಿಸುತ್ತವೆ. ಈ ವಿಚಾರಗಳು ಭಾರತೀಯ ಚರ್ಚುಗಳು ಒಂದು ಸಮುದಾಯವಾಗಿ ಭಾರತದ ಸಂಸ್ಕೃತಿ, ಸಾಮಾಜಿಕ ಜೀವನದ ಮುಖ್ಯ ವಾಹಿನಿಯಿಂದ ದೂರ ಉಳಿದು, ಕೇವಲ ಬ್ರಿಟಿಷ್ ವಸಾಹತುಶಾಹಿಯ ರಕ್ಷಣೆಯಲ್ಲಿ ಮುಂದುವರಿಯವಂತೆ ಮಾಡುತ್ತದೆ. ವಸಾಹತು ಸರಕಾರದ ರಕ್ಷಣೆ ಹಾಗೂ ಮಿಶನರಿಗಳ ಮೇಲುಸ್ತುವಾರಿಯು, ಭಾರತೀಯ ಚರ್ಚುಗಳು ಭಾರತೀಯ ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಹಾಗೂ ಸೂಕ್ತ ಪಾತ್ರವನ್ನು ನಿಭಾಯಿಸುವಲ್ಲಿ ವಿಫಲವಾಗುವಂತೆ ಮಾಡುತ್ತವೆ.[3]

ವಸಾಹತುಶಾಹಿ ಕಾಲದ 16ನೇ ಮತ್ತು 17ನೇ ಶತಮಾನದಲ್ಲಿ ಲ್ಯಾಟಿನ್ ಶಬ್ದವಾದ 'ಮಿಸಿಯೋ' (Missio) ಎಂದರೆ ಕಳುಹಿಸುವ (Sending) ಎಂಬ ಶಬ್ದವು ವಿಶೇಷ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಏಕೆಂದರೆ ಕ್ರಿಸ್ತರ ಸುವಾರ್ತೆಯನ್ನು ಕ್ರೈಸ್ತರಲ್ಲದವರ ಮಧ್ಯೆ ಹರಡಿ, ಚರ್ಚುಗಳನ್ನು ಸ್ಥಾಪಿಸುವ ವಿಚಾರಕ್ಕೆ ಇದನ್ನು ಬಳಸಿಕೊಳ್ಳಲಾಯಿತು.[4] ಇದರ ಇಂಗ್ಲೀಷ್ ರೂಪವಾದ 'ಮಿಶನ್' ಶಬ್ದವು ಸ್ವಾಭಾವಿಕವಾಗಿಯೇ ಇತರರನ್ನು ಕ್ರೈಸ್ತ ಮತಕ್ಕೆ ಮತಾಂತರಿಸುವಲ್ಲಿ ಆಸಕ್ತಿ ಹೊಂದಿರುವ ಚಟುವಟಿಕೆಯಾಗಿ ಗುರುತಿಸಿಕೊಳ್ಳುತ್ತದೆ. ಆದರೆ ಮಿಶನ್ ಶಬ್ದದ ತಾರ್ಕಿಕ ವಿಚಾರಗಳನ್ನು ಅರ್ಥೈಯಿಸಿಕೊಳ್ಳಬೇಕಾದರೆ, ನಾವು ಎಡ್ವರ್ಡ್ ಸೈಯಿದ್‌ರವರು (Edward Said) 'ಓರಿಯಂಟಲಿಸಮ್' ಗ್ರಂಥದಲ್ಲಿ ನೀಡಿರುವ ವಿವರಣೆಯತ್ತ ಗಮನಹರಿಸಬೇಕಾಗಿದೆ. ಅವರು ಅಭಿಪ್ರಾಯ ಪಡುವಂತೆ 'ಚಿಂತನೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಅಧಿಕಾರದ ಹೊರಗಿನ ಸ್ವರೂಪಗಳೊಂದಿಗೆ ಅಧ್ಯಯಿಸುವ ಅಗತ್ಯವಿದೆ'.[5] ಆದುದರಿಂದ ಮಿಶನನ್ನು ಕೇವಲ ಧಾರ್ಮಿಕ ವಿಚಾರಕ್ಕೆ, ಎಂದರೆ ಕ್ರೈಸ್ತಮತ ಪ್ರಚಾರದ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸದೇ ಅದರ ಹೊರಗಿನ ವಿಚಾರಗಳೊಂದಿಗೆ ಚರ್ಚಿಸಬೇಕಾಗಿದೆ. ಮಿಶನ್ ಎಂಬ ಶಬ್ದವು ಸಾಂಸ್ಕೃತಿಕ ಹಿನ್ನಲೆಯನ್ನೂ ಹೊಂದಿದ್ದು, ಇದರ ಇತಿಹಾಸವು ವಸಾಹತುಶಾಹಿ ಇತಿಹಾಸದೊಂದಿಗೆ ಬೆರೆತುಕೊಂಡಿರುವುದನ್ನು ಗಮನಿಸಬಹುದು. ಆದುದರಿಂದ ಮಿಶನ್ ಹಾಗೂ ವಸಾಹತುಶಾಹಿ ನಡುವಿನ ಸಂಬಂಧ, ಮಿಶನ್ ಮತ್ತು ಅದರ ಅಧಿಕಾರಿಗಳ ನಡುವಿನ ಸಂಬಂಧ, ಮಿಶನ್ ಹಾಗೂ

ಸ್ಥಳೀಯ ಕ್ರೈಸ್ತರ ಸಂಬಂಧ, ರಾಷ್ಟ್ರೀಯ ಹೋರಾಟದ ಬಗ್ಗೆ ಮಿಶನಿನ ಅಭಿಪ್ರಾಯ ಇತ್ಯಾದಿ ವಿಚಾರಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ.

ಭಾರತದಲ್ಲಿ ಬ್ರಿಟಿಶ್ ವಸಾಹತುಶಾಹಿಯು ಇಂಗ್ಲೀಷ್ ಶಿಕ್ಷಣ, ಆಡಳಿತ, ರೈಲ್ವೆ, ಆಧುನಿಕ ಸಂಪರ್ಕ ವ್ಯವಸ್ಥೆ ಇತ್ಯಾದಿಗಳ ಮೂಲಕ ದೇಶಿಯ ಸಂಸ್ಕೃತಿಯ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತದೆ. ಇಂಗ್ಲೀಷ್ ಶಿಕ್ಷಣದ ಹರಡುವಿಕೆ, ದೇಶದಲ್ಲಿದ್ದ ಸಾಮಾಜಿಕ ಪಿಡುಗುಗಳ ಖಂಡನೆ, ಭಾರತೀಯ ವಿಚಾರಗಳ ಅಧ್ಯಯನ ಇತ್ಯಾದಿ ವಿಚಾರಗಳಲ್ಲಿ ಮಿಶನರಿಗಳು ಬ್ರಿಟಿಷ್ ವಸಾಹತುಶಾಹಿಯೊಂದಿಗೆ ಶಾಮೀಲಾಗುವುದನ್ನು ಗಮನಿಸಬಹುದು. ಆದರೆ ಈ ವಿಚಾರಗಳಿಗೆ ಪ್ರತಿಧ್ವನಿಯಾಗಿ ಸಾಮಾಜಿಕ, ಧಾರ್ಮಿಕ ಸುಧಾರಣೆಗಳು ನಡೆದು, ಭಾರತದಲ್ಲಿ ಪ್ರಬಲವಾದ ರಾಷ್ಟ್ರೀಯ ಚಳುವಳಿ ರೂಪುಗೊಳ್ಳುವುದನ್ನು ಗಮನಿಸಬಹುದು. ಹೀಗೆ ಈ 20ನೇ ಶತಮಾನದ ಹೊಸ ಸನ್ನಿವೇಶದಲ್ಲಿ ದೇಶಿಯ ಚರ್ಚುಗಳಲ್ಲಿ ಬದಲಾವಣೆಗಳಾಗುತ್ತದೆ. ಚರ್ಚ್ ತಾನು ದೇಶದೊಂದಿಗೆ ಇಟ್ಟುಕೊಂಡಿರುವ ಸಂಬಂಧವನ್ನು ಮರುಪರಿಶೀಲನೆಗೆ ಒಳಪಡಿಸುತ್ತದೆ. ಮತ್ತೊಂದೆಡೆ ಭಾರತದಲ್ಲಿ ಬೇರೆ ಬೇರೆ ಮಿಶನರಿ ಸಂಘಗಳಿಂದ ಸ್ಥಾಪಿತವಾದ ಚರ್ಚುಗಳು ಪರಸ್ಪರ ಹತ್ತಿರವಾಗಿ, ದೇಶಿಯತೆಯನ್ನು ಆಳವಡಿಸಿ ಮುಂದುವರಿದು ಸ್ವಾಯತ್ತವಾಗಲು ಪ್ರಯತ್ನಿಸುವುದನ್ನು ಗಮನಿಸಬಹುದು.

1900 ರಿಂದ ವಿದೇಶಿ ಮಿಶನರಿಗಳ ಆಸಕ್ತಿಯು ಹೆಚ್ಚಾಗಿ ಮಿಶನ್ ಚಟುವಟಿಕೆಗಳು ವೃದ್ಧಿಯಾಗಿವೆ ಎಂಬುದಾಗಿ 'ವರ್ಲ್ಡ್ ಮಿಶನರಿ ಅಟ್ಲಸ್' ದಾಖಲಿಸಿತ್ತು. ಪ್ರೊಟೆಸ್ಟೆಂಟ್ ಮಿಶನರಿ ಸಂಘಗಳು 1860ರಲ್ಲಿ ತಮ್ಮ ಖರ್ಚಿಗಾಗಿ ಸಂಗ್ರಹಿಸಿದ ಹಣವು 40,00,000 ಡಾಲರುಗಳು. (1 ಅಮೇರಿಕಾದ ಡಾಲರು = 3 ರೂ. 1 ಆ. 6 ಪೈ). ಆದರೆ 1900ರಲ್ಲಿ ಸಂಗ್ರಹಿಸಿದ ಮೊತ್ತವು 20 ಮಿಲ್ಯನ್ ಡಾಲರುಗಳು. 1923ರಲ್ಲಿ 70 ಮಿಲ್ಯ ಡಾಲರುಗಳಾಗುತ್ತದೆ. (ಇದರಲ್ಲಿ 45 ಮಿಲ್ಯ ಡಾಲರುಗಳು ಅಮೇರಿಕಾದಿಂದ) ಅದೇ ರೀತಿ 1900ರಲ್ಲಿ ವಿದೇಶಿ ಮಿಶನರಿಗಳ ಸಂಖ್ಯೆಯು 15,000 ರಷ್ಟಿದ್ದರೆ, 1923ರಲ್ಲಿ ಅದು 29,000 ಕ್ಕೆ ಮುಟ್ಟಿತ್ತು.[6] ಹೀಗೆ 20ನೇ ಶತಮಾನದಲ್ಲಿ ಮಿಶನರಿ ಚಟುವಟಿಕೆಗಳು ವೃದ್ಧಿಯಾಗಿದ್ದವು ಎಂಬುದನ್ನು ತಿಳಿದುಕೊಳ್ಳಬಹುದು. 20ನೇ ಶತಮಾನದಲ್ಲಿ ಕರ್ನಾಟಕದಲ್ಲೂ ಮಿಶನರಿ ಚಟುವಟಿಕೆಗಳು ವೃದ್ಧಿಯಾಗಿದ್ದವು. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಮುಖ ಮಿಶನರಿ ಸಂಘಗಳೆಂದರೆ, ಲಂಡನ್ ಮಿಶನರಿ ಸೊಸೈಟಿ,[7] ವೆಸ್ಲಿಯನ್ ಮೆಥೋಡಿಸ್ಟ್ ಮಿಶನರಿ ಸೊಸೈಟಿ,[8] ಬಾಸೆಲ್ ಜರ್ಮನ್ ಇವಾಂಜೆಲಿಕಲ್ ಮಿಶನರಿ ಸೊಸೈಟ, ಕೆನರೀಸ್ ಇವಾಂಜಲಿಕಲ್ ಮಿಶನ್,[9] ಸೊಸೈಟಿ ಫಾರ್ ದಿ ಪ್ರಾಪೋಗೇಶನ್ ಆಫ್

ಗಾಸ್ಪೆಲ್[10] (ಎಸ್.ಪಿ.ಜಿ), ಅಮೇರಿಕನ್ (ಮೆಥೋಡಿಸ್ಟ್) ಎಪಿಸ್ಕೋಪಲ್ ಮಿಶನ್[11], ಮಿಸ್ಸೂರಿ ಲೂಥರನ್ ಮಿಶನ್[12] ಇತ್ಯಾದಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಪ್ರಸ್ತುತ ಈ ಅಧ್ಯಯನವು ಕೇವಲ ಬಾಸೆಲ್ ಮಿಶನಿಗೆ ಸಂಬಂಧಿಸಿದಾಗಿದ್ದು, 20ನೇ ಶತಮಾನದಲ್ಲಿ ಮುಖ್ಯವಾಗಿ ಪ್ರಥಮ ಜಾಗತಿಕ ಯುದ್ಧ ಆರಂಭವಾದ ನಂತರದ ಕಾಲಘಟ್ಟದಲ್ಲಿ ಮಿಶನ್ ಕಾರ್ಯಚಟುವಟಿಕೆಗಳು ಹೇಗೆ ಮುಂದುವರಿದವು? ಜಾಗತಿಕ ಯುದ್ಧ ಆರಂಭವಾದಾಗ ಬ್ರಿಟಿಷೇತರ ಮಿಶನ್ ಸಂಘವಾದ ಬಾಸೆಲ್ ಮಿಶನ್ ಕಡೆಗೆ ಬ್ರಿಟಿಷ್ ಸರಕಾರದ ನಿಲುವೇನಾಗಿತ್ತು? ಬಾಸೆಲ್ ಮಿಶನಿನ ಕೈಗಾರಿಕೆಗಳತ್ತ ಬ್ರಿಟಿಷ್ ಸರಕಾರ ಕೈಗೊಂಡ ಕ್ರಮಗಳೇನು? ಬಾಸೆಲ್ ಮಿಶನನ್ನು ಭಾರತದಲ್ಲಿ ಬ್ರಿಟಿಷರು ನಿರ್ಬಂಧಿಸಿದರಿಂದ ಬಾಸೆಲ್ ಮಿಶನಿನ ಮಿಶನ್ ಕಾರ್ಯಗಳು ಮುಂದುವರಿಯಲು ಮಾಡಿದ ಬದಲಿ ವ್ಯವಸ್ಥೆ ಏನು? ಬಾಸೆಲ್ ಮಿಶನರಿಗಳು ಮಿಶನ್‌ನಿಂದ ತೆರಳಿದ ಮೇಲೆ ಸ್ಥಳೀಯ ಕ್ರೈಸ್ತರ ನಡೆ ಹೇಗಿತ್ತು? ಹೊಸ ಮಿಶನ್ ಸಂಘವಾಗಿದ್ದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಡೆ ದೇಶಿಯ ಕ್ರೈಸ್ತರ ನಿಲುವುಗಳೇನಾಗಿದ್ದವು? ದೇಶಿಯ ಚರ್ಚುಗಳು ಸ್ವಾಯತ್ತತೆ ಪಡೆದಾಗ, ಚರ್ಚ್ ವ್ಯವಸ್ಥೆ ಹೇಗಿತ್ತು? ರಾಷ್ಟ್ರೀಯ ಹೋರಾಟದ ಕಡೆ ಮಿಶನ್ ಹಾಗೂ ದೇಶಿಯ ಕ್ರೈಸ್ತರ ನಿಲುವುಗಳೇನಾಗಿದ್ದವು? ಇತ್ಯಾದಿ ವಿಚಾರಗಳನ್ನು ಕೂಲಂಕುಶವಾಗಿ ಚರ್ಚೆಗೆ ಒಳಪಡಿಸಿ ಇವುಗಳಿಗೆ ಉತ್ತರ ಕಂಡು ಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಮಿಶನಿನ ಚಟುವಟಿಕೆಯು ಬಹುಪಾಲು ಸಾಂಘಿಕ ಪ್ರಯತ್ನವಾಗಿರುವುದರಿಂದ (Collective Effort) ಈ ಸಂಶೋಧನೆಯಲ್ಲಿ ಯಾವುದೇ ಮಿಶನರಿಯ ಬಗ್ಗೆ ವಯಕ್ತಿಕವಾಗಿ ವಿವರಿಸುವ ಉದ್ದೇಶವಿಲ್ಲ. ಅದೇ ರೀತಿ 1914ರವರೆಗೆ ಬಾಸೆಲ್ ಮಿಶನ್ ನಡೆಸಿದ್ದ ಶಿಕ್ಷಣ, ಕೈಗಾರಿಕೆ, ಮತಾಂತರ ಇತ್ಯಾದಿ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಬಾಸೆಲ್ ಮಿಶನಿನ ಸಾಧನೆಗಳನ್ನು ಬಿಂಬಿಸುವ ಉದ್ದೇಶವಿಲ್ಲ.

1780ರಲ್ಲಿ ಸ್ವಿಜರ್‌ಲ್ಯಾಂಡಿನ ಬಾಸೆಲ್‌ನಲ್ಲಿ 'ಜರ್ಮನ್ ಸೊಸೈಟಿ ಫಾರ್ ದಿ ಫರ್ಧರೆನ್ಸ್ ಆಫ್ ಕ್ರಿಶ್ಚಿಯನ್ ಟ್ರುಥ್ ಆ್ಯಂಡ್ ಗೋಡ್‌ಲೀನೆಸ್' ಅಥವಾ 'ಜರ್ಮನ್ ಕ್ರಿಶ್ಚಿಯನ್ ಸೊಸೈಟಿ' ಸ್ಥಾಪನೆಯಾಗುತ್ತದೆ. ತದನಂತರದ ಕಾಲದಲ್ಲಿ ಬಾಸೆಲ್‌ನಲ್ಲಿ ಇತರ ಹಲವು ಸಂಘಗಳು ಅಸ್ತಿತ್ವಕ್ಕೆ ಬಂದಿರುವುದನ್ನು ಗಮನಿಸಬಹುದು. ಹೀಗೆ 1815ರಲ್ಲಿ ಸ್ಥಾಪನೆಯಾದ ಮಿಶನರಿ ಸಂಘವೇ "ಬಾಸೆಲ್ ಮಿಶನ್". ಬಾಸೆಲ್ ಮಿಶನನ್ನು ಮೇಲಿನ ಜರ್ಮನ್ ಕ್ರಿಶ್ಚಿಯನ್ ಸೊಸೈಟಿಯ ಕಾರ್ಯದರ್ಶಿಯಾಗಿದ್ದ ಸಿ. ಎಫ್. ಸ್ಪಿಟ್ಲರ್‌ರವರು (C.F. Spittler) ಬಾಸೆಲಿನ ಸದಸ್ಯರ

ಸಂಪೂರ್ಣ ಬೆಂಬಲದೊಂದಿಗೆ ಸ್ಥಾಪಿಸುತ್ತಾರೆ. ಬಾಸೆಲಿನ ಪ್ರಖ್ಯಾತ ಪಾದ್ರಿ (Pastor) ಯಾಗಿದ್ದ ಎನ್. ವೋನ್ ಬ್ರೊನ್ (N. Von Brunn) ಇದರ ಮೊದಲು ಅಧ್ಯಕ್ಷರಾಗುತ್ತಾರೆ ಹಾಗೂ ಬ್ಲೂಮ್‌ಹಾರ್ಟ್ (Blumhardt) ರವರು ಇದರ ಮೊದಲ ಇನ್ಸ್‌ಪೆಕ್ಟರ್ (Inspector) ಅಥವಾ ಡೈರೆಕ್ಟರ್‌ರಾಗುತ್ತಾರೆ (Director). ಭಕ್ತಿಭಾವ ಚಳುವಳಿಯ ಬೆಂಬಲಿಗರು (Supporters of the Pietistic) ಹಾಗೂ ಬಾಸೆಲಿನ ನಾಗರಿಕರು ಮಿಶನ್ ಬೋರ್ಡಿನ ಸದಸ್ಯರಾಗಿದ್ದರು. ಈ ಸದಸ್ಯರುಗಳಲ್ಲಿ ಕೆಲವರು ಪಾದ್ರಿಗಳು, ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳು, ಸಿಟಿ ಕೌನ್ಸ್‌ಲ್‌ನ ಸದಸ್ಯರುಗಳಾಗಿದ್ದರು.[13]

ಕ್ರಿಸ್ತನ ಸುವಾರ್ತೆಯ ಪ್ರಸರಣೆ ಮತ್ತು ಕ್ರೈಸ್ತ ಸಭೆಗಳ ಸ್ಥಾಪನೆಯ ಉದ್ದೇಶದಿಂದ 1815ರಲ್ಲಿ ಸ್ವಿಜರ್‌ಲ್ಯಾಂಡಿನ ಬಾಸೆಲ್‌ನಲ್ಲಿ ಬಾಸೆಲ್ ಮಿಶನ್ ಸ್ಥಾಪನೆಯಾಗುತ್ತದೆ. ಇದು ಸ್ವಿಜರ್‌ಲ್ಯಾಂಡಿನ ಬಾಸೆಲ್ ನಗರದ ಒಂದು ಸಭೆಯಾಗಿರಲಿಲ್ಲ. ಅದೆ ರೀತಿ ಇದು ಯಾವುದೇ ಒಂದು ಸಭಾ ಸಂಪ್ರದಾಯಕ್ಕೆ ಸಂಬಂಧ ಪಟ್ಟದ್ದಾಗಿರಲಿಲ್ಲ. ಬದಲು ಬಾಸೆಲ್ ಮಿಶನ್ ಪಶ್ಚಿಮ ಜರ್ಮನಿ ಮತ್ತು ಸ್ವಿಜರ್‌ಲ್ಯಾಂಡಿನ ಬೇರೆ ಬೇರೆ ಕ್ರೈಸ್ತ ಪಂಗಡಗಳ ಹಾಗೂ ಸಭಾ ಸಂಪ್ರದಾಯಗಳಿಗೆ ಸೇರಿದ (ಲೂಥರನ್ ಸಂಪ್ರದಾಯ, ಪುನ ಸ್ಥಾಪನಾ ಸಂಪ್ರದಾಯ, ಸ್ವಿಂಗ್ಲಿಯನನ್ ಸಂಪ್ರದಾಯ) ಕೆಲವು ಕ್ರೈಸ್ತರು ಸಂಘಟಿಸಿದ ಒಂದು ಮಿಶನರಿ ಸಂಸ್ಥೆಯಾಗಿತ್ತು.[14] ಇದು ಸ್ವತಂತ್ರವಾದ ಹಾಗೂ ಸ್ವಯಂ ಸೇವಾ ಮನೋಭಾವದ ಮಿಶನರಿ ಸಂಘವಾಗಿದ್ದು, ಇದು ಯಾವುದೆ ಸರಕಾರದ ಅಥವಾ ರಾಜ್ಯದ ಚರ್ಚಿನ ಭಾಗವಾಗಿರಲಿಲ್ಲ.[15] ಬಾಸೆಲ್ ಮಿಶನಿಗೆ ಆರಂಭದಲ್ಲಿ ನೇರವಾಗಿ ಮಿಶನರಿ ಚಟುವಟಿಕೆಗಳನ್ನು ಆರಂಭಿಸುವ ಉದ್ದೇಶವಿರಲಿಲ್ಲ. ಅದರ ಬದಲು ಮಿಶನರಿಗಳನ್ನು ತರಬೇತುಗೊಳಿಸಿ ಅವರನ್ನು ಇತರ ಯುರೋಪಿನ ಮಿಶನ್ ಸಂಘಗಳಿಗೆ ಒದಗಿಸುವ ಉದ್ದೇಶವನ್ನು ಹೊಂದಿತ್ತು.[16] ಈ ಉದ್ದೇಶಕ್ಕಾಗಿ 26ನೇ ಆಗಸ್ಟ್ 1816ರಲ್ಲಿ 7 ಮಂದಿ ವಿದ್ಯಾರ್ಥಿಗಳೊಂದಿಗೆ ರೆವೆ. ಸಿ. ಸಿ. ಬ್ಲೂಮ್‌ಹಾರ್ಟ್‌ರವರ ನಾಯಕತ್ವದಲ್ಲಿ ಒಂದು ಸೆಮಿನರಿಯು ಆರಂಭವಾಗುತ್ತದೆ.[17] ಹೀಗೆ 1816 ರಿಂದ 1821 ರವರೆಗೆ ಬಾಸೆಲ್ ಮಿಶನ್ ತನ್ನ ತರಬೇತುಗೊಂಡು ಮಿಶನರಿಗಳನ್ನು ಇತರ ಮಿಶನರಿ ಸಂಘಗಳಿಗೆ ಒದಗಿಸುವ ಕಾರ್ಯದಲ್ಲಿ ತೊಡಗಿತ್ತು.

1822ರಲ್ಲಿ ಬಾಸೆಲ್ ಮಿಶನ್ ದಕ್ಷಿಣ ರಷ್ಯಾದ ಪ್ರದೇಶದಲ್ಲಿ ನೇರವಾದ ತನ್ನ ಮಿಶನರಿ ಚಟುವಟಿಕೆಯನ್ನು ಆರಂಭಿಸುತ್ತದೆ. ರಷ್ಯಾದ ಒಂದನೇ ಅಲೆಗ್ಸಾಂಡರನ ಬೆಂಬಲದೊಂದಿಗೆ 1822ರಲ್ಲಿ ಆರಂಭವಾದ ಮಿಶನ್ ಕಾರ್ಯ ಬಹು ದೀರ್ಘಕಾಲ ಮುಂದುವರಿಯದೇ 1835ರಲ್ಲಿ ಅಂತ್ಯವನ್ನು ಕಾಣುತ್ತದೆ.[18] 1928ರಲ್ಲಿ ಬಾಸೆಲ್ ಮಿಶನ್ ಪಶ್ಚಿಮ ಆಫ್ರಿಕಾದ ಗೋಲ್ಡ್ ಕೋಸ್ಟ್‌ನಲ್ಲಿ

ಹಾಗೂ ಆಫ್ರಿಕಾದಲ್ಲಿನ ಜರ್ಮನ್ ವಸಾಹತುವಾದ ಕೆಮೆರೂನ್‌ನಲ್ಲಿ 1886 ರಲ್ಲಿ ತನ್ನ ಮಿಶನ್ ಕಾರ್ಯವನ್ನು ಆರಂಭಿಸುತ್ತದೆ. ಆಫ್ರಿಕಾದ ಮಿಶನರಿ ಕಾರ್ಯಚರಣೆಯು ಬಾಸೆಲ್ ಮಿಶನ್‌ಗೆ ಬಹಳಷ್ಟು ಕಷ್ಟ ನಷ್ಟಗಳನ್ನು ತಂದೊಡ್ಡಿದ್ದನ್ನು ಗಮನಿಸಬಹುದು.[19] ಆದರೂ ಅದು ತನ್ನ ಇಲ್ಲಿನ ಮಿಶನ್ ಕಾರ್ಯವನ್ನು ಮುಂದುವರಿಸುತ್ತದೆ. ಬಾಸೆಲ್ ಮಿಶನ್ 1847ರಲ್ಲಿ ಚೀನಾದಲ್ಲೂ ತನ್ನ ಕಾರ್ಯವನ್ನು ಆರಂಭಿಸುತ್ತದೆ. ಅದೇ ರೀತಿ ಮಿಶನ್ ಬೋರ್ನಿಯೋದಲ್ಲೂ ಮಿಶನರಿ ಕಾರ್ಯವನ್ನು ನಡೆಸಿತ್ತು.

1833ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಭಾರತವನ್ನು ಎಲ್ಲಾ ದೇಶಗಳ ಮಿಶನರಿಗಳಿಗೂ ಮುಕ್ತವಾಗಿರಿಸಿದ ಸಂದರ್ಭದಲ್ಲಿ ಬಾಸೆಲ್ ಮಿಶನ್ ಭಾರತದಲ್ಲಿ ತನ್ನ ಕಾರ್ಯವನ್ನು ಆರಂಭಿಸಲು ನಿರ್ಧರಿಸುತ್ತದೆ. ಈ ಉದ್ದೇಶದೊಂದಿಗೆ ಲಂಡನ್ ಮಿಶನರಿ ಸೊಸೈಟಿ ಹಾಗೂ ಚರ್ಚ್ ಮಿಶನರಿ ಸೊಸೈಟಿಗಳೊಂದಿಗೆ ಚರ್ಚಿಸಿ ಬಾಸೆಲ್ ಮಿಶನ್ ತನ್ನ ಮಿಶನರಿಗಳನ್ನು ದಕ್ಷಿಣ ಭಾರತದ ಮಲಬಾರ್ ಹಾಗೂ ದಕ್ಷಿಣ ಕೆನರಾಕ್ಕೆ ಕಳುಹಿಸಲು ನಿರ್ಧರಿಸುತ್ತದೆ. ಈ ಪ್ರದೇಶಗಳಲ್ಲಿ ಯಾವುದೇ ಪ್ರೊಟೆಸ್ಟೆಂಟ್ ಮಿಶನರಿಗಳು ಕಾರ್ಯಚರಿಸದೆ ಇರುವುದರಿಂದ ಬಾಸೆಲ್ ಮಿಶನ್ ಈ ಪ್ರದೇಶಗಳಲ್ಲಿ ಕಾರ್ಯಚರಿಸಲು ನಿರ್ಧರಿಸುತ್ತದೆ. ಮಂಗಳೂರಿನ ಬಲ್ಮಠವು ಬಾಸೆಲ್ ಮಿಶನಿನ ಕೇಂದ್ರವಾಗುತ್ತದೆ ಹಾಗೂ ಇದು ಭಾರತದಲ್ಲಿ ಬಾಸೆಲ್ ಮಿಶನಿನ ಮೊದಲ ನೆಲೆಯಾಗಿದೆ. ಈ ಸಂಪೂರ್ಣ ಪ್ರದೇಶವು ಕೆನರಾದ ಬ್ರಿಟಿಷ್ ಕಲೆಕ್ಟರನಾದ ಬ್ಲೇರ್‌ನಿಂದ ದಾನವಾಗಿ ಕೊಡಲ್ಪಟ್ಟಿತ್ತು[20] ಎಂಬುದು ಉಲ್ಲೇಖನೀಯವಾಗಿದೆ. ಹೀಗೆ 1834ರಲ್ಲಿ ಆರಂಭವಾದ ಬಾಸೆಲ್ ಮಿಶನಿನ ಮಿಶನರಿ ಕಾರ್ಯ ನಿರಂತರವಾಗಿ ಬೆಳೆದು, ವಿಸ್ತರಿಸುತ್ತ ಹೋಗುತ್ತದೆ. ಮಿಶನಿನ ಪ್ರಗತಿಯು 1914ರ ವರೆಗೆ ಯಾವುದೇ ಅಡೆತಡೆಗಳಿಲ್ಲದೆ ಮುಂದುವರಿಯುತ್ತದೆ. ಬಾಸೆಲ್ ಮಿಶನ್ ಈ ಕಾಲಾವಧಿಯಲ್ಲಿ ಹಲವು ಮಿಶನ್ ಠಾಣ್ಯಗಳನ್ನು ಹಾಗೂ ಉಪಠಾಣ್ಯಗಳನ್ನು ಸ್ಥಾಪಿಸುತ್ತದೆ. ಅದು ಮುಖ್ಯವಾಗಿ ದಕ್ಷಿಣ ಕೆನರಾ, ಉತ್ತರ ಕೆನರಾ (ಹೊನ್ನವರ), ದಕ್ಷಿಣ ಮರಾಠ, ಕೊಡಗು, ಮಲಬಾರ್ ಮತ್ತು ನೀಲಗಿರಿ ಪ್ರದೇಶಗಳಲ್ಲಿ ತನ್ನ ಕಾರ್ಯವನ್ನು 1914 ರವರೆಗೆ ನಿರ್ವಹಿಸಿತ್ತು.[21]

ಬಾಸೆಲ್ ಮಿಶನ್ ಕರ್ನಾಟಕದಲ್ಲಿನ ಇತರ ಮಿಶನ್ ಸಂಘಗಳಿಗಿಂತ ಭಿನ್ನವಾಗಿದ್ದು, ಅದು ಕೇವಲ ಸುವಾರ್ತೆ ಸಾರಿ ಕ್ರೈಸ್ತೇತರರನ್ನು ಕ್ರೈಸ್ತ ಮತಕ್ಕೆ ಮತಾಂತರಿಸುವ ಕಾರ್ಯದಲ್ಲಿ ಮಾತ್ರ ತೊಡಗಿಕೊಳ್ಳದೆ ಹತ್ತು ಹಲವು ಚಟುವಟಿಕೆಗಳನ್ನು ನಡೆಸಿತ್ತು. ಕರ್ನಾಟಕದಲ್ಲಿ ಬಾಸೆಲ್ ಮಿಶನಿನ ಕಾರ್ಯಚರಣೆಯ ಪ್ರಮುಖ ಎರಡು ಲಕ್ಷಣಗಳೆಂದರೆ ಕೈಗಾರಿಕೆಗಳ ಸ್ಥಾಪನೆ ಹಾಗೂ ಜಾತಿ ಪದ್ಧತಿಗೆ ಅವಕಾಶ ಕೊಡದಿರುವಿಕೆ. ಮಂಗಳೂರನ್ನು ಕೇಂದ್ರವನ್ನಾಗಿರಿಸಿ 1834ರಲ್ಲಿ ತನ್ನ ಕಾರ್ಯ ಆರಂಭಿಸಿದ ಬಾಸೆಲ್ ಮಿಶನ್ ದಕ್ಷಿಣ ಕೆನರಾದಲ್ಲಿ ಮುಖ್ಯವಾಗಿ ಇಲ್ಲಿನ ತುಳು ಸಮಾಜದ

ಪ್ರಮುಖ ಸಮುದಾಯಗಳಾಗಿದ್ದ ಬಿಲ್ಲವರು, ಮೊಗೇರರು, ಬಂಟರು ಹಾಗೂ ಇತರರ ಮಧ್ಯೆ ಮಿಶನರಿ ಕೆಲಸ ಆರಂಭಿಸುತ್ತದೆ. ಮಿಶನ್ ಬಿಲ್ಲವರ ಮಧ್ಯೆ ಬಹು ಯಶಸ್ಸನ್ನು ಗಳಿಸುತ್ತದೆ. ಅದೇ ರೀತಿ ಮಿಶನ್ ದಕ್ಷಿಣ ಕೆನರಾದ ಇತರ ಸಮುದಾಯಗಳಾದ ಬಂಟರು, ಬ್ರಾಹ್ಮಣರು, ಜೈನರು, ರೋಮನ್ ಕಥೋಲಿಕರು, ದಲಿತರು ಹಾಗೂ ಇತರ ವರ್ಗದ ಕೆಲವರನ್ನು ಮತಾಂತರಿಸುವಲ್ಲಿ ಯಶಸ್ವಿಯಾಗಿತ್ತು. ಆದರೆ ಮಿಶನ್ ಬ್ರಾಹ್ಮಣ ವರ್ಗದಿಂದ ಕೆಲವರನ್ನಷ್ಟೆ ಮತಾಂತರಿಸುವಲ್ಲಿ ಯಶಸ್ವಿಯಾಗುತ್ತದೆ. ಅದೆ ರೀತಿ ಬಾಸೆಲ್ ಮಿಶನ್ ಉತ್ತರ ಕೆನರಾದಲ್ಲಿ ಕಾರ್ಯಚರಿಸಿದ್ದರೂ, ಅದು ಅಲ್ಲಿ ನಿರೀಕ್ಷಿಸಿದ ಯಶಸ್ಸನ್ನು ಗಳಿಸುವುದಿಲ್ಲ. ಬಾಸೆಲ್ ಮಿಶನ್ 1837ರಲ್ಲಿ ದಕ್ಷಿಣ ಮರಾಠ ಪ್ರದೇಶಗಳಲ್ಲಿ ತನ್ನ ಕಾರ್ಯವನ್ನು ಆರಂಭಿಸುತ್ತದೆ. ಈ ಪ್ರದೇಶದ ಧಾರವಾಡ, ಹುಬ್ಬಳ್ಳಿ, ಬೆಟಗೇರಿ, ಮಳ್ಳಸಮುದ್ರ, ಗುಳೇದಗುಡ್ಡ, ಉನಕಲ್ ಇತ್ಯಾದಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿ ಲಿಂಗಾಯತ, ಕುರುಬ, ಬಡಿಗ, ಹೊಲೇಯರ್, ಮಹರ್ ಮುಂತಾದ ಸಮುದಾಯದ ಜನರನ್ನು ಮತಾಂತರಿಸುವಲ್ಲಿ ಯಶಸ್ವಿಯಾಗುತ್ತದೆ. 1877ರ ಬರಗಾಲದ ಸಂದರ್ಭದಲ್ಲಿ ತತ್ತರಿಸಿದ ಈ ಪ್ರದೇಶದ ಹಲವು ಜನರು ಬಾಸೆಲ್ ಮಿಶನಿನ ಮಿಶನರಿಗಳ ಆಶ್ರಯಕ್ಕೆ ಬಂದು ಕ್ರೈಸ್ತರಾಗುತ್ತಾರೆ.[22] ಕೊಡಗಿನಲ್ಲಿ ಕಾರ್ಯ ನಿರ್ವಹಿಸಿದ್ದ ಬಾಸೆಲ್ ಮಿಶನ್ ಮುಖ್ಯವಾಗಿ ಕೊಡವರ ಹಾಗೂ ಕೆಂಬಟ್ಟಿ (Kembatti) ಸಮುದಾಯದ ಮಧ್ಯೆ ಕಾರ್ಯ ನಿರ್ವಹಿಸಿ ಒಂದು ಚಿಕ್ಕ ಕ್ರೈಸ್ತ ಸಭೆಯನ್ನು ಅಲ್ಲಿ ಹುಟ್ಟು ಹಾಕುತ್ತದೆ. ಬಾಸೆಲ್ ಮಿಶನ್ ನೀಲಗಿರಿ ಪ್ರದೇಶದಲ್ಲಿ ಬಡಗ ಜನರ ಮಧ್ಯೆಯೂ ಕಾರ್ಯ ನಿರ್ವಹಿಸಿತ್ತು.

ಬಾಸೆಲ್ ಮಿಶನರಿಗಳು ತಮ್ಮ ದೀರ್ಘಾಕಾಲವಧಿಯ ನಿರಂತರ ಪರಿಶ್ರಮದಿಂದಾಗಿ ಹುಟ್ಟು ಹಾಕಿದ ಕ್ರೈಸ್ತರ ಸಂಖ್ಯೆ ಬಹಳಷ್ಟು ಕಡಿಮೆ ಎಂದು ಅಭಿಪ್ರಾಯಪಡಬಹುದು. 1834 ರಿಂದ 1914ರ ವರೆಗೆ ತನ್ನ ನಿರಂತರ ಪರಿಶ್ರಮದಿಂದಾಗಿ ಅದು ಹುಟ್ಟುಹಾಕಿದ ಕ್ರೈಸ್ತರ ಒಟ್ಟು ಸಂಖ್ಯೆ 19,762.[23] ಈ ರೀತಿಯ ಕಡಿಮೆ ಯಶಸ್ಸಿಗೆ ಕೊಡಬಹುದಾದ ಒಂದು ಕಾರಣ ಬಾಸೆಲ್ ಮಿಶನರಿಗಳು ಪ್ರಬಲ ಸಮುದಾಯಗಳಾದ ಬ್ರಾಹ್ಮಣ, ಲಿಂಗಾಯತ, ಬಂಟರು ಇತ್ಯಾದಿ ಸಮುದಾಯದ ಜನರನ್ನು ಮತಾಂತರಿಸಲು ಹೆಚ್ಚು ಆಸಕ್ತಿ ತೋರಿದ್ದು. ಸಾಮಾನ್ಯವಾಗಿ ಭಾರತದಲ್ಲಿ ಕೆಳವರ್ಗದ ಹೆಚ್ಚು ಜನರು ಕ್ರೈಸ್ತರಾಗಿರುವುದನ್ನು ಗಮನಿಸಬಹುದು. ಬಾಸೆಲ್ ಮಿಶನರಿಗಳು ಹೆಚ್ಚು ಮೇಲ್‌ವರ್ಗದ ಜನರನ್ನು (ಬ್ರಾಹ್ಮಣರನ್ನು) ಮತಾಂತರಿಸಲು ಪ್ರಯತ್ನಿಸಿರುವುದನ್ನು ಗಮನಿಸಬಹುದು. ಒಂದು ವೇಳೆ ಉನ್ನತ ವರ್ಗದ ಸಮುದಾಯದವರನ್ನು ಮತಾಂತರಗೊಳಿಸಿದರೆ, ಸಮಾಜದ ಇತರ ವರ್ಗದವರು ಅವರನ್ನು ಹಿಂಬಾಲಿಸಿಯಾರು ಎಂಬ ಪ್ರಬಲ ನಂಬಿಕೆ ಬಾಸೆಲ್ ಮಿಶನರಿಗಳದ್ದಾಗಿತ್ತು. ಅದೆ ರೀತಿ ಕೆಲವು ಬ್ರಾಹ್ಮಣರು ಮತಾಂತರಗೊಂಡ ಸಂದರ್ಭದಲ್ಲಿ ಬಾಸೆಲ್

ಮಿಶನರಿಗಳು, ಇದು ತಮ್ಮ ಶ್ರೇಷ್ಠವಾದ ಸಾಧನೆ ಎಂಬಂತೆ ನಡೆದು ಕೊಳ್ಳುವುದನ್ನು ಗಮನಿಸಬಹುದು. ಉನ್ನತ ವರ್ಗದಿಂದ ಮತಾಂತರಗೊಂಡವರನ್ನು ಬಾಸೆಲ್ ಮಿಶನರಿಗಳು ಉನ್ನತ ವಿದ್ಯಾಭ್ಯಾಸ ನೀಡಿ, ತಮ್ಮ ಮಿಶನ್ ಕಾರ್ಯದಲ್ಲಿ ಬಳಸಿಕೊಂಡಿದ್ದರು. ದಕ್ಷಿಣ ಕೆನರಾದಲ್ಲಿ 1869 ರಿಂದ 1875 ವರೆಗೆ ಮುಖ್ಯವಾಗಿ ಬಿಲ್ಲವ, ಮೊಗೇರ್ ಹಾಗೂ ಬಂಟ ಸಮುದಾಯದ ಹಲವಾರು ಮಂದಿಯನ್ನು ಬಾಸೆಲ್ ಮಿಶನರಿಗಳು ಮತಾಂತರಿಸುವಲ್ಲಿ ಯಶಸ್ವಿಯಾಗುತ್ತಾರೆ.[24] ಮತ್ತೊಂದೆಡೆ ಬಾಸೆಲ್ ಮಿಶನರಿಗಳು ಹರಿಜನರ (Harijans) ಮಧ್ಯೆ ಕಾರ್ಯವನ್ನು ನಿರ್ವಹಿಸಲಿಲ್ಲ. ಕೆಲವೇ ಕೆಲವು ಹರಿಜನ ಸಮುದಾಯದವರು ಬಾಸೆಲ್ ಮಿಶನರಿಗಳಿಂದ ಮತಾಂತರ ಹೊಂದಿರುವುದನ್ನು ಗಮನಿಸಬಹುದು. ಬಹುಶಃ ಹೆಚ್ಚಾಗಿ ಹರಿಜನರನ್ನು ಮತಾಂತರಗೊಳಿಸಿದರೆ ಮೇಲ್‌ವರ್ಗದವರು ದೂರವಾಗಬಹುದೆಂಬ ಭಯ ಮಿಶನರಿಗಳಲ್ಲಿದ್ದಿರಬೇಕು.[25] ಅದೆ ರೀತಿ ಬಾಸೆಲ್ ಮಿಶನರಿಗಳು ಸಾಮೂಹಿಕ ಮತಾಂತರಕ್ಕೆ ಹೆಚ್ಚು ಒತ್ತು ನೀಡದೆ ಇರುವುದು ವಿಶೇಷ.

ಬಾಸೆಲ್ ಮಿಶನರಿಗಳು ಪ್ರಾರಂಭದಿಂದಲೂ ತಮ್ಮ ಸಭೆಗಳಲ್ಲಿ ಜಾತಿ ಪದ್ಧತಿಗೆ ಅವಕಾಶವನ್ನು ನೀಡಿರಲಿಲ್ಲ. ಬಾಸೆಲ್ ಮಿಶನ್ ಅದರ ವಿಭಿನ್ನ ಕೈಗಾರಿಕಾ ಹಾಗೂ ಕೃಷಿ ಚಟುವಟಿಕೆಗಳ ಮೂಲಕ ತನ್ನ ಚರ್ಚುಗಳಲ್ಲಿ ಜಾತಿ ಪದ್ಧತಿ ಪ್ರವೇಶಿಸದಂತೆ ನೋಡಿಕೊಳ್ಳುತ್ತದೆ. ಈ ಚಟುವಟಿಕೆಗಳು ಬಾಸೆಲ್ ಮಿಶನ್ ಕ್ರೈಸ್ತರು ಆರ್ಥಿಕವಾಗಿ ಸದೃಢವಾಗುವಂತೆ ಮಾಡಿ ಅವರು ಜಾತಿ ಪದ್ಧತಿಯ ಸುಳಿಯಿಂದ ಹೊರಬರಲು ಸಹಾಯಕವಾಗುತ್ತದೆ. ವಸತಿ ಶಾಲೆಗಳನ್ನು (Boarding Schools) ಸ್ಥಾಪಿಸುವ ಮೂಲಕವೂ ಬಾಸೆಲ್ ಮಿಶನ್ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಶ್ರಮಿಸಿತು. ಅದೆ ರೀತಿ ಬಾಸೆಲ್ ಮಿಶನ್ ಹುಟ್ಟು ಹಾಕಿದ ಶಾಲಾ ವ್ಯವಸ್ಥೆಗಳಲ್ಲಿಯೂ, ಅದು ಜಾತಿ ಪದ್ಧತಿಗೆ ಅವಕಾಶವನ್ನು ಕಲ್ಪಿಸಲಿಲ್ಲ. ಬದಲು ಎಲ್ಲಾ ಜಾತಿಯ ವಿದ್ಯಾರ್ಥಿಗಳು ಒಟ್ಟಾಗಿ ವಿದ್ಯಾಭ್ಯಾಸ ಮಾಡಬೇಕಿತ್ತು.[26] ಬಾಸೆಲ್ ಮಿಶನರಿಗಳು ಚರ್ಚ್ ನಿಯಾಮಾವಳಿಗಳನ್ನು ಸರಿಯಾಗಿ ಪಾಲಿಸದಿದ್ದ ಕ್ರೈಸ್ತರ ವಿರುದ್ಧ ಕಠಿಣ ಕ್ರಮಗಳನ್ನು ಜರಗಿಸುತ್ತಿದ್ದರು. ಕುಡಿತಕ್ಕೆ ಒಳಗಾಗಿದ್ದ ಕ್ರೈಸ್ತರನ್ನು ಚರ್ಚ್‌ನಿಂದ ಹೊರಹಾಕಲಾಗುತ್ತಿತ್ತು (Ex-communicated). ಅದೆ ರೀತಿ 20ನೇ ಶತಮಾನದ ಆರಂಭದಲ್ಲಿ ಅಪಾರವಾದ ಬಾಸೆಲ್ ಮಿಶನ್ ಕ್ರೈಸ್ತರು ಉದ್ಯೋಗ ನಿಮಿತ್ತ ಬಾಂಬೆ, ಪೆನಾಂಗ್, ಫಿಜಿ (Penang, Fiji) ಮುಂತಾದ ಪ್ರದೇಶಗಳಿಗೆ ವಲಸೆ ಹೋಗಲಾರಂಭಿಸಿದರು. ಈ ಕ್ರೈಸ್ತರ ಅಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುವುದು ಬಾಸೆಲ್ ಮಿಶನರಿಗಳಿಗೆ ಬಹಳಷ್ಟು ಕಷ್ಟಕರವಾಗಿತ್ತು.[27] ಪ್ರಾರಂಭದಲ್ಲಿ ಬಾಸೆಲ್ ಮಿಶನರಿಗಳ ಕಾರ್ಯಗಳಿಗೆ ಸ್ಥಳೀಯರ ಪ್ರತಿಕ್ರಿಯೆ ತೀಕ್ಷ್ಣವಾಗಿರುವುದನ್ನು ಗಮನಿಸಬಹುದು ಹಾಗೂ ಬಾಸೆಲ್ ಮಿಶನರಿಗಳ ಚಟುವಟಿಕೆಗಳಿಗೆ ಸ್ಥಳೀಯರು ಪ್ರತಿರೋಧ

ವ್ಯಕ್ತಪಡಿಸಿದ್ದರು. ಗ್ರಾಮೀಣ ಪ್ರದೇಶಗಳಿಗಿಂತ ಮಂಗಳೂರು ಮತ್ತು ಉಡುಪಿಯಂತಹ ನಗರ ಪ್ರದೇಶಗಳಲ್ಲಿ ಮಿಶನರಿಗಳ ಚಟುವಟಿಕೆಗಳಿಗೆ ಸ್ಥಳೀಯ ಜನರು ವಿರೋಧ ವ್ಯಕ್ತಪಡಿಸಿರುವುದನ್ನು ಗಮನಿಸಬಹುದು. ಆದರೆ ಆರಂಭದಲ್ಲಿದ್ದ ಸ್ಥಳೀಯರ ಪ್ರತಿರೋಧ ನಂತರದ ಕಾಲದಲ್ಲಿ ಕಡಿಮೆಯಾಗುತ್ತಾ ಬಂದಿತ್ತು. ಮತ್ತೊಂದೆಡೆ ಬಾಸೆಲ್ ಮಿಶನರಿಗಳ ಮಧ್ಯೆ ಹಾಗೂ ಜೆಸ್ಯೂಟರ (Jesuits) ಮಧ್ಯೆ ಪ್ರಬಲ ವೈರತ್ವವಿದ್ದುದನ್ನು ಗಮನಿಸಬಹುದು. ಏಕೆಂದರೆ ಕೆನರಾದ ಹಲವು ಪ್ರದೇಶಗಳಲ್ಲಿ ಪ್ರೋಟೆಸ್ಟೆಂಟ್ ಕ್ರೈಸ್ತರನ್ನು ಹಾಗೂ ಹಿಂದೂಗಳನ್ನು ಕ್ಯಾಥೋಲಿಕ್ ಕ್ರೈಸ್ತತ್ವದ ಕಡೆ ಸೆಳೆದುಕೊಳ್ಳಲು ಜೆಸ್ಯೂಟರು ಬಾರಿ ಉತ್ಸಾಹವನ್ನು ತೋರುತ್ತಿದ್ದರು ಎಂಬುದು ಬಾಸೆಲ್ ಮಿಶನರಿಗಳ ವಾದವಾಗಿತ್ತು. ಮಿಶನರಿ ಚಟುವಟಿಕೆಗಳ ವಿಚಾರದಲ್ಲಿಯೇ ಜೆಸ್ಯೂಟರ ಹಾಗೂ ಬಾಸೆಲ್ ಮಿಶನರಿಗಳ ಮಧ್ಯೆ ಪರಸ್ಪರ ಟೀಕಾಪ್ರಹಾರಗಳು ನಡೆಯುವುದನ್ನು ಗಮನಿಸಬಹುದು.[28] ಬಾಸೆಲ್ ಮಿಶನರಿಗಳು ಕೇವಲ ತಮ್ಮ ಮಿಶನರಿ (ಮತ ಪ್ರಚಾರ) ಕಾರ್ಯದಲ್ಲಿ ಬದ್ಧತೆಯನ್ನು ತೋರ್ಪಡಿಸಿ ಪ್ರಖ್ಯಾತರಾಗಿರದೇ ತಮ್ಮ ಕೈಗಾರಿಕಾ ಚಟುವಟಿಕೆಗಳ ಮೂಲಕ ಇಡೀ ವಿಶ್ವದ ಗಮನವನ್ನು ಸೆಳೆದಿದರು. ಅದರಲ್ಲೂ ಬಾಸೆಲ್ ಮಿಶನ್ ಕೈಗಾರಿಕೆಗಳು ತಯಾರಿಸುತ್ತಿದ್ದ ಹಂಚುಗಳು ಇವರ ಕೈಗಾರಿಕೆಗಳಿಗೆ ಎಲ್ಲಿಲ್ಲದ ಮನ್ನಣೆಯನ್ನು ತಂದಿಟ್ಟಿತ್ತು.

ಕ್ರೈಸ್ತರಿಗೆ ಉದ್ಯೋಗವನ್ನು ಒದಗಿಸಿಕೊಡುವ ಉದ್ದೇಶದೊಂದಿಗೆ ಬಾಸೆಲ್ ಮಿಶನರಿಗಳು ಕೆಲವು ಚಿಕ್ಕ ಕೈಗಾರಿಕೆಗಳನ್ನು ಆರಂಭಿಸುತ್ತಾರೆ. ಆದರೆ ನಂತರದಲ್ಲಿ ಅವು ಬೃಹತ್ ಕೈಗಾರಿಕೆಗಳಾಗಿ ಬೆಳವಣಿಗೆಯಾಗುತ್ತವೆ. ಬಾಸೆಲ್ ಮಿಶನ್ ಆರಂಭಿಸಿದ್ದ ಪ್ರಮುಖ ಕೈಗಾರಿಕೆಗಳೆಂದರೆ 1846ರಲ್ಲಿ 'ಕೈಗಾರಿಕಾ ಶಾಲೆ' (Industrial School), 1865ರಲ್ಲಿ ಹಂಚಿನ ಕೈಗಾರಿಕೆ, 1844ರಲ್ಲಿ ನೇಯುವ ಕಾರ್ಖಾನೆ, ಟೈಲರಿಂಗ್ ವಿಭಾಗ, 1874ರಲ್ಲಿ ತಾಂತ್ರಿಕ ಕಾರ್ಯಗಾರ (Mechanical Workshop) ಇತ್ಯಾದಿ. ಮಿಶನ್‌ನ ತಾಂತ್ರಿಕ ಕಾರ್ಯಗಾರವು ಸೀಸ, ಹಿತ್ತಾಳೆ, ಕಬ್ಬಿಣ ಇತ್ಯಾದಿ ಲೋಹಗಳ ವಸ್ತುಗಳನ್ನು ತಯಾರಿಸುತ್ತಿತು. ಇದು ತಯಾರಿಸುತ್ತಿದ್ದ ಕಬ್ಬಿಣದ ಪೆಟ್ಟಿಗೆಗಳು (Iron Safes) ಮದ್ರಾಸ್ ಸರಕಾರದ ಖಜಾನೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ಬಳಸಲಾಗುತ್ತಿತ್ತು. ಮಿಶನ್ ಕಂಡು ಹಿಡಿದ ಕಾಕಿ (Khaki) ಬಣ್ಣವು ಜಗತ್ತಿನಾದ್ಯಂತ ಸೇನಾ ಸಮವಸ್ತ್ರವಾಗಿ ನಂತರ ಬಳಕೆಯಾಗುತ್ತದೆ. ಮಿಶನ್ ತನ್ನ ಈ ಎಲ್ಲಾ ಕೈಗಾರಿಕೆಗಳನ್ನು ಪ್ರತ್ಯೇಕ ಮೇಲ್ವಿಚಾರಕರ ಮೂಲಕ ನಿರ್ವಹಿಸುತ್ತಿತ್ತು. ಬಾಸೆಲ್ ಮಿಶನ್ ಕೈಗಾರಿಕೆಗಳು ಮಿಶನ್ ಚಟುವಟಿಕೆಗಳಿಗಾಗಿ ವಾರ್ಷಿಕವಾಗಿ ಒಟ್ಟು ವೆಚ್ಚದ ಸುಮಾರು 1/4% ಭಾಗದಷ್ಟು ಹಣಕಾಸನ್ನು ಒದಗಿಸುತ್ತಿದ್ದವು ಎಂಬುದು ಗಮನಾರ್ಹವಾಗಿದೆ.[29] ಬಾಸೆಲ್ ಮಿಶನ್ ಕೈಗಾರಿಕೆಗಳು ಎಷ್ಟು ಪ್ರಖ್ಯಾತವಾಗಿತ್ತೆಂದರೆ ದಕ್ಷಿಣ

ಭಾರತದಲ್ಲಿ ನೇಯುವ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶವನ್ನು ಹೊಂದಿದ್ದ ಬ್ರಿಟಿಷ್ ಸರಕಾರ ಬಾಸೆಲ್ ಮಿಶನ್ ಕೈಗಾರಿಕೆಗಳ ಮಾದರಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸಲು ಚಿಂತಿಸಿತ್ತು.[30] ಅದೇ ರೀತಿ ಬಾಸೆಲ್ ಮಿಶನ್ ಕೈಗಾರಿಕೆಗಳ ಪ್ರಭಾವದಿಂದ ಸ್ಥಳೀಯವಾಗಿ ಹಲವು ಸ್ವತಂತ್ರ ಕೈಗಾರಿಕೆಗಳು ದೇಶೀಯರಿಂದ ಆರಂಭಗೊಳ್ಳುತ್ತವೆ.[31] ಕೃಷಿ ಕ್ಷೇತ್ರದಲ್ಲಿ ಕಾರ್ಯಚರಿಸಿದ್ದ ಬಾಸೆಲ್ ಮಿಶನರಿಗಳು ಶಿಕ್ಷಣ ಕ್ಷೇತ್ರಕ್ಕೂ ತಮ್ಮ ನಿರಂತರ ಸೇವೆಯನ್ನು ಒದಗಿಸಿದ್ದರು. 1841ರಲ್ಲಿ ಮಂಗಳೂರಿನಲ್ಲಿ ಮುದ್ರಣಾಲಯವನ್ನು (Printing Press) ಆರಂಭಿಸಿದ್ದ ಬಾಸೆಲ್ ಮಿಶನರಿಗಳು ಕನ್ನಡ, ತುಳು, ಮಲೆಯಾಳಂ, ಇಂಗ್ಲೀಷ್, ಜರ್ಮನ್ ಇತ್ಯಾದಿ ಎಂಟು ಭಾಷೆಗಳಲ್ಲಿ ವಿವಿಧ ರೀತಿಯ ಗ್ರಂಥ ಹಾಗೂ ಇತರ ಬರವಣಿಗೆಗಳನ್ನು ಮುದ್ರಿಸುತ್ತಿದ್ದರು. ಬ್ರಿಟಿಷ್ ಸರಕಾರಕ್ಕೆ ಬೇಕಾದ ಪಠ್ಯ ಪುಸ್ತಕಗಳ ಮುದ್ರಣವು ಇಲ್ಲಿ ಆಗುತ್ತಿತ್ತು ಹಾಗೂ ಇದು ಭಾರತದಲ್ಲಿಯೇ ಶ್ರೇಷ್ಠವಾದ ಮುದ್ರಣಾಲಯ ಎಂಬುದಾಗಿ ಮದ್ರಾಸ್ ಸರಕಾರ ಬಣ್ಣಿಸಿತ್ತು. 1845ರಲ್ಲಿ ಮಿಶನ್ ಬುಕ್ ಬೈಡಿಂಗ್‌ನ್ನು (Book Binding) ಮಂಗಳೂರಿನಲ್ಲಿ ಆರಂಭಿಸಿದರು. ವಿವಿಧ ಬಾಸೆಲ್ ಮಿಶನರಿಗಳು ಭಾರತೀಯ ಭಾಷೆಗಳಾದ ಕನ್ನಡ (ಕಿಟ್ಟೆಲ್ ಮತ್ತು ಮೊಗ್ಲಿಂಗ್), ಮಲೆಯಾಳಂ (ಗುಂಡರ್ಟ್), ಬಡಗ, ಸಂಸ್ಕೃತ, ಕೊಡವ, ಕೊಂಕಣಿ, ತುಳು (ಬ್ರಿಗಲ್, ಮ್ಯಾನರ್) ಇತ್ಯಾದಿಗಳ ಬೆಳವಣಿಗೆಗೆ ತಮ್ಮದೆ ಆದ ಕೊಡುಗೆಗಳನ್ನು ನೀಡಿದ್ದಾರೆ. ಹಲವು ದೇಶೀಯ ಗ್ರಂಥಗಳನ್ನು ಸಂಪಾದಿಸಿ, ಅವುಗಳನ್ನು ವೈಜ್ಞಾನಿಕವಾಗಿ ಅಚ್ಚು ಹಾಕಿಸಿದ್ದ ಬಾಸೆಲ್ ಮಿಶನ್ ಕನ್ನಡ ಪತ್ರಿಕೋದ್ಯಮಕ್ಕೆ ತನ್ನದೇ ಕೊಡುಗೆಯನ್ನು ನೀಡಿದೆ. ಕನ್ನಡದ ಮೊದಲ ವಾರ್ತಾ ಪತ್ರಿಕೆಯಾದ 'ಮಂಗಳೂರು ಸಮಾಚಾರ'ವನ್ನು 1843ರಲ್ಲಿ ಮಿಶನ್ ಆರಂಭಿಸಿತ್ತು. ಅದೇ ರೀತಿ ದಕ್ಷಿಣ ಕೆನರಾದ ಮೊದಲ ಇಂಗ್ಲೀಷ್ ಪತ್ರಿಕೆಯಾದ 'ಇಂಡಿಯಾನ್ ಮ್ಯಾಗಜೀನ್' (Indian Magazine) ನನ್ನು ಬಾಸೆಲ್ ಮಿಶನ್ 1903ರಲ್ಲಿ ಆರಂಭಿಸಿತ್ತು. ಹೀಗೆ ಬಾಸೆಲ್ ಮಿಶನ್ ಹಾಗೂ ಮಿಶನರಿಗಳು ಕೇವಲ ತಮ್ಮನ್ನು ಮತ ಪ್ರಚಾರ ಕಾರ್ಯಕ್ಕೆ ಸೀಮಿತಗೊಳಿಸದೆ ಜಗತ್ತು ಇಂದೂ ಅವರನ್ನು ನೆನಪಿಸುವಂತಹ ಹತ್ತು ಹಲವು ಕಾರ್ಯಗಳನ್ನು ನಡೆಸಿರುವುದು ಶ್ಲಾಘನೀಯ.

ಜರ್ಮನಿಯ ಬೇರೆ ಬೇರೆ ಪ್ರದೇಶಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಕೈಗಾರೀಕರಣ ಹೊಂದಿದ್ದು, ಬಹುಪಾಲು ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳು ದಕ್ಷಿಣ ಪಶ್ಚಿಮ ಜರ್ಮನಿಯವರಾಗಿದ್ದು, ಈ ಭಾಗವು 1914ರ ಕೆಲವು ದಶಕಗಳ ಮೊದಲು ಕೈಗಾರೀಕಿಕರಣವನ್ನು ಹೊಂದಿತ್ತು. ಆದುದರಿಂದ ಬಾಸೆಲ್ ಮಿಶನಿನ ಅರ್ಧಕ್ಕಿಂತಲೂ ಹೆಚ್ಚು ಮಿಶನರಿಗಳು ಸಾಂಪ್ರದಾಯಿಕ ಗ್ರಾಮೀಣ ವ್ಯವಸ್ಥೆಗಳಿಂದ ಬಂದವರಾಗಿದ್ದರು. ಮತ್ತೊಂದೆಡೆ ಬಾಸೆಲ್ ಮಿಶನಿನ ಬಾಸೆಲಿನಲ್ಲಿದ್ದ ಕೈಗಾರಿಕಾ ಕಮಿಷನ್‌ನ ಸದಸ್ಯರುಗಳು ಯಶಸ್ವಿ ಕೈಗಾರಿಕಾ ಮಾಲೀಕರು ಹಾಗೂ

ವ್ಯಾಪಾರಿಗಳಾಗಿದ್ದರು.[32] ಭಾರತದಲ್ಲಿ ಬಾಸೆಲ್ ಮಿಶನರಿಗಳು ಆರಂಭದಿಂದಲೇ ಬ್ರಿಟಿಷ್ ಅಧಿಕಾರಿಗಳಿಂದ ಸಾಕಷ್ಟು ಬೆಂಬಲವನ್ನು ಪಡೆದಿರುವುದನ್ನು ಗಮನಿಸಬಹುದು. ಬ್ರಿಟಿಷ್ ಅಧಿಕಾರಿಗಳು ವೈಯಕ್ತಿಕವಾಗಿ ಬಾಸೆಲ್ ಮಿಶನಿಗೆ ಹಲವು ರೀತಿಯ ಸಹಾಯವನ್ನು ಮಾಡುತ್ತಾರೆ. ಮತ್ತೊಂದೆಡೆ ಬಾಸೆಲ್ ಮಿಶನರಿಗಳು ನಿರಂತರವಾಗಿ ವಸಾಹತುಶಾಹಿಯ ಪರವಹಿಸುತ್ತಾ, ಅದನ್ನು ಬೆಂಬಲಿಸುವುದನ್ನೂ ಗಮನಿಸಬಹುದು. ಬಾಸೆಲ್ ಮಿಶನರಿಗಳಾಗಲೀ, ಅದರ ಇತರ ಅಧೀನ ಕೆಲಸಗಾರರಾಗಲೀ ಅಥವಾ ಬಾಸೆಲ್ ಮಿಶನ್ ನಿರ್ವಹಿಸಿದ್ದ ಪತ್ರಿಕೆಗಳಾಗಲೀ ಎಂದೂ ಬ್ರಿಟಿಷ್ ಸರಕಾರದ ವಿರುದ್ಧ ಧ್ವನಿ ಎತ್ತುವುದಿಲ್ಲ. ಇದರ ಬದಲು ಬ್ರಿಟಿಷ್ ವಸಾಹತುಶಾಹಿ ಕಾಲದ ಬೆಳವಣಿಗೆಗಳನ್ನು ನೈಜ ಅಭಿವೃದ್ಧಿ ಎಂದು, ರಾಷ್ಟ್ರೀಯ ಹೋರಾಟ ಅನಗತ್ಯವಾದದ್ದು ಎಂದು ಬಣ್ಣಿಸುತ್ತದೆ. ಮತ್ತೊಂದೆಡೆ ರಾಷ್ಟ್ರೀಯ ಹೋರಾಟದ ಬಗ್ಗೆ ಬಾಸೆಲ್ ಮಿಶನ್ ತನ್ನ ವಿರೋಧ ವ್ಯಕ್ತಪಡಿಸುತ್ತಾ, ಅದು ದೇಶದಲ್ಲಿ ಅಶಾಂತಿಗೆ ಕಾರಣವಾಗಿದೆ ಎಂಬ ವಾದವನ್ನು ಮಂಡಿಸುತ್ತದೆ. ಆದರೆ ಬ್ರಿಟಿಷೇತರ ಮಿಶನ್ ಸಂಘವಾಗಿದ್ದ ಬಾಸೆಲ್ ಮಿಶನ್‌ಗೆ ಬ್ರಿಟಿಷ್ ಪರವಾಗಿರುವುದು ಅನಿವಾರ್ಯವಾಗಿತ್ತು ಎಂದು ಅಭಿಪ್ರಾಯಪಡಬಹುದು. ಒಂದು ವೇಳೆ ಅದು ಬ್ರಿಟಿಷ್ ವಿರೋಧಿ ಧೋರಣೆಗಳನ್ನು ಅನುಸರಿಸಿದ್ದರೆ ಬ್ರಿಟಿಷ್ ಸರಕಾರ ಅದರ ಚಟುವಟಿಕೆಗಳನ್ನು ನಿರ್ಬಂಧಿಸುವ ಸಾಧ್ಯತೆಗಳಿದ್ದವು. ಪ್ರಸ್ತುತ ಈ ಅಧ್ಯಯನವು 1914ರ ನಂತರ ಕರ್ನಾಟಕದಲ್ಲಿನ ಬಾಸೆಲ್ ಮಿಶನಿನ ವಿಚಾರಗಳು ಹಾಗೂ ಅದರೊಂದಿಗೆ ಬೆರೆತುಕೊಂಡಿರುವ ಪೂರಕ ವಿಚಾರಗಳಿಗೆ ಮಾತ್ರ ಸೀಮಿತವಾಗಿದೆ. 1914ರ ವರೆಗೆ ದಕ್ಷಿಣ ಕೆನರಾ, ಹೊನ್ನಾವರ, ದಕ್ಷಿಣ ಮರಾಠ, ಕೊಡಗು, ನೀಲಗಿರಿ ಮತ್ತು ಮಲಬಾರ್ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿದ್ದ ಬಾಸೆಲ್ ಮಿಶನನ್ನು 1914ರಲ್ಲಿ ಬ್ರಿಟಿಷ್ ಸರಕಾರ ವೈರಿ ದೇಶದ ಮಿಶನೆಂದು ಸಾರಿ, ಅದರ ಚಟುವಟಿಕೆಗಳನ್ನು ನಿರ್ಬಂಧಿಸುತ್ತದೆ. ತದನಂತರ ಬಾಸೆಲ್ ಮಿಶನ್ ಹುಟ್ಟು ಹಾಕಿದ ಮಿಶನ್ ಮುಂದುವರಿಯಲು ಸೂಕ್ತ ಕ್ರಮಕೈಗೊಂಡಿದ್ದ ಬ್ರಿಟಿಷ್ ಸರಕಾರ, 1927ರಲ್ಲಿ ಬಾಸೆಲ್ ಮಿಶನಿಗೆ ಮರಳಿ ಭಾರತದಲ್ಲಿ ಕಾರ್ಯಚರಿಸಲು ಅನುಮತಿ ನೀಡುತ್ತದೆ. ಆದುದ್ದರಿಂದ 1927ರ ನಂತರ ಬಾಸೆಲ್ ಮಿಶನ್ ದಕ್ಷಿಣ ಕೆನರಾ, ದಕ್ಷಿಣ ಮರಾಠ, ಕೊಡಗು ಹಾಗೂ ಮಲಬಾರ್‌ನಲ್ಲಿ ತನ್ನ ಕಾರ್ಯವನ್ನು ಪುನರಾರಂಭಿಸುತ್ತದೆ. ಮಲಬಾರನ್ನು ಹೊರತುಪಡಿಸಿ ಇತರ ಮೇಲಿನ ಮೂರು ಪ್ರದೇಶಗಳಲ್ಲಿ ಮಿಶನಿನ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಲವು ವಿಚಾರಗಳನ್ನು ಈ ಅಧ್ಯಯನದಲ್ಲಿ ಚರ್ಚೆಗೆ ಒಳಪಡಿಸಲಾಗುವುದು.

20ನೇ ಶತಮಾನದಲ್ಲಿ ಕರ್ನಾಟಕದಲ್ಲಿನ ಮಿಶನರಿ ಚಟುವಟಿಕೆಗಳ ಬಗ್ಗೆ ನಡೆದಿರುವ ಸಂಶೋಧನೆಗಳು ಬಹಳಷ್ಟು ವಿರಳವಾಗಿವೆ. ಅದರಲ್ಲೂ 1914ರ ನಂತರ ಎಂದರೆ ಪ್ರಥಮ ಜಾಗತಿಕ ಯುದ್ಧ ಆರಂಭವಾದ ನಂತರದ ಕಾಲದಲ್ಲಿ ಬಾಸೆಲ್ ಮಿಶನಿನ ವಿಚಾರಗಳಿಗೆ ಸಂಬಂಧಿಸಿದ

See page 14-15

ಸಂಶೋಧನೆಗಳು ನಡೆದಿಲ್ಲವೆಂದು ಹೇಳಬಹುದು. 1987ರಲ್ಲಿ ಪೀಟರ್ ವಿಲ್ಸನ್ ಪ್ರಭಾಕರ್‌ರವರು ಪಿಎಚ್. ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ಬಾಸೆಲ್ ಮಿಶನ್ ಇನ್ ಸೌತ್ ಕೆನರಾ 1834–1947' ಪ್ರಬಂಧವು ದಕ್ಷಿಣ ಕೆನರಾದಲ್ಲಿ ಬಾಸೆಲ್ ಮಿಶನಿನ ಕಾರ್ಯಚರಣೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ. ಶೀರ್ಷಿಕೆಯು ಸೂಚಿಸುವಂತೆ ಇದು ಬಾಸೆಲ್ ಮಿಶನ್, ಮಿಶನರಿ, ಶಿಕ್ಷಣ, ಕೈಗಾರಿಕೆ ಹಾಗೂ ಇತರ ಕ್ಷೇತ್ರಗಳಲ್ಲಿ ಅದು ಗಳಿಸಿದ ಸಾಧನೆಗಳ ದಾಖಲೆಯಾಗಿದೆ. ಆದರೆ 1914ರಲ್ಲಿ ಬಾಸೆಲ್ ಮಿಶನನ್ನು ಭಾರತದಲ್ಲಿ ನಿರ್ಬಂಧಿಸಿದ ಬಳಿಕದ ಮಿಶನಿನ ವಿಚಾರಗಳ ಬಗ್ಗೆ, ಚಟುವಟಿಕೆಗಳ ಬಗ್ಗೆ ಸವಿವರವಾದ ಚರ್ಚೆ ಈ ಅಧ್ಯಯನದಲ್ಲಿ ಕಂಡು ಬರುವುದಿಲ್ಲ. ಡಾ. ಡೆನಿಸ್ ಫೆರ್ನಾಂಡಿಸ್‌ರವರು 2006ರಲ್ಲಿ ಪಿಎಚ್. ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ದಿ ತುಳು ವರ್ಲ್ಡ್ ಇನ್ ಯೂರೋಪಿಯನ್ ರೈಟಿಂಗ್ಸ್' ಪ್ರಬಂಧವು ವಸಾಹತುಶಾಹಿ ಬರವಣಿಗೆಗಳಲ್ಲಿ ವಿಶೇಷವಾಗಿ ಮಿಶನರಿ ಹಾಗೂ ಬ್ರಿಟಿಷ್ ಬರವಣಿಗೆಗಳಲ್ಲಿ ಬಿಂಬಿತವಾದ ತುಳುನಾಡಿನ ಬಗ್ಗೆ ಚಿತ್ರಣವನ್ನು ಕೊಡುತ್ತದೆ. ಇಲ್ಲಿ ಲೇಖಕರು ವಿವಿಧ ಬರವಣಿಗೆಗಳನ್ನು ಮುಖ್ಯವಾಗಿ ಮಿಶನರಿ ಬರವಣಿಗೆಗಳನ್ನು, (ಬಾಸೆಲ್ ಮಿಶನರಿಗಳ ಬರವಣಿಗೆಗಳನ್ನು ಸೇರಿಸಿ) ಅವುಗಳ ಸ್ವರೂಪವನ್ನು ವಿಶ್ಲೇಷಣಾತ್ಮಕವಾಗಿ ಚರ್ಚೆಗೆ ಗುರಿಪಡಿಸಿದ್ದಾರೆ. 2010ರಲ್ಲಿ ಪಿಎಚ್. ಡಿ. ಪದವಿ ಪೂರೈಕೆಗಾಗಿ ಕ್ಯಾಥರಿನ್ ಸ್ಟೆನ್‌ಜಿಲ್‌ರವರು ಸಿದ್ಧಪಡಿಸಿ ಲಂಡನ್ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ದಿ ಬಾಸೆಲ್ ಮಿಶನ್ ಇಂಡಸ್ಟ್ರೀಸ್ ಇನ್ ಇಂಡಿಯಾ 1834–1884: ಇಪ್ರುವೈಸೇಶನ್ ಹೋರ್ ಪೋಲ್ಲಿಸಿ' ಪ್ರಬಂಧವು ಹೇಗೆ ಬಾಸೆಲ್ ಮಿಶನರಿಗಳು ಚಿಕ್ಕ ಕೈಗಾರಿಕೆಗಳನ್ನು ಆರಂಭಿಸಿ ನಂತರದಲ್ಲಿ ಅದನ್ನು ಬೃಹತ್ ಕೈಗಾರಿಕೆಗಳಾಗಿ ಅಭಿವೃದ್ಧಿಪಡಿಸಿದರು ಹಾಗೂ ಮಿಶನಿನ ಈ ನೀತಿಗೆ ಕಾರಣಗಳೇನೆಂಬುದನ್ನು ವಿವರವಾಗಿ ಚರ್ಚಿಸಿದ್ದಾರೆ. ಈ ಅಧ್ಯಯನವು ಕೈಗಾರಿಕಾ ಕ್ಷೇತ್ರದಲ್ಲಿ 19ನೇ ಶತಮಾನದಲ್ಲಿ ಬಾಸೆಲ್ ಮಿಶನಿನ ಸಾಧನೆಗಳನ್ನು ವಿವರವಾಗಿ ಚರ್ಚಿಸಿದೆ.

1986ರಲ್ಲಿ ಜಯಪ್ರಕಾಶ್ ರಾಘವಯ್ಯನವರು ಎಂ. ಫಿಲ್. ಪದವಿ ಪೂರೈಕೆಗಾಗಿ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ಹೊಸ ದೆಹಲಿಗೆ ಸಲ್ಲಿಸಿದ್ದ 'ಬಾಸೆಲ್ ಮಿಶನ್ ಇಂಡಸ್ಟ್ರೀಸ್ ಇನ್ ಮಲಬಾರ್ ಆ್ಯಂಡ್ ಸೌತ್ ಕೆನರಾ 1834–1914 ಎ ಸ್ಟಡಿ ಆಫ್ ಇಟ್ಸ್ ಸೋಶಿಯಲ್ ಆ್ಯಂಡ್ ಇಕೋನೋಮಿಕ್ ಇಂಪ್ಯಾಕ್ಟ್' ಎಂಬ ಪ್ರಬಂಧವು ದಕ್ಷಿಣ ಕೆನರಾ ಹಾಗೂ ಮಲಬಾರ್‌ನಲ್ಲಿ ಬಾಸೆಲ್ ಮಿಶನ್ ನಡೆಸಿದ್ದ ಕೈಗಾರಿಕಾ ಚಟುವಟಿಕೆಗಳ ಬಗ್ಗೆ ಚರ್ಚಿಸಿ, ಅದರ ಚಟುವಟಿಕೆಗಳಿಂದ ಆಗಿರುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ವಿಶ್ಲೇಷಿಸಿದೆ. 2004 ರಲ್ಲಿ ಬಿ. ಪದ್ಮಶ್ರೀಯವರು ಎಂ. ಫಿಲ್. ಪದವಿ ಪೂರೈಕೆಗಾಗಿ ಮಧುರೈ ಕಾಮರಾಜ್

ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ಬಾಸೆಲ್ ಮಿಶನ್ ಆ್ಯಂಡ್ ಎಜ್ಯುಕೇಶನ್ ಇನ್ ಸೌತ್ ಕೆನರಾ ಡಿಸ್ಟ್ರಿಕ್ಟ್ (1834–1947)' ಎಂಬ ಪ್ರಬಂಧವು ಬಾಸೆಲ್ ಮಿಶನ್ ದಕ್ಷಿಣ ಕೆನರಾದ ಶಿಕ್ಷಣ ಕ್ಷೇತ್ರದಲ್ಲಿ ನಡೆಸಿದ ಚಟುವಟಿಕೆಗಳ ಬಗ್ಗೆ ಚರ್ಚಿಸುತ್ತಾ, ಮಿಶನ್ ದಕ್ಷಿಣ ಕೆನರಾ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ಬಹಳಷ್ಟು ಪ್ರಶಂಶಿಸಿದೆ. ಶರೋನ್ ವಿಕ್ಟೋರಿಯ ಹರ್ಬರ್ಟ್‌ರವರು ಎಂ. ಎ. ಪದವಿ ಪೂರೈಕೆಗಾಗಿ ಕ್ಯಾಲಿಕಟ್ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ಕಾನ್‌ಟ್ರಿಬ್ಯೂಶನ್ಸ್ ಆಫ್ ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಟು ಎಜ್ಯುಕೇಶನ್ ಇನ್ ಮಲಬಾರ್ ವಿದ್ ಸ್ಪೇಶಲ್ ರೆಫರೆನ್ಸ್ ಟು ಕ್ಯಾನನೂರ್ ಆ್ಯಂಡ್ ಕ್ಯಾಲಿಕಟ್ ಡಿಸ್ಟ್ರಿಕ್ಟ್' ಎಂಬ ಪ್ರಬಂಧವು ಮಿಶನ್ ಮಲಬಾರ್‌ನಲ್ಲಿ ನಡೆಸಿರುವ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆಗಿನ ದಾಖಲೆಯಾಗಿದೆ. 1992ರಲ್ಲಿ ಸೇಲಿನ್ ವಾಸ್‌ರವರು ಎಂ. ಎ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ದಿ ಕಾಂಟ್ರಿಬ್ಯುಶನ್ ಆಫ್ ಕ್ರಿಶ್ಚಿಯನ್ ಮಿಶನರೀಸ್ ಟು ಜರ್ನಲಿಸಮ್ ಇನ್ ಸೌತ್ ಕೆನರಾ' ಎಂಬ ಪ್ರಬಂಧವು ಬಾಸೆಲ್ ಮಿಶನರಿಗಳು ಪತ್ರಿಕೋದ್ಯಮಕ್ಕೆ ನೀಡಿರುವ ಕೊಡುಗೆ ಹಾಗೂ ಅವರು ಆರಂಭಿಸಿದ್ದ ವಿವಿಧ ಪತ್ರಿಕೆಗಳ ಬಗ್ಗೆ ಚರ್ಚೆಯನ್ನು ಒಳಗೊಂಡಿದೆ.

1964ರಲ್ಲಿ ಜಯವಂತ್ ಎಮ್. ಜೋಗುಳರವರು ಸೆರಾಂಪೂರ್ ವಿಶ್ವವಿದ್ಯಾನಿಲಯಕ್ಕೆ ಬಿ. ಡಿ. (ಬ್ಯಾಚುಲರ್ ಆಪ್ ಡಿವಿನಿಟಿ) ಪದವಿಗಾಗಿ ಸಲ್ಲಿಸಿದ್ದ 'ಎ ಸ್ಟಡಿ ಆಫ್ ದಿ ಆ್ಯಟಿಟ್ಯೂಡ್ ಆಫ್ ದಿ ಬಾಸೆಲ್ ಮಿಶನ್ ಚರ್ಚಸ್ ಇನ್ ಇಂಡಿಯಾ ಟು ದಿ ಚರ್ಚ್ ಆಫ್ ಸೌತ್ ಇಂಡಿಯಾ' ಎಂಬ ಪ್ರಬಂಧವು ದಕ್ಷಿಣ ಭಾರತದಲ್ಲಿ ಆರಂಭವಾದ ಚರ್ಚ್ ಯೂನಿಯನ್ ಚಳವಳಿಗೆ ಬಾಸೆಲ್ ಮಿಶನಿನ ಪ್ರತಿಕ್ರಿಯೆ ಹೇಗಿತ್ತು ಎಂಬುದರ ಚಿತ್ರಣವನ್ನು ನೀಡಿದೆ ಹಾಗೂ ಬಾಸೆಲ್ ಮಿಶನಿನ ಬೇರೆ ಬೇರೆ ಪ್ರದೇಶಗಳು ಚರ್ಚ್ ಆಫ್ ಸೌತ್ ಇಂಡಿಯಾವನ್ನು ಸೇರಿದ ಬಗೆಯನ್ನು ವಿವರಿಸಿದೆ. ಜೇಮ್ಸ್ ಡಬ್ಲ್ಯು. ಪ್ರ್ಯಾಂಕ್ಲಿನ್‌ರವರು 1916ರಲ್ಲಿ ಬಿ. ಡಿ. ಪದವಿಗಾಗಿ ಸೆರಾಂಪುರ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ 'ಹಿಸ್ಟೋರಿಕಲ್ ಸ್ಟಡಿ ಆಫ್ ದಿ ಸೋಶಿಯಲ್ ಪಾಲಿಸಿ ಆ್ಯಂಡ್ ಪ್ರ್ಯಾಕ್ಟಿಸ್ ಆಫ್ ದಿ ಬಿ. ಎಮ್. ಇನ್ ಸೌತ್ ಕೆನರಾ (1834–1914)' ಎಂಬ ಪ್ರಬಂಧವು ಬಾಸೆಲ್ ಮಿಶನ್ ಶಿಕ್ಷಣ, ಕೃಷಿ, ಕೈಗಾರಿಕೆ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ನೀಡಿರುವ ಕೊಡುಗೆಗಳನ್ನು ಚರ್ಚಿಸಿದೆ. ಕ್ರಿಸ್ಟೋಫರ್ ಎಲ್. ಪುರ್ಟಾಡೋರವರು 1964ರಲ್ಲಿ ಸೆರಾಂಪುರ ವಿಶ್ವವಿದ್ಯಾನಿಲಯಕ್ಕೆ ಬಿ. ಡಿ. ಪದವಿಗಾಗಿ ಸಲ್ಲಿಸಿದ್ದ 'ಬ್ರಿಫ್ ಹಿಸ್ಟರಿ ಆಫ್ ದಿ ವರ್ಕ್ ಆಫ್ ದಿ ಬಾಸೆಲ್ ಮಿಶನ್ ಇನ್ ಕೋರ್ಗ್ ಫ್ರಮ್ 1855 ಟು 1914' ಎಂಬ ಪ್ರಬಂಧವು ಕೊಡಗಿನಲ್ಲಿ ಬಾಸೆಲ್ ಮಿಶನಿನ ಇವ್ಯಾಜಲಿಕಲ್ ಚಟುವಟಿಕೆಗಳ ಬಗ್ಗೆ ವಿಮರ್ಶೆ ನಡೆಸಿದೆ.

ಮಿಶನ್ ಇತಿಹಾಸದ ಬಗ್ಗೆ ಚರ್ಚೆ ನಡೆಸಿರುವ ಕೆಲವು ಪ್ರಕಟಿತ ಗ್ರಂಥಗಳು ಲಭ್ಯವಿದೆ. ಎಸ್.ಡಿ.ಎಲ್. ಆಳಗೋಡಿಯವರ 'ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ'[33] ಎಂಬ ಗ್ರಂಥವು ಭಾರತದಲ್ಲಿ ವಸಾಹತುಶಾಹಿಯೊಂದಿಗೆ ಪ್ರೋಟೆಸ್ಟೆಂಟ್ ಕ್ರೈಸ್ತ ಮತವು ಬೆಳೆದು, ಅದು ವಿವಿಧ ಕ್ಷೇತ್ರಗಳಲ್ಲಿ ಕಾರ್ಯಚರಿಸಿದ ಬಗ್ಗೆ ಹಾಗೂ ವಿವಿಧ ಕ್ಷೇತ್ರಗಳಿಗೆ ಅದರ ಕೊಡುಗೆಗಳನ್ನು ವಿವರಿಸಿದ್ದಾರೆ. ಈ ಗ್ರಂಥವು ಕ್ರೈಸ್ತ ಸಭೆಗಳ ಐಕ್ಯತಾ ಚಳುವಳಿ ಬಗ್ಗೆ ಚರ್ಚಿಸಿದೆ. ವಿಜಯ್ ಕುಮಾರ್‌ರವರ 'ಕರ್ನಾಟಕದಲ್ಲಿ ಪ್ರೊಟೆಸ್ಟೆಂಟ್ ಮಿಶನುಗಳ ಚರಿತ್ರೆ'[34] ಎಂಬ ಗ್ರಂಥವು ಕರ್ನಾಟಕದಲ್ಲಿ ಕಾರ್ಯಚರಿಸಿದ್ದ ವಿವಿಧ ಪ್ರೊಟೆಸ್ಟೆಂಟ್ ಮಿಶನುಗಳ ಚಟುವಟಿಕೆ ಹಾಗೂ ಅವುಗಳ ಸಾಧನೆಗಳ ಚಿತ್ರಣವನ್ನು ಒದಗಿಸುತ್ತದೆ. ಎನ್. ಸಿ. ಸಾರ್ಜೆಂಟ್ ರವರ 'ಪ್ರಮ್ ಮಿಶನ್ಸ್ ಟು ಚರ್ಚ್ ಇನ್ ಕರ್ನಾಟಕ'[35] ಗ್ರಂಥವು ಕರ್ನಾಟಕದಲ್ಲಿ ಬೇರೆ ಬೇರೆ ಮಿಶನುಗಳಿಂದ ಸ್ಥಾಪಿಸಲ್ಪಟ್ಟ ಸಭೆಗಳು ಕಾಲಕ್ರಮೇಣ ಹೇಗೆ ದೇಶೀಯ ಚರ್ಚುಗಳಾಗಿ ಬೆಳೆದವು ಎಂಬುದನ್ನು ಚರ್ಚಿಸಿದ್ದಾರೆ. ಕ್ರಾಂತಿ ಫರಾಯೆಸ್‌ರವರ 'ದಿ ಕ್ರಿಶ್ಚಿಯನ್ ಇಂಪ್ಯಾಕ್ಟ್ ಇನ್ ಸೌತ್ ಕೆನರಾ'[36] ಗ್ರಂಥವು ಕ್ರೈಸ್ತ ಮಿಶನರಿ ಚಟುವಟಿಕೆಗಳು ದಕ್ಷಿಣ ಕೆನರಾದ ಶಿಕ್ಷಣ, ಸಾಮಾಜಿಕ ಪ್ರಗತಿ, ಆರ್ಥಿಕ ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಬದಲಾವಣೆಗಳಿಗೆ ಕಾರಣವಾದ ಬಗೆಯನ್ನು ಕೂಲಂಕುಶವಾಗಿ ಚರ್ಚಿಸಿದೆ.

ಈ ಮೇಲಿನ ಎಲ್ಲವೂ 19ನೇ ಶತಮಾನದ ಅದರಲ್ಲೂ ಮುಖ್ಯವಾಗಿ 1914ರ ವರೆಗಿನ ಬಾಸೆಲ್ ಮಿಶನಿನ ಚಟುವಟಿಕೆಗಳ ಬಗ್ಗೆ ಅಧ್ಯಯನವನ್ನು ನಡೆಸಿವೆ. ಮೇಲಿನ ಕೆಲವು ಅಧ್ಯಯನಗಳು 1914ರ ವರೆಗಿನ ಬಾಸೆಲ್ ಮಿಶನಿನ ಸಾಧನೆಗಳ ಬಗ್ಗೆ ಚರ್ಚೆ ನಡೆಸಿದರೆ, ಇತರ ಕೆಲವು ಅಧ್ಯಯನಗಳು ವಿಶೇಷವಾಗಿ ಬಾಸೆಲ್ ಮಿಶನಿನ ಕೈಗಾರಿಕೆಗಳ ಬಗ್ಗೆ ಚರ್ಚೆಯನ್ನು ನಡೆಸಿವೆ. ಪ್ರಸ್ತುತ ಈ ಅಧ್ಯಯನವು 20ನೇ ಶತಮಾನದ ಅದರಲ್ಲೂ ಮುಖ್ಯವಾಗಿ 1914ರ ನಂತರದಲ್ಲಿನ ಬಾಸೆಲ್ ಮಿಶನಿನ ಕಾರ್ಯ ವೈಖರಿ, ಅದರ ಮುಂದುವರಿಕೆಯಲ್ಲಾದ ತೊಡಕು, 1927ರಲ್ಲಿ ಅದರ ಪುನರ್ ಆಗಮನ, ಬಾಸೆಲ್ ಮಿಶನಿನ ಅನುಪಸ್ಥಿತಿಯಲ್ಲಿ ಮಿಶನಿನ ಮುಂದುವರಿಕೆ, ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತತೆಯತ್ತ ಮುಂದುವರಿದ ಬಗೆ, ಮಿಶನ್ ರಾಷ್ಟ್ರೀಯತೆಯನ್ನು ಗಮನಿಸಿದ ದೃಷ್ಟಿಕೋನ, ಮಿಶನ್ ಹಾಗೂ ವಸಾಹತುಶಾಹಿ ಸಂಬಂಧ ಇತ್ಯಾದಿ ವಿಚಾರಗಳನ್ನು ವಿಶ್ಲೇಷಣಾತ್ಮಕವಾಗಿ ಚರ್ಚೆಗೆ ಒಳಪಡಿಸುತ್ತದೆ. ಆದುದರಿಂದ ಈ ಅಧ್ಯಯನವು ಈವರೆಗೆ ನಡೆದ ಅಧ್ಯಯನಗಳಿಗಿಂತ ಭಿನ್ನವಾಗಿರುವುದು. ಈ ಅಧ್ಯಯನದಲ್ಲಿ ಮಿಶನ್ ಮತ್ತು ವಸಾಹತುಶಾಹಿಯ ನಡುವಿನ ಪರಸ್ಪರ ವಿರೋಧವುಳ್ಳ ಹಾಗೂ ಬಿಗುವುಳ್ಳ (Conntradictions and Tensions) ವಿಚಾರಗಳನ್ನು ~~ಕೂಲಂಕುಶವಾಗಿ~~ ಅಧ್ಯಯಿಸಲು ಪ್ರಯತ್ನಿಸಲಾಗಿದ್ದು, ವಸಾಹತುಶಾಹಿ ಮತ್ತು ಮಿಶನಿನ ದೀರ್ಘಕಾಲದ ಅಸ್ತಿತ್ವದಲ್ಲಿ ಅವು ಪರಸ್ಪರ ಎದುರುಗೊಂಡ ಸನ್ನಿವೇಶಗಳು ಹಾಗೂ

ಕಾಲದಿಂದ ಕಾಲಕ್ಕೆ ಭಿನ್ನವಾಗಿದ್ದ ಅವುಗಳ ತಂತ್ರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಬಾಸೆಲ್ ಮಿಶನ್ ಬಗ್ಗೆ ಹಲವು ಅಧ್ಯಯನಗಳು ನಡೆದಿದ್ದರೂ ಅವು ಮಿಶನ್ ಮತ್ತು ವಸಾಹತುಶಾಹಿಯ ನಡುವಿನ ಸಂಕುಚಿತವಾದ ವಿಚಾರಗಳನ್ನು ಚರ್ಚಿಸುವಲ್ಲಿ ಹಾಗೂ ಮಿಶನ್ ರಾಷ್ಟ್ರೀಯತೆಯತ್ತ ಹೊಂದಿದ್ದ ದೃಷ್ಟಿಕೋನವನ್ನು ಚರ್ಚಿಸುವಲ್ಲಿ ವಿಫಲವಾಗಿವೆ.

ಅಧ್ಯಯನದ ಆಕರಗಳು:

ವಸಾಹತು ಸರಕಾರದ ದಾಖಲೆಗಳು ಹಾಗೂ ಮಿಶನರಿ ದಾಖಲೆಗಳು ಈ ಅಧ್ಯಯನಕ್ಕೆ ಬಳಸಲಾಗಿರುವ ಮುಖ್ಯ ಪ್ರಾಥಮಿಕ ಆಕರಗಳಾಗಿವೆ. ವಸಾಹತು ಸರಕಾರದ ದಾಖಲೆಗಳು ತಮಿಳುನಾಡು ರಾಜ್ಯ ಪತ್ರಾಗಾರ (Tamilnadu State Archives) ದಲ್ಲಿ ಲಭ್ಯವಿದ್ದು, ಅವುಗಳಲ್ಲಿ ಮದ್ರಾಸ್ ಸರಕಾರದ ಪಬ್ಲಿಕ್ ಡಿಪಾರ್ಟಮೆಂಟ್ ಹಾಗೂ ಹೋಮ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದ ದಾಖಲೆಗಳನ್ನು ಬಳಸಿಕೊಳ್ಳಲಾಗಿದೆ. ಈ ದಾಖಲೆಗಳು ಲಂಡನ್‌ನಲ್ಲಿನ ವಸಾಹತು ಕಛೇರಿ, ಇಂಡಿಯಾ ಕಛೇರಿ, ಮದ್ರಾಸ್ ಸರಕಾರ, ಬಾಂಬೆ ಸರಕಾರ, ಭಾರತ ಸರಕಾರ ಹಾಗೂ ಅದರ ಅಧಿಕಾರಿಗಳ ನಡುವೆ ನಡೆದ ಪತ್ರ ವ್ಯವಹಾರ, ವಿವಿಧ ಆಜ್ಞೆಗಳು (Government Orders) ಹಾಗೂ ಇತರ ದಾಖಲೆಗಳನ್ನು ಒಳಗೊಂಡಿವೆ. ಇವು ಬ್ರಿಟಿಷ್ ಸರಕಾರ ಮಿಶನ್‌ನತ್ತ ಅನುಸರಿಸಿದ ನೀತಿ ಮತ್ತು ಧೋರಣೆಗಳನ್ನು ಅವಲೋಕಿಸಲು ಬಹು ಅಮೂಲ್ಯ ದಾಖಲೆಗಳಾಗಿವೆ. ಆದರೆ ಈ ದಾಖಲೆಗಳು ಬ್ರಿಟಿಷ್ ಅಧಿಕಾರಿಗಳಿಂದ ಲಿಖಿತವಾಗಿದ್ದು, ಅವು ಭಾರತೀಯರು ಮಿಶನಿನತ್ತ ಯುದ್ಧದ ಕಾಲದಲ್ಲಿ ಯಾವ ನಿಲುವುಗಳನ್ನು ಹೊಂದಿದ್ದರು ಎಂಬುದನ್ನು ತಿಳಿಸುವುದಿಲ್ಲ. ಆದುದರಿಂದ ಈ ಪತ್ರಾಗಾರದಲ್ಲಿ ಲಭ್ಯವಿರುವ ನ್ಯೂಸ್ ಪೇಪರ್ ರಿಪೋರ್ಟ್ಸ್‌ಗಳನ್ನು ಬಳಸಿಕೊಳ್ಳಲಾಗಿದೆ. ಜಾಗತಿಕ ಸಮರದ ಕಾಲದಲ್ಲಿ ಸ್ಥಳೀಯ ದೇಶೀಯ ಪತ್ರಿಕೆಗಳು ಮಿಶನ್ ಬಗ್ಗೆ ಹೊಂದಿದ್ದ ದೃಷ್ಟಿಕೋನವನ್ನು ನಿರೂಪಿಸಲು ಇವು ಸಹಾಯಕವಾಗಿವೆ. ಅದೇ ರೀತಿ ಪತ್ರಾಗಾರದಲ್ಲಿ ಲಭ್ಯವಿರುವ ಇತರ ಕೆಲವು ವರದಿಗಳಾದ 'ರಿಪೋರ್ಟ್ಸ್ ಆನ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇನ್ ದಿ ಮೆಡ್ರಾಸ್ ಪ್ರೆಸಿಡೆನ್‌ಸೀ' (Reports on Public Instruction in the Madras Presidency) ಇತ್ಯಾದಿಗಳು ಈ ಅಧ್ಯಯನಕ್ಕೆ ಪೂರಕ ದಾಖಲೆಗಳಾಗಿವೆ.

ಕರ್ನಾಟಕ ತಿಯೊಲಾಜಿಕಲ್ ಕಾಲೇಜು, ಮಂಗಳೂರು ಹಾಗೂ ಯುನೈಟೆಡ್ ತಿಯೊಲಾಜಿಕಲ್ ಕಾಲೇಜು,. ಬೆಂಗಳೂರು ಇಲ್ಲಿನ ಪತ್ರಾಗಾರಗಳಲ್ಲಿರುವ ಬಾಸೆಲ್ ಮಿಶನಿನ 1841 ರಿಂದ 1913ರ ವರೆಗಿನ ವಾರ್ಷಿಕ ವರದಿಗಳು ಮಿಶನರಿ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಮತ್ತೊಂದು ಪ್ರಮುಖ ಆಕರಗಳಾಗಿವೆ. ಈ ವರದಿಗಳು ಭಾರತದಲ್ಲಿ ಮಿಶನಿನ ಚಟುವಟಿಕೆಗಳು

ಸಮರ್ಪಕವಾಗಿ ನಡೆಯುತ್ತಿವೆ ಹಾಗೂ ಯುರೋಪಿನಿಂದ ಕಳುಹಿಸಲ್ಪಟ್ಟ ಹಣ ಸೂಕ್ತವಾಗಿ ಬಳಸಲ್ಪಡುತ್ತಿದೆ ಎಂಬುದರ ಬಗ್ಗೆ ಹೋಮ್ ಬೋರ್ಡಿಗೆ ತಿಳಿಸುವ ವರದಿಗಳಾಗಿವೆ. ಈ ವರದಿಗಳು ಮಿಶನಿನ ಚಟುವಟಿಕೆಗಳ ಹಾಗೂ ಅದು ನಡೆಸುತ್ತಿದ್ದ ಇತರ ಚಟುವಟಿಕೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿವೆ. ಈ ವರದಿಗಳು ಮಿಶನಿನ ಕೆಳಸ್ತರದ ವರ್ಗದ ಹಾಗೂ ಸ್ಥಳೀಯ ಕ್ರೈಸ್ತರ ಧ್ವನಿಯನ್ನು ಪ್ರತಿನಿಧಿಸುವುದಿಲ್ಲ. ಇದಲ್ಲದೆ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸಂಯುಕ್ತ ಬಾಸೆಲ್ ಮಿಶನ್ ಚರ್ಚ್ ಕೌನ್ಸಿಲ್ ಕೂಟದ ವರದಿಗಳು 1934–1967, ಕೆ.ಟಿ.ಸಿ ಪತ್ರಾಗಾರದಲ್ಲಿನ ಬಾಸೆಲ್ ಮಿಶನಿಗೆ ಸಂಬಂಧಿಸಿದ ಇತರ ದಾಖಲೆಗಳು[37] ಈ ಅಧ್ಯಯನಕ್ಕೆ ಅಮೂಲ್ಯವಾದ ಮಾಹಿತಿಗಳನ್ನು ಒದಗಿಸುತ್ತವೆ. ಕರ್ನಾಟಕ ತಿಯೊಲಾಜಿಕಲ್ ಕಾಲೇಜು ಪತ್ರಾಗಾರ, ಮಂಗಳೂರು ಇಲ್ಲಿರುವ ಕೆಲವು ಸ್ಥಳೀಯ ಪಾಸ್ಟರ್/ಕೆಟಕಿಸ್ಟರುಗಳ ಸಂದರ್ಶನಗಳು ಅಮೂಲ್ಯವಾಗಿದ್ದು, ಈ ಪಾಸ್ಟರುಗಳು ಜರ್ಮನ್ ಮಿಶನರಿಗಳ ಕೈಕೆಳಗೆ ಕಾರ್ಯನಿರ್ವಹಿಸಿದ್ದು, ಅವರ ಸಂದರ್ಶನಗಳು ಮಿಶನರಿಗಳು ಸ್ಥಳೀಯ ಸಭೆಗಳ ಹಾಗೂ ಅವರ ಉದ್ಯೋಗಿಗಳತ್ತ ಇಟ್ಟುಕೊಂಡಿದ್ದ ವರ್ತನೆಗಳನ್ನು ತಿಳಿಸುತ್ತವೆ.

ವಿವಿಧ ಗ್ರಂಥಾಲಯ ಹಾಗೂ ಪತ್ರಾಗಾರಗಳಲ್ಲಿನ ಪತ್ರಿಕೆಗಳು, ಜರ್ನಲ್‌ಗಳು (Journals), ಮ್ಯಾಗಜೀನ್‌ಗಳು, ಸವೆನಿಯರ್‌ಗಳು ಹಾಗೂ ಕರಪತ್ರಗಳನ್ನು (Pamphlets) ಆಕರಗಳಾಗಿ ಬಳಸಲಾಗಿದೆ. ಈ ಪತ್ರಿಕೆಗಳು ಮಿಶನ್ ರಾಷ್ಟ್ರೀಯ ಹೋರಾಟದ ಕಡೆಗೆ ಹೊಂದಿದ್ದ ದೃಷ್ಟಿಕೋನ, ಸ್ಥಳೀಯರು ಮಿಶನರಿಗಳ ಬಗ್ಗೆ ಹೊಂದಿದ್ದ ಅಭಿಪ್ರಾಯ ಇತ್ಯಾದಿ ವಿಚಾರಗಳನ್ನು ತಿಳಿದುಕೊಳ್ಳಲು ಬಹಳಷ್ಟು ಸಹಾಯಕವಾಗಿವೆ. ಈ ಮೇಲಿನ ದಾಖಲೆಗಳಲ್ಲಿ ಪ್ರಮುಖವಾದವುಗಳೆಂದರೆ ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಯೂವ್, ಇಂಟರನ್ಯಾಶನಲ್ ರಿವ್ಯೂವ್ ಆಫ್ ಮಿಶನ್, ದಿ ಹರ್ವೆಸ್ಟ್ ಫಿಲ್ಡ್, ಕ್ರೈಸ್ತ ಹಿತವಾದಿ, ಸತ್ಯವೃತ, ಸತ್ಯದೀಪಿಕ, ಕರ್ಣಾಟಕ ಕ್ರೈಸ್ತ ಬಂಧು, ವೈದಿಕ ಮಿತ್ರ, ಭೋಧಕ ಬೋಧಿನಿ, ಸತ್ಯದೀಪಿಕೆ, ಕ್ರೈಸ್ತ ಸಭಾಪತ್ರ, ಮ್ಯಾಂಗಲೋರ್ ಮ್ಯಾಗಜೀನ್, ದಿ ಇಂಡಿಯನ್ ಇಕೋನೋಮಿಕ್ ಆ್ಯಂಡ್ ಸೋಶಿಯಲ್ ಹಿಸ್ಟರಿ ರಿವ್ಯೂವ್, ಕೊಂಕ್ಣಿ ದೀರ್ವೆಂ, ಪ್ರೋಸಿಡಿಂಗ್ಸ್ ಆಫ್ ಇಂಡಿಯಾನ್ ಹಿಸ್ಟರಿ, ಇತ್ಯಾದಿ.

ಡಿಕ್ ಕೋಯಿಮನ್, ಕೊಜಿ ಕವಶಿಮ, ಕೆಟ್ ಟೆಲ್ಚರ್, ಪಾರ್ಥಾ ಚಟರ್ಜಿ ಮುಂತಾದ ಅಧ್ಯಯನಕಾರರ ಗ್ರಂಥಗಳು ಮಿಶನರಿ ಹಾಗೂ ವಸಾಹತುಶಾಹಿಯ ನಡುವಿನ ಸಂಬಂಧಗಳ ಬಗ್ಗೆ ಅಮೂಲ್ಯವಾದ ಚಿಂತನೆಗಳನ್ನು ಒದಗಿಸುತ್ತವೆ. ಈ ಅಧ್ಯಯನಕ್ಕಾಗಿ ಹಲವು ಲೇಖನಗಳನ್ನು ಹಾಗೂ ಗ್ರಂಥಗಳನ್ನು ವಿಮರ್ಶಿಸಲಾಗಿದೆ. ಇವು ಮುಖ್ಯವಾಗಿ ಬಾಸೆಲ್ ಮಿಶನಿನ ಕಾರ್ಯ ಚಟುವಟಿಕೆಗಳ ಹಾಗೂ ಇತರ ಮಿಶನ್‌ಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ.

ಅಧ್ಯಯನದ ಸ್ವರೂಪ:

ಅಧ್ಯಯನವನ್ನು ಒಟ್ಟು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಪೀಠಿಕೆಯ ನಂತರದ ಅಧ್ಯಾಯದಲ್ಲಿ 1914ರಲ್ಲಿ ಜಾಗತಿಕ ಯುದ್ಧ ಆರಂಭವಾದಾಗ ವಸಾಹತು ಸರಕಾರ ಬಾಸೆಲ್ ಮಿಶನಿನ ಕಡೆ ಅನುಸರಿಸಿದ ನೀತಿ ಧೋರಣೆಗಳ ಬಗ್ಗೆ ಗಮನಹರಿಸಲಾಗಿದೆ. ಬಾಸೆಲ್ ಮಿಶನಿನಲ್ಲಿ ಕಾರ್ಯಾಚರಿಸುತ್ತಿದ್ದ ಬಹುಪಾಲು ಮಿಶನರಿಗಳು ಜರ್ಮನರಾಗಿದ್ದು, ಜಾಗತಿಕ ಯುದ್ಧದಲ್ಲಿ ಜರ್ಮನಿಯು ಬ್ರಿಟನಿನ ವೈರಿ ರಾಷ್ಟ್ರವಾಗಿ ಹೋರಾಡುತ್ತಿದ್ದುದರಿಂದ ವಸಾಹತು ಸರಕಾರ ಬಾಸೆಲ್ ಮಿಶನಿನಲ್ಲಿದ್ದ ಎಲ್ಲಾ ಜರ್ಮನ್ ಮಿಶನರಿಗಳನ್ನು ಮಿಶನ್‌ನಿಂದ ಹೊರ ಹಾಕುತ್ತದೆ. ಈ ಸಂದರ್ಭವು ಬಾಸೆಲ್ ಮಿಶನಿನಲ್ಲಿ ಉಳಿದಿದ್ದ ಸ್ವಿಸ್ ಮಿಶನರಿಗಳಿಗೆ ಹಾಗೂ ಮಿಶನ್ ಚಟುವಟಿಕೆಗಳ ಮುಂದುವರಿಕೆಗೆ ಬಹಳಷ್ಟು ಸಮಸ್ಯೆಗಳಾಗುತ್ತವೆ. ಮತ್ತೊಂದೆಡೆ ನಿರ್ಬಂಧಿತ ಬಂಧನದಲ್ಲಿದ್ದ ಬಾಸೆಲ್ ಮಿಶನರಿಗಳನ್ನು ಬ್ರಿಟಿಷ್ ಸರಕಾರ ಜರ್ಮನಿಗೆ ಕಳುಹಿಸುತ್ತದೆ. ಇತ್ತ ಭಾರತದಲ್ಲಿ ಮಿಶನ್ ಜವಾಬ್ದಾರಿ ಸಂಪೂರ್ಣವಾಗಿ ಸ್ವಿಸ್ ಮಿಶನರಿಗಳ ಕೈಸೇರುತ್ತದೆ ಹಾಗೂ ಅವರು ಈವರೆಗೆ ನಿರ್ವಹಿಸದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಜಾಗತಿಕ ಯುದ್ಧ ಆರಂಭವಾದ ಸಂದರ್ಭದಲ್ಲಿ ಮೆಡ್ರಾಸ್ ಪ್ರೆಸಿಡೆನ್ಸಿಯಲ್ಲಿನ ಕೆಲವು ಬ್ರಿಟಿಷ್ ಪರವಾಗಿದ್ದ ಪತ್ರಿಕೆಗಳು ಜರ್ಮನ್ ಮಿಶನರಿಗಳನ್ನು ಭಾರತದಲ್ಲಿ ನಿರ್ಬಧಿಸುವಂತೆ ಒತ್ತಾಯಿಸುತ್ತದೆ. ಈ ಅಧ್ಯಾಯದಲ್ಲಿ ಈ ಪತ್ರಿಕೆಗಳ ವಿಭಿನ್ನ ದೃಷ್ಟಿಕೋನದ ಚಿತ್ರಣವನ್ನು ನೀಡಲಾಗಿದೆ. 1914ರ ಕಾಲದಲ್ಲಿ ಬ್ರಿಟಿಷ್ ಸರಕಾರ ನೀಲಗಿರಿ ಪ್ರದೇಶದಲ್ಲಿ ಮಿಶನರಿ ಚಟುವಟಿಕೆಗಳ ಮೇಲೆ ನಿರ್ಬಂಧ ವಿಧಿಸಿದ್ದರಿಂದ ಅದು ಮಿಶನರಿಗಳ ಘನತೆ ಹಾಗೂ ಅವರು ಜನರ ಮೇಲೆ ಹೊಂದಿದ್ದ ಪ್ರಭಾವಗಳ ಮೇಲೆ ಧಕ್ಕೆಯುಂಟುಮಾಡಿದೆ ಎಂದು ಸರಕಾರದ ಗಮನ ಸೆಳೆದಾಗ, ಬ್ರಿಟಿಷ್ ಸರಕಾರದ ನಿಲುವೇನಾಗಿತ್ತು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಬಾಸೆಲ್ ಮಿಶನರಿಗಳ ನಿರ್ಗಮನದ ಬಳಿಕ ಸ್ವಿಸ್‌ರಿಂದ 1918ರವರೆಗೆ ಮಿಶನ್ ಬಹಳಷ್ಟು ಸಂಕಷ್ಟದಿಂದ ಮುಂದುವರಿಯುತ್ತದೆ. 1919ರಲ್ಲಿ ವಸಾಹತು ಸರಕಾರ ಮಿಶನಿನ ಮುಂದುವರಿಕೆಗೆ ಬದಲೀ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ಅದರಂತೆ ಬಾಸೆಲ್ ಮಿಶನಿನಿಂದ ಸ್ಥಾಪಿಸಲ್ಪಟ್ಟಿದ ಮಿಶನ್ ಠಾಣ್ಯಗಳು ಬೇರೆ ಬೇರೆ ಮಿಶನುಗಳ ನಿಯಂತ್ರಣಕ್ಕೆ ಒಳಪಡಬೇಕಾಗುತ್ತದೆ. ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ವೆಸ್ಲಿಯನ್ ಮಿಶನರಿಗಳಿಗೆ ಪ್ರಬಲವಾದ ಪ್ರತಿರೋಧವನ್ನು ವ್ಯಕ್ತಪಡಿಸಿದರೆ, ಮತ್ತೊಂದೆಡೆ ದಕ್ಷಿಣ ಕೆನರಾ ಮತ್ತು ದಕ್ಷಿಣ ಮರಾಠದಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ವಿರುದ್ಧ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದನ್ನು ಗಮನಿಸಬಹುದು. ಬಾಸೆಲ್ ಮಿಶನರಿಗಳ ನಿರ್ಗಮನದ ಬಳಿಕ ಅದು ಸ್ಥಾಪಿಸಿದ ಮಿಶನ್ ಇಂಗ್ಲೀಷ್ ಮಿಶನರಿಗಳ (ಟಾಮ್ಲಿನ್‌ಸನ್) ನಿಯಂತ್ರಣಕ್ಕೆ ಒಳಪಡುತ್ತದೆ. ಈ

ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕ್ರೈಸ್ತರಿಗೆ ಹೆಚ್ಚು ಹೆಚ್ಚು ಆಡಳಿತದಲ್ಲಿ ಸೇರುವ ಅವಕಾಶವನ್ನು ಕಲ್ಪಿಸುವುದನ್ನು ಗಮನಿಸಬಹುದು. ಬಾಸೆಲ್ ಮಿಶನ್ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ ಹಲವು ಟೀಕೆಗಳನ್ನು ಮಾಡುತ್ತಾ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಕಾರ್ಯ ವೈಖರಿಯನ್ನು ಖಂಡಿಸುತ್ತಾರೆ. ಬಾಸೆಲ್ ಮಿಶನ್ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ ಮಾಡಿರುವ ಆರೋಪಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ತಮ್ಮ ಕಾಲಾವಧಿಯಲ್ಲಿ ವೈದ್ಯಕೀಯ ಕ್ಷೇತ್ರದತ್ತ ಗಮನ ಹರಿಸುತ್ತಾರೆ. ಆದರೆ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಮಿಶನಿನ ಶೈಕ್ಷಣಿಕ ಚಟುವಟಿಕೆಗಳು ಹಾಗೂ ಬಾಸೆಲ್ ಮಿಶನಿನ ಕೈಗಾರಿಕೆಗಳು ಯಾವುದೇ ಪ್ರಗತಿಯನ್ನು ದಾಖಲಿಸುವುದಿಲ್ಲ. ಮತ್ತೊಂದೆಡೆ ಯುದ್ಧದ ಕಾಲದಲ್ಲಿ ಬ್ರಿಟಿಷ್ ಸರಕಾರದ ನಿಯಂತ್ರಣದಲ್ಲಿ ಮುಂದುವರಿದ ಬಾಸೆಲ್ ಮಿಶನ್ ಕೈಗಾರಿಕೆಗಳು ಬಾಸೆಲ್ ಮಿಶನಿನಿಂದ ಕಾಮನ್‌ವೆಲ್ತ್ ಟ್ರಸ್ಟ್‌ಗೆ ವರ್ಗಾವಣೆಯಾಗುತ್ತವೆ. ತದನಂತರ ಕೈಗಾರಿಕೆಗಳು ಕೂಡಾ ಯಾವುದೇ ಪ್ರಗತಿಯನ್ನು ದಾಖಲಿಸುವುದಿಲ್ಲ.

ಮೂರನೇ ಅಧ್ಯಾಯದಲ್ಲಿ 1927ರ ಕಾಲದಲ್ಲಿ ಬಾಸೆಲ್ ಮಿಶನ್ ಪುನಃ ಭಾರತಕ್ಕೆ ಮರುಳುವಂತಾಗಲು ಕಾರಣವಾದ ಸನ್ನಿವೇಶಗಳ ಬಗ್ಗೆ ಚರ್ಚೆ ನಡೆಸಲಾಗಿದೆ. 1921 ರಲ್ಲಿ ಚರ್ಚಿಲ್ ರವರ ಹೇಳಿಕೆ ಹಾಗೂ 1920ರಲ್ಲಿ ಸೌತ್ ಇಂಡಿಯಾ ಯುನೈಟೆಡ್ ಚರ್ಚ್, ಬಾಸೆಲ್ ಮಿಶನಿನ ಮಲಬಾರಿನ ಮಿಶನನ್ನು ಮುಂದುವರಿಸಲು ತನ್ನಿಂದ ಸಾಧ್ಯವಾಗದೆಂಬ ಹೇಳಿಕೆಗಳು ಭಾರತದಲ್ಲಿ ಬಾಸೆಲ್ ಮಿಶನಿಗೆ ಇನ್ನೊಮ್ಮೆ ಕಾರ್ಯ ನಿರ್ವಹಿಸುವ ಅವಕಾಶವನ್ನು ಕಲ್ಪಿಸುತ್ತದೆ. 1924 ರಲ್ಲಿಯೇ ಬಾಸೆಲ್ ಮಿಶನರಿಗಳು ಮಲಬಾರ್‌ಗೆ ಆಗಮಿಸುತ್ತಾರೆ. ಆದರೆ ಇವರು ಬ್ರಿಟಿಷ್ ಮಿಶನಿನ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಇದು ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠದ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಹೊಸ ಹುಮ್ಮಸ್ಸನ್ನು ಮೂಡಿಸಿದರೂ, ಅವರು ಈ ಪ್ರದೇಶಗಳಿಗೆ ಮರಳಲು ಮೂರು ವರ್ಷಗಳಷ್ಟು ಕಾಲ ಕಾಯಬೇಕಾಗುತ್ತದೆ. 1924 ರಿಂದ 1927 ರ ಕಾಲದಲ್ಲಿ ಕೆನರಾ ಮತ್ತು ಮರಾಠ ಪ್ರದೇಶಗಳ ಬಾಸೆಲ್ ಮಿಶನ್ ಕ್ರೈಸ್ತರು, ಬಾಸೆಲ್ ಮಿಶನರಿಗಳು ಈ ಪ್ರದೇಶಗಳಿಗೂ ಮರಳಬೇಕೆಂದು ಬೇಡಿಕೆ ಮಂಡಿಸುತ್ತಾ, ನಿರಂತರವಾಗಿ, ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಅದರ ಮಿಶನರಿಗಳು ಹಾಗೂ ಅದರ ಬೆಂಬಲಿತ ಕಮಿಟಿಯಾಗಿದ್ದ ಸ್ವಿಸ್‌ನ ಲೌಸಾನ್ ಕಮಿಟಿಯ ಕಾರ್ಯವೈಖರಿಯ ಮೇಲೆ ಟೀಕೆ ಮಾಡುವುದನ್ನು ಗಮನಿಸಬಹುದು. 1927ರಲ್ಲಿ ಬಾಸೆಲ್ ಮಿಶನರಿಗಳು ಮರಳಿದ ಮೇಲೆ ಮಿಶನ್ ಕಾರ್ಯ ಹೇಗೆ ಮುಂದುವರಿಯಿತು ಎಂಬುದರ ಬಗ್ಗೆ ಚರ್ಚೆ ನಡೆಸಲಾಗಿದೆ. ಮತ್ತೊಂದೆಡೆ ವೆಸ್ಲಿಯನರ ಕೈಕೆಳಗಿದ್ದ ನೀಲಗಿರಿ ಹಾಗೂ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ಬಾಸೆಲ್ ಮಿಶನರಿಗಳು ತಮ್ಮ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳುವಂತೆ

ಬೇಡಿಕೆ ಮಂಡಿಸುವುದನ್ನು ಗಮನಿಸಬಹುದು. ಮಿಶನ್ ಮತ್ತು ಚರ್ಚ್‌ನ್ನು ಸಂಘಟಿಸುವ ಕಾರ್ಯ ಈ ಸಂದರ್ಭದಲ್ಲಿ ನಡೆಯುತ್ತದೆ. ಇದಕ್ಕಾಗಿ ಹೊಸ ಸಂವಿಧಾನವನ್ನು ಸಿದ್ಧಪಡಿಸುವ ಕೆಲಸ ಆರಂಭವಾಗುತ್ತದೆ. 1930ರ ದಶಕದಲ್ಲಿ ಅಂತರಾಷ್ಟ್ರೀಯವಾಗಿ ರಾಜಕೀಯ ಪರಿಸ್ಥಿತಿ ಬದಲಾಗುತ್ತಿರುವಂತೆ ಬಾಸೆಲ್ ಮಿಶನರಿಗಳು ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳುವುದನ್ನು ಗಮನಿಸಬಹುದು. ಈ ಕಾಲವಧಿಯಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಹೆಚ್ಚು ಸ್ವಾಯತ್ತತೆಯತ್ತ ಮುಂದುವರಿಯುತ್ತವೆ. ಈ ಅಧ್ಯಾಯದಲ್ಲಿ ಮಿಶನರಿಗಳು ಹಾಗೂ ಸ್ಥಳೀಯ ಕ್ರೈಸ್ತರ ಸಂಬಂಧಗಳನ್ನು ಚರ್ಚಿಸಲಾಗಿದೆ. 1939ರಲ್ಲಿ ಎರಡನೇ ಜಾಗತಿಕ ಯುದ್ಧ ಆರಂಭವಾಗುವುದರೊಂದಿಗೆ ಬಾಸೆಲ್ ಮಿಶನನ್ನು ಮತ್ತೊಂದು ಬಾರಿ ಬ್ರಿಟಿಷ್ ಸರಕಾರ ಭಾರತದಲ್ಲಿ ನಿರ್ಬಂಧಿಸುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ 1939ರ ನಂತರದಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಹೇಗೆ ಸ್ವಾಯತ್ತತೆಯತ್ತ ಮುಂದುವರಿದವು ಎಂಬುದನ್ನು ಚರ್ಚಿಸಲಾಗಿದೆ. ಜಾಗತಿಕ ಯುದ್ಧದಿಂದ ಜರ್ಮನ್ ಮಿಶನರಿಗಳನ್ನು ಮತ್ತೊಮ್ಮೆ ಬ್ರಿಟಿಷ್ ಸರಕಾರ ನಿರ್ಬಂಧಿಸುವುದರೊಂದಿಗೆ ಮಿಶನ್ ಕಾರ್ಯ ಸ್ವಿಸ್‌ರ ನಿಯಂತ್ರಣದಲ್ಲಿ ಮುಂದುವರಿಯುತ್ತದೆ. ಅದರೆ ಈ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತತೆಯತ್ತ ಮುಂದುವರಿಯುತ್ತವೆ. ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಹಾಗೂ ಮಿಶನಿನ ಎರಡೂ ಚಟುವಟಿಕೆಗಳಲ್ಲಿ ಭಾಗವಹಿಸಲು ಆರಂಭಿಸುತ್ತಾರೆ ಹಾಗೂ ಭಾರತೀಯ ಕ್ರೈಸ್ತರು ಮಿಶನಿನ ಜವಾಬ್ದಾರಿಯನ್ನು ನಿರ್ವಹಿಸಲು ಆರಂಭಿಸುತ್ತಾರೆ. ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನ್ ತಟಸ್ಥ ಮಿಶನ್ ಎಂಬುದಾಗಿ ಗುರುತಿಸಿಕೊಳ್ಳುತ್ತದೆ. ಬಾಸೆಲ್ ಮಿಶನ್ ಚರ್ಚ್ ಹಾಗೂ ಮಿಶನಿನ ಆಡಳಿತದಲ್ಲಿ ಹಲವು ಬದಲಾವಣೆಗಳಾಗುತ್ತದೆ. ದೇಶಿಯ ಚರ್ಚುಗಳು ಸ್ವಾಯತ್ತವಾಗುವುದರ ಬಗೆಗಿನ ವಿಚಾರಗಳನ್ನು ಹಾಗೂ ಬಾಸೆಲ್ ಮಿಶನಿಗೆ ಸ್ವಾಯತ್ತ ಆಡಳಿತದ ಬಗ್ಗೆ ಇದ್ದ ದೃಷ್ಟಿಕೋನವನ್ನು ಚರ್ಚಿಸಲಾಗಿದೆ. 20ನೇ ಶತಮಾನದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಆಡಳಿತವನ್ನು ಸ್ವತಂತ್ರವಾಗಿ ನಿರ್ವಹಿಸುವುದರ ಬಗ್ಗೆ ಚಿಂತನೆ ಆರಂಭಿಸಿದ್ದರು. ಈ ಅಧ್ಯಾಯದಲ್ಲಿ ಚರ್ಚ್ ಯೂನಿಯನ್ ಬಗೆಗಿನ ನಿಲುವುಗಳನ್ನು ಪರಾಮರ್ಶಿಸಲಾಗಿದೆ. ಚರ್ಚ್ ಯೂನಿಯನ್‌ಗೆ ಬಾಸೆಲ್ ಮಿಶನ್ ಕ್ರೈಸ್ತರಿಂದ ವಿರೋಧವಿದ್ದುದನ್ನು ಗಮನಿಸಬಹುದು. ಈ ಪ್ರಬಲ ವಿರೋಧ ಮುಖ್ಯವಾಗಿ ದಕ್ಷಿಣ ಕೆನರಾ ಹಾಗೂ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರಿಂದ ವ್ಯಕ್ತವಾಗುತ್ತದೆ. ಆದುದರಿಂದ 1947ರಲ್ಲಿ ಬಾಸೆಲ್ ಮಿಶನಿನ ಮಲಬಾರ್ ಚರ್ಚ್ ಮಾತ್ರ 'ಚರ್ಚ್ ಆಫ್ ಸೌತ್ ಇಂಡಿಯಾ' ವನ್ನು ಸೇರುತ್ತದೆ. ಹಲವು ವರ್ಷಗಳ ಬಳಿಕ 1968ರಲ್ಲಿ ಬಾಸೆಲ್ ಮಿಶನಿನ ದಕ್ಷಿಣ ಕೆನರಾ ಹಾಗೂ ಕೊಡಗು ಪ್ರದೇಶಗಳು 'ಚರ್ಚ್ ಆಫ್ ಸೌತ್ ಇಂಡಿಯಾ' ವನ್ನು

ಸೇರುತ್ತವೆ. 20ನೇ ಶತಮಾನದಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರ ಕೆಲವು ಕಾನೂನು ಮೊಕದ್ದಮೆಗಳ ಬಗ್ಗೆಯೂ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೇ ಅಧ್ಯಾಯವು ರಾಷ್ಟ್ರೀಯ ಹೋರಾಟ ಹಾಗೂ ಈ ಹೋರಾಟಕ್ಕೆ ಮಿಶನ್ ಮತ್ತು ದೇಶೀಯ ಕ್ರೈಸ್ತರ ಪ್ರತಿಕ್ರಿಯೆಗಳೇನಾಗಿದ್ದವು ಎಂಬುದನ್ನು ಅವಲೋಕಿಸಲಾಗಿದೆ. 20ನೇ ಶತಮಾನದಲ್ಲಿ ಭಾರತದಲ್ಲಿ ಪ್ರಬಲ ರಾಷ್ಟ್ರೀಯ ಹೋರಾಟ ರೂಪುಗೊಳ್ಳುತ್ತಿತ್ತು. ಈ ಸಂದರ್ಭದಲ್ಲಿ ಮಿಶನ್ ಹಾಗೂ ವಸಾಹತು ಆಳ್ವಿಕೆಯ ನಡುವಿನ ಸಂಬಂಧ ಹಾಗೂ ರಾಷ್ಟ್ರೀಯ ಹೋರಾಟದ ಬಗೆಗಿನ ನಿಲುವುಗಳನ್ನು ಕೂಲಂಕುಶವಾಗಿ ಚರ್ಚಿಸಲಾಗಿದೆ. ರಾಷ್ಟ್ರೀಯ ಹೋರಾಟದ ಪ್ರಾರಂಭದಿಂದಲೂ ಕೆಲವು ದೇಶೀಯ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಗುರುತಿಸಿಕೊಳ್ಳುತ್ತಾರೆ. ಅದೇ ರೀತಿ 20ನೇ ಶತಮಾನದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರಲ್ಲೂ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು ಹಾಗೂ ದೇಶೀಯತೆಯನ್ನು ಮೈಗೂಡಿಸಿಕೊಳ್ಳಬೇಕೆಂಬ ವಾದ ಬಾಸೆಲ್ ಮಿಶನ್ ಕ್ರೈಸ್ತರಲ್ಲಿತ್ತು. ಬಾಸೆಲ್ ಮಿಶನ್ ಕ್ರೈಸ್ತರ ಧ್ವನಿಯನ್ನು ಪ್ರತಿನಿಧಿಸುತ್ತಿದ್ದ ಪತ್ರಿಕೆಗಳು, ಬಾಸೆಲ್ ಮಿಶನ್ ಕ್ರೈಸ್ತರು ಮಿಶನರಿಗಳ ಮತ್ತು ಬ್ರಿಟಿಷರ ದಾಸ್ಯದಿಂದ ಹೊರಬರಬೇಕೆಂಬ ಹಾಗೂ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಬೇಕೆಂಬ ವಾದವನ್ನು ಮಂಡಿಸಿದ್ದವು. ಆದರೆ ಮತ್ತೊಂದೆಡೆ ಮಿಶನರಿಗಳಿಂದ ನಡೆಸಲ್ಪಡುವ ಪತ್ರಿಕೆಗಳು ರಾಷ್ಟ್ರೀಯ ಹೋರಾಟವನ್ನು ಅನುಮಾನದ ದೃಷ್ಟಿಯಿಂದ ಕಂಡು ಅದು ದೇಶದಲ್ಲಿ ಅಶಾಂತಿಗೆ ಕಾರಣವಾಗಿದೆ ಎಂಬ ವಾದವನ್ನು ಮಂಡಿಸುತ್ತವೆ.

ಕೊನೆಯ ಅಧ್ಯಾಯವು ಉಪಸಂಹಾರವಾಗಿದ್ದು, ಈ ಮೊದಲಿನ ಅಧ್ಯಾಯಗಳ ಚರ್ಚೆಯಲ್ಲಿನ ಫಲಿತಗಳನ್ನು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಮಿಶನ್ ಮತ್ತು ವಸಾಹತುಶಾಹಿಗೆ ಪರಸ್ಪರ ವಿರೋಧವುಳ್ಳ ವಿಚಾರಗಳನ್ನು ಹಾಗೂ ಅವು ಕಾಲದಿಂದ ಕಾಲಕ್ಕೆ ಅನುಸರಿಸಿದ ಭಿನ್ನವಾದ ನೀತಿ ಹಾಗೂ ತಂತ್ರಗಳನ್ನು ಚರ್ಚಿಸಲಾಗಿದೆ.

ಸಂದರ್ಭ ಸೂಚಿ:

1. ಟಿ. ವಿ. ಫೀಲಿಫ್, ಕ್ರಿಶ್ಚಿಯಾನಿಟಿ ಇನ್ ಇಂಡಿಯಾ ಡ್ಯುಯುರಿಂಗ್ ವೆಸ್ಟರ್ನ್ ಕೋಲೋನಿಯಲಿಸಮ್, ಇಂಡಿಯಾನ್ ಚರ್ಚ್ ಹಿಸ್ಟರಿ ರಿವ್ಹೀವ್, ಸಂಪುಟ 21, ನಂ. 1, ಜೂನ್ 1987, ಪುಟ 15.
2. ಜಾಕೋಬ್ ಎಸ್. ಧರ್ಮರಾಜ್, ಕೋಲೋನಿಯಲಿಸಮ್ ಆ್ಯಂಡ್ ಕ್ರಿಶ್ಚಿಯನ್ ಮಿಶನ್: ಪೋಸ್ಟ್ ಕೋಲೋನಿಯಲ್ ರಿಫ್ಲೇಕ್ಷನ್ಸ್, ಐಎಸ್‌ಪಿಸಿಕೆ, ದೆಹಲಿ, 1993, ಪುಟ 24.
3. ಟಿ.ವಿ. ಫೀಲಿಫ್, ಪೂರ್ವೋಕ್ತ, ಪುಟ 23.
4. ಎಲ್. ಎಮ್. ರೋಸೆಲ್, ಗೋಡ್ ಗೋಲ್ಡ್ ಗ್ಲೋರಿ ಆ್ಯಂಡ್ ಜೆಂಡರ್: ಎ ಪೋಸ್ಟ್ ಕೋಲೋನಿಯಲ್ ವಿವ್ಹ್ ಆಫ್ ಮಿಶನ್, ಇಂಟರ್‌ನ್ಯಾಶನಲ್ ರಿವ್ಹಿವ್ ಆಫ್ ಮಿಶನ್, ಸಂಪುಟ 93, ನಂ. 368, ಜನವರಿ 2004, ಪುಟ 41.
5. ಎಮ್. ಸೆಬ್ಸಾಟಿನ್, ಮಿಶನ್ ಮಿದವುಟ್ ಹಿಸ್ಟರಿ? ಸಮ್ ಐಡಿಯಾಸ್ ಫಾರ್ ಡಿಕೋಲೋನೈಸಿಂಗ್ ಮಿಶನ್, ಇಂಟರ್ ನ್ಯಾಶನಲ್ ರಿವ್ಹಿವ್ ಆಫ್ ಮಿಶನ್, ಸಂಪುಟ 93, ನಂ 368, ಜನವರಿ 2004, ಪುಟ 75–76.

   Ideas cultures and histories cannot seriously be understood or studied without their force or more precisely their configuration of power, also being studied. Edward said, Orientalism, New York, vintage Books, 1978, P. 5.
6. ಕ್ರೈಸ್ತ ಹಿತವಾದಿ, ಸಂಪುಟ 1, ಸಂಚಿಕೆ 10, ಮಂಗಳೂರು, ಏಪ್ರಿಲ್ 1925, ಪುಟ 155.
7. ಇಂಗ್ಲೀಷ್ ಮೂಲದ ಲಂಡನ್ ಮಿಶನರಿ ಸೊಸೈಟಿಯು ಕರ್ನಾಟಕದಲ್ಲಿ ಕಾರ್ಯರಂಭಿಸಿದ ಮೊದಲ ಪ್ರೊಟೆಸ್ಟಂಟ್ ಮಿಶನ್ ಸಂಘವಾಗಿದೆ. ಇದು ಕರ್ನಾಟಕದ ಪ್ರದೇಶದಗಳಾದ ಬಳ್ಳಾರಿ, ಬೆಂಗಳೂರು ಚಿಕ್ಕಬಳ್ಳಾಪುರ, ಬೆಳಗಾವಿ ಮುಂತಾದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿತ್ತು.
8. ಇಂಗ್ಲೇಂಡ್ ಮೂಲದ ಮತ್ತೊಂದು ಮಿಶನರಿ ಸಂಘವಾದ ವೆಸ್ಲಿಯನ್ ಮೆಥೋಡಿಸ್ಟ್ ಮಿಶನರಿ ಸೊಸೈಟಿಯು ಹೆಚ್ಚಾಗಿ ಹಳೇ ಮೈಸೂರು ಸಂಸ್ಥಾನದ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಿತ್ತು. ಅದು ಕಾರ್ಯಚರಿಸಿದ ಪ್ರಮುಖ ಪ್ರದೇಶಗಳೆಂದರೆ ಮೈಸೂರು, ತುಮಕೂರು, ಬೆಂಗಳೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಗುಬ್ಬಿ, ಕುಣಿಗಲ್, ಚಿತ್ರದುರ್ಗ ಇತ್ಯಾದಿ.
9. ಪ್ರಥಮ ಜಾಗತಿಕ ಯುದ್ಧದ ಸಂದರ್ಭದಲ್ಲಿ ಬಾಸೆಲ್ ಮಿಶನನ್ನು ಭಾರತದಲ್ಲಿ ನಿರ್ಬಂಧಿಸಿದುದರಿಂದ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠದಲ್ಲಿನ ಬಾಸೆಲ್ ಮಿಶನಿನ ಮಿಶನರಿ

ಕಾರ್ಯವನ್ನು ಮುಂದುವರಿಸಲು ಸ್ವಿಜ್‌ರು ಸ್ಥಾಪಿಸಿದ ಸ್ವತಂತ್ರವಾದ ಮಿಶನರಿ ಸಂಘವೇ 'ಕೆನರೀಸ್ ಇವ್ಯಾಂಜಲಿಕಲ್ ಮಿಶನ್'. ಇದು 1919 ರಿಂದ 1927 ರ ವರೆಗೆ ಈ ಪ್ರದೇಶಗಳಲ್ಲಿ ಮಿಶನರಿ ಕಾರ್ಯವನ್ನು ನಡೆಸುತ್ತದೆ. ಇದು ಬಾಸೆಲ್ ಮಿಶನಿನ ಮಿಶನರಿ ಕಾರ್ಯವನ್ನು ಮುನ್ನಡೆಸಲು ಸ್ಥಾಪಿತವಾದ ತಾತ್ಕಾಲಿಕ ಮಿಶನ್ ಸಂಘವೆಂದು ಹೇಳಬಹುದು.

10. 'ಸೊಸೈಟಿ ಫಾರ್ ದಿ ಫ್ರಾಪೋಗೇಶನ್ ಆಫ್ ಗಾಸ್ಪೆಲ್' ಒಂದು ಆಂಗ್ಲಿಕನ್ ಮಿಶನಾಗಿದ್ದು, ಇದು ಕರ್ನಾಟಕದ ಬೆಂಗಳೂರು, ಶಿವಮೊಗ್ಗ, ಧಾರವಾಡ, ಗದಗ, ಬೆಟಗೇರಿ, ಹುಬ್ಬಳ್ಳಿ, ರಾಣಿಬೆನ್ನೂರು ಇತ್ಯಾದಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿತ್ತು. ಬಾಸೆಲ್ ಮಿಶನ್ ಧಾರವಾಡ, ಗದಗ, ಬೆಟಗೇರಿ ಪ್ರದೇಶಗಳಲ್ಲಿ ಸೊಸೈಟಿ ಫಾರ್ ದಿ ಫ್ರಾಪೋಗೇಶನ್ ಆಫ್ ಗಾಸ್ಪೆಲ್ ಗಿಂತ ಮೊದಲೇ ಕಾರ್ಯನಿರ್ವಹಿಸುತ್ತಿದ್ದು, ಬಾಸೆಲ್ ಮಿಶನಿನ ಕಠಿನ ಶಿಸ್ತು ಕ್ರಮಗಳಿಂದಾಗಿ ಇಲ್ಲಿನ ಕೆಲವು ಕ್ರೈಸ್ತರು 'ಸೊಸೈಟಿ ಫಾರ್ ದಿ ಫ್ರಾಪೋಗೇಶನ್ ಆಫ್ ಗಾಸ್ಪೆಲ್' (ಎಸ್. ಪಿ. ಜಿ.) ಮಿಶನನ್ನು ಸೇರಿಕೊಳ್ಳುವುದನ್ನು ಗಮನಿಸಬಹುದು.

11. ಮೆಥೋಡಿಸ್ಟ್ ಎಪಸ್ಕೋಪಲ್ ಮಿಶನ್ ಅಥವಾ ಅಮೇರಿಕನ್ ಮೆಥೋಡಿಸ್ಟ್ ಮಿಶನ್ ಕರ್ನಾಟಕದ ಬೆಂಗಳೂರು, ಬಳ್ಳಾರಿ, ಗುಲ್ಬರ್ಗ, ರಾಯಚೂರು, ಬೀದರ್ ಇತ್ಯಾದಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿತ್ತು.

12. ಮಿಸ್ಸೊರಿ ಲೂಥರನ್ ಮಿಶನ್ ಕರ್ನಾಟಕದ ಕೋಲಾರ, ಕೊಳ್ಳೇಗಾಲ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿತ್ತು. ಇದರ ಬಹುಪಾಲು ಮಿಶನರಿಗಳು ಜರ್ಮನರಾಗಿದ್ದು ಜಾಗತಿಕ ಯುದ್ಧ ಕಾಲದಲ್ಲಿ ವಾಪಾಸು ತೆರಳಿದ್ದರು.

13. ಜ್ಯಾಕ್ಸ್ ರೋಸೆಲ್, ದಿ ಬಾಸೆಲ್ ಮಿಶನ್ ಆ್ಯಂಡ್ ಇಂಡಿಯ- ಪರಸ್‌ಫೆಕ್ಟೀವ್ ಆ್ಯಂಡ್ ಜ್ಯಾಲೇಂಜ್, ಹೋಲಿನೇಸ್ ಇನ್ ಕ್ರೈಸ್ಟ್, ಗೋಡ್ವಿನ್ ಶಿರಿ (ಸಂಪಾದಿತ), ದಿ ಕರ್ನಾಟಕ ತಿಯೋಲಾಜಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಮಂಗಳೂರು, 1985, ಪುಟ 49-50.

14. ಡಿ. ಪಿ. ಶೆಟ್ಟಿಯಾನ್, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲಾ ಸಭೆಗಳ ಸರ್ವ ಸದಸ್ಯರ ಅವಗಾಹನೆಗೆ, ಪುಟ 2.

15. ದಿ ವರ್ಕ್ ಆಫ್ ದಿ ಬಾಸೆಲ್ ಮಿಶನ್ ಇನ್ ಇಂಡಿಯಾ, ಎ ಸ್ಟೇಟ್ ಮೆಂಟ್, ಗೋಡ್ವಿನ್ ಶಿರಿ(ಸಂಪಾದಿತ), ಹೋಲಿನೇಸ್ ಇನ್ ಕ್ರೈಸ್ಟ್, ದಿ ಕರ್ನಾಟಕ ತಿಯೋಲಾಜಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಮಂಗಳೂರು, 1985, ಪುಟ 5-6.

16. The original object of the Basel mission society was the training of missionaries for similar societies for engaging their services abroad. The

Rotterdam of Holland, the church missionary society of England, London missionary society, Wesleyan Baptist society of England, church of Scotland mission, North German missionary Society, Leipzig Lutheran mission were some of the missions with which connections were formed for that purpose.

17. ಡಾ. ವಿಜಯ ಕುಮಾರ್, ಕರ್ನಾಟಕದಲ್ಲಿ ಪ್ರೊತೆಸ್ತಾಂತ ಮಿಷನ್ನುಗಳ ಚರಿತ್ರೆ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, 2004, ಪುಟ 112–113. ಜ್ಯಾಕ್ಸ್ ರೋಸಲ್, ಪೂರ್ವೋಕ್ತ, ಪುಟ 52.

18. ಜ್ಯಾಕ್ಸ್ ರೋಸೆಲ್, ಪೂರ್ವೋಕ್ತ, ಪುಟ 54.

As the international situation eased up and the supporters of the newly established Basel mission grew in strength, its committee began to think of a missionary venture of their own. One of the first was the Caucasus mission (1822-1835) among the missionaries sent out there was Feliciana Zaremba, a Russian count of Polish origin who had renounced his titles and was among the first trainees in Basel, the missionaries according to the agreement reached with the minister of Foreign Affairs of the Tsar, were to assist the German and Swiss settlers, who were encouraged by Tsar Alexander I to migrate out of their impoverished countries to southern Russia (Caucasus and the River Volga region) to assist the Eastern orthodox Armenian church in its revival and convey the message of the Gospel to the Tartar Muslims.

But in Russia the Basel mission had only a partial success. The Russian czar Nicholas continuously showed an unfriendly attitude due to the frequent complaints lodged with him by Armenian clegy against the Basel missioners. Consequently the Basel mission closed down all of its work in southern Russia by 1835.

ಎ. ಶೊಸ್ಸರ್, ಬಾಸೆಲ್ ಮಿಶನ್ ಸಂಘದ ನೂರು ವರ್ಷದ ಚರಿತ್ರೆಯು, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1915, ಪುಟ 10–11.

19. ಎ ಶೊಸ್ಸರ್, ಪೂರ್ವೋಕ್ತ, ಪುಟ 11–13.

The mission success in the African countries was also partial. Its work was frustrated by coastal fever to which several missionaries succumbed.

20. ಕರ್ನಾಟಕ ಕ್ರೈಸ್ತ ಬಂಧು, ಸಂಪುಟ 3, ಸಂಚಿಕೆ 8, ಮಂಗಳೂರು, 16ನೇ ಅಕ್ಟೋಬರ್, 1934, ಪುಟ 163–164.

The whole of Balmatta area was the Govt. property with several Govt. buildings and offices in it. In 1837 when there Coorg Rebellion Broke out, the rebels come to Mangalore and burn down all the govt. buildings and offices, before they were crushed. Then in September 1840 the madras Govt. auctioned the place, which was bought by H. M. Blair, Esq. the collector of Kanara. As he was very good friend for the Basel missionaries, he donated the whole area to the Basel German Evangelical mission in the same year.

21. 1914 ರವರೆಗೆ ಬಾಸೆಲ್ ಮಿಶನ್ ಸ್ಥಾಪಿಸಿದ್ದ ಮಿಶನ್ ಠಾಣ್ಯಗಳೆಂದರೆ ಮಂಗಳೂರು(1834), ಮೂಲ್ಕಿ(1845), ಉಡುಪಿ(1854), ಕಾರ್ಕಳ(1872), ಬಸ್ರೂರು(1876), ಕಾಸರಗೋಡು(1886), ಪುತ್ತೂರು(1900), ಮರ್ಕೇರ(1870), ಅನಂದಪುರ್(1856), ಹೊನ್ನಾವರ(1845), ದಾರವಾಡ(1837), ಹುಬ್ಬಳ್ಳಿ(1839), ಬೇಟಗೇರಿ(1841), ಗುಳೇದಗುಡ್ಡ(1851), ಬಿಜಾಪುರ(1855), ಕ್ಯಾನ್ನನೂರು(1841), ತಲಚೇರಿ(1839), ಕೊಂಬ್ಲಾ(1849), ಕ್ಯಾಲಿಕಟ್(1842), ಮಂಜೇರಿ(1908), ಕೋಡಕಲ್(1857), ವಾನಿಯನ್ ಕುಲಮ್(1886), ಪಾಲ್‌ಘಾಟ್(1858), ಕೈತಿ(1846), ಕಾಲ್‌ಹಟ್ಟಿ (1907), ಕೋಟಗಿರಿ(1867). ದಿ 74th ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1913, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1914, ಪುಟ 7–13.

22. ಎಮ್. ಡಿ. ಡೇವಿಡ್, ಸೋಶಿಯಲ್ ಬ್ಯಾಗ್ರೌಂಡ್ ಆಫ್ ಬಾಸೆಲ್ ಮಿಶನ್ ಕ್ರಿಶ್ಚಿಯನ್ಸ್: ದಿ ಪ್ರೋಬ್ಲೆಮ್ ಆಫ್ ಕಾಸ್ಟ್, ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಹಿವ್, ಸಂಪುಟ 18, ನಂ. 2, ಡಿಸೆಂಬರ್ 1984, ಪುಟ 145–150.

23. 1914 ರಲ್ಲಿ ಬಿ. ಎಮ್ ಕ್ರೈಸ್ತರ ಸಂಖ್ಯೆ (ಪ್ರದೇಶವಾರು).

Stations	Total number of church members on the 1st Jan 1914
Canara and Coorg (Mercara-130 Anandapur-219)	8441
Southern Mahratta	2430
Malabar	75951
Nilgiris	1298
Total	19762

ದಿ 74th ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1913, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1914, ಪುಟ 14–15.

24. In south Kanar Basel Missions converstions were always a slow trickling. However between 1869 to 1875 one can notice a large number of conversions, particularly of Billvas, mogers and Bunts, who belonged to the Tulu speaking communities of the district. In the year 1869 had an all time highest number of conversions of 503 pepole in 28 villages. The number of converts more than doubled between 1870 and 1875. But this boom did not last long by 1875 it become a slow trickle again.

25. Unlike other missionary agencies, the Basel mission made fewer converts from among the Harijans. It is interesting to note that the mission did not opt to work among the Harijans, who had always been the targets of missionary ambitions. Among them, however, individual proselytisation was not as easy as mass conversion. This is attributed to the fear of the higher castes and their own inbuilt diffidence. But the Basel mission, form the Beginning should distaste for mass conversion and this obviously kept them away from the Harijans. Initially the Basel missionaries preferred to convert the Brahmins, billva priests and Bunts, who provided the spiritual and social

leadership in the region. They hoped that, if they were converted, their example would be followed by the members of their caste. Again it is argued that the Basel missionaries were against any type of caste system in the churches. They feared that, conversion of Harijans would pose a problem of securing their acceptance from other converts. Later however, they did some work among Harijans opening a separate school for them in Puttur and other places.

26. ಎಮ್. ಡಿ. ಡೇವಿಡ್, ಪೂರ್ವೋಕ್ತ, ಪುಟ 143–144.

27. ದಿ 73rd ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1912, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1913, ಪುಟ 31–32.

'We lost during the last ten years more than 1000 people by emigration, some of whom must doubtless have died. Whilst most of those alive will, we trust, have joined other churches. Quite a considerable number of young men have gone to Bombay. Some of them, because they could not find suitable work in our districts, and others because they could not find the particular work they desired. We are glad to know that a number of them are doing well, but we are afraid that others in their desire to improve their outward circumstances, have fallen into the snares and temptations of that large city and have been spiritually and morally shipwrecked. Others have listened to the advice of emigration agents and gone as far as Penang and even to Fiji, in order to take up work in the sugar, tea and rubber plantations of those countries.

ದಿ 74th ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1913, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1914, ಪುಟ 28.

28. ಡಾ. ಡೆನಿಸ್ ಫೆರ್ನಾಂಡಿಸ್, ದಿ ತುಳು ವರ್ಲ್ಡ್ ಇನ್ ಯೂರೋಪಿಯನ್ ರೈಟಿಂಗ್ಸ್, (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, 2006, ಪುಟ 195–196.

29. ಬಾಸೆಲ್ ವ್ಯಾಪಾರೀ ಕಂಪನಿಯಿಂದ ಮಿಶನ್ ಖಜಾನೆಗೆ ಪಡೆದಿದ್ದ ಮೊತ್ತ

1870–1879	111,000 ಫ್ರಾಂಕ್ಸ್
1880–1889	650,000 ಫ್ರಾಂಕ್ಸ್
1890–1899	2,020,000 ಫ್ರಾಂಕ್ಸ್
1900–1909	2,818,530 ಫ್ರಾಂಕ್ಸ್
1910–1913	1,841,834 ಫ್ರಾಂಕ್ಸ್

30. ಪದ್ಮಿಣಿ ಸ್ವಾಮಿನಾಥನ್, ಸ್ಟೇಟ್ ಇನ್‌ಟರ್‌ವೇನ್ಶನ್ ಇನ್ ಇಂಡಸ್ಟ್ರೀಯಲೈಸೇಶನ್: ಎ ಕೇಸ್ ಸ್ಟಡಿ ಆಫ್ ದಿ ಮೆಡ್ರಾಸ್ ಪ್ರೆಸಿಡೆನ್‌ಸೀ, ದಿ ಇಂಡಿಯಾನ್ ಇಕೋನೋಮಿಕ್ ಆ್ಯಂಡ್ ಸೋಶಿಯಲ್ ಹಿಸ್ಟರಿ ರಿವ್ಹಿವ್, ಸಂಪುಟ 29, ನಂ. 4, ಅಕ್ಟೋಬರ್–ಡಿಸೆಂಬರ್ 1992, ದೆಹಲಿ, ಪುಟ 482–483.

31. ಪಿ. ಸಿ. ಶಿಜಾ, ಕೋಲೋನಿಯಲಿಸಮ್ ಆ್ಯಂಡ್ ಟೆಕ್ಸ್‌ಟೈಲ್ ಇಂಡಸ್ಟ್ರೀಸ್: ಎ ಕೇಸ್ ಸ್ಟಡಿ ಆಫ್ ಕನ್ನೂರ್, ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಸವೆನಿಯರ್, 69ನೇ ಅಧಿವೇಶನ, 28–30 ಡಿಸೆಂಬರ್ 2008, ಕನ್ನೂರ್, ಪುಟ 80–81.

32. ಪೌಲ್ ಜೆಂಕಿನ್ಸ್, ದಿ ಬಾಸೆಲ್ ಮಿಶನ್ ಇನ್ ವೆಸ್ಟ್ ಆಫ್ರಿಕಾ ಆ್ಯಂಡ್ ದಿ ಐಡಿಯಾ ಆಫ್ ದಿ ಕ್ರಿಶ್ಚಿಯನ್ ವಿಲ್ಹೇಜ್ ಕಮ್ಯುನಿಟಿ, ಗೋಡ್ವಿನ್ ಶಿರಿ, ಹೋಲಿನೆಸ್ ಇನ್ ಕ್ರೈಸ್ಟ್, ದಿ ಕರ್ನಾಟಕ ತಿಯೋಲಾಜಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಮಂಗಳೂರು, 1985, ಪುಟ 18 ಮತ್ತು 23.

33. ಎಸ್. ಡಿ. ಎಲ್. ಅಳಗೋಡಿ, ಭಾರತದಲಿ ಕ್ರೈಸ್ತ ಧರ್ಮದ ಇತಿಹಾಸ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, 2001.

34. ಡಾ. ವಿಜಯ ಕುಮಾರ್, ಕರ್ನಾಟಕದಲಿ ಪ್ರೊತೆಸ್ತಾಂತ ಮಿಷನ್ನುಗಳ ಚರಿತ್ರೆ, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, 2004.

35. ನೋರ್ಮನ್ ಸಿ. ಸಾರ್ಜೆಂಟ್, ಪ್ರಮ್ ಮಿಶನ್ಸ್ ಟು ಚರ್ಚ್ ಇನ್ ಕರ್ನಾಟಕ, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮೆಡ್ರಾಸ್, 1987.

36. ಕ್ರಾಂತಿ ಕೆ. ಫರಾಯೇಸ್, ದಿ ಕ್ರಿಶ್ಚಿಯನ್ ಇಂಪ್ಯಾಕ್ಟ್ ಇನ್ ಸೌತ್ ಕೆನರಾ, ಚರ್ಚ್ ಹಿಸ್ಟರಿ ಅಸೋಸಿಯೇಶನ್ ಆಫ್ ಇಂಡಿಯಾ, ವೆಸ್ಟ್ ಇಂಡಿಯಾ ಬ್ರ್ಯಾಂಚ್, ಮುಂಬಾಯಿ, 1999.

37. BMSM, File No. 17 – 58, (1927-1941).
BMSK, File No. 59 - 73 (1855-1945).
KEM, File No. 74-78 (1915-1927).

ಅಧ್ಯಾಯ: ಎರಡು

ಪ್ರಥಮ ಜಾಗತಿಕ ಯುದ್ಧ ಮತ್ತು ಬಾಸೆಲ್ ಮಿಶನಿನ ಸಂದಿಗ್ಧ ಕಾಲ (1914-1927)

ಅಧ್ಯಾಯ: ಎರಡು

ಪ್ರಥಮ ಜಾಗತಿಕ ಯುದ್ಧ ಮತ್ತು ಬಾಸೆಲ್ ಮಿಶನಿನ ಸಂದಿಗ್ಧ ಕಾಲ (1914-1927)

ಯುದ್ಧ ಆರಂಭವಾಗುತ್ತಿದ್ದಂತೆ ಬ್ರಿಟಿಷ್ ಭಾರತ ಸರ್ಕಾರ 'ದಿ ಡಿಫೇನ್ಸ್ ಆಫ್ ಇಂಡಿಯಾ ಆಕ್ಟ್ 1914' (The Defence of India Act 1914) ನ್ನು ಜಾರಿಗೊಳಿಸುತ್ತದೆ. ಇದರ ಪ್ರಕಾರ ಸರ್ಕಾರದ ಆಜ್ಞೆಯಂತೆ ವೈರಿ ದೇಶದ ಜನರು ಒಂದು ನಿರ್ದೇಶಿತ ಪ್ರದೇಶದಲ್ಲಿ ನೆಲೆಗೊಳ್ಳಬೇಕಿತ್ತು. ಸರ್ಕಾರದ ಮುಂದಿನ ಆಜ್ಞೆ ಬರುವ ತನಕ ಅವರು ಅದೇ ಪ್ರದೇಶದಲ್ಲಿರಬೇಕಿತ್ತು ಹಾಗೂ ಸಮಯಕ್ಕೆ ಸರಿಯಾಗಿ ಪೋಲಿಸ್ ಅಧಿಕಾರಿಗಳಿಗೆ ವರದಿ ಮಾಡಬೇಕಿತ್ತು. ಈ ಕಾಲಾವಧಿಯಲ್ಲಿ ಅವರಿಗೆ ಮುಕ್ತವಾಗಿ ಮಾತನಾಡುವ ಅಧಿಕಾರವಿರಲಿಲ್ಲ ಹಾಗೂ ಪತ್ರಿಕೆಗಳಲ್ಲಿ ಬರೆಯುವ ಅವಕಾಶವು ಇರಲಿಲ್ಲ. ತದನಂತರ ಸರಕಾರವು 'ದಿ ಪೋರಿನರ್ಸ್ ಆಕ್ಟ್ ಆಫ್ 1914' (Foreigners Act of 1914) ನ್ನು ಜಾರಿಗೆ ತರುತ್ತದೆ. ಇದರಂತೆ ಮದ್ರಾಸ್ ನಗರ ವ್ಯಾಪ್ತಿಯ ಹಾಗೂ ನೀಲಗಿರಿ ಜಿಲ್ಲೆಯ ಎಲ್ಲಾ ವಿದೇಶಿಯರು ಪೋಲಿಸ್ ಕಮಿಷನರ್‌ಗೆ ಅಥವಾ ಜಿಲ್ಲಾ ನ್ಯಾಯಾಧೀಶರಿಗೆ ವರದಿ ಮಾಡುವಂತೆ ಆಜ್ಞಾಪಿಸುತ್ತದೆ. ಅಷ್ಟೇ ಅಲ್ಲದೇ 'ಹೊಸ್ಟೈಲ್ ಪೋರಿನರ್ಸ್ (ಟ್ರೇಡಿಂಗ್) ಆಕ್ಟ್ ಆಫ್ 1914' (Hostile Foreigners (Trading) Act of 1914) ಜಾರಿಗೊಳಿಸಿ ವೈರಿ ದೇಶಗಳ ವಾಣಿಜ್ಯ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ. ಅದರಂತೆ ಬ್ರಿಟಿಷ್ ಸರಕಾರ ಬಾಸೆಲ್ ಮಿಶನನ್ನು ವೈರಿ ದೇಶದ ಮಿಶನ್ ಎಂದು ಸಾರಿ, ಅದರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗುತ್ತದೆ ಹಾಗೂ ಬಾಸೆಲ್ ಮಿಶನಿನ ಎಲ್ಲಾ ಮಿಶನರಿಗಳನ್ನು 1914ರ ಸೆಪ್ಟಂಬರ್‌ನಿಂದ ನವೆಂಬರ್‌ನ ಕಾಲಾವಧಿಯ ಒಳಗೆ, ಬಳ್ಳಾರಿ (Bellary), ಮಧುರೈ (Madurai), ಯೇರ್‌ಕಾಡ್ (Yerkad) ಮತ್ತು ಸೇಲಂ (Salem) ನ ಕ್ಯಾಂಪ್‌ಗಳಲ್ಲಿ ಸರಹದ್ದಿನ ಬಂಧನಕ್ಕೆ [Interned] ಗುರಿಪಡಿಸುತ್ತದೆ. 1914 ಡಿಸೆಂಬರ್ ಹಾಗೂ 1915 ಜನವರಿಯ ಕಾಲಾವಧಿಯಲ್ಲಿ ಹೆಚ್ಚಿನ ಮಿಶನರಿಗಳನ್ನು ಅಹಮದ್‌ನಗರದ ನಾಗರೀಕ ಕ್ಯಾಂಪ್‌ಗೆ ವರ್ಗಾಯಿಸಲಾಗುತ್ತದೆ. ಮುಂದೆ ಅಲ್ಲಿಂದ ಅವರನ್ನು ಎರಡು ಹಂತಗಳಲ್ಲಿ 'ಗೋಲ್ಕೊಂಡ' ಹಡಗಿನಲ್ಲಿ ಸ್ವದೇಶಕ್ಕೆ ಕಳುಹಿಸಲಾಗುತ್ತದೆ.[1]

ಜರ್ಮನ್ ಮಿಶನರಿಗಳನ್ನು ಬಂಧಿಸಿದ ಬಳಿಕ ಬಾಸೆಲ್ ಮಿಶನಿನಲ್ಲಿದ್ದ ಸ್ವಿಸ್ ಮಿಶನರಿಗಳು ತಮ್ಮ ಕಾರ್ಯದಲ್ಲಿ ಮುಂದುವರಿದರೂ, ಇಲ್ಲಿ ಅವರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಬಾಸೆಲ್ ಮಿಶನ್‌ನ ಕೈಗಾರಿಕೆಗಳನ್ನು ಹಾಗೂ ಆಸ್ತಿಯನ್ನು ವೈರಿಗಳ ಸಂಪತ್ತೆಂದು ತನ್ನ ವಶಕ್ಕೆ ತೆಗೆದುಕೊಂಡ ಸರಕಾರ, ಅದನ್ನು ವೈರಿ ಆಸ್ತಿಯ ಮೇಲ್ವಿಚಾರಕರ

(Custodian of enemy property) ನಿಯಂತ್ರಣಕ್ಕೆ ಒಪ್ಪಿಸುತ್ತದೆ. ಕೈಗಾರಿಕೆಗಳನ್ನು ಮೊದಲು ಮಿಶನ್ ಟ್ರಸ್ಟ್ ಆಫ್ ಸಧರನ್ ಇಂಡಿಯ ನಿಯಂತ್ರಣದಲ್ಲೂ ನಂತರ ಅವುಗಳನ್ನು ಕೋಮನ್‌ವೆಲ್ತ್ ಟ್ರಸ್ಟ್‌ಗೂ ವಹಿಸಿಕೊಡಲಾಗುತ್ತದೆ. 1914ರ ವರೆಗೆ ಈ ಕೈಗಾರಿಕೆಗಳು ಮಿಶನ್ ಕಂಪನಿಗೆ ಹಾಗೂ ಮಿಶನಿಗೆ ಅಪಾರವಾದ ಲಾಭವನ್ನು ತಂದು ಕೊಡುತಿತ್ತು. ಆದರೆ ಯುದ್ಧ ಆರಂಭವಾದ ನಂತರ ಕೈಗಾರಿಕೆಗಳು ಸ್ವಿಸರ ಮೇಲ್ವಿಚಾರಣೆಯಲ್ಲಿ, ಬ್ರಿಟಿಷ್ ಸರಕಾರದ ನಿಯಂತ್ರಣದಲ್ಲಿ ಪತನದಂಚಿಗೆ ಮುಂದುವರಿದವು. ಇದರೊಂದಿಗೆ ಮಿಶನಿಗೆ ಕೈಗಾರಿಕೆಗಳಿಂದ ಮಿಶನ್ ಕೆಲಸಕ್ಕೆ ಬರುತ್ತಿದ್ದ ಆದಾಯವು ಕಡಿಮೆಯಾಯಿತು. ತನ್ನ ಆರಂಭದಿಂದಲೇ ಭಾರತದಲ್ಲಿನ ಬ್ರಿಟಿಷ್ ವಸಾಹತು ಸರಕಾರಕ್ಕೆ ಹಾಗೂ ಬ್ರಿಟಿಷ್ ಸರಕಾರಕ್ಕೆ ತನ್ನ ವಿಧೇಯತೆಯನ್ನು ತೋರಿದ್ದ ಬಾಸೆಲ್ ಮಿಶನರಿಗಳು[2] ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ನಿರೀಕ್ಷೆಯೂ ಮಾಡಿರಲಿಲ್ಲ. ಜೊತೆಗೆ ಇಂತಹ ಪರಿಸ್ಥಿತಿಯನ್ನು ಎದುರಿಸಲು ಯಾವುದೇ ಸಿದ್ಧತೆಯನ್ನು ಮಾಡದೇ ಇದ್ದುದು ಕೈಗಾರಿಕೆಗಳ ಪತನಕ್ಕೆ ಕಾರಣವಾಗುತ್ತದೆ. ಮತ್ತೊಂದೆಡೆ ತನ್ನ ಉತ್ತುಂಗ ಶಿಖರಕ್ಕೆ ಮುಟ್ಟಿದ್ದ ಮಿಶನರಿ ಕಾರ್ಯದ ಮೇಲೂ ಯುದ್ಧದ ಕರಿಛಾಯೆ ಆವರಿಸುತ್ತದೆ. ಬಾಸೆಲ್ ಮಿಶನಿನ ಮಿಶನ್ ಠಾಣ್ಯಗಳು ಬೇರೆ ಬೇರೆ ಮಿಶನ್‌ಗಳ ಮೇಲ್ವಿಚಾರಣೆಗೆ ಹರಿದು ಹಂಚಿ ಹೋಗುತ್ತವೆ. ಇದರೊಂದಿಗೆ ಬಾಸೆಲ್ ಮಿಶನ್ ಮತ್ತೆಂದಿಗೂ ತನ್ನ ಮೊದಲಿನ ವೇಗವನ್ನು, ಛಾಪನ್ನು ಪಡೆಯದಾಗುತ್ತದೆ.

ಯುದ್ಧ ಕಾಲದಲ್ಲಿ ಬಾಸೆಲ್ ಮಿಶನ್ ಎದುರಿಸಿದ ಈ ರೀತಿಯ ಅಪಾರವಾದ ಹಿನ್ನಡೆಗೆ ಒಂದು ರೀತಿಯಲ್ಲಿ ಅದರ ಮಿಶನ್ ಹಾಗೂ ಮಿಶನರಿ ನೀತಿಗಳೇ ಕಾರಣವಾದವು ಎಂದು ಹೇಳಬಹುದು. ಏಕೆಂದರೆ ಮಿಶನ್ ಭಾರತೀಯ ಕ್ರೈಸ್ತರಿಗೆ ನಾಯಕತ್ವದ ಬಗ್ಗೆ ತಿಳುವಳಿಕೆ ನೀಡಿ, ಜವಾಬ್ದಾರಿಯನ್ನು ವಹಿಸಿಕೊಟ್ಟಿರಲಿಲ್ಲ. ಮಿಶನರಿಗಳು ಸ್ಥಳೀಯ ಪಾಸ್ಟರ್‌ಗಳಿಗೆ ಸ್ವತಂತ್ರ ಜವಾಬ್ದಾರಿಯನ್ನು ನೀಡಿರಲಿಲ್ಲ. ಬಾಸೆಲ್ ಮಿಶನ್ ತನ್ನ ಕ್ರೈಸ್ತರಿಗೆ, ತನ್ನ ಶಾಲೆಗಳಲ್ಲಿ ಶಿಕ್ಷಕರಾಗುವ, ಕ್ಲರ್ಕ್‌ಗಳಾಗುವ ತರಬೇತಿಯನ್ನು ಹಾಗೂ ಕೈಗಾರಿಕಾ ಕಾರ್ಯಗಳಿಗೆ ಬೇಕಾಗುವ ವಿಭಿನ್ನ ಕೌಶಲ್ಯಗಳಲ್ಲಿ ತರಬೇತಿಯನ್ನು ಒದಗಿಸಿತು.[3] ಈ ರೀತಿ ಬಾಸೆಲ್ ಮಿಶನ್ ತನ್ನ ಕ್ರೈಸ್ತರನ್ನು ಹಾಗೂ ತರಬೇತಿ ಪಡೆದ ಇತರರನ್ನು ತನ್ನ ಪ್ರಬಲ ನಿಯಂತ್ರಣದಲ್ಲಿರಿಸಿಕೊಂಡಿತ್ತು. ಮಿಶನಿನ ಹಾಗೂ ಚರ್ಚಿನ ಸಂಪೂರ್ಣ ಆಡಳಿತ ನಿರ್ವಹಣೆ ಮಿಶನರಿಗಳ ಕೈಯಲ್ಲೇ ಕೇಂದ್ರೀಕೃತವಾಗಿತ್ತು. ಮಿಶನಿನ ಕಾರ್ಯ ಚಟುವಟಿಕೆಗಳ ಮೇಲೆ ಬಾಸೆಲ್ ಹೋಮ್ ಕಮಿಟಿಯು ತನ್ನ ನೇರ ನಿಯಂತ್ರಣವನ್ನು ಹೊಂದಿತ್ತು.

ಭಾರತದಲ್ಲಿನ ಜರ್ಮನ್ ಮಿಶನ್‌ಗಳ ಸ್ಥಿತಿ-ಗತಿ:

ಜಾಗತಿಕ ಯುದ್ಧದ ಸಂದರ್ಭದಲ್ಲಿ ಭಾರತದಲ್ಲಿದ್ದ ಪ್ರಮುಖ ಜರ್ಮನ್ ಮಿಶನ್‌ಗಳೆಂದರೆ ಲಿಫ್‌ಜ್ಹಿಗ್ ಇವ್ಯಾಂಜಲಿಕಲ್ ಲೂಥರನ್ ಮಿಶನ್, ಶ್ಲೆಶ್‌ವ್ಹಿಗ್-ಹೋಲ್‌ಸ್ಟೈನ್ ಇವ್ಯಾಂಜಲಿಕಲ್ ಲೂಥರನ್ ಮಿಶನ್ ಅಥವಾ ಬ್ರೆಕ್‌ಲಾಮ್ ಮಿಶನ್, ಹರ್ಮನ್ಸ್‌ಬರ್ಗ್ ಇವ್ಯಾಂಜಲಿಕಲ್ ಲೂಥರನ್ ಮಿಶನ್[4], ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಗೋಸ್‌ನರ್ಸ್ ಮಿಶನ್ (ಗ್ಯಾನ್‌ಜಸ್ ಮಿಶನ್ ಸೇರಿಸಿ).[5] ಈ ಮೇಲಿನ ಐದು ಮಿಶನ್‌ಗಳಲ್ಲಿ ಪ್ರಾರಂಭದ ನಾಲ್ಕು ಮಿಶನುಗಳು ದಕ್ಷಿಣ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಗೋಸ್‌ನರ್ಸ್ ಮಿಶನ್ ಉತ್ತರ ಭಾರತದಲ್ಲಿ ಕಾರ್ಯನಿರ್ವಹಿಸುತಿತ್ತು. ಈ ಎಲ್ಲಾ ಮಿಶನುಗಳು ಜಾಗತಿಕ ಸಮರದ ಪ್ರತಿಕೂಲ ಪರಿಣಾಮವನ್ನು ಎದುರಿಸಬೇಕಾಗಿ ಬರುತ್ತದೆ. ಲಿಪ್‌ಜ್ಹಿಗ್ ಲೂಥರನ್ ಮಿಶನ್ ಸುಮಾರು 14 ಲಕ್ಷ ಮೌಲ್ಯದ ಆಸ್ತಿಯನ್ನು ಹೊಂದಿತ್ತು.[6] ಶ್ಲೆಪ್‌ವ್ಹಿಗ್-ಹೋಲ್‌ಸ್ಟ್ರೆನ್ ಮಿಶನ್ ಎರಡುವರೆ ಲಕ್ಷಕ್ಕೂ ಮಿಕ್ಕಿದ ಆಸ್ತಿ ಹೊಂದಿದ್ದರೆ[7], ಹರ್ಮನ್ಸ್ ಬರ್ಗ್ ಮಿಶನ್ ಸುಮಾರು ಎರಡು ಲಕ್ಷದಷ್ಟು ಬೆಲೆಬಾಳುವ ಆಸ್ತಿಯನ್ನು ಹೊಂದಿತ್ತು.[8]

ಕೊಡಗು, ನೀಲಗಿರಿ, ದಕ್ಷಿಣ ಕೆನರಾ ಮತ್ತು ಮಲಬಾರ್ ಪ್ರದೇಶಗಳಲ್ಲಿ ಬಾಸೆಲ್ ಮಿಶನ್ ಸುಮಾರು 6,1/2 ಲಕ್ಷ ಬೆಳೆಬಾಳುವ ಸುಮಾರು 5000 ಎಕರೆ ಭೂಮಿಯನ್ನು ಹೊಂದಿತ್ತು. ಬಾಸೆಲ್ ಮಿಶನಿನ ಆಸ್ತಿಯು ಇತರ ಮಿಶನುಗಳ ಆಸ್ತಿಗಳಿಗಿಂತ ಭಿನ್ನವಾಗಿದ್ದು, ಅದು ಚರ್ಚುಗಳು, ಶಾಲೆಗಳು, ಕಾಫಿ ತೋಟಗಳು, ಒಣ ಭೂಮಿ, ಹೂ ತೋಟ ಹಾಗೂ ಇತರ ಚರ ಮತ್ತು ಸ್ಥಿರ ಆಸ್ತಿಗಳನ್ನು ಒಳಗೊಂಡಿತ್ತು. ಬಾಸೆಲ್ ಮಿಶನರಿಗಳು ಅಂದಾಜು ಮಾಡಿರುವಂತೆ ಅವರ ಕಟ್ಟಡಗಳ ಮೌಲ್ಯವು ಸುಮಾರು 12 ಲಕ್ಷದಷ್ಟಾಗಬಹುದೆಂದು ತಿಳಿಸಿದ್ದರು. ಮಲಬಾರ್ ಕಲೆಕ್ಟರ್ ಹೇಳಿರುವಂತೆ ಈ ಮೊತ್ತವು ಸುಮಾರು 15 ಲಕ್ಷದಷ್ಟಾಗಿರಬಹುದೆಂದು ತಿಳಿಸಿದ್ದರು.[9] ಈ ರೀತಿ ಜರ್ಮನ್ ಮಿಶನ್‌ಗಳ ಅಪಾರವಾದ ಆಸ್ತಿಯನ್ನು ರಕ್ಷಿಸುವುದು ಹಾಗೂ ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುವುದು ಕ್ಲಿಷ್ಟಕರ ಕೆಲಸವಾಗಿತ್ತು. 1914ರಲ್ಲೇ ಈ ಎಲ್ಲಾ ಮಿಶನುಗಳ ಆಸ್ತಿಯನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡಿದ್ದರೂ ಬದಲಿ ವ್ಯವಸ್ಥೆ ಅಥವಾ ಅದರ ನಿರ್ವಹಣೆಯ ವಿಚಾರಕ್ಕೆ ಸಂಬಂಧಿಸಿದಂತೆ ಗೊಂದಲವು ದೀರ್ಘಕಾಲದವರೆಗೆ ಮುಂದುವರಿಯುತ್ತದೆ. ಈ ಗೊಂದಲದ ಮಧ್ಯೆ ಹಲವು ಮಿಶನ್ ಆಸ್ತಿಗಳು ಅನ್ಯರ ಪಾಲಾಗುತ್ತವೆ. ಜೊತೆಗೆ ಮಿಶನ್ ಆಸ್ತಿಗಳು ಬೇರೆ ಬೇರೆ ರೀತಿಯಲ್ಲಿ ಹರಿದು ಹಂಚಿಹೋಗುತ್ತವೆ.

1919ರ ಶಾಂತಿ ಒಪ್ಪಂದದಲ್ಲಿಯೇ ಈ ಮಿಶನುಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಷರತ್ತುಗಳನ್ನು ಸೇರಿಸಲಾಗಿತ್ತು. ಅದರ ಪ್ರಕಾರ ದಾನಿಗಳ ಉದ್ದೇಶದಂತೆ ಹಾಗೂ ಮಿಶನಿಗೆ

ಉಪಯೋಗವಾಗುವಂತೆ, ಮಿಶನುಗಳ ಆಸ್ತಿಗಳನ್ನು ಟ್ರಸ್ಟಿಗಳಿಗೆ ವರ್ಗಾವಣೆ ಮಾಡುವುದು, ತದನಂತರ ಈ ಮಿಶನುಗಳ ಕಾರ್ಯಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಹಾಗೂ ಶಾಶ್ವತವಾದ ವ್ಯವಸ್ಥೆಗಳು ನಿರ್ಮಾಣವಾದ ನಂತರ ಅವು ಸಮರ್ಪಕವಾಗಿವೆಯೇ ಎಂಬುದನ್ನು ನಿರ್ಧರಿಸಿ, ನ್ಯಾಶನಲ್ ಕೌನ್ಸಿಲ್ ಮತ್ತು ಭಾರತ ಸರಕಾರದ ಅನುಮತಿಯೊಂದಿಗೆ ಟ್ರಸ್ಟಿಗಳು ಮಿಶನ್‌ಗಳ ಆಸ್ತಿಗಳನ್ನು ಸಂಬಂಧಪಟ್ಟ ಸಂಘಟನೆಗಳಿಗೆ ವರ್ಗಾಯಿಸ ತಕ್ಕದ್ದು. ಯಾವ ಸಂಘಟನೆಗೆ ಶಾಶ್ವತವಾಗಿ ಮಿಶನಿನ ಜವಾಬ್ದಾರಿಯನ್ನು ವಹಿಸಲಾಗಿದೆಯೋ, ಆ ಸಂಘಟನೆಗೆ ಅಂತಿಮವಾಗಿ ಆ ಆಸ್ತಿಯ ಮೇಲೆ ಸಂಪೂರ್ಣ ನಿಯಂತ್ರಣವಿರುವುದು.[10] ಈ ರೀತಿ ಶಾಂತಿ ಒಪ್ಪಂದ ಶರತ್ತುಗಳ ಪ್ರಕಾರ ಮುಟ್ಟುಗೋಲು ಹಾಕಿದ ಆಸ್ತಿಯ ತಾತ್ಕಾಲಿಕ ನಿರ್ವಹಣೆಯು ಟ್ರಸ್ಟಿಗಳಿಗಿರುವುದು. ಅದೇ ಸಂದರ್ಭದಲ್ಲಿ ಮಿಶನಿನ ಶಾಶ್ವತವಾದ ಮುಂದುವರಿಯುವಿಕೆಗೆ ಸೂಕ್ತವಾದ ಬದಲೀ ವ್ಯವಸ್ಥೆಗಳನ್ನು ಮಾಡಬೇಕಾಗಿತ್ತು. ಆ ವ್ಯವಸ್ಥೆಯು ಸಮರ್ಪಕವಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡು ಟ್ರಸ್ಟಿಗಳು ಸಂಬಂಧಪಟ್ಟ ಮಿಶನಿನ ಆಸ್ತಿಯನ್ನು ಪ್ರಸ್ತುತವಾಗಿ ಮಿಶನ್ ಕಾರ್ಯವನ್ನು ನಿರ್ವಹಿಸುತ್ತಿರುವ ಸಂಘಟನೆಗೆ ವರ್ಗಾಯಿಸಬೇಕಿತ್ತು. ಹೌಸ್ ಆಫ್ ಕಾಮನ್ಸ್‌ನಲ್ಲಿ (House of commons) ಮೊಂಟೆಗ್ಯೂರವರು (Mr.Montagu) ನೀಡಿದ ಹೇಳಿಕೆ ಹಾಗೂ ಶಾಂತಿ ಒಪ್ಪಂದ ಷರತ್ತುಗಳಿಂದ ಮನದಟ್ಟಾಗುವ ವಿಚಾರವೆಂದರೆ ಇನ್ನು ಬಹು ದೀರ್ಘಕಾಲದವರೆಗೆ ಜರ್ಮನ್ ಮೂಲದ ಮಿಶನರಿಗಳು ಭಾರತಕ್ಕೆ ಬರುವುದು ಕಷ್ಟಕರವಾಗಿತ್ತು. ಆದುದರಿಂದ ಭಾರತದಲ್ಲಿನ ಜರ್ಮನ್ ಮಿಶನ್‌ಗಳಿಗೆ ಶಾಶ್ವತವಾದ ಬದಲಿ ವ್ಯವಸ್ಥೆಯನ್ನು ಮಾಡುವುದು ಅನಿವಾರ್ಯವಾಗಿತ್ತು. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇತರ ಮಿಶನುಗಳು ಜರ್ಮನ್ ಮಿಶನುಗಳ ನೆರವಿಗೆ ಬರುತ್ತವೆ. ಜೊತೆಗೆ ಹಲವು ಇಂಗ್ಲೀಷ್ ಮಿಶನುಗಳು ಈ ಜರ್ಮನ್ ಮಿಶನುಗಳ ಕಾರ್ಯ ಮುಂದುವರಿಯುವಂತೆ ತನ್ನ ಸಹಾಯ ಹಸ್ತವನ್ನು ಚಾಚುತ್ತವೆ. ಯುದ್ಧ ಕಾಲಾವಧಿಯಲ್ಲಿ ವಿಶ್ವದ್ಯಂತ ಎಲ್ಲಾ ಮಿಶನುಗಳು ಸಮಸ್ಯೆಯನ್ನು ಎದುರಿಸುತ್ತಿದ್ದವು. ಈ ಮಿಶನುಗಳಲ್ಲಿ ಪರಸ್ಪರ ಕೆಲವೊಂದು ವಿಚಾರಗಳು ಏಕರೂಪದಾಗಿದ್ದರೆ ಹಲವು ಆಚಾರ ವಿಚಾರಗಳು ಸಂಪ್ರದಾಯ ಪದ್ಧತಿಗಳು ಭಿನ್ನವಾಗಿದ್ದವು. ಅದರಲ್ಲೂ ಬಾಸೆಲ್ ಮಿಶನ್ ಹಾಗೂ ಇತರ ಮಿಶನುಗಳ ಹಲವು ಪದ್ಧತಿಗಳಲ್ಲಿ ಬಹಳಷ್ಟು ಭಿನ್ನತೆಗಳಿದ್ದವು. ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜರ್ಮನ್ ಮಿಶನುಗಳ ಮುಂದುವರಿಯುವಿಕೆಗೆ ಸಂಬಂಧಿಸಿದಂತೆ, 'ನ್ಯಾಶನಲ್ ಮಿಶನರಿ ಕೌನ್ಸಿಲ್ ಹಾಗೂ ಮೆಡ್ರಾಸ್ ರೆಪ್ರಸೇನ್‌ಟೆಟೀವ್ಹ್ ಕೌನ್ಸಿಲ್ಸ್ ಆಫ್ ಮಿಶನ್ಸ್'ಗಳು [National Missionary council and the Madras Representative councils of Missions] ಸರಕಾರದ

ಅನುಮತಿಯೊಂದಿಗೆ ಸಾಧ್ಯವಾದಷ್ಟು ವ್ಯವಸ್ಥೆಯನ್ನು ಮಾಡುತ್ತದೆ. ಶ್ಲೆಪ್‌ವಿಗ್-ಹೋಲ್‌ಸ್ಟೆನ್ ಮಿಶನ್, ಲಿಫ್‌ಜಿಗ್ ಮಿಶನ್,[11] ಹರ್ಮನ್ಸ್ ಬರ್ಗ್ ಮಿಶನ್[12] ಹಾಗೂ ಗೋಸ್‌ನರ್ಸ್ ಮಿಶನ್‌ಗಳ[13] ಮಿಶನ್ ಕಾರ್ಯಗಳು ಮುಂದುವರಿಯುವಂತೆ ಸೂಕ್ತ ಬದಲಿ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತದೆ. ಹೀಗೆ ಪ್ರಥಮ ಜಾಗತಿಕ ಯುದ್ಧದಿಂದಾಗಿ ವೈರಿ ದೇಶದ ಮಿಶನರಿಗಳ ಮೇಲಿನ ಬ್ರಿಟಿಷ್ ವಸಾಹತು ಸರಕಾರದ ಕಠಿಣ ಕ್ರಮಗಳು, ಭಾರತದಲ್ಲಿ ಜರ್ಮನ್ ಮಿಶನರಿಗಳ ಕಾರ್ಯಗಳು ಸಂಪೂರ್ಣವಾಗಿ ಕಡಿತಗೊಳ್ಳುವಂತೆ ಮಾಡುತ್ತದೆ. ಮತ್ತೊಂದೆಡೆ ಜರ್ಮನ್ ಮಿಶನರಿಗಳಿಂದಾಗಿ ಉದ್ಭವಿಸಿದ ಚರ್ಚುಗಳು ನಿಧಾನವಾಗಿ ಸ್ವಾಯತ್ತತೆಯತ್ತ ಮುಂದುವರಿಯುತ್ತವೆ. ಕೆಲವೊಂದು ಜರ್ಮನ್ ಮಿಶನ್‌ಗಳು ಯುದ್ಧದ ಮೊದಲಿನ ಕಾಲದಲ್ಲಿಯೇ ಸ್ಥಳೀಯ ಚರ್ಚುಗಳಲ್ಲಿ ನಾಯಕತ್ವ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸಿದ್ದವು. ಆದರೆ ಬಾಸೆಲ್ ಮಿಶನಿನ ಹಾಗೂ ಚರ್ಚಿನ ಎಲ್ಲಾ ವಿಚಾರಗಳನ್ನು ಮಿಶನರಿಗಳೇ ನಿಯಂತ್ರಿಸುತ್ತಿದ್ದರು ಮತ್ತು ನಿರ್ವಹಿಸುತ್ತಿದ್ದರು. ಸ್ಥಳೀಯ ಕ್ರೈಸ್ತರಿಗೆ ಚರ್ಚಿನ ವಿಚಾರದಲ್ಲಿ ಸ್ವಾಯತ್ತತೆಯತ್ತ ಮುನ್ನಡೆಸುವ ಸಮರ್ಪಕವಾದ ಕೆಲಸವನ್ನು ಬಾಸೆಲ್ ಮಿಶನ್ ಮಾಡಲಿಲ್ಲದಿರುವುದು ಯುದ್ಧ ಕಾಲದಲ್ಲಿ ಮಿಶನಿಗೆ ಬಹಳಷ್ಟು ದೊಡ್ಡ ಹೊಡೆತ ಬೀಳುತ್ತದೆ. ಬಾಸೆಲ್ ಮಿಶನಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಿಶನರಿಗಳನ್ನು ಠಾಣ್ಯಗಳಿಂದ ತೆಗೆಯಲ್ಪಟ್ಟ ಸಂದರ್ಭದಲ್ಲಿ ಚರ್ಚ್ ಮತ್ತು ಮಿಶನ್ ಕಾರ್ಯಕ್ಕೆ ಸ್ಥಳೀಯ ಕ್ರೈಸ್ತರು ಪುನಃ ಮಿಶನರಿಗಳನ್ನೇ ನಿರೀಕ್ಷಿಸುವಂತಾಗುತ್ತದೆ.

ಒಟ್ಟಾರೆಯಾಗಿ 1915 ಅಂತ್ಯಕ್ಕಾಗುವಾಗ ಭಾರತದಲ್ಲಿ ಯಾವುದೇ ಜರ್ಮನ್ ಮಿಶನರಿಗಳು ಕಾರ್ಯನಿರ್ವಹಿಸುತ್ತಿರಲಿಲ್ಲ. ಲಿಫ್‌ಜಿಗ್ ಮಿಶನ್ ಭಾರತದಲ್ಲಿಯೇ ದೊಡ್ಡದಾದ ಜರ್ಮನ್ ಮಿಶನರಿ ಸಂಘವಾಗಿದ್ದು ಅದು ಮೆಡ್ರಾಸ್ ಪ್ರೆಸಿಡೆನ್ಸಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅಪಾರವಾದ ಮಿಶನಿನ ಮಹಿಳಾ ಕೆಲಸಗಾರರು, ಮಿಶನರಿಗಳ ಪತ್ನಿಯರು, ಮಕ್ಕಳು ಹಾಗೂ ಮಿಲಿಟರಿ ವಯಸ್ಸು ದಾಟಿರುವ ಮಿಶನರಿಗಳನ್ನು ಸರಕಾರವು ಅವರ ಮೂಲ ರಾಷ್ಟ್ರಕ್ಕೆ ಕಳುಹಿಸಿತ್ತು. ಉಳಿದಂತೆ ಮಿಲಿಟರಿ ವಯಸ್ಸಿನೊಳಗಿರುವ, ಎಂದರೆ 55 ಹಾಗೂ ಕಡಿಮೆ ವಯಸ್ಸಿನ ಮಿಶನರಿಗಳನ್ನು ಅಹಮದ್‌ನಗರ್ ಸರಹದ್ದಿನಲ್ಲಿ ಬಂಧಿಸಲಾಗಿತ್ತು.[14]

ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನ್ ಬಗ್ಗೆ ಬ್ರಿಟಿಷ್ ಧೋರಣೆ ಮತ್ತು ಕ್ರಮ:

1914 ಸೆಪ್ಟಂಬರ್ 2ರಲ್ಲಿ ಬ್ರಿಟಿಷ್ ಸರಕಾರ ಭಾರತ ಸರಕಾರಕ್ಕೆ ಪತ್ರ ಬರೆದು ಸಂಪೂರ್ಣವಾಗಿ ಕೇವಲ ಧಾರ್ಮಿಕ ಕಾರ್ಯದಲ್ಲಿ ನಿರತರಾದವರ ಬಗ್ಗೆ ಕರುಣೆಯೊಂದಿಗೆ ಉದಾರವಾಗಿ ವರ್ತಿಸುವಂತೆ ತಿಳಿಸುತ್ತದೆ.[15] ಆದರೆ ಬ್ರಿಟಿಷ್ ಸರಕಾರ ತನ್ನ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಯಾವುದೇ ವೈರಿ ದೇಶಗಳ ಮಿಶನರಿಗಳನ್ನು ಅದರ ನಿಯಂತ್ರಣವಿರುವ

ಪ್ರದೇಶದಲ್ಲಿರಲು ಅವಕಾಶ ಕಲ್ಪಿಸುವ ಯೋಜನೆಯಲ್ಲಿರಲಿಲ್ಲ. ದೇಶದ ಪ್ರಗತಿಗೋಸ್ಕರ ಕೆಲಸ ನಿರ್ವಹಿಸುತ್ತಿದ್ದ ಏಜೆನ್ಸಿಗಳ ಬಗ್ಗೆ ಒಲವಿದ್ದ ಸರಕಾರ, ಅಂತಹ ಸಂಘಟನೆಗಳಲ್ಲಿರುವ ಕಠಿಣ ಹಾಗೂ ಮಾರಕ ಉದ್ದೇಶಗಳುಳ್ಳ ಶಕ್ತಿಗಳನ್ನು ತೆಗೆದು ಅನಾವಶ್ಯಕವಾದ ಗೊಂದಲಗಳನ್ನು ನಿವಾರಿಸುವುದೇ ತನ್ನ ನೀತಿಯ ಉದ್ದೇಶವೆಂದು ಹೇಳಿಕೊಳ್ಳುತ್ತದೆ.[16] ಇಷ್ಟು ಮಾತ್ರವಲ್ಲದೇ ಯುದ್ಧದ ಸಂದರ್ಭದಲ್ಲಿ ತಟಸ್ಥವಾಗಿದ್ದ ರಾಷ್ಟ್ರಗಳ ಮಿಶನರಿಗಳ ಮೇಲೂ ಬ್ರಿಟಿಷ್ ಸರಕಾರ ಸ್ವಲ್ಪ ಮಟ್ಟಿನ ಷರತ್ತುಗಳನ್ನು ಹೇರುತ್ತದೆ. ಅದರ ಪ್ರಕಾರ ಬ್ರಿಟಿಷ್ ನಾಗರಿಕರನ್ನು ಹೊರತುಪಡಿಸಿ ಇತರ ದೇಶದ (ತಟಸ್ಥ) ನಾಗರಿಕರು ಭಾರತದಲ್ಲಿ ಮಿಶನರಿ ಅಥವಾ ಶೈಕ್ಷಣಿಕ ಕಾರ್ಯದಲ್ಲಿ ತೊಡಗಲು, ಭಾರತವನ್ನು ಪ್ರವೇಶಿಸುವ ಮೊದಲು ಭಾರತ ಸರಕಾರದ ಅನುಮತಿ ಪಡೆಯತಕ್ಕದು ಎಂಬುದಾಗಿ ತಿಳಿಸುತ್ತದೆ.[17]

ಮಿಶನರಿಗಳು ತಮ್ಮ ರಾಷ್ಟ್ರಕ್ಕೆ ಖಂಡಿತವಾಗಿಯೂ ವಿಧೇಯತೆಯನ್ನು ಅಥವಾ ಕಾಳಜಿಯನ್ನು ತೋರ್ಪಡಿಸುತ್ತಾರೆಂಬುದು ಬ್ರಿಟಿಷ್ ಸರಕಾರದ ವಾದವಾಗಿತ್ತು. ಬ್ರಿಟಿಷರಿಗೆ ವಿಧೇಯರಾಗಿದ್ದು, ಯಾವುದೇ ಬ್ರಿಟಿಷ್ ವಿರೋಧಿ ನಿಲುವು ಇಲ್ಲದ ವೈರಿ ದೇಶದ ಮಿಶನರಿಗಳಿಗೂ ಸರಕಾರ ಮಿಶನ್‌ನಲ್ಲಿ ಮುಂದುವರಿಯಲು ಅವಕಾಶ ಕಲ್ಪಿಸಲಿಲ್ಲ. ಜೊತೆಗೆ ಈ ಯುದ್ಧದ ಪರಿಣಾಮವು ತಟಸ್ಥವಾಗಿದ್ದ ಸ್ವಿಸ್, ಅಮೇರಿಕಾ ಮುಂತಾದ ದೇಶದ ಮಿಶನರಿಗಳಿಗೂ ತಟ್ಟುತ್ತದೆ. ಬ್ರಿಟಿಷರಿಗೆ ಭಾರತ ಒಂದು ಪ್ರಮುಖ ವಸಾಹತಾಗಿತ್ತು ಹಾಗೂ ಯಾವ ರೀತಿಯಲ್ಲಾದರೂ ಇದನ್ನು ಉಳಿಸಿಕೊಳ್ಳುವುದು ಬ್ರಿಟಿಷ್ ನೀತಿಯ ಸ್ಪಷ್ಟ ಉದ್ದೇಶವಾಗಿತ್ತು. ಜಾಗತಿಕ ಯುದ್ಧದ ಸಂದರ್ಭದಲ್ಲಿ ಬ್ರಿಟಿಷರ ಇತರ ವಸಾಹತುಗಳಿಗಿಂತ ಭಾರತ ಕಡಿಮೆ ಪ್ರಭಾವಿತಗೊಂಡಿತ್ತು. ಆದರೆ ರಷ್ಯಾದ ಪತನವು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ದಕ್ಷಿಣ ರಷ್ಯಾದ ಮೂಲಕ ಜರ್ಮನರು ಸುಲಭವಾಗಿ ಭಾರತದತ್ತ ಮುಂದುವರಿಯಬಹುದಿತ್ತು.[18] ಈ ಎಲ್ಲಾ ಕಾರಣಗಳಿಂದ ಬ್ರಿಟಿಷರು ತಮ್ಮ ಕಠಿಣ ನೀತಿಗೆ ಬದ್ಧರಾಗುತ್ತಾರೆ. ಯುದ್ಧದ ಸಂದರ್ಭದಲ್ಲಿ ಭಾರತದಲ್ಲಿದ್ದ ಹೆಚ್ಚಿನ ಬ್ರಿಟಿಷ್ ಮಿಶನರಿಗಳು ಬ್ರಿಟಿಷ್ ಸರಕಾರಕ್ಕೆ ಬಹಳಷ್ಟು ಉತ್ತಮ ಸೇವೆಯನ್ನು ಸಲ್ಲಿಸಿದ್ದರು. ಸೇನೆಗೆ ಬೇಕಾದ ಸೈನಿಕರನ್ನು ಹಾಗೂ ಇತರರನ್ನು ನೇಮಿಸಿಲು ಮಿಶನರಿಗಳು ಅಧಿಕಾರಿಗಳಿಗೆ ಸಹಾಯ ಮಾಡಿದ್ದರು. ಗ್ರಾಮ ಮತ್ತು ನಗರಗಳಲ್ಲಿ ಸಂಚರಿಸಿ ಯುದ್ಧದ ನೈಜ ಬೆಳವಣಿಗೆ ಹಾಗೂ ಮಿತ್ರ ರಾಷ್ಟ್ರಗಳ ಉದ್ದೇಶದ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಯುದ್ಧದ ಸಂದರ್ಭದಲ್ಲಿ ಮಿಶನರಿಗಳು ಬ್ರಿಟಿಷ್ ಸರಕಾರಕ್ಕೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದರು. ಈ ರೀತಿ ಯುದ್ಧದ ಕಾಲದಲ್ಲಿ ಯುದ್ಧದ ನೈಜ ಸ್ಥಿತಿಯ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಿ, ಬ್ರಿಟಿಷ್ ಸರಕಾರಕ್ಕೆ ಜನರು ಸಹಾಯ ಮಾಡುವಂತೆ ಮಿಶನರಿಗಳು ಪ್ರಯತ್ನ ಮಾಡಿದ್ದರು.[19]

ಯುದ್ಧದ ಕಾಲಾವಧಿಯಲ್ಲಿ ಹಾಗೂ ಯುದ್ಧದ ನಂತರ ಬ್ರಿಟಿಷ್ ಸರಕಾರ ಮಿಶನರಿಗಳ ಬಗೆಗಿನ ತನ್ನ ಧೋರಣೆ ಮತ್ತು ನೀತಿಯಲ್ಲಿ ಹಲವು ಬದಲಾವಣೆಗಳನ್ನು ತರುತ್ತದೆ. 1918ರಲ್ಲಿ ಅಮೇರಿಕನ್ ಇವ್ಯಾಂಜಲಿಕಲ್ ಲೂಥರ್ ಮಿಶನ್, ಗುಂಟೂರ್,[20] ಅಮೇರಿಕನ್ ಮಧುರ ಮಿಶನ್,[21] ಅಮೇರಿಕನ್ ಅರ್ಕಾಟ್ ಮಿಶನ್,[22] ಅಮೇರಿಕನ್ ಬ್ಯಾಪ್ಟಿಸ್ಟ್ ಮಿಶನ್,[23] ಡ್ಯಾನಿಶ್ ಮಿಶನರಿ ಸೊಸೈಟಿ,[24] ಅಮೇರಿಕನ್ ಬ್ಯಾಪ್ಟಿಸ್ಟ್ ತೆಲುಗು ಮಿಶನ್,[25] ಸಿಲೋನ್ ಆ್ಯಂಡ್ ಇಂಡಿಯಾ ಜನರಲ್ ಮಿಶನ್[26] ಮಿಸ್ಸೌರೀ ಇವ್ಯಾಂಜಲಿಕಲ್ ಲೂಥರನ್ ಮಿಶನ್ ಇನ್ ಟ್ರಾವಂಕೂರ್,[27] ಅಮೇರಿಕನ್ ಬ್ಯಾಪ್ಟಿಸ್ಟ್ ಪೋರಿನ್ ಮಿಶನ್ ಸೊಸೈಟಿ[28] ಇತ್ಯಾದಿ ಮಿಶನುಗಳ ಮಿಶನರಿಗಳಿಗೆ ಭಾರತಕ್ಕೆ ಬರಲು ಬ್ರಿಟಿಷ್ ಸರಕಾರ ಅವಕಾಶ ಕಲ್ಪಿಸಿತ್ತು. ಮತ್ತೊಂದೆಡೆ 1918ರಲ್ಲಿ ಕೆಲವೊಂದು ಸ್ವೀಡಿಶ್ ಮಿಶನರಿಗಳಿಗೆ ಪ್ರವೇಶ ನೀಡಬಾರದೆಂದು ಬ್ರಿಟಿಷ್ ಸರಕಾರ, ಭಾರತ ಸರಕಾರಕ್ಕೆ ತಿಳಿಸಿತ್ತು.[29] 1922ರ ಕಾಲಾವಧಿಯಲ್ಲಿ ಮಿಶನರಿಗಳ ಬಗೆಗಿನ ಬ್ರಿಟಿಷ್ ನೀತಿಯಲ್ಲಿ ಇನ್ನೂ ಹಲವಾರು ಬದಲಾವಣೆಗಳಾಗುತ್ತವೆ. ಭಾರತಕ್ಕೆ ಬರಬಹುದಾದಂತಹ ಮಿಶನ್‌ಗಳ ಪಟ್ಟಿಯಲ್ಲಿ ಕೂಡಾ ಬ್ರಿಟಿಷ್ ಸರಕಾರ ತಿದ್ದುಪಡಿಗಳನ್ನು ಮಾಡುವುದನ್ನು ಗಮನಿಸಬಹುದು.[30] ಹೀಗೆ ಯುದ್ಧದ ನಂತರ ವೈರಿ ರಾಷ್ಟ್ರಗಳ ಮಿಶನರಿಗಳ ಬಗ್ಗೆಯೂ ಬ್ರಿಟಿಷರ ನೀತಿ ಸ್ವಲ್ಪ ಮಟ್ಟದಲ್ಲಿ ಉದಾರವಾಗುವುದನ್ನು ಗಮನಿಸಬಹುದು. ಮಿಶನರಿಗಳು ದೀರ್ಘಕಾಲ ಭಾರತದಲ್ಲಿ ನೆಲೆಸಿ ಇಲ್ಲಿನ ಜನರ ಚಿಂತನೆ ಹಾಗೂ ಇತರ ವಿಚಾರಗಳ ಮೇಲೆ ಗಾಢವಾದ ಪ್ರಭಾವ ಬೀರುವುದರಿಂದ ಅವರ ಬಗ್ಗೆ ಬ್ರಿಟಿಷ್ ಸರಕಾರ ಎಚ್ಚರಿಕೆಯ ನಡವಳಿಕೆಯನ್ನು ತೋರ್ಪಡಿಸಿದೆ. ಆದರೆ ತಾತ್ಕಲಿಕ ಭೇಟಿಗಳಿಗೆ ಅಷ್ಟೊಂದು ಅಸಮ್ಮತಿಯನ್ನು ಸೂಚಿಸದಿರುವುದು ಕಂಡುಬರುತ್ತದೆ.

ಬೇರೆ ಬೇರೆ ಸಂದರ್ಭಗಳಲ್ಲಿ ಗಮನಿಸಿರುವಂತೆ ಹಾಗೂ ಬ್ರಿಟಿಷ್ ಸರಕಾರಕ್ಕೆ ದೊರಕಿರುವ ಮಾಹಿತಿಗಳಂತೆ, ಗವರ್ನರ್ ಇನ್ ಕೌನ್ಸಿಲ್, ಬಾಸೆಲ್ ಮಿಶನನ್ನು ಜರ್ಮನ್ ನಿಯಂತ್ರಣದಲ್ಲಿರುವ ಹಾಗೂ ಜರ್ಮನರ ಬಗ್ಗೆ ಸಹಾನುಭೂತಿಯಿರುವ ಸೊಸೈಟಿ ಎಂದು ಕರೆಯಲು ಯಾವುದೇ ಅನುಮಾನ ಬೇಡ ಎಂಬುದಾಗಿ ಹೇಳಿಕೊಂಡಿದೆ. ಆದುದ್ದರಿಂದ ಬಾಸೆಲ್ ಮಿಶನನ್ನು ಪ್ರತಿಯೊಂದು ವಿಚಾರದಲ್ಲೂ ವೈರಿ ಮಿಶನ್ ಎಂದು ಪರಿಗಣಿಸುತ್ತದೆ. ಬಾಸೆಲ್ ಮಿಶನಿನ ಕೇಂದ್ರ ಕಛೇರಿಯು ಸ್ವಿಜರ್‌ಲ್ಯಾಂಡಿನಲ್ಲಿರುವುದರಿಂದ ಅದರ ಅಪಾರವಾದ ಆಸ್ತಿಯನ್ನು ಹೊಸ್ಟೈಲ್ ಫೋರಿನರ್ಸ್ ಆರ್ಡರ್, 1914 [Hostile Foreigners (Trading) order 1914] ರ ನಿಬಂಧನೆಗಳಂತೆ ವ್ಯವಹರಿಸಲು ಸಾಧ್ಯವೇ ಎಂಬುದರ ಬಗ್ಗೆ ಬ್ರಿಟಿಷ್ ಸರಕಾರ ಪರಿಶೀಲನೆಗೆ ಮುಂದಾಗುತ್ತದೆ. ಮಿಶನಿನ ಧಾರ್ಮಿಕೇತರ ವಿಚಾರಗಳಿಗೆ ಸಂಬಂಧಿಸಿದ ಆಸ್ತಿಗಳನ್ನು ಸಾಧ್ಯವಾದರೆ ಮುಟ್ಟುಗೋಲು ಹಾಕಬೇಕು ಎಂಬ ನಿಲುವು ಬ್ರಿಟಿಷ್ ಸರಕಾರದ್ದಾಗಿತ್ತು.[31] ಬಾಸೆಲ್ ಮಿಶನಿನಲ್ಲಿ

ಜರ್ಮನ್ ಅಸ್ತಿತ್ವಗಳು ಹಾಗೂ ಜರ್ಮನ್ ನಿಯಂತ್ರಣವಿರುವುದರಿಂದ ಅದನ್ನು ವೈರಿ ಮಿಶನ್ ಎಂಬುದಾಗಿ ಸಾರಲಾಗುತ್ತದೆ. ಈ ಮಿಶನ್ ನಾಮಾಂಕಿತವಾಗಿ ಮಾತ್ರ ಸ್ವಿಸ್ ನಿಯಂತ್ರಣದಲ್ಲಿದೆ ಎಂದು ಪರಿಗಣಿಸಿದ್ದ ಬ್ರಿಟಿಷ್ ಸರಕಾರ, ಬಾಸೆಲ್ ಮಿಶನ್ ಮುಖ್ಯವಾಗಿ ಅದರ ಕೈಗಾರಿಕಾ ವಿಭಾಗದ ಮೇಲೆ ಅವಲಂಬಿತವಾಗಿರುವುದರಿಂದ, ಅದನ್ನು ಮಾರಾಟ ಮಾಡುವುದರ ಮೂಲಕ, ಮಿಶನಿನ ಶಕ್ತಿಗುಂದಿಸಿ, ಅದು ತಾನಾಗಿಯೇ ಅಥವಾ ಸ್ವಹಿಂಕೆಯೊಂದಿಗೆ ಮಿಶನ್ ಕಾರ್ಯದಿಂದ ಹಿಂತೆಗೆದು ಕೊಳ್ಳುವಂತೆ ಮಾಡುವುದು ಉಚಿತವೆಂಬುದು ಬ್ರಿಟಿಷ್ ಸರಕಾರದ ಚಿಂತನೆಯಾಗಿತ್ತು.[32]

ಬಾಸೆಲ್ ಮಿಶನಿನ ಬಗ್ಗೆ ಸಾರ್ವಜನಿಕ ಪತ್ರಿಕೆಗಳು ವಿಭಿನ್ನವಾದ ಹೇಳಿಕೆಗಳನ್ನು ನೀಡುತ್ತವೆ. ಅದೇ ರೀತಿ ಮಿಶನ್ ಬಗ್ಗೆ ಬೇರೆ ಬೇರೆ ರೀತಿಯ ಉಪಾಪೋಹಗಳು ಸೃಷ್ಟಿಯಾಗಿರುತ್ತವೆ. ಆದರೆ ಈ ಹೇಳಿಕೆಗಳಲ್ಲಿ ತಳಮಟ್ಟದ ಸತ್ಯ ಹಾಗೂ ಬಹಳಷ್ಟು ತಪ್ಪು ಅಭಿಪ್ರಾಯಗಳು ಮಿಶ್ರವಾಗಿವೆ. ನಿಜವಾದ ವಿಚಾರಗಳ ಬಗ್ಗೆ ಹೇಳಿಕೆಯನ್ನು ಕೊಡಬೇಕಾಗುತ್ತದೆ ಎಂದು 'ದಿ ಹರ್ವೆಸ್ಟ್ ಫಿಲ್ಡ್' ವರದಿ ಮಾಡುತ್ತದೆ.[33] ಈ ರೀತಿಯ ಹೇಳಿಕೆಗಳು ಬ್ರಿಟಿಷರು ಬಾಸೆಲ್ ಮಿಶನಿನ ಬಗ್ಗೆ ಕಠಿನ ನಿಲುವುಗಳನ್ನು ತೆಗೆದುಕೊಳ್ಳಲು ಕಾರಣವೆನ್ನಬಹುದು. ಭಾರತದಲ್ಲಿನ ಬ್ರಿಟಿಷ್ ವಸಾಹತು ಸರಕಾರ ಬಾಸೆಲ್ ಮಿಶನನ್ನು ವೈರಿ ಮಿಶನೆಂದು ಪರಿಗಣಿಸುವುದು ಮಾತ್ರವಲ್ಲದೇ ಮುಂಬರುವ ದಿನಗಳಲ್ಲಿ ಅದು ಭಾರತದಲ್ಲಿ ತಾನಾಗಿಯೇ ಮುಚ್ಚಿ ಹೋಗಬೇಕೆನ್ನುವ ನಿರ್ಧಾರವನ್ನು ತಳೆದಿರುತ್ತದೆ. ಅದಕ್ಕಾಗಿ ಬಾಸೆಲ್ ಮಿಶನಿಗೆ ಆಧಾರವಾಗಿರುವ ಕೈಗಾರಿಕೆಗಳನ್ನು ಮುಟ್ಟುಗೋಲು ಹಾಕಬೇಕೆನ್ನುವುದು ಸರಕಾರದ ನಿಲುವಾಗಿರುತ್ತದೆ. ಯುದ್ಧ ಆರಂಭವಾದ ನಂತರ 'ದಿ ಮೆಡ್ರಾಸ್ ರೆಪ್ರಸೆನ್‌ಟೇಟಿವ್ ಕೌನ್ಸಲ್ ಆಫ್ ಮಿಶನ್ಸ್' (The Madras Representative council of Missions) ದಕ್ಷಿಣ ಭಾರತದಲ್ಲಿ ಜರ್ಮನ್ ಮಿಶನರಿಗಳ ಮೇಲೆ ಯುದ್ಧದಿಂದಾಗುವ ಪರಿಣಾಮ ಹಾಗೂ ಅವುಗಳ ಸಹಾಯಕ್ಕೆಂದು ಒಂದು ಕಮಿಟಿಯನ್ನು ರಚಿಸುತ್ತದೆ. ಈ ಕಮಿಟಿಯು ಬಾಸೆಲ್ ಮಿಶನಿನೊಂದಿಗೆ ಬಹಳಷ್ಟು ನಿಕಟ ಸಂಪರ್ಕದಲ್ಲಿದ್ದು, ನೈಜ ವಿಚಾರಗಳ ಬಗ್ಗೆ ಬೆಳಕು ಚೆಲ್ಲುವಷ್ಟು ಶಕ್ತವಾಗಿತ್ತು. ಅದರ ಪ್ರಕಾರ ಬಾಸೆಲ್ ಮಿಶನಿನ ಬಗ್ಗೆ ಅದು ವೈರಿಗಳಿಗೆ ಸಹಾಯ ಮಾಡುತ್ತಿದೆ ಹಾಗೂ ಬ್ರಿಟಿಷರಿಗೆ ಅವಿಧೇಯವಾಗಿದೆ ಎಂಬ ಊಹಾಪೋಹಗಳು ಹರಡಲಾರಂಭಿಸಿದವು. ಆದರೆ ಈ ಮೇಲಿನ ಯಾವುದೇ ಉಹಾಪೋಹಗಳೂ ಸತ್ಯವೆಂದು ಸಾಬೀತಾಗಲಿಲ್ಲ. ಕೆಲವೊಂದು ಮಿಶನರಿಗಳು ವಿವೇಚನೆಯಿಲ್ಲದೆ ತಮ್ಮ ಮೂಲ ರಾಷ್ಟ್ರದ ಬಗ್ಗೆ ಕಾಳಜಿಯ ಮಾತುಗಳಾನ್ನಾಡಿದ್ದಾರೆ. ಆದರೆ ಬಾಸೆಲ್ ಮಿಶನಿನ ಯಾವುದೇ ಮಿಶನರಿಗಳ ವಿರುದ್ಧ ಅವಿಧೇಯತೆಯ ಅಥವಾ ಬ್ರಿಟಿಷರ ವಿರುದ್ಧ ವೈರತ್ವದ ವಿಚಾರಗಳು ಸಾಬೀತಾಗಿಲ್ಲ.[34]

ಬಾಸೆಲ್ ಮಿಶನ್ ಸಂಘವು ಜರ್ಮನ್, ಸ್ವಿಸ್, ಡಚ್ಚ್, ಫ್ರೆಂಚ್, ಬ್ರಿಟಿಷ್ ಇತ್ಯಾದಿ ರಾಷ್ಟ್ರೀಯತೆಯ ಮಿಶನರಿಗಳನ್ನು ಹೊಂದಿತ್ತು. ಆದರೆ ಇದರ ಬಹುಪಾಲು ಮಿಶನರಿಗಳು ಜರ್ಮನರಾಗಿದ್ದು, ಕಾಲಕ್ರಮೇಣ ಅದರ ಹೆಸರು ಕೂಡಾ "ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್" ಎಂದಾಗುತ್ತದೆ. ಇದು ಬಾಸೆಲ್ ಮಿಶನಿನಲ್ಲಿ ಜರ್ಮನರ ಪ್ರಭಾವ ಎಷ್ಟಿತ್ತು ಎಂಬುದನ್ನು ತೋರಿಸುತ್ತದೆ. ಆದುದ್ದರಿಂದ ಬಾಸೆಲ್ ಮಿಶನಿನಲ್ಲಿ ಸಾಕಷ್ಟು ಜರ್ಮನ್ ವಿಚಾರಗಳ ಪ್ರಾಬಲ್ಯವಿದ್ದು, ಮಿಶನಿನ ಪ್ರಮುಖ ಸ್ಥಾನಗಳು ಕೂಡಾ ಅವರ ನಿಯಂತ್ರಣದಲ್ಲೇ ಇದ್ದವು.[35] ಬಾಸೆಲ್ ಮಿಶನ್ ಆಫ್ರಿಕಾದಲ್ಲಿನ ಜರ್ಮನ್ ವಸಾಹತುಗಳಲ್ಲಿ ತನ್ನ ಮಿಶನರಿ ನೆಲೆಗಳನ್ನು ಹೊಂದಿತ್ತು. ಅಲ್ಲಿ ಜರ್ಮನ್ ವಸಾಹತುಶಾಹಿಯ ನೀತಿಯನ್ನು ಪ್ರಬಲವಾಗಿ ವಿರೋಧಿಸಿದ ನಿದರ್ಶನಗಳಿವೆ. ಆದರೆ ಭಾರತದಲ್ಲಿ ಬಾಸೆಲ್ ಮಿಶನ್ ಬ್ರಿಟಿಷ್ ಸರಕಾರಕ್ಕೆ ಬಹಳಷ್ಟು ವಿಧೇಯವಾಗಿತ್ತು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಭಾರತದಲ್ಲಿ ಬಾಸೆಲ್ ಮಿಶನಿನ ಬೆಳವಣಿಗೆಯಲ್ಲಿ ಬ್ರಿಟಿಷ್ ಅಧಿಕಾರಿಗಳ ಪಾತ್ರವನ್ನು ಪ್ರಾರಂಭದಿಂದಲೂ ಕಾಣಬಹುದು. ಹೀಗಿದ್ದರೂ ಮಿಶನಿನಲ್ಲಿದ್ದ ಜರ್ಮನ್ ಪ್ರಾಬಲ್ಯ ಅದಕ್ಕೆ ಅಡ್ಡಿಯಾಯಿತು. ಯಾವಾಗ ಮಿಶನಿನಲ್ಲಿದ್ದ ಜರ್ಮನ್ ಮಿಶನರಿಗಳನ್ನು ತೆಗೆಯಲಾಯಿತೋ, ಮಿಶನಿನಲ್ಲಿದ್ದ ಸ್ವಿಸ್ ಮಿಶನರಿಗಳು ಬಹಳಷ್ಟು ಸಂಕಷ್ಟಕ್ಕೆ ಒಳಗಾಗುತ್ತಾರೆ. ಸ್ವಿಸ್ ಮಿಶನರಿಗಳು ಮಿಶನಿನ ಒಟ್ಟಾರೆ ಕೆಲಸವನ್ನೂ, ಜವಾಬ್ದಾರಿಯ ಕೆಲಸವನ್ನೂ ಹಾಗೂ ಇವರೆಗೆ ನಿರ್ವಹಿಸದ ಕೆಲಸವನ್ನೂ ಮಾಡಬೇಕಾಗಿ ಬರುತ್ತದೆ. ಇದರ ಜೊತೆಗೆ ಮಿಶನರಿಗಳ ಹೋಮ್ ಕಮಿಟಿಯೊಂದಿಗಿನ ಸಂಪರ್ಕವು ಕಡಿದು ಹೋಗುತ್ತದೆ. ಈ ಸಂದರ್ಭದಲ್ಲಿ ಮಿಶನಿನ ಸಂದಿಗ್ಧ ಪರಿಸ್ಥಿತಿಯನ್ನು ಅರಿತ ಮಿಶನಿನ ಸ್ವಿಸ್ ಸ್ನೇಹಿತರು, ಬಾಸೆಲ್ ಮಿಶನಿನ ಸಹಾಯಕ್ಕೆ ಮುಂದಾಗುತ್ತಾರೆ.[36]

ಬ್ರಿಟಿಷ್ ಸರಕಾರ ಜರ್ಮನ್ ಮಿಶನುಗಳನ್ನು ವೈರಿ ಮಿಶನುಗಳೆಂದು ಘೋಷಿಸಿ ಅವುಗಳನ್ನು ದೇಶದಿಂದ ಹೊರಗೆ ಕಳುಹಿಸಿದ ನಂತರ 'ದಿ ಫೋರಿನರ್ಸ್ ಆಕ್ಟ್ 1864' [The Foreigners Act, 1864] ನ್ನು ಬ್ರಿಟಿಷ್ ಭಾರತದಾದ್ಯಂತ ವಿಸ್ತರಿಸುತ್ತದೆ. ಈ ಕಾಯ್ದೆಯನ್ನು 1914 ರ ಆಗಸ್ಟ್‌ನಲ್ಲಿ ಭಾರತದಲ್ಲಿ ಬ್ರಿಟಿಷ್ ಸರಕಾರ ವಿಸ್ತರಿಸುತ್ತದೆ.[37] ವೈರಿ ಮಿಶನ್‌ಗಳ ವಿಚಾರವನ್ನು ಸರಕಾರ ಎರಡು ವಿಭಿನ್ನ ವಿಭಾಗಗಳಲ್ಲಿ ನಿರ್ವಹಿಸಲು ಮುಂದಾಗುತ್ತದೆ. ಅವೆಂದರೆ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಹಾಗೂ ಮಿಶನ್‌ಗಳ ಆಸ್ತಿಗಳಿಗೆ ಸಂಬಂಧಿಸಿದಂತೆ. ವ್ಯಕ್ತಿಗತವಾಗಿ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಮೇಲಿನ ಕಾಯ್ದೆಯ ಮೂಲಕ ಅವರನ್ನು ನಿರ್ವಹಿಸಲು ಸರಕಾರ ಮುಂದಾಗುತ್ತದೆ.[38] ಆದರೆ ಮಿಶನ್ ಆಸ್ತಿಗಳಿಗೆ ಪ್ರತ್ಯೇಕವಾದ ವ್ಯವಸ್ಥೆಗಳನ್ನು ಮಾಡುವುದು ಸರಕಾರಕ್ಕೆ ಅನಿವಾರ್ಯವಾಗುತ್ತದೆ. ಪ್ರಾರಂಭದಲ್ಲಿ ಮಿಶನಿನ ಆಸ್ತಿಯನ್ನು ಟ್ರಸ್ಟಿಗಳಿಗೆ ವರ್ಗಾಯಿಸಿ

ಅದನ್ನು ನೋಡಿಕೊಳ್ಳುವಂತೆ ಕೇಳಿಕೊಳ್ಳುತ್ತದೆ. ಸೂಕ್ತ ಬದಲಿ ವ್ಯವಸ್ಥೆಗಳಾದ ನಂತರ ಅವು ಸೂಕ್ತವಾಗಿದೆ ಹಾಗೂ ಸಮಂಜಸವಾಗಿವೆ ಎಂಬುದನ್ನು ಪರಿಶೀಲಿಸಿ, ಆ ಆಸ್ತಿಗಳನ್ನು ಆ ಸಂಬಂಧಪಟ್ಟ ಸಂಘಟನೆಗಳಿಗೆ ವಹಿಸುವಂತೆ ನಿರ್ದೇಶನವನ್ನು ಸರಕಾರ ನೀಡುತ್ತದೆ. ಆದರೆ ಬಾಸೆಲ್ ಮಿಶನಿನ ಕೈಗಾರಿಕೆಗಳ ವಿಚಾರಗಳು ಬಹಳಷ್ಟು ಕ್ಲಿಷ್ಟತೆಯದ್ದಾಗಿದ್ದು ಬಹು ದೀರ್ಘ ಕಾಲ ಸರಕಾರಕ್ಕೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಒಂದು ಅಂತಿಮ ನಿರ್ಧಾರಕ್ಕೆ ಬರಲು ಸಾಧ್ಯವಾಗುವುದಿಲ್ಲ. ಪ್ರಾರಂಭದಲ್ಲಿ ಬ್ರಿಟಿಷ್ ಸರಕಾರ ಮಿಶನಿನ ಮೇಲೆ ಬಹಳಷ್ಟು ಕಠಿಣ ರೀತಿಯಲ್ಲಿ ವ್ಯವಹರಿಸಬೇಕೆಂದಿತ್ತು ಎಂಬುದು ಅದರ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಆದರೆ ತದನಂತರ ಪ್ರಮುಖ ಬ್ರಿಟಿಷ್ ಮಿಶನರಿ ಸಂಘಟನೆಗಳ ಮಧ್ಯಸ್ಥಿಕೆ, ಕೆಲವು ಪ್ರಮುಖ ವ್ಯಕ್ತಿಗಳಾದಂತಹ ಓಲ್ಡ್‌ಹಾಮ್ [Mr. Oldham], ಮ್ಯಾಕ್‌ಲೀನ್ [Mr.Maclean] ಮತ್ತು ಡಿ.ಜಿ.ಮ್ ಲೈಥ್‌ರವರ [Mr. D.G.M.Leith] ಮಧ್ಯಸ್ಥಿಕೆಗಳಿಂದಾಗಿ ಮಿಶನಿನ ಕೈಗಾರಿಕೆ ಹಾಗೂ ಇತರ ವಿಚಾರಗಳು ಸುಲಲಿತವಾಗಿ ಕೊನೆಗೊಳ್ಳುತ್ತವೆ.

'ದಿ ಫೋರಿನರ್ಸ್ ಆಕ್ಟ್, 1864'ನ್ನು ಬ್ರಿಟಿಷ್ ಸರಕಾರ ಯುದ್ಧದ ಆರಂಭದಲ್ಲಿ ಜಾರಿಗೆ ತಂದರೆ, ಯುದ್ಧದ ತರುವಾಯ ವೈರಿ ದೇಶಗಳ ಮಿಶನರಿಗಳು ಹಾಗೂ ಬೇರೆ ಬೇರೆ ಉದ್ದೇಶಗಳೊಂದಿಗೆ ಬ್ರಿಟಿಷ್ ವಸಾಹತುಗಳಿಗೆ ಬರುವವರನ್ನು ನಿರ್ವಹಿಸಲು ಒಂದು ಶಾಶ್ವತವಾದ ಅಂಶವನ್ನು ಕಾನೂನಿನ ಮಿತಿಯಲ್ಲಿ ಜಾರಿಗೆ ಬರುವಂತೆ ಮಾಡಲು ಪ್ರಯತ್ನಿಸಿದ್ದವು. ಮಿಶನರಿಗಳು ತಮ್ಮ ಶಿಕ್ಷಣ ವ್ಯವಸ್ಥೆಗಳ ಮೂಲಕ ಜನ ಸಾಮಾನ್ಯರ ಮೇಲೆ ಗಾಢವಾದ ಪ್ರಭಾವ ಬೀರಲು ಶಕ್ತರಾಗಿದ್ದರು ಎಂಬುದು ಬ್ರಿಟಿಷರಿಗೆ ಮನವರಿಕೆಯಾಗಿತ್ತು. ಇದಕ್ಕಾಗಿ ಬ್ರಿಟಿಷ್ ಸರಕಾರ ಮೆಮೊರ್‍ಯಾಂಡ [Memoranda] ಗಳನ್ನು ಹೊರಡಿಸುತ್ತದೆ.[39] ಯುದ್ಧ ಆರಂಭವಾದ ನಂತರ ಭಾರತದಲ್ಲಿ ಶೈಕ್ಷಣಿಕ ಹಾಗೂ ಮಿಶನರಿ ಕಾರ್ಯದಲ್ಲಿ ನಿರತರಾಗಿದ್ದ ಬ್ರಿಟಿಷೇತರ ಮಿಶನರಿಗಳ ಮೇಲೆ ಬ್ರಿಟಿಷ್ ಸರಕಾರ ನಿರ್ಬಂಧಗಳನ್ನು ಹೇರುತ್ತದೆ. ಆ ಕಾಲಾವಧಿಯಲ್ಲಿ ಭಾರತ ಪ್ರವೇಶಿಸಲು ಮಿಶನರಿಗಳು ವಿಶೇಷವಾದ ಅನುಮತಿಯನ್ನು ಪಡೆಯಬೇಕಾಗಿತ್ತು. ಮತ್ತೊಂದೆಡೆ ಸರಕಾರ ದೇಶದಿಂದ ಹೊರ ಹೋಗುವ ಹಾಗೂ ಒಳ ಬರುವ ಪತ್ರಗಳ ಮೇಲೆ ಪರಿಶೀಲನಾಧಿಕಾರದ ನಿಯಮವನ್ನು [censorship] ಜಾರಿಗೆ ತರುತ್ತದೆ. ತಂತಿಗಳ [coded cables] ಬಳಕೆಗೆ ಅವಕಾಶವನ್ನೇ ಕಲ್ಪಿಸಲಿಲ್ಲ.[40] ಆಸ್ಟ್ರಿಯಾದ ಹಾಗೂ ಜರ್ಮನಿಯ ಮಿಶನರಿಗಳು ಜಿಲ್ಲಾ ಕಮಿಷನರ್ ಕಛೇರಿಯಲ್ಲಿ ಅಥವಾ ಜಿಲ್ಲಾ ಕಲೆಕ್ಟರ್ಸ್ ಕಛೇರಿಯಲ್ಲಿ ರಿಜಿಸ್ಟರ್ [Register] ಮಾಡಿಕೊಳ್ಳುವಂತೆ ಸರಕಾರ ಆಜ್ಞಾಪಿಸುತ್ತದೆ. ಬ್ರಿಟಿಷ್ ಸರಕಾರದ ಆಸಕ್ತಿಗಳಿಗೆ ಯಾವುದೇ ರೀತಿಯಲ್ಲಿ ಹಾನಿ

ಮಾಡುವುದಿಲ್ಲ ಎಂಬ ದಾಖಲೆಗೆ ಈ ಮಿಶನರಿಗಳು ಸಹಿ ಹಾಕಬೇಕಿತ್ತು. ಅವರಲ್ಲಿದ್ದ ಎಲ್ಲಾ ರೀತಿಯ ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು. ಮಿಶನರಿಗಳ ಚಲನವಲನಗಳ ಮೇಲೆ ತೀವ್ರ ನಿಗಾವನ್ನು ಇರಿಸಲಾಗುತ್ತದೆ. ಅವರ ಪತ್ರಗಳನ್ನು ಪರಿಶೀಲಿಸಲಾಗುತ್ತಿತ್ತು. 1915ರಲ್ಲಿ "ಲೂಸಿತಾನೀಯ" ವನ್ನು ಜರ್ಮನರು ಮುಳುಗಿಸಿದ ನಂತರದಲ್ಲಿ ಎಲ್ಲಾ ಜರ್ಮನ್ ನಾಗರಿಕರು ಹಾಗೂ ಮಿಶನರಿಗಳನ್ನು ಸರಹದ್ದಿನಲ್ಲಿ [interned] ಬಂಧನಕ್ಕೊಳಪಡಿಸಲಾಗುತ್ತದೆ. ಕೆಲವೇ ಪ್ರಾಯಸ್ಥ ಜರ್ಮನರನ್ನು ಮುಕ್ತಗೊಳಿಸಲಾಗಿತ್ತು.[41] ಹೀಗೆ ಜರ್ಮನ್ ಸರಕಾರವು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ದಿನೇ ದಿನೇ ಮುಂದುವರಿಯುತ್ತಿದ್ದ ಹಾಗೆ, ಇತ್ತ ದಿನೇ ದಿನೇ ಜರ್ಮನ್ ಮಿಶನರಿಗಳ ಮೇಲಿನ ಬ್ರಿಟಿಷರ ನೀತಿಗಳು ಕಠಿಣವಾಗುತ್ತವೆ. ನಂತರದ ಕಾಲಾವಧಿಯಲ್ಲಿ ಬ್ರಿಟಿಷ್ ಸರಕಾರ ಯುದ್ಧದಲ್ಲಿ ಭಾಗವಹಿಸದೇ ತಟಸ್ಥವಾಗಿದ್ದ ರಾಷ್ಟ್ರಗಳ ಮಿಶನರಿಗಳ ಮೇಲೂ ಸ್ವಲ್ಪ ಮಟ್ಟಿನ ನಿರ್ಬಂಧಗಳನ್ನು ಹೇರುತ್ತದೆ.

ಈ ಮೇಲಿನ ಕ್ರಮಗಳನ್ನು ಬ್ರಿಟಿಷ್ ಸರಕಾರ ಯುದ್ಧದ ಸಂದರ್ಭದಲ್ಲಿ ಬ್ರಿಟಿಷೇತರ ಮಿಶನರಿ ಸಂಘಟನೆಗಳನ್ನು ಹಾಗೂ ಮಿಶನರಿಗಳನ್ನು ನಿಯಂತ್ರಿಸುವ ಸಲುವಾಗಿ ಅನುಸರಿಸಿತ್ತು. ತದನಂತರ ಬ್ರಿಟಿಷ್ ಸರಕಾರ ಬ್ರಿಟಿಷೇತರ ಮಿಶನ್‌ಗಳತ್ತ ಅನುಸರಿಸಬೇಕಾದ ದೀರ್ಘಾವಧಿ ಕ್ರಮಗಳ ಬಗ್ಗೆ ಚಿಂತನೆ ನಡೆಸುತ್ತದೆ. ಈ ಉದ್ದೇಶದೊಂದಿಗೆ ಲಂಡನ್‌ನಲ್ಲಿರುವ ಇಂಡಿಯಾ ಆಫೀಸಿನಲ್ಲಿ 1917 ರ ಕಾಲಾವಧಿಯಲ್ಲಿ 'ವಿದೇಶಿ ಹಾಗೂ ವೈರಿ ಮಿಶನ್' [the enemy and alien missions] ಗಳ ಕಡೆಗೆ ಯುದ್ಧದ ನಂತರ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಚರ್ಚೆಯಾಗುತ್ತದೆ. ಕೊನೆಯದಾಗಿ ವೈರಿ ದೇಶಗಳ ಹಾಗೂ ವಿದೇಶಿ ಮಿಶನರಿ ಸಂಘಗಳ ಬಗ್ಗೆ ಬ್ರಿಟನಿನ ಮತ್ತು ಐರ್ಲೆಂಡಿನ ಮಿಶನರಿ ಸಂಘಗಳು ಹಾಗೂ ಬ್ರಿಟಿಷ್ ಸರಕಾರ ಒಂದು ನಿಗದಿತ ನೀತಿಯನ್ನು ಒಪ್ಪಿಕೊಳ್ಳುತ್ತವೆ. ಈ ಹೊಸದಾದ ನೀತಿಯನ್ನು 'ಮೆಮೊರ್‍ಯಾಂಡ' ಎ, ಬಿ ಮತ್ತು ಸಿ ಎಂಬ ಕಾನೂನು ರೂಪ ದಾಖಲೆಗಳಲ್ಲಿ ನಿರೂಪಿಸಲಾಗುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ 'ದಿ ಕಾನ್ಫರೆನ್ಸ್ ಆಫ್ ಮಿಶನರಿ ಸೊಸೈಟಿಸ್ ಇನ್ ಗ್ರೇಟ್ ಬ್ರಿಟನ್ ಆ್ಯಂಡ್ ಐರ್ಲೆಂಡ್'[42] [The conference of missionary societies in Great Britain and Ireland] ಮತ್ತು 'ದಿ ಫಾರಿನ್ ಮಿಶನ್ಸ್ ಕಾನ್ಫರೆನ್ಸ್ ಆಫ್ ನಾರ್ತ್ ಅಮೇರಿಕಾ'[43] [The Foreign Missions conference of North America] ದೊಂದಿಗೆ ಚರ್ಚಿಸುತ್ತದೆ. ಈ 'ಮೆಮೊರ್‍ಯಾಂಡ' ಕ್ಕೆ ಸಂಬಂಧಿಸಿದಂತೆ ಫಾರಿನ್ ಮಿಶನ್ಸ್ ಕಾನ್ಫರೆನ್ಸ್ ಆಫ್ ನಾರ್ತ್ ಅಮೇರಿಕಾ ತಾನು ಇದನ್ನು ಜಾರಿಗೆ ತರಲು ಪೂರ್ಣ ಸಹಕಾರ ನೀಡುವುದಾಗಿ ಘೋಷಿಸುತ್ತದೆ.[44] ಮೆಮೊರ್‍ಯಾಂಡಗಳು ಭಾರತದಲ್ಲಿ

ಪರೋಪಕಾರಿ, [Philanthropic] ಶಿಕ್ಷಣ ಹಾಗೂ ಮಿಶನರಿ ಕಾರ್ಯವನ್ನು ನಡೆಸಲು ಇಚ್ಛಿಸುವ ವಿದೇಶೀಯರಿಗೆ ಭಾರತ ಪ್ರವೇಶಕ್ಕೆ ಸಂಬಂಧಿಸಿದಂತೆ ಇರುವ ಕಾನೂನುಗಳಾಗಿವೆ. 'ಮೆಮೊರ್ಯಾಂಡ-ಎ' ಯು ಸರಕಾರದಿಂದ ಮಾನ್ಯತೆ ಪಡೆದ ಪ್ರೊಟೆಸ್ಟೆಂಟ್ ಕ್ರೈಸ್ತ ಸಂಘಗಳಿಗೆ ಸಂಬಂಧಿಸಿದ್ದಾಗಿದ್ದು, 'ಮೆಮೊರ್ಯಾಂಡ-ಬಿ' ಯು ರೋಮನ್ ಕ್ಯಾಥೊಲಿಕ್ ಸಂಘಗಳಿಗೆ ಸಂಬಂಧಿಸಿದ್ದಾಗಿದ್ದು, 'ಮೆಮೊರ್ಯಾಂಡ-ಸಿ' ಯು ವೈಯಕ್ತಿಕ ಹಾಗೂ ಮಾನ್ಯ ಮಾಡದ ಇತರ ಕ್ರೈಸ್ತ ಸಂಘಗಳಿಗೆ ಸಂಬಂಧಿಸಿದ್ದಾಗಿದೆ. 1919ರಲ್ಲಿ ಪ್ರಥಮ ಬಾರಿಗೆ 'ಮೆಮೊರ್ಯಾಂಡ'ಗಳನ್ನು ಜಾರಿಗೆ ತಂದ ಬ್ರಿಟಿಷ್ ಸರಕಾರ ಅದೇ ವರ್ಷ ಮೇ 1919ರಲ್ಲಿ ಅವನ್ನು ಮರು ಮುದ್ರಿಸುತ್ತದೆ. ತದನಂತರ ಅವುಗಳಲ್ಲಿ ಸ್ವಲ್ಪ ಬದಲಾವಣೆಗಳೊಂದಿಗೆ ಕ್ರಮವಾಗಿ 1921, 1940 ಹಾಗೂ 1942ರಲ್ಲಿ ಪರಿಷ್ಕರಿಸಿ ಜಾರಿಗೆ ತರುತ್ತದೆ.[45] ಇಷ್ಟು ಮಾತ್ರವಲ್ಲದೆ ಬ್ರಿಟಿಷ್ ಸರಕಾರ ಮಿಶನರಿ ಸೊಸೈಟಿಗಳನ್ನು "ಅಂಗೀಕರಿಸಲ್ಪಟ್ಟ" [Recognised] ಹಾಗೂ "ಅಂಗೀಕರಿಸಲ್ಪಡದ" [Unrecognised] ಎಂಬ ಎರಡು ಪಟ್ಟಿಗಳಲ್ಲಿ ವಿಂಗಡಿಸುತ್ತದೆ.

ಬಾಸೆಲ್ ಮಿಶನಿನ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, ಅದು ಬಹುಪಾಲು ಸ್ವಿಸ್ ಮೂಲದ್ದಾಗಿದ್ದರೂ, ಅದರಲ್ಲಿಯೂ ಸರಕಾರ ಜರ್ಮನರ ಬಹುಪಾಲು ಅಸ್ತಿತ್ವ ಹಾಗೂ ನಿಯಂತ್ರಣವನ್ನು ಗಮನಿಸುತ್ತದೆ. ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳಲ್ಲಿನ ಎಲ್ಲಾ ಜರ್ಮನರನ್ನು ತೆಗೆದು ಹಾಕಿ, ಕೈಗಾರಿಕೆಗಳು ಕೇವಲ ಸ್ವಿಸರ ಮೇಲ್ವಿಚಾರಣೆಯಲ್ಲಿ ಮುಂದುವರಿಯುವಂತಾಗಲು "ದಿ ಹೊಸ್ಟೈಲ್ ಫಾರಿನರ್ಸ್ (ಟ್ರೇಡಿಂಗ್) ಆಕ್ಟ್ ಆಫ್ 1914" [The Hostile foreigners (trading) Act of 1914] ನ ನಿಬಂಧನೆಗಳ ಅನ್ವಯ ಕೈಗಾರಿಕೆಗಳಿಗೆ ಅನುಮತಿಯನ್ನು ನೀಡುತ್ತದೆ. ಕೈಗಾರಿಕೆಗಳ ಲೆಕ್ಕ ಪತ್ರಗಳ ಪರಿಶೀಲನೆಗೆ ಬ್ರಿಟಿಷ್ ಸರಕಾರ ತನ್ನ ಒಬ್ಬ ಅಧಿಕಾರಿಯನ್ನೂ ನೇಮಿಸುತ್ತದೆ.[46] ಬ್ರಿಟಿಷ್ ಹಡಗಾದ 'ಎಸ್.ಎಸ್.ಅಪಾಪ'ವನ್ನು [Apapa] ಜರ್ಮನ್ ಜಲಾಂತರ್ಗಾಮಿ ಮುಳುಗಿಸಿದ ಸಂದರ್ಭದಲ್ಲಿ, ಈ ಘಟನೆಯನ್ನು 'ಬಾಸೆಲ್ ಮಿಶನ್ ಟ್ರೇಡಿಂಗ್ ಸೊಸೈಟಿ' ಯ ನಾಲ್ಕು ಮಂದಿ ಸ್ವಿಸ್ ಸಹಾಯಕರು ಗೋಲ್ಡ್ ಕೋಸ್ಟ್‌ನಲ್ಲಿ (ಆಫ್ರಿಕಾ) ಸಂಭ್ರಮಿಸಿದ ಘಟನೆ ಬ್ರಿಟಿಷ್ ಸರಕಾರಕ್ಕೆ ಬಾಸೆಲ್ ಮಿಶನಿನ ಬಗ್ಗೆಗಿರುವ ಅನುಕಂಪವನ್ನು ನಾಶ ಮಾಡುತ್ತದೆ. ಈ ಕಾರಣದಿಂದ ಬಾಸೆಲ್ ಮಿಶನಿನೊಂದಿಗಿನ ಎಲ್ಲಾ ರೀತಿಯ ವ್ಯವಹಾರವನ್ನು ಕೊನೆಗಾಣಿಸಿ, ಬ್ರಿಟಿಷ್ ವಸಾಹತುಗಳಲ್ಲಿನ ಬಾಸೆಲ್ ಮಿಶನಿನ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ರದ್ದುಗೊಳಿಸುತ್ತದೆ. ಮಾತ್ರವಲ್ಲದೇ ಬಾಸೆಲ್ ಟ್ರೇಡಿಂಗ್ ಸೊಸೈಟಿಯ ವ್ಯವಹಾರವನ್ನು ಮುಚ್ಚಿ ಬಿಡಲು ನಿರ್ಧರಿಸುತ್ತದೆ.[47]

ಮಿಶನ್ ಬಗ್ಗೆ ಪತ್ರಿಕೆಗಳ ಧೋರಣೆ:

ಯುದ್ಧ ಆರಂಭವಾಗುತ್ತಿದ್ದಂತೆ ಮೆಡ್ರಾಸ್ ಪ್ರೆಸಿಡೆನ್ಸಿಯಲ್ಲಿನ ಬ್ರಿಟಿಷ್ ಪರವಾಗಿದ್ದ ಕೆಲವು ಪತ್ರಿಕೆಗಳು ಜರ್ಮನ್ ಮಿಶನ್‌ಗಳನ್ನು ಅನುಮಾನದ ದೃಷ್ಟಿಯಿಂದ ಗಮನಿಸಿ ಅವುಗಳ ವಿರುದ್ಧ ಬ್ರಿಟಿಷ್ ಸರಕಾರ ಕಠಿಣ ಕ್ರಮ ಕೈಗೊಳ್ಳುವಂತೆ ಬೇಡಿಕೆ ಮಂಡಿಸುತ್ತದೆ. ಕೆಲವು ಪತ್ರಿಕೆಗಳು ಬಾಸೆಲ್ ಮಿಶನಿನ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರುವಂತೆ ಒತ್ತಾಯಿಸುತ್ತವೆ. ಈ ಎಲ್ಲಾ ಪತ್ರಿಕೆಗಳು ಬ್ರಿಟಿಷ್ ಪರವಾಗಿದ್ದ ಪತ್ರಿಕೆಗಳಾಗಿದ್ದು, ಯುದ್ಧದ ಕಾಲಾವಧಿಯಲ್ಲಿ ಬ್ರಿಟಿಷ್ ವಿರೋಧಿಗಳನ್ನು ಖಂಡಿಸುತ್ತಾ ಭಾರತದಲ್ಲಿನ ಬ್ರಿಟಿಷ್ ಸರಕಾರಕ್ಕೆ ತಮ್ಮ ಬೆಂಬಲವನ್ನು ನೀಡುತ್ತವೆ. ಈ ಬೆಂಬಲವನ್ನು ಬಳಸಿಕೊಂಡು ಬ್ರಿಟಿಷ್ ಸರಕಾರ ಬಾಸೆಲ್ ಮಿಶನಿನ ಮೇಲೆ ನಿರ್ಬಂಧಕ್ಕೆ ಮುಂದಾಗುತ್ತದೆ. 'ಇಂಡಿಯನ್ ಪ್ಯಾಟ್ರಿಯೋಟ್' [Indian patriot] ಎಂಬ ಪತ್ರಿಕೆಯು ಈ ರೀತಿ ವರದಿ ಮಾಡುತ್ತದೆ. ಜರ್ಮನ್ ಮಿಶನರಿಗಳು ಜರ್ಮನ್ ಪರವಾಗಿದ್ದು, ಬ್ರಿಟಿಷ್ ವಿರೋಧಿಗಳಾಗಿದ್ದಾರೆ. ದೇಶಭಕ್ತರಾಗಿರುವ ಅವರು ಯುದ್ಧದ ಕಾಲದಲ್ಲಿ ಅವರ ದೇಶಕ್ಕೆ ಯಾವ ರೀತಿಯಲ್ಲಾದರೂ ಸಹಾಯ ಮಾಡಲು ಸಿದ್ಧರಾಗಿರುತ್ತಾರೆ. ಅವರು ಉತ್ತಮ ಜನರಾಗಿದ್ದು, ಯುದ್ಧದ ಸಂದರ್ಭದಲ್ಲಿ ಮಾತ್ರ ಅವರನ್ನು ನಂಬುವುದು ಉಚಿತವಲ್ಲ ಎಂಬುದಾಗಿ ವರದಿ ಮಾಡುತ್ತದೆ.[48] 'ಸುದರ್ಶಿನಿ' [Sudarshini] ಎಂಬ ತೆಲುಗು ಪತ್ರಿಕೆಯು ಜರ್ಮನ್ ಮಿಶನರಿಗಳು ಯುದ್ಧದ ಸಂದರ್ಭದಲ್ಲಿ ಜರ್ಮನರ ಗೂಢಾಚಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸುತ್ತದೆ.[49] ಪತ್ರಿಕೆಗಳಾದ 'ವೆಸ್ಟರ್ನ್ ಸ್ಟಾರ್' [Western star] ಮತ್ತು 'ಕೊಚ್ಚಿನ್ ಆರ್ಗಸ್' [Kochin Argus] ಎಂಬ ಎರಡು ಪತ್ರಿಕೆಗಳು, ಜರ್ಮನ್ ಮಿಶನರಿಗಳು ಜರ್ಮನ್ ವಿಜಯದ ಹಾಗೂ ಬ್ರಿಟಿಷ್ ಸೋಲಿನ ವಾರ್ತೆಯನ್ನು ಎಲ್ಲೆಡೆ ಹರಡುತ್ತಿವೆ. ಜೊತೆಗೆ ಸ್ಥಳೀಯ ಜನರಲ್ಲಿ ಜರ್ಮನ್ ಪರವಾದ ಭಾವನೆಗಳನ್ನು ಬಿತ್ತುತ್ತಿದ್ದಾರೆ ಎಂಬುದಾಗಿ ಆರೋಪಿಸಿದೆ. ಈ ಎರಡೂ ಪತ್ರಿಕೆಗಳು ಬಾಸೆಲ್ ಮಿಶನರಿಗಳ ವಿರುದ್ಧ ಬ್ರಿಟಿಷ್ ಸರಕಾರ ಅನುಸರಿಸಿರುವ ಉದಾರಿ ಕ್ರಮಗಳನ್ನು ಖಂಡಿಸುತ್ತಾ, ಬಾಸೆಲ್ ಮಿಶನರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿವೆ. ವೆಸ್ಟರ್ನ್ ಸ್ಟಾರ್ ವರದಿ ಮಾಡುವಂತೆ ಮಿಲಿಟರಿ ವಯಸ್ಸಿನ ಅಥವಾ ವಯಸ್ಸಿನಲ್ಲದೇ ಇರುವ ಪ್ರತಿಯೊಬ್ಬ ವೈರಿ ದೇಶದ ಪ್ರಜೆಯು ಭಾರತಕ್ಕೆ ಹಾಗೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಾಕಷ್ಟು ಸಂಕಷ್ಟವನ್ನು ತಂದೊಡ್ಡಬಹುದು. ಆದುದರಿಂದ ಅವರ ಮೇಲೆ ನಿರ್ಬಂಧವನ್ನು ಹೇರಬೇಕೆಂದು ಒತ್ತಾಯಿಸುತ್ತದೆ.[50] ಕೊಚ್ಚಿನ್ ಆರ್ಗಸ್ ವರದಿ ಮಾಡುವಂತೆ ಯಾವೆಲ್ಲ ಪ್ರದೇಶದಲ್ಲಿ ಜರ್ಮನ್ ಮಿಶನರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೋ, ಆ ಪ್ರದೇಶಗಳಲ್ಲಿ ಜರ್ಮನ್ ವಿಜಯದ ಹಾಗೂ

ಬ್ರಿಟಿಷ್, ಫ್ರೆಂಚ್ ಸೋಲಿನ ವಾರ್ತೆಗಳು ಪ್ರಸಾರಗೊಳ್ಳುತ್ತಿವೆ. ಆದುದರಿಂದ ಅವರೆಲ್ಲರ ವಿರುದ್ಧ ಯಾವುದೇ ವಿನಾಯಿತಿ ಇಲ್ಲದೇ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಅದು ತಿಳಿಸುತ್ತದೆ.[51] ದೇಶದಲ್ಲಿ ಇನ್ನೂ ಉಳಿದಿರುವ ಜರ್ಮನರು ಯಾವುದೇ ಸಂದರ್ಭದಲ್ಲಿ ದೇಶಕ್ಕೆ ಅಪಾಯಕಾರಿಗಳಾಗಬಹುದು. ಸಾರ್ವಜನಿಕ ಶಾಂತಿ ಮತ್ತು ಭದ್ರತೆಯ ಕಾರಣದಿಂದ ಜರ್ಮನರೆಲ್ಲರನ್ನೂ ಬಂಧಿಸಬೇಕಾಗಿದೆ ಎಂದು 'ಮೆಡ್ರಾಸ್ ಫಾರ್ಟ್‌ನೈಟ್‌ಲೀ' [Madras Fortnightly] ವರದಿ ಮಾಡುತ್ತದೆ.[52] ಒಬ್ಬನೇ ಜರ್ಮನನನ್ನು ಭಾರತದಲ್ಲಿ ಮುಂದುವರಿಯಲು ಬಿಡುವುದು ಬಹಳಷ್ಟು ಅಪಾಯಕಾರಿಯಾಗಿದ್ದು, ಜರ್ಮನರೆಲ್ಲರು ಬ್ರಿಟಿಷ್ ವಿರೋಧಿಗಳಾಗಿದ್ದಾರೆ ಎಂದು ವರದಿ ಮಾಡಿರುವ 'ಜನಾನುಕುಲಮ್' ಪತ್ರಿಕೆಯು ಎಲ್ಲಾ ಜರ್ಮನರನ್ನು ಭಾರತದಿಂದ ತೆಗೆದು ಹಾಕಬೇಕು ಎಂದು ವಾದಿಸಿದೆ.[53] ಈ ಮೇಲಿನ ಎಲ್ಲಾ ಪತ್ರಿಕೆಗಳು ಜರ್ಮನರ ಮೇಲೆ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ವಾದಿಸಿವೆ ಮಾತ್ರವಲ್ಲದೇ, ತಕ್ಷಣದಲ್ಲಿ ಬಾಸೆಲ್ ಮಿಶನರಿಗಳನ್ನು ದೇಶದಿಂದ ಹೊರ ಹಾಕಬೇಕು ಎಂಬ ಬೇಡಿಕೆಯನ್ನು ಮಂಡಿಸಿವೆ. ಭಾರತದಲ್ಲಿರುವ ವೈರಿ ವಿದೇಶೀಯರನ್ನು ಪ್ರತ್ಯೇಕಿಸಬೇಕೆಂಬ ಬೇಡಿಕೆ ಭಾರತದಾದ್ಯಂತ ಇದ್ದು, ಅಂತಹ ಎಲ್ಲಾ ವಿದೇಶೀಯರನ್ನು ಶೀಘ್ರದಲ್ಲಿ ಬಂಧಿಸುವಂತೆ ಸರಕಾರ ಆಜ್ಞೆ ಹೊರಡಿಸುವುದು ಎಂದು ಹರ್ಷ ವ್ಯಕ್ತಪಡಿಸಿರುವ, 'ವೆಸ್ಟ್ ಕೋಸ್ಟ್ ಸ್ಪೆಕ್ಟೇಟರ್' [West coast spectator] ಇದು ಎಲ್ಲರಿಗೂ ಸಮಾಧಾನವನ್ನು ತಂದು ಕೊಡಲಿದೆ ಎಂದು ವರದಿ ಮಾಡುತ್ತದೆ. ಜೊತೆಗೆ ವೈರಿ ದೇಶದ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬರನ್ನು ಬಂಧಿಸಬೇಕಿದೆ ಎಂದು ಪತ್ರಿಕೆ ಹೇಳುತ್ತದೆ.[54] ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಾಸೆಲ್ ಮಿಶನರಿಗಳು ಜರ್ಮನ್ ಪರವಾಗಿದ್ದು ಅವರೆಲ್ಲರನ್ನು ತಕ್ಷಣದಲ್ಲಿ ಬಂಧಿಸಬೇಕು ಹಾಗೂ ಅವರ ರಾಷ್ಟ್ರಗಳಿಗೆ ಕಳುಹಿಸಬೇಕು ಎಂಬುದು ಬಹುಪಾಲು ಪತ್ರಿಕೆಗಳ ಒಕ್ಕೊರಲಿನ ಬೇಡಿಕೆಯಾಗಿತ್ತು.

ಹೀಗೆ ಯುದ್ಧ ಆರಂಭವಾಗುತ್ತಿದ್ದಂತೆ ಜರ್ಮನ್ ಮಿಶನರಿಗಳ ಮೇಲೆ ನಿರ್ಬಂಧ ವಿಧಿಸುವಂತೆ ಬ್ರಿಟಿಷ್ ಪರವಾಗಿದ್ದ ಈ ಪತ್ರಿಕೆಗಳು ಪ್ರಬಲ ಬೇಡಿಕೆ ಮಂಡಿಸುತ್ತದೆ. ಜಾಗತಿಕ ಯುದ್ಧ ಆರಂಭವಾದ ನಂತರ ಬ್ರಿಟಿಷ್ ಸರಕಾರ ಬಾಸೆಲ್ ಮಿಶನಿನ ಮೇಲೆ ಕ್ರಮಕೈಗೊಳ್ಳಲು ಚಿಂತಿಸುತ್ತಿರುವಾಗಲೇ, ಪತ್ರಿಕೆಗಳು ಹುಟ್ಟುಹಾಕಿದ ಊಹಾಪೋಹದ ವರದಿಗಳು ಬ್ರಿಟಿಷ್ ಸರಕಾರದ ನಿರ್ಧಾರ ಹಾಗೂ ನೀತಿಗಳು ಇನ್ನೂ ಬಲಗೊಳ್ಳುವಂತೆ ಮಾಡುತ್ತವೆ. ಬಾಸೆಲ್ ಮಿಶನರಿಗಳು ಬ್ರಿಟಿಷ್ ವಿರೋಧಿಗಳಾಗಿದ್ದಾರೆಂದು ಹೇಳಿರುವ ಈ ಪತ್ರಿಕೆಗಳು ತಮ್ಮ ಪ್ರಬಲವಾದ ಜರ್ಮನ್ ವಿರೋಧಿ ಹೇಳಿಕೆಗಳನ್ನು ವ್ಯಕ್ತಪಡಿಸುವುದರ ಮೂಲಕ ಮಿಶನರಿಗಳನ್ನು ಇಕ್ಕಟ್ಟಿನ ಪರಿಸ್ಥಿತಿಗೆ ಸಿಲುಕಿಸುತ್ತವೆ. ಮತ್ತೊಂದೆಡೆ ಈ ಊಹಾಪೋಹದ ವರದಿಗಳು ಬ್ರಿಟಿಷರು ಬಾಸೆಲ್ ಮಿಶನನ್ನು ವೈರಿ ಮಿಶನೆಂದು ಘೋಷಿಸಿ ಅದರ ಮೇಲೆ ಕಠಿಣ ಕ್ರಮಕೈಗೊಳ್ಳಲು ಕಾರಣವಾದವು ಎನ್ನಬಹುದು.

ಬಳ್ಳಾರಿ ಕ್ಯಾಂಪ್‌ನಲ್ಲಿ ಬಾಸೆಲ್ ಮಿಶನರಿಗಳು:

ಬಾಸೆಲ್ ಮಿಶನಿನ ಬಹುಪಾಲು ಮಿಶನರಿಗಳನ್ನು ಬಳ್ಳಾರಿ ಕ್ಯಾಂಪ್‌ನಲ್ಲಿರಿಸಲಾಗಿತ್ತು. ಇಲ್ಲಿ ಈ ಮಿಶನರಿಗಳಿಗೆ ಪ್ರತಿ ತಿಂಗಳು ಜೀವನಾಧಾರ ಭತ್ಯೆಗಳನ್ನು (Subsistence allowance) ಪ್ರತಿ ವಯಸ್ಕ ಮಿಶನರಿಗೆ 75 ರೂಪಾಯಿ ಹಾಗೂ ಪ್ರತಿ ಮಗುವಿಗೆ 15 ರೂಪಾಯಿಯಂತೆ ನೀಡಲಾಗುತಿತ್ತು.[55] ಪ್ರಾರಂಭದಲ್ಲಿ ಸರಕಾರ ವಿದ್ಯುತ್ (lighting), ನೀರು ಹಾಗೂ ಸಂರಕ್ಷಣಾ ವೆಚ್ಚ (Conservancy) ವನ್ನು ಮಿಶನರಿಗಳೇ ಸ್ವತಃ ಭರಿಸಬೇಕೆಂದು ಹೇಳುತ್ತದೆ. ಮಿಶನರಿಗಳು ಈ ಮೊತ್ತವನ್ನು ಅವರ ತಿಂಗಳ ಭತ್ಯೆಯಿಂದ ನೀಡಬೇಕಿತ್ತು.[56] ಆದರೆ ಸರಕಾರ ಈ ಮೇಲಿನ ನಿರ್ಧಾರವನ್ನು ಬದಲಾಯಿಸಿ ವಿದ್ಯುತ್, ನೀರು ಹಾಗೂ ಸಂರಕ್ಷಣ ವೆಚ್ಚವನ್ನು ಬಾಸೆಲ್ ಮಿಶನಿನ ಕೈಗಾರಿಕೆಗಳ ಲಾಭಾಂಶದಿಂದ ಭರಿಸಬೇಕೆಂದು ಆಜ್ಞೆ ಮಾಡುತ್ತದೆ.[57] ಮತ್ತೊಂದೆಡೆ ಕ್ಯಾಂಪಿನಲ್ಲಿರುವ ಮಿಶನರಿಗಳ ಮಕ್ಕಳಿಗೆ ನಿಗದಿಪಡಿಸಿರುವ 15 ರೂಪಾಯಿ ಜೀವನಾಧಾರ ಮೊತ್ತ ಸಮಂಜಸವಾದುದಲ್ಲವೆಂದು ಗಮನಿಸಿ, ಸರಕಾರದ ಗಮನಕ್ಕೆ ತರಲು ನಿರ್ಧರಿಸುತ್ತಾರೆ. ಈ ವಿಚಾರವಾಗಿ ಮಿಶನರಿಗಳ ಪರವಾಗಿ ರೆ. ಶೊಶ್ಶರ್ (Rev. Schosser) ಅವರು ಬಳ್ಳಾರಿ ಕ್ಯಾಂಪ್‌ನಿಂದ 14ನೇ ಅಕ್ಟೋಬರ್ 1915ರಂದು ಬಳ್ಳಾರಿಯ ಜಿಲ್ಲಾ ಮ್ಯಾಜಿಸ್ಟ್ರೇಟರ್ ಮೂಲಕ, ಮದ್ರಾಸ್ ಸರಕಾರಕ್ಕೆ ಪತ್ರವೊಂದನ್ನು ಬರೆದು ಮಕ್ಕಳಿಗೆ ನಿಗದಿಪಡಿಸಿರುವ ಜೀವನಾಧಾರ ಭತ್ಯೆಯನ್ನು 15 ರೂಪಾಯಿಗಳಿಂದ 25 ರೂಪಾಯಿಗಳಿಗೆ ಏರಿಸಬೇಕೆಂದು ಬೇಡಿಕೆಯನ್ನು ಮಂಡಿಸುತ್ತಾರೆ. ರೆ. ಶೊಶ್ಶರ್‌ರವರ ಬೇಡಿಕೆಯನ್ನು ಮನ್ನಿಸಿದ ಮದ್ರಾಸ್ ಸರಕಾರ ಮಕ್ಕಳ ಜೀವನಾಧಾರ ಭತ್ಯೆಯನ್ನು ರೂಪಾಯಿ 15ರಿಂದ ರೂಪಾಯಿ 25ಕ್ಕೆ ಏರಿಸುತ್ತದೆ.[58] ಬ್ರಿಟಿಷ್ ಸರಕಾರ ತನ್ನ ಅದೇಶದಂತೆ ಮಿಶನರಿಗಳಿಗೆ ಪ್ರಾರಂಭದಿಂದ ಜೀವನಾಧಾರ ಭತ್ಯೆಯನ್ನು ನೀಡಲಿಲ್ಲ. ಮತ್ತೊಂದೆಡೆ ಸರಕಾರವು ಕೆಲವು ಮಿಶನರಿಗಳಿಗೆ 1915 ಜೂನ್‌ನಿಂದ ಅನ್ವಯವಾಗುವಂತೆ ಈ ಮೊತ್ತವನ್ನು ನೀಡಿದರೆ ಇನ್ನು ಕೆಲವು ಮಿಶನರಿಗಳಿಗೆ ಅದನ್ನು ನೀಡಿರುವುದಿಲ್ಲ. ಆದುದರಿಂದ ಬಳ್ಳಾರಿ ಕ್ಯಾಂಪ್‌ನಲ್ಲಿನ ಎಲ್ಲಾ ಮಿಶನರಿಗಳ ಪರವಾಗಿ ರೆ. ಶೊಶ್ಶರ್ ಅವರು, ಬಳ್ಳಾರಿಯ ಜಿಲ್ಲಾ ಮ್ಯಾಜಿಸ್ಟ್ರೆಟರಾದ ಎ.ಎಫ್.ಜಿ. ಮೋಸ್‌ಕರ್‌ಡೈ ಅವರ (A.F.G. Moscardi) ಮೂಲಕ ಮದ್ರಾಸ್ ಸರಕಾರಕ್ಕೆ ಪತ್ರವನ್ನು ಬರೆದು, ಕೊಡಬೇಕಾಗಿರುವ ಬಾಕಿ ಜೀವನಾಧಾರ ಭತ್ಯೆಯನ್ನು ಕೊಡಬೇಕೆಂದು ಬೇಡಿಕೆ ಮಂಡಿಸುತ್ತಾರೆ. ಆದರೆ ಇದನ್ನು ಒಪ್ಪದ ಸರಕಾರ, ಯುದ್ಧದಲ್ಲಿ ಉದ್ಯೋಗ ಕಳಕೊಂಡವರಿಗೆ ಅವರ ಜೀವನೋಪಾಯಕ್ಕಾಗಿ ಈ ಭತ್ಯೆಯನ್ನು ನೀಡಲಾಗುತ್ತಿದ್ದು, ಈ ಭತ್ಯೆಯ ಮೇಲೆ ಹಕ್ಕು ಮಂಡಿಸುವ ಹಾಗಿಲ್ಲ ಎಂಬುದಾಗಿ ವಿವರಿಸುತ್ತದೆ. ಮತ್ತೊಂದೆಡೆ ಬ್ರಿಟಿಷ್ ಸರಕಾರ ಈ

ಎಲ್ಲಾ ಮಿಶನರಿಗಳನ್ನು 1915ರ ಅಂತ್ಯಕ್ಕೆ ಜರ್ಮನಿಗೆ ಕಳುಹಿಸುವ ಅಲೋಚನೆಯಲ್ಲಿರುತ್ತದೆ. ಈ ಹಂತದಲ್ಲಿ ಮಿಶನರಿಗಳಿಗೆ ಹಣ ಒದಗಿಸಿದರೆ ಅದು ವೈರಿ ರಾಷ್ಟ್ರಕ್ಕೆ ಹೋಗಬಹುದು (ಜರ್ಮನಿಗೆ) ಎಂಬ ಕಾರಣದಿಂದ ಬಾಕಿ ಭತ್ಯೆಯನ್ನು ನೀಡಲು ನಿರಾಕರಿಸಿತ್ತು.[59] 1915 ಮೇಯಿಂದ ಸರಕಾರವು ಮಿಶನರಿಗಳಿಗೆ ಬಾಸೆಲ್ ಮಿಶನಿನ ಕೈಗಾರಿಕಾ ಲಾಭಾಂಶಗಳಿಂದ ನೀಡುತ್ತಿದ್ದ ಭತ್ಯೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುತ್ತದೆ. ಈ ಸಂದರ್ಭದಲ್ಲಿ ಮಿಶನರಿಗಳು ಕರಾಚಿಯಲ್ಲಿನ ಅಮೇರಿಕನ್ ರಾಯಭಾರಿಯ (American Consul) ಮೂಲಕ, ಜರ್ಮನ್ ಸರಕಾರಕ್ಕೆ ಪತ್ರ ಬರೆಯುತ್ತಾರೆ. ಜರ್ಮನ್ ಸರಕಾರವು ಬರ್ಲಿನ್‌ನಲ್ಲಿರುವ ಅಮೇರಿಕನ್ ರಾಯಭಾರಿಯನ್ನು ಸಂಪರ್ಕಿಸಿ ಈ ಮೇಲಿನ ವಿಚಾರದ ಬಗ್ಗೆ ಬ್ರಿಟಿಷ್ ಸರಕಾರದ ಸ್ಪಷ್ಟನೆ ಕೇಳುವಂತೆ ವಿನಂತಿಸುತ್ತದೆ. ಬ್ರಿಟಿಷ್ ಸರಕಾರವು ಆ ಪತ್ರವನ್ನು ಮದ್ರಾಸ್ ಸರಕಾರದ ಮುಖ್ಯ ಸೆಕ್ರಟರಿಯವರೆಗೆ ಕಳುಹಿಸುತ್ತದೆ. ಈ ಪತ್ರಕ್ಕೆ ಪ್ರತ್ಯುತ್ತರ ಬರೆದ ಮದ್ರಾಸ್ ಸರಕಾರದ ಮುಖ್ಯ ಸೆಕ್ರಟರಿಯವರು, ಬಳ್ಳಾರಿಯಲ್ಲಿನ ಬಾಸೆಲ್ ಮಿಶನರಿಗಳಿಗೆ ನೀಡುವ ಭತ್ಯೆಯಲ್ಲಿ ಕೇವಲ ತಾತ್ಕಾಲಿಕ ಅಡೆತಡೆಗಳಾಗಿವೆ ಎಂದು ತಿಳಿಸುತ್ತಾರೆ.

ಮಿಶನರಿ ಮತ್ತು ಸರಕಾರದ ನಡುವೆ ತೀಕ್ಷ್ಣವಾದ ಪತ್ರ ವ್ಯವಹಾರ ನಡೆಯುತ್ತಿರುವಾಗಲೇ, ಮಿಶನರಿಗಳನ್ನು ಅಹಮದ್‌ನಗರ್ ಕ್ಯಾಂಪ್‌ಗೆ ವರ್ಗಾಯಿಸಲಾಗುತ್ತದೆ. ಸರಕಾರದ ಯೋಜನೆಯಂತೆ 1916ರ ಪ್ರಾರಂಭದಲ್ಲಿ ಈ ಎಲ್ಲಾ ಬಾಸೆಲ್ ಮಿಶನರಿಗಳನ್ನು ಸ್ವದೇಶಕ್ಕೆ ಕಳುಹಿಸುವುದಾಗಿತ್ತು. ಈ ಸಂದರ್ಭದಲ್ಲಿ ಅಹಮದ್‌ನಗರ ಕ್ಯಾಂಪ್‌ನಲ್ಲಿರುವ ಮಿಶನರಿಗಳ ಪರವಾಗಿ ಹೆಚ್. ಕುಹನೇರ್ [H. Kuhner]ರವರು ಅಹಮದ್‌ನಗರದ ಕ್ಯಾಂಪ್‌ನ ಕಮಾಂಡೇಟ್ ಮೂಲಕ ಮದ್ರಾಸ್ ಸರಕಾರಕ್ಕೆ ಪತ್ರ ಬರೆದು ಎಲ್ಲಾ ಬಾಸೆಲ್ ಮಿಶನರಿಗಳಿಗೆ ತಮ್ಮ ಪ್ರಯಾಣದ ಉದ್ದೇಶಕ್ಕಾಗಿ, ಬಾಸೆಲ್ ಮಿಶನ್ ಇಂಡಸ್ಟ್ರಿಯಲ್ ಫಂಡ್‌ನಿಂದ [Basel Mission Industrials Fund] ರೂಪಾಯಿ 1500ರನ್ನು ಒದಗಿಸಬೇಕೆಂದು ಬೇಡಿಕೆ ಮಂಡಿಸುತ್ತಾರೆ.[60] ಆದರೆ ಮದ್ರಾಸ್ ಸರಕಾರವು ಮಿಶನರಿಗಳ ಬೇಡಿಕೆಗೆ ಸ್ಪಂದಿಸಿ, ಪ್ರತಿಯೊಬ್ಬ ಮಿಶನರಿಗೂ ತಲಾ 150 ರೂಪಾಯಿಗಳನ್ನು ಕೊಡುವಂತೆ ಮಲಬಾರ್ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ತಿಳಿಸುತ್ತದೆ.[61] ಬ್ರಿಟಿಷ್ ಸರಕಾರವು 56 ಮಿಶನರಿಗಳಲ್ಲಿ 30[62] ಮಿಶನರಿಗಳನ್ನು ಸ್ವದೇಶಕ್ಕೆ ಕಳುಹಿಸಲು ಪಟ್ಟಿ ಸಿದ್ದಪಡಿಸುತ್ತದೆ. ಸರಕಾರದ ಯೋಜನೆಯಂತೆ, ಬ್ರಿಟಿಷ್ ಸರಕಾರವು ಮಿಶನರಿಗಳನ್ನು ಡಚ್ಚ್ ಬಂದರಿಗೆ ತಲುಪಿಸುವುದು. ತದನಂತರ ಮಿಶನರಿಗಳೇ ಮುಂದಿನ ವ್ಯವಸ್ಥೆ ಮಾಡಬೇಕಾಗಿತ್ತು. ಅದರಂತೆ ಅಂತಿಮವಾಗಿ 15ನೇ ಮಾರ್ಚ್ 1916 ರಂದು ಎಲ್ಲಾ ಮಿಶನರಿಗಳನ್ನು 'ಗೋಲ್ಕೊಂಡಾ' ಹಡಗಿನ ಮೂಲಕ ಸ್ವದೇಶಕ್ಕೆ ಕಳುಹಿಸುತ್ತದೆ.

ಮತ್ತೊಂದೆಡೆ ಯೇರ್‌ಕೌಡ್ [yercaud] ಕ್ಯಾಂಪ್‌ನಲ್ಲಿದ್ದ ಬಾಸೆಲ್ ಮಿಶನರಿಗಳು ತಮ್ಮಲ್ಲಿ ಆದಿತ್ಯವಾರದ ಹಾಗೂ ಪವಿತ್ರ ವಿಧಿ ವಿಧಾನಗಳನ್ನು ನಡೆಸಲು ದೀಕ್ಷೆ ಪಡೆದ ಮಿಶನರಿ ಇಲ್ಲವೆಂದು ಮದ್ರಾಸ್ ಸರಕಾರಕ್ಕೆ ತಿಳಿಸಿದಾಗ, ಸರಕಾರವು ಬೆಂಗಳೂರಿನ ಯುನೈಟೆಡ್ ತಿಯೋಲಾಜಿಕಲ್ ಕಾಲೇಜಿನ ಪ್ರಾಂಶುಪಾಲರಾದ ಪಿ.ಪಿ. ಲಾಜರ್ (Rev. P. P. Lazar) ಅವರನ್ನು ಈ ಸೇವೆಗೆ ನಿಯೋಜಿಸುತ್ತದೆ.[63] ನಿರ್ಬಂಧಿತ ಕ್ಯಾಂಪ್‌ಗಳಲ್ಲಿರುವ ಮಿಶನರಿಗಳ ಚಲನವಲನಗಳ ಮೇಲೆ ಅಧಿಕಾರಿಗಳು ನಿಗಾ ಇರಿಸುತ್ತಿದ್ದರು. ನಿರ್ಬಂಧಿತ ಕ್ಯಾಂಪ್‌ಗಳಲ್ಲಿದ್ದ ಮಿಶನರಿಗಳಿಗೆ ಬ್ರಿಟಿಶ್ ಸರಕಾರ ಅಗತ್ಯವಿದ್ದ ವೈದ್ಯಕೀಯ ಸೇವೆಯನ್ನು ಒದಗಿಸುತಿತ್ತು. ಈ ಉದ್ದೇಶಕ್ಕಾಗಿ ಬ್ರಿಟಿಷ್ ಸರಕಾರವು 1915, ಏಪ್ರಿಲ್ 25 ರಂದು ಜಾರಿಗೆ ಬರುವಂತೆ ಡಾ. ಮಥಾಯಿ (Dr. P.M. Mathai) ಯವರನ್ನು ರಾಮದುರ್ಗದ, ಜರ್ಮನ್ ಡಿಟೇನ್ಶ್ಯನ್ ಕ್ಯಾಂಪಿನ (German detention camp) ವೈದ್ಯಾಧಿಕಾರಿಯಾಗಿ ನೇಮಿಸಿತ್ತು. ಅವರಿಗೆ ತಿಂಗಳಿಗೆ ರೂ. 400 ಸಂಬಳವನ್ನು ನಿಗದಿಪಡಿಸಿ, 25ನೇ ಏಪ್ರಿಲ್ 1915 ರಿಂದ ಸೆಪ್ಟೆಂಬರ್ 25 ರವರೆಗೆ ನೇಮಿಸಿದ್ದ ಸರಕಾರ,[64] ಮತ್ತೊಂದು ಆದೇಶದ ಮೂಲಕ ಅಕ್ಟೋಬರ್‌ನಲ್ಲಿಯೂ ಸೇವೆಯಲ್ಲಿ ಮುಂದುವರಿಯುವಂತೆ ತಿಳಿಸುತ್ತದೆ.[65] ತದನಂತರ ಪುನಃ ಮತ್ತೊಂದು ಆದೇಶದ ಮೂಲಕ ಸೆಪ್ಟೆಂಬರ್ 25 ರಿಂದ ಮುಂಬರುವ ಎರಡು ತಿಂಗಳುಗಳ ಕಾಲಾವಧಿಯವರೆಗೆ[66] ಎಂದರೆ, ನವೆಂಬರ್ 25ರ ವರೆಗೆ, ತದನಂತರ ಜನವರಿ 31, 1916 ರವರೆಗೆ[67], ತದನಂತರ 1916 ಮಾರ್ಚ್ 15 ರವರೆಗೆ[68] ಹಾಗೂ ಅಂತಿಮವಾಗಿ 29ನೇ ಮಾರ್ಚ್ 1916 ರವರೆಗೆ[69] ವೈದ್ಯಾಧಿಕಾರಿಯಾಗಿ ಮುಂದುವರಿಯುವಂತೆ ಸೂಚಿಸಿತ್ತು. ಬ್ರಿಟಿಷ್ ಸರಕಾರವು ಡಾ। ಮಥಾಯಿಯವರ ಸೇವೆಯನ್ನು ಪ್ರಾರಂಭದಲ್ಲಿ ನಿಗದಿತವಾಗಿ 5 ತಿಂಗಳುಗಳಿಗೆ ನಿಗದಿ ಪಡಿಸಿತ್ತು. ಮಿಶನರಿಗಳ ಯೋಗ ಕ್ಷೇಮವನ್ನು ಗಮನಿಸುವ ಉದ್ದೇಶದಿಂದ ಅವರ ನೇಮಕವಾಗಿದ್ದು ಪದೇ ಪದೇ ಅವರ ಸೇವೆಯನ್ನು ಸರಕಾರವು ಹಲವು ಭಾರಿ ಮುಂದೂಡುತ್ತಾ ಹೋಗುತ್ತದೆ. ಅವರು ಅಂತಿಮವಾಗಿ 29ನೇ ಮಾರ್ಚ್ 1916 ರವರೆಗೆ ಬಳ್ಳಾರಿಯಲ್ಲಿ ಕಾರ್ಯ ನಿರ್ವಹಿಸಿದ್ದು, ಮಾರ್ಚ್ ಅಂತ್ಯದೊಳಗೆ ಅಲ್ಲಿದ್ದ ಎಲ್ಲಾ ಬಾಸೆಲ್ ಮಿಶನರಿಗಳನ್ನು ಸರಕಾರ ಅವರ ರಾಷ್ಟ್ರಕ್ಕೆ ಕಳುಹಿಸಿತ್ತು ಎನ್ನಬಹುದು. 1916 ಮಾರ್ಚ್ 29ರಂದು ಡಾ। ಮಥಾಯಿಯವರು ಅವರು ಅನುಭವಿಸಿದ್ದ ತಾತ್ಕಾಲಿಕ ಹುದ್ದೆಗೆ ರಾಜಿನಾಮೆಯನ್ನು ನೀಡುತ್ತಾರೆ. ಬಹುಶಃ ಬಳ್ಳಾರಿಯಲ್ಲಿನ ನಿರ್ಬಂಧಿತ ಕ್ಯಾಂಪನ್ನು ಬ್ರಿಟಿಷರು ಶಾಶ್ವತವಾಗಿ ಮುಚ್ಚಿದ ಸಂದರ್ಭದಲ್ಲಿ ಮಥಾಯಿ ರಾಜಿನಾಮೆ ನೀಡಿರಬೇಕು. ಭಾರತದಲ್ಲಿ ಬ್ರಿಟಿಷ್ ಸರಕಾರ ಮಿಶನರಿಗಳಿಗೆ ಹುಟ್ಟು ಹಾಕಿದ್ದ ನಿರ್ಬಂಧಿತ ಕ್ಯಾಂಪ್‌ಗಳಿಗೆ ಕೆಲವು ಅಂತಾರಾಷ್ಟ್ರೀಯ ಸಂಘಟನೆಗಳು ಭೇಟಿ

ನೀಡಿದ್ದವು. ಈ ಸಂಘಟನೆಗಳ ಅಧಿಕಾರಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಭಾರತದಲ್ಲಿನ ಬ್ರಿಟಿಷ್ ಸರಕಾರ, ಅಧಿಕಾರಿಗಳೊಂದಿಗೆ ಸಂಪೂರ್ಣ ಸೌಜನ್ಯದೊಂದಿಗೆ ವರ್ತಿಸಬೇಕೆಂದು ಆದೇಶಿಸುತ್ತದೆ. 1917ರ ಮಾರ್ಚ್‌ನಲ್ಲಿ ಸ್ವಿಸ್ ರೆಡ್‌ಕ್ರೋಸ್ (Swiss Red cross) ಸಂಘಟನೆಯ 3 ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಿ, ಯುದ್ಧ ಕಾಲದ ಕ್ಯಾಂಪ್‌ಗಳಿಗೆ ಭೇಟಿ ನೀಡುತ್ತಾರೆ.[70] ಯುದ್ಧ ಕಾಲದಲ್ಲಿ ಮಿಶನರಿಗಳ ಹಾಗೂ ಮಿಶನ್‌ಗಳ ಮೇಲೆ ನಿರ್ಬಂಧ ಹೇರಿದ್ದರೂ ಮಿಶನರಿಗಳೊಂದಿಗೆ ಸೂಕ್ತವಾದ ರೀತಿಯಲ್ಲಿ ವರ್ತಿಸಬೇಕೆಂಬ ಬೇಡಿಕೆಯು ಅಂತಾರಾಷ್ಟ್ರೀಯ ಸಮುದಾಯದಿಂದ ಬ್ರಿಟಿಷ್ ಸರಕಾರದ ಮೇಲಿದ್ದಿರಬೇಕು. ಜೊತೆಗೆ ಭಾರತದಲ್ಲಿ ಸ್ಥಾಪಿತವಾದ ಕ್ಯಾಂಪ್‌ಗಳನ್ನು ಸ್ವತಃ ಭೇಟಿ ನೀಡಿ ಪರಿಶೀಲಿಸುವ ಉದ್ದೇಶವನ್ನು ಈ ಸಂಘಟನೆಗಳು ಹೊಂದಿದ್ದಿರಬೇಕು. ಆದುದರಿಂದ ಬ್ರಿಟಿಷ್ ಸರಕಾರ ಅಂತಹ ಸಂಘಟನೆಗಳೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರುವುದು ಕಂಡು ಬರುತ್ತದೆ.

ನೀಲಗಿರಿ ಪ್ರದೇಶದಲ್ಲಿ ಬಾಸೆಲ್ ಮಿಶನರಿಗಳ ಚಲನವಲನಗಳ ಮೇಲೆ ನಿರ್ಬಂಧ:

1914ರ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ನೀಲಗಿರಿ ಮಿಶನ್ ಠಾಣ್ಯ ಪ್ರದೇಶಗಳಾದ ಕೈಟಿಯಲ್ಲಿ [kaity] ರೆವೆ.ಹೆಚ್. ರಿಸ್ಚ್‌ರವರು [Rev.H.Risch] ಹಾಗೂ ಕೋಟಗಿರಿಯಲ್ಲಿ [Kotagiri] ರೆವೆ.ಕೆ.ವೊಲ್ಜ್ [Rev.K. Volz] ರವರು ಮಿಶನರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಈ ಇಬ್ಬರು ಪ್ರಮುಖ ಮಿಶನರಿಗಳ ಮೇಲೆ ನೀಲಗಿರಿ ಪ್ರದೇಶದಲ್ಲಿ ಸರಕಾರದ ನಿರ್ಬಂಧವು ಅವರು ಕೆಲಸ ಮಾಡುವ ಜನರಲ್ಲಿ ಹಾಗೂ ಆ ಪ್ರದೇಶದ ಜನರಲ್ಲಿ ಬಹಳಷ್ಟು ತಪ್ಪು ಕಲ್ಪನೆಗಳನ್ನು ಉಂಟು ಮಾಡಿದೆ. ಇದು ಮಿಶನರಿಗಳ ಘನತೆಗೆ ಧಕ್ಕೆಯನ್ನು ಉಂಟು ಮಾಡಿದೆ ಎಂಬ ಆತಂಕವನ್ನು ಮಿಶನರಿಗಳು ವ್ಯಕ್ತಪಡಿಸುತ್ತಾರೆ.[71]

1914ರ ಏಕಾಏಕಿಯಾದ ಹೊಡೆತವು ಬಾಸೆಲ್ ಮಿಶನ್[72] ಕೆನರಾ, ಮಲಬಾರ್, ದಕ್ಷಿಣ ಮರಾಠ, ಕೊಡಗು ಮತ್ತು ನೀಲಗಿರಿ ಪ್ರದೇಶಗಳಲ್ಲಿ ಹುಟ್ಟು ಹಾಕಿದ್ದ ವಿಸ್ತಾರವಾದ ಹಾಗೂ ವೈವಿಧ್ಯಮಯವಾದ ಕಾರ್ಯಗಳನ್ನು ಬಾಸೆಲ್ ಮಿಶನಿನ ಸ್ವಿಸ್ ಮಿಶನರಿಗಳು ನಿರ್ವಹಿಸಬೇಕಾಗಿ ಬರುತ್ತದೆ. ಈ ಸ್ವಿಜ್ ಮಿಶನರಿಗಳು ದೈಹಿಕವಾಗಿ, ಭೌತಿಕವಾಗಿ, ಅಧ್ಯಾತ್ಮಿಕವಾಗಿ ಹಾಗೂ ಎಲ್ಲಾ ವಿಚಾರದಲ್ಲೂ ಈ ರೀತಿಯ ಜವಾಬ್ದಾರಿಗಳನ್ನು ನಿರ್ವಹಿಸಲು ಯೋಗ್ಯರಾಗಿರಲಿಲ್ಲ ಎಂಬುದು ದೇಶಿಯ ಕ್ರೈಸ್ತರ ವಾದವಾಗಿತ್ತು.[73] ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಮಿಶನ್ ಠಾಣ್ಯದಿಂದ ತೆಗೆದ ಸಂದರ್ಭದಲ್ಲಿ ಸ್ವಿಸ್ ಮಿಶನರಿಗಳು ಬಹಳಷ್ಟು ಸಂಕಷ್ಟಕ್ಕೆ ಗುರಿಯಾಗುತ್ತಾರೆ. ಈ ಸಂದರ್ಭದಲ್ಲಿ ಅವರು ಈವರೆಗೂ ನಿರ್ವಹಿಸದಂತಹ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿ ಬರುತ್ತದೆ ಎಂದು 'ಹರ್ವೆಸ್ಟ್ ಫಿಲ್ಡ್' ವರದಿ ಮಾಡುತ್ತದೆ.[74] ಈ ಸಂದರ್ಭದಲ್ಲಿ ಹಣಕಾಸಿನ

ಕೊರತೆಯು ಇದ್ದು, ಮಿಶನನ್ನು ಮಿಶನರಿಗಳ ಕೊರತೆಯಿಂದಾಗಿ ಒಂದು ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಮುಂದುವರಿಸುವುದು ಸಾಧ್ಯವಾಗುವುದಿಲ್ಲ. ಜೊತೆಗೆ ಇಲ್ಲಿ ಉಳಿದಿದ್ದ ಮಿಶನರಿಗಳು ಅವರ ಹೋಮ್ ಬೋರ್ಡಿನೊಂದಿಗಿದ್ದ ಎಲ್ಲಾ ಸಂಬಂಧವನ್ನು ಕಳೆದುಕೊಳ್ಳುತ್ತಾರೆ. ಬಾಸೆಲ್ ಮಿಶನಿನಲ್ಲಿದ್ದ ಜರ್ಮನ್ ಮಿಶನರಿಗಳು ತೆರಳಿದ ನಂತರ ಸ್ವಿಸ್ ಮಿಶನರಿಗಳು ಮಿಶನಿಗೆ ಸಂಪೂರ್ಣವಾದ ಸ್ವಿಸ್ ರೂಪವನ್ನು ನೀಡಲು ಮುಂದಾದರು. ಜರ್ಮನರು ವೈರಿಗಳಾದುದರಿಂದ ಮಿಶನಿನಲ್ಲಿದ್ದ ಜರ್ಮನ್ ಸುಳಿವು ಹಾಗೂ ಅಸ್ಥಿತ್ವವನ್ನು ಅಡ್ಡಾದಿಡ್ಡಿಯಾಗಿ ತೆಗೆದು ಹಾಕುವ ಪ್ರಯತ್ನಗಳೆಲ್ಲವೂ ನಡೆದು ಹೋಗುತ್ತವೆ.[75]

ಮಿಶನ್ ಮುಂದುವರಿಕೆಗೆ ಸ್ವಿಸರ ಪ್ರಯತ್ನ:

ಜಾಗತಿಕ ಯುದ್ಧವು ಭಾರತದಲ್ಲಿ ಬಾಸೆಲ್ ಮಿಶನಿನ ಮಿಶನ್ ಠಾಣ್ಯಗಳ ಹಾಗೂ ಇತರ ಸಂಸ್ಥೆಗಳ ಮೇಲೆ ಗಣನೀಯ ಪರಿಣಾಮ ಬೀರಿದರೆ ಮತ್ತೊಂದೆಡೆ ಸ್ವಿಜರ್‌ಲ್ಯಾಂಡಿನಲ್ಲಿ ಮಿಶನ್ ಬೆಂಬಲಿಗರಾದ ಸ್ವಿಸ್ ಜರ್ಮನ್ ಹಾಗೂ ಸ್ವಿಸ್ ಫ್ರೆಂಚರ ಮಧ್ಯ ಬಿರುಕು ಮೂಡುತ್ತದೆ. ನಂತರದಲ್ಲಿ ಬಹು ದೀರ್ಘಕಾಲ ಸ್ವಿಸ್ ಜರ್ಮನರು ಮಿಶನಿನ ಸಕ್ರಿಯ ಕಾರ್ಯದಿಂದ ದೂರ ಉಳಿಯುವಂತಾಗುತ್ತದೆ. ಭಾರತದಲ್ಲಿನ ಬಾಸೆಲ್ ಮಿಶನಿನ ಸಂದಿಗ್ಧ ಪರಿಸ್ಥಿತಿಯನ್ನು ಗಮನಿಸಿದ ಮಿಶನಿನ ಸ್ವಿಸ್ ಸ್ನೇಹಿತರು ಮಿಶನರಿಗಳಿಗೆ ಸಹಾಯ ಮಾಡಲು ಮುಂದಾಗುತ್ತಾರೆ. ಆದುದರಿಂದ ಬಾಸೆಲ್ ಮಿಶನಿನ ಅನುಮತಿಯೊಂದಿಗೆ ಸ್ವಿಸ್‌ರು ಬರ್ನೆಯಲ್ಲಿ (Berne) ಒಂದು ಹೊಸ ಮಿಶನರಿ ಸೊಸೈಟಿಯನ್ನು (Swiss missionary society) ರಚಿಸಿಕೊಳ್ಳುತ್ತಾರೆ.[76] ಯುದ್ಧ ಮುಗಿಯುವವರೆಗೆ ಈ ಸೊಸೈಟಿಯು ಮಿಶನ್ ಕಾರ್ಯವನ್ನು ಮುಂದುವರಿಸಿ ತದನಂತರ ಬಾಸೆಲ್ ಮಿಶನಿಗೆ ವರ್ಗಾಯಿಸುವುದು ಈ ಮೊದಲ ಯೋಜನೆಯಾಗಿತ್ತು. ಜೊತೆಗೆ ಬಾಸೆಲ್ ಮಿಶನ್ ಇದಕ್ಕೆ ತನ್ನ ಸಮ್ಮತಿಯನ್ನು ಸೂಚಿಸುತ್ತದೆ ಹಾಗೂ ಮಿಶನ್ ಕಾರ್ಯವನ್ನು ಈ ಮೇಲಿನ ಸೊಸೈಟಿಗೆ ವರ್ಗಾಯಿಸುತ್ತದೆ.

ಹೊಸ ಸೊಸೈಟಿಯ ರಚನೆಯ ಒಂದು ಪ್ರಮುಖ ಪರಿಣಾಮವೆಂದರೆ ಭಾರತದಲ್ಲಿ ಬಾಸೆಲ್ ಮಿಶನ್‌ನ ಹೆಸರು 'ಸ್ವಿಸ್ ಮಿಶನ್' ಎಂದಾಗುತ್ತದೆ.[77] ಈ ಕಮಿಟಿಯು ಯುದ್ಧವು ಬಹುಬೇಗ ಮುಗಿದು ತದನಂತರ ಎಲ್ಲ ಕಾರ್ಯಗಳನ್ನು ಬಾಸೆಲ್ ಮಿಶನಿಗೆ ಮರಳಿ ವಹಿಸಿಕೊಡುವ ಚಿಂತನೆಯಲ್ಲಿತ್ತು. ಆದರೆ ಮುಂದುವರಿದ ಹಾಗೆ ಪರಿಸ್ಥಿತಿಯು ಮೊದಲಿನ ಯೋಜನೆಗೆ ವಿರುದ್ಧವಾಗಿ ಮುಂದುವರಿಯುತ್ತಿದ್ದ ಸಂದರ್ಭದಲ್ಲಿ ಈ ತಾತ್ಕಾಲಿಕ ಸೊಸೈಟಿಯು, ಇನ್ನು ಮುಂದೆ ಮಿಶನ್ ಕಾರ್ಯವನ್ನು ಒಂದು ಶಾಶ್ವತವಾದ ಕಮಿಟಿಗೆ ವರ್ಗಾಯಿಸಿ, ಅದು ಬಾಸೆಲಿನಿಂದಲೇ ಕಾರ್ಯ ನಿರ್ವಹಿಸುವಂತಾಗಿ ಬಾಸೆಲ್ ಮಿಶನಿನ ಎಲ್ಲಾ ವಿಧದ ಕಾರ್ಯವನ್ನು ನಡೆಸುವಂತಹ

ಕಮಿಟಿಗೆ ಜವಾಬ್ದಾರಿಯನ್ನು ವಹಿಸುವ ಯೋಚನೆಗೆ ಬರುತ್ತದೆ. ಈ ಯೋಜನೆ ವಿಫಲವಾಗುತ್ತದೆ. ಮತ್ತೊಂದೆಡೆ ಲೌಸನ್ನೆ ಅಥವಾ ಲುಸಾನ್‌ನಲ್ಲಿ (Lausanne) 50 ಮಂದಿ ಸೇರಿ ಒಂದು ಮಿಶನರಿ ಸೊಸೈಟಿಯನ್ನು ಹುಟ್ಟು ಹಾಕುತ್ತಾರೆ. ಇವರು ಬಹು ಮಂದಿ ಫ್ರೆಂಚ್ ಸ್ವಿಸ್ ಪಾದ್ರಿಗಳಾಗಿದ್ದು (French-Swiss pastors) ಭಾರತ ಮತ್ತು ಗೋಲ್ಡ್‌ಕೋಸ್ಟ್(ಆಫ್ರಿಕ)ನಲ್ಲಿನ ಬಾಸೆಲ್ ಮಿಶನಿನ ಧಾರ್ಮಿಕ ಮಿಶನನ್ನು ಮುನ್ನಡೆಸುವುದು ಇವರ ಮುಖ್ಯ ಉದ್ದೇಶವಾಗಿತ್ತು. ಬ್ರಿಟಿಷ್ ಸರಕಾರವು ಈ ಹೊಸ ಸೊಸೈಟಿಯು ಮೊದಲಿನ ಬಾಸೆಲ್ ಮಿಶನಿನ ಸುಧಾರಿತ ಹೊಸ ಅಂಗವೆಂದು ಬಣ್ಣಿಸಿ ಅದಕ್ಕೆ ಭಾರತದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡುವುದಿಲ್ಲ ಎಂದು ತಿಳಿಸುತ್ತದೆ[78].

ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಎಲ್ಲಾ ಜರ್ಮನ್ ಮಿಶನರಿಗಳನ್ನು ತೆಗೆದು ಹಾಕಿದ ಮೇಲೆ ಮಿಶನನ್ನು ಮೂರು ಮಿಶನರಿಗಳುಳ್ಳ 'ಜನರಲ್ ಲೋಕಲ್ ಕಮಿಟಿಗೆ' (General local committee) ವಹಿಸಲಾಗುತ್ತದೆ. ಇದರಲ್ಲಿ ಸ್ವಿಸ್ ಮಿಶನರಿಗಳು ಮಾತ್ರವಿದ್ದು, ಇತರ ಮಿಶನರಿಗಳ ಸಹಾಯದಿಂದ ತಮ್ಮ ಕಾರ್ಯವನ್ನು ಮುಂದಿನ ಮೂರು ವರ್ಷಗಳವರೆಗೆ ಮುಂದುವರಿಸುತ್ತಾರೆ. ಈ ಸ್ವಿಸ್‌ರು ಬಹಳ ಕಷ್ಟದಿಂದ, ಹಣಕಾಸಿನ ಸಂಕಷ್ಟದಿಂದ ಮಿಶನನ್ನು ಮುಂದುವರಿಸುತ್ತಾರೆ.[79]

ಬ್ರಿಟಿಷ್ ಸರಕಾರದಿಂದ ಒಪ್ಪಿಗೆ ಪಡೆದ ಲೈಥರ ಯೋಜನೆ:

1918ರಲ್ಲಿ ಬ್ರಿಟಿಷ್ ಸರಕಾರವು ಭಾರತದಲ್ಲಿ ಬಾಸೆಲ್ ಮಿಶನನ್ನು ನಿರ್ಬಂಧಿಸಿ ಅದರ ಕಾರ್ಯವನ್ನು ನ್ಯಾಶನಲ್ ಮಿಶನರಿ ಕೌನ್ಸಿಲ್‌ಗೆ (National Missionary council) ವರ್ಗಾಯಿಸುತ್ತದೆ. ಬಾಸೆಲ್ ಮಿಶನಿನ ಶೈಕ್ಷಣಿಕ ಹಾಗೂ ಧಾರ್ಮಿಕ ಮಿಶನ್ ಕಾರ್ಯವನ್ನು ಸಂಪೂರ್ಣವಾಗಿ ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ನಿರ್ವಹಣೆಗೆ ವಹಿಸಲಾಗುತ್ತದೆ. ಅದೇ ರೀತಿ ಬಾಸೆಲ್ ಮಿಶನಿನ ಜನರಲ್ ಲೋಕಲ್ ಕಮಿಟಿಯು (General local committee of the Basel Mission) ಇದಕ್ಕೆ ಸಮ್ಮತಿಯನ್ನು ಸೂಚಿಸಿ ಅದರ ಕೆಲಸವನ್ನು ಮುಂದುವರಿಸಲು ವ್ಯವಸ್ಥೆ ಮಾಡುವಂತೆ ಕೇಳಿಕೊಳ್ಳುತ್ತದೆ. ಬಾಸೆಲ್ ಮಿಶನ್ ಬಹಳಷ್ಟು ವಿಸ್ತೃತವಾದ ಪ್ರದೇಶದಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಿತ್ತು. ಅವುಗಳೆಂದರೆ ನೀಲಗಿರಿ, ಕೊಡಗು, ಮಲಬಾರ್, ಉತ್ತರ ಕೆನರಾ (ಹೊನ್ನಾವರ), ದಕ್ಷಿಣ ಕೆನರಾ, ದಕ್ಷಿಣ ಮರಾಠ (ಹುಬ್ಬಳ್ಳಿ ಮತ್ತು ಧಾರವಾಡ, ಅದರ ಸುತ್ತಮುತ್ತಲಿನ ಪ್ರದೇಶ) ಗಳಲ್ಲಿ ಕಾರ್ಯನಿರ್ವಹಿಸಿತ್ತು. ನ್ಯಾಶನಲ್ ಮಿಶನರಿ ಕೌನ್ಸಿಲ್ ಭಾರತ ಸರಕಾರದ ಅನುಮತಿಯೊಂದಿಗೆ ಬಾಸೆಲ್ ಮಿಶನಿನ ಮಿಶನನ್ನು ಮುಂದುವರಿಸಲು ಈ ಕೆಳಗಿನ

ಯೋಜನೆಯನ್ನು ಸಿದ್ಧಪಡಿಸುತ್ತದೆ ಹಾಗೂ ಈ ಯೋಜನೆಯನ್ನು ಯಥಾ ಪ್ರಕಾರ ಅಸ್ಥಿತ್ವಕ್ಕೆ ತರಲಾಗುತ್ತದೆ. ಅದರಂತೆ

1. ನೀಲಗಿರಿ ಹಾಗೂ ಕೊಡಗಿನ ಪ್ರದೇಶಗಳ ಮಿಶನ್ ಜವಾಬ್ದಾರಿಯನ್ನು ವೆಸ್ಲಿಯನ್ ಮಿಶನರಿ ಸೊಸೈಟಿಗೆ ವಹಿಸಲಾಗುತ್ತದೆ.
2. ಕ್ಯಾಲಿಕಟ್‌ನ, ಬಾಸೆಲ್ ಮಿಶನ್ ಕಾಲೇಜಿನ (Basel Mission College, Calicut) ಜವಾಬ್ದಾರಿಯನ್ನು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿಗೆ ವಹಿಸಲಾಗುತ್ತದೆ.
3. ನ್ಯಾಶನಲ್ ಮಿಶನರಿ ಸೊಸೈಟಿಗೆ ಉತ್ತರ ಕೆನರಾ (ಹೊನ್ನಾವರ)ದ ಜವಾಬ್ದಾರಿಯನ್ನು ವಹಿಸಿಕೊಡಲಾಗುತ್ತದೆ.
4. ಮಲಬಾರ್‌ಗೆ ಸಂಬಂಧಿಸಿದಂತೆ ಅದರ ಜವಾಬ್ದಾರಿಯನ್ನು ಯಾವುದೇ ಒಂದು ಮಿಶನ್ ವಹಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಜರ್ಮನ್ ಮಿಶನ್ಸ್ ಕಮಿಟಿಯು ಅಭಿಪ್ರಾಯ ಪಡುತ್ತದೆ. ಬಾಸೆಲ್ ಮಿಶನಿನ ಮಲಬಾರ್ ಚರ್ಚ್ ಇದೇ ಸಂದರ್ಭದಲ್ಲಿ 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ್ನು[80] (South India united church) ಸೇರಲು ನಿರ್ಧರಿಸುತ್ತದೆ. ಆದುದರಿಂದ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ಗೆ, ಬಾಸೆಲ್ ಮಿಶನಿನ ಮಲಬಾರ್ ಚರ್ಚ್‌ನ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಕೇಳಲಾಗುತ್ತದೆ. ಈ ಉದ್ದೇಶಕ್ಕಾಗಿ ವಾರ್ಷಿಕವಾಗಿ ಮಲಬಾರ್ ಚರ್ಚ್‌ನ ಮೇಲ್ವಿಚಾರಣೆಗೆ 45,000 ರೂಪಾಯಿ ಹಾಗೂ ಇಬ್ಬರು ಮಿಶನರಿಗಳನ್ನು ಅಲ್ಲಿನ ಮಿಶನ್‌ಗೆ ಕಳುಹಿಸಿಕೊಡುವಂತೆ ಕೇಳಲಾಗುತ್ತದೆ.
5. ಬಾಸೆಲ್ ಮಿಶನಿನ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠಗಳ ಮಿಶನ್ ಜವಾಬ್ದಾರಿಯನ್ನು ಸ್ವಿಸ್‌ರಿಗೆ ವಹಿಸಲಾಗುತ್ತದೆ. ಇಲ್ಲಿನ ಮಿಶನ್‌ಗೆ ಹಣಕಾಸು ಹಾಗೂ ಮಿಶನರಿಗಳನ್ನು ಒದಗಿಸಿ ಮಿಶನ್ ಮುಂದುವರಿಸುವುದು ಸ್ವಿಸ್‌ರ ಜವಾಬ್ದಾರಿಯಾಗುತ್ತದೆ. ಈ ಉದ್ದೇಶಕ್ಕಾಗಿ ಲೌಸಾನ್ನೆಯಲ್ಲಿ (Lausanne) ಒಂದು ಕಮಿಟಿಯು ರಚಿತವಾಗಿ ಅದು ಮಿಶನರಿಗಳನ್ನು ಹಾಗೂ ಹಣಕಾಸನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ. ಇದು ಈಗಾಗಲೇ ತನ್ನ ಪ್ರತಿನಿಧಿಯಾದ ಬೆನೊಯ್ಟ್‌ರನ್ನು ಭಾರತಕ್ಕೆ ಕಳುಹಿಸಿದ್ದು, ಅವರಿಗೆ ಹಣಕಾಸನ್ನು ಕಳುಹಿಸಿರುತ್ತದೆ. ಈ ಕಮಿಟಿಯು ಇಲ್ಲಿನ ಮಿಶನನ್ನು ನಿಯಂತ್ರಿಸುವ ಉದ್ದೇಶವನ್ನು ಹೊಂದಿರುವುದಿಲ್ಲ. ಬದಲು ಇದು ಹಣಕಾಸಿನ ಹಾಗೂ ಮಿಶನರಿಗಳ ಸಹಾಯವನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ. ಅದೇ ರೀತಿ ಮೇಲಿನ ಜರ್ಮನ್ ಮಿಶನ್ಸ್ ಕಮಿಟಿಯು ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠದ ಮಿಶನ್ ಕೆಲಸವನ್ನು ನಿರ್ವಹಿಸುವ ಸ್ವಿಸ್ ಮಿಶನರಿಗಳೊಂದಿಗೆ ಕಾರ್ಯ ನಿರ್ವಹಿಸಲು ಒಬ್ಬ ಬ್ರಿಟಿಷ್

ಮಿಶನರಿಯನ್ನು ನೇಮಿಸಬೇಕೆಂದೂ, ಆ ಮಿಶನರಿಯು ಇಲ್ಲಿ ರಚನೆಯಾಗುವ ಯಾವುದೇ ಸಂಘಟನೆಯ ಸೆಕ್ರಟರಿಯಾಗಬೇಕೆಂದು ಸಲಹೆ ಮಾಡುತ್ತದೆ. ಇಲ್ಲಿನ ಸಂಪೂರ್ಣ ಕೆಲಸವು ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ನಿಯಂತ್ರಣದಲ್ಲಿರಬೇಕೆಂದೂ ಸಲಹೆ ಮಾಡುತ್ತದೆ. ನ್ಯಾಶನಲ್ ಮಿಶನರಿ ಕೌನ್ಸಿಲ್ ಮದ್ರಾಸನ್ನು ಕೇಂದ್ರವಾಗಿರಿಸಿ ಒಂದು ಕಮಿಟಿಯನ್ನು ರಚಿಸಲಿದ್ದು, ಅದು ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನಿನ ಕೆಲಸದ ನಿಯಂತ್ರಣ ಮತ್ತು ಮಿಶನರಿಗಳ ನಿಯಂತ್ರಣದ ಕೆಲಸವನ್ನು ಮಾಡಲಿದೆ ಎಂಬುದಾಗಿ ಯೋಜನೆಯಲ್ಲಿ ಬ್ರಿಟಿಷ್ ಸರಕಾರಕ್ಕೆ ಭರವಸೆ ನೀಡಲಾಗುತ್ತದೆ.[81]

ಸ್ವಿಸ್‌ರಿಗೆ ಬಾಸೆಲ್ ಮಿಶನಿನ ಕೆಲಸವನ್ನು ನಿರ್ವಹಿಸಲು ಅವಕಾಶ ಕಲ್ಪಿಸಲಾಯಿತಾದರೂ ಎಲ್ಲಾ ರೀತಿಯ ನಿಯಂತ್ರಣಗಳು ನ್ಯಾಶನಲ್ ಮಿಶನರಿ ಕೌನ್ಸಿಲ್ ಹಾಗೂ ಬ್ರಿಟಿಷ್ ಮಿಶನರಿಗಳ ಕೈ ಸೇರುತ್ತದೆ. ಸ್ವಿಸ್‌ರ ಸಂಪೂರ್ಣ ಕೆಲಸ ಇಂಗ್ಲೀಷ್ ಮಿಶನರಿಗಳ ನಿಯಂತ್ರಣದಲ್ಲಿರುತ್ತದೆ.[82] 1918, 29ನೇ ನವಂಬರ್‌ನಲ್ಲಿ, ಮದ್ರಾಸ್ ಸರಕಾರದ ಮುಖ್ಯ ಕಾರ್ಯದರ್ಶಿಯವರು (C. G. Todhunter, I.C.S) ಮುಂಬಾಯಿ ಸರಕಾರ ಹಾಗೂ ಕೂರ್ಗ್ ಕಮಿಷನರ್‌ರವರಿಗೆ, ನ್ಯಾಶನಲ್ ಮಿಶನರಿ ಕೌನ್ಸಿಲ್, ಬಾಸೆಲ್ ಮಿಶನಿನ ಕಾರ್ಯಗಳ ಜವಾಬ್ದಾರಿಯನ್ನು ವಹಿಸಿಕೊಂಡದ್ದರ ಬಗ್ಗೆ ಮಾಹಿತಿ ರವಾನಿಸುತ್ತಾರೆ.[83]

ಬಾಸೆಲ್ ಮಿಶನಿನ ಮಿಶನ್ ಠಾಣ್ಯಗಳ ಸ್ಥಿತಿ:

ಬಾಸೆಲ್ ಮಿಶನಿನಲ್ಲಿ 1916ರಲ್ಲಿ 12 ದೀಕ್ಷೆ ಪಡೆದ ಮಿಶನರಿಗಳಿದ್ದು, ಇತರ 12 ಮಂದಿ ದೀಕ್ಷೆ ಪಡೆಯದ ಮಿಶನರಿಗಳಿದ್ದರು. ಒಟ್ಟು ಕ್ರೈಸ್ತರ ಸಂಖ್ಯೆಯು 20,002 ರಷ್ಟಿತ್ತು. ಆದರೆ 1917ರಲ್ಲಿ ದೀಕ್ಷೆ ಪಡೆದ ಮಿಶನರಿಗಳ ಸಂಖ್ಯೆಯು 8ಕ್ಕೆ ಇಳಿಕೆಯಾಗಿ, ದೀಕ್ಷೆ ಪಡೆಯದೆ ಇರುವವರ ಸಂಖ್ಯೆಯು 11ಕ್ಕೆ ಇಳಿಕೆಯಾಗುತ್ತದೆ. ಮತ್ತೊಂದೆಡೆ ಕ್ರೈಸ್ತರ ಸಂಖ್ಯೆಯು 20,002 ರಿಂದ 17,628 ಕ್ಕೆ ಗಣನೀಯವಾಗಿ ಇಳಿಕೆಯಾಗುತ್ತದೆ. ಪುನಃ 1918ರಲ್ಲಿ ದೀಕ್ಷೆ ಹೊಂದಿದ ಮಿಶನರಿಗಳ ಸಂಖ್ಯೆ 8 ಆಗಿದ್ದರೆ, ದೀಕ್ಷೆ ಪಡೆಯದೇ ಇರುವ ಮಿಶನರಿಗಳ ಸಂಖ್ಯೆಯು 8ಕ್ಕೆ ಇಳಿಕೆಯಾಗುತ್ತದೆ. ಕ್ರೈಸ್ತರ ಸಂಖ್ಯೆಯು ಪುನಃ 17,628ರಿಂದ 17,608ಕ್ಕೆ ಇಳಿಕೆಯಾಗುತ್ತದೆ. ಅದೇ ರೀತಿ ಮಿಶನ್‌ನಲ್ಲಿದ್ದ ಮಿಶನರಿಗಳ ಪತ್ನಿಯರ ಸಂಖ್ಯೆಯು 1916 ರಿಂದ 1918 ರ ಕಾಲಾವಧಿಯಲ್ಲಿ 16 ರಿಂದ 11ಕ್ಕೆ ಹಾಗೂ 11 ರಿಂದ 10ಕ್ಕೆ ಇಳಿಕೆಯಾಗಿರುವುದನ್ನು ಗಮನಿಸಬಹುದು. ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಗತಿಯು ಕೆಳಮುಖವಾಗಿರುತ್ತದೆ. ಮಿಶನ್ ಭಾರೀ ಪ್ರಮಾಣದಲ್ಲಿ ಮಿಶನರಿಗಳ ಕೊರತೆಯನ್ನು ಎದುರಿಸುತ್ತಿರುತ್ತದೆ. 1916 ರಿಂದ 1917ಕ್ಕೆ ಬರುವ ಹಂತದಲ್ಲಿ 2374 ರಷ್ಟು ಕ್ರೈಸ್ತರ ಸಂಖ್ಯೆಯು ಕಡಿಮೆಯಾಗುತ್ತದೆ. ಬಹುಃಶ ಈ ಕ್ರೈಸ್ತರು ಮಿಶನರಿಗಳಿಲ್ಲದೇ ಮಿಶನ್ ಠಾಣ್ಯಗಳು

ಅನಾಥವಾದಾಗ ಉದ್ಯೋಗವನ್ನು ಅರಸಿಕೊಂಡು ದೂರದ ಪ್ರದೇಶಗಳಿಗೆ ವಲಸೆ ಹೋಗಿರಬೇಕು ಅಥವಾ ಇತರ ಧರ್ಮಗಳತ್ತ ವಾಲಿರಬೇಕು.

ಯುದ್ಧದ ಕಾಲಾವಧಿಯಲ್ಲಿ ಈ ರೀತಿಯ ಸ್ಥಿತಿ ಕೇವಲ ಬಾಸೆಲ್ ಮಿಶನಿನದ್ದಾಗಿರದೇ ಭಾರತದಲ್ಲಿದ್ದ ಎಲ್ಲಾ ಜರ್ಮನ್ ಮಿಶನ್‌ಗಳ ಸ್ಥಿತಿ ಇದೇ ಆಗಿರುತ್ತದೆ. ಶ್ಲೆಶ್‌ವ್ಹಿಗ್ ಹೋಲ್‌ಸ್ಟೈನ್ ಮಿಶನ್ 1916ರಲ್ಲಿ 23,999 ಕ್ರೈಸ್ತರನ್ನು ಹೊಂದಿದ್ದರೆ, ಈ ಸಂಖ್ಯೆಯು 1917 ಕ್ಕಾಗುವಾಗ 18,351ಕ್ಕೆ ಹಾಗೂ 1918ರಲ್ಲಿ 19048 ಕ್ಕೆ ಏರಿಕೆಯಾಗುತ್ತದೆ. ಅದರೆ ದೀಕ್ಷೆ ಪಡೆದ ಮಿಶನರಿಗಳ ಸಂಖ್ಯೆಯು 1916 ರಲ್ಲಿ 22 ಆಗಿದ್ದರೆ, 1917ರಲ್ಲಿ 1ಕ್ಕೆ ಇಳಿಯುತ್ತದೆ ಹಾಗೂ 1918ರಲ್ಲಿ ಕೇವಲ ಒಬ್ಬನೇ ಮಿಶನರಿ ಇರುತ್ತಾನೆ. ದೀಕ್ಷೆ ಪಡೆಯದೇ ಇರುವ ಮಿಶನರಿಗಳ ಸಂಖ್ಯೆಯು 1916ರಲ್ಲಿ ಒಂದು ಆಗಿದ್ದರೆ 1917 ಮತ್ತು 1918 ರ ಕಾಲಾವಧಿಯಲ್ಲಿ ಯಾವುದೇ ದೀಕ್ಷೆ ಪಡೆಯದಿರುವ ಮಿಶನರಿ ಮಿಶನ್ ಠಾಣ್ಯದಲ್ಲಿರಲಿಲ್ಲ. ಮತ್ತೊಂದು ಮಿಶನ್ ಆದ ಹರ್ಮನ್ಸ್ ಬರ್ಗ್‌ನ ಸ್ಥಿತಿಯು ಈ ಮೇಲಿನ ಮಿಶನ್‌ಗಿಂತ ಭಿನ್ನವಾಗಿರಲಿಲ್ಲ. ಅದು 1916 ರಲ್ಲಿ 2,758 ಕ್ರೈಸ್ತರನ್ನು ಹೊಂದಿದ್ದರೆ, ಈ ಸಂಖ್ಯೆಯು 1917 ಕ್ಕಾಗುವಾಗ 2316 ಹಾಗೂ 1918 ಕ್ಕಾಗುವಾಗ 2269 ಕ್ಕೆ ಇಳಿಕೆಯಾಗುತ್ತದೆ. ಅದರ ಮಿಶನ್ ಠಾಣ್ಯಗಳಲ್ಲಿ ಮಿಶನರಿಗಳ ಸಂಖ್ಯೆಯು 1915 ರಲ್ಲಿ 10 ಆಗಿದ್ದರೆ ತದನಂತರ 1916 ಹಾಗೂ 1917ರಲ್ಲಿ ಒಂದು ಆಗಿರುತ್ತದೆ. 1918 ರಲ್ಲಿ ಇದರ ಮಿಶನ್ ಠಾಣ್ಯಗಳಲ್ಲಿನ ಸಂಖ್ಯೆಯು 2ಕ್ಕೆ ಏರಿಕೆಯಾಗುತ್ತದೆ. ಈ ರೀತಿ ಯುದ್ಧದ ಕಾಲಾವಧಿಯಲ್ಲಿ ಬಹುಪಾಲು ಜರ್ಮನ್ ಮಿಶನ್‌ಗಳು ಬಹು ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತವೆ. (50A ಪುಟದಲ್ಲಿನ ಚಾರ್ಟನ್ನು ಗಮನಿಸಿ)

ಕೆನರೀಸ್ ಇವ್ಯಾಂಜಲಿಕಲ್ ಮಿಷನ್‌ನ ಆರಂಭ:

1919ರಲ್ಲಿ ನ್ಯಾಶನಲ್ ಮಿಶನರಿ ಕೌನ್ಸಿಲ್ ಔಪಚಾರಿಕವಾಗಿ ಬಾಸೆಲ್ ಮಿಶನಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತದೆ. ಅದೇ ರೀತಿ ಆಗಾಗಲೇ ಬಾಸೆಲ್ ಮಿಶನ್ ಠಾಣ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸ್ವಿಸ್ ಮಿಶನರಿಗಳು ಮುಂದುವರಿಯುತ್ತಾರೆ. ಆದರೆ ವ್ಯವಸ್ಥೆ ಹಾಗೂ ಸಂಘಟನೆಗಳಲ್ಲಿ ಅಗತ್ಯ ಮಾರ್ಪಾಡುಗಳಾಗುತ್ತವೆ. 1914ರಲ್ಲಿ ಸ್ವಿಜರ್ಲ್ಯಾಂಡಿನ ಬೆರ್ನೆಯಲ್ಲಿ ಸ್ಥಾಪಿತವಾದ ಸ್ವಿಸರ ಸಂಘವು ಭಾರತದಲ್ಲಿನ ಬಾಸೆಲ್ ಮಿಶನಿನ ಪರಿಸ್ಥಿತಿಯನ್ನು ಭೇಟಿ ಮಾಡಿ ಅವಲೋಕಿಸಿ, ಬ್ರಿಟಿಷ್ ಅಧಿಕಾರಿಗಳು ಹಾಗೂ ನ್ಯಾಶನಲ್ ಮಿಶನರಿ ಕೌನ್ಸಿಲ್‌ನೊಂದಿಗೆ ನೇರವಾಗಿ ಚರ್ಚಿಸುವ ಸಲುವಾಗಿ ಪಿಯರೆ ಡೆ ಬೆನೊಯ್ಟ್‌ರನ್ನು ಭಾರತಕ್ಕೆ ಕಳುಹಿಸುತ್ತದೆ. ಯಾವುದೇ ಜರ್ಮನ್ ವಿಚಾರಗಳಿಂದ ಹಾಗೂ ಜರ್ಮನ್ ಪರವಾದ ವಿಚಾರಗಳಿಂದ ಹೊರತಾಗಿರುವ ಒಂದು ಹೊಸ ಅಂಗವನ್ನು ಸ್ಥಾಪಿಸಿ, ಮಿಶನ್ ಕಾರ್ಯವನ್ನು ಮುನ್ನಡೆಸುವುದಾದರೆ ಅದರ ಬಗ್ಗೆ ಬ್ರಿಟಿಷ್ ಸರಕಾರವು ಖಂಡಿತವಾಗಿ ಪರಿಶೀಲಿಸುವುದು ಎಂಬ ವಿಚಾರವನ್ನು ಅವರಿಗೆ ತಿಳಿಸಿತ್ತು.[88]

ಜಾಗತಿಕ ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನ್ ಠಾಣ್ಯಗಳ ಸ್ಥಿತಿ – ಗತಿ

ವರ್ಷ	ಮಿಶನರಿಗಳು				ಭಾರತೀಯ ಮೂಲದ ಕ್ರೈಸ್ತ ಕೆಲಸಗಾರರು [Christian Workers of Indian Domicile]							ಸಭೆಗಳು	ಒಟ್ಟು ಕ್ರೈಸ್ತ ಸಮುದಾಯ	ದಕ್ಷಿಣ ಭಾರತದ ಬೇರೆ ಬೇರೆ ಮಿಶನುಗಳ ಒಟ್ಟು ಕ್ರೈಸ್ತರು
	ಪುರುಷರು		ಮಹಿಳೆಯರು		ಪಾದ್ರಿ ಮತ್ತು ಇವ್ಯಾಂಜಲಿಕಲ್ ಕೆಲಸ			ಶಾಲೆ ಮತ್ತು ಕಾಲೇಜುಗಳಲ್ಲಿ ಬೋಧಿಸುವವರು		ಇತರ ಕ್ರೈಸ್ತೀಯ ಕೆಲಸಗಾರರು				
						ದೀಕ್ಷೆ ಪಡೆಯದವರು								
	ದೀಕ್ಷೆ ಪಡೆದವರು [ordained]	ದೀಕ್ಷೆ ಪಡೆಯದವರು [un-ordained]	ಮಿಶನರಿಗಳ ಪತ್ನಿಯರು	ಅವಿವಾಹಿತರು [ವಿಧವೆಯರು ಸೇರಿ]	ದೀಕ್ಷೆ ಪಡೆದವರು	ಪುರುಷರು (ಕ್ಯಾಟಿಕಿಸ್ಟ್, ಇವ್ಯಾಂಜಲಿಸ್ಟ್ ಇತ್ಯಾದಿ)	ಮಹಿಳೆಯರು (ಬೈಬಲ್ ಮಹಿಳೆ ಇತ್ಯಾದಿ)	ಪುರುಷರು	ಮಹಿಳೆಯರು	ಪುರುಷರು	ಮಹಿಳೆಯರು			
1915 [84]	65	38	62	16	22	159	-	384	179	-	-	-	19,922	8,82,412
1916 [85]	12	12	16	5	31	158	44	386	129	26	-	103	20,002	9,21,632
1917 [86]	8	11	11	5	26	134	28	336	125	16	-	92	17,628	9,30,972
1918 [87]	8	8	10	5	27	129	29	332	108	14	-	91	17,608	9,85,554

ಜಾಗತಿಕ ಯುದ್ಧದ ಕಾಲದಲ್ಲಿ ಇತರ ಮಿಶನುಗಳ ಸ್ಥಿತಿ ಗತಿ

ಮಿಶನುಗಳು	ಕ್ರೈಸ್ತರ ಸಂಖ್ಯೆ				ದೀಕ್ಷೆ ಪಡೆದ ಮಿಶನರಿಗಳು				ದೀಕ್ಷೆ ಪಡೆಯದವರು				ಮಿಶನರಿಗಳ ಪತ್ನಿಯರು				ಅವಿವಾಹಿತರು			
	1915	1916	1917	1918	1915	1916	1917	1918	1915	1916	1917	1918	1915	1916	1917	1918	1915	1916	1917	1918
ಲೆಷ್ವಿಗ್ – ಹೋಲ್‌ಸ್ಟೈನ್ ಮಿಶನ್	23,999	23,999	18,351	19,048	22	22	01	01	01	01	-	-	20	20	01	01	07	07	-	-
ಹರ್ಮನ್ಸ್ ಬರ್ಗ್ ಮಿಶನ್	2,935	2,758	2,316	2,269	10	01	01	02	-	-	-	-	09	01	01	01	03	-	-	-
ವೆಸ್ಲಿಯನ್ ಮಿಶನ್	39,128	49,653	54,581	55,970	61	63	58	59	03	03	04	04	51	51	42	50	38	40	41	39
ಚರ್ಚ್ ಮಿಶನರಿ ಸೊಸೈಟಿ	1,66,797	1,69,093	1,76,056	1,81,945	31	25	25	24	01	01	01	01	18	22	15	14	22	42	21	20

ಭಾರತದಲ್ಲಿನ ಬಾಸೆಲ್ ಮಿಶನಿನ ಸಮೀಕ್ಷೆ ನಡೆಸಿದ ಬೆನೊಯ್ಟ್‌ರವರು ಬಾಸೆಲ್ ಮಿಶನಿನ ಮಿಶನರಿ ಕಾರ್ಯ ಮುಂದುವರಿಯಬೇಕೆಂದು ಶಿಫಾರಸು ಮಾಡುತ್ತಾರೆ. 1918ರಲ್ಲಿ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸ್ವಿಸ್ ಮಿಶನರಿಗಳ ಸಮ್ಮೇಳನವೊಂದು ಕ್ಯಾಲಿಕಟ್‌ನಲ್ಲಿ ನಡೆಯುತ್ತದೆ. ಈ ಸಮ್ಮೇಳನದಲ್ಲಿ ಮಲಬಾರ್ ಮಿಶನರಿಗಳು ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ಸೇರಲು ನಿರ್ಧರಿಸುತ್ತಾರೆ. ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನರಿಗಳು, ಸರಕಾರದ ಒಪ್ಪಿಗೆ ಪಡೆದು ಹೊಸ ಅಂಗವೊಂದನ್ನು ರಚಿಸಿ ಮಿಶನ್ ಕಾರ್ಯ ಮುಂದುವರಿಸಲು ನಿರ್ಧರಿಸುತ್ತಾರೆ. ಈ ಹೊಸ ಅಂಗವನ್ನು 'ಕೆನರೀಸ್ ಇವ್ಯಾಂಜಲಿಕಲ್ ಮಿಶನ್' ಎಂದು ಕರೆಯಲಾಯಿತು. ಇದಕ್ಕೆ ಸಹಾಯಕ ಕಮಿಟಿಯಾಗಿ ಲೌಸನ್ನೆ (Laussanne) ಕಮಿಟಿಯು ಇದ್ದು, ಅಗತ್ಯವಿರುವ ಹಣಕಾಸು ಹಾಗೂ ಮಿಶನರಿಗಳನ್ನು ಒದಗಿಸುತ್ತಿತ್ತು.[89] 1918 ಡಿಸೆಂಬರ್‌ನಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಭಾರತದಲ್ಲಿ ಸ್ಥಾಪನೆಯಾಗುತ್ತದೆ. ಇದು ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ಮಾರ್ಗದರ್ಶನದಲ್ಲಿ ಹಾಗೂ ಮದ್ರಾಸಿನ ಅಂಗ್ಲೀಕನ್ ಬಿಷಪ್‌ರಾಗಿದ್ದ ಹೆನ್ರಿ ವೈಟ್‌ಹೆಡ್ (Henry Whitehead) ಅಧ್ಯಕ್ಷರಾಗಿರುವ (Chairman) ಮತ್ತು ವೆಸ್ಲಿಯನ್ ಮೆಥೊಡಿಸ್ಟ್ ಮಿಶನರಿಯಾದ ಲೈಥ್‌ರವರು ಕಾರ್ಯದರ್ಶಿಯಾದ ಒಂದು ಕಮಿಟಿಯ ಮಾರ್ಗದರ್ಶನ ಮತ್ತು ನಿಯಂತ್ರಣದಲ್ಲಿ ತನ್ನ ಕಾರ್ಯವನ್ನು ಮುಂದುವರಿಸುತ್ತದೆ. 1919ರಲ್ಲಿ ಮಿಶನಿನ ಬೇರೆ ಬೇರೆ ಠಾಣ್ಯಗಳಲ್ಲಿ ನಿಯೋಜನೆಗೊಂಡ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಹಲವು ಮಿಶನರಿಗಳಿದ್ದರು.[90]

ಆರಂಭದಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸ್ಥಿತಿ:

ಯುದ್ಧದ ನಿರ್ಬಂಧದಿಂದಾಗಿ ಉಂಟಾಗಿದ್ದ ಹಲವು ಸಮಸ್ಯೆಗಳು, ಅವ್ಯವಸ್ಥೆಗಳು ಅಂತ್ಯವಾಗಿ ಈ ಹೊಸ ಯೋಜನೆಯ ಪ್ರಕಾರ ಹೊಸ ವ್ಯವಸ್ಥೆಯನ್ನು ಮಿಶನ್‌ನ ಮುಂದುವರಿಕೆಗೆ ಹುಟ್ಟು ಹಾಕಲಾಗುತ್ತದೆ. ಆದರೆ ಈ ಯೋಜನೆಯು ಮಿಶನ್‌ನಲ್ಲಿ ಅಶಾಂತಿ, ಅವ್ಯವಸ್ಥೆ ಬುಗಿಲೇಳುವುದಕ್ಕೆ ಕಾರಣವಾಗುತ್ತದೆ. ಈ ಅಶಾಂತಿ ಸ್ಥಳೀಯವಾಗಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಸ್ಥಳೀಯ ಕ್ರೈಸ್ತರ ಮಧ್ಯೆ ಹುಟ್ಟಿಕೊಂಡರೆ ಸ್ವಿಸ್‌ನಲ್ಲಿ ಲೌಸನ್ನೆಯವರ ಹಾಗೂ ಮೂಲ ಬಾಸೆಲ್ ಮಿಶನಿನ ಬೆಂಬಲಿಗರ ಮಧ್ಯೆ ಆರಂಭವಾಗುತ್ತದೆ. ಈ ಹೊಸ ವ್ಯವಸ್ಥೆಯು ಈವರೆಗೂ ಬಾಸೆಲ್ ಮಿಶನ್ ಕಂಡು ಕೇಳರಿಯದ ಬಿಕ್ಕಟ್ಟನ್ನು ಉಂಟುಮಾಡುತ್ತದೆ. ಈ ಹೊಸ ಯೋಜನೆಗಳು ಶಾಂತಿಯನ್ನು ಅಶಾಂತಿಯಾಗಿ ಹಾಗೂ ವ್ಯವಸ್ಥೆಯನ್ನು ಅವ್ಯವಸ್ಥೆಯಾಗಿ ಮಾರ್ಪಡಿಸುತ್ತವೆ. ಮತ್ತೊಂದೆಡೆ ಈ ಎರಡೂ ಪಕ್ಷಗಳ ನಡುವೆ ಶೀತಲ ಸಮರ ಆರಂಭವಾಗುತ್ತದೆ. ಹೀಗೆ ಹೊಸ ಶಿಶುವಾದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಭಾರತ ಹಾಗೂ ಸ್ವಿಸ್‌ನಲ್ಲಿ ಭಾರೀ

ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸ್ವಿಸ್‌ನಲ್ಲಿ ಕೆಲವು ಜರ್ಮನ್ ಭಾಷಾ ಸ್ವಿಸ್‌ರು ಭಾರತದಲ್ಲಿ ಹುಟ್ಟು ಹಾಕಿದ ಹೊಸದಾದ ಹಾಗೂ ಸ್ವತಂತ್ರವಾದ ಸ್ವಿಸ್ ಮಿಶನ್‌ಗೆ ಭಾರೀ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಸ್ವಿಜರ್‌ಲ್ಯಾಂಡ್, ಫ್ರಾನ್ಸ್ ಹಾಗೂ ಜರ್ಮನಿಗಳೆರಡೂ ರಾಷ್ಟ್ರಗಳಿಗೂ ನೆರೆ ರಾಷ್ಟ್ರವಾಗಿದ್ದು, ಈ ಎರಡೂ ದೇಶಗಳ ಭಾಷೆ ಮಾತನಾಡುವ ಜನರು ಸ್ವಿಸ್‌ನಲ್ಲಿದ್ದು, ಬಾಸೆಲ್ ಮಿಶನಿನ ವ್ಯವಸ್ಥೆಯಲ್ಲಿ ಜರ್ಮನ್ ಸ್ವಿಸ್‌ರು ಹಾಗೂ ಜರ್ಮನರೇ ಮಿಶನಿನ ಎಲ್ಲಾ ಪ್ರಮುಖ ವಿಚಾರಗಳನ್ನು, ಹುದ್ದೆಗಳನ್ನು ನಿರ್ವಹಿಸುತ್ತಿದ್ದರು. ಆದರೆ ಯುದ್ಧದ ಕಾಲದ ನಿರ್ಬಂಧ ಈ ವ್ಯವಸ್ಥೆಯ ನಾಶಕ್ಕೆ ಕಾರಣವಾಗುತ್ತದೆ. ಆ ಸಂದರ್ಭದಲ್ಲಿ ಫ್ರೆಂಚ್ ಸ್ವಿಸರು ಸೇರಿ ಮಿಶನ್ ಮುಂದುವರಿಸಲು ನಿರ್ಧರಿಸುತ್ತಾರೆ. ನಂತರ ಇದು ಬಾಸೆಲ್ ಮಿಶನಿಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಅದರ ಬೆಂಬಲಿಗರ ಮೇಲೆ ಅಸೂಯೆ ಬೆಳೆಯಲು ಕಾರಣವಾಗುತ್ತದೆ. ಹೀಗೆ ಈ ಶೀತಲ ಸಮರವು ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ರೂಪದಲ್ಲಿ ವ್ಯಕ್ತವಾಗುತ್ತದೆ.

ನಿರ್ಬಂಧದ ಕಾಲಾವಧಿಯಲ್ಲಿ ಪ್ರೆಂಚ್ ಭಾಷಾ ಸ್ವಿಸ್ ಪ್ರದೇಶಗಳಿಂದ ಹಲವು ಹೊಸ ಮಿಶನರಿಗಳು ಬರಲಾರಂಭಿಸುತ್ತಾರೆ. ಇದರಿಂದ ಹೊಸ ವಿಭಾಗದ (New branches of work) ಕೆಲಸಗಳನ್ನು ಆರಂಭಿಸಲು ಸಾಧ್ಯವಾಗುತ್ತದೆ. ಬೆರ್ನೆಯಲ್ಲಿನ (Berne) ಮೆಡಿಕಲ್ ಮಿಶನರಿ ಸೊಸೈಟಿಯ ಸಹಾಯದಿಂದ ಹಾವೇರಿಯಲ್ಲಿ ಹಾಗೂ ಹಿಪ್ಪರಗಿಯಲ್ಲಿ (Hippargi) ಚಿಕಿತ್ಸಾಲಯುಗಳನ್ನು, ಕುಷ್ಟರೋಗಿಗಳ ಸೇವೆಯನ್ನು ಪ್ರಾರಂಭಿಸಲಾಗುತ್ತದೆ. ಅದೇ ರೀತಿ ಈ ಕಾಲಾವಧಿಯಲ್ಲಿ ಹೆಚ್ಚು ಹೆಚ್ಚು ಮಹಿಳಾ ಮಿಶನರಿಗಳು ಬರುತ್ತಿರುವುದರ ಬಗ್ಗೆ ಟಾಮ್ಲಿನ್‌ಸನ್‌ರವರಿಗೆ ಬಹಳಷ್ಟು ಆತಂಕಗಳಿರುತ್ತವೆ. ಜೊತೆಗೆ ಮಿಶನರಿಗಳ ಪತ್ನಿಯರು ಕಮಿಟಿಗಳಲ್ಲಿರುವುದು ಇವರಿಗೆ ಇಷ್ಟವಿರಲಿಲ್ಲ. 1922ರ ಕಾಲಾವಧಿಯಲ್ಲಿ ಬಂದ ಕೆಲವು ಮಿಶನರಿಗಳೆಂದರೆ, ಟಾಮ್ಲಿನ್‌ಸನ್ ಬೇಡಿಕೆಯಂತೆ 1922ರಲ್ಲಿ ಜೆ.ಜಿ.ಫ್ರಿಟ್ಸ್ಚ (J.G.Fritschi) ಎಂಬ ಲೆಕ್ಕ ಪರಿಶೋಧಕ (Accountant), ಇ.ಶಯಟ್ಟಿ (E.Schaetti) ಎಂಬ ಮಿಶನರಿ ಹುಬ್ಬಳ್ಳಿಗೆ, ಇವಾ ಲಂಬಾರ್ಡ್ (Eva Lombard) ಎಂಬ ಮಿಶನರಿ ವೈದ್ಯೆ ಉಡುಪಿಯಲ್ಲಿ ಒಂದು ಆಸ್ಪತ್ರೆ ತೆರೆಯುವ ಉದ್ದೇಶದೊಂದಿಗೆ ಬರುತ್ತಾರೆ. ಜೆ. ಜೆ. ಉರ್ನರ್ (J.J.Urner) ಎಂಬ ಮಿಶನರಿ, ಕುಮಾರಿ ಎಲ್. ಜೇಕಬ್ ಎಂಬವರನ್ನು ವಿವಾಹವಾಗಿ ಉತ್ತರ ಮರಾಠದ ಸುಮ್ಮಡ್ಡಿಗೆ (Sumaddi), ಡಾ. ವಿಲಿಯಮ್ ಸ್ಟೋಕ್ಸ್ (Dr.William stokes) ರವರು ಗದಗ ಬೆಟಗೇರಿಯಲ್ಲಿ ವೈದ್ಯಕೀಯ ಸೇವೆಗೆ, ಗಾಸ್ಟನ್ ರೋಸ್ಲೆಟ್ (Gaston Rosselet) ಎಂಬುವರು ಕಾರ್ಕಳಕ್ಕೆ, ಡಾ.ಪಿ.ಇ. ಬುರ್ಕಾರ್ಡಟ್ (Dr.P.E.Burckhardt) ಹಾಗೂ ಅವರ ಪತ್ನಿ ಬಾಸೆಲ್ ಮಿಶನಿಗೆ ರಾಜಿನಾಮೆ

ಕೊಟ್ಟು, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಅಡಿಯಲ್ಲಿ ಧಾರವಾಡದಲ್ಲಿ ಕಾರ್ಯ ಆರಂಭಿಸಿದರು. ಬುರ್ಕಾರ್ಡ್‌ಟ್ ಬಾಸೆಲ್ ಮಿಶನಿಗೆ ರಾಜಿನಾಮೆ ಕೊಟ್ಟು, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಸೇರಿದ ಮೊದಲ ಬಾಸೆಲ್ ಮಿಶನರಿಯಾಗಿದ್ದಾರೆ.[91]

ಬಾಸೆಲ್ ಮಿಶನಿನಲ್ಲಿ ನಿರ್ದಿಷ್ಟವಾದ ಸಭಾ ನಿಯಮಗಳು ಮತ್ತು ಸಂವಿಧಾನ ಅಸ್ತಿತ್ವದಲ್ಲಿರದಿದ್ದುದರಿಂದ, ಹೊಸ ಸಂವಿಧಾನ ಹಾಗೂ ಸಭಾ ನಿಯಮಗಳು ಅಗೋಸ್ಟ್ 1, 1922 ರಂದು ಜಾರಿಗೆ ಬರುತ್ತವೆ. ಇದು ಬಹಳಷ್ಟು ವಿರೋಧ, ಆಂತರಿಕ ಕಲಹ ಹಾಗೂ ಕೋರ್ಟು ಕೇಸುಗಳಿಗೆ ಕಾರಣವಾಗುತ್ತದೆ. ಹೊಸ ಸಂವಿಧಾನದಂತೆ ಚುನಾವಣೆಗಳು ನಡೆಯುತ್ತವೆ. ಹೀಗೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ಗಳಲ್ಲಿ ದಕ್ಷಿಣ ಕೆನರಾದ ಹಾಗೂ ದಕ್ಷಿಣ ಮರಾಠ ಪ್ರದೇಶಗಳಲ್ಲಿ ಎರಡು ಜಿಲ್ಲಾ ಸಿನೋಡುಗಳು (District synods), ಜಿಲ್ಲಾ ಚರ್ಚ್ ಬೋರ್ಡುಗಳು[92] (District church Boards) ಮತ್ತು ಜಿಲ್ಲಾ ಕಮಿಟಿಗಳು[93] (District committees) ರಚನೆಯಾಗುತ್ತವೆ. ಜಿಲ್ಲಾ ಚರ್ಚ್ ಬೋರ್ಡುಗಳು ಚರ್ಚ್ ಸಂಬಂಧಿಸಿದ ವಿಚಾರಗಳನ್ನು ನೋಡಿಕೊಳ್ಳುವವುಗಳಾಗಿದ್ದು, ಭಾರತೀಯರು ಇದರ ಅಧ್ಯಕ್ಷರಾಗಬಹುದಿತ್ತು. ಜಿಲ್ಲಾ ಕಮಿಟಿಗಳು ಮಿಶನ್‌ಗೆ ಸಂಬಂಧಿಸಿದ ವಿಚಾರಗಳನ್ನು ನೋಡಿಕೊಳ್ಳುವವುಗಳಾಗಿದ್ದು ಮಿಶನರಿಗಳು ಇದರ ಅಧ್ಯಕ್ಷರಾಗುತ್ತಿದ್ದರು. ಈ ಎಲ್ಲಾ ಅಂಗಗಳಲ್ಲಿ ಸುಮಾರು ಶೇಕಡಾ 50ರಷ್ಟು ಸೀಟುಗಳನ್ನು ಭಾರತೀಯರು ಅಲಂಕರಿಸಿದ್ದರು. ಜಿಲ್ಲಾ ಚರ್ಚ್ ಬೋರ್ಡುಗಳ ಅಧ್ಯಕ್ಷರಾಗಿ ಪಾದ್ರಿಯೇತರ ವ್ಯಕ್ತಿಗಳು (layman) ಆಯ್ಕೆಯಾಗುತ್ತಾರೆ. ಹೀಗೆ ಹೊಸ ಸಂವಿಧಾನ ಹಾಗೂ ಸಭಾ ನಿಯಮಗಳ ಕರಡು ರಚನೆಗಳ ಸಂದರ್ಭಗಳಲ್ಲಿ, ಚುನಾವಣೆಗಳ ಸಂದರ್ಭಗಳಲ್ಲಿ, ಹಲವು ಗುಂಪು ಸಂಘರ್ಷಗಳು, ವಿಂಗಡನೆಗಳು ನಡೆಯುತ್ತವೆ.[94]

ಹೊಸ ವ್ಯವಸ್ಥೆಯಲ್ಲಿ ಅಧಿಕಾರಕ್ಕಾಗಿ ನಡೆದ ಹೋರಾಟವು ದಕ್ಷಿಣ ಕೆನರಾಕ್ಕಿಂತ ಹೆಚ್ಚು ದಕ್ಷಿಣ ಮರಾಠದಲ್ಲಿತ್ತು. ದಕ್ಷಿಣ ಮರಾಠದಲ್ಲಿ ಚರ್ಚ್ ಆಡಳಿತದಲ್ಲಿ ಎರಡು ಗುಂಪುಗಳಿದ್ದವು. ಪಾದ್ರಿಯೇತರ ವ್ಯಕ್ತಿಯ ನೇತೃತ್ವದ 'ಚಿಕ್ಕ ಪಕ್ಷ' (small party) ಹಾಗೂ ಪಾದ್ರಿಯ ನೇತೃತ್ವದ 'ದೊಡ್ಡ ಪಕ್ಷ' (Big party). ಹೀಗೆ ಬಾಸೆಲ್ ಮಿಶನರಿಗಳ ನಿರ್ಗಮನವು ಬಾಸೆಲ್ ಮಿಶನ್ ಚರ್ಚುಗಳಲ್ಲಿ ಅಧಿಕಾರದ ಕಿತ್ತಾಟಕ್ಕೆ ಕಾರಣವಾಗುತ್ತದೆ. ಬಾಸೆಲ್ ಮಿಶನರಿಗಳಿರುವಾಗ ಮಿಶನರಿಗಳು ಹೇಳಿದ್ದೆ ಕಾನೂನು ಹಾಗೂ ಅವುಗಳ ಪಾಲನೆಯಾಗುತ್ತಿತ್ತು. ಇದಕ್ಕಿಂತ ಮಿಗಿಲಾಗಿ ಕಠಿಣ ನೀತಿಗಳು ಬಾಸೆಲ್ ಮಿಶನಿನ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು. ದಕ್ಷಿಣ ಮರಾಠದಲ್ಲಿ ಈ ಎರಡೂ ಪಕ್ಷಗಳ ನಡುವಿನ ಹೋರಾಟ ಕೋರ್ಟ್ ಮೆಟ್ಟಿಲನ್ನು ಹೇರುತ್ತದೆ. ಇಲ್ಲಿ ಪ್ರಾರಂಭದಲ್ಲಿ ಹೊಸ ಸಂವಿಧಾನ ಹಾಗೂ ಸಭಾ ನಿಯಮಗಳು ವಿಂಗಡನೆಗೆ (Secession) ಕಾರಣವಾಗುತ್ತವೆ. 1922ರಲ್ಲಿ ಒಬ್ಬ ನಿವೃತ್ತ

ಸೇನಾ ವೈದ್ಯರಾದ ಡಾ. ಸಿ. ಜೆ. ಪ್ರಭಾಕರ (Dr. C. J. Prabhakar) ನೇತೃತ್ವದ ಚಿಕ್ಕ ಪಕ್ಷವೂ ಚರ್ಚ್‌ನಿಂದ ಹೊರ ಹೋಗುವುದಕ್ಕೆ ಇದು ಕಾರಣವಾಗುತ್ತದೆ. ತದನಂತರ ಪುನಃ ಅವರನ್ನು ಚರ್ಚ್‌ನ ವಿಚಾರಗಳಿಗೆ ಬರುವಂತೆ ಮಾಡಲಾಗುತ್ತದೆ. ಹೊಸ ಸಂವಿಧಾನ ಜಾರಿಯಾಗಿ ಚುನಾವಣೆ ನಡೆದ ಸಂದರ್ಭದಲ್ಲಿ ಚಿಕ್ಕ ಪಕ್ಷವು ಎಲ್ಲಾ ಸೀಟುಗಳನ್ನು ಗೆದ್ದು ಡಾ. ಪ್ರಭಾಕರರವರು ಅಧ್ಯಕ್ಷರಾಗುತ್ತಾರೆ. 1926ರ ಜಿಲ್ಲಾ ಚರ್ಚ್ ಬೋರ್ಡಿನ ಚುನಾವಣೆಯಲ್ಲಿ ಡಾ. ಸಿ. ಜೆ. ಪ್ರಭಾಕರರವರ ನೇತೃತ್ವದ ಪಕ್ಷವು ಸೋತು, ದೊಡ್ಡ ಪಕ್ಷದ ಕಡೆಯಿಂದ ಪಾದ್ರಿಯಾದ ಎಸ್. ಬುಡಗಿರವರು (S. Budagi) ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಈ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ಜೆ. ವುರ್‌ನರ್ (J. Urner) ಮಿಶನ್‌ನ ಅಧ್ಯಕ್ಷರಾಗಿದ್ದರು.

ಹೊಸ ಸಂವಿಧಾನವು ದಕ್ಷಿಣ ಕೆನರಾದಲ್ಲಿಯು ಸಂಘರ್ಷಕ್ಕೆ ಕಾರಣವಾಗುತ್ತದೆ. ದಕ್ಷಿಣ ಕೆನರಾದಲ್ಲಿ ಜಿಲ್ಲಾ ಚರ್ಚ್ ಬೋರ್ಡಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಜೋರ್ಜ್ ಹರ್ಬರ್ಟ್ (George Herbert) ರವರು ಕಾರ್ಯವನ್ನು ಮಾಡದಂತೆ ತಡೆಯಲಾಗುತ್ತದೆ. ಇದಕ್ಕೆ ಕಾರಣವೆಂದರೆ ಮಿಶನಿನ ಕೆಲಸಗಾರನಾಗಿದ್ದ ಈತ ಸಾಲವನ್ನು ತೀರಿಸದೇ ಇದ್ದುದು. ಇದು ಹರ್ಬರ್ಟ್ ಬೆಂಬಲಿಗರು 'ಕೆನರಾ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಚರ್ಚ್ ಯುನಿಯನ್'ನನ್ನು (Kanara protestant Christian Church Union) ರಚಿಸಿಕೊಳ್ಳಲು ಕಾರಣವಾಗುತ್ತದೆ. ನಂತರವು ಇದು 'ಚರ್ಚ್ ಯುನಿಯನ್ ಪಾರ್ಟಿ'ಯಾಗಿ (Church Union Party) ಗುರುತಿಸಿಕೊಳ್ಳುತ್ತದೆ. ಅದೇ ರೀತಿ ದಕ್ಷಿಣ ಕೆನರಾದ ಆಸ್ತಿಗಳ ಆಡಳಿತವನ್ನು ಬಲ್ಮಠ ಚರ್ಚ್ ನಿಯಂತ್ರಣಕ್ಕೆ ಒಪ್ಪಿಸಿರುವುದು ಬಹಳಷ್ಟು ಸಮಸ್ಯೆಗೆ ಕಾರಣವಾಗುತ್ತದೆ.[95]

1925ರ ಕಾಲಾವಧಿಯಲ್ಲಿ ಕಾಮನ್‌ವೆಲ್ತ್ ಟ್ರಸ್ಟ್‌ನಿಂದ ಬರುತ್ತಿದ್ದ ಹಣಕಾಸಿನ ನೆರವು ನಿಂತುಹೋಗುತ್ತದೆ. ಇದರಿಂದ ಕೆಲವು ಶಾಲೆಗಳು ಮುಚ್ಚಲ್ಪಡುತ್ತವೆ. ಮಿಶನರಿಗಳ, ಉಪಾಧ್ಯಾಯರ ಹಾಗೂ ಇತರ ನೌಕರರ ಸಂಬಳ ಕಡಿಮೆಯಾಗುತ್ತದೆ.[96] ಹೀಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಆರಂಭದಿಂದ ಅಂತ್ಯದವರೆಗೂ ಅದು ಹಲವು ಸಮಸ್ಯೆಗಳಿಂದ ಬಳಲುತ್ತ, ರೋಗಗ್ರಸ್ಥವಾಗಿರುತ್ತದೆ. ಹೊಸ ಸಂವಿಧಾನ ಹಾಗೂ ಸಭಾ ನಿಯಮಗಳು ಮಿಶನನ್ನು ಛಿದ್ರಗೊಳಿಸುತ್ತವೆ. ಹೀಗೆ ಆರಂಭದ ಕಾಲದಲ್ಲಿ ಒಳಗೊಳಗೆ ನಡೆಯುತ್ತಿದ್ದ ಶೀತಲ ಸಮರವು ತದನಂತರದಲ್ಲಿ ಬೀದಿಗೆ ಬಂದು ಕೋರ್ಟ್ ಮೆಟ್ಟಿಲೇರುತ್ತದೆ. ಕೊನೆಗೆ ಈ ಪರಿಸ್ಥಿತಿಯು ಸ್ಥಳೀಯ ಕ್ರೈಸ್ತರು ಪುನಃ ಬಾಸೆಲ್ ಮಿಶನರಿಗಳಿಗಾಗಿ ಎದುರು ನೋಡುವಂತೆ ಮಾಡುತ್ತದೆ.

1920ರ ದಶಕದಲ್ಲಿ ಬದಲಾದ ಬ್ರಿಟಿಷರ ನೀತಿ:

1920ರ ದಶಕದ ಕಾಲಾವಧಿಯಲ್ಲಿ ಬ್ರಿಟಿಷರ ನೀತಿಗಳಲ್ಲಿ ಬದಲಾವಣೆಯಾಗುವುದನ್ನು ಗಮನಿಸಬಹುದು. ಬ್ರಿಟಿಷ್ ಸರಕಾರ ನಿಧಾನವಾಗಿ ನೀತಿಗಳನ್ನು ಸಡಿಲಿಸಿ ಅಂತ್ಯದ ವೇಳೆಗೆ ಬಾಸೆಲ್ ಮಿಶನರಿಗಳಿಗೆ ಭಾರತಕ್ಕೆ ಬರಲು ಇದ್ದ ನಿರ್ಬಂಧವನ್ನು ತೆರವುಗೊಳಿಸುತ್ತದೆ. 1921 ರಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಯಾವ ಮಿಶನರಿ ಭಾರತಕ್ಕೆ ಬರಬಹುದು ಅಥವಾ ಬರಬಾರದು ಎಂದು ನಿರ್ಧರಿಸುವ ಅಧಿಕಾರ ನೀಡಿರುತ್ತದೆ.[97] ಇದಕ್ಕೆ ಸಂಬಂಧಿಸಿದಂತೆ 1921 ಮೇ 12 ರಂದು ಬಾಂಬೆ ಸರಕಾರದ ಪಾಸ್‌ಪೋರ್ಟ್ ಅಧಿಕಾರಿ, (Passport officer to the government of Bombay) ಬಾಂಬೆಯಲ್ಲಿನ ಸ್ವಿಸ್ ರಾಯಭಾರಿಗೆ ಪತ್ರ ಬರೆದು ಭಾರತದಲ್ಲಿ ಸ್ವಿಸರು ರಜೆಯ ಮೇಲೆ ತಮ್ಮ ದೇಶಕ್ಕೆ ತೆರಳಿ ವಾಪಾಸಾಗಲು ಬೇಡಿಕೆಯ ಮೇರೆಗೆ ಅನುಮತಿ ನೀಡುವುದಕ್ಕೆ ಬ್ರಿಟಿಷ್ ಸರಕಾರದ (No objection) ಅಭ್ಯಂತರವಿಲ್ಲ ಎಂಬುದಾಗಿ ತಿಳಿಸುತ್ತದೆ. ಆದರೆ ಮಿಶನರಿಗಳಿಗೆ ಸಂಬಂಧಿಸಿದಂತೆ ಅವರು ವಾಸ್ತವ್ಯವಿರುವ ಪ್ರದೇಶದ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಅವರ ವರ್ತನೆಯ ಬಗ್ಗೆ ಒಂದು ದೃಢೀಕರಣ ಪತ್ರವನ್ನು ನೀಡಿದವರಿಗೆ ಮಾತ್ರ ವಾಪಸಾತಿ ಅನುಮತಿಯನ್ನು ನೀಡಲಾಗುವುದು ಎಂದು ತಿಳಿಸುತ್ತಾರೆ.[98] 1924ರಲ್ಲಿ ಮಿಶನರಿಗಳಿಂದ ವಿಧೇಯತೆಯ ಒಪ್ಪಿಗೆ ಪತ್ರಕ್ಕೆ (Undertaking of loyalty) ಸಹಿ ಹಾಕಿಸಿ, ಹಲವು ಮಿಶನರಿಗಳನ್ನು ಮಲಬಾರ್‌ಗೆ ಬರಲು[99] ಹಾಗೂ ದಕ್ಷಿಣ ಕೆನರಾಕ್ಕೆ[100] ಬರಲು ಬ್ರಿಟಿಷ್ ಸರಕಾರ ಅನುಮತಿಯನ್ನು ನೀಡುತ್ತದೆ. ಮಾತ್ರವಲ್ಲದೇ ನೀಲಗಿರಿಗೂ ಮಿಶನರಿಗಳು ಪ್ರವೇಶಿಸುವುದಕ್ಕೆ ಬ್ರಿಟಿಷ್ ಸರಕಾರ ಅನುಮತಿಯನ್ನು ನೀಡುತ್ತದೆ.[101] 1917ರಲ್ಲಿ ಬ್ರಿಟಿಷ್ ಸರಕಾರ ವೈರಿ ದೇಶದ ನಾಗರೀಕರು ನೀಲಗಿರಿ ಪ್ರವೇಶಿಸುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಿತ್ತು. ಹೀಗೆ ಮಿಶನರಿಗಳ ಬಗೆಗಿನ ಬ್ರಿಟಿಷ್ ನೀತಿಗಳು ನಿಧಾನವಾಗಿ ಸಡಿಲವಾಗುತ್ತಿದ್ದುದನ್ನು ಈ ಮೇಲಿನ ವಿಚಾರಗಳಲ್ಲಿ ಗಮನಿಸಬಹುದು. ಆದರೆ 1924ರ ಕಾಲಾವಧಿಯಲ್ಲಿ ಜರ್ಮನ್ ಮಿಶನರಿಗಳಿಗೆ ಮಲಬಾರ್ ಪ್ರವೇಶಿಸಲು ಅನುಮತಿಯನ್ನು ಬ್ರಿಟಿಷ್ ಸರಕಾರ ನಿರಾಕರಿಸಿತ್ತು[102] ಎಂಬುದು ಉಲ್ಲೇಖನೀಯ.

1925ರಲ್ಲಿ ಬ್ರಿಟಿಷ್ ಸರಕಾರವು ಬಾಸೆಲ್ ಮಿಶನರಿಗಳಿಗೆ ಮಲಬಾರ್‌ಗೆ ಬರಲು ಅವಕಾಶವನ್ನು ಕಲ್ಪಿಸುತ್ತದೆ.[103] ತದನಂತರ 1926ರಲ್ಲಿ ಬಾಸೆಲ್ ಮಿಶನ್ ಸೇರಿದಂತೆ ಪ್ರಮುಖ ಜರ್ಮನ್ ಮಿಶನ್‌ಗಳಿಗೆ ಬ್ರಿಟಿಷ್ ಸರಕಾರ (Secretary of state) ಮನ್ನಣೆಯನ್ನು (Recognized) ನೀಡುತ್ತದೆ.[104] 1927ರಲ್ಲಿ ಬಾಸೆಲ್ ಮಿಶನ್ ಪುನಃ ದಕ್ಷಿಣ ಕೆನರಾ ಹಾಗೂ

ದಕ್ಷಿಣ ಮರಾಠಗಳಲ್ಲಿನ ತನ್ನ ಹಳೆಯ ಮಿಶನ್ ಠಾಣ್ಯಗಳಲ್ಲಿ ಕೆಲಸವನ್ನು ಆರಂಭಿಸುತ್ತದೆ ಹಾಗೂ ಬ್ರಿಟಿಷ್ ಸರಕಾರ ಬಾಸೆಲ್ ಮಿಶನಿಗೆ ಕಾರ್ಯ ಆರಂಭಿಸಲು ಒಪ್ಪಿಗೆಯನ್ನು ನೀಡುತ್ತದೆ.[105]

ಜರ್ಮನ್ ಮಿಶನ್‌ಗಳ ವರ್ತನೆ:

ಯುದ್ಧದ ನಂತರ ಜರ್ಮನ್ ಮಿಶನ್‌ಗಳ ಮೇಲೆ ಏಳು ವರ್ಷಗಳ ನಿರ್ಬಂಧವನ್ನು ವಿಧಿಸಲಾಗಿತ್ತು. ಅದರೂ ಅಂತಾರಾಷ್ಟ್ರೀಯ ಸಮುದಾಯ ಜರ್ಮನ್ ಮಿಶನ್‌ಗಳು ಅಂತಾರಾಷ್ಟ್ರೀಯ ಮಿಶನ್ ಒಕ್ಕೂಟಗಳಲ್ಲಿ ಭಾಗವಹಿಸುವಂತೆ ಜರ್ಮನರಿಗೆ ಮನವಿ ಮಾಡಿಕೊಂಡಿತ್ತು. 1921ರಲ್ಲಿ ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 1ರ ವರೆಗೆ ಲೇಕ್ ಮೊಹೋನಕ್‌ನಲ್ಲಿ (Lake Mohonk) ನಡೆದ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ಮೊದಲ ಸಭೆಯಲ್ಲಿ ಯಾವುದೇ ಜರ್ಮನ್ ಮಿಶನರಿ ಪ್ರತಿನಿಧಿಗಳು ಭಾಗವಹಿಸುವುದಿಲ್ಲ. ಜರ್ಮನ್ ಮಿಶನರಿ ನಾಯಕರು ಇನ್ನೂ ಕೂಡಾ ಅಂತಾರಾಷ್ಟ್ರೀಯ ಮಿಶನರಿ ವ್ಯವಸ್ಥೆಯಲ್ಲಿ ಒಗ್ಗೂಡಲು ಮನಸ್ಸು ಮಾಡುತ್ತಿರಲಿಲ್ಲ. ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ಮೊದಲ ಸಭೆಯಲ್ಲಿ ಜರ್ಮನ್ ಮಿಶನರಿಗಳಿಗೆ ಯುದ್ಧದಿಂದ ಆಗಿರುವ ಹೊಡೆತದ ಬಗ್ಗೆ ಹಾಗೂ ಇನ್ನು ಮುಂದೆ ಅವುಗಳಿಗೆ ಪುನಃ ಅವರ ಮೊದಲಿನ ಮಿಶನ್ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವುದರ ಬಗ್ಗೆ ಹಲವು ವಿಚಾರಗಳು ಚರ್ಚೆಯಾಗುತ್ತವೆ. ಜರ್ಮನ್ ಮಿಶನರಿಗಳನ್ನು ಅವರ ಕಾರ್ಯಕ್ಷೇತ್ರದಿಂದ ತೆಗೆದು ಹಾಕಿರುವುದು ಅವರ ಅಧ್ಯಾತ್ಮಿಕ ಜೀವನದ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿದೆ. ಅದು ಅಂತಾರಾಷ್ಟ್ರೀಯ ಅಧ್ಯಾತ್ಮಿಕ ಒಗ್ಗಟ್ಟನ್ನು ಬಲಹೀನಗೊಳಿಸಿದೆ ಎಂಬುದಾಗಿ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ಅಭಿಪ್ರಾಯ ಪಡುತ್ತದೆ.[106] ಈ ನಿರ್ಬಂಧಗಳ ಮುಂದುವರಿಕೆಯು ಕ್ರಿಶ್ಚಿಯನ್ ಚರ್ಚಿನ ಆಸಕ್ತಿ ಹಾಗೂ ಧಾರ್ಮಿಕ ಸ್ವತಂತ್ರತೆಯ ತತ್ವಗಳ ಮೇಲೆ ಪರಿಣಾಮವನ್ನು ಬೀರಿದ್ದು, ಜರ್ಮನ್ ಮಿಶನರಿಗಳಿಗೆ ತಮ್ಮ ಮೊದಲಿನ ಕಾರ್ಯವನ್ನು ಕೈಗೊಳ್ಳಲು ಪುನಃ ಅನುಮತಿ ನೀಡುವವರೆಗೆ ಯುದ್ಧದಿಂದಾಗಿ ಅವುಗಳ ಮೇಲಾಗಿರುವ ಪರಿಣಾಮಗಳು ಸಂಪೂರ್ಣವಾಗಿ ವಾಸಿಯಾಗದು[107] ಎಂಬುದಾಗಿ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಯುದ್ಧದ ಸಂದರ್ಭಗಳಲ್ಲಿ ಬೇರೆ ರಾಷ್ಟ್ರಗಳ ನಿಯಂತ್ರಣವಿದ್ದ ಪ್ರದೇಶಗಳಲ್ಲಿ ಕಾರ್ಯನಿವಹಿಸುತ್ತಿದ್ದ ಜರ್ಮನ್ ಮಿಶನರಿಗಳು ಆ ರಾಷ್ಟ್ರಕ್ಕೆ ವಿಧೇಯರಾಗಿ ವರ್ತಿಸಲಿಲ್ಲ ಎಂಬ ವಿಚಾರದ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್, 'ಬೇರೆ ರಾಷ್ಟ್ರಗಳ ನಿಯಂತ್ರಣವಿದ್ದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿದ್ದ ಜರ್ಮನ್ ಮಿಶನರಿಗಳು ಆ ರಾಷ್ಟ್ರಕ್ಕೆ ಅವಿಧೇಯರಾಗಿರಲಿಲ್ಲ. ಜೊತೆಗೆ ಅಲ್ಲಿನ ಜನರು ಅವಿಧೇಯರಾಗುವಂತೆಯೂ ಮಾಡಲಿಲ್ಲ ಎಂದಿದೆ. ಆದರೆ ಕೆಲವೊಂದು ಇಂತಹ ಘಟನೆಗಳು ನಡೆದಿದ್ದರೆ ಅವು ಜರ್ಮನ್ ಮಿಶನರಿ

ಸಂಘಗಳ ನೀತಿಗಳಿಗೆ ಸಂಬಂಧಿಸಿದ್ದಲ್ಲ'[108] ಎಂದು ತಿಳಿಸುತ್ತದೆ. ಯುದ್ಧದ ಸಂದರ್ಭದಲ್ಲಿ ಜರ್ಮನ್ ಮಿಶನರಿಗಳು ಕಾರ್ಯನಿರ್ವಹಿಸಿದ ಮಿಶನ್‌ಗಳನ್ನು ಜರ್ಮನೇತರ ಮಿಶನ್‌ಗಳಿಗೆ ವಹಿಸಲಾಗಿತ್ತು. ಇದರ ಬಗ್ಗೆ ಪ್ರಸ್ತಾಪಿಸಿದ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ಇದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ಮೂಲ ಮಿಶನ್ ಸಂಘಟನೆ, ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆ ಹಾಗೂ ಸ್ಥಳೀಯ ಚರ್ಚುಗಳ ಪ್ರತಿನಿಧಿಗಳು ಒಟ್ಟಾಗಿ ಚರ್ಚಿಸಿ ಇದಕ್ಕೆ ಸಂಬಂಧಿಸಿದಂತೆ ಅಂತಿಮ ನಿರ್ಧಾರಕ್ಕೆ ಬರಬೇಕಾಗಿದೆ ಎಂಬುದಾಗಿ ತಿಳಿಸುತ್ತದೆ.[109] ಹೀಗೆ 1921ರ ಕಾಲಾವಧಿಯಲ್ಲಿ ಅಂತಾರಾಷ್ಟ್ರೀಯ ಸಮುದಾಯ ಜರ್ಮನ್ ಮಿಶನ್‌ಗಳ ಬಗ್ಗೆ ಅಪಾರವಾದ ಕಾಳಜಿಯನ್ನು ತೋರಿಸುತ್ತದೆ.

1922ರ 4ನೇ ಏಪ್ರಿಲ್‌ನಲ್ಲಿ ಜರ್ಮನ್ ಮಿಶನರಿ ಸೊಸೈಟಿಗಳ ಪ್ರತಿನಿಧಿಗಳು, ಹಲ್ಲೆ (Halle) ಎಂಬಲ್ಲಿ ಸಭೆ ಸೇರಿ ಚರ್ಚೆ ನಡೆಸುತ್ತವೆ. ಈ ಸಭೆಯಲ್ಲಿ ಅಂತರಾಷ್ಟ್ರೀಯ ಸಮುದಾಯ ಹಾಗೂ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ತೋರ್ಪಡಿಸಿದ ಕ್ರಿಶ್ಚಿಯನ್ ಸ್ಫೂರ್ತಿಯನ್ನು ಅವು ಗೌರವಿಸುತ್ತವೆ. ಈ ಜರ್ಮನ್ ಮಿಶನರಿಗಳ ಸಭೆಯು, ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ಜರ್ಮನ್ ಮಿಶನ್‌ಗಳ ಕಡೆಗೆ ತೋರ್ಪಡಿಸಿದ ಕಾಳಜಿಗೆ ಧನ್ಯವಾದವನ್ನು ಸಮರ್ಪಿಸುತ್ತದೆ. ಆದರೆ ಅಂತರಾಷ್ಟ್ರೀಯ ಮಿಶನರಿ ಒಗ್ಗೂಡುವಿಕೆಗೆ ಸಂಬಂಧಿಸಿದಂತೆ ನೀರಸವಾದ ಪ್ರತಿಕ್ರಿಯೆಯನ್ನು ನೀಡುತ್ತವೆ. ಈ ಸಭೆಯಲ್ಲಿ ವ್ಯಕ್ತ ಪಡಿಸಿದ ಅಭಿಪ್ರಾಯದ ಪ್ರಕಾರ ಪ್ರಸ್ತುತ ಸನ್ನಿವೇಶದಲ್ಲಿ ಜರ್ಮನ್ ಮಿಶನ್‌ಗಳು ಮುನ್ನಡೆಯುವುದು ಕಷ್ಟಕರವಾಗಿವೆ. ಜರ್ಮನ್ ಜನರು ಇಂದಿಗೂ ಅನುಭವಿಸುತ್ತಿರುವ ಕ್ರೂರ ಹಾಗೂ ಅನ್ಯಾಯದ ನಿರ್ಧಾರಗಳಿಂದ ಜರ್ಮನ್ ಮಿಶನ್‌ಗಳು ಬಳಲುತ್ತಿವೆ. ವರ್ಸೆಲ್ಸ್ ಒಪ್ಪಂದವು ಜರ್ಮನ್ ಮಿಶನ್‌ಗಳನ್ನು ಅಂತಾರಾಷ್ಟ್ರೀಯ ನಿಯಮಗಳಿಂದ ಹೊರಗೆ ಇರಿಸಿದೆ. ಇದು ಮಿಶನ್‌ಗಳು ಅವರ ಮಿಶನ್ ಠಾಣ್ಯಗಳಲ್ಲಿ ಅಸಹಾಯಕರಾಗುವಂತೆ ಮಾಡಿ ಅವರ ಭವಿಷ್ಯವನ್ನು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ ಎಂದು ತಿಳಿಸುತ್ತದೆ. ಜರ್ಮನಿಯ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದ ಕೆಲವು ರಾಷ್ಟ್ರಗಳ ಮಿಶನ್ ಸಂಘಗಳು ಹಾಗೂ ಮಿಶನರಿಗಳು, ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ತನ್ನ ಮೊದಲ ಸಭೆಯಲ್ಲಿ ಕೈಗೊಂಡ ನಿರ್ಧಾರಗಳಿಗೆ ವಿರುದ್ಧವಾಗಿವೆ ಎಂಬುದಾಗಿ ತಿಳಿಸುತ್ತದೆ. ಈ ಎಲ್ಲಾ ವಿಚಾರಗಳಿಂದಾಗಿ ಜರ್ಮನ್ ಮಿಶನರಿಗಳು ಇನ್ನೂ ಅಂತಾರಾಷ್ಟ್ರೀಯ ಮಿಶನ್ ವ್ಯವಸ್ಥೆಯಿಂದ ದೂರ ಉಳಿಯುವಂತೆ ಮಾಡಿವೆ[110] ಎಂಬುದಾಗಿ ವಿಷಾದವನ್ನು ವ್ಯಕ್ತಪಡಿಸಿವೆ. 1922 ರಲ್ಲಿಯೂ ಜರ್ಮನ್ ಮಿಶನ್‌ಗಳಿಗೆ ಇತರ ಕೆಲವು ಮಿಶನ್‌ಗಳ ವರ್ತನೆಯ ಬಗ್ಗೆ ಒಮ್ಮತವಿರಲಿಲ್ಲ. ಆದುದರಿಂದ ಜರ್ಮನ್ ಮಿಶನ್‌ಗಳು ಸಂಪೂರ್ಣವಾಗಿ ಅಂತಾರಾಷ್ಟ್ರೀಯ ಮಿಶನರಿ ವ್ಯವಸ್ಥೆಗೆ ಮರಳುವ ಆಸಕ್ತಿ ತೋರದಿರುವುದನ್ನು ಗಮನಿಸಬಹುದು. ಈ

ಪರಿಸ್ಥಿತಿಯ ಹೊರತಾಗಿ ಈ ಸಭೆಯಲ್ಲಿ ತನ್ನ ಇಬ್ಬರು ಪ್ರತಿನಿಧಿಗಳನ್ನು ಮುಂದಿನ ದಿನಗಳಲ್ಲಿ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್‌ಗೆ ನೇಮಿಸಲು ಅದು ನಿರ್ಧರಿಸುತ್ತದೆ. ಜರ್ಮನ್ ಮಿಶನರಿ ಸಂಘಗಳಿಗೆ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ಆರು ಪ್ರತಿನಿಧಿಗಳನ್ನು ಕಳುಹಿಸುವ ಅವಕಾಶವನ್ನು ಕಲ್ಪಿಸಿತ್ತು.[111]

1922ರ ನಂತರದಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸ್ಥಿತಿ:

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲಾವಧಿಯಲ್ಲಿ ಎಂದರೆ 1923ರಲ್ಲಿ ಕ್ರೈಸ್ತರಾಗುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ ಎಂಬ ವಿಚಾರ ಜಿಲ್ಲಾ ಸಿನೋಡ್‌ನಲ್ಲಿ ಚರ್ಚೆಯಾಗುತ್ತದೆ. ಕ್ರೈಸ್ತರಾಗುವವರು ತಮ್ಮ ಸರ್ವಸ್ವವನ್ನು ತೊರೆದು ಬರಬೇಕಾಗಿದ್ದು, ಅವರಿಗೆ ಬೇಕಾದ ಆಶ್ರಯ ದೊರಕಿಸುವುದು ಕಷ್ಟವಾಗುತ್ತಿರುವುದು ಇರುವ ಒಂದು ನ್ಯೂನ್ಯತೆಯಾಗಿದೆ ಎಂಬ ವಿಚಾರವು ಪ್ರಸ್ತಾಪವಾದಾಗ, ಇಂಥವರಿಗೆ ಆಶ್ರಯ ಮನೆಗಳನ್ನು (Convert's home) ನಿರ್ಮಿಸಿ ಯೋಗ್ಯವಾದ ಧರ್ಮೋಪದೇಶದ ವ್ಯವಸ್ಥೆ ಮಾಡಬೇಕೆಂಬ ಸಲಹೆಗಳು ಬರುತ್ತವೆ. ಆದರೆ ಇದೊಂದು ಸ್ಥಳೀಯವಾದ ವಿಚಾರವಾದುದಲ್ಲದರಿಂದ ಎಲ್ಲಾ ಸಭೆಗಳೊಂದಿಗೆ ಚರ್ಚಿಸುವ ಅವಶ್ಯಕತೆ ಇದೆ ಎಂದು ಸಿನೋಡ್ ಅಭಿಪ್ರಾಯ ಪಟ್ಟು, ಬಡಪಂಚಮರು ಒಂದು ವೇಳೆ ನಮ್ಮ ಆಶ್ರಯಕ್ಕೆ ಬರುವುದಾದರೆ ಅವರಿಗೂ ಯೋಗ್ಯ ಸಹಾಯ ದೊರೆಯುವಂತಾಗಬೇಕು. ಆದುದರಿಂದ ತುರ್ತಾಗಿ ಇದರ ಬಗ್ಗೆ ನಿರ್ಧರಿಸದೇ ಎಲ್ಲಾ ಸಭೆಗಳೊಂದಿಗೆ ಚರ್ಚಿಸುವ ತೀರ್ಮಾನವನ್ನು ಕೈಗೊಳ್ಳಲಾಗುತ್ತದೆ.[112] ಆದರೆ ಈ ವಿಚಾರದ ಬಗ್ಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದ ಮಿಶನರಿಗಳು ಅಷ್ಟೊಂದು ಕ್ರಿಯಾತ್ಮಕ ಆಸಕ್ತಿ ತೋರಿಸಿದಂತೆ ಕಂಡುಬರುವುದಿಲ್ಲ.

ಬಾಸೆಲ್ ಮಿಶನರಿಗಳು ತೆರಳಿದ ಮೇಲೆ ಹಲವು ಕ್ರೈಸ್ತರು ತಮ್ಮ ದಿನನಿತ್ಯದ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಕಷ್ಟಪಡಬೇಕಾಗುತ್ತದೆ. ಆದುದರಿಂದ ಕೆಲವು ಕ್ರೈಸ್ತರು ಗಟ್ಟದ ಕಾಫಿ ತೋಟಗಳಿಗೆ, ರಬ್ಬರ್ ತೋಟಗಳಿಗೂ ಕೆಲಸವನ್ನು ಅರಸಿಕೊಂಡು ವಲಸೆ ಹೋಗಿರುವುದು ಸರ್ವೇಸಾಮಾನ್ಯವಾಗಿರುತ್ತದೆ. ಕೆಲವು ಕ್ರೈಸ್ತರು ಕ್ರೈಸ್ತ ಧರ್ಮದಲ್ಲಿ ಒಪ್ಪಿಗೆಯಾಗದ ನಡವಳಿಕೆಗಳಿಗೆ ಇಳಿಯುವ ಗಂಡಾಂತರವಿತ್ತು ಎಂಬುದು ಮಿಶನರಿಗಳ ಅನಿಸಿಕೆ. ಈ ಬಗ್ಗೆ ಆಯಾ ಸಭೆಯವರು ಇಂಥಾ ಕ್ರೈಸ್ತರಿರುವ ವಿಳಾಸವನ್ನು ಗುರುತಿಸಿ, ಸಿನೋಡಿಗೆ ವರದಿ ಒಪ್ಪಿಸಿದರೆ, ಅಂಥವರಿಗೆ ಯೋಗ್ಯ ವ್ಯವಸ್ಥೆ ಕಲ್ಪಿಸಲಾಗುವುದು ಎಂಬ ನಿರ್ಣಯವು 1923ರ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಿನೋಡಿನಲ್ಲಾಗುತ್ತದೆ[113]. 1924ರಲ್ಲಿ ಇಂತಹ ಕ್ರೈಸ್ತರು ವೆಸ್ಲಿಯನ್ ಮಿಶನಿನ ಪರಿಪಾಲನೆಯಲ್ಲಿದ್ದರೆ, ವೆಸ್ಲಿಯನ್ ಮಿಶನ್ ಜೊತೆ ಪತ್ರ ವ್ಯವಹಾರ ನಡೆಸುವುದು. ವೆಸ್ಲಿಯನ್ ಮಿಶನಿನ ಪರಿಪಾಲನೆ

ಒಪ್ಪದವರಿಗೆ ಅವರ ಅಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸಲು ಯೋಗ್ಯ ವ್ಯವಸ್ಥೆ ಮಾಡಬೇಕೆಂಬ ನಿರ್ಣಯವಾಗುತ್ತದೆ. 1924–25ರ ಕಾಲಾವಧಿಯಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕೆಲವು ಇವ್ಯಾಂಜಲಿಸ್ಟರು ಇಂತಹ ಕ್ರೈಸ್ತರನ್ನು ಭೇಟಿ ಮಾಡಿ ದೇವಾರಾಧನೆ, ಸಂಸ್ಕಾರಗಳನ್ನು ನಡೆಸುತ್ತಾರೆ.[114] 1923ರ ಕಾಲಾವಧಿಗಾಗುವಾಗ ಬಾಸೆಲ್ ಮಿಶನ್ ಕ್ರೈಸ್ತರ ಹಲವು ಆಚರಣೆಗಳಲ್ಲಿ ಗಣನೀಯ ಬದಲಾವಣೆಗಳಾಗಿದ್ದವು. ಬಾಸೆಲ್ ಮಿಶನ್ ಕ್ರೈಸ್ತರು ಕ್ರೈಸ್ತ ನೀತಿಗಳಂತೆ ಮದುವೆಯಾಗದೆ ಕೆಲವರು ರಿಜಿಸ್ಟ್ರಿ ಮದುವೆಯಾಗುತ್ತಿದ್ದರು. [Civil Marriage] ಇಂತಹ ಮದುವೆಯಾದವರ ವಿರುದ್ಧ ಶಿಸ್ತು ಕ್ರಮಗಳನ್ನು ಜರುಗಿಸಿ, ಮುಂದಿನ ದಿನಗಳಲ್ಲಿ ಇದನ್ನು ತಡೆಯುವ ಪ್ರಯತ್ನಗಳನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ನಡೆಸುತ್ತದೆ.[115] ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಉದ್ಯೋಗ ನಿಮಿತ್ತ ದೂರದ ಪ್ರದೇಶಗಳಿಗೆ ತೆರಳಿ ಮಧ್ಯವ್ಯಸನಿಗಳಾಗುತ್ತಾರೆ. ಈ ದುಶ್ಚಟವನ್ನು ತೊಲಗಿಸುವ ಕಾರಣದಿಂದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಪ್ರತಿ ಸಭೆಗಳಲ್ಲಿ ತಿಂಗಳಿಗೊಮ್ಮೆ ಮಧ್ಯಪಾನದಿಂದಾಗುವ ಕೆಟ್ಟ ಪರಿಣಾಮಗಳನ್ನು ತಿಳಿಸಿ, ಕ್ರೈಸ್ತರನ್ನು ಮಧ್ಯಪಾನದಿಂದ ದೂರವಿರಿಸುವ ಪ್ರಯತ್ನವನ್ನು ಮಾಡಿತ್ತು.[116]

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ತನ್ನ ಕಾಲಾವಧಿಯಲ್ಲಿ ಅಪಾರವಾದ ಹಣಕಾಸಿನ ದುಸ್ಥಿತಿಯನ್ನು ಎದುರಿಸುತ್ತದೆ. ಮಿಶನಿನ ಆದಾಯ ಕಡಿಮೆಯಾಗಿ ಖರ್ಚು ಹೆಚ್ಚಾಗುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್‌ಗೆ ಸಹಾಯ ಮಾಡುತ್ತಿದ್ದ ಲುಸಾನ್ ಕಮಿಟಿಯು ಬಹಳಷ್ಟು ಸಂಕಷ್ಟಗಳನ್ನು ಎದುರಿಸಿ, ಕೆನರೀಸ್ ಇವ್ಯಾಂಜಲಿಕಲ್ ಮಿಶನ್‌ಗೆ ವರ್ಷವೊಂದಕ್ಕೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಕಳುಹಿಸುತ್ತಿತ್ತು.[117] ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಮಿಶನಿನ ಕಂದಾಯದ ಸ್ಥಿತಿಯು ಉತ್ತಮವಾಗಿರಲಿಲ್ಲ. 1919ರ ನಂತರ ಕೋಮನ್‌ವೆಲ್ತ್ ನಿಯಂತ್ರಣದಲ್ಲಿದ್ದ ಬಾಸೆಲ್ ಮಿಶನ್ ಕೈಗಾರಿಕೆಗಳಿಂದ ಬರುತ್ತಿದ್ದ ಮೊತ್ತವು ಕಡಿಮೆಯಾಗುತ್ತದೆ. 1920 ರಿಂದ 1923ರ ವರೆಗೆ ಕ್ರಮವಾಗಿ ಅದು 96.000, 90.000, 69.000 ಹಾಗೂ 22.000 ರೂಪಾಯಿಗಳನ್ನು ಕೈಗಾರಿಕೆಗಳಿಂದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಪಡೆದಿರುತ್ತದೆ. ಆದರೆ 1924ರಲ್ಲಿ ಕಾಮನ್‌ವೆಲ್ತ್‌ನಿಂದ ಬರುತ್ತಿದ್ದ ಸಹಾಯವು ಸಂಪೂರ್ಣವಾಗಿ ನಿಂತು ಹೋಗುತ್ತದೆ.[118] 1923ರ ನವೆಂಬರ್‌ನಲ್ಲಿ ಕಾಮನ್‌ವೆಲ್ತ್‌ನ ನಿರ್ವಹಣಾ ನಿರ್ದೇಶಕರು [Managing Director] ತಿಳಿಸುವಂತೆ, 30ನೇ ಜೂನ್ 1923ರ ಅಂತ್ಯಕ್ಕೆ ಕೋಮನ್‌ವೆಲ್ತ್ ಟ್ರಸ್ಟ್‌ಗೆ ಯಾವುದೇ ಡಿವಿಡೆಂಡ್ [dividend] ಗಳನ್ನು ನೀಡುವುದಕ್ಕೆ ಸಾಧ್ಯವಾಗದು ಎಂದು ತಿಳಿಸುತ್ತಾ, ಟ್ರಸ್ಟ್ ಬಳಿ ಈ ವರ್ಷ ಯಾವುದೇ ಲಾಭಾಂಶ ಉಳಿಯದಿರುವುದರಿಂದ, ಮಿಶನ್ ಕೆಲಸಕ್ಕೂ ಹಣಕಾಸಿನ ಸಹಾಯ

ನೀಡಲಾಗದು ಎಂದು ತಿಳಿಸುತ್ತಾರೆ. ಆದರೆ ಭವಿಷ್ಯತ್ತಿನ ಲಾಭಾಂಶವನ್ನು ಗಮನದಲ್ಲಿರಿಸಿಕೊಂಡು 1924ರ ವರ್ಷಕ್ಕೆ 60,000 ದಷ್ಟು ಮೊತ್ತವನ್ನು ಮುಂಗಡವಾಗಿ ಟ್ರಸ್ಟ್ ನೀಡಬಹುದಾಗಿದ್ದು, ಈ ಸಾಲವನ್ನು ಭದ್ರತೆಯ [security] ಆಧಾರದ ಮೇಲೆ ನೀಡಬಹುದೆಂದು ತಿಳಿಸುತ್ತಾರೆ. ಆದರೆ ಬಾಸೆಲ್ ಮಿಶನಿನ ಆಸ್ತಿಗಳೆಲ್ಲವು 'ಮಿಶನ್ ಟ್ರಸ್ಟ್ ಆಫ್ ಸದರನ್ ಇಂಡಿಯಾದ'[119] [The mission trust of southern India] ನಿಯಂತ್ರಣದಲ್ಲಿದ್ದು, ಅದು ಮಾತ್ರ ಸರಕಾರದ ಅನುಮತಿ ಪಡೆದು ಭದ್ರತೆ ಒದಗಿಸಲು ಶಕ್ತವಾಗಿತ್ತು. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ನ್ಯಾಶನಲ್ ಮಿಶನರಿ ಕೌನ್ಸಿಲ್, ಮಿಶನ್ ಟ್ರಸ್ಟ್ ಆಫ್ ಸದರನ್ ಇಂಡಿಯಾವನ್ನು ಸಂಪರ್ಕಿಸಿ, ನಂತರ ಆಸ್ತಿಗಳನ್ನು ಅಡವಿಡುವುದರ ಬಗ್ಗೆ ಸರಕಾರದ ಅನುಮತಿಯನ್ನು ಕೋರುತ್ತದೆ.[120] ದೀರ್ಘಕಾಲದ ನಂತರ ಸರಕಾರವು ಈ ಯೋಜನೆಗೆ ಅನುಮತಿ ನೀಡುತ್ತದೆ.

1924ರಲ್ಲಿ ಮಿಶನ್ ಪ್ರದೇಶಗಳು ಹಣಕಾಸಿನ ಸಹಾಯವಿಲ್ಲದೇ ಬಹಳಷ್ಟು ಸಂಕಷ್ಟವನ್ನು ಎದುರಿಸುತ್ತವೆ. 1924ರಲ್ಲಿ ನ್ಯಾಶನಲ್ ಮಿಶನರಿ ಕೌನ್ಸಿಲ್ ಕೋಮನ್‌ವೆಲ್ತ್‌ನಿಂದ ಬರುವ ಹಣದ ಹಂಚಿಕೆ ಬಗ್ಗೆ ಆಯ-ವ್ಯಯ ಸಿದ್ಧಪಡಿಸಿದ್ದರೂ, ಹಣ ಬಾರದೇ ಮಿಶನ್ ಸಂಕಷ್ಟಕ್ಕೆ ಗುರಿಯಾಗುತ್ತದೆ. ಈ ಅನಿವಾರ್ಯ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಖರ್ಚನ್ನು ಬೇರೆ ಬೇರೆ ರೀತಿಯಲ್ಲಿ ಕಡಿಮೆ ಮಾಡುವ ಯೋಜನೆಯನ್ನು ರೂಪಿಸುತ್ತದೆ. ಅದರಂತೆ ಮಿಶನಿಗಿರುವ ಎರಡು ಹೈಸ್ಕೂಲುಗಳಲ್ಲಿ ಮಂಗಳೂರಿನ ಮಿಶನ್ ಹೈಸ್ಕೂಲನ್ನು ಮುಚ್ಚುವ ಚಿಂತನೆ ನಡೆಸುತ್ತದೆ.[121] ಉಳಿದಂತೆ, ಜಿಲ್ಲಾ ಸಭೆಯ ಖರ್ಚನ್ನು ಕಡಿಮೆ ಮಾಡುವ ನಿರ್ಣಯಗಳಾಗುತ್ತವೆ. ಸುಮಾರು 40 ಮತ್ತು ಹೆಚ್ಚು ಕಾಲ ಸೇವೆ ಸಲ್ಲಿಸಿದ ಪಾಸ್ತರುಗಳನ್ನು ಪೆನ್ಶನಿಗೆ ಶಿಫಾರಸ್ಸು ಮಾಡಲಾಗುತ್ತದೆ. ಕೆಲವು ಉಪಠಾಣ್ಯಗಳನ್ನು ಮುಖ್ಯ ಠಾಣ್ಯಕ್ಕೆ ವಹಿಸಲಾಗುತ್ತದೆ. ಗುಡ್ಡೆ ಮತ್ತು ಶಿರ್ವ ಶಾಲೆಗಳನ್ನು ಮಿಶನಿನ ಆಡಳಿತಕ್ಕೆ ಒಪ್ಪಿಸಿ, ಮೂಡಂಬೈಲ್ ಶಾಲೆಯನ್ನು ಮುಚ್ಚಲು ತೀರ್ಮಾನಿಸುತ್ತಾರೆ.[122]

1923ರ ಕಾಲಾವಧಿಯಲ್ಲಿ ಕೋಮನ್‌ವೆಲ್ತ್ ಟ್ರಸ್ಟ್ ನೀಡುತ್ತಿದ್ದ ಹಣಕಾಸಿನ ನೆರವು 47,000 ದಷ್ಟು ಕಡಿತವಾಗಿ ಕೇವಲ ರೂ.22,000 ಗಳು ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ದೊರಕುತ್ತವೆ. ಇದು ಮುಖ್ಯವಾಗಿ ಮಿಶನಿನ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಗುರುತರವಾದ ಪರಿಣಾಮವನ್ನು ಬೀರುತ್ತದೆ. ದಕ್ಷಿಣ ಕೆನರಾದಲ್ಲಿನ ಶಾಲೆಗಳ ಸಂಖ್ಯೆ 45ರಿಂದ 30ಕ್ಕೆ ಕುಸಿಯುತ್ತದೆ. ಅದೇ ರೀತಿ ಎಲ್ಲಾ ವರ್ಗದ ನೌಕರರ ಸಂಬಳಗಳಲ್ಲಿ 10 ರಿಂದ 15 ಶೇಕಡಾದಷ್ಟು ಕಡಿತವಾಗುತ್ತದೆ. 1923ರ ನೆರೆಯು ಬಾಸೆಲ್ ಮಿಶನ್ ಕ್ರೈಸ್ತರ ಮೇಲೆ ಅಪಾರವಾದ ಪರಿಣಾಮವನ್ನು ಬೀರುತ್ತದೆ. ದಕ್ಷಿಣ ಭಾರತದ ಚರ್ಚುಗಳು ಸುಮಾರು 1,569ರೂ.15ಪೈ.2ಆ. ಯಷ್ಟು ಮೊತ್ತವನ್ನು ಕೆನರೀಸ್

ಇವ್ಯಾಂಜಲಿಕಲ್ ಮಿಶನಿಗೆ ನೀಡಿದ್ದರಿಂದ, ನೆರೆಯಿಂದ ತೊಂದರೆಗೊಳಗಾದವರಿಗೆ ಸ್ವಲ್ಪ ಮಟ್ಟಿನ ಸಹಾಯ ಮಾಡಲು ಸಾಧ್ಯವಾಗುತ್ತದೆ. ಈ ನೆರೆಯು ಚರ್ಚ್ ಆಸ್ತಿಯ ಮೇಲೂ ಪರಿಣಾಮವನ್ನು ಬೀರಿ ಸಾವಿರಾರು ರೂಪಾಯಿಗಳಷ್ಟು ನಷ್ಟವಾಗಿರುತ್ತದೆ.[123] 1923-24ರ ಕಾಲಾವಧಿಯಲ್ಲಿ ಸ್ವಿಜರ್‌ಲ್ಯಾಂಡ್ ಕೂಡ ಸಂಕಷ್ಟಕ್ಕೆ ಗುರಿಯಾಗಿರುತ್ತದೆ. ಹಲವು ಮಂದಿಗೆ ಉದ್ಯೋಗವೇ ಇರುವುದಿಲ್ಲ. ಜೊತೆಗೆ ಹಣದ ಧಾರಣೆಯು ಕಡಿಮೆಯಾಗಿರುತ್ತದೆ.[124] ಮತ್ತೊಂದೆಡೆ ಬಾಸೆಲ್ ಮಿಶನಿನ ಸಭೆಗಳ ಕ್ರೈಸ್ತರು ಸೂಕ್ತವಾಗಿ ಸಭಾವಂತಿಕೆಯನ್ನು ನೀಡುತ್ತಿರಲಿಲ್ಲ ಎಂಬ ಆರೋಪಗಳು ನಿರಂತರವಾಗಿರುತ್ತವೆ. ಆದುದರಿಂದ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಂಕಷ್ಟವು ಮತ್ತಷ್ಟೂ ಹೆಚ್ಚಾಗುತ್ತದೆ. ಸಭೆಗಳಲ್ಲಿನ ಕೆಲವು ಜಗಳ, ಅಸಮಾಧಾನ, ಅಸಂತೃಪ್ತಿ, ವ್ಯಾಜ್ಯ (ಕೇಸು)ಗಳು ಸಭೆಯ ಶಾಂತಿಯನ್ನು ಕೆಡಿಸುತ್ತವೆ. ಅದೇ ರೀತಿ ಮತ್ತೊಂದೆಡೆ ಬಾಸೆಲ್ ಮಿಶನ್ ಕ್ರೈಸ್ತರು ನೇಯುವ ವೃತ್ತಿ ಹಾಗೂ ಕಾರ್ಖಾನೆಗಳಲ್ಲಿ ಉದ್ಯೋಗವಿಲ್ಲದೆ ಸಂಕಷ್ಟಕ್ಕೆ ಗುರಿಯಾಗುತ್ತಾರೆ. ಆದುದರಿಂದ ಇವರು ಕೆಲಸವನ್ನು ಹುಡುಕಿ ಬೇರೆ ಸ್ಥಳಗಳಿಗೆ ಹೋಗುತ್ತಿದ್ದುದು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಸರ್ವೇಸಾಮಾನ್ಯವಾಗಿತ್ತು. ಉಡುಪಿಯಲ್ಲಿ ಆರಂಭವಾಗಿದ್ದ ಮಿಶನ್ ಆಸ್ಪತ್ರೆಯಿಂದ ಹಲವು ಜನರಿಗೆ ಪ್ರಯೋಜನವಾಗಿದ್ದರಿಂದ ಅದರ ಶಾಖೆಗಳನ್ನು ಬೇರೆ ಠಾಣ್ಯಗಳಿಗೂ ವಿಸ್ತರಿಸಬೇಕೆಂಬ ಬೇಡಿಕೆಗಳು ಆರಂಭವಾಗುತ್ತವೆ.[125] ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲಾವಧಿಯಲ್ಲಿ ಮಲ್ಪೆಯಲ್ಲಿಯೂ ಒಂದು ಚಿಕಿತ್ಸಾಲಯ ಆರಂಭಿಸಲಾಗುತ್ತದೆ. ದಕ್ಷಿಣ ಮರಾಠದಲ್ಲಿನ ವೈದ್ಯಕೀಯ ಸೇವೆಯು ಪ್ರಗತಿಯನ್ನು ಸಾಧಿಸುತ್ತದೆ.[126]

1925ರ ಕಾಲಾವಧಿಯಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ಹಣಕಾಸಿನದ್ದೇ ಮುಖ್ಯ ಸಮಸ್ಯೆಯಾಗಿರುತ್ತದೆ. ಸಭಾ ಆದಾಯ ಕಡಿಮೆಯಾಗಿ ಖರ್ಚು ಹೆಚ್ಚಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಸಭಾ ಆಸ್ತಿಯ ಒಕ್ಕಲುಗಳು ಗೇಣಿ ಇತ್ಯಾದಿಯನ್ನು ಕೊಡದೆ ಅಪಾರವಾದ ಬಾಕಿಯನ್ನು ಇಟ್ಟುಕೊಂಡಿದ್ದರು. ಮತ್ತೊಂದೆಡೆ ಸಭಾ ವಂತಿಗೆಯನ್ನು ತೆರಬೇಕೆಂಬ ಬೇಡಿಕೆ ನಿರಂತರವಾಗಿದ್ದರೂ, ಅದಕ್ಕೆ ಸ್ಪಂದನೆ ಕೂಡ ಕಡಿಮೆ ಇರುತ್ತದೆ. ಈ ಬೇಡಿಕೆಯ ಹೊರತಾಗಿ 1925ರಲ್ಲಿ ಸಂಗ್ರಹವಾದ ವಂತಿಕೆಯು ಅದರ ಹಿಂದಿನ ವರ್ಷಕ್ಕಿಂತ ಕಡಿಮೆಯಾಗುತ್ತದೆ. ಕೆಲವು ಮಿಶನ್ ಠಾಣ್ಯಗಳಲ್ಲಿ ಮಿಶನರಿಗಳೇ ಇರಲಿಲ್ಲ ಎಂಬುದು ಈ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ದುಸ್ಥಿತಿ. ಯುದ್ಧದ ಕಾಲದಿಂದ ಸುಮಾರು 1924ರ ವರೆಗೆ ಬಸರೂರು, ಕಾರ್ಕಳ ಠಾಣ್ಯಗಳು ಖಾಲಿ ಬಿದ್ದಿದ್ದವು.[127] ಹೀಗೆ ಬಾಸೆಲ್ ಮಿಶನಿನ ನಿರ್ಬಂಧಿಸುವಿಕೆಯು ಅದರ ಮಿಶನ್ ಠಾಣ್ಯಗಳ ಪತನಕ್ಕೆ ಕಾರಣವಾಗಿ ಅವುಗಳ ನಿರ್ವಹಣೆ ಅಧೋಗತಿಯನ್ನು ತಲುಪುತ್ತದೆ. ಇನ್ನೊಂದು ಕಡೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಮಿಶನನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾಗುತ್ತದೆ.

ಬಾಸೆಲ್ ಮಿಶನಿನ ಇತರ ಪ್ರದೇಶಗಳ ಸ್ಥಿತಿ-ಗತಿ:

ಉತ್ತರ ಕೆನರಾದಲ್ಲಿನ ಹೊನ್ನಾವರದ (Honavar) ಮಿಶನ್ ಕೆಲಸವನ್ನು ಸಂಪೂರ್ಣ ದೇಶಿಯ ಸಂಘಟನೆಯಾಗಿದ್ದ, ನ್ಯಾಶನಲ್ ಮಿಶನರಿ ಸೊಸೈಟಿಗೆ (National Missionary Society) ವಹಿಸಲಾಗುತ್ತದೆ. ಬಾಸೆಲ್ ಮಿಶನಿನ ಇಲ್ಲಿನ ಕೆಲಸವು ಅದರ ಇತರ ಪ್ರದೇಶಗಳಂತೆ ಅಭಿವೃದ್ಧಿಯಾಗಿರಲಿಲ್ಲ. ನ್ಯಾಶನಲ್ ಮಿಶನರಿ ಸೊಸೈಟಿಯು ಅದಕ್ಕೆ ಬೇಕಾದ ಮಾನವ ಸಂಪನ್ಮೂಲವನ್ನು ಸಿರಿಯನ್ ಚರ್ಚ್‌ನಿಂದ (Syrian Church) ಪಡೆಯುತಿತ್ತು. ನ್ಯಾಶನಲ್ ಮಿಶನರಿ ಸೊಸೈಟಿಯು ಇಲ್ಲಿನ ಕೆಲಸವನ್ನು ಯಶಸ್ವಿಯಾಗಿ ಮುಂದುವರಿಸುತ್ತದೆ. 1924ರ ಕಾಲದಲ್ಲಿ ಅದು ಅಲ್ಲಿದ್ದ ಹೈಸ್ಕೂಲಿಗೆ ಒಂದು ಹಾಸ್ಟೆಲ್ (hostel) ಕಟ್ಟುವ ತವಕದಲ್ಲಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅದು ಹಣಕಾಸಿನ ಸಹಾಯವನ್ನು ನಿರೀಕ್ಷಿಸುತ್ತಿತ್ತು.[128] ಬಾಸೆಲ್ ಮಿಶನಿನ ದಕ್ಷಿಣ ಮರಾಠ ಪ್ರದೇಶವು ಈ ಮಿಶನರಿ ಸಂಘಕ್ಕೆ ವಾರ್ಷಿಕ ಸುಮಾರು 100 ರೂಪಾಯಿಗಳನ್ನು ಒದಗಿಸುತಿತ್ತು.[129] ಹೀಗೆ 1919ರ ಕಾಲದಲ್ಲಿ ಇಲ್ಲಿನ ಜವಾಬ್ದಾರಿಯನ್ನು ವಹಿಸಿದ್ದ ನ್ಯಾಶನಲ್ ಮಿಶನರಿ ಸೊಸೈಟಿಯು ಇಲ್ಲಿನ ಕಾರ್ಯವನ್ನು ಬಾಸೆಲ್ ಮಿಶನ್ ಮರಳಿದ ಮೇಲೂ ಮುಂದುವರಿಸಿತು. ಆದುದರಿಂದ ಕ್ರಮೇಣ ಈ ಭಾಗವು ನ್ಯಾಶನಲ್ ಮಿಶನರಿ ಸೊಸೈಟಿಯ ನಿಯಂತ್ರಣದಲ್ಲೇ ಮುಂದುವರಿಯಿತು.

ಬಾಸೆಲ್ ಮಿಶನ್ ಮಲಬಾರ್ ಪ್ರದೇಶದ ಕ್ಯಾಲಿಕಟ್‌ನಲ್ಲಿ (Calicut) ಹೊಂದಿದ್ದ, ಮಲಬಾರ್ ಕ್ರಿಶ್ಚಿಯನ್ ಕಾಲೇಜನ್ನು (Malabar Christian College) ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ (Madras Christian College) ಜವಾಬ್ದಾರಿಗೆ ವಹಿಸಲಾಗುತ್ತದೆ. ಇದರ ಮೇಲ್ವಿಚಾರಣೆಯಲ್ಲಿ ಕಾಲೇಜು ಸಾಕಷ್ಟು ಪ್ರಗತಿಯನ್ನು ದಾಖಲಿಸುತ್ತದೆ. ಮಲಬಾರ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿಜ್ಞಾನ ತರಗತಿಗಳನ್ನು ಮುಂದುವರಿಸುವಂತೆ ಸಹಾಯಕವಾಗಲು ಒಂದು ಹೊಸ ಕಟ್ಟದ ಅವಶ್ಯಕತೆಯನ್ನು ಮನಗಂಡು 1924ರ ಕಾಲಾವಧಿಯಲ್ಲಿ ಸುಮಾರು 1,00,000 ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ. ಈ ಯೋಜನೆಯು ಬಾಸೆಲ್ ಮಿಶನಿಗೆ ಯುದ್ಧ ಆರಂಭವಾಗುವ ಮೊದಲೇ ಇತ್ತು. ಇದಕ್ಕಾಗಿ ಈ ಮೇಲಿನ ಮೊತ್ತದ ಅರ್ಧದಷ್ಟು ಸರಕಾರದಿಂದ ಪಡೆದು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ವತಿಯಿಂದ 25,000ನ್ನು ಸೇರಿಸಿ, ಉಳಿದ ಮೊತ್ತದ ಸಂಗ್ರಹಣೆಗೆ ಮಲಬಾರ್‌ನಲ್ಲಿನ ಧಾರ್ಮಿಕ ಉಪಯೋಗಕ್ಕೆ ಅಗತ್ಯವಿಲ್ಲದ ಕೆಲವು ಆಸ್ತಿಗಳನ್ನು ಮಾರಾಟ ಮಾಡಿ ಯೋಜನೆಯನ್ನು ಸಾಕಾರಗೊಳಿಸುವ ಚಿಂತನೆ ಇರುತ್ತದೆ.[130] ಇದಕ್ಕೆ ಪೂರಕವಾಗುವಂತೆ 1925ರಲ್ಲಿ ಬ್ರಿಟಿಷ್ ಸರಕಾರವು ಮಲಬಾರ್‌ನಲ್ಲಿದ್ದ, ಸಿ ಫ್ಲಿವ್ ಭಂಗ್‌ಲೋ

(Sea view bungalow) ವನ್ನು ಮಾರಾಟ ಮಾಡಲು ಅನುಮತಿಯನ್ನು ನೀಡಿರುವುದನ್ನು ಗಮನಿಸಿಬಹುದು.[131] ಅದೇ ರೀತಿ 1925ರಲ್ಲಿ ಬಾಸೆಲ್ ಮಿಶನಿನ ಹಲವು ಆಸ್ತಿಗಳನ್ನು ಮಾರಾಟ ಮಾಡಲು ಬ್ರಿಟಿಷ್ ಸರಕಾರ ಅನುಮತಿಯನ್ನು ನೀಡಿತ್ತು.

ಬಾಸೆಲ್ ಮಿಶನಿನ ಕೊಡಗಿನ ಮಿಶನ್ ಪ್ರದೇಶ ಹಾಗೂ ನೀಲಗಿರಿ ಪ್ರದೇಶಗಳನ್ನು ವೆಸ್ಲಿಯನ್ ಮಿಶನರಿ ಸೊಸೈಟಿಗೆ ವಹಿಸಲಾಗುತ್ತದೆ. ನೀಲಗಿರಿಯ ಬಾಸೆಲ್ ಮಿಶನ್ ಠಾಣ್ಯಗಳಿಗೆ ಸಂಬಂಧಿಸಿದಂತೆ ಅಲ್ಲಿನ ಚರ್ಚುಗಳನ್ನು ಸಂದರ್ಶಿಸಿ, ಅಲ್ಲಿನ ಜನರು ಯಾವ ಮಿಶನರಿ ಸಂಘದ ಜೊತೆ ಸೇರಿ ಮುಂದುವರಿಯಲು ಸಿದ್ಧರೆಂಬುದನ್ನು ಚರ್ಚಿಸಲಾಗುತ್ತದೆ. ಅವರೆಲ್ಲರೂ ವೆಸ್ಲಿಯನ್ ಮಿಶನ್ ಜೊತೆ ಮುಂದುವರಿಯಲು ಸಮ್ಮತಿಸುತ್ತಾರೆ. ಜೊತೆಗೆ ಈ ಪ್ರದೇಶವು ವೆಸ್ಲಿಯನರು ಕಾರ್ಯನಿರ್ವಹಿಸುತ್ತಿದ್ದ ಪ್ರದೇಶಗಳಿಗೆ ನಿಕಟವಾಗಿದ್ದರಿಂದ ಹಾಗೂ ಭೌಗೋಳಿಕವಾಗಿಯೂ ಅದು ವೆಸ್ಲಿಯನ್ ಮಿಶನಿಗೆ ನಿರ್ವಹಿಸಲು ಸೂಕ್ತವಾದ ಪ್ರದೇಶವಾಗಿದ್ದರಿಂದ ನೀಲಗಿರಿ ಮಿಶನ್ ಪ್ರದೇಶವನ್ನು ವೆಸ್ಲಿಯನರಿಗೆ ವಹಿಸಲಾಗುತ್ತದೆ.[132] ಹೀಗೆ 1846ರಲ್ಲಿ ನೀಲಗಿರಿ ಪ್ರದೇಶದಲ್ಲಿ ಬಡಗ (Badaga) ಜನರ ಮಧ್ಯೆ ಬಾಸೆಲ್ ಮಿಶನ್ ಆರಂಭಿಸಿದ ಕಾರ್ಯವು 1919ರಲ್ಲಿ ವೆಸ್ಲಿಯನ್ ಮಿಶನ್‌ಗೆ ಹಸ್ತಾಂತರಿಸಲ್ಪಡುತ್ತದೆ. ಬಾಸೆಲ್ ಮಿಶನಿನ ಹೋಮ್ ಕಮಿಟಿಯು ನೀಲಗಿರಿಯಲ್ಲಿನ ಬಾಸೆಲ್ ಮಿಶನ್ ಚರ್ಚುಗಳಿಗೆ (Committee on German Missions) ಕಮಿಟಿ ಓನ್ ಜರ್ಮನ್ ಮಿಶನ್ಸ್‌ನ ಮೂಲಕ ಜನವರಿ 22, 1924 ರಲ್ಲಿ ಒಂದು ಪತ್ರವನ್ನು ರವಾನಿಸುತ್ತದೆ. ಈ ಪತ್ರದಲ್ಲಿ ಬಾಸೆಲ್ ಮಿಶನ್ ನೀಲಗಿರಿಯಲ್ಲಿನ ತನ್ನ ಕಾರ್ಯವನ್ನು ಸಂಪೂರ್ಣವಾಗಿ ವೆಸ್ಲಿಯನ್ ಮಿಶನ್ ವಹಿಸಿಕೊಳ್ಳಬೇಕೆಂಬ ವಿನಂತಿಯನ್ನು ಮಾಡುತ್ತದೆ ಹಾಗೂ ಈ ಪತ್ರವನ್ನು ನೀಲಗಿರಿಯಲ್ಲಿನ ಚರ್ಚುಗಳಲ್ಲಿ ಓದುವಂತೆ ಜರ್ಮನ್ ಮಿಶನ್ಸ್ ಕಮಿಟಿಯ ಮುಖ್ಯಸ್ಥರಲ್ಲಿ ವಿನಂತಿಯನ್ನು ಮಾಡುತ್ತದೆ.[133] ನೀಲಗಿರಿಯಲ್ಲಿ ಕೇತಿ (Kethi), ನೇರ್‌ಕಾಂಬಿ (Nerkambi), ವೊಡೇರಿ (Woderi), ಕಾಲ್‌ಹಟ್ಟಿ (Kalhatti), ಟುನೇರಿ (Turneri), ಕೋಟಗಿರಿ (Kotagiri) ಹಾಗೂ ಕಿಲ್ ಕೋಟಗಿರಿ (Kil-kotagiri) ಎಂಬ ಪ್ರಮುಖ ಮಿಶನ್ ಠಾಣ್ಯಗಳಿದ್ದವು. 1928ರ ವೆಸ್ಲಿಯನ್ ಮಿಶನಿನ ವರದಿಯು ನಮಗೆ ನೀಲಗಿರಿಯ ಮಿಶನ್ ಕೆಲಸವು ಬಾಸೆಲ್ ಮಿಶನಿನಿಂದ ವಹಿಸಲ್ಪಟ್ಟಿದ್ದು, ಆ ಪ್ರದೇಶದಲ್ಲಿ ಬೇರೆ ಯಾವುದೇ ಪ್ರೊಟೇಸ್ಟೆಂಟ್ ಮಿಶನ್ ಕಾರ್ಯ ನಿರ್ವಹಿಸದೇ ಇರುವುದರಿಂದ ಈ ಜವಾಬ್ದಾರಿ ನಮಗೆ ಬಂತು ಎಂಬುದಾಗಿ ಉಲ್ಲೇಖಿಸಿದೆ.[134] 1926ರ ಕಾಲಾವಧಿಯಲ್ಲಿ ನೀಲಗಿರಿ ಠಾಣ್ಯಗಳಲ್ಲಿನ ಒಟ್ಟು ಕ್ರೈಸ್ತರ ಸಂಖ್ಯೆ 1053 ರಷ್ಟಿತ್ತು. ಒಂದು ವರ್ಷದ ಅವಧಿಯಲ್ಲಿ ವೆಸ್ಲಿಯನ್ ಮಿಶನ್ ಹಳೆ ಬಾಸೆಲ್ ಮಿಶನ್ ಕ್ರೈಸ್ತರನ್ನು ಸಂಪೂರ್ಣವಾಗಿ

ವೆಸ್ಲಿಯನರನ್ನಾಗಿ ಮಾರ್ಪಡಿಸುವಲ್ಲಿ ಯಶಸ್ವಿಯಾಗುತ್ತದೆ. ನೀಲಗಿರಿ ಪ್ರದೇಶವು ಬಾಸೆಲ್ ಮಿಶನಿನ ಇತರ ಎಲ್ಲಾ ಪ್ರದೇಶಗಳಿಗಿಂತ ಭಿನ್ನವಾಗಿ ಕಂಡು ಬರುತ್ತದೆ. ಇಲ್ಲಿನ ಜನರು ಮಿಶನರಿಗಳಿಗೆ ಬಹಳಷ್ಟು ವಿಧೇಯತೆಯನ್ನು ತೋರ್ಪಡಿಸುವುದನ್ನು ಗಮನಿಸಬಹುದು. ಬಾಸೆಲ್ ಮಿಶನಿನ ಇತರ ಇಲ್ಲಾ ಪ್ರದೇಶಗಳಲ್ಲಿ ಅಪಸ್ವರ, ಒಳಜಗಳಗಳಿದ್ದು ನೀಲಗಿರಿ ಪ್ರದೇಶದಲ್ಲಿ ಅದು ಇರಲಿಲ್ಲವೆನ್ನಬಹುದು.

ನೀಲಗಿರಿಯ ಜೊತೆಗೆ ಕೊಡಗಿನ ಮಿಶನ್ ಕಾರ್ಯವನ್ನು ವೆಸ್ಲಿಯನ್ ಮಿಶನಿಗೆ ವಹಿಸಲಾಗಿರುತ್ತದೆ. ಕೊಡಗಿನಲ್ಲಿ ಬಾಸೆಲ್ ಮಿಶನಿಗೆ ಮರ್‌ಕೆರ (Mercara) ಹಾಗೂ ಅನಂದಪುರ (Anandapur) ಎಂಬ ಎರಡು ಮಿಶನ್ ಠಾಣ್ಯಗಳಿದ್ದವು. ಭೌಗೋಳಿಕವಾಗಿ ಹಾಗೂ ಭಾಷಾ ವಿಚಾರಕ್ಕೆ ಸಂಬಂಧಿಸಿದಂತೆ ವೆಸ್ಲಿಯನ್ ಮಿಶನ್ ಇದರ ನಿರ್ವಹಣೆಗೆ ಸೂಕ್ತವಾಗಿದ್ದರಿಂದ ಕೊಡಗಿನ ಜವಾಬ್ದಾರಿ ಕೂಡಾ ವೆಸ್ಲಿಯನ್‌ಗೆ ವರ್ಗಾವಣೆಯಾಗುತ್ತದೆ.[135] ಆದರೆ ವೆಸ್ಲಿಯನ್ ಮಿಶನರಿಗಳಿಗೆ ನೀಲಗಿರಿಯನ್ನು ನಿರ್ವಹಿಸಿದಷ್ಟು ಸುಲಭವಾಗಿ ಕೊಡಗನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಕೊಡಗು ವೆಸ್ಲಿಯನರಿಗೆ ಬಿಸಿ ತುಪ್ಪವಾಗಿ ಪರಿಣಮಿಸುತ್ತದೆ. ಯಾಕೆಂದರೆ ವೆಸ್ಲಿಯನ್ ಮಿಶನರಿಗಳನ್ನು ಪ್ರಬಲವಾಗಿ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ವಿರೋಧಿಸುತ್ತಾರೆ. ಇದು ಎಲ್ಲಿಯವರೆಗೆ ಮುಟ್ಟುತ್ತದೆಂದರೆ ವೆಸ್ಲಿಯನರಿಗೆ ಆರಾಧನೆಗಳನ್ನು ಮಾಡಲು ಇಲ್ಲಿನ ಕ್ರೈಸ್ತರು ಅವಕಾಶ ಕಲ್ಪಿಸುವುದಿಲ್ಲ. ವೆಸ್ಲಿಯನ್ ಮಿಶನರಿಗಳು ಎಲ್ಲಾ ವಿಧದಲ್ಲೂ ಬಾಸೆಲ್ ಮಿಶನರಿಗಳಿಗಿಂತ ಭಿನ್ನರಾಗಿದ್ದಾರೆಂದು ಆರೋಪಿಸಿ ಅವರನ್ನು ವಿರೋಧಿಸಲಾಗುತ್ತದೆ. ಇವರಿಬ್ಬರ ಎಂದರೆ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರ ಹಾಗೂ ವೆಸ್ಲಿಯನರ ಮಧ್ಯೆ ಸಂಧಾನವು ಸಾಧ್ಯವಾಗುವುದಿಲ್ಲ. ಹೀಗೆ ಕೊಡಗಿನ ಸಭೆಯು 1923 ಕ್ಕಾಗುವಾಗ ವಿಭಜನೆಯಾಗುತ್ತದೆ. ಬಾಸೆಲ್ ಮಿಶನರಿಗಳ ಹಾಗೂ ವೆಸ್ಲಿಯನ್ ಮಿಶನರಿಗಳ ನಡುವೆ ಕೊಡಗಿನ ವಿಚಾರದ ಮೇಲೆ ಕಲಹವೇ ನಡೆಯುತ್ತದೆ. ವೆಸ್ಲಿಯನರು ಕೊಡಗಿನ ಕ್ರೈಸ್ತರ ಮೇಲೆ ನಿಯಂತ್ರಣ ಸಾಧಿಸಲು ಪೋಲಿಸರ ಸಹಾಯವನ್ನು ಪಡೆದಿದ್ದರು ಎಂಬ ಬಾಸೆಲ್ ಮಿಶನರಿಗಳ ಹೇಳಿಕೆಗೆ ಪ್ರಬಲವಾದ ಹೇಳಿಕೆಯನ್ನು ವೆಸ್ಲಿಯನ್ ಮಿಶನಿನ ಅಧ್ಯಕ್ಷರಾಗಿದ್ದ ಜಿ. ಸ್ವಾಡೇ (G. Sawday) ರವರು ನೀಡುತ್ತಾರೆ. 'ಯುದ್ಧದ ಪರಿಸ್ಥಿತಿಯ ಸಂದರ್ಭದಲ್ಲಿ ಬಾಸೆಲ್ ಮಿಶನ್ ಸಹಾಯಕ್ಕೆ ಯಾರೂ ಬರಲಿಲ್ಲ. ನಾವು ಬರಬೇಕಾಯಿತು. ಹತ್ತು ವರ್ಷಗಳಿಂದ ನಾವು ನಮ್ಮ ಹಣವನ್ನು ನಿಮಗಾಗಿ ಖರ್ಚುಮಾಡಿದೆವು ಮತ್ತು ಮಿಶನರಿಗಳನ್ನು ಕಳುಹಿಸಿದೆವು. ಬಾಸೆಲ್ ಮಿಶನಿಗೆ ಪುನಃ ಮರಳಲು ಸಾಧ್ಯವಿಲ್ಲ. ಒಂದು ವೇಳೆ ಅವರು ಮುಂದೆ ಬಂದಲ್ಲಿ ನಿಮ್ಮನ್ನು ಅವರಿಗೆ ವರ್ಗಾಯಿಸಲು ನಾವು ಸಿದ್ಧರಿದ್ದೇವೆ. ಆದರೆ ಬರುವ ಭಾನುವಾರದಿಂದ ನೀವು ವೆಸ್ಲಿಯನರೆಂದು ಕರೆದುಕೊಳ್ಳುವಿರಿ ಬಾಸೆಲ್ ಮಿಶನಿನವರು ಎಂದು

ಅಲ್ಲ'[136] ಎಂದು ಅವರು ತೀಕ್ಷ್ಣವಾಗಿ ಹೇಳುತ್ತಾರೆ. ವೆಸ್ಲಿಯನರ ನೀತಿಗಳು ಕೊಡಗಿನ ಬಹುಪಾಲು ಕ್ರೈಸ್ತರು ಅವರದ್ದೇ ಆದ ಸ್ವತಂತ್ರ ಚರ್ಚ್ ಸೇವೆಯನ್ನು ಆರಂಭಿಸುವಂತೆ ಮಾಡುತ್ತದೆ. ಮತ್ತೊಂದೆಡೆ ಕೊಡಗಿನ ಕ್ರೈಸ್ತರ ಈ ರೀತಿಯ ವರ್ತನೆಯ ಹಿಂದೆ ಬಾಸೆಲ್ ಮಿಶನರಿಗಳ ಕೈವಾಡವಿರಬೇಕೆಂಬ ಶಂಕೆಯು ವೆಸ್ಲಿಯನರಲ್ಲಿ ಮೂಡುತ್ತದೆ. ಕೊಡಗಿನ ಕ್ರೈಸ್ತರು ಒಂದು ಕಡೆ ವೆಸ್ಲಿಯನರನ್ನು ವಿರೋಧಿಸಿದರೆ ಮತ್ತೊಂದೆಡೆ ಬಾಸೆಲ್ ಮಿಶನ್ ಪುನಃ ಬಂದು ಇಲ್ಲಿನ ಕೆಲಸವನ್ನು ನಿರ್ವಹಿಸಬೇಕೆಂಬ ಬೇಡಿಕೆಯೊಂದಿಗೆ ಹಲವು ಪತ್ರಗಳನ್ನು ಬಾಸೆಲ್ ಹಾಗೂ ವೆಸ್ಲಿಯನ್ ಕೇಂದ್ರ ಕಛೇರಿಗಳಿಗೆ ಬರೆಯಲಾಗುತ್ತದೆ. ಈ ಬೇಡಿಕೆ ಪತ್ರಗಳು ಸ್ಥಳೀಯ ಚರ್ಚ್ ನಿಧಿಯ (Local church funds) ಆಡಳಿತ, ಹಳೆ ಚರ್ಚ್ ನೀತಿ ಮತ್ತು ಹಳೆಯ ಪೂಜಾ ವಿಧಾನಕ್ಕೆ ಮುಖ್ಯವಾಗಿ ಸಂಬಂಧಿಸಿದಾಗಿದ್ದು, ವೆಸ್ಲಿಯನರು ಈ ವಿಚಾರಗಳಲ್ಲಿ ಬದಲಾವಣೆ ತಂದಾಗ ಬಾಸೆಲ್ ಮಿಶನ್ ಕ್ರೈಸ್ತರ ಬಲವಾದ ಪ್ರತಿರೋಧ ಆರಂಭವಾಗುತ್ತದೆ. ಆದುದರಿಂದಲೇ ವೆಸ್ಲಿಯನರು 'ಬಾಸೆಲ್ ಮಿಶನ್ ಕೊಡಗಿನ ಕ್ರೈಸ್ತರನ್ನು ಗುಲಾಮರನ್ನಾಗಿಸಿ ದೊಡ್ಡ ತಪ್ಪು ಎಸಗಿದೆ' ಎಂಬುದಾಗಿ ಆರೋಪಿಸುತ್ತಾರೆ.[137]

ಹಳೆ ಬಾಸೆಲ್ ಮಿಶನಿನ ಆರಾಧನಾ ಕ್ರಮಗಳನ್ನು, ಪೂಜಾ ಕ್ರಮಗಳನ್ನು ತಿರುಚಿದ್ದಾರೆ ಎಂಬ ಆರೋಪವನ್ನು ಸ್ಥಳೀಯ ಕ್ರೈಸ್ತರು ವೆಸ್ಲಿಯನರ ಮೇಲೆ ಮಾಡುತ್ತಾರೆ. ಇಲ್ಲಿನ ಎರಡು ಅನಾಥಾಲಯಗಳನ್ನು ಹಾಗೂ ಕೆಲವು ಶಾಲೆಗಳನ್ನು ಮುಚ್ಚಿದ್ದಾರೆ. ಅದೇ ರೀತಿ ವೆಸ್ಲಿಯನರು ಬಾಸೆಲ್ ಮಿಶನಿನ ಆಸ್ತಿಗಳನ್ನು ಕಡೆಗಣಿಸಿ ಅವುಗಳನ್ನು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡಲಿಲ್ಲ ಎಂಬ ಆರೋಪಗಳನ್ನು ಮಾಡುತ್ತಾರೆ. ಈ ಹಂತದಲ್ಲಿ ವೆಸ್ಲಿಯನರು ಬಾಸೆಲ್ ಮಿಶನಿನ ಹಳೆಯ ಆರಾಧನಾ ಕ್ರಮಗಳನ್ನೇ ಮುಂದುವರಿಸುವುದಾಗಿ ಭರವಸೆಯನ್ನು ನೀಡುತ್ತಾರೆ. ಸ್ಥಳೀಯ ಕ್ರೈಸ್ತರು ಅದರ ಮಾರ್ಪಾಡಿಗೆ ಆಸಕ್ತಿ ತೋರಿದಾಗ ಮಾತ್ರ ಅದರಲ್ಲಿ ಬದಲಾವಣೆ ಮಾಡುವುದಾಗಿಯೂ ಭರವಸೆಗಳನ್ನು ನೀಡುತ್ತಾರೆ. ಆದರೆ ನವೆಂಬರ್ 11, 1923ರಲ್ಲಿ ವೆಸ್ಲಿಯನರು ಇವರ ಮೇಲೆ ಪೋಲಿಸರನ್ನು ಬಳಸಿದ್ದು ಪರಿಸ್ಥಿತಿಯು ಇನ್ನಷ್ಟು ಹದಗೆಡುವಂತೆ ಮಾಡುತ್ತದೆ. ಇದು ಸ್ಥಳೀಯ ಕ್ರೈಸ್ತರು ಮರ್ಕೇರ (Mercara) ಚರ್ಚ್‌ನಲ್ಲಿ ಪ್ರತ್ಯೇಕ ಆರಾಧನೆಯನ್ನು ಮಾಡುವಂತೆ ಮಾಡುತ್ತದೆ. ಮರ್ಕೇರ ಬಾಸೆಲ್ ಮಿಶನ್ ಕ್ರೈಸ್ತರು ವೆಸ್ಲಿಯನ್‌ರನ್ನು ಪ್ರಬಲವಾಗಿ ವಿರೋಧಿಸುತ್ತಿದ್ದು ವೆಸ್ಲಿಯನರನ್ನು ಅಲ್ಲಿನ ಚರ್ಚ್‌ನೊಳಗೆ ಪ್ರವೇಶಿಸಲು ಬಿಡದೆ ವಿರೋಧಿಸುತ್ತಾರೆ. ಆದುದರಿಂದ ಈ ಚರ್ಚ್‌ನೊಳಗೆ ಪೂಜಾ ವಿಧಿ ವಿಧಾನಗಳನ್ನು ನಡೆಸಲು ವೆಸ್ಲಿಯನರು ಸ್ಥಳೀಯರ ವಿರುದ್ಧ ಪೋಲಿಸರನ್ನು ಬಳಸುತ್ತಾರೆ. ಇದು ಸ್ಥಳೀಯರಿಗೆ ವೆಸ್ಲಿಯನರ ಬಗ್ಗೆ ಇದ್ದ ಕೋಪ ಮತ್ತಷ್ಟು ಹೆಚ್ಚಾಗಲು ಕಾರಣವಾಗುತ್ತದೆ.[138] 1924ರಲ್ಲಿ ಕೊಡಗಿನ ಹಲವಾರು ಕ್ರೈಸ್ತರು ವೆಸ್ಲಿಯನರೊಂದಿಗೆ

ಅಸಂತೃಪ್ತಿಯನ್ನು ಹೊಂದಿರುವುದರಿಂದ ನ್ಯಾಶನಲ್ ಮಿಶನರಿ ಕೌನ್ಸಿಲ್ (National Missionary Council) ಒಂದು ಆಯೋಗವನ್ನು ಕಳುಹಿಸಿ ಇಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಲು ಪ್ರಯತ್ನಿಸುತ್ತದೆ. ಈ ಆಯೋಗವು ಕೊಡಗಿನ ಪರಿಸ್ಥಿತಿಯನ್ನು ಕೂಲಂಕುಶವಾಗಿ ಪರಿಶೀಲಿಸುತ್ತದೆ. ಈ ಆಯೋಗವು ಅಭಿಪ್ರಾಯ ಪಡುವಂತೆ ಕೊಡಗಿನಲ್ಲಿದ್ದ ವೆಸ್ಲಿಯನ್ ಮಿಶನರಿಯು ಸ್ಥಳೀಯ ಕ್ರೈಸ್ತರೊಂದಿಗೆ ಉತ್ತಮ ಸಂಪರ್ಕ ಮತ್ತು ಸಂಬಂಧ ಹೊಂದದೇ ಇರುವುದು ಈ ಪರಿಸ್ಥಿತಿಗೆ ಕಾರಣವೆನ್ನುತ್ತಾ, ಈ ನೀತಿಯು ಸ್ಥಳೀಯರಲ್ಲಿ ಅಸಂತೃಪ್ತಿಯನ್ನು ಹುಟ್ಟು ಹಾಕಿದೆ ಎಂದು ತಿಳಿಸುತ್ತದೆ. ಆದರೆ ಆಯೋಗವು ವೆಸ್ಲಿಯನರು ಕೊಡಗನ್ನು ಬಿಟ್ಟು ಹೋಗುವಂತೆ ಸೂಚಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಯಾಕೆಂದರೆ ಅಲ್ಲಿ ಆಗಲೇ ಎರಡು ಗುಂಪುಗಳಾಗಿದ್ದು, ಇವರ ಕೈಯಲ್ಲಿ ಮಿಶನ್ ಉಳಿದರೆ, ಅದನ್ನು ಮುಂದುವರಿಸುವ ಸಮರ್ಥ ನಾಯಕರು ಇರಲಿಲ್ಲ ಎಂದು ಅಭಿಪ್ರಾಯಪಟ್ಟ ಆಯೋಗವು ಇದು ಇಲ್ಲಿನ ಮಿಶನರಿ ಚಟುವಟಿಕೆಗಳನ್ನು ನಾಶಮಾಡಬಹುದು ಎಂಬ ವಾದವನ್ನು ಮುಂದಿಡುತ್ತದೆ. ಅಂತಿಮವಾಗಿ ಆಯೋಗವು ಇಲ್ಲಿನ ವಿಂಗಡನೆಗೆ ಕಾರಣರಾಗಿರುವ ಮಿಶನರಿಯನ್ನು ತೆಗೆಯುವಂತೆ ಸೂಚಿಸಿ, ಇಲ್ಲಿನ ನೈಜ ಪ್ರಗತಿಗೆ ಕಾರ್ಯನಿರ್ವಹಿಸುವಂತೆ ಸೂಚಿಸುತ್ತದೆ.[139] ಆಯೋಗವು ತನ್ನ ಬೇಟಿಯ ಸಂದರ್ಭದಲ್ಲಿ ಅಸಂತೃಪ್ತರಾಗಿದ್ದ ಬಹುಪಾಲು ಕ್ರೈಸ್ತರ ಗುಂಪು (Majority party) ಹಾಗೂ ಇತರರೊಂದಿಗೆ (Minority party) ಚರ್ಚಿಸಿ ವೆಸ್ಲಿಯನರೊಂದಿಗೆ ಸಹಕರಿಸುವಂತೆ ವಿನಂತಿಸುತ್ತದೆ. ಆದರೆ ಅವರು ಅದಕ್ಕೆ ಸಮ್ಮತಿಸದ್ದರಿಂದ ಆಯೋಗದ ಎಲ್ಲಾ ಪ್ರಯತ್ನಗಳು ನಿಷ್ಪ್ರಯೋಜನಕವಾಗಿತ್ತು. ಇಲ್ಲಿನ ಕ್ರೈಸ್ತರ ನಡವಳಿಕೆಯ ಬಗ್ಗೆ ಉಲ್ಲೇಖಿಸುತ್ತಾ ಅಯೋಗವು ಅದನ್ನು ಅಕ್ರಿಸ್ತೀಯ (Un-Christian) ವರ್ತನೆ ಎಂಬುದಾಗಿ ಬಣ್ಣಿಸುತ್ತದೆ.[140]

ಕೊಡಗಿನ ಈ ಸಂದಿಗ್ಧ ಪರಿಸ್ಥಿತಿಯಲ್ಲಿ 1925ರ ನವೆಂಬರ್‌ನಲ್ಲಿ ಜರ್ಮನ್ ಮಿಶನ್ ಕಮಿಟಿಯ ಸೆಕ್ರೆಟರಿಯಾಗಿದ್ದ ಮದ್ರಾಸಿನ ಬಿಷಪರು ಮಡಿಕೇರಿಗೆ ಭೇಟಿ ನೀಡುತ್ತಾರೆ. ಕೊಡಗಿನ ಕ್ರೈಸ್ತರನ್ನುದ್ದೇಶಿಸಿ ಮಾತನಾಡಿದ್ದ ಅವರು ಆ ಕಾಲದಲ್ಲಿ ಮಿಶನ್‌ಗಳ ಪರಿಸ್ಥಿತಿ ಬಾಸೆಲ್ ಮಿಶನಿಗಿರುವ ಸಂದಿಗ್ಧ ಹಾಗೂ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಕೊಡಗಿನ ಕ್ರೈಸ್ತರಿಗೆ ಮನವರಿಕೆ ಮಾಡಲು ಪ್ರಯತ್ನಿಸಿ ವೆಸ್ಲಿಯನರ ಜೊತೆ ಸಹಕರಿಸುವಂತೆ ಮನವಿಯನ್ನು ಮಾಡಿದ್ದರು. ಆದರೆ ವೆಸ್ಲಿಯನರ ನಡವಳಿಕೆಯಿಂದ ಮನನೊಂದಿದ್ದ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ಅವರ ನಿರ್ಧಾರದಿಂದ ಹಿಂದೆ ಸರಿಯುವುದೇ ಇಲ್ಲ. ಒಂದು ವೇಳೆ ಕೊಡಗು ವೆಸ್ಲಿಯನರಿಗೆ ಸಹಕರಿಸಿದ್ದರೆ

ಅದು ಪುನಃ ಬಾಸೆಲ್ ಮಿಶನಿನ ಮಿಶನರಿಗಳ ಕೈಗೆ ಬರದೇ ನೀಲಗಿರಿಯಂತೆ ವೆಸ್ಲಿಯನಿನ ಭಾಗವಾಗಿ ಮುಂದುವರಿಯುತ್ತಿತ್ತು.[141]

ಹೀಗೆ ಕೊಡಗಿನಲ್ಲಿ ವೆಸ್ಲಿಯನ್ ಮಿಶನಿನ ಕಾಲಾವಧಿಯು ಕ್ರೈಸ್ತರ ಹಾಗೂ ಮಿಶನರಿಗಳ ನಡುವಿನ ಸಂಘರ್ಷದ ಕಾಲಾವಧಿಯಾಗಿದೆ ಎಂದು ಬಣ್ಣಿಸಬಹುದು. 1926ರಲ್ಲಿ ಮರ್ಕೇರದಲ್ಲಿ (Mercara) 66 ಕ್ರೈಸ್ತರಿದ್ದು, ಈ ಸಂಖ್ಯೆಯು 1927ರಲ್ಲಿ 60 ಕ್ಕೆ ಇಳಿದು, 1928ರಲ್ಲಿ 68 ಕ್ಕೆ ಏರಿಕೆಯಾಗುತ್ತದೆ. ಅದೇ ರೀತಿ ಅಲ್ಲಿನ ಇನ್ನೊಂದು ಠಾಣ್ಯವಾದ ಆನಂದಪುರದಲ್ಲಿ 1926ರಲ್ಲಿ 151, 1927ರಲ್ಲಿ 189 ಹಾಗೂ 1928ರಲ್ಲಿ 141 ಮಂದಿ ಕ್ರೈಸ್ತರಿದ್ದುದರ ಬಗ್ಗೆ ವೆಸ್ಲಿಯನ್ ಮಿಶನ್ ವರದಿಗಳು ಮಾಹಿತಿ ನೀಡುತ್ತವೆ. 1928ರ ವರೆಗಿನ ಕೊಡಗಿನ ಮಾಹಿತಿಗಳು ವೆಸ್ಲಿಯನ್ ಮಿಶನಿನ ವರದಿಗಳಲ್ಲಿ ಉಲ್ಲೇಖಿಸಲ್ಪಟ್ಟರೆ ತದನಂತರದ ವರ್ಷದ ವರದಿಗಳಲ್ಲಿ ಕೊಡಗಿನ ಬಗ್ಗೆ ಮಾಹಿತಿಗಳಿಲ್ಲ. ಆದರೆ ನೀಲಗಿರಿಯ ಬಗೆಗಿನ ಮಾಹಿತಿಗಳು ಇವೆ. 1928ರ ನಂತರವೂ ನೀಲಗಿರಿ ವೆಸ್ಲಿಯನ್ ಭಾಗವಾಗಿ ಮುಂದುವರಿದರೆ, ಕೊಡಗು ಬಾಸೆಲ್ ಮಿಶನಿಗೆ ಮರಳಿ ಹಸ್ತಾಂತರವಾಗುವುದನ್ನು ಗಮನಿಸಬಹುದು.

ಬಾಸೆಲ್ ಮಿಶನ್ ಕಾರ್ಯನಿರ್ವಹಿಸುತ್ತಿದ್ದ ಇನ್ನೊಂದು ಪ್ರಮುಖವಾದ ಪ್ರದೇಶವೆಂದರೆ ಮಲಬಾರ್. 1919ರ ಹೊಸ ವ್ಯವಸ್ಥೆಯಂತೆ ಇಲ್ಲಿನ ಜವಾಬ್ದಾರಿಯು ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ಗೆ (South India United Church) ವರ್ಗಾವಣೆಯಾಗುತ್ತದೆ.[142] ಹೀಗೆ ಮುಂದುವರಿದ ಇಲ್ಲಿನ ಮಿಶನ್ ಕಾರ್ಯವು 1925ರ ಸಂದರ್ಭಕ್ಕಾಗುವಾಗ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ಗೆ ಕಷ್ಟಕರವಾಗಿ ಪರಿಣಮಿಸುತ್ತದೆ. ಆದುದರಿಂದ ಅದು 1926ರ ನಂತರ ಮಲಬಾರಿನ ಕೆಲಸವನ್ನು ನಡೆಸಿಕೊಂಡು ಹೋಗುವುದಕ್ಕೆ ತನ್ನಿಂದ ಸಾಧ್ಯವಿಲ್ಲ ಎಂಬ ಮಾತನ್ನು ಹೇಳಿದಾಗ, ಜರ್ಮನ್ ಮಿಶನ್ಸ್ ಕಮಿಟಿಯು ಬಾಸೆಲ್ ಮಿಶನ್ ಇಲ್ಲಿನ ಕಾರ್ಯವನ್ನು ವಹಿಸಿಕೊಳ್ಳುವಂತೆ ವಿನಂತಿಸುತ್ತದೆ. ಇದಕ್ಕೆ ಬಾಸೆಲ್ ಮಿಶನ್ ತನ್ನ ಸಮ್ಮತಿಯನ್ನು ಸೂಚಿಸುತ್ತದೆ.[143] ಮತ್ತೊಂದೆಡೆ 1924ರ ಕಾಲಾವಧಿಯಲ್ಲಿಯೇ ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್, ಬಾಸೆಲ್ ಮಿಶನ್ ಭಾರತಕ್ಕೆ ಹೋಗುವ ದಾರಿಯನ್ನು ಸುಗಮಗೊಳಿಸುವ ಪ್ರಯತ್ನವನ್ನು ಆರಂಭಿಸುತ್ತದೆ. ಇಂಗ್ಲೆಂಡಿನಲ್ಲಿ ಒಲ್ಡಾಹಾಮ್ (J. H. Oldhm) ರವರು ಹಾಗೂ ಇತರ ಬ್ರಿಟಿಷ್ ಸಂಘಗಳು ನಡೆಸಿದ ಪ್ರಯತ್ನಗಳಿಂದಾಗಿ, ಮತ್ತೊಂದೆಡೆ ಮದ್ರಾಸ್‌ನಿಂದ ನಡೆದ ಪ್ರಯತ್ನಗಳಿಂದಾಗಿ, ಬ್ರಿಟಿಷ್ ಸರಕಾರವು ಬಾಸೆಲ್ ಮಿಶನರಿಗಳಿಗೆ ಭಾರತಕ್ಕೆ ಬರುವಂತೆ ಅನುಮತಿ ನೀಡಲು ಒಪ್ಪಿಕೊಳ್ಳುತ್ತದೆ. 1924ರಲ್ಲಿ ಜರ್ಮನರಾದ, ಬಾಸೆಲ್ ಮಿಶನಿನ ಸದಸ್ಯರಾಗಿದ್ದ ರೆವೆ. ಸೆಂಗ್ಲೆ ಮತ್ತು ಅವರ ಪತ್ನಿ

(Rev. and Mrs. Sengle) ಹಾಗೂ ಸ್ವಿಸ್‌ರಾದ ರೆವೆ. ಅಡೋಲ್ಫ್ ಸ್ಟೆರ್‌ಕೈಸನ್ (Rev. Adolph Streckeisen) ರವರಿಗೆ ಮಲಬಾರ್‌ಗೆ ಬರಲು ಅನುಮತಿ ನೀಡಿದ ಸರಕಾರ, ಮಲಬಾರ್ ಚರ್ಚ್ ಕೌನ್ಸಿಲ್‌ಗೆ (Malabar Church Council) ಸಂಬಂಧಿಸಿದಂತೆ ಲಂಡನ್ ಮಿಶನರಿ ಸೊಸೈಟಿಯ (London Missionary Society) ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವಂತೆ ತಿಳಿಸಿರುತ್ತದೆ. ಸೆಂಗ್ಲೆ ಮತ್ತು ಅವರ ಪತ್ನಿ ಯುದ್ಧದ ಮೊದಲೂ ಕೂಡಾ ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸಿದ್ದರು.[144]

1925ರ ನಂತರದಲ್ಲಿ ಬಾಸೆಲ್ ಮಿಶನಿಗೆ ಸಂಬಂಧಿಸಿದಂತೆ ಬ್ರಿಟಿಷ್ ನೀತಿಗಳು ಗಣನೀಯವಾಗಿ ಬದಲಾಗಲು ಆರಂಭವಾಗುತ್ತವೆ. ಬ್ರಿಟಿಷ್ ನೀತಿಗಳು ಮಿಶನ್ ಬಗ್ಗೆ ಸ್ವಲ್ಪ ಮೃದುವಾಗುತ್ತದೆ ಎಂದು ಹೇಳಬಹುದು. ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್‌ನ ಕಾರ್ಯದರ್ಶಿಯಾಗಿದ್ದ ಒಲ್ಡಾಹಾಮ್‌ರವರು ಒಂದು ಹೇಳಿಕೆಯನ್ನು ಹೊರಡಿಸಿ, ಇನ್ನೂ ಏಳು ವರ್ಷದ ನಿರ್ಬಂಧದ ಅವಧಿಯು ಮುಕ್ತಾಯವಾಗಿಲ್ಲದ ಕಾರಣದಿಂದ ಬಾಸೆಲ್ ಮಿಶನ್ ತನ್ನ ಮಿಶನರಿಗಳನ್ನು ಲಂಡನ್ ಮಿಶನರಿ ಸೊಸೈಟಿಯ ನಿಯಂತ್ರಣಕ್ಕೆ ಒಳಪಟ್ಟಂತೆ ಭಾರತಕ್ಕೆ ಕಳುಹಿಸಲು ವಸಾಹತು ಕಛೇರಿಯು (Colonial office) ಒಪ್ಪಿಗೆ ಸೂಚಿಸಿದೆ ಎಂದು ತಿಳಿಸುತ್ತಾರೆ. ಈ ವಿಚಾರವು ಈಗಾಗಲೇ ಕಲಹ, ಒಳಜಗಳ, ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ವಿರೋಧ, ವೆಸ್ಲಿಯನರಿಗೆ ವಿರೋಧ ವ್ಯಕ್ತಪಡಿಸಿದ್ದ ಇಲ್ಲಿನ ಹಳೆ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ವಿದ್ಯುತ್ ಸಂಚಾರವನ್ನೇ ಉಂಟುಮಾಡಿತು. ಬಾಸೆಲ್ ಮಿಶನ್ ಮರಳಿ ಬರುವ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳು ಬಾಸೆಲ್ ಮಿಶನಿನ ಮಿಶನ್ ಪ್ರದೇಶದಲ್ಲಿ ಮತ್ತೊಂದು ಸುತ್ತಿನ ಹೊಸ ರಾಜಕೀಯಕ್ಕೆ, ಒಳಜಗಳಕ್ಕೆ ಮತ್ತು ಕಲಹಕ್ಕೆ ಕಾರಣವಾಗುತ್ತದೆ. ಬಾಸೆಲ್ ಮಿಶನರಿಗಳು ಮಲಬಾರ್‌ಗೆ ಮರಳಲು ಸಿದ್ಧರಾಗುತ್ತಿದ್ದಾರೆ ಎಂಬುದು ಇಲ್ಲಿನ ಕ್ರೈಸ್ತರಲ್ಲಿ ಮತ್ತಷ್ಟು ಭರವಸೆಯನ್ನು ಉಂಟುಮಾಡುತ್ತದೆ. ಮಂಗಳೂರಿನ ಚರ್ಚ್ ಯುನಿಯನ್ ಪಾರ್ಟಿ (Church union party) ಮತ್ತು ಅದರ ನಾಯಕರಾಗಿದ್ದ ಪಿ. ಡಬ್ಲ್ಯು ಲೆಸ್ಲಿ (P. W. Leslie) ರವರು 1923 ಮಾರ್ಚ್10ರಂದು ಬಾಸೆಲಿನ ಬಾಸೆಲ್ ಮಿಶನಿನ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ಅವರೊಂದಿಗೆ ಹಾಗೂ ಮೊದಲಿನ ಬಾಸೆಲ್ ಮಿಶನರಿಗಳೊಂದಿಗೆ ಇವರಿಗಿದ್ದ ಒಗ್ಗಟ್ಟನ್ನು ತಿಳಿಸುತ್ತಾರೆ. ಅದೇ ರೀತಿ ಹಳೆ ಮಿಶನರಿಗಳು ವಾಪಾಸು ಬರುವುದಕ್ಕೆ ಸಂಬಂಧಿಸಿದಂತೆ ಯೂನಿಯನ್ ಪಾರ್ಟಿಯ ಕಡೆಯಿಂದ ಪ್ರಯತ್ನಗಳು ಮಾಡಬೇಕಾದಲ್ಲಿ ತಿಳಿಸುವಂತೆ ಬಾಸೆಲ್ ಮಿಶನಿನ ಅಧ್ಯಕ್ಷರಿಗೆ ತಿಳಿಸುತ್ತಾರೆ. ಈ ಪತ್ರಕ್ಕೆ ಪ್ರತಿಕ್ರಿಯಿಸಿದ್ದ ಬಾಸೆಲ್ ಮಿಶನಿನ ಅಧ್ಯಕ್ಷ ಡಾ. ವಿಲಿಯಂ ಬುರ್ಕಾರ್ಡ್ಟ್ (Dr. William Burckhardt) ಈ

ರೀತಿ ಬರೆಯುತ್ತಾರೆ. 'ಮಲಬಾರ್‌ನಲ್ಲಿ ಕೆಲವೊಂದು ವ್ಯವಸ್ಥೆಗಳನ್ನು ಮಾಡಿದ್ದರಿಂದ ನಮಗೆ ಸಂತೋಷವಾಗಿದ್ದು, ಇದರಿಂದಾಗಿ ಕೆಲವು ಹಳೆ ಮಿಶನರಿಗಳು ಮಲಬಾರ್‌ಗೆ ತೆರಳುವುದು ಸಾಧ್ಯವಾಯಿತು ಹಾಗೂ ಮುಂದೆ ನಾವು ಜೊತೆಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಬಹುದೆಂದು ತಿಳಿಸುತ್ತಾರೆ'.[145]

ಬಾಸೆಲ್ ಮಿಶನ್ ಮತ್ತು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಂಬಂಧ:

ಸ್ವಿಜರ್‌ಲ್ಯಾಂಡಿನಲ್ಲಿಯೂ ಮಿಶನಿನ ಪರಿಸ್ಥಿತಿ ಮೊದಲಿಗಿಂತ ಭಿನ್ನವಾಗಿರುತ್ತದೆ. ಸ್ವಿಸ್‌ನ ಫ್ರೆಂಚ್ ಭಾಷಾ ಸದಸ್ಯರು ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಬೆಂಬಲಿಸಿದರೆ, ಸ್ವಿಸ್‌ನ ಜರ್ಮನ್ ಭಾಷಾ ಕೆಲವು ಸದಸ್ಯರು ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಬೆಂಬಲಿಸಿದ್ದರು. ಮತ್ತೊಂದೆಡೆ ಬಾಸೆಲ್ ಮಿಶನ್ ಜರ್ಮನಿಯಲ್ಲಿನ ತನ್ನ ಬೆಂಬಲಿಗರೊಂದಿಗೆ ಪ್ರಬಲ ಸಂಪರ್ಕದಲ್ಲಿರುತ್ತದೆ. ಬಾಸೆಲ್ ಮಿಶನಿನ ಹಳೆ ಮಿಶನರಿಗಳು, ಬಾಸೆಲ್ ಮಿಶನಿನ ಜರ್ಮನ್ ಬೆಂಬಲಿಗರು ಹಾಗೂ ಕೆಲವು ಜರ್ಮನ್ ಭಾಷಾ ಸ್ವಿಸರು ಬಾಸೆಲ್ ಮಿಶನಿನ ಬೆಂಬಲಿಗರಾಗಿದ್ದು, ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಪ್ರಬಲವಾಗಿ ವಿರೋಧಿಸಿದ್ದರು. ಈ ರೀತಿ ಯೂರೋಪಿನಲ್ಲೂ ಬಾಸೆಲ್ ಮಿಶನ್ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಂಬಂಧ ಅನೋನ್ಯವಾಗಿರಲಿಲ್ಲ. ಈ ಭಿನ್ನಾಭಿಪ್ರಾಯಗಳ ಹೊರತು ಈ ಎರಡೂ ಮಿಶನುಗಳು ಸಹಕಾರವನ್ನು ಇಟ್ಟುಕೊಳ್ಳಲು ಪ್ರಯತ್ನಪಡುತ್ತವೆ. ಮತ್ತೊಂದೆಡೆ ಬಾಸೆಲ್ ಮಿಶನಿನ ಹಳೆ ಜರ್ಮನ್ ಮಿಶನರಿಗಳು ಮಲಬಾರ್‌ಗೆ ವಾಪಾಸಾಗುವ ತಯಾರಿಯಲ್ಲಿದ್ದು, ಪ್ರಸ್ತುತ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ನಿಯಂತ್ರಣದಲ್ಲಿರುವ ಪ್ರದೇಶಕ್ಕೆ ಹಳೆ ಜರ್ಮನ್ ಮಿಶನರಿಗಳು ಬರುವುದಾದರೆ ಪರಿಸ್ಥಿತಿ ಏನಾಗಬಹುದು ಎಂಬ ವಿಚಾರವು ಚರ್ಚೆಗೆ ಗ್ರಾಸವಾಗುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಬಾಸೆಲ್ ಮಿಶನಿಗೆ ಅಧಿಕಾರ ಹಾಗೂ ನಿಯಂತ್ರಣವನ್ನು ಬಿಟ್ಟು ಕೊಡಲು ಸಿದ್ಧವಾಗಿತ್ತು. ಜೊತೆಗೆ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠಗಳನ್ನು ಬಾಸೆಲ್ ಮಿಶನಿಗೆ ಹಸ್ತಾಂತರಿಸಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಿಂದೆ ಸರಿಯುವುದೇ ಉತ್ತಮ ಎಂಬುದು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಅಭಿಪ್ರಾಯವಾಗಿತ್ತು. ಆದರೆ ಈ ಪ್ರದೇಶವನ್ನು ಸಂಪೂರ್ಣವಾಗಿ ಬಾಸೆಲ್ ಮಿಶನಿಗೆ ಹಸ್ತಾಂತರಿಸಲ್ಪಟ್ಟರೆ, ಸ್ವಿಸ್‌ನ ಜರ್ಮನ್ ಭಾಷಾ ಪ್ರದೇಶದ ಜನರ ಬೆಂಬಲ ತಪ್ಪಿ ಹೋಗಬಹುದೆಂಬ ಭಯ ಬಾಸೆಲ್ ಮಿಶನಿಗೆ ಇರುತ್ತದೆ. ಆದುದರಿಂದ ಎರಡೂ ಮಿಶನ್‌ಗಳು ರಾಜಿ ಮಾಡಿಕೊಂಡು, (Compromise) ಸಹಕಾರದೊಂದಿಗೆ ಮುಂದುವರಿಯುವ ನಿರ್ಧಾರಕ್ಕೆ ಬರುತ್ತವೆ.[146]

ಈ ಸಂಯೋಗದ ಪರಿಮಿತಿಯೊಳಗೆ ಎರಡೂ ಮಿಶನ್‌ಗಳು ತನ್ನ ತನ್ನ ಕೆಲಸದ ಕಡೆ ಮತ್ತು ಸಂಸ್ಥಾಪನೆಗಳ ವಿಷಯದಲ್ಲಿ ಸ್ವತಂತ್ರವಾಗಿ ಇರುತ್ತವೆ. ಈ ಒಟ್ಟುಗೂಡುವಿಕೆಯ ಮೂಲಕ ಕಾರ್ಯವನ್ನು ಮುನ್ನಡೆಸುವುದಕ್ಕೆ ಒಂದು 'ಇಂಡಿಯನ್ ಕಮಿಶನ್' ಎಂಬುದನ್ನು ಸ್ವಿಜರ್‌ಲ್ಯಾಂಡಿನಲ್ಲಿ ರಚಿಸಲಾಗುತ್ತದೆ. ಇದರಲ್ಲಿ ಎರಡು ಮಿಶನ್ ಕಮಿಟಿಗಳ ತಲಾ ಮೂರು ಪ್ರತಿನಿಧಿಗಳು ಹಾಗೂ ಇವರು ಹೊರಗಿನಿಂದ ಆರಿಸಿಕೊಂಡಿರುವ ಇನ್ನೊಬ್ಬ ಅಧ್ಯಕ್ಷ (Chariman) ನು ಇರುತ್ತಾನೆ. ಈ ಇಂಡಿಯನ್ ಕಮಿಷನ್ ಅಗತ್ಯಬಿದ್ದಾಗಲೆಲ್ಲಾ ತಮ್ಮ ಕೂಟಗಳಿಗೆ ಮಿಶನರಿಗಳನ್ನು ಆಮಂತ್ರಿಸಬಹುದಿತ್ತು. ಇಂಡಿಯನ್ ಕಮಿಷನ್ ಒಟ್ಟಾರೆಯಾಗಿ ಭಾರತದ ಕೆಲಸಗಳನ್ನು ನಿರ್ವಹಿಸುವುದು. ದಕ್ಷಿಣ ಕೆನರಾ ಮತ್ತು ದಕ್ಷಿಣ ಮರಾಠದ ವಿಚಾರಗಳನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಮಿಟಿ ಲೌಸಾನ್ನೆ (Lausanne) ಯಲ್ಲಿಯೂ, ಮಲಬಾರ್ ವಿಚಾರವನ್ನು ಬಾಸೆಲ್ ಮಿಶನಿನ ಕಮಿಟಿ ಬಾಸೆಲಿನಲ್ಲಿಯೂ ನಿರ್ಧರಿಸುವುದು. ಸ್ವಿಜರ್‌ಲ್ಯಾಂಡಿನಲ್ಲಿ ಪ್ರಚಾರ ಕಾರ್ಯ ಮತ್ತು ಬೆಂಬಲಕ್ಕೆ ಸಂಬಂಧಿಸಿದ ವಿಚಾರಗಳನ್ನು ಇಂಡಿಯನ್ ಕಮಿಷನ್ ನಿರ್ವಹಿಸುವುದು. ಆದರೆ ಎರಡು ಪ್ರತ್ಯೇಕವಾದ ಮಿಶನ್ ಪ್ರದೇಶಗಳಿಗೆ ಪ್ರತ್ಯೇಕವಾಗಿ ಅಯ-ವ್ಯಯವನ್ನು (Budget) ಆಯ ಮಿಶನ್‌ಗಳು ನಿರ್ಧರಿಸುವುವು ಎಂದು ತೀರ್ಮಾನಿಸಲಾಗುತ್ತದೆ. ಭಾರತದಲ್ಲಿ ಮೂರು ಜಿಲ್ಲೆಗಳ ಮೂರು ಮಿಶನರಿ ಪ್ರತಿನಿಧಿಗಳು ಸೇರಿದ ಒಂದು ಜನರಲ್ ಬೋರ್ಡ್ (General board) ನ್ನು ರಚಿಸಿ ಅದು ಹಲವು ವಿಚಾರಗಳನ್ನು ಚರ್ಚಿಸಿ ಇಂಡಿಯನ್ ಕಮಿಷನ್‌ಗೆ ತನ್ನ ವರದಿಯನ್ನು ಒಪ್ಪಿಸುವುದು. ತದನಂತರ ಅದನ್ನು ಭಾರತ ಸರಕಾರ ಹಾಗೂ ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಿಲ್‌ನ (National Christian Council) ಒಪ್ಪಿಗೆಗೆ ಕಳುಹಿಸಲಾಗುವುದು ಎಂಬ ತೀರ್ಮಾನಕ್ಕೂ ಬರಲಾಗುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮೊದಲಿನ ಬಾಸೆಲ್ ಮಿಶನರಿಗಳನ್ನು ಸ್ವೀಕರಿಸಲು ತಾನು ಸಿದ್ದವಿರುವುದಾಗಿ ಹೇಳಿದರೆ, ಅತ್ತ ಬಾಸೆಲ್ ಮಿಶನ್ ತಾನು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳನ್ನು ಮಲಬಾರಿಗೆ ಸ್ವೀಕರಿಸಲು ಸಿದ್ಧವಿರುವುದಾಗಿ ಘೋಷಿಸುತ್ತದೆ. ಎರಡೂ ಕಮಿಟಿಗಳು ತಮ್ಮ ತಮ್ಮ ವರದಿಗಳನ್ನು ವರ್ಷಂಪ್ರತಿ ಇಂಡಿಯನ್ ಕಮಿಶನಿಗೆ ಕಳುಹಿಸಿಕೊಡುವುದು. ಅದರ ಅಧಾರದ ಮೇಲೆ ಇಂಡಿಯನ್ ಕಮಿಷನ್ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು. ಈ ವರದಿಯು ಎರಡೂ ಮಿಶನುಗಳಿಂದಲೂ ಪ್ರಕಟಿಸಲ್ಪಡುವುದು. ಅದೇ ರೀತಿ ಬೇರೆ ಬೇರೆ ವಿಚಾರಗಳಿಗೆ ಸಂಬಂಧಿಸಿದಂತೆ ಎರಡೂ ಕಮಿಟಿಗಳು ಕನಿಷ್ಟ ವರ್ಷಕ್ಕೆ ಒಂದು ಬಾರಿಯಾದರೂ ಸೇರಿ ಚರ್ಚಿಸುವುದು ಎಂಬೆಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ.[147]

1926ರಲ್ಲಿ ಎರಡು ಮಿಶನುಗಳು ಮೇಲಿನ ಯೋಜನೆಯನ್ನು ಒಪ್ಪಿಕೊಂಡರೆ, ಚರ್ಚ್ ಯುನಿಯನ್ ಪಾರ್ಟಿಯು ಈ ಕರಡಿನ ಬದಲು ತನ್ನದೇ ಕರಡನ್ನು ಸಿದ್ಧಪಡಿಸಿ ಪ್ರಕಟಿಸುತ್ತದೆ. ಅದರಂತೆ ಈ ಒಪ್ಪಂದವು ಮಿಶನಿನ ಕೈಕೆಳಗೆ ಉದ್ಯೋಗದಲ್ಲಿರದ ಒಬ್ಬ ಪಾದ್ರಿಯೇತರ ವ್ಯಕ್ತಿಯುಳ್ಳ, ಎರಡು ಸಹಾಯಕ ಕಮಿಟಿಗಳನ್ನು ಮಂಗಳೂರು ಮತ್ತು ಕ್ಯಾಲಿಕಟ್‌ನಲ್ಲಿ ಸ್ಥಾಪಿಸಬೇಕು. ಎರಡನೇಯದಾಗಿ ಜನರಲ್ ಬೋರ್ಡಿನ ಬದಲು, ಭಾರತದಲ್ಲಿನ ಆಡಳಿತ ಮತ್ತು ಕೆಲಸದ ವಿಚಾರಗಳು ಭಾರತದಲ್ಲಿನ ಆಡಳಿತದ ಅಂಗಗಳ (Governing bodies) ನಿಯಂತ್ರಣದಲ್ಲಿದ್ದು, ಇದು ಸಹಾಯಕ ಕಮಿಟಿಯ ನಿಯಂತ್ರಣದಲ್ಲಿರತಕ್ಕದ್ದು ಎಂಬ ವಿಚಾರಗಳನ್ನು ಮಂಡಿಸುತ್ತದೆ.[148] ಭಾರತದಲ್ಲಿನ ವಿರೋಧಕ್ಕೆ ಮುಖ್ಯ ಕಾರಣ ಹಳೆಯ ಬಾಸೆಲ್ ಮಿಶನರಿಗಳು ಈ ಒಪ್ಪಂದವು ತಾವು ಭಾರತಕ್ಕೆ ಬರುವುದಕ್ಕೆ ತಡೆಯಾಗಬಹುದು ಎಂಬ ಭಯದಿಂದ ಇಲ್ಲಿನ ಕ್ರೈಸ್ತರಿಗೆ ಬರೆದ ಪತ್ರಗಳಾಗಿವೆ. ಈ ಒಪ್ಪಂದದ ನಂತರ ಹಳೆ ಬಾಸೆಲ್ ಮಿಶನರಿಯಾದ ಜಿ. ಫಿಶ್ಚರ್ (Gottlieb Fischer) ಭಾರತೀಯ ಮಿಶನರಿಯಾಗಿದ್ದ ಮಾರ್ಕ್ ಸಂಜೀವ ರಾವ್ (Mark Sanjiva Rao) ರವರಿಗೆ ಪತ್ರ ಬರೆದು ಈ ಒಪ್ಪಂದದ ಪ್ರಕಾರ ಕಾರ್ಯ ನಿರ್ವಹಿಸಲು ಒಪ್ಪದಿರುವಂತೆ ಹೇಳುತ್ತಾರೆ. ಸಂಜೀವ ರಾವ್‌ರವರು ಈ ಪತ್ರವನ್ನು ಇತರ ಇಬ್ಬರು ಮಿಶನರಿಗಳಾದ ಶಟ್ಟಿ (Schaetti) ಹಾಗೂ ಮುನ್ಚ್ (Munch) ರವರೊಂದಿಗೆ ಚರ್ಚಿಸುತ್ತಾರೆ. ತದನಂತರ ಇವರು ಫಿಶ್ಚರ್‌ಗೆ ಪತ್ರ ಬರೆದು ಅವರನ್ನು ಮುಕ್ತವಾಗಿ ಇಲ್ಲಿಗೆ ಸ್ವಾಗತಿಸಲಾಗುವುದು ಹಾಗೂ ಅವರಿಗೆ ಅಗತ್ಯವಿರುವ, ಅವರ ಇಚ್ಛೆಯಂತೆ ಎಲ್ಲವನ್ನೂ ಇಲ್ಲಿ ವ್ಯವಸ್ಥೆಗೊಳಿಸಲಾಗುವುದು ಎಂಬ ಭರವಸೆಯನ್ನು ನೀಡುತ್ತಾರೆ. ಈ ಪತ್ರದ ನಂತರ ಫಿಶ್ಚರ್ ಇನ್ನೊಂದು ಪತ್ರವನ್ನು ಬರೆದು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಮೇಲೆ ಪ್ರಹಾರವನ್ನೇ ಮಾಡುತ್ತಾರೆ. ಈ ಪತ್ರದಲ್ಲಿ ಫಿಶ್ಚರ್ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಇಲ್ಲಿನ ಮಿಶನ್ ಹಾಗೂ ಚರ್ಚನ್ನು ನಾಶಪಡಿಸಿದ್ ದಾರೆ ಎಂಬುದಾಗಿ ಆರೋಪ ಮಾಡುತ್ತಾರೆ.[149] ಹೀಗೆ ಎರಡೂ ಮಿಶನ್‌ಗಳು ಸೇರಿ ಜಂಟಿಯಾಗಿ ಮುನ್ನಡೆಯಬೇಕೆಂಬ ಉದ್ದೇಶವು ಜಟಿಲವಾಗುತ್ತಾ ಹೋಗುತ್ತದೆ. ಇದರೊಂದಿಗೆ ಇಲ್ಲಿನ ಸ್ಥಳೀಯ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಇನ್ನು ಪ್ರಬಲವಾಗಿ ವಿರೋಧಿಸಲು ಆರಂಭಿಸುತ್ತಾರೆ.

ಚರ್ಚ್ ಯೂನಿಯನ್ ಪಾರ್ಟಿ ಹಾಗೂ ಸತ್ಯವೃತಗಳು ಬಾಸೆಲ್ ಮಿಶನರಿಗಳ ಪರವಾಗಿ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ವಿರುದ್ಧ ನಿರ್ಣಾಯಕ ಹೋರಾಟಕ್ಕೆ ಇಳಿಯುತ್ತವೆ. ಇನ್ನೊಂದೆಡೆ ಚರ್ಚ್ ಯುನಿಯನ್ ಪಾರ್ಟಿ ಬಾಸೆಲ್ ಮಿಶನ್ ಮರಳಬೇಕೆಂಬ ಬೇಡಿಕೆಯೊಂದಿಗೆ 3000 ಸಹಿಗಳೊಂದಿಗೆ ವೈಸ್‌ರಾಯ್‌ರವರಿಗೆ ಪತ್ರವನ್ನು ರವಾನಿಸುತ್ತಾರೆ. ಅದೇ ರೀತಿ ಬಾಸೆಲಿಗೂ,

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ನಿಯಂತ್ರಣಾ ಕಮಿಟಿ (Control Committee) ಯ ಅಧ್ಯಕ್ಷರಾಗಿದ್ದ ಮದ್ರಾಸಿನ ಬಿಷಪರಿಗೂ ಬಾಸೆಲ್ ಮಿಶನರಿಗಳಿಗೆ ಬೇಡಿಕೆ ಮಂಡಿಸಿ ಪತ್ರಗಳನ್ನು ರವಾನಿಸಲಾಗುತ್ತದೆ. ಸತ್ಯವ್ರತವು ಇದಕ್ಕಿಂತ ಒಂದು ಹೆಜ್ಜೆ ಮುಂದಿಟ್ಟು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಅದರ ಅಧ್ಯಕ್ಷ ಡಾ. ಪಿ. ಬುರ್ಕಾರ್ಡಾಟ್‌ರ ವಿರುದ್ಧ ದಾಳಿ ಮಾಡುತ್ತದೆ. ಬಾಸೆಲ್ ಮಿಶನರಿಗಳು ವಾಪಾಸ್ಸಾಗುವ ವಿಚಾರಕ್ಕೆ ಸಂಬಂಧಿಸಿದಂತೆ 2,00,000 ಫ್ರಾಂಕ್‌ಗಳನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕೇಳಿದೆ ಎಂಬ ಆರೋಪವನ್ನೂ ಸತ್ಯವ್ರತ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮೇಲೆ ಮಾಡುತ್ತದೆ.[150] ಮತ್ತೊಂದೆಡೆ ರೋಶಾ, ಶೂಶ್ಯರ್, ಡಿ. ಹೆಲ್ಲರ್ ಮುಂತಾದ ಬಾಸೆಲ್ ಮಿಶನರಿಗಳು ಚಳುವಳಿಯನ್ನು ನಿಲ್ಲಿಸಿರಿ ಎಂಬ ವಿನಂತಿಯನ್ನು ಮಾಡುತ್ತಾರೆ ಹಾಗೂ ಹಳೆ ಮಿಶನರಿಗಳು ಹೊರಡಲು ಸಿದ್ದರಾಗುತ್ತಿದ್ದಾರೆ ಎಂಬುದನ್ನು ತಿಳಿಸುತ್ತಾರೆ. [151]

ಪ್ರಬಲವಾದ ವಿರೋಧದಿಂದಾಗಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ತಕ್ಷಣದಲ್ಲಿ ಮಿಶನ್‌ನಿಂದ ಹಿಂದೆ ಸರಿಯಲು ನಿರ್ಧರಿಸುತ್ತದೆ. ಅದಕ್ಕಿಂತ ಮೊದಲು ಎರಡೂ ಕಮಿಟಿಗಳ ಸಮ್ಮುಖದಲ್ಲಿ ಹಳೆ ಮಿಶನರಿಗಳ ಇರುವಿಕೆಯೊಂದಿಗೆ, ಒಂದು ಸಭೆಯನ್ನು ಏರ್ಪಡಿಸುವಂತೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಬಾಸೆಲ್ ಮಿಶನನ್ನು ವಿನಂತಿಸುತ್ತದೆ. ಈ ಸಭೆಯಲ್ಲಿ ಹಳೆ ಮಿಶನರಿಗಳು ಬರೆದಿದ್ದ ಪತ್ರಗಳ ವಿಚಾರಗಳು ಚರ್ಚೆಯಾಗುತ್ತವೆ. ಈ ಸಭೆಯಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಳೆ ಜರ್ಮನ್ ಮಿಶನರಿಗಳನ್ನು ಪುನಃ ತೆಗೆದುಕೊಳ್ಳಲು ಸಿದ್ಧರಿಲ್ಲವೆಂದು ಜರ್ಮನ್ ಮಿಶನರಿಗಳು ತಪ್ಪಾಗಿ ಗ್ರಹಿಸಿ, ಪುನಃ ತಮ್ಮ ಮಿಶನ್ ಪ್ರದೇಶಕ್ಕೆ ಹೋಗುವ ಉದ್ದೇಶವನ್ನು ಸಾಧಿಸಿಕೊಳ್ಳುವುದು ಈ ಪತ್ರಗಳ ಉದ್ದೇಶವೆಂಬುದನ್ನು ತಿಳಿಸಲಾಗುತ್ತದೆ.[152] ಒಪ್ಪಂದವನ್ನು ಚರ್ಚುಗಳ ಹಾಗೂ ಮಿಶನರಿಗಳ ಮುಂದಿಟ್ಟು, ಅಭಿಪ್ರಾಯ ಪಡೆಯುವಂತೆ ಡಾ. ಬುರ್ಕಾರ್ಡಾಟ್‌ರವರಿಗೆ ಪತ್ರವನ್ನು ರವಾನಿಸಲಾಗುತ್ತದೆ. ಅದೇ ರೀತಿ ಹಳೆ ಬಾಸೆಲ್ ಮಿಶನರಿಗಳು ಹೊರಡಲು ಸಿದ್ಧರಾಗಿದ್ದಾರೆ ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಲಾಗುತ್ತದೆ ಹಾಗೂ ಚಳವಳಿಯನ್ನು ನಿಲ್ಲಿಸುವಂತೆ 7ನೇ ಅಕ್ಟೋಬರ್ 1926ರ ಪತ್ರದಲ್ಲಿ ಬಾಸೆಲ್ ಮಿಶನರಿಗಳಾದ ಶೂಶ್ಯರ್, ರೋಶಾರವರು ಜನರಿಗೆ ವಿನಂತಿಯನ್ನು ಮಾಡುತ್ತಾರೆ.[153]

1926, 19ನೇ ಜುಲೈಯಂದು ಬಾಸೆಲ್ ಮಿಶನ್ ಅಧ್ಯಕ್ಷರಾಗಿದ್ದ ವಿಲ್ಹೆಲ್ಮ್ ಬುರ್ಖಾರ್ಡಾಟ್‌ರವರು (Dr. Wilhelm Burckhardt) ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಬಾಸೆಲ್ ಮಿಶನ್ ನಡುವಿನ ಒಪ್ಪಂದದ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತಾ, ಬಲ್ಮಠ ಸಭೆಯವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಈ ಪತ್ರದಲ್ಲಿ ಇದರ ಮೊದಲ ಮೇ 22, 1926 ರಂದು ಇಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರು ಬಾಸೆಲಿಗೆ ಕಳುಹಿಸಿದ ಪತ್ರವನ್ನು ಉಲ್ಲೇಖಿಸುತ್ತಾ, ಯುದ್ಧದ ಮೊದಲು

ಇಲ್ಲಿ ಕಾರ್ಯನಿರ್ವಹಿಸಿದ ಮಿಶನರಿಗಳ ಕಡೆಗೆ ಬಾಸೆಲ್ ಮಿಶನ್ ಕ್ರೈಸ್ತರು ತೋರಿದ ನಂಬಿಕೆ ಹಾಗೂ ಪ್ರೀತಿಗೆ ಧನ್ಯವಾದವನ್ನು ಸಮರ್ಪಿಸುತ್ತಾ, ಬಾಸೆಲ್ ಮಿಶನಿಗೂ ಇಲ್ಲಿನ ಮಿಶನ್‌ನ ಮೇಲೆ ಪ್ರೀತಿಯಿರುವುದಾಗಿ ತಿಳಿಸುತ್ತಾರೆ. ಯುದ್ಧದಿಂದಾಗಿ ದಕ್ಷಿಣ ಕನ್ನಡ ಮತ್ತು ದಕ್ಷಿಣ ಮರಾಠ ಮಿಶನ್‌ಗಳು ಕೈಬಿಟ್ಟು ಹೋಗದೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಅದರ ಸಹಾಯಕ್ಕೆ ಬಂದು, ಅದನ್ನು ಮುಂದುವರಿಸಿದೆ. ಆದುದರಿಂದ ಇಲ್ಲಿನ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸಹಾಯವನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದಾಗಿ ವಿನಂತಿಸುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಇಲ್ಲಿನ ಕ್ರೈಸ್ತರಿಗೆ ಮಾಡಿದ ಕಾರ್ಯವನ್ನು ಒಪ್ಪಿಕೊಳ್ಳದಿದ್ದರೆ ಅದು ದೊಡ್ಡ ತಪ್ಪಾದೀತು ಎಂದು ಹೇಳುತ್ತಾ, ಇಲ್ಲಿನ ಮಿಶನ್‌ನ ಮೇಲಿನ ಅವರ ಅನುರಾಗ, ಅವರು ಸ್ವಿಜರ್‌ಲ್ಯಾಂಡಿನಲ್ಲಿ ಹಣ ಸಂಗ್ರಹಕ್ಕಾಗಿ ನಡೆಸುವ ತ್ಯಾಗದಲ್ಲಿ ವ್ಯಕ್ತವಾಗುತ್ತದೆ ಎಂಬುದನ್ನು ತಿಳಿಸುತ್ತಾರೆ. ಬಾಸೆಲ್ ಮಿಶನ್ ಮತ್ತು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ನಡುವಿನ ಒಪ್ಪಂದದ ಬಗ್ಗೆ ತಿಳಿಸುತ್ತಾ, ಈ ಒಪ್ಪಂದದಂತೆ ಬಾಸೆಲ್ ಮಿಶನ್ ತಿರುಗಿ ದಕ್ಷಿಣ ಕನ್ನಡ ಮತ್ತು ದಕ್ಷಿಣ ಮರಾಠ ಪ್ರದೇಶಗಳಿಗೆ ಬರುವುದು ಎಂದಾಗುವುದಿಲ್ಲ. ಅದರಂತೆ ಬಾಸೆಲ್ ಮಿಶನ್ ಮಲಬಾರ್‌ನ ಪಾಲನೆಯಲ್ಲಿ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಇಲ್ಲಿನ ಕಾರ್ಯದಲ್ಲಿ ಮುಂದುವರಿಯುವುದು. ಆದರೆ ಯಾವ ಕಾರ್ಯವನ್ನು ಜೊತೆಯಾಗಿ ಸೇರಿ ಮಾಡಬಹುದೋ ಆ ವಿಚಾರಗಳಲ್ಲಿ ಎರಡೂ ಮಿಶನ್‌ಗಳು ಪರಸ್ಪರ ಸಹಾಯದಿಂದ ಮುಂದುವರಿಯುವವು ಎಂಬುದನ್ನು ತಿಳಿಸುತ್ತಾರೆ. ನಿಮ್ಮಲ್ಲಿ ಈಗ ಇರುವ ಮಿಶನರಿಗಳಲ್ಲಿ ಇನ್ನು ಮುಂದಕ್ಕೂ ನಿಮಗೆ ನಂಬಿಕೆ ಇರಲಿ ಎಂಬುದಾಗಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ ಎಂಬ ವಿನಂತಿಯನ್ನು ಬಾಸೆಲ್ ಮಿಶನ್ ಅಧ್ಯಕ್ಷರು ಮಾಡುತ್ತಾರೆ.[154] ಬಾಸೆಲ್ ಮಿಶನಿನ ಅಧ್ಯಕ್ಷರ ಪತ್ರದ ನಂತರ ಇದು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಪತ್ರಿಕೆಯಾದ 'ಕ್ರೈಸ್ತ ಹಿತವಾದಿ' ಹಾಗೂ ಇಲ್ಲಿನ ಸ್ಥಳೀಯ ಕ್ರೈಸ್ತರಿಂದ ನಡೆಸಲ್ಪಡುತ್ತಿದ್ದ 'ಸತ್ಯವ್ರತ' ಪತ್ರಿಕೆಗಳ ನಡುವೆ ಭೀಕರ ವಾಗ್ವಾದಕ್ಕೆ ಕಾರಣವಾಗುತ್ತದೆ. ಹಳೆ ಮಿಶನರಿಗಳು ಬರಲೇಬೇಕು ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ತೊಲಗಲೇಬೇಕು ಎಂಬ ಪ್ರಬಲವಾದ ಬೇಡಿಕೆ ನಂತರವು ಮುಂದುವರಿಯುತ್ತದೆ.

ಬಾಸೆಲ್ ಮಿಶನರಿಗಳು ಕೂಡಾ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮತ್ತು ಬಾಸೆಲ್ ಮಿಶನಿನ ನಡುವಿನ ಒಪ್ಪಂದವನ್ನು ಪ್ರಬಲವಾಗಿ ವಿರೋಧಿಸಿದ್ದರು. ಹಳೆ ಬಾಸೆಲ್ ಮಿಶನರಿಯಾಗಿದ್ದ ಗೆತ್ಸೆಯವರು (Rev. J. Goetz) ಒಪ್ಪಂದದ ಬಗ್ಗೆ ತಮ್ಮ ಅಸಂತೃಪ್ತಿಯನ್ನು ಹೊರಹಾಕುತ್ತಾ, 31ನೇ ಜುಲೈ, 1926ರಲ್ಲಿ ಜರ್ಮನಿಯಿಂದ 'ಸತ್ಯವ್ರತಕ್ಕೆ' ಪತ್ರ ಬರೆಯುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಅವಧಿಯಲ್ಲಿ ದಕ್ಷಿಣ ಕನ್ನಡ ಹಾಗೂ ದಕ್ಷಿಣ ಮರಾಠ ಜಿಲ್ಲೆಗಳ ಮಿಶನ್ ಕೆಲಸವು

ಶೋಚನೀಯವಾಗಿದೆ ಎನ್ನುತ್ತಾ, ಒಪ್ಪಂದದಲ್ಲಿ ತನಗೆ ತೃಪ್ತಿಯಿಲ್ಲ ಮಾತ್ರವಲ್ಲದೇ ಇಲ್ಲಿನ ಕ್ರೈಸ್ತರು ಅದನ್ನು ಪ್ರಬಲವಾಗಿ ವಿರೋಧಿಸಿಯಾರು ಎಂಬ ಅಭಿಪ್ರಾಯವನ್ನು ಗೆತ್ಸೆಯವರು ವ್ಯಕ್ತಪಡಿಸಿದ್ದರು. ಬಾಸೆಲ್ ಮಿಶನಿಗೆ ಹಣಕಾಸಿನ ಸಂಕಷ್ಟವಿರುವುದರಿಂದ ತಕ್ಷಣದಲ್ಲಿ ಎಲ್ಲಾ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ದಕ್ಷಿಣ ಕೆನರಾದ ಜವಾಬ್ದಾರಿಯನ್ನು ತಕ್ಷಣ ಬಾಸೆಲ್ ಮಿಶನಿಗೆ, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಬಿಟ್ಟು ಕೊಟ್ಟು ಅದು ದಕ್ಷಿಣ ಮರಾಠ ಠಾಣ್ಯಗಳ ಜವಾಬ್ದಾರಿಯನ್ನು ಮುಂದುವರಿಸಿ, ನಿಧಾನವಾಗಿ ಅದು ತನ್ನದೇ ಆದ ಮಿಶನನ್ನು ಸ್ಥಾಪಿಸುವುದು ಒಳಿತು ಎಂದು ಗೆತ್ಸೆಯವರು ವಾದಿಸಿದ್ದರು. ಬಾಸೆಲ್ ಮಿಶನಿನ ಹಳೆ ಮಿಶನರಿಗಳು ಪ್ರಸ್ತುತ ಅವರಿಗಿರುವ ಉತ್ತಮ ಉದ್ಯೋಗಗಳನ್ನು ತ್ಯಜಿಸಿ, ಇಲ್ಲಿಗೆ ಬರಲು ಸಿದ್ಧರಾಗಿದ್ದಾರೆ ಎಂಬುದಾಗಿ ತಿಳಿಸುತ್ತಾರೆ.[155]

'ಸತ್ಯವ್ರತ' ಹಾಗೂ 'ಹಿತವಾದಿ'ಯ ಕಲಹದ ನಡುವೆಯೂ ಒಪ್ಪಂದವನ್ನು ಎರಡೂ ಸಿನೋಡುಗಳ ಮುಂದೆ ಇಡಲಾಗುತ್ತದೆ. ಉತ್ತರ ಮರಾಠವು ಇಂಡಿಯನ್ ಕಮಿಷನಿಗೆ ಮಿಶನರಿಗಳನ್ನು ನೇಮಿಸುವ ಹಾಗೂ ಕಟ್ಟಡಗಳ ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳ ಮೇಲೆ ಪ್ರಶ್ನೆಯನ್ನು ಎತ್ತುತ್ತದೆ. ಈ ವಿಚಾರದಲ್ಲಿ ಅದು ಇನ್ನೂ ತಿಳಿದುಕೊಳ್ಳಲು ಬಯಸುವ ನಿರ್ಧಾರಕ್ಕೆ ಬರುತ್ತದೆ. (Resolved only to take cognizance) ದಕ್ಷಿಣ ಕೆನರಾ ಶೂಶ್ಯರ್ ಹಾಗೂ ಫಿಶ್ಚರ್ ಬರುವವರೆಗೆ ಯಾವುದೇ ನಿರ್ಧಾರ ಕೈಗೊಳ್ಳದಿರಲು ಮೊದಲು ನಿರ್ಧರಿಸುತ್ತದೆ. ಆದರೆ ತದನಂತರ ಈ ಇಬ್ಬರು ಮಿಶನರಿಗಳ ತಂತಿವಾರ್ತೆ(Cable) ಯಿಂದಾಗಿ ಆ ನಿರ್ಧಾರವನ್ನು ಕೈಬಿಡುತ್ತದೆ. ತದನಂತರ ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಲ್[156] (N.C.C) ನ ಕಾರ್ಯದರ್ಶಿಯಾದ ವಿಲಿಯಂ ಪಟೂನ್‌ರವರ (William Paton) ಉತ್ತೇಜನದೊಂದಿಗೆ ಒಪ್ಪಂದವನ್ನು ಒಪ್ಪಿಕೊಳ್ಳುವ ನಿರ್ಧಾರಕ್ಕೆ ಬರುತ್ತದೆ. 1926ರ ನವೆಂಬರ್ 10 ರಿಂದ 12 ರವರೆಗೆ ಉಡುಪಿಯಲ್ಲಿ 'ಜನರಲ್ ಕಾನ್ಫರೆನ್ಸ್ ಆಫ್ ಮಿಶನರೀಸ್' (The General Conference of Missionaries) ಸಮಾವೇಶಗೊಂಡು ಎರಡೂ ಸಿನೋಡುಗಳ ನಿರ್ಧಾರಗಳನ್ನು ಚರ್ಚೆ ಮಾಡಲಾಗುತ್ತದೆ ಹಾಗೂ ಈ ಕೆಳಗಿನ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ.

1. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಸಭೆಗಳ ಸಂಬಂಧಗಳು ಉತ್ತಮವಾಗಿರುವುದು ಬಹು ಅಗತ್ಯವಾಗಿದ್ದು ಅದು ಪ್ರಸ್ತುತ ಬಹಳಷ್ಟು ನಾಶವಾಗಿರುವುದರಿಂದ, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಬಹು ದೀರ್ಘಕಾಲ ಕಾರ್ಯದಲ್ಲಿ ಮುಂದುವರಿಯುವ ನೈತಿಕ ಹಕ್ಕನ್ನು ಕಳಕೊಂಡಿದೆ ಹಾಗೂ ಒಪ್ಪಂದವು ಭಾರತದಲ್ಲಿ ಕಾರ್ಯರೂಪಕ್ಕೆ ಬರುವುದು ಸಾಧ್ಯವಿಲ್ಲದಾಗಿದೆ.

2. ಸಭೆಗಳ ಹಾಗೂ ಮಿಶನ್ ಕಾರ್ಯಗಳ ಒಳಿತಿಗಾಗಿ, ಅದಷ್ಟು ಬೇಗನೇ ಸ್ವಿಸ್ ಕಮಿಟಿಯು ತನ್ನ ಕೆಲಸವನ್ನು ಬಾಸೆಲ್ ಮಿಶನಿಗೆ ವಹಿಸುವುದು ಉಳಿದಿರುವ ಏಕೈಕ ಪರಿಹಾರವಾಗಿದೆ.
3. ಈ ರೀತಿಯ ಹಸ್ತಾಂತರದ ಸಮಯದಲ್ಲಿ ಯಾವುದೇ ರೀತಿಯಲ್ಲೂ ಮಿಶನ್ ಕಾರ್ಯ ಹಿನ್ನಡೆ ಅನುಭವಿಸದಂತೆ ನೋಡಬೇಕು.[157]

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಅಂತಿಮವಾಗಿ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನ್ ಪ್ರದೇಶದಿಂದ ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲು ನಿರ್ಧಾರ ಕೈಗೊಳ್ಳುತ್ತಿದ್ದಂತೆ ಅತ್ತ ಬಾಸೆಲ್ ಮಿಶನ್ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಿದ್ಧವಿರುವುದಾಗಿ ಘೋಷಿಸುತ್ತದೆ. 1927 ಮಾರ್ಚ್ 14ರಂದು ಮಂಗಳೂರಿಗೆ ಭೇಟಿ ನೀಡಿದ್ದ ಮದ್ರಾಸಿನ ಬಿಷಪರು, ಇಲ್ಲಿನ ವಿಚಾರಗಳಿಂದ ಸಂತುಷ್ಟಗೊಂಡು ಎರಡೂ ಮಿಶನುಗಳ ಪರವಾಗಿ ಇಲ್ಲಿನ ಕೆಲಸವನ್ನು ಬಾಸೆಲ್ ಮಿಶನಿಗೆ ವರ್ಗಾಯಿಸುವಂತೆ ಸರಕಾರಕ್ಕೆ ತಿಳಿಸುವುದಾಗಿ ಹೇಳುತ್ತಾರೆ. 1927 ಜುಲೈ 1 ರಂದು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಪ್ರದೇಶಗಳ ಮಿಶನ್ ಕಾರ್ಯವನ್ನು ಬಾಸೆಲ್ ಮಿಶನಿಗೆ ವರ್ಗಾಯಿಸುತ್ತದೆ. ಇದರ ತರುವಾಯ ಭಾರತದಲ್ಲಿ ಬಾಸೆಲ್ ಮಿಶನನ್ನು 'ಬಾಸೆಲ್ ಇವ್ಯಾಂಜಲಿಕಲ್ ಮಿಶನ್' ಎಂಬುದಾಗಿ ಕರೆಯಲಾಗುತ್ತದೆ. ಬುರ್ಕಾರ್ಡ್ಟ್ ಸೇರಿದಂತೆ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ 11 ಮಿಶನರಿಗಳು (ಪತ್ನಿಯರನ್ನು ಸೇರಿಸಿ) ಲಂಡನ್ ಮಿಶನರಿ ಸೊಸೈಟಿಗೆ ಸೇರ್ಪಡೆಗೊಳ್ಳುತ್ತಾರೆ. ಇನ್ನುಳಿದ 16 ಮಿಶನರಿಗಳು (ಪತ್ನಿಯರನ್ನು ಸೇರಿಸಿ) ಬಾಸೆಲ್ ಇವ್ಯಾಂಜಲಿಕಲ್ ಮಿಶನಿನ ಕೈಕೆಳಗೆ ಮುಂದುವರಿಯುತ್ತಾರೆ.[158] ಹೀಗೆ 1919ರಲ್ಲಿ ಆರಂಭವಾದ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಪಯಣವು 1927ರ ಮೇ ಯಲ್ಲಿ ಕೊನೆಗೊಳ್ಳುತ್ತದೆ. ಒಂದು ಕಡೆ ಈ ಹಸ್ತಾಂತರ ಎಂಬುದು ಸ್ಥಳೀಯ ಕ್ರೈಸ್ತರಿಗೆ ಬಹಳಷ್ಟು ಹುಮ್ಮಸ್ಸನ್ನು ಮೂಡಿಸಿದರೆ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳಿಗೆ ಬಹಳಷ್ಟು ದುಃಖದ ಸಮಯವಾಗಿತ್ತು ಎಂಬುದು ಸ್ಪಷ್ಟ. ಬಾಸೆಲ್ ಮಿಶನನ್ನು ನಿರ್ಬಂಧಿಸಿದಾಗ ಇಲ್ಲಿನ ಮಿಶನಿಗೆ ಆಸರೆಯಾದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಅದರ ಹಣಕಾಸಿನ ಸಮಸ್ಯೆಯ ಹೊರತು, ಅದರಿಂದ ಸಾಧ್ಯವಾದಷ್ಟು ಪ್ರಯತ್ನವನ್ನು ಪಟ್ಟು ಇಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ನ್ಯಾಶನಲ್ ಮಿಶನರಿ ಕೌನ್ಸಿಲ್‌ನಿಂದ ನಿಯಂತ್ರಿಸಲ್ಪಡುತಿತ್ತು ಎಂಬುದು ಗಮನಿಸಬೇಕಾದ ಅಂಶ.

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿನ ಕಲಹಗಳು:

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಬಾಸೆಲ್ ಮಿಶನಿನ ಸಭೆಗಳಲ್ಲಿ ಅಂತಃಕಲಹ, ಗುಂಪುಗಾರಿಕೆ, ಅಸಮಧಾನ, ಇತ್ಯಾದಿಗಳು ಆರಂಭವಾಗುತ್ತವೆ. ಕೆಲವೊಂದು ಈ

ಕಲಹಗಳು ಕೋರ್ಟ್ ಮೆಟ್ಟಿಲನ್ನು ಏರುತ್ತವೆ. ಈ ರೀತಿ ಬಾಸೆಲ್ ಮಿಶನಿನ ಕಾಲದಲ್ಲಿದ್ದ ಶಾಂತಿಯು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಮಾಯವಾಗುತ್ತದೆ. 1924ರಲ್ಲಿ ಬಾಸೆಲ್ ಮಿಶನಿನ ಮಂಗಳೂರಿನ ಜೆಪ್ಪು ಸಭೆಯ ಹಿರಿಯರನ್ನು ಸೇರಿದಂತೆ, ಒಟ್ಟು 8 ಮಂದಿಯ ಮೇಲೆ ಜೋನ್ ಸಾಲಿನ್ಸ್ ಎಂಬವರು ತನಗೆ ಹೊಡೆದರೆಂಬುದಾಗಿ ಹೇಳಿ ಸಬ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡುತ್ತಾರೆ. ಜಿಲ್ಲಾ ಪಂಚಾಯತ್ ಕೂಟದವರು ಇದನ್ನು ಸರಿಪಡಿಸಲು ಮಾಡಿದ ಪ್ರಯತ್ನಗಳು ನಿರರ್ಥಕವಾಗುತ್ತವೆ. ಕೊನೆಗೆ ವಿಚಾರಣೆ ನಡೆದು ಮೆಜಿಸ್ಟ್ರೇಟರರು ಅವರಿಗೆ ಜುಲ್ಮಾನೆ ವಿಧಿಸುತ್ತಾರೆ. ಆದರೆ ಆಪಾದಿತರು ಪುನಃ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಅಪೀಲು ಮಾಡುತ್ತಾರೆ. ಇಲ್ಲಿ ಮೊದಲಿನ ತೀರ್ಪಿಗೆ ವಿರುದ್ಧ ತೀರ್ಪು ನೀಡಲ್ಪಟ್ಟು, ಅವರ ಶಿಕ್ಷೆಯನ್ನು ತೆಗೆದುಹಾಕಲಾಗುತ್ತದೆ.[159] ಹೀಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಸಭೆಯ ಒಳಗಡೆಗಿದ್ದ ಕ್ರೈಸ್ತರ ಸಂಬಂಧಗಳು ಹದಗೆಡಲು ಆರಂಭವಾಗಿ, ಸಭೆಯ ಶಾಂತಿಗೆ ಭಂಗವಾಗುತ್ತಿದ್ದುದನ್ನು ಗಮನಿಸಬಹುದು.

ಬಾಸೆಲ್ ಮಿಶನ್ ಕ್ರೈಸ್ತರ ನಡುವಿನ ಕಲಹ, ಜಗಳಗಳು 1920ರ ದಶಕದಲ್ಲೇ ಆರಂಭವಾಗುತ್ತವೆ. ಕೊಡಗು, ದಕ್ಷಿಣ ಮರಾಠ ಹಾಗೂ ದಕ್ಷಿಣ ಕೆನರಾ ಹೀಗೆ ಬಾಸೆಲ್ ಮಿಶನಿನ ಈ ಎಲ್ಲಾ ಪ್ರದೇಶಗಳಲ್ಲೂ ಕಲಹ, ಗುಂಪುಗಾರಿಕೆಗಳು ಒಂದಲ್ಲಾ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿರುತ್ತದೆ. ಈ ಹಲವು ಕಲಹಗಳಲ್ಲಿ ಕೋರ್ಟ್ ಮೆಟ್ಟಿಲೇರಿದ ಇನ್ನೊಂದು ಪ್ರಮುಖ ಕಲಹವೆಂದರೆ ಬಲ್ಮಠ ಸಭೆಯ ಹಿರಿಯರ ಚುನಾವಣೆ ಸಂಬಂಧಿಯಾದದ್ದು. ಈ ಕಲಹವು 1924ರಲ್ಲಿ ಆರಂಭವಾದರೂ, ಇದರ ಕುರುಹುಗಳು ಸುಮಾರು ಮೂರು ವರ್ಷಗಳ ಹಿಂದೆಯೇ ಕಾಣಿಸಿಕೊಳ್ಳುತ್ತವೆ. ಹಿರಿಯರ ಚುನಾವಣೆ ಸಂಬಂಧ ಅಸಂತೃಪ್ತರಾದ ಕೆಲವರು 'ಚರ್ಚ್ ಯೂನಿಯನ್' (Church union) ಎಂಬ ಪಕ್ಷವನ್ನು ಕಟ್ಟಿಕೊಂಡು ಸಭೆಗೆ ತೆರತಕ್ಕ ಹಣದ ವಿಚಾರದಲ್ಲಿ ಸಂಪೂರ್ಣ ಅಸಹಕಾರವನ್ನು ತೋರಿಸಿ, ಸಭೆಯ ಇತರ ಸದಸ್ಯರುಗಳು ಸಭೆಗೆ ಕೊಡತಕ್ಕ ವಂತಿಕೆಯನ್ನು ನಿಲ್ಲಿಸುವಂತೆಯೂ ಹೇಳಿದ್ದರು ಹಾಗೂ ಸಭೆಯ ಅಧಿಕಾರಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಿದ್ದರು. 1924ರ ಆಗಸ್ಟ್‌ನಲ್ಲಿ ಬಲ್ಮಠ ಸಭಾ ಹಿರಿಯರು ನಡೆಸಬೇಕಾಗಿದ್ದ ಹೊಸ ಹಿರಿಯರ ಚುನಾವಣೆ ಬಗ್ಗೆ ತಯಾರಿಸಿದ ಮತದಾರರ ಪಟ್ಟಿ ಸರಿಯಾದುದ್ದಲ್ಲ ಎಂಬ ಆಕ್ಷೇಪವನ್ನು ಎತ್ತಿ ಬಲ್ಮಠ ಸಭೆಯ ಸದಸ್ಯರಾದ ಎಸ್. ಇ. ಐಮನ್ ಮತ್ತು ಎಬೆನೆಜರ್ ಸೆಟ್ಟಿಯನ್ ಎಂಬಿಬ್ಬರು ಚುನಾವಣೆಯ ಕೂಟವನ್ನು ರದ್ದು ಪಡಿಸಿ, ಚುನಾವಣೆಯನ್ನು ನಿಲ್ಲಿಸಬೇಕೆಂಬುದಾಗಿ ಕೋರ್ಟಿಗೆ ಅರ್ಜಿ ಹಾಕುತ್ತಾರೆ ಹಾಗೂ ಕೋರ್ಟಿನಿಂದ ತಾತ್ಕಾಲಿಕ ತಡೆಯಾಜ್ಞೆಯನ್ನು (ಟೆಂಪರರಿ ಇಂಜಂಕ್ಷನು) ತರಿಸಿ ಚುನಾವಣೆಯನ್ನು

ತಡೆಹಿಡಿಯುತ್ತಾರೆ. ಈ ಕೇಸು ಸುಮಾರು ಒಂದು ವರ್ಷ ನಡೆಯುತ್ತದೆ. ವಾದಿಗಳ ಪ್ರಕಾರ ಬಲ್ಮಠದ ಹಿರೇ ಕೂಟದವರು ಹಿರಿಯರ ಚುನಾವಣೆಯ ಬಗ್ಗೆ ತಯಾರಿಸಿದ ಮತದಾರರ ಪಟ್ಟಿಯು ಅಸಂಪೂರ್ಣವಾಗಿದ್ದು, ಸಭಾಕ್ರಮಕ್ಕೆ ವಿರುದ್ಧವಾದದ್ದೂ ಅಗಿದೆ ಎಂದು ವಾದಿಸಿದರು. ಇವರ ಪ್ರಕಾರ ಸಭೆಗೆ ಯಾವುದಾದರೊಂದು ಸಣ್ಣ ವಂತಿಗೆಯನ್ನಾದರೂ ಕೊಟ್ಟ ಪ್ರತಿ ಸಭಾ ಸದಸ್ಯನು ಹಿರಿಯರ ಚುನಾವಣೆಯಲ್ಲಿ ಮತ ಹಾಕಲು ಅರ್ಹನಾಗಿದ್ದಾನೆ ಎಂಬುದು ವಾದ. ಪ್ರತಿವಾದಿಗಳು ವಾದಿಸಿದಂತೆ ತಮ್ಮ ಸಂಪಾದನೆಯಲ್ಲಿ ಶೇಕಡಾ 2ರ ಮೇರೆಗೆ ಕೊಡತಕ್ಕ ಸಭಾವಂತಿಗೆಯನ್ನು ಬಾಕಿ ಮಾಡಿ ಕೊಳ್ಳದವರೂ, ಹಿರಿಯರಿಂದ ತಕ್ಕ ಕಾರಣಗಳಿಂದ ಇದಕ್ಕೆ ವಿನಾಯಿತಿ ಪಡಕೊಂಡವರೂ, ಮತದಾರರ ಪಟ್ಟಿಯಲ್ಲಿ ಹೆಸರು ಹಾಕಿಸಲು ಅರ್ಹರಾಗಿದ್ದಾರೆ. ಅಷ್ಟು ಮಾತ್ರವಲ್ಲದೆ ದೇವಾಲಯದ ನೋಟೀಸು ಬೋರ್ಡಿನಲ್ಲೂ ಮತದಾರರ ಪಟ್ಟಿಯನ್ನು ಹಾಕಿ, ಏನಾದರೂ ತಪ್ಪುಗಳು ಇದ್ದಲ್ಲಿ ಸರಿಮಾಡಲು, ವಂತಿಗೆ ಬಾಕಿ ಇರುವವರು ಬಾಕಿಯನ್ನು ಕೊಟ್ಟು ಪಟ್ಟಿಯಲ್ಲಿ ಹೆಸರು ಸೇರಿಸಿಕೊಳ್ಳುವ ಸದಸ್ಯರಿಗೆ ಅವಕಾಶಕೊಡಲಾಗಿತ್ತು. ಅನೇಕ ಸದಸ್ಯರುಗಳು ಈ ಉಪಯೋಗವನ್ನು ಉಪಯೋಗಿಸಿಕೊಂಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸುವಲ್ಲಿ ಯಶಸ್ವಿಯಾಗಿದ್ದರು ಎಂಬುದನ್ನು ಇಲ್ಲಿ ವಿವರಿಸಲಾಗುತ್ತದೆ. ಇದಲ್ಲದೇ ವಾದಿಗಳು ಪಟ್ಟಿಯಲ್ಲಿ ಸೇರಿಸಿದ ಹೆಸರುಗಳ ವಿಷಯದಲ್ಲಿ ಈ ಪಟ್ಟಿ ತಯಾರಿಗೆ ಆಧಾರವಾಗಿ ಬಳಸಿದ ಸಭಾವಂತಿಕೆಯ ಪುಸ್ತಕದ ವಿಷಯದಲ್ಲಿಯೂ, ಸಭಾಕ್ರಮದ ವಿಷಯದಲ್ಲಿಯೂ ಆಕ್ಷೇಪಗಳನ್ನು ಎತ್ತಿದ್ದರು. ಹೀಗೆ ಸುದೀರ್ಘವಾದ ವಾದ ಪ್ರತಿವಾದಗಳ ನಂತರ, ಮುನ್ಸೀಫರು ಮತದಾನದ ಅರ್ಹತೆಗೆ ಸಂಪಾದನೆಯ ಶೇಕಡಾ 2 ರಷ್ಟು ಸಭಾವಂತಿಗೆಯಾಗಿ ಕೊಡುವುದು ಕಡ್ಡಾಯ ಎಂಬ ವಿಚಾರದ ಆಧಾರದ ಮೇಲೆ ವಾದಿಗಳ ಎಲ್ಲ ಆಕ್ಷೇಪಗಳನ್ನು ಮಾನ್ಯ ಮಾಡದೇ, ಮತದಾರರ ಪಟ್ಟಿಯೂ ಸಮರ್ಪಕವಾದದ್ದು ಎಂಬ ತೀರ್ಪನ್ನು ಕೊಡುತ್ತಾರೆ ಹಾಗೂ ಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ತೆಗೆದು ಹಾಕುತ್ತಾರೆ.[160] ಈ ರೀತಿ ಕಲಹಗಳು ಸಭೆಗಳಲ್ಲಿ ನಿರಂತರವಾಗಿ ನಡೆಯುತ್ತಲಿರುತ್ತವೆ. ಸಭೆಗಳಲ್ಲಿ ಕ್ರೈಸ್ತರು ಎರಡು ಬಣಗಳಾಗಿ ಹಂಚಿಹೋಗಿದ್ದುದೇ ಇದಕ್ಕೆ ಮುಖ್ಯ ಕಾರಣವಾಗಿತ್ತು.

ಬಾಸೆಲ್ ಮಿಶನ್ ಕ್ರೈಸ್ತರು ಮತ್ತೊಂದೆಡೆ ಚರ್ಚ್ ವ್ಯವಸ್ಥೆಯಲ್ಲಿ ಒಬ್ಬರು ಎರಡೆರಡೂ ಅಧಿಕಾರಗಳನ್ನು ಇಟ್ಟು ಕೊಳ್ಳುವುದಕ್ಕೂ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ರೆ. ಸುಮಿತ್ರರವರು ಮಲ್ಪೆ ಹಿರಿಯರ ಸಭೆಯ ಅಧ್ಯಕ್ಷರಾಗಿದ್ದು, ಅದೇ ಸಮಯದಲ್ಲಿ ಜಿಲ್ಲಾ ಚರ್ಚ್ ಬೋರ್ಡಿನ ಅಧ್ಯಕ್ಷರಾಗಿರುವುದು ಅವರು ಹಿರಿಯರಾಗಿರುವ ಸಭೆಗೆ ತಕ್ಕ ನ್ಯಾಯವು ಉಂಟಾಗಲಾರದು ಎಂಬ ಭಯವು ಸಭಿಕರಲ್ಲಿ ಹುಟ್ಟಿದೆ ಎಂದು ಹೇಳುತ್ತಾ, 'ಸತ್ಯವ್ರತ'ವು ಈ ಮೇಲಿನ ವಿಚಾರವು ಹಲವು ಅನರ್ಥಗಳಿಗೆ ಎಡೆಮಾಡಿಕೊಡುವುದು. ಆದುದರಿಂದ ರೆ.

ಸುಮಿತ್ರರವರು ಮೇಲಿನ ಎರಡು ಹುದ್ದೆಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಹೊಂದಿರುವುದು ಉತ್ತಮ ಎಂಬ ಅಭಿಪ್ರಾಯ ಕೇಳಿಬರುತ್ತದೆ.[161]

ಈ ಎಲ್ಲಾ ಮೇಲಿನ ಕಲಹಗಳು, ಒಳ ಜಗಳಗಳು (Self governance) ಸ್ವಾಯತ್ತ ಆಳ್ವಿಕೆಯನ್ನು ಜಾರಿಗೆ ತರುವಂತಹ ಅವಧಿಯ ಪ್ರಾರಂಭದಲ್ಲಿಯೇ ಆರಂಭವಾಗುತ್ತವೆ. ಯಾಕೆ ಈ ಅವಧಿಯಲ್ಲಿ ಇಂತಹ ಕಲಹಗಳು ಆರಂಭವಾಯಿತೆಂಬುದು ಚರ್ಚಿಸಬೇಕಾದ ಪ್ರಮುಖ ವಿಚಾರವಾಗಿದೆ. ಬಾಸೆಲ್ ಮಿಶನನ್ನು ತೆರವು ಗೊಳಿಸಿದ ನಂತರ ಎಲ್ಲಾ ಹೊಸ ವ್ಯವಸ್ಥೆಗಳನ್ನು ಜಾರಿಗೆ ತರುವಂತಹ ಸಂದರ್ಭಗಳಲ್ಲಿ ಸ್ಥಳೀಯ ಚರ್ಚುಗಳನ್ನಾಗಲೀ, ಬಾಸೆಲ್ ಮಿಶನ್ ಪ್ರದೇಶ ಸ್ಥಳೀಯ ಕ್ರೈಸ್ತರನ್ನಾಗಲೀ ಅಥವಾ ಯಾವುದೇ ಬಾಸೆಲ್ ಮಿಶನಿನ ಮಿಶನರಿಗಳನ್ನಾಗಲೀ ವಿಚಾರಿಸದೇ, ಅವರೊಂದಿಗೆ ಚರ್ಚಿಸದೇ ಈ ಹೊಸ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮತ್ತೊಂದೆಡೆ ಸುಮಾರು 80 ವರ್ಷಗಳಷ್ಟು ಕಾಲ ಸಂಪೂರ್ಣವಾಗಿ ಬಾಸೆಲ್ ಮಿಶನರಿಗಳ ಕಠಿಣ ನಿಯಂತ್ರಣದಲ್ಲಿದ್ದ ಕ್ರೈಸ್ತರು ಒಮ್ಮೆಲೇ ಅದರಿಂದ ಮುಕ್ತರಾಗುತ್ತಾರೆ. ಮಾತ್ರವಲ್ಲದೇ ತಕ್ಷಣದಲ್ಲಿಯೇ ಸ್ವ ಆಳ್ವಿಕೆಯತ್ತ ಮುಂದುವರಿಯುತ್ತಾರೆ. ಈ ಸಂದರ್ಭದಲ್ಲಿ ಅವರು ಯಾವುದೇ ಪೂರ್ವಯೋಜಿತ ತಯಾರಿಯನ್ನು ಮಾಡಿಕೊಂಡಿರಲಿಲ್ಲವೆಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಇಲ್ಲಿನ ಕ್ರೈಸ್ತರು ಜಾಗತಿಕ ಯುದ್ಧದಿಂದಾಗಿ ಬಹಳಷ್ಟು ಪ್ರಭಾವಿತರಾಗುತ್ತಾರೆ. ಬಾಸೆಲ್ ಮಿಶನರಿಗಳು ಇಲ್ಲಿನ ಕ್ರೈಸ್ತರ ಎಲ್ಲಾ ರೀತಿಯ ಬೇಕು ಬೇಡಗಳನ್ನು ಪೂರೈಸುವುದು ಮಾತ್ರವಲ್ಲದೆ, ಸಂಪೂರ್ಣವಾಗಿ ಅವರ ಮಾರ್ಗದರ್ಶಕರಾಗಿದ್ದರು ಎಂದರೆ ತಪ್ಪಾಗಲಾರದು. ಮಿಶನರಿಗಳನ್ನು ಯುದ್ಧದ ಸಂದರ್ಭದಲ್ಲಿ ತೆಗೆದಾಗ ಅದು ಇಲ್ಲಿನ ಕ್ರೈಸ್ತರ ಜೀವನದ ಮೇಲೂ ಗುರುತರವಾದ ಪರಿಣಾಮವನ್ನು ಬೀರುತ್ತದೆ. ಬಹುಪಾಲು ಬಾಸೆಲ್ ಮಿಶನ್ ಕ್ರೈಸ್ತರು ಮಿಶನಿನಡಿಯಲ್ಲಿ ಬೇರೆ ಬೇರೆ ಉದ್ಯೋಗದಲ್ಲಿದ್ದು ಅವರ ಜೀವನ ಸಾಗಿಸುತ್ತಿದ್ದರು. ಈ ರೀತಿ 1914ರ ಕಾಲಾವಧಿಗಾಗುವಾಗ ವ್ಯವಸ್ಥೆಯು ಒಂದು ಉತ್ತಮ ಸ್ಥಿತಿಯಲ್ಲಿದ್ದು ಅದು ಏಕಾಏಕಿ ಪತನವನ್ನು ಕಾಣುತ್ತದೆ. ಇದು ಸ್ಥಳೀಯ ಕ್ರೈಸ್ತರಲ್ಲಿ ಇನ್ನು ಎಲ್ಲವು ಮುಗಿದುಹೋಯಿತು ಎನ್ನುವ ಹಂತಕ್ಕೆ ಚಿಂತಿಸುವಂತೆ ಮಾಡುತ್ತದೆ. ಈ ಸಂದರ್ಭದಲ್ಲಿ ತಮ್ಮ ಜೀವನದ ಮೂಲವನ್ನೇ ಕಳೆದುಕೊಂಡ ಕ್ರೈಸ್ತರು ಮುಂಬಯಿಗೆ, ಇತರ ನಗರಗಳಿಗೆ ಹಾಗೂ ಘಟ್ಟ ಪ್ರದೇಶಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುತ್ತಾರೆ. ಈ ರೀತಿ ಬಾಸೆಲ್ ಮಿಶನ್ ಕ್ರೈಸ್ತರು ಗತಿಸಿದ ದಿನಗಳನ್ನು ಭಾವನಾತ್ಮಕವಾಗಿ ನೆನೆದು ಹಂಬಲಿಸುವ ರೀತಿಯಾಗುತ್ತದೆ. ಕೊನೆಗೆ ಅವರಲ್ಲಿ ಭಯ, ನಿರಾಸೆ ಹಾಗೂ ಹಿಂದಿನ ವ್ಯವಸ್ಥೆಯ ನೆನಪುಗಳು, ಅವರು ಹೊಸ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸುವಂತೆ ಮಾಡುತ್ತದೆ. ಆದುದರಿಂದಲೇ ಅವರು ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಪ್ರಬಲವಾಗಿ ವಿರೋಧಿಸುತ್ತಾರೆ.[162]

ಈ ಮೇಲಿನ ವಾತಾವರಣದಲ್ಲಿ ಉದ್ಭವಿಸಿದ ಹೊಸ ವ್ಯವಸ್ಥೆಯು ಹಲವು ಗೊಂದಲಗಳಿಗೆ, ವಿರೋಧಗಳಿಗೆ, ಕಲಹಗಳಿಗೆ ಎಡೆಮಾಡಿಕೊಡುತ್ತದೆ.

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲಾವಧಿಯಲ್ಲಿ ಗಮನಿಸುವ ಮತ್ತೊಂದು ಪ್ರಮುಖ ಅಂಶವೆಂದರೆ ಚರ್ಚ್ ವ್ಯವಸ್ಥೆಯಲ್ಲಿ ಅಧಿಕಾರಕ್ಕಾಗಿ ಹೋರಾಟ. ಇದು 1920ರ ಆರಂಭದಲ್ಲಿಯೇ ಪ್ರಾರಂಭವಾಗುತ್ತದೆ. ಚರ್ಚ್ ವ್ಯವಸ್ಥೆಯಲ್ಲಿ ಗುಂಪುಗಾರಿಕೆಯು ಆರಂಭವಾಗುತ್ತದೆ. ಬಾಸೆಲ್ ಮಿಶನಿನ ಅಪಾರವಾದ ಸಂಪನ್ಮೂಲಗಳ ಹಾಗೂ ಆಸ್ತಿಗಳ ಮೇಲೆ ಅಧಿಕಾರ ಸ್ಥಾಪಿಸುವುದೇ ಈ ಹೋರಾಟದ ಮುಖ್ಯ ಉದ್ದೇಶವೆನ್ನಬಹುದು. ಬಾಸೆಲ್ ಮಿಶನ್ ತನ್ನನ್ನು ಎಲ್ಲೆಲ್ಲಿ ಸ್ಥಾಪಿಸಿಕೊಳ್ಳುತ್ತದೋ ಆ ಎಲ್ಲಾ ಪ್ರದೇಶಗಳಲ್ಲಿ ಅದು ಅಪಾರವಾದ ಆಸ್ತಿಯನ್ನು ಸಂಪಾದಿಸುತ್ತದೆ. ಈ ವಿಚಾರವು ಬಾಸೆಲ್ ಮಿಶನ್ ಚರ್ಚುಗಳಲ್ಲಿನ ಹೋರಾಟದ ಮುಖ್ಯ ವಿಚಾರವಾಗಿದ್ದು, ಇದು ನಂತರದ ದಿನಗಳಲ್ಲಿ ಕಾನೂನು ಹೋರಾಟಕ್ಕೂ ನಾಂದಿಯಾಗುತ್ತದೆ. ಮತ್ತೊಂದೆಡೆ ಇಲ್ಲಿನ ಕ್ರೈಸ್ತರ ಹಾಗೂ ಅವರ ಪರಿಸ್ಥಿತಿಯ ಬಗ್ಗೆ ಸಂಪೂರ್ಣ ಚಿತ್ರಣವನ್ನು ಪಡೆಯುವ ಮೊದಲೇ ಟಾಮ್ಲಿನ್‌ಸನ್ ಹೊಸ ಸಂವಿಧಾನ ಹಾಗೂ ಸಭಾ ನೀತಿಗಳನ್ನು ಜಾರಿಗೆ ತರುತ್ತಾರೆ. ಟಾಮ್ಲಿನ್‌ಸನ್ ಹಳೆ ವ್ಯವಸ್ಥೆಯನ್ನು ಬದಲಾಯಿಸಿದ್ದೇ ಇಲ್ಲಿ ಹಲವು ಗೊಂದಲಗಳಿಗೆ ಕಾರಣವಾಯಿತು ಎನ್ನಬಹುದು.

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಲುಸಾನ್ ಕಮಿಟಿಯ ಮೇಲಿನ ಟೀಕೆಗಳು:

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಮಿಶನೇತರ ಪತ್ರಿಕೆಯಾದ 'ಸತ್ಯವ್ರತ'ವು ಹತ್ತು ಹಲವು ರೀತಿಯ ಸುದ್ದಿಗಳನ್ನು ಚರ್ಚಿಸುತ್ತದೆ. ಈ ಪತ್ರಿಕೆಯು ಎಲ್ಲಾ ವಿಚಾರಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಿ ವರದಿ ಮಾಡುತ್ತಿತ್ತು. ಪತ್ರಿಕೆಯು ಎಷ್ಟು ಪ್ರಖ್ಯಾತವಾಗಿತ್ತೆಂದರೆ ವಿದೇಶದಲ್ಲಿದ್ದ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳಿಗೂ ಇದರ ಪ್ರತಿಗಳು ತಲುಪುತ್ತಿತ್ತು. ಪತ್ರಿಕೆಯು ಇಲ್ಲಿನ ಕ್ರೈಸ್ತರಿಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಲುಸಾನ್ ಕಮಿಟಿಯ ಬಗ್ಗೆ ಇರುವ ಅಭಿಪ್ರಾಯಗಳನ್ನು ಬಿಂಬಿಸುತ್ತದೆ. ಅದೇ ಕಾಲದಲ್ಲಿ ಮಿಶನರಿ ಪತ್ರಿಕೆಯಾದ 'ಕ್ರೈಸ್ತ ಹಿತವಾದಿ'ಯು ಮಿಶನರಿಗಳ ನಿಯಂತ್ರಣದಲ್ಲಿದ್ದರಿಂದ ಅವರ ವಿರುದ್ಧ ಬರೆಯುವ ಅಥವಾ ಅಂಥ ವಿಚಾರಗಳನ್ನು ಪ್ರಕಟಿಸುವ ಸಾಧ್ಯಯೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಈ ಸತ್ಯವ್ರತವು ಅಂತಹ ಲೇಖನಗಳಿಗೆ ಹಾಗೂ ಅಭಿಪ್ರಾಯಗಳಿಗೆ ವೇದಿಕೆಯನ್ನು ಒದಗಿಸಿ, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹಾಗೂ ಅದರ ಸಹಾಯಕ ಕಮಿಟಿಯಾದ ಲುಸಾನ್ ಕಮಿಟಿಯನ್ನು ಟೀಕಿಸುತ್ತದೆ.

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮೇಲೆ ಟೀಕೆಗಳು ವಿವಿಧ ರೀತಿಯಲ್ಲಿ ನಿರಂತರವಾಗಿ ಸ್ಥಳೀಯ ಕ್ರೈಸ್ತರಿಂದ ವ್ಯಕ್ತವಾಗುತ್ತವೆ. ಕೆಲವರು ಕೆನರೀಸ್ ಇವ್ಯಾಂಜಲಿಕಲ್ ಮಿಶನ್

ಮತ್ತು ಬಾಸೆಲ್ ಮಿಶನರಿಗಳನ್ನು ತುಲನೆ ಮಾಡಿ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನರಿಗಳ ಮುಂದೆ ಯಾವುದೇ ವಿಚಾರದಲ್ಲೂ ಸಮಾನರಲ್ಲ ಎಂದು ತೋರಿಸಿಕೊಡುವ ಪ್ರಯತ್ನವನ್ನು ಮಾಡುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನರಿಗಳಿಗಿಂತ ಬಹಳಷ್ಟು ಕಡಿಮೆ ಶ್ರಮ ವಹಿಸುವವರು ಎಂಬ ಆರೋಪಗಳನ್ನು ಸ್ಥಳೀಯ ಕ್ರೈಸ್ತರು ಮಾಡುತ್ತಾರೆ. ಈ ಎರಡೂ ಮಿಶನರಿಗಳಲ್ಲಿ ಬಾಸೆಲ್ ಮಿಶನರಿಗಳು ಮಿಶನ್ ಕೆಲಸವನ್ನು ಬಹಳಷ್ಟು ಪ್ರೀತಿಸುತ್ತಿದ್ದರು ಹಾಗೂ ಅತೀವವಾದ ಕಾಳಜಿಯನ್ನು ಕೆಲಸದ ಬಗ್ಗೆ ಹೊಂದಿದ್ದರು. ಯಾವುದೇ ಮಿಶನ್ ಸೇವೆಯಲ್ಲಿದ್ದ ಬಾಸೆಲ್ ಮಿಶನರಿಗಳು ಮನೆಯಲ್ಲಿ ಉಳಿಯದೇ ಅವರ ಭಾರತೀಯ ಸಹೋದ್ಯೋಗಿಗಳೊಂದಿಗೆ ಸೇರಿ ಗ್ರಾಮದಿಂದ ಗ್ರಾಮಕ್ಕೆ ಬಹಳಷ್ಟು ದೂರದ ಪ್ರದೇಶಗಳಲ್ಲಿ ಸಂಚರಿಸಿ ಬೋಧನೆಯನ್ನು ನೀಡುತ್ತಿದ್ದರು. ಮಾತ್ರವಲ್ಲದೆ ಕ್ರೈಸ್ತರ ಮನೆಗಳಿಗೆ ಭೇಟಿ ನೀಡಿ ಅವರ ಕುಶಲೋಪರಿಯನ್ನು ವಿಚಾರಿಸಿ, ಅವರ ಆರೋಗ್ಯ, ಅಧ್ಯಾತ್ಮಿಕ, ಬೌದ್ಧಿಕ ಅಗತ್ಯತೆಗಳನ್ನು ಈಡೇರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದರು. ಆದರೆ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಕಾಲದಲ್ಲಿ ಮೇಲಿನ ನೈಜ ಮಿಶನರಿ ಕಾರ್ಯವು ಅಸ್ಥಿತ್ವದಲ್ಲಿಯೇ ಇರಲಿಲ್ಲ ಎಂಬ ಆರೋಪವನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ ಸ್ಥಳೀಯ ಕ್ರೈಸ್ತರು ಮಾಡುತ್ತಾರೆ. ದೂರದ ಪ್ರದೇಶಗಳಿಗೆ ಭೇಟಿ ನೀಡಿ ಬೋಧನೆ ನೀಡುವ ವಿಚಾರವು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಕಾರ್ಯಕ್ರಮಗಳಲ್ಲಿ ಇಲ್ಲವೇ ಇಲ್ಲದಾಗಿದೆ. ಯಾಕೆಂದರೆ ಈ ಮಿಶನರಿಗಳಿಗೆ ಇಲ್ಲಿನ ಭಾಷೆ ತಿಳಿಯದಿರುವುದೇ ಇದಕ್ಕೆ ಮುಖ್ಯ ಕಾರಣ. ಹಳೆ ಬಾಸೆಲ್ ಮಿಶನರಿಗಳು ಒಂದೆರಡು ವರ್ಷಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಉತ್ತಮವಾದ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಆದರೆ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು 6–7 ವರ್ಷಗಳಲ್ಲಿ ಅಲ್ಪಸ್ವಲ್ಪವಾದರೂ ಇಲ್ಲಿನ ಭಾಷೆಗಳನ್ನು ಕಲಿಯಲೇ ಇಲ್ಲ ಎಂಬುದು ಇಲ್ಲಿನ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ ಮಾಡಿರುವ ಮತ್ತೊಂದು ಗುರುತರವಾದ ಆರೋಪವಾಗಿದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳಿಗೆ ವಿಶೇಷ ಭತ್ಯೆ ಹಾಗೂ ಇತರ ಎಲ್ಲಾ ಸೌಲಭ್ಯಗಳಿದ್ದರೂ ಭಾಷಾ ಕಲಿಕೆಯ ಕಡೆ ಗಮನವನ್ನೇ ಇವರು ಹರಿಸಲಿಲ್ಲ. ಒಬ್ಬ ಮಿಶನರಿಯು ಜನರೊಂದಿಗೆ ಬೆರೆತು ಅವರ ಕಷ್ಟ ದುಃಖ ಸಂತೋಷಗಳಲ್ಲಿ ಭಾಗವಹಿಸಬೇಕಾದರೆ ಸ್ಥಳೀಯ ಭಾಷೆ ತಿಳಿದಿರುವುದು ಅತೀ ಮುಖ್ಯವಾಗಿದೆ. ಮತ್ತೊಂದೆಡೆ ಹಳೆ ಮಿಶನರಿಗಳು ಕೇವಲ ಭಾಷೆಗಳನ್ನು ಕಲಿಯದೆ ಸ್ಥಳೀಯ ಭಾಷೆಗಳಲ್ಲಿ ಗ್ರಂಥಗಳನ್ನು ಹಾಗೂ ಬರವಣಿಗೆಗಳನ್ನು ಮಾಡುವಷ್ಟು ಶಕ್ತರಾಗಿದ್ದರು. ಭಾಷಾ ಕಲಿಕೆಯ ವಿಚಾರದಲ್ಲಿ ಹಳೆ ಬಾಸೆಲ್ ಮಿಶನರಿಗಳು ಬಹಳಷ್ಟು ಸಮರ್ಥರಾಗಿದ್ದು, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಅನಾಸಕ್ತರು ಹಾಗೂ ಅಸಮರ್ಥರೂ ಆಗಿದ್ದರು. ಈ ಮಿಶನರಿಗಳ ನಡುವಿನ

ಭಿನ್ನತೆಯು ಸ್ಥಳೀಯ ಕ್ರೈಸ್ತರ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ನಡುವೆ ಒಂದು ಕಂದಕವನ್ನು ಸೃಷ್ಟಿಸಿತು. ಇದರ ಜೊತೆಗೆ ಇತರ ಕಾರಣಗಳು ಸೇರಿ ದಿನದಿಂದ ದಿನಕ್ಕೆ ಈ ಕಂದಕವು ವಿಸ್ತಾರವಾಗುತ್ತಾ ಹೋಗಿ, ಈ ಎರಡು ವರ್ಗಗಳನ್ನು ಸೇತುವೆಯ ಮೂಲಕವಾದರೂ ಸೇರಿಸುವುದು ಅಸಾಧ್ಯವಾಗಿ ಹೋಗುತ್ತದೆ.[163] ಈ ರೀತಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್‌ನಲ್ಲಿನ ನ್ಯೂನ್ಯತೆಗಳೇ ಅದರ ಅಂತ್ಯಕ್ಕೆ ಕಾರಣವಾದವು ಎಂಬುದು ಪರಿಗಣಿಸಬೇಕಾದ ವಿಚಾರವಾಗಿದೆ.

ಹಳೇ ಮಿಶನರಿಗಳು ಸ್ಥಳೀಯ ಕ್ರೈಸ್ತರೊಂದಿಗೆ ಬಹಳಷ್ಟು ನಿಕಟ ಸಂಪರ್ಕವನ್ನು ಹೊಂದಿದ್ದು, ಪ್ರತಿಯೊಬ್ಬ ಕ್ರೈಸ್ತರ ಬಗ್ಗೆ ಅವರಲ್ಲಿ ಸಂಪೂರ್ಣ ತಿಳುವಳಿಕೆ ಇರುತ್ತಿತ್ತು. ಅಷ್ಟು ಮಾತ್ರವಲ್ಲದೇ ಇಡೀ ಕ್ರೈಸ್ತರ ವಂಶಾವಳಿಗಳ ಬಗ್ಗೆನೂ ಬಾಸೆಲ್ ಮಿಶನರಿಗಳಲ್ಲಿ ಮಾಹಿತಿ ಇರುತ್ತಿತ್ತು. ಆದರೆ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಕೇವಲ 10 ಶೇಕಡಾ ಕ್ರೈಸ್ತರಲ್ಲಿ ಮಾತ್ರ ನಿಕಟ ಸಂಪರ್ಕವನ್ನು ಹೊಂದಿದ್ದರು ಎಂಬುದು ಸ್ಥಳೀಯ ಕ್ರೈಸ್ತರ ಆರೋಪವಾಗಿದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಈ 5 ಶೇಕಡಾ ಜನರ ಪ್ರತಿಯೊಂದು ಮಾತನ್ನು ಪರಿಗಣಿಸುತ್ತಾ, ಅವರೊಂದಿಗೆ ಬಹಳಷ್ಟು ನಿಕಟತೆಯೊಂದಿಗೆ ಉಳಿದಿದ್ದರು. ಉಳಿದ ಬಹುಪಾಲು ಕ್ರೈಸ್ತರಿಂದ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ದೂರ ಉಳಿದು ಇವರ ನಡುವಿನ ಕಂದಕವು ವಿಸ್ತಾರವಾಗುತ್ತಾ ಹೋಗಿ, ಮಿಶನರಿ ಹಾಗೂ ಕ್ರೈಸ್ತರ ನಡುವಿನ ಭಿನ್ನಾಭಿಪ್ರಾಯಗಳು ಉಲ್ಬಣಗೊಳ್ಳುತ್ತವೆ. ಇಲ್ಲಿನ ಜನರ ಅಗತ್ಯದ ಕಾಲದಲ್ಲಿ ಸಹಾಯ ಮಾಡಲು ಬಂದೆವು ಎಂದು ಹೇಳಿಕೊಂಡರೂ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಇಲ್ಲಿನ ಜನರ ಬಗ್ಗೆ ತಿಳಿಯದೇ ಹೋದರು. ಈ ರೀತಿಯ ಸನ್ನಿವೇಶದಲ್ಲಿ ಮಿಶನರಿಗಳಿಂದ ಹೇಗೆ ಪ್ರೀತಿ ಹಾಗೂ ಕರುಣೆಯನ್ನು ನಿರೀಕ್ಷಿಸಬಹುದು ಎಂಬುದು ಇಲ್ಲಿನ ಸ್ಥಳೀಯ ಕ್ರೈಸ್ತರ ಪ್ರಶ್ನೆಯಾಗಿತ್ತು. ಅವರಿಗೆ ವಿಧೇಯರಾಗಿ ಉಳಿದ ಇಲ್ಲಿನ ನಾಯಕರು ಕೂಡಾ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಸೇವೆಯಲ್ಲಿನ ನ್ಯೂನ್ಯತೆಗಳನ್ನು ಗುರುತಿಸದೇ ಇದ್ದು, ಅವರ ಬೆಂಬಲಿಗರಾಗಿ ಉಳಿದರು. ಈ ನಾಯಕರುಗಳನ್ನು ಈ ಮಿಶನರಿಗಳು ಅವರ ನಿಕಟವರ್ತಿಗಳು ಹಾಗೂ ಬೆಂಬಲಿಗರೆಂಬುದಾಗಿ ಪರಿಗಣಿಸಿದ್ದರು.[164] ಈ ರೀತಿ ಇಲ್ಲಿನ ಕೆಲವೇ ಕೆಲವು ಕ್ರೈಸ್ತರನ್ನು ತಮ್ಮ ವಶದಲ್ಲಿರಿಸಿ ಅವರನ್ನು ಉತ್ತಮ ಹುದ್ದೆಗಳಲ್ಲಿ ಕುಳ್ಳಿರಿಸಿ, ಅವರ ಬೆಂಬಲದೊಂದಿಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ತನ್ನ ಕಾರ್ಯವನ್ನು ನಡೆಸುತ್ತಿತ್ತು. ಆದುದರಿಂದ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಸೇವೆ ಏನಿದ್ದರೂ ಕೆಲವೇ ಕೆಲವು ಕ್ರೈಸ್ತರಿಗೆ ಮಾತ್ರ ದೊರಕಿತ್ತು ಎಂಬ ಅಕ್ಷೇಪ ಕೇಳಿಬರುತ್ತದೆ. ಸ್ಥಳೀಯ ಕ್ರೈಸ್ತರ ಪ್ರಕಾರ ಯಶಸ್ವಿ ಮಿಶನ್ ಕಾರ್ಯದ ಮುಂದುವರಿಕೆಗೆ ಅಗತ್ಯವಾದದ್ದು ಹಣವಲ್ಲ. ಬದಲು ಪ್ರೀತಿ, ಕರುಣೆ ಹಾಗೂ ಪರಸ್ಪರ ಸಹಕಾರಗಳೇ ಆಗಿದೆ. ಅದೇ ರೀತಿ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳಲ್ಲಿ

ಯೂರೋಪಿಯನರು ಶ್ರೇಷ್ಠರೆಂಬ ಚಿಂತನೆಗಳಿದ್ದವು ಎಂಬ ಅಪಾದನೆಯನ್ನು ಕ್ರೈಸ್ತರು ಮಾಡುತ್ತಾರೆ.[165] ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳಲ್ಲಿನ ಈ ರೀತಿಯ ಶ್ರೇಷ್ಠತೆಯ ಕಲ್ಪನೆ ಅವರನ್ನು ಜನರ ನೈಜ ಮಿಶನರಿ ಸೇವೆಯಿಂದ ದೂರವಿರಿಸಿತ್ತೆನ್ನಬಹುದು. ಅದೇ ರೀತಿ ಇಲ್ಲಿಗೆ ಕಳುಹಿಸಲ್ಪಟ್ಟ ಮಿಶನರಿಗಳು ಈ ಸೇವೆಯನ್ನು ನಡೆಸಲು ಸಮರ್ಪಕವಾಗಿ ತರಬೇತುಗೊಂಡಿರಲಿಲ್ಲ ಎಂಬುದನ್ನು ಉಲ್ಲೇಖಿಸಬಹುದು. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಯಾವುದೇ ವಿಚಾರದಲ್ಲೂ ಇಲ್ಲಿನ ಕ್ರೈಸ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಇವರು ಗುಪ್ತವಾಗಿ ನಡೆಸಿದ ವಿಚಾರಗಳು ಬೆಳಕಿಗೆ ಬಂದ ನಂತರ ಅವುಗಳನ್ನು ಜನರ ಮುಂದೆ ಇರಿಸಲಾಗುತಿತ್ತು. ಹಳೆ ಮಿಷನರಿಗಳ ಬಗ್ಗೆ ಈ ಮಿಶನರಿಗಳು ಬಹಳಷ್ಟು ಅನಾಸಕ್ತಿಯನ್ನು ತೋರಿದ್ದರು. ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಚರ್ಚಾ ಸಭೆಗಳಿಗೆ ಮಿಶನಿನ ಅಪಾರವಾದ ಹಣವನ್ನು ಖರ್ಚುಮಾಡಲಾಗುತ್ತಿತ್ತು ಹಾಗೂ ಇದು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದ ಪದ್ಧತಿಯಾಗಿ ಬೆಳೆದಿತ್ತು. ಅದೇ ರೀತಿ ಹಲವು ಉಪಕಮಿಟಿಗಳ ರಚನೆ, ಕಮಿಷನ್‌ಗಳ ರಚನೆ ಮಾಡಿ ಹಲವು ಗೊಂದಲಗಳಿಗೆ ಎಡೆಮಾಡಿಕೊಡಲಾಗಿತ್ತು. ಇದು ಎಲ್ಲಿಯವರೆಗೆ ಮುಟ್ಟಿತೆಂದರೆ ಒಬ್ಬ ಕಾರ್ಮಿಕ ರಜೆಗೆ ಬೇಡಿಕೆ ಮಂಡಿಸಿದರೆ ಆತನಿಗೆ ರಜೆ ಕೊಡೆಬೇಕೇ ಬೇಡವೇ ಎಂಬುದರ ಬಗ್ಗೆ ವಿಚಾರಣೆ ಮಾಡಲು ಒಂದು ಕಮಿಷನ್ ರಚಿಸಲು ಮುಂದಾಗುತ್ತಿದ್ದರು. ಹೀಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಅಗತ್ಯವಿದ್ದ ವ್ಯವಸ್ಥೆಗಳೆಲ್ಲಾ ಅವ್ಯವಸ್ಥೆಗಳಾಗಿ ಬದಲಾಗಿದ್ದವು ಎಂಬುದು ಇಲ್ಲಿನ ಕ್ರೈಸ್ತರ ಟೀಕೆಯಾಗಿತ್ತು. ಜಿಲ್ಲಾ ಚರ್ಚ್ ಬೋರ್ಡು ಚರ್ಚಿನ ಅಗತ್ಯ ಹಾಗೂ ಕಾರ್ಯಗಳನ್ನು ಅರ್ಥಮಾಡಿಕೊಳ್ಳುವ ಪರಿಸ್ಥಿತಿಯಲ್ಲೇ ಇರಲಿಲ್ಲ. ಜಿಲ್ಲಾ ಚರ್ಚ್ ಬೋರ್ಡಿನ ಅಧ್ಯಕ್ಷನು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳಿಗೆ ಬೇಕಾದ ರೀತಿಯಲ್ಲಿ ವರ್ತಿಸುತ್ತಿದ್ದು, ಪಾದ್ರಿಗಳನ್ನು ಹಾಗೂ ಇವ್ಯಾಂಜಲಿಸ್ಟರುಗಳನ್ನು ವರ್ಗಾಯಿಸುವಂತೆ ಸ್ಥಳೀಯ ಕ್ರೈಸ್ತರು ಬೇಡಿಕೆ ಮಂಡಿಸಿದ್ದರು.[166] ಈ ರೀತಿ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಬೇರೆ ಬೇರೆ ರೀತಿಯ ವರ್ತನೆಗಳಿಂದಾಗಿ ಇಲ್ಲಿನ ಕ್ರೈಸ್ತರ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ನಡುವಿನ ಮನಸ್ತಾಪ ಹೆಚ್ಚುತ್ತಾ ಹೋಗಿ, ಅವರ ಮಧ್ಯೆ ಸಹಕಾರ ಹಾಗೂ ಅವರನ್ನು ಒಟ್ಟುಗೂಡಿಸುವುದು ಅಸಾಧ್ಯವಾಗಿ ಹೋಗುತ್ತದೆ.

ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಕೇವಲ ಸ್ಥಳೀಯ ಕ್ರೈಸ್ತರತ್ತ ನಕಾರಾತ್ಮಕವಾಗಿರದೇ, ಕಠಿಣ ನಿಲುವುಗಳನ್ನು ಹೊಂದಿದವರಾಗಿದ್ದರು. ಇವರ ಅಧೀನದಲ್ಲಿದ್ದ ಬಡವರ ಮೇಲೆ ದಬ್ಬಾಳಿಕೆ ನಡೆಸಿ ಬೆದರಿಸಿ ಕೆಲಸದಿಂದ ತೆಗೆದು ಹಾಕಲಾಗುವುದು ಎಂದು ಹೆದರಿಸಲಾಗುತ್ತಿತ್ತು ಎಂದು ಗುರುತರವಾದ ಆರೋಪವನ್ನು ಸ್ಥಳೀಯ ಕ್ರೈಸ್ತರು ಮಿಶನರಿಗಳ

ವಿರುದ್ಧ ಮಾಡಿದ್ದಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಯೂರೋಪಿನಿಂದ ಬಂದು ಮಿಶನರಿ ಎಂದು ಕರೆಯಲ್ಪಡುವವ ಆತನ ಕೈಕೆಳಗೆ ಇದ್ದವರನ್ನು ದಬ್ಬಾಳಿಕೆಯಿಂದ ನಡೆಸಿ, ನಿಂದಿಸುವುದು ಆಚರಣೆಯಲ್ಲಿತ್ತು. ಉಡುಪಿಯಲ್ಲಿ ಆಸ್ಪತ್ರೆಯನ್ನು ಆರಂಭಿಸಿದ್ದು ಬಿಟ್ಟರೆ ಬೇರೆ ಯಾವುದೇ ಹೇಳಿಕೊಳ್ಳುವ ಕೆಲಸವನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮಾಡಲಿಲ್ಲ ಎಂಬುದು ಸ್ಥಳೀಯ ಕ್ರೈಸ್ತರ ವಾದ. ಹೀಗೆಲ್ಲಾ ತಾವು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಅನುಭವಿಸಿದ ಕಷ್ಟ ನಷ್ಟಗಳನ್ನು ವಿವರಿಸುತ್ತಾ ಸ್ಥಳೀಯ ಕ್ರೈಸ್ತರು ತಮ್ಮ ಹಳೆ ಜರ್ಮನ್ ಮಿಶನರಿಗಳನ್ನು ಕಳುಹಿಸುವಂತೆ ದೇವರಿಗೆ ಮೊರೆ ಇಡುತ್ತಿದ್ದರು.[167] ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದ ಮಿಶನರಿಗಳಲ್ಲಿ, ನೈಜ ಮಿಶನರಿಗಳಲ್ಲಿ ಇರಬೇಕಾದ ಗುಣಗಳಿಲ್ಲದೇ ದರ್ಪಿಷ್ಠರಾಗಿ ವರ್ತಿಸಿ ಜನರೊಂದಿಗೆ ಯಾವುದೇ ಸಂಬಂಧ ಸಂಪರ್ಕವನ್ನು ಇಟ್ಟುಕೊಳ್ಳದೇ ಕಠಿಣ ರೀತಿಯಲ್ಲಿ ವರ್ತಿಸಿದ್ದು ಇಲ್ಲಿನ ಕ್ರೈಸ್ತರನ್ನು ಮರುಕ ಪಡುವಂತೆ ಮಾಡುತ್ತದೆ. ಈ ಸ್ಥಿತಿಯು ಅವರು ಹೆಚ್ಚು ಹೆಚ್ಚು ಅವರ ಹಳೆ ಮಿಶನರಿಗಳನ್ನು ನೆನೆಸುವಂತೆ ಮಾಡುತ್ತದೆ. 'ಸತ್ಯವ್ರತ'ವು ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿನ ಇಡೀ ವ್ಯವಸ್ಥೆಗಳಲ್ಲಿ ಯಾರ ಮಧ್ಯೆಯು ಸಹಕಾರವಿರಲಿಲ್ಲ. ಆ ವ್ಯವಸ್ಥೆಯು ಅವ್ಯವಸ್ಥೆಯಾಗಿ ಮಾರ್ಪಟ್ಟಿತ್ತು ಎಂದು ಹೇಳುತ್ತಾ ಅದನ್ನು ಒಡೆದ ಮಡಕೆಗೆ ಹೋಲಿಸಿತ್ತು.[168]

'ಸತ್ಯವ್ರತ'ವು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳನ್ನು ಕುದುರೆ ಮೊದಲು ಹುರುಳಿ ತೆಗೆದುಕೊಳ್ಳುವವರು ಎಂಬುದಾಗಿ ಟೀಕಿಸುತ್ತದೆ. ಬಾಸೆಲ್ ಮಿಶನ್ ಮತ್ತು ಲುಸಾನ್ ಕಮಿಟಿಗಳ ನಡುವೆ ಅವಸರದಲ್ಲಿ ಒಪ್ಪಂದವನ್ನು ಏರ್ಪಡಿಸಿ ಜನರ ಕಣ್ಣಿಗೆ ಮಣ್ಣೆರಚುವ ಕೆಲಸವನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮಾಡುತ್ತಿದೆ. ಅದರ ಮಧ್ಯೆ ಈ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ತನ್ನ ಹೆಸರನ್ನು ಬದಲಾಯಿಸಬೇಕೋ? ಎಂಬ ಚಿಂತನೆಯಲ್ಲಿದೆ ಎನ್ನುತ್ತಾ ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಕ್ರೈಸ್ತರು ಇಲ್ಲಿನ ಮಿಶನಿನ ಜವಾಬ್ದಾರಿಯನ್ನು ತಾತ್ಕಾಲಿಕವಾಗಿ ವಹಿಸಿಕೊಂಡಿರುವ ದಾದಿ ಎಂಬುದಾಗಿ ಟೀಕಿಸುತ್ತಾರೆ. ಆಗಿರುವ ಒಪ್ಪಂದವನ್ನು ಬೇಗನೆ ಜಾರಿಗೊಳಿಸಬೇಕೆಂಬ ಉದ್ದೇಶದಿಂದ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಗುಪ್ತ ಕೂಟಗಳನ್ನು ಜರಗಿಸುತ್ತಿದ್ದಾರೆ ಎಂಬ ವಾದವನ್ನು 'ಸತ್ಯವ್ರತ' ಮಂಡಿಸುತ್ತದೆ.[169]

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿನ ಹತ್ತು ಹಲವು ನ್ಯೂನತೆಗಳನ್ನು ವಿಚಾರವಾಗಿರಿಸಿ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ವಿರುದ್ಧ ಬಾಸೆಲ್ ಮಿಶನ್ ಕ್ರೈಸ್ತರು ನಿರಂತರವಾದ ಟೀಕೆಗಳನ್ನು ಮಾಡುವುದನ್ನು ಗಮನಿಸಬಹುದು. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ನೈಜವಾಗಿ ಇಲ್ಲಿನ ಮಿಶನ್ ಪ್ರಗತಿಯತ್ತ ಗಮನಹರಿಸದೇ, ಕಾಲಹರಣ

ಮಾಡುತ್ತಿದ್ದಾರೆ. ಮಿಶನಿಗಾಗಿ ಬರುವ ಅಪಾರ ಹಣವನ್ನು ವ್ಯಯಿಸುತ್ತಿದ್ದಾರೆ ಎಂಬ ಆರೋಪವನ್ನು ಮಾಡುತ್ತಾರೆ. ಮತ್ತೊಂದೆಡೆ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ, ಅವರ ಆಡಳಿತ ವೈಖರಿ ಹಾಗೂ ನೀತಿಗಳ ಬಗ್ಗೆ 'ಸತ್ಯವ್ರತ'ವು ನಿರಂತರವಾದ ಟೀಕೆಗಳನ್ನು ಮಾಡುತ್ತಾ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳನ್ನು ಹಾಗೂ ಅದರ ಬೆಂಬಲಿಗರನ್ನು ಖಂಡಿಸುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನರಿಗಳಂತೆ ಯಾವುದೇ ಕೆಲಸ ನಿರ್ವಹಿಸಲು ಶಕ್ತರಲ್ಲ. ಮಾತ್ರವಲ್ಲದೇ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳಿಗೆ ಮಿಶನ್ ಕೆಲಸದಲ್ಲಿ ಯಾವುದೇ ಆಸಕ್ತಿಯಾಗಲೀ, ಅನುಭವವಾಗಲಿ ಇಲ್ಲವೆಂಬ ಗುರುತರವಾದ ಆರೋಪವನ್ನು ಬಾಸೆಲ್ ಮಿಶನ್ ಕ್ರೈಸ್ತರು ಮಾಡುವುದನ್ನು ಗಮನಿಸಬಹುದು. ಸ್ಥಳೀಯ ಕ್ರೈಸ್ತರ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮಧ್ಯೆ ಸಹಕಾರವಾಗಲೀ, ಅನ್ಯೋನ್ಯತೆಯಾಗಲೀ ಇರಲಿಲ್ಲ. ಅದೇ ರೀತಿ ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಬಗ್ಗೆ ಇಲ್ಲಿನ ಕ್ರೈಸ್ತರಿಗೆ ಯಾವುದೇ ಗೌರವವು ಇರಲಿಲ್ಲ ಎಂಬುದು ಅವರ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಕೈಗಾರಿಕಾ ಮಿಷನ್:

1815ರಲ್ಲಿ ಸ್ಥಾಪನೆಯಾದ ಬಾಸೆಲ್ ಇವ್ಯಾಂಜಲಿಕಲ್ ಮಿಶನ್ ಅದರೊಂದಿಗೆ ನಿಕಟವಾಗಿ ಸಂಯೋಜನೆ ಹೊಂದಿದ್ದ ಎರಡು ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳೆಂದರೆ ಒಂದು ಮಿಶನ್ ಸೊಸೈಟಿ, ಇನ್ನೊಂದು ಟ್ರೇಡಿಂಗ್ ಸೊಸೈಟಿ [Trading Society].[170] ಈ ಮೊದಲೇ ಚರ್ಚಿಸಿದಂತೆ ಬಾಸೆಲ್ ಮಿಶನಿನ ಮಿಶನರಿ ಕಾರ್ಯವನ್ನು ಬ್ರಿಟಿಷ್ ಸರಕಾರವು ಜಾಗತಿಕ ಯುದ್ಧದ ಕಾಲದಲ್ಲಿ ನಿರ್ಬಂಧಿಸುತ್ತದೆ. ಅದೇ ರೀತಿ ಮತ್ತೊಂದೆಡೆ ಮಿಶನಿನ ಕೈಗಾರಿಕಾ ಚಟುವಟಿಕೆಗಳ ಮೇಲೂ ಕೆಲವು ನಿರ್ಬಂಧಗಳನ್ನು ಬ್ರಿಟಿಷ್ ಸರಕಾರವು ಹೇರುತ್ತದೆ. ಪ್ರಾರಂಭದಲ್ಲಿ ಬಾಸೆಲ್ ಮಿಶನರಿಗಳು ತಮ್ಮದೇ ಜ್ಞಾನದ ಆಧಾರದಲ್ಲಿ ಸ್ಥಳೀಯ ಕರಕುಶಲ ಹಾಗೂ ಕೃಷಿ ಕ್ಷೇತ್ರದಲ್ಲಿ ತಮ್ಮ ಪ್ರಯೋಗಗಳನ್ನು ಆರಂಭಿಸಿದ್ದರು. ಆದರೆ ಇದರಲ್ಲಿ ಯಶಸ್ಸು ಕಾಣದೇ ನಂತರ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದನ್ನು ಕಾಣಬಹುದು. 1846ರಲ್ಲಿ ಕೈಗಾರಿಕಾ ಕಮಿಷನ್‌ನನ್ನು [Industrial Commission] ಸ್ಥಾಪಿಸಿ, 1852ರಲ್ಲಿ ಅದನ್ನು ಮಿಶನಿನೊಳಗಡೆ ಪ್ರತ್ಯೇಕವಾದ ಖಜಾನೆಯೊಂದಿಗೆ ಮುಂದುವರೆಸಲಾಗುತ್ತದೆ. 1952ರ ನಂತರ ಕೈಗಾರಿಕಾ ಕಮಿಷನ್, ಮಿಶನಿನ ಕೈಗಾರಿಕಾ ಚಟುವಟಿಕೆಗಳನ್ನು ತನ್ನ ನಿಯಂತ್ರಣದಲ್ಲಿ ಮುಂದುವರೆಸಿ, ಕೈಗಾರಿಕಾ ಮಾದರಿಯ ಉತ್ಪಾದನೆಯನ್ನು [Factory type of production] ಆರಂಭಿಸುತ್ತದೆ. ಇದರ ಕಾಲಾವಧಿಯಲ್ಲಿ ನೇಯ್ಗೆ ಕಾರ್ಖಾನೆಗಳು, ಹಂಚಿನ ಕಾರ್ಖಾನೆಗಳು, ಮುದ್ರಣ ಹಾಗೂ ಇತರ ಕೈಗಾರಿಕೆಗಳು ಆರಂಭವಾಗುತ್ತವೆ. 1882ರಲ್ಲಿ ಕೈಗಾರಿಕಾ ಕಮಿಷನನ್ನು, ಮಿಶನರಿ ಜಾಯಿಂಟ್ ಸ್ಟಾಕ್

ಕಂಪನಿಯಾದ [Missionary Joint Stock Company] ಮಿಶನ್ ಟ್ರೇಡಿಂಗ್ ಕಂಪನಿಯೊಂದಿಗೆ [Mission Trading Company or Mission Handlungs Gesellschaft] ವಿಲೀನಗೊಳಿಸಲಾಗುತ್ತದೆ. ತದನಂತರ ಮಿಶನ್‌ನಿಂದ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳನ್ನು ಮಿಶನ್ ಟ್ರೇಡಿಂಗ್ ಕಂಪನಿಯು ನಿರ್ವಹಿಸಿ ಮುಂದುವರಿಯುತ್ತದೆ. ಆದುದರಿಂದ ಭಾರತದಲ್ಲಿ ಮಿಶನಿನ ಕೈಗಾರಿಕಾ ವಲಯವು ಕ್ಷಿಪ್ರವಾದ ಬೆಳವಣಿಗೆಯನ್ನು ಕಾಣುತ್ತದೆ. ಆದರೆ 1914ರ ಜಾಗತಿಕ ಯುದ್ಧದ ಸಂದರ್ಭದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಮಿಶನರಿಗಳ ಭಾಗವಹಿಸುವಿಕೆ ಸಂಪೂರ್ಣವಾಗಿ ಕೊನೆಗೊಳ್ಳುತ್ತದೆ. ಮಾತ್ರವಲ್ಲದೇ ಬಾಸೆಲ್ ಮಿಶನರಿಗಳು ಸ್ಥಾಪಿಸಿದ ಕೈಗಾರಿಕೆಗಳು ವಿನಾಶದ ಅಂಚಿಗೆ ಚಲಿಸಲು ಕಾರಣವಾಗುತ್ತದೆ.[171]

20ನೇ ಶತಮಾನದ ಆರಂಭದಲ್ಲಿ ಯುರೋಪಿನ ರಾಷ್ಟ್ರಗಳ ವಸಾಹತು ನೀತಿಗಳು ಅಮೂಲಾಗ್ರವಾದ ಬದಲಾವಣೆಯನ್ನು ಕಾಣುತ್ತವೆ. ಬಲಾಢ್ಯ ವಸಾಹತುಶಾಹಿ ಶಕ್ತಿಯಾದ ಬ್ರಿಟನ್ ಹಾಗೂ ಹೊಸ ವಸಾಹತುಶಾಹಿ ಶಕ್ತಿಯಾಗಿ ವೇಗವಾಗಿ ಬೆಳೆಯುತ್ತಿದ್ದ ಜರ್ಮನಿ ಈ ಎರಡು ರಾಷ್ಟ್ರಗಳು ಪರಸ್ಪರ ವೈರಿಗಳಾಗಿ ಬೆಳೆಯುತ್ತವೆ. ಇತ್ತ ಭಾರತವು ಬ್ರಿಟಿಷ್ ವಸಾಹತುವಾಗಿದ್ದು, ಬಾಸೆಲ್ ಮಿಶನ್ ಬಹುವಾಗಿ ಒಂದು ಜರ್ಮನ್ ಮಿಶನರಿ ಸಂಘಟನೆಯಾಗಿ ಗುರುತಿಸಿಕೊಂಡಿರುತ್ತದೆ. ಬಾಸೆಲ್ ಮಿಶನಿನ ಕೇಂದ್ರ ಕಛೇರಿ ತಟಸ್ಥ ರಾಷ್ಟ್ರವಾಗಿದ್ದ ಸ್ವಿಡ್ಜರ್‌ಲ್ಯಾಂಡ್‌ನಲ್ಲಿದ್ದರೂ, ಬಾಸೆಲ್ ಮಿಶನಿಗೆ ಸಹಾಯ ಮಾಡುತ್ತಿದ್ದ ಬಹುಪಾಲು ಚರ್ಚುಗಳು ಜರ್ಮನ್ ಪ್ರದೇಶದವಾಗಿದ್ದು, ಮಿಶನ್ ಸಂಘದಲ್ಲಿನ ಬಹುಪಾಲು ಮಿಶನರಿಗಳು ಹಾಗೂ ಇತರರು ಜರ್ಮನರಾಗಿದ್ದರು. ಪ್ರಥಮ ಜಾಗತಿಕ ಯುದ್ಧ ಆರಂಭವಾದಾಗ ಬಾಸೆಲ್ ಮಿಶನ್ ಭಾರತದಲ್ಲಿ 13 ಕೈಗಾರಿಕೆಗಳನ್ನು ನಡೆಸುತ್ತಿತ್ತು. ಯುದ್ಧದ ಆರಂಭದ ಕಾಲಾವಧಿಯಲ್ಲಿ ಈ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಜರ್ಮನರನ್ನು ಬಂಧಿಸಲಾಗುತ್ತದೆ. ಆದರೆ ಸ್ವಿಸ್ ಮ್ಯಾನೇಜರ್‌ಗಳ ಸಹಾಯದೊಂದಿಗೆ ಕೈಗಾರಿಕೆಗಳು ಮುಂದುವರಿಯಲು ಅವಕಾಶ ಕಲ್ಪಿಸಲಾಗುತ್ತದೆ.[172]

ಜಾಗತಿಕ ಯುದ್ಧ ಆರಂಭವಾದಾಗ ಬಾಸೆಲ್ ಮಿಶನ್ ಕೈಗಾರಿಕೆಗಳು ಮಾತ್ರವಲ್ಲದೇ, ಬ್ರಿಟಿಷ್ ಭಾರತದಲ್ಲಿ ಜರ್ಮನರ ಅಪಾರವಾದ ಬಂಡವಾಳವಿತ್ತು. ಯುದ್ಧವು ಆರಂಭವಾದಾಗ ಭಾರತದಲ್ಲಿದ್ದ ಜರ್ಮನ್ ಬಂಡವಾಳ [capital] ಹಾಗೂ ಸಾಲಪತ್ರಗಳ ಒಟ್ಟು ಮೊತ್ತವು 316(3,16,32,186) ಲಕ್ಷದಷ್ಟಾಗಬಹುದೆಂದು ಸರಕಾರವು ಅಂದಾಜಿಸಿತ್ತು. ಇದರಲ್ಲಿ 277 ಲಕ್ಷದಷ್ಟು ಮೊತ್ತವು ಜರ್ಮನ್ ಕೈಗಾರಿಕೆಗಳಲ್ಲಿ ವ್ಯಯವಾಗಿದ್ದರೆ, ಉಳಿದ 39 ಲಕ್ಷದಷ್ಟು ಮೊತ್ತವು ಜರ್ಮನೇತರ ಕೈಗಾರಿಕೆಗಳಲ್ಲಿ ಜರ್ಮನರ ಷೇರುಗಳ ರೂಪದಲ್ಲಿ ವ್ಯಯಿಸಲ್ಪಟ್ಟಿತ್ತು. ಇದನ್ನು

ಹೊರತುಪಡಿಸಿ ಜರ್ಮನರಿಂದಲೇ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳಿಗೆ ಸಂಬಂಧಿಸಿದ ಆಸ್ತಿಯ ಮೊತ್ತವು 62 [62,27,198] ಲಕ್ಷದಷ್ಟಾದರೆ, ಜರ್ಮನರ 40 [40,24,684] ಲಕ್ಷದಷ್ಟು ಮೊತ್ತವು ಚಲಾವಣೆಯಾಗುತ್ತಿರುವ ಬಂಡವಾಳದ ರೂಪದಲ್ಲಿ ಅಸ್ತಿತ್ವದಲ್ಲಿತ್ತು. ಈ ಒಟ್ಟು ಮೊತ್ತದಲ್ಲಿ 53.3% ರಷ್ಟು ಬಂಡವಾಳವು ಬರ್ಮಾದಲ್ಲಿ ವ್ಯಯಿಸಲಾಗಿದ್ದರೆ, 28% ರಷ್ಟು ಬಂಡವಾಳ ಬಂಗಾಳದಲ್ಲಿ, 12.4% ರಷ್ಟು ಮುಂಬೈಯಲ್ಲಿ, 5.5% ರಷ್ಟು ಮದ್ರಾಸ್‌ನಲ್ಲಿ, 0.4% ರಷ್ಟು ಪಂಜಾಬಿನಲ್ಲಿ, 0.2% ರಷ್ಟು ಯುನೈಟೆಡ್ ಪ್ರಾವಿನ್ಸ್‌ಗಳಲ್ಲಿ [United Provinces] ಹಾಗೂ 0.1% ರಷ್ಟು ದೆಹಲಿಯಲ್ಲಿ ವ್ಯಯಿಸಲಾಗಿತ್ತು. 110ಲಕ್ಷ ರೂಪಾಯಿಗಳನ್ನು ಸಾಮಾನ್ಯ ವ್ಯಾಪಾರದಲ್ಲಿ, 106 ಲಕ್ಷ ರೂಪಾಯಿಗಳನ್ನು ಅಕ್ಕಿ ಗಿರಣಿಗಳಲ್ಲಿ [Rice Mills], 61 ಲಕ್ಷವನ್ನು ಇಂಜಿನಿಯರಿಂಗ್‌ಗೆ ಸಂಬಂಧಿಸಿದ ವ್ಯಾಪಾರದಲ್ಲಿ, 15 ಲಕ್ಷವನ್ನು ಬ್ಯಾಂಕಿಂಗ್,. 5 ಲಕ್ಷವನ್ನು ಸೆಣಬಿನ ಕೈಗಾರಿಕೆಗಳಲ್ಲಿ ಮತ್ತು 2 ಲಕ್ಷವನ್ನು ಕಲ್ಲಿದ್ದಲಿನ ಕಾರ್ಖಾನೆಗಳಲ್ಲಿ ವ್ಯಯಿಸಲಾಗಿತ್ತು. ಮದ್ರಾಸ್ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಒಟ್ಟು 17,35,291 ಲಕ್ಷದಷ್ಟು ಬಂಡವಾಳ ಹಾಗೂ ಸಾಲ ಪತ್ರಗಳಿದ್ದರೆ, 13,50,700 ಲಕ್ಷದಷ್ಟು ಆಸ್ತಿಯನ್ನು ಜರ್ಮನ್ ಕೈಗಾರಿಕೆಗಳು ಹೊಂದಿದ್ದವು. ಒಟ್ಟು 17,35,291 ಲಕ್ಷದಷ್ಟು ಸಾಲಪತ್ರ ಮತ್ತು ಬಂಡವಾಳದಲ್ಲಿ 4,34,134 ಲಕ್ಷದಷ್ಟು ಸಾಲಪತ್ರಗಳು ಹಾಗೂ ಬಂಡವಾಳ ಜರ್ಮನ್ ಕೈಗಾರಿಕೆಗಳಲ್ಲಿ ವ್ಯಯವಾಗಿದ್ದರೆ, ಉಳಿದ 13,01,157 ಲಕ್ಷದಷ್ಟು ಸಾಲಪತ್ರ ಹಾಗೂ ಬಂಡವಾಳ ಜರ್ಮನರೇತರ ಕೈಗಾರಿಕೆಗಳಲ್ಲಿ ಹೂಡಿಕೆಯಾಗಿತ್ತು. ಉಳಿದಂತೆ ಎಲ್ಲಾ 13,50,700 ರಷ್ಟು ಆಸ್ತಿಯು ಜರ್ಮನರ ಕೈಗಾರಿಕೆಗಳಿಗೆ ಸಂಬಂಧಿಸಿದ್ದಾಗಿತ್ತು.[173] ಈ ರೀತಿ ಅಪಾರವಾದ ಜರ್ಮನ್ ಬಂಡವಾಳ ಬ್ರಿಟಿಷ್ ಭಾರತದಲ್ಲಿ ಯುದ್ಧದ ಕಾಲಕ್ಕಾಗುವಾಗ ವ್ಯಯವಾಗಿತ್ತು ಹಾಗೂ ಜರ್ಮನರು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ತಮ್ಮ ಕೈಗಾರಿಕೆಗಳನ್ನು ಆರಂಭಿಸಿದ್ದರು ಎಂಬುದು ಗಮನಾರ್ಹವಾದ ವಿಚಾರವಾಗಿದೆ. ಹೀಗೆ ಜರ್ಮನರ ಪ್ರಬಲ ಅಸ್ತಿತ್ವವು ಬಾಸೆಲ್ ಮಿಶನಿನ ಕೈಗಾರಿಕೆಗಳಲ್ಲಿದ್ದುದರಿಂದ, ಅದರ ಮೇಲೆ ಬ್ರಿಟಿಷ್ ಸರಕಾರವು ಕೆಲವು ನಿರ್ಬಂಧಗಳನ್ನು ಹೇರುತ್ತದೆ. ಆದರೆ 1914ರ ಯುದ್ಧದ ಆರಂಭದ ಕಾಲದಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳ ವಸ್ತುಗಳನ್ನು ಭಾರತದಲ್ಲಿ, ಬ್ರಿಟಿಷ್ ವಸಾಹತುಗಳಲ್ಲಿ, ಫ್ರಾನ್ಸ್, ರಷ್ಯಾ, ಇತ್ಯಾದಿ ದೇಶಗಳಲ್ಲಿ ಬಳಕೆಗೆ ಅಗತ್ಯವಿರುವಂತೆ ಖರೀದಿಸಬಹುದು. ಇದಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಸರಕಾರದ ವಿರೋಧವಿಲ್ಲ ಎಂಬುದನ್ನು ಬ್ರಿಟಿಷ್ ಸರಕಾರವು ಸ್ಪಷ್ಟಪಡಿಸುತ್ತದೆ.[174]

ಬಾಸೆಲ್ ಮಿಶನ್ ಗೋಲ್ಡ್ ಕೋಸ್ಟ್, ಕ್ಯಾಮೆರೋನ್ [Gold Cost, Cameroon] ಮತ್ತು ಭಾರತದಲ್ಲಿ ತನ್ನ ಕೈಗಾರಿಕಾ ಅಸ್ತಿತ್ವವನ್ನು ಹೊಂದಿತ್ತು. ಭಾರತದ ಮಲಬಾರ್, ದಕ್ಷಿಣ

ಕೆನರಾ, ಕೊಡಗು ಮತ್ತು ಉದಕಮಂಡಲಗಳಲ್ಲಿ [Ootacamund] 'ಬಾಸೆಲ್ ಮಿಶನ್ ಇಂಡಸ್ಟ್ರಿಯಲ್ಸ್' [Basel Mission Industrials] ಗಳೆಂಬ ಹೆಸರಿನೊಂದಿಗೆ ತನ್ನ ಕೈಗಾರಿಕೆಗಳನ್ನು ಬಾಸೆಲ್ ಮಿಶನ್ ಹೊಂದಿತ್ತು. ಇದು ಸ್ವಿಸ್ ಮೂಲದ್ದಾಗಿದ್ದರೂ, ಅದರಲ್ಲಿ ಬಹುಪಾಲು ಜರ್ಮನರಿದ್ದು, ಅವರ ಷೇರುಗಳಿದ್ದುದರಿಂದ, ಬ್ರಿಟಿಷ್ ಸರಕಾರವು ಅದನ್ನು 'ವೈರಿ ವ್ಯಾಪಾರಿ ಸಂಘ' [Hostile Firm] ಎಂಬುದಾಗಿ ಘೋಷಿಸುತ್ತದೆ. ಆದುದರಿಂದ ಬಾಸೆಲ್ ಮಿಶನ್ ಕೈಗಾರಿಕೆಗಳ ಜನರಲ್ ಏಜೆಂಟ್ [General Agent] ಕೈಗಾರಿಕೆಗಳು ತನ್ನ ವ್ಯಾಪಾರವನ್ನು ಮುಂದುವರಿಸಲು ಅನುವು ಮಾಡಿಕೊಡುವಂತೆ ಪರವಾನಿಗೆಯನ್ನು ನೀಡುವಂತೆ ಸರಕಾರಕ್ಕೆ ಮನವಿಯನ್ನು ಮಾಡುತ್ತಾರೆ. ಕೈಗಾರಿಕೆಗಳ ಲಾಭಾಂಶವನ್ನು ಸಂಪೂರ್ಣವಾಗಿ ಸಾರ್ವಜನಿಕ ಮತ್ತು ಪರೋಪಕಾರದ ಸಂಸ್ಥೆಗಳಿಗೆ [Charitable Institutions] ಬಾಸೆಲ್ ಮಿಶನ್ ವ್ಯಯಿಸುತ್ತಿದ್ದುದರಿಂದ ಹಾಗೂ ಬಾಸೆಲ್ ಮಿಶನ್ ಕೈಗಾರಿಕೆಗಳ ವ್ಯಾಪಾರವನ್ನು ರದ್ದುಪಡಿಸಿದರೆ ಹಲವು ಉದ್ಯೋಗಿಗಳಿಗೆ [ಕಾರ್ಮಿಕರಿಗೆ] ಸಮಸ್ಯೆಗಳಾಗಬಹುದೆಂಬ ಬಲವಾದ ಕಾರಣಗಳಿಂದ, ಸರಕಾರವು ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಮುಂದುವರಿಸಲು ಪರವಾನಿಗೆಯನ್ನು ನೀಡುತ್ತದೆ. ಬಾಸೆಲ್ ಮಿಶನ್ ಕೈಗಾರಿಕೆಗಳು ಮುಂದುವರಿಯುವಂತೆ 'ಹೋಸ್ಟೈಲ್ ಫೋರಿನರ್ಸ್ ಟ್ರೇಡಿಂಗ್ ಓರ್ಡರ್,1914' [Hostile Foreigners Trading order,1914] ಅನ್ವಯ ಷರತ್ತು ಬದ್ಧವಾದ ಪರವಾನಿಗೆಯನ್ನು ನೀಡಲಾಗುತದೆ. ಬಾಸೆಲ್ ಮಿಶನ್ ಕೈಗಾರಿಕೆಗಳ ಲಾಭಾಂಶವು ಯಾವುದೇ ಕಾರಣಕ್ಕೂ ವೈರಿಗಳ ಕೈ ಸೇರಕೂಡದು ಎಂಬ ಷರತ್ತನ್ನು ಕೈಗಾರಿಕೆಗಳಿಗೆ ವಿಧಿಸಲಾಗುತ್ತದೆ. ಈ ರೀತಿ ಬಾಸೆಲ್ ಮಿಶನಿನ ಮಿಶನರಿಗಳನ್ನು ಬಂಧಿಸಿದರೂ, ಅದರ ಕೈಗಾರಿಕೆಗಳು ಮುಂದುವರಿಯಲು ಬ್ರಿಟಿಷ್ ಸರಕಾರವು ಅನುವು ಮಾಡಿಕೊಟ್ಟಿತ್ತು. ಆದರೆ ಸ್ವಲ್ಪ ಕಾಲಾವಧಿಯ ನಂತರ ಬಾಸೆಲ್ ಮಿಶನ್ ಕೈಗಾರಿಕೆಗಳ ಎಲ್ಲಾ ವ್ಯವಹಾರವನ್ನು ಒಬ್ಬ ಅನುಭವಿ ಲೆಕ್ಕಪರಿಶೋಧಕನಾದ [Accountant] ಎಲ್. ಡ್ರಯ್ಸ್‌ಡಲೆರವರ [Mr. L. Drysdale] ಮೇಲ್ವಿಚಾರಣೆಗೆ ಒಳಪಡಿಸಲಾಗುತ್ತದೆ.[175] ತದನಂತರ ಬಾಸೆಲ್ ಮಿಶನ್ ಕೈಗಾರಿಕೆಗಳ ಜನರಲ್ ಏಜೆಂಟರಾಗಿದ್ದ ಹೆಚ್. ಹೋಫ್‌ಮೆನ್ [H.Hofmann] ಯುದ್ಧ ಕಾಲದಲ್ಲಿ ಸರಕಾರವು ಕೈಗಾರಿಕೆಗಳ ಮುಂದುವರಿಯುವಿಕೆಗೆ ನೀಡಿರುವ ಪರವಾನಿಗೆಯನ್ನು ಮುಂದುವರಿಸುವಂತೆ ಮನವಿ ಮಾಡುತ್ತಾರೆ. ಅದರೊಂದಿಗೆ ಕೈಗಾರಿಕೆಗಳಿಗೆ ಬ್ರಿಟಿಷ್ ಭಾರತದಲ್ಲಿ ವ್ಯಾಪಾರ ಮಾಡುವಂತೆ ಅನುಮತಿ ಕೋರಿ ಮೂರು ಪ್ರತ್ಯೇಕವಾದ ಮನವಿಗಳನ್ನು ಬ್ರಿಟಿಷ್ ಸರಕಾರಕ್ಕೆ ಸಲ್ಲಿಸಲಾಗುತ್ತದೆ. ಬಾಸೆಲ್ ಮಿಶನ್ ತನ್ನ ಪ್ರತ್ಯೇಕ ಮೂರು ಉದ್ದೇಶಗಳಿಗೆ ಪರವಾನಿಗೆಯನ್ನು ಕೇಳಿದಂತಹ ಸಂದರ್ಭದಲ್ಲಿ, ಮದ್ರಾಸ್

ಸರಕಾರವು ಆದರ ಸೊಲಿಸಿಟರ್‌ರಾದ [solicitor] ಡಬ್ಲ್ಯು. ಒ. ಡೇವಿಡ್‌ರಲ್ಲಿ [W.O.David] ಪರವಾನಿಗೆಯ ಕರಡನ್ನು ಸಿದ್ಧಪಡಿಸುವಂತೆ ತಿಳಿಸುತ್ತದೆ. ತದನಂತರ ಪರವಾನಿಗೆಯ ಕರಡನ್ನು ಭಾರತ ಸರಕಾರಕ್ಕೆ ಸಲ್ಲಿಸಿ, ಅದರ ಅನುಮತಿಯನ್ನು ಪಡೆಯಲಾಗುತ್ತದೆ. ಈ ಷರತ್ತುಬದ್ಧವಾದ ಪರವಾನಿಗೆಯಿಂದಾಗಿ ಬಾಸೆಲ್ ಮಿಶನ್ ದಕ್ಷಿಣ ಕೆನರಾ, ಮಲಬಾರ್, ಕೊಡಗು ಮತ್ತು ಉದಕಮಂಡಲಗಳಲ್ಲಿ ಹೊಂದಿದ್ದ ಎಲ್ಲಾ 13 ಕೈಗಾರಿಕಾ ವಿಭಾಗಗಳು ಮುಂದುವರಿಯುವಂತಾಗುತ್ತವೆ.[176]

ಬಾಸೆಲ್ ಮಿಶನ್ ಕೈಗಾರಿಕೆಗಳಿಗೆ ನೀಡಲಾಗಿರುವ ಷರತ್ತುಬದ್ಧವಾದ ಪರವಾನಿಗೆಯ ನೆಲೆಯ ಮೇಲೆಯೇ ಟಿ. ಹುಬರ್ [T. Huber] ರವರಿಗೆ ಮಂಗಳೂರಿನಲ್ಲಿದ್ದ 'ಬಾಸೆಲ್ ಮಿಶನ್ ಪ್ರಿಂಟಿಂಗ್ ಪ್ರೆಸ್'ನ್ನು [Basel Mission Priniting Press] ಮುಂದುವರಿಸಲು ಹಾಗೂ ಓ. ವ್ರತ್‌ರಿಚ್ಚ್ [O.Wuthrich] ರವರಿಗೆ ಮಂಗಳೂರಿನಲ್ಲಿದ್ದ 'ಬಾಸೆಲ್ ಮಿಶನ್ ಬುಕ್ ಆಂಡ್ ಟ್ರ್ಯಾಕ್ಟ್ ಡಿಪೋಸಿಟರಿ'ಯನ್ನು [Basel Mission Book and Tract Depository] ಮುಂದುವರಿಸಲು ಬ್ರಿಟಿಷ್ ಸರಕಾರ ಅನುಮತಿಯನ್ನು ನೀಡುತ್ತದೆ.[177] 1915ರಲ್ಲಿ ಬ್ರಿಟಿಷ್ ಭಾರತ ಸರಕಾರವು ವೈರಿ ದೇಶದ ನಾಗರೀಕರು ದೇಶದಲ್ಲಿ ನಡೆಸುತ್ತಿದ್ದ ವ್ಯಾಪಾರ ಹಾಗೂ ಅವರ ಕೈಗಾರಿಕೆಗಳ ಮೇಲೆ ತನ್ನ ಹಿಡಿತವನ್ನು ಮತ್ತು ನಿಯಂತ್ರಣವನ್ನು ಮತ್ತಷ್ಟು ಬಲಪಡಿಸಲು ಆಲೋಚಿಸುತ್ತದೆ. ಈ ಸಂದರ್ಭದಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳ ವಿಚಾರವು ಚರ್ಚೆಗೆ ಬಂದು, ಈ ಕೈಗಾರಿಕೆಗಳಲ್ಲಿ ಜರ್ಮನರ ಪ್ರಭಾವವು ಇದ್ದುದರಿಂದ ಸರಕಾರವು ಅಗತ್ಯ ಕಂಡು ಬಂದಲ್ಲಿ ಅವುಗಳನ್ನು ಮುಚ್ಚುವ [Liquidation] ನಿರ್ಧಾರಕ್ಕೆ ಬರುತ್ತದೆ. ಮತ್ತೊಂದೆಡೆ ಕೈಗಾರಿಕೆಗಳ ಅಧ್ಯಕ್ಷರಾಗಿದ್ದ ಪ್ರೈಸ್‌ವರ್ಕ್ [Preiswerk] ರವರು ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಮುಂದುವರಿಸುವುದರ ಕುರಿತಾಗಿ, ಬ್ರಿಟಿಷ್ ಸರಕಾರದ ಮುಂದೆ ಒಂದು ಯೋಜನೆಯನ್ನು ಮುಂದಿಡುತ್ತಾರೆ. ಅದರಂತೆ ಕೈಗಾರಿಕೆಗಳ ನಿಯಂತ್ರಣ ಹಾಗೂ ಮಾರ್ಗದರ್ಶನವು ಇಂಗ್ಲೆಂಡಿನಿಂದಲೇ ಆಗುವ ಹಾಗೆ, ಬ್ರಿಟನ್‌ನಲ್ಲಿ ಇದರ ಕಛೇರಿಯನ್ನು ತೆರೆಯುವುದು ಹಾಗೂ ಅದರ ನಿರ್ವಹಣೆ ಮಾಡುವವರನ್ನು ಇಂಗ್ಲೆಂಡಿನ ಕಾನೂನು ವ್ಯಾಪ್ತಿಗೆ ತರುವುದು. ಆದರೆ ಬ್ರಿಟಿಷ್ ಸರಕಾರ ಈ ಮೇಲಿನ ರೀತಿಯಲ್ಲಿ ತನ್ನ ನೆಲದಿಂದ ಈ ಕೈಗಾರಿಕೆಗಳನ್ನು ಮುಂದುವರಿಸಲು ಆಸಕ್ತಿ ತೋರದೆ, ಈ ಕೈಗಾರಿಕೆಗಳ ಸಂಪೂರ್ಣವಾದ ನಿಯಂತ್ರಣವನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸುವ ಉದ್ದೇಶವನ್ನು ಹೊಂದಿತ್ತು. ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನಿನ, ಮಿಶನರಿ ಕಾರ್ಯವನ್ನು ಪುನರ್ ಸಂಘಟಿಸುವ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಡಾ.ಡಿ. ಬೆನೊಯ್ಟ್ [Doctor de Benoit] ರವರು ಕೈಗಾರಿಕೆಗಳು ಈ

ಮೊದಲು ಇದ್ದ ಹಾಗೆ ಹಳೆ ಬಾಸೆಲ್ ಮಿಶನ್ ಕಮಿಟಿಗೆ ಸಂಬಂಧಿಸಿದಂತೆ, ಅವುಗಳನ್ನು ಮುಂದೆ ಸ್ಥಾಪಿಸಲು ಉದ್ದೇಶಿಸಿರುವ ಸ್ವಿಸ್ ಕಮಿಟಿಯೊಂದಿಗೆ ಸೇರಿಸಬೇಕು ಎಂಬ ಚಿಂತನೆಯನ್ನು ಮುಂದಿಡುತ್ತಾರೆ. 1917ರಲ್ಲಿ ಡಾ. ಡಿ. ಬೆನೊಯ್ಟ್‌ರವರು ಭಾರತದಲ್ಲಿನ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಮಾರಾಟ ಮಾಡಿ [liquidate] ಷೇರುದಾರರ ಮೊತ್ತವನ್ನು ಅವರಿಗೆ ಪಾವತಿಸಿ, ನಂತರ ಉಳಿದ ಮೊತ್ತವನ್ನು ಬಾಸೆಲ್ ಮಿಶನನ್ನು ಮುಂದುವರಿಸಲು ಸಾಧ್ಯವಾಗುವಂತೆ ಸ್ಥಾಪಿಸಲು ಉದ್ದೇಶಿಸಿರುವ ಹೊಸ ಮಿಶನರಿ ಸಂಘಕ್ಕೆ ದೇಣಿಗೆಯಾಗಿ ನೀಡುವುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮತ್ತೊಂದೆಡೆ 1918ರಲ್ಲಿ ಬ್ರಿಟಿಷ್ ಸರಕಾರ ಭಾರತದಲ್ಲಿನ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಮುಚ್ಚುವ [liquidate] ನಿರ್ಧಾರವನ್ನು ತಿಳಿಸುತ್ತದೆ.[178]

1916ರಲ್ಲಿ ಬ್ರಿಟಿಷ್ ಸರಕಾರವು ಒಂದು ಒಪ್ಪಂದದ ಮೂಲಕ ಬಾಸೆಲ್ ಮಿಶನ್ ಕೈಗಾರಿಕೆಗಳ ಭಾರತದಲ್ಲಿನ ವ್ಯಾಪಾರದ ನಿಯಂತ್ರಣವನ್ನು ಲಂಡನ್ ಮೂಲದ ಜೆ.ಪಿ.ವರ್ನರ್ ಆಂಡ್ ಕಂ. [J.P.Werner and Co.] ಗೆ ವಹಿಸುತ್ತದೆ. ಅದೇ ವರ್ಷ ವೈರಿ ದೇಶದ ನಾಗರೀಕರ ವ್ಯಾಪಾರವನ್ನು ನಿಯಂತ್ರಿಸುವ ಹಾಗೂ ರದ್ದುಪಡಿಸುವ ಉದ್ದೇಶದೊಂದಿಗೆ 'ಗವರ್ನರ್ ಜನರಲ್ ಇನ್ ಕೌನ್ಸಿಲ್' [Governer General in Council] 'ಎನಿಮಿ ಟ್ರೇಡಿಂಗ್ ಆಕ್ಟ್ ಆಫ್ 1916' [Enemy Trading Act of 1916] ನ್ನು ಜಾರಿಗೆ ತರುತ್ತಾರೆ. ಮತ್ತೊಂದೆಡೆ ಭಾರತದಲ್ಲಿ 'ದಿ ಮೆಡ್ರಾಸ್ ಛೇಂಬರ್ ಆಫ್ ಕಾಮರ್ಸ್' [The Madras chamber of Commerce] ತಕ್ಷಣದಲ್ಲಿ ಮದ್ರಾಸ್ ಸರಕಾರವನ್ನು ಸಂದರ್ಶಿಸಿ, ಬಾಸೆಲ್ ಮಿಶನ್ ಕೈಗಾರಿಕೆಗಳ ಸಂಪೂರ್ಣ ಕಾರ್ಯಾಚರಣೆಯನ್ನು ರದ್ದುಪಡಿಸುವಂತೆ ಆಗ್ರಹಿಸುತ್ತದೆ. ಇದು ಭಾರತದಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳ ಕ್ಷಿಪ್ರ ಬೆಳವಣಿಗೆಯು, ದೇಶದಲ್ಲಿ ಬ್ರಿಟಿಷರ ವಾಣಿಜ್ಯ ಆಸಕ್ತಿಗಳಿಗೆ ಬಹಳಷ್ಟು ಸ್ಪರ್ಧೆಯನ್ನುಂಟುಮಾಡಿತ್ತು ಹಾಗೂ ಬ್ರಿಟಿಷ್ ವಾಣಿಜ್ಯ ಆಸಕ್ತಿಗಳಿಗೆ ಪ್ರಶ್ನಾರ್ಥಕವಾಗಿ ಬೆಳೆದಿತ್ತು ಎಂಬುದು 'ದಿ ಮೆಡ್ರಾಸ್ ಛೇಂಬರ್ ಆಫ್ ಕಾಮರ್ಸ್'ನ ವರ್ತನೆಯಿಂದ ಸ್ಪಷ್ಟವಾಗುತ್ತದೆ. ಸ್ವಿಡ್ಜರ್ಲ್ಯಾಂಡ್ ಸರಕಾರ ಬಾಸೆಲ್ ಮಿಶನ್ ಕೈಗಾರಿಕೆಗಳ ವಿಚಾರಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಭಾರತ ಸರಕಾರವು ಬಾಸೆಲ್ ಮಿಶನ್ ಕೈಗಾರಿಕೆಗಳ ಕಡೆಗಿರುವ ವರ್ತನೆ ಮತ್ತು ಅಭಿಪ್ರಾಯವನ್ನು ಬದಲಾಯಿಸುವ ಪ್ರಯತ್ನವನ್ನು ಮಾಡುತ್ತದೆ. ಆದರೆ ಬ್ರಿಟಿಷ್ ಸರಕಾರವು ಅಭಿಪ್ರಾಯ ಪಡುವಂತೆ ಬಾಸೆಲ್ ಮಿಶನ್ ಕೈಗಾರಿಕೆಗಳು ಬಹುವಾಗಿ ಜರ್ಮನ್ ಪ್ರಭಾವವನ್ನು ಹೊಂದಿವೆ. ಆದುದರಿಂದ ಅವುಗಳ ಮೇಲಿನ ಪ್ರಬಲ ನಿರ್ಬಂಧ ಹಾಗೂ ನಿಯಂತ್ರಣ ಅನಿವಾರ್ಯವೆಂದು ತಿಳಿಸುತ್ತದೆ. ಸ್ವಿಡ್ಜರ್ಲ್ಯಾಂಡ್ ಸರಕಾರದ ಹಸ್ತಕ್ಷೇಪವು ಬಾಸೆಲ್ ಮಿಶನ್ ಕೈಗಾರಿಕೆಗಳ ಮಾರಾಟವನ್ನು ಕೆಲಕಾಲ

ಮುಂದೂಡುವಂತೆ ಮಾಡುತ್ತದೆ. ಯುದ್ಧದ ಕೊನೆಯವರೆಗೆ ಬಾಸೆಲ್ ಮಿಶನ್ ಕೈಗಾರಿಕೆಗಳ ಮಾರಾಟವನ್ನು ಬ್ರಿಟಿಷ್ ಸರಕಾರ ಮಾಡಿರುವುದಿಲ್ಲ.[179] ಈ ರೀತಿ ಷರತ್ತುಬದ್ಧವಾದ ಪರವಾನಿಗೆಗಳೊಂದಿಗೆ ಸ್ವಿಸರ ಮಾರ್ಗದರ್ಶನದಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳು ಯುದ್ಧ ಕಾಲದ ಕೊನೆವರೆಗೆ ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸುತ್ತವೆ.

ಭಾರತದಲ್ಲಿನ ಬಾಸೆಲ್ ಮಿಶನ್ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, ಸರಕಾರ ಯಾವ ನಿರ್ಧಾರಕ್ಕೆ ಬಂದಿದೆ ಎಂಬ ವಿಚಾರದ ಬಗ್ಗೆ 19ನೇ ನವಂಬರ್ 1918ರಲ್ಲಿ ಮದ್ರಾಸ್ ಶಾಸಕಾಂಗ ಸಭೆಯ ಸದಸ್ಯರಾಗಿದ್ದ [Member of Madras Legislative Council] ಕವಲಪ್ಪರ ಮುಪ್ಪಿಳ್ ನಾಯರ್‌ರವರು [Kavalappara Muppil Nayar] ಪ್ರಶ್ನೆಯನ್ನು ಎತ್ತಿದ್ದರು. ಸರಕಾರವು ಇದಕ್ಕೆ ಉತ್ತರಿಸುತ್ತಾ, ಬಾಸೆಲ್ ಮಿಶನ್ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸರಕಾರವು ಯಾವುದೇ ಅಂತಿಮ ನಿರ್ಧಾರಕ್ಕೆ ಬಂದಿಲ್ಲವೆಂದೂ, ನ್ಯಾಶನಲ್ ಮಿಶನರಿ ಕೌನ್ಸಿಲ್ ಬಾಸೆಲ್ ಮಿಶನಿನ ಮಿಶನರಿ ಕಾರ್ಯವನ್ನು ಮುಂದುವರಿಸಲಿದೆ ಎಂದು ತಿಳಿಸುತ್ತದೆ. ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಮುಂದುವರಿಸುವಂತಾಗಲು ಇಂಗ್ಲೆಂಡಿನಲ್ಲಿ ಒಂದು ಕಂಪನಿಯನ್ನು [Joint Stock company] ಸ್ಥಾಪಿಸಲು ಚಿಂತನೆಯಿದೆ ಎಂದು ಸರಕಾರವು ತನ್ನ ಉತ್ತರದಲ್ಲಿ ತಿಳಿಸುತ್ತದೆ.[180] ಬ್ರಿಟಿಷ್ ಸರಕಾರ ಬಾಸೆಲ್ ಮಿಶನ್ ಕೈಗಾರಿಕೆಗಳ ವ್ಯವಹಾರವನ್ನು ಮುಚ್ಚಿಬಿಡುವ ಬಗ್ಗೆ ಚಿಂತಿಸುತ್ತಿರುವ ಸಂದರ್ಭದಲ್ಲಿ, ಬಾಸೆಲ್ ವಾಣಿಜ್ಯ ಸಂಘಟನೆಯ ಮುಖ್ಯಸ್ಥರಾದ ಪ್ರೈಸ್‌ವೇರ್ಕ್ [Preiswerk] ರವರು ಇಂಗ್ಲೆಂಡಿಗೆ ತೆರಳಿ ಬಾಸೆಲ್ ಮಿಶನ್ ಕೈಗಾರಿಕೆಗಳಿಗೆ ಸಂಬಂಧಿಸಿದ ಹಲವು ವಿಚಾರಗಳನ್ನು ಚರ್ಚಿಸಲು ಮುಂದಾಗುತ್ತಾರೆ. ಆದರೆ ಬ್ರಿಟಿಷ್ ಸರಕಾರ ಗೋಲ್ಡ್‌ಕೋಸ್ಟ್ [Gold Coast] ನಲ್ಲಿರುವ ಅದರ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಒಂದು ಅಂತಿಮ ನಿರ್ಧಾರಕ್ಕೆ ಬಂದಿದೆ ಎಂದು ಹಾಗೂ ಬಾಸೆಲ್ ಮಿಶನ್ ಕೈಗಾರಿಕೆಗಳ ಬಗ್ಗೆ ಚರ್ಚಿಸುವುದು ವ್ಯರ್ಥವೆಂದು ಹೇಳಿ, ಪ್ರೈಸ್‌ವೇರ್ಕ್ [Preiswerk] ರವರಿಗೆ ಅನುಮತಿಯನ್ನು ನಿರಾಕರಿಸುತ್ತದೆ.

ಕಾನ್ಫರೆನ್ಸ್ ಆಫ್ ಮಿಶನರಿ ಸೊಸೈಟಿಸ್ ಇನ್ ಗ್ರೇಟ್ ಬ್ರಿಟನ್ ಆಂಡ್ ಐರ್ಲ್ಯಾಂಡ್‌ನ ಕಾರ್ಯದರ್ಶಿಯಾಗಿದ್ದ ಓಲ್ಡ್‌ಹಾಮ್ [Oldham] ರವರು ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಮರು ಸಂಘಟಿಸುವಿಕೆಗೆ ಬಹಳಷ್ಟು ಕಾರ್ಯವನ್ನು ನಿರ್ವಹಿಸುತ್ತಾರೆ. ಇವರು ಹಾಗೂ ಸರ್ ಆಂಡ್ರ್ಯೂ ಪ್ರೇಸರ್ [Sir Andrew Fraser] ರವರು ಜತೆಗೂಡಿ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಅದರ ಮೊದಲಿನ ಉದ್ದೇಶದಂತೆ ನಡೆಸುವ ಸಲುವಾಗಿ, ಬ್ರಿಟನ್‌ನ ಜನರು ಮತ್ತು ಬಂಡವಾಳದ ಸಹಾಯದಿಂದ ಒಂದು ಕಂಪನಿಯನ್ನು ರಚಿಸಿ, ಬಾಸೆಲ್ ಮಿಶನ್ ಕೈಗಾರಿಕೆಗಳನ್ನು

ಈ ಕಂಪನಿಯು ಮುನ್ನಡೆಸುವಂತಾಗುವ ಒಂದು ಯೋಜನೆಯನ್ನು ರೂಪಿಸುತ್ತಾರೆ. ಈ ಹೊಸ ಕಂಪನಿಯು ಪರೋಪಕಾರಿ [Philanthropic] ಲಕ್ಷಣಗಳನ್ನು ಹಾಗೂ ಸಂಪೂರ್ಣ ಬ್ರಿಟಿಷ್ ಮೂಲವನ್ನು ಒಳಗೊಂಡಿರುವಂತೆ ಸ್ಥಾಪಿಸುವ ಅಂಶವನ್ನು ಓಲ್ಡಹಾಮ್ ಇಟ್ಟುಕೊಂಡಿದ್ದರು. ಸ್ವಲ್ಪ ಕಾಲಾವಧಿಯ ನಂತರ ಓಲ್ಡಹಾಮ್‌ರವರು ಗೋಲ್ಡ್‌ಕೋಸ್ಟ್‌ನಲ್ಲಿರುವ ಬಾಸೆಲ್ ಮಿಶನ್ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಒಂದು ಹೊಸ ಯೋಜನೆಯೊಂದಿಗೆ ವಸಾಹತು ಕಛೇರಿಯನ್ನು [colonial office] ಸಂಪರ್ಕಿಸುತ್ತಾರೆ. ಅವರ ಹೊಸ ಯೋಜನೆಯಂತೆ ಗೋಲ್ಡ್‌ಕೋಸ್ಟ್‌ನಲ್ಲಿನ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು, ಅದರ ಮೊದಲಿನ ಪರೋಪಕಾರಿ ಉದ್ದೇಶದೊಂದಿಗೆ ಮುನ್ನಡೆಸುವ ಸಲುವಾಗಿ ಕೈಗಾರಿಕೆಗಳನ್ನು 'ಅಸೋಸಿಯೇಟೆಡ್ ನೇಟಿವ್ ಇಂಡಸ್ಟ್ರೀಸ್ ಲಿಮಿಟೆಡ್'ಗೆ [Associated Native Industries Limited] ವರ್ಗಾಯಿಸುವುದಾಗಿತ್ತು. ಈ ಯೋಜನೆಯನ್ನು ಒಪ್ಪಿದ ವಸಾಹತು ಕಛೇರಿಯು, ಗೋಲ್ಡ್‌ಕೋಸ್ಟ್‌ನಲ್ಲಿ ಹೊಸ ಕಂಪನಿಗೆ ಲಭಿಸಿದ ಸಂಪೂರ್ಣ ಲಾಭವನ್ನು ಬೇರೆಡೆ ಬಳಸದೇ ಅಲ್ಲಿನ ಸ್ಥಳೀಯ ಜನರಿಗೆ ಮಾತ್ರ ಬಳಸುವಂತೆ ಸೂಚನೆಯನ್ನು ನೀಡುತ್ತದೆ. ಇಂತಹದೇ ಯೋಜನೆಯನ್ನು ತಯಾರಿಸಿ, ಇಂಡಿಯಾ ಕಛೇರಿಗೆ [India Office] ಸಲ್ಲಿಸಿದಾಗ, ಭಾರತ ಬ್ರಿಟಿಷ್ ಸರಕಾರವನ್ನು ಸಂಪರ್ಕಿಸದೇ ಯಾವುದೇ ನಿರ್ಧಾರ ಸಾಧ್ಯವಾಗದು ಎಂದು ದಿ ಸೆಕ್ರೆಟರಿ ಆಫ್ ಸ್ಟೇಟ್ [The Secretary of State] ತಿಳಿಸುತ್ತಾರೆ.[181]

1919ರಲ್ಲಿ ಭಾರತ ಸರಕಾರವು ಬಾಸೆಲ್ ಮಿಶನ್, ಅದರ ಕೈಗಾರಿಕೆಗಳು ಹಾಗೂ ಇತರ ಮೂರು ವೈರಿ ಮಿಶನ್‌ಗಳನ್ನು ಕೊನೆಗೊಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಅಂತಿಮ ನಿರ್ಧಾರಕ್ಕೆ ಬಂದಿತ್ತು. ಭಾರತ ಸರಕಾರವು ಸಿದ್ಧಪಡಿಸಿದ ಯೋಜನೆಯು ವಿದೇಶಿ ಕಛೇರಿ [Foreign Office], ವಸಾಹತು ಕಛೇರಿ [The Colonial Office] ಹಾಗೂ ಕಾನ್ಫರೆನ್ಸ್ ಆಫ್ ಮಿಶನರಿ ಸೊಸೈಟಿಸ್ ಇನ್ ಗ್ರೇಟ್ ಬ್ರಿಟನ್ ಆಂಡ್ ಐರ್ಲ್ಯಾಂಡ್‌ಗಳಿಂದ ಅನುಮೋದನೆಯನ್ನು ಪಡೆಯುತ್ತದೆ. ಅದರಂತೆ ಬ್ರಿಟಿಷ್ ಸರಕಾರ ಮಿಶನ್‌ನ ಆಸ್ತಿಯನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಳ್ಳುವುದು ಹಾಗೂ ಮಿಶನ್‌ನನ್ನು ಅದರ ಮೂಲ ಉದ್ದೇಶದಂತೆ, ಅದೇ ಮಾದರಿಯಲ್ಲಿ ಮುಂದುವರಿಸಲಾಗುವುದು. ಆದರೆ ಸರಕಾರವು ಮಿಶನನ್ನು ಸ್ವಾಧೀನಪಡಿಸಿಕೊಂಡಿದ್ದಕ್ಕೆ ಯಾವುದೇ ಪರಿಹಾರವನ್ನು ನೀಡಲಾಗುವುದಿಲ್ಲ. ಮಿಶನಿನ ಆಸ್ತಿಯನ್ನು ಟ್ರಸ್ಟಿಗಳಿಗೆ ವರ್ಗಾಯಿಸಿ, ಮಿಶನ್ ಕೆಲಸಕ್ಕೆ ಅದನ್ನು ಉಪಯೋಗಿಸುವುದಕ್ಕೆ ಅನುವು ಮಾಡಿಕೊಡಲಾಗುವುದು. ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಬ್ರಿಟಿಷ್ ಸರಕಾರವು ತನ್ನ ಸ್ವಾಧೀನಕ್ಕೆ ಪಡೆದುಕೊಳ್ಳುವುದು ಹಾಗೂ ಇವುಗಳನ್ನು ಮೊದಲಿನಂತೆ ಮುಂದುವರಿಸಲಾಗುವುದು ಎಂಬ ಭರವಸೆಯನ್ನು ನೀಡಲಾಗುತ್ತದೆ. ಸರಕಾರವು ಬಾಸೆಲ್ ಮಿಶನ್

ಸೊಸೈಟಿಗೆ, ಕೈಗಾರಿಕೆಯ ಷೇರುದಾರರಿಗೆ ಮತ್ತು ಬಾಂಡುದಾರರಿಗೆ [Shareholders and bondholders] ನೀಡಲು ಸಹಾಯವಾಗುವಂತೆ ಅವರು ತೊಡಗಿಸಿದ ಮೂಲಬಂಡವಾಳದ £ 120.000 [Sterling] ನ್ನು ಪರಿಹಾರವಾಗಿ ನೀಡಲಾಗುವುದು. ಈ ಮೊತ್ತವನ್ನು ಗೋಲ್ಡ್‌ಕೋಸ್ಟ್ ಸರಕಾರ ಹಾಗೂ ಭಾರತ ಸರಕಾರಗಳು ಜಂಟಿಯಾಗಿ ಪಾವತಿಸುವವು. ಉಳಿದಂತೆ ಬಾಸೆಲ್ ಮಿಶನ್ ಕೈಗಾರಿಕೆಗಳ ಸಂಪೂರ್ಣ ಸಂಪತ್ತನ್ನು [assets] 'ಬೋರ್ಡ್ ಆಫ್ ಟ್ರಸ್ಟೀಸ್' [Board of Trustees] ಗೆ ವಹಿಸಿ, ಅದು ಪರೋಪಕಾರಿ ಹಾಗೂ ಮಿಶನರಿ ಉದ್ದೇಶಕ್ಕಾಗಿ ರಚಿತವಾಗಿರುವ ಕಂಪನಿಗೆ ಅದನ್ನು ವಹಿಸುವಂತೆ ನೋಡಿಕೊಳ್ಳುವುದು ಎಂಬ ಭರವಸೆಗಳನ್ನು ಬ್ರಿಟಿಷ್ ಸರಕಾರ ಬಾಸೆಲ್ ಮಿಶನಿಗೆ ನೀಡುತ್ತದೆ. ಈ ಮೇಲಿನ ಯೋಜನೆಯಂತೆ 1 ನೇ ಮಾರ್ಚ್ 1919ರಂದು ಭಾರತ ಸರಕಾರ, ಸೆಕ್ರೆಟರಿ ಆಫ್ ಸ್ಟೇಟ್‌ಗೆ ತಾನು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಅದರಂತೆ ಭಾರತ ಸರಕಾರವು 'ಎನಿಮಿ ಟ್ರೇಡಿಂಗ್ ಆಕ್ಟ್ 1916' [Enemy Trading Act, 1916] ರ, 7ನೇ ಸೆಕ್ಷನ್ ಪ್ರಕಾರ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು 'ಕಸ್ಟೋಡಿಯನ್ ಆಫ್ ದಿ ಎನಿಮಿ ಪ್ರಾಪರ್ಟಿ' [Custodian of the Enemy Property] ಗೆ ವರ್ಗಾಯಿಸುತ್ತದೆ. ಮುಂದೆ 'ಕಸ್ಟೋಡಿಯನ್ ಆಫ್ ದಿ ಎನಿಮಿ ಪ್ರಾಪರ್ಟಿ', ಮಿಶನ್ ಆಸ್ತಿಯನ್ನು 'ಬೋರ್ಡ್ ಆಫ್ ಟ್ರಸ್ಟೀಸ್'ಗೆ ವರ್ಗಾಯಿಸಿ, ಟ್ರಸ್ಟ್ ಅದನ್ನು ಪರೋಪಕಾರಿ ಹಾಗೂ ಮಿಶನ್ ಕೆಲಸಗಳಿಗೆ ಬಳಸಿಕೊಳ್ಳುವುದು. ಮುಂದಿನ ದಿನಗಳಲ್ಲಿ ಟ್ರಸ್ಟ್ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು, ಪರೋಪಕಾರಿ ಸ್ವರೂಪವುಳ್ಳ ಒಂದು ಕಂಪನಿಗೆ ವರ್ಗಾಯಿಸುವುದು ಹಾಗೂ ಮಿಶನ್ ಕೆಲಸಕ್ಕೆ ಇದರಿಂದ ಸಹಾಯ ದೊರಕುವಂತೆ ನೋಡಿಕೊಳ್ಳುವುದು ಎಂಬ ಸ್ಪಷ್ಟವಾದ ಯೋಜನೆಯನ್ನು ಭಾರತ ಬ್ರಿಟಿಷ್ ಸರಕಾರ ರೂಪಿಸಿಕೊಳ್ಳುತ್ತದೆ.[182] ಸರಕಾರವು ಸ್ಥಾಪಿಸಲು ಸೂಚಿಸಿರುವ 'ಬೋರ್ಡ್ ಆಫ್ ಟ್ರಸ್ಟೀಸ್'ಗೆ ತನ್ನ ಇಬ್ಬರು ಸದಸ್ಯರುಗಳ ಹೆಸರನ್ನು ಸೂಚಿಸಿರುತ್ತದೆ. ಅವರೆಂದರೆ, ಹೆಚ್.ಆರ್. ಪಾಟೇ [H.R.Pate] ಮತ್ತು ಸಿ.ಇ. ಓಜರ್ಸ್ [C.E.Odgers].

ವರ್ಸೈಲ್ಸ್ ಒಪ್ಪಂದದ 6 ತಿಂಗಳ ನಂತರ ಎಂದರೆ 1919ರ ಮೇ 22ರಂದು 'ಮಿಶನ್ ಟ್ರೇಡಿಂಗ್ ಕಂಪನಿ'ಯನ್ನು, 'ಕಸ್ಟೋಡಿಯನ್ ಆಫ್ ಎನಿಮಿ ಪ್ರಾಪರ್ಟಿ'ಗೆ [custodian of the enemy Property] ವಹಿಸಲಾಗುತ್ತದೆ. ಪುನಃ 1920ರಲ್ಲಿ ಬಾಸೆಲ್ ಮಿಶನ್ ಕೈಗಾರಿಕೆಗಳನ್ನು 'ಕಸ್ಟೋಡಿಯನ್ ಆಫ್ ಎನಿಮಿ ಪ್ರಾಪರ್ಟಿ'ಯ ನಿಯಂತ್ರಣದಿಂದ 'ದಿ ಮಿಶನ್ ಟ್ರಸ್ಟ್ ಆಫ್ ಮೆಡ್ರಾಸ್'ಗೆ ವರ್ಗಾಯಿಸಲಾಗುತ್ತದೆ. ಅದೇ ವರ್ಷ ವೈಸರಾಯ್‌ಯ ಆದೇಶದಂತೆ 'ಮಿಶನ್ ಟ್ರಸ್ಟ್

ಆಫ್ ಮೆಡ್ರಾಸ್' ಬಾಸೆಲ್ ಮಿಶನ್ ಕೈಗಾರಿಕೆಗಳನ್ನು 'ಕಾಮನ್‌ವೆಲ್ತ್ ಟ್ರಸ್ಟ್ ಲಿಮಿಟೆಡ್' [Commonwealth Trust Limited] ಗೆ ವರ್ಗಾಯಿಸುತ್ತದೆ. 'ಕಾಮನ್‌ವೆಲ್ತ್ ಟ್ರಸ್ಟ್ ಲಿಮಿಟೆಡ್', 'ಮಿಶನ್ ಟ್ರೇಡಿಂಗ್ ಕಂಪನಿ'ಯ ವ್ಯವಹಾರವನ್ನು ಮುಂದುವರಿಸುವ ಸಲುವಾಗಿ ಇಂಗ್ಲೆಂಡಿನಲ್ಲಿ ರಚಿತವಾದ ಒಂದು ಕಂಪನಿಯಾಗಿದೆ. ಮಿಶನ್ ಟ್ರಸ್ಟ್, ಮಂಗಳೂರಿನಲ್ಲಿದ್ದ ಬಾಸೆಲ್ ಮಿಶನ್ ಪ್ರಿಂಟಿಂಗ್ ಪ್ರೆಸ್ ಹಾಗೂ ಟ್ರ್ಯಾಕ್ಟ್ ಡಿಪೋಜಿಟರಿಗಳನ್ನು [Basel Mission Printing Press and Tract Depositary] ಕೆನರೀಸ್ ಇವ್ಯಾಂಜಲಿಕಲ್ ಮಿಶನ್‌ಗೆ ವರ್ಗಾಯಿಸುತ್ತದೆ. 1920ರಿಂದ ಬಾಸೆಲ್ ಮಿಶನಿನ ಎಲ್ಲಾ ಕೈಗಾರಿಕೆಗಳನ್ನು ಕಾಮನ್‌ವೆಲ್ತ್ ಟ್ರಸ್ಟ್ ಲಿಮಿಟೆಡ್ ಮುಂದುವರಿಸಿಕೊಂಡು ಬರುತ್ತಿದೆ. ಇದರಿಂದ ಬಂದ ಲಾಭಾಂಶದಿಂದ [ಆದಾಯ ತೆರಿಗೆಯ ವ್ಯಾಪ್ತಿಗೆ ಸೇರಿಸದೇ] ಶೇಕಡಾ 5ನ್ನು ತನ್ನ ಷೇರುದಾರರಿಗೆ ನೀಡಿ, ಉಳಿದ ಮೊತ್ತವನ್ನು ಮುಖ್ಯವಾಗಿ ಬಾಸೆಲ್ ಮಿಶನ್ ಕಾರ್ಯನಿರ್ವಹಿಸುತ್ತಿದ್ದ ಪ್ರದೇಶದಲ್ಲಿ ಶೈಕ್ಷಣಿಕ, ಧಾರ್ಮಿಕ ಹಾಗೂ ಪರೋಪಕಾರಿ ಕೆಲಸಗಳಿಗೆ ಬಳಸಿಕೊಳ್ಳುತ್ತದೆ. ಇದರ ಅರ್ಧದಷ್ಟು ಟ್ರಸ್ಟಿಗಳನ್ನು 'ಕಾನ್ಫರೆನ್ಸ್ ಆಫ್ ಬ್ರಿಟಿಷ್ ಮಿಶನರಿ ಸೊಸೈಟಿ'ಗಳು [Conference of British Missionary Societies] ಆಯ್ಕೆ ಮಾಡುತ್ತಿದ್ದವು. ಎಲ್ಲಾ ಟ್ರಸ್ಟಿಗಳನ್ನು 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ'ದ [The Secretary of State for India] ಅನುಮೋದನೆ ಪಡೆದು ಔಪಚಾರಿಕಗೊಳಿಸಬೇಕಿತ್ತು. ಒಂದು ವೇಳೆ ಕಾಮನ್‌ವೆಲ್ತ್ ಟ್ರಸ್ಟ್ ಲಿಮಿಟೆಡ್, ಕೈಗಾರಿಕೆಗಳನ್ನು ಸರಕಾರದ ನಿಬಂಧನೆಗಳ ಪ್ರಕಾರ ನಡೆಸುವಲ್ಲಿ ವಿಫಲವಾದರೆ ಸರಕಾರ ಅವುಗಳನ್ನು ವಾಪಸ್ಸು ಪಡೆದು 'ಮಿಶನ್ ಟ್ರಸ್ಟ್ ಆಫ್ ಸದರ್ನ್ ಇಂಡಿಯಾ, ಮೆಡ್ರಾಸ್' [Mission Trust of Southern India, Madras] ಇದಕ್ಕೆ ವಹಿಸಬಹುದಿತ್ತು.[183]

ಬ್ರಿಟಿಷ್ ಸರಕಾರವು ಪ್ರಬಲವಾಗಿ ಜರ್ಮನ್ ಅಸ್ತಿತ್ವಗಳು ಬಾಸೆಲ್ ಮಿಶನ್ ಕೈಗಾರಿಕೆಗಳಲ್ಲಿ ಇದ್ದುದರಿಂದ ಅವುಗಳನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸಿ, ನಂತರದಲ್ಲಿ ಅದನ್ನು ಕಾಮನ್‌ವೆಲ್ತ್ ಟ್ರಸ್ಟ್‌ಗೆ ವಹಿಸಿ ಮುಂದುವರಿಸುತ್ತದೆ. ಈ ರೀತಿ ಬ್ರಿಟಿಷ್ ಸರಕಾರ, ಬ್ರಿಟಿಷ್ ಭಾರತದಿಂದ ವೈರಿ ದೇಶಿಯರ ಅಸ್ತಿತ್ವ ಹಾಗೂ ಕಾರ್ಖಾನೆಗಳನ್ನು ಮುಟ್ಟುಗೋಲು ಹಾಕಿ ತನ್ನ ಭದ್ರತೆಯತ್ತ ಗಮನ ಹರಿಸುತ್ತದೆ. ಆದರೆ ಬ್ರಿಟನ್‌ನ ಕೆಲವು ಪ್ರಮುಖ ಮಿಶನ್‌ಗಳು ಹಾಗೂ ಓಲ್ಡ್‌ಹಾಮ್‌ನಂತಹ ವ್ಯಕ್ತಿಗಳಿಂದಾಗಿ ಬಾಸೆಲ್ ಮಿಶನ್ ಕೈಗಾರಿಕೆಗಳು ಅದು ಸ್ಥಾಪಿಸಲ್ಪಟ್ಟ ಉದ್ದೇಶದಲ್ಲಿಯೇ ಮುಂದುವರಿಸುವಂತೆ ಮಾಡಿದ ಪ್ರಯತ್ನಗಳು ಸಫಲವಾಗುತ್ತವೆ. ನಂತರದಲ್ಲಿ ಈ ಕೈಗಾರಿಕೆಗಳನ್ನು ಬ್ರಿಟಿಷ್ ಯೋಜನೆಯಂತೆ, ಬ್ರಿಟಿಷ್ ವ್ಯಕ್ತಿಗಳ ಉಸ್ತುವಾರಿಯಲ್ಲಿ ಹಾಗೂ ನಿಯಂತ್ರಣದಲ್ಲಿ ಮುಂದುವರಿಸುತ್ತದೆ. ಈ ವಿಚಾರಗಳು ಬ್ರಿಟಿಷ್ ಸರಕಾರದ ಕಡೆಯಿಂದ, ಪ್ರಮುಖ

ಬ್ರಿಟಿಷ್ ಮಿಶನರಿ ಸಂಸ್ಥೆಗಳಿಂದ ಹಾಗೂ ವ್ಯಕ್ತಿಗಳಿಂದ ನಡೆಯುತ್ತವೆ. ಮತ್ತೊಂದೆಡೆ ಬಾಸೆಲ್ ಮಿಶನರಿ ಸಂಘಟನೆ ಹಾಗೂ ವ್ಯಾಪಾರಿ ಸಂಘದ ನಡುವೆ ಜಾಗತಿಕ ಯುದ್ಧದ ಸಂದರ್ಭದಲ್ಲಿ ಬಿರುಕು ಮೂಡುತ್ತದೆ. ವ್ಯಾಪಾರಿ ಸಂಘವು ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ನಡೆಸುತ್ತದೆ. ಅದಕ್ಕಾಗಿ ಬಹು ದೀರ್ಘಕಾಲ ಹೋರಾಟವನ್ನು ಮಾಡುತ್ತದೆ.

ಬ್ರಿಟಿಷರನ್ನು ಓಲೈಸಿ ಶಾಂತಗೊಳಿಸುವ ಪ್ರಯತ್ನದಲ್ಲಿದ್ದ ಬಾಸೆಲ್ ಮಿಶನ್ 1917ರಲ್ಲಿಯೇ, ಅದು ವ್ಯಾಪಾರಿ ಕಂಪನಿಯಲ್ಲಿ ತೊಡಗಿಸಿದ್ದ ಎಲ್ಲಾ ಷೇರುಗಳನ್ನು ವಾಪಾಸ್ಸು ಮಾಡುತ್ತದೆ. ಅಷ್ಟು ಮಾತ್ರವಲ್ಲದೇ ಬಾಸೆಲ್ ಮಿಶನ್ ವ್ಯಾಪಾರಿ ಕಂಪನಿಯ ಮುಖ್ಯಸ್ಥರಾಗಿದ್ದ ವಿಲ್‌ಹೆಲ್ಮ್ ಪ್ರೈಸ್‌ರ್ವೇಕ್ ಇಮ್‌ಹುಫ್ [Wilhelm Preiswerk – Imhoff] ರವರು ಬಾಸೆಲ್ ಮಿಶನ್ ಸೊಸೈಟಿಯಲ್ಲಿ ಅವರು ಹೊಂದಿದ್ದ ಸದಸ್ಯತನವನ್ನು ತ್ಯಜಿಸುತ್ತಾರೆ. ಮುಂದುವರಿದು 1928ರಲ್ಲಿ ಮಿಶನ್ ಸೊಸೈಟಿಯ ವಿನಂತಿಯಂತೆ, ವ್ಯಾಪಾರಿ ಕಂಪನಿಯಲ್ಲಿನ 'ಮಿಶನ್' ಎಂಬ ಶಬ್ದವನ್ನು ತೆಗೆಯಲಾಗುತ್ತದೆ. ಮುಂದೆ ಅದು 'ಬಾಸೆಲ್ ಟ್ರೇಡಿಂಗ್ ಕಂಪನಿ ಲಿಮಿಟೆಡ್' ಎಂದು ಕರೆದುಕೊಳ್ಳುತ್ತದೆ. ಹೀಗೆ ಬಾಸೆಲ್ ಮಿಶನರಿ ಸೊಸೈಟಿಯು, ಅದರ ವ್ಯಾಪಾರಿ ಕಂಪನಿಯೊಂದಿಗಿನ ಸಂಪೂರ್ಣ ಸಂಬಂಧವನ್ನು ಯುದ್ಧದ ಕಾಲದಲ್ಲಿಯೇ ಕಳೆದುಕೊಳ್ಳುತ್ತದೆ. ಬಾಸೆಲ್ ಮಿಶನ್ ವ್ಯಾಪಾರಿ ಕಂಪನಿಯು ಯುದ್ಧದ ಆರಂಭದಲ್ಲಿ ಅದು ಕ್ಯಾಮರೋನ್‌ನಲ್ಲಿ ಹೊಂದಿದ್ದ ಆಸ್ತಿಗಳನ್ನು ಕಳಕೊಂಡರೆ, ಯುದ್ಧದ ಕೊನೆಯ ಕಾಲಾವಧಿಯಲ್ಲಿ ಗೋಲ್ಡ್‌ಕೋಸ್ಟ್‌ನ ಆಸ್ತಿಗಳನ್ನು ಹಾಗೂ ವರ್ಸೈಲ್ಸ್ ಒಪ್ಪಂದವಾಗಿ ಆರು ತಿಂಗಳ ಬಳಿಕ ಭಾರತದಲ್ಲಿನ ತನ್ನ ಎಲ್ಲಾ ಆಸ್ತಿ ಮತ್ತು ಕಾರ್ಖಾನೆಗಳನ್ನು ಕಳೆದುಕೊಳ್ಳುತ್ತದೆ. ಯುದ್ಧದ ಆರಂಭದ ಕಾಲಾವಧಿಯಲ್ಲಿ ಕಂಪನಿಯಲ್ಲಿ ಹಲವು ಜರ್ಮನರು ಉದ್ಯೋಗದಲ್ಲಿದುದು ಮಾತ್ರವಲ್ಲದೇ, ಜರ್ಮನರ ಷೇರುಗಳು ಇದ್ದವು. ಅದೇ ರೀತಿ ಬ್ರಿಟಿಷ್ ಸರಕಾರಕ್ಕೆ ಬಾಸೆಲ್ ಮಿಶನ್ ಬಗೆಗಿದ್ದ ದ್ವಂದ್ವವು ಬಾಸೆಲ್ ಮಿಶನ್ ಅದರ ಸಂಪತ್ತನ್ನು ಕಳಕೊಳ್ಳಲು ಕಾರಣವಾಗುತ್ತದೆ. ಬಾಸೆಲ್ ಟ್ರೇಡಿಂಗ್ ಕಂಪನಿಯು 1923ರಲ್ಲಿ, ಅದು ಕ್ಯಾಮರೋನ್‌ನಲ್ಲಿ ಹೊಂದಿದ್ದ ಕೆಲವು ಆಸ್ತಿಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ.[184] ಆದರೆ ಗೋಲ್ಡ್‌ಕೋಸ್ಟ್ ಹಾಗೂ ಭಾರತದಲ್ಲಿನ ಆಸ್ತಿಗಳನ್ನು ವಾಪಸ್ಸು ಪಡೆಯಲು ಅದು ಬಹು ದೀರ್ಘಕಾಲ ಹೋರಾಡಬೇಕಾಗುತ್ತದೆ. ನೈಜವಾಗಿ ಸ್ವಿಸ್ ಮೂಲದ ಮಿಶನರಿ ಸಂಘವಾದ ಬಾಸೆಲ್ ಮಿಶನ್, ನೈಜವಾಗಿ ಜರ್ಮನ್ ಮೂಲದ ಮಿಶನ್ ಸಂಘಗಳಿಗಿಂತ ಹೆಚ್ಚು ಶ್ರಮ ವಹಿಸಿ, ತನ್ನ ಆಸ್ತಿಗಳನ್ನು ಪುನಃ ಪಡೆದುಕೊಳ್ಳಬೇಕಾಗುತ್ತದೆ. ಬಾಸೆಲ್ ಮಿಶನ್ ಆಸ್ತಿಗಳು ಮಾರಾಟವಾಗುವುದನ್ನು ತಡೆಯಲು ಬ್ರಿಟಿಷ್ ಮಿಶನರಿ ನಾಯಕರು ಮಾಡಿದ ವ್ಯವಸ್ಥೆಗಳು ಬಾಸೆಲ್ ಮಿಶನ್ ತನ್ನ ಆಸ್ತಿಗಳನ್ನು ಮರಳಿ ಪಡೆಯಲು ಕಷ್ಟಕರವಾಗುವಂತೆ ಮಾಡಿತು. ಜೆ. ಹೆಚ್. ಓಲ್ಡಾಹಾಮ್‌ರವರ

ಪ್ರಯತ್ನದಿಂದಾಗಿ ವರ್ಸೈಲ್ಸ್ ಒಪ್ಪಂದದಲ್ಲಿ 438ನೇ ವಿಧಿಯನ್ನು ಸೇರಿಸಲಾಗುತ್ತದೆ. ಇದರಿಂದಾಗಿ ಜರ್ಮನ್ ಮಿಶನ್‌ಗಳ ಆಸ್ತಿಗಳನ್ನು ಮಿಶನ್ ಉದ್ದೇಶಕ್ಕಾಗಿಯೇ ಬಳಸುವಂತೆ ನಿಯಮ ರೂಪಿಸಲು ಸಾಧ್ಯವಾಗುತ್ತದೆ. ಇದರಂತೆಯೇ ನಂತರದಲ್ಲಿ ಮಿಶನ್‌ನ ಆಸ್ತಿಯ ಮೇಲ್ವಿಚಾರಣೆಗಾಗಿ 'ಬೋರ್ಡ್ ಆಫ್ ಟ್ರಸ್ಟೀಸ್'ಗಳನ್ನು ನೇಮಿಸಲಾಗುತ್ತದೆ. ಈ ಟ್ರಸ್ಟಿ ವ್ಯವಸ್ಥೆಯನ್ನು ಓಲ್ಡ್‌ಹಾಮ್‌ರವರೇ ಸೂಚಿಸುತ್ತಾರೆ. ಆದರೆ ವರ್ಸೈಲ್ಸ್ ಒಪ್ಪಂದದ ಮೊದಲೇ ಎಂದರೆ ಜನವರಿ 31, 1918ರಲ್ಲಿ ಗೋಲ್ಡ್‌ಕೋಸ್ಟ್‌ನ ಆಸ್ತಿಯನ್ನು ಬ್ರಿಟಿಷರು ಮುಟ್ಟುಗೋಲು ಹಾಕುತ್ತಾರೆ.[185]

ಬಾಸೆಲ್ ಮಿಶನ್ ವ್ಯಾಪಾರಿ ಕಂಪನಿಯ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡದ್ದನ್ನು ಪ್ರಬಲವಾಗಿ ವಿರೋಧಿಸಿದ ಕಂಪನಿಯ ಮುಖ್ಯಸ್ಥರಾಗಿದ್ದ, ವಿಲ್‌ಹೆಲ್ಮ್ ಪ್ರೈಸ್‌ವರ್ಕ್ ಇಮ್‌ಹುಫ್ [Wilhelm Preiswrk- Imhoff] ಆತನ ಹಿರಿಯ ಮಗನೊಂದಿಗೆ 1919ರ ಮಾರ್ಚ್‌ನಲ್ಲಿ ಇಂಗ್ಲೆಂಡಿಗೆ ತೆರಳುತ್ತಾರೆ. ಆದರೆ ಅಲ್ಲಿ ಅವರು ಕಾಮನ್‌ವೆಲ್ತ್ ಟ್ರಸ್ಟ್ ಹಾಗೂ ಇತರ ಬ್ರಿಟಿಷ್ ಮಿಶನರಿಗಳ ಮನವೊಲಿಸಲು ವಿಫಲವಾದಾಗ, ಅವರು ಪ್ರಬಲ ರಾಜಕೀಯ ವ್ಯಕ್ತಿಗಳತ್ತ ಮುಖ ಮಾಡುತ್ತಾರೆ. ಇವರು ಬ್ರಿಟನಿನ 'ಹೌಸ್ ಆಫ್ ಲಾರ್ಡ್ಸ್'ನ ಸದಸ್ಯರಾಗಿದ್ದ ವಿಸ್ಕೌಂಟ್ ಟೆಂಪಲ್ಟನ್ [Viscount Templetown (1853-1939)] ರ ಸಹಾಯವನ್ನು ಪಡೆಯುತ್ತಾರೆ. ಟೆಂಪಲ್ಟನ್‌ರವರು ಈ ವಿಚಾರವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಬಲ ಹೋರಾಟವನ್ನು ಮಾಡುತ್ತಾರೆ.[186] ಈ ಹೋರಾಟದ ಫಲವಾಗಿ ಬಾಸೆಲ್ ಟ್ರೇಡಿಂಗ್ ಕಂಪನಿಯು ಗೋಲ್ಡ್‌ಕೋಸ್ಟ್‌ನಲ್ಲಿನ ತನ್ನ ಆಸ್ತಿಯನ್ನು 1928ರ ಕೊನೆಯ ಕಾಲದಲ್ಲಿ ಪಡೆಯುತ್ತದೆ. 1952ರಲ್ಲಿ ತನ್ನ ಆಸ್ತಿಗಳನ್ನು ಕಳೆದುಕೊಂಡ 33 ವರ್ಷಗಳ ತರುವಾಯ ಬಾಸೆಲ್ ಟ್ರೇಡಿಂಗ್ ಕಂಪನಿ, ಹೌಸ್ ಆಫ್ ಕಾಮನ್ಸ್‌ನ [House of Commons] ಒಪ್ಪಿಗೆಯೊಂದಿಗೆ, ತನ್ನ ಭಾರತದಲ್ಲಿನ ಸಂಪತ್ತಿಗೆ £ 125,000 ಹಾಗೂ ನ್ಯಾಯಿಕ ಹೋರಾಟ ವೆಚ್ಚ £ 1050ನ್ನು ಸ್ವೀಕರಿಸಲು ಒಪ್ಪಿಕೊಳ್ಳುತ್ತದೆ. 1920ರಲ್ಲಿ ಕಂಪನಿಯ ಆಸ್ತಿಯ ಮೌಲ್ಯವನ್ನು £ 379,380 ಎಂಬುದಾಗಿ ನಿರ್ಧರಿಸಲಾಗಿತ್ತು. ಭಾರತ ಮತ್ತು ಗೋಲ್ಡ್‌ಕೋಸ್ಟ್‌ಗಳಲ್ಲಿ ಕಂಪನಿಯ ಆಸ್ತಿಯನ್ನು ಮುಟ್ಟುಗೋಲು ಹಾಕಿ ಕಾಮನ್‌ವೆಲ್ತ್‌ಗೆ ನೀಡಿದ್ದು, ತನ್ನ ತಪ್ಪೆಂದು ಬ್ರಿಟಿಷ್ ಸರಕಾರ ನಂತರದಲ್ಲಿ ಒಪ್ಪಿಕೊಳ್ಳುತ್ತದೆ. ಅದೇ ರೀತಿ ಓಲ್ಡ್‌ಹಾಮ್‌ರವರಿಗೆ ಬಹಳಷ್ಟು ತಡವಾಗಿ ಈ ತಪ್ಪಿನ ಬಗ್ಗೆ ಅರಿವಾಗಿತ್ತು.[187] ಬಾಸೆಲ್ ಮಿಶನ್ ಸೊಸೈಟಿಯ ಸ್ವಿಸ್ ಮತ್ತು ಜರ್ಮನ್ ನಾಯಕರು, ಬೆಂಬಲಿಗರು ಯುದ್ಧದ ಕಾಲಾವಧಿಯಲ್ಲಿ ನಿರಂತರವಾದ ಸಂಪರ್ಕವನ್ನು ಹೊಂದಿದ್ದರು. ಇದರಿಂದಾಗಿ ಬಾಸೆಲ್ ಮಿಶನ್ ಭಾರತ ಮತ್ತು ಆಫ್ರಿಕಾದಲ್ಲಿ ತನ್ನ ಮಿಶನ್ ಠಾಣ್ಯಗಳನ್ನು ಹಾಗೂ ಆಸ್ತಿಯನ್ನು ಕಳೆದುಕೊಳ್ಳಬೇಕಾಗಿ ಬರುತ್ತದೆ. ಇದು ವ್ಯಾಪಾರಿ ಕಂಪನಿಯು

ಅದರ ಆಸ್ತಿಗಳನ್ನು ಕಳೆದುಕೊಳ್ಳುವಂತೆಯೂ ಮಾಡುತ್ತದೆ. ಮಿಶನ್ ಸೊಸೈಟಿಯಲ್ಲಿ ಸ್ವಿಸ್ ಮತ್ತು ಜರ್ಮನ್ ಐಕ್ಯತೆಯನ್ನು ಮುಂದುವರಿಸಿದ್ದು, ವ್ಯಾಪಾರಿ ಕಂಪನಿಯು ಮಿಶನ್‌ನಿಂದ ದೂರವಾಗುವಂತೆ ಮಾಡುತ್ತದೆ. ಮಿಶನ್ ಸೊಸೈಟಿಗೆ ಬಹುಪಾಲು ಮಿಶನರಿಗಳು ಹಾಗೂ ಹಣಕಾಸು ಸಹಾಯ ಜರ್ಮನ್ ಮೂಲದಿಂದ ಬರುತ್ತಿದ್ದುದರಿಂದ ಬಾಸೆಲ್ ಮಿಶನ್, ವ್ಯಾಪಾರಿ ಕಂಪನಿಗಿಂತ ಹೆಚ್ಚು ಒಲವನ್ನು ಜರ್ಮನರತ್ತ ಹರಿಸುತ್ತದೆ. ಜಾಗತಿಕ ಯುದ್ಧದ ಸಂದರ್ಭದಲ್ಲಿ ಮಿಶನ್ ಜರ್ಮನ್‌ರೊಂದಿಗೆ ಇಟ್ಟುಕೊಂಡಿದ್ದ ನಿಕಟ ಸಂಪರ್ಕ, ಮಿಶನ್ ಹಾಗೂ ವ್ಯಾಪಾರಿ ಕಂಪನಿ ಎರಡರ ಆಸ್ತಿಗಳನ್ನು ಮುಟ್ಟುಗೋಲು ಹಾಕುವಂತೆ ಮಾಡುತ್ತದೆ. 1921ರಲ್ಲಿಯೇ ತನ್ನ ಹೊಸ ಆರಂಭವನ್ನು ಕಂಡುಕೊಳ್ಳಲು ಮುಂದಾಗಿದ್ದ ಬಾಸೆಲ್ ಟ್ರೇಡಿಂಗ್ ಕಂಪನಿಯು, 'ಯೂನಿಯನ್ ಟ್ರೇಡಿಂಗ್ ಕಂಪನಿ' [Union Trading Company] ಎಂಬ ಹೊಸ ಕಂಪನಿಯನ್ನು ಆರಂಭಿಸಿರುತ್ತದೆ. ಇಂದು ಬಾಸೆಲ್ ಟ್ರೇಡಿಂಗ್ ಕಂಪನಿಯು, ಆಫ್ರಿಕಾದ ಪಶ್ಚಿಮ ಕರಾವಳಿಯಲ್ಲಿ ಮೊದಲಿಗಿಂತಲೂ ಹೆಚ್ಚಾಗಿ, 'ದಿ ಯೂನಿಯನ್ ಟ್ರೇಡಿಂಗ್ ಕಂಪನಿ ಲಿಮಿಟೆಡ್'ನ ಮೂಲಕ ಕಾರ್ಯ ನಿರ್ವಹಿಸುತ್ತಿದೆ.[188] ಆದರೆ ಭಾರತದಲ್ಲಿ ಬಾಸೆಲ್ ಟ್ರೇಡಿಂಗ್ ಕಂಪನಿ ತನ್ನ ಎಲ್ಲಾ ಕೈಗಾರಿಕೆಗಳನ್ನು ಕಳಕೊಳ್ಳುತ್ತದೆ. ಹೀಗೆ ಜಾಗತಿಕ ಯುದ್ಧ ಆರಂಭವಾಗುವುದರೊಂದಿಗೆ ಬಾಸೆಲ್ ಮಿಶನ್ ಭಾರತದಲ್ಲಿದ್ದ ತನ್ನ ಭವ್ಯವಾದ ಇತಿಹಾಸವನ್ನು ಕಳಕೊಳ್ಳುತ್ತದೆ. 20ನೇ ಶತಮಾನದಲ್ಲಿ ಜಾಗತಿಕ ಯುದ್ಧ ತಂದಿಟ್ಟ ಬಿಕ್ಕಟ್ಟಿನಿಂದಾಗಿ ಮಿಶನ್ ಸಮಸ್ಯೆಗೆ ಗುರಿಯಾಗುವುದು ಮಾತ್ರವಲ್ಲದೇ, ಕೈಗಾರಿಕೆಗಳು ಬಿಕ್ಕಟ್ಟನ್ನು ಎದುರಿಸಿ, ಬ್ರಿಟಿಷ್ ವಶವಾಗುತ್ತವೆ. ಅದರೊಂದಿಗೆ ಮಿಶನ್ ಸೊಸೈಟಿ ಹಾಗೂ ವ್ಯಾಪಾರಿ ಕಂಪನಿಯ ಸಂಬಂಧ ಕೆಟ್ಟು ಹೋಗುತ್ತದೆ. ಹೀಗಿದ್ದರೂ ಭಾರತದಲ್ಲಿ ಮಿಶನ್ ಹಾಗೂ ಕೈಗಾರಿಕೆಗಳು ನಿರ್ವಹಿಸಿರುವ ಕಾರ್ಯಗಳು ಉಲ್ಲೇಖಾರ್ಹವಾಗಿವೆ.

ದೇಶಿಯ ಮಿಶನ್ ಹಾಗೂ ಮಡಗಾಸ್ಕರ್ ಮಿಶನ್:

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾದ ವಿಚಾರವೆಂದರೆ ಒಂದು ದೇಶಿಯ ಮಿಶನಿನ ಆರಂಭ. 1922ರ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಜಿಲ್ಲಾ ಸಿನೋಡ್‌ನಲ್ಲಿ ಇದು ಚರ್ಚೆಯಾಗುತ್ತದೆ. ಇದರಂತೆ ದೇಶಿಯ ಕ್ರೈಸ್ತರು ತಮ್ಮ ಸ್ವಂತ ಖರ್ಚಿನಿಂದಲೇ ಒಬ್ಬ ಸುವಾರ್ತಿಕನನ್ನು ಇರಿಸಿ, ಒಂದು ಮಿಶನನ್ನು ಸ್ಥಾಪಿಸುವುದು ಇವರ ಉದ್ದೇಶವಾಗಿತ್ತು. ಮೊದಲು ಇದನ್ನು ಪಣಂಬೂರಿನಲ್ಲಿ ಆರಂಭಿಸುವ ಯೋಜನೆ ಇರುತ್ತದೆ. ಆದರೆ ಅದು ಮಂಗಳೂರು ಮತ್ತು ಮುಲ್ಕಿಯ ನಡುವಿನ ಪ್ರದೇಶವಾದುದರಿಂದ ಅದು ಹೊಸ ದೇಶಿಯ ಮಿಶನ್ ಆರಂಭಿಸುವುದಕ್ಕೆ ಸೂಕ್ತವಾದ ಸ್ಥಳವಲ್ಲ ಎಂಬ ನಿರ್ಣಯವಾಗಿ, ಈ ದೇಶಿಯ ಮಿಶನನ್ನು ಬೆಳ್ತಂಗಡಿ ಪ್ರದೇಶದಲ್ಲಿ ಆರಂಭಿಸಬೇಕೆಂಬ ನಿರ್ಣಯವಾಗುತ್ತದೆ. ಇದಕ್ಕೆ ಬೇಕಾದ ಸೂಕ್ತ

ವ್ಯವಸ್ಥೆಯನ್ನು ಬಹುಬೇಗನೆ ಆರಂಭಿಸಬೇಕೆಂಬ ವಿಚಾರವು ನಿರ್ಣಯವಾಗುತ್ತದೆ. ಇಲ್ಲಿ ದೇಶಿಯ ಮಿಶನ್ ಆರಂಭಿಸಿದರೆ, ಗಟ್ಟಕ್ಕೆ ಕಾಫಿ ತೋಟದ ಕೆಲಸಗಳಿಗೆ ತೆರಳಿರುವವರಿಗೂ, ಬಡ ಪಂಚಮರಿಗೂ ಇದರ ಪ್ರಯೋಜನ ಲಭ್ಯವಾಗಬಹುದು ಎಂಬುದು ಯೋಜನೆಯ ಆಶಯವಾಗಿತ್ತು.[189]

ಹೀಗೆ ದೇಶಿಯ ಮಿಶನಿನ ವಿಚಾರ ಚರ್ಚೆಯಾಗಿ ಬೆಳ್ತಂಗಡಿಯಲ್ಲಿ ಆರಂಭಿಸುವ ನಿರ್ಣಯವಾದ ಕಾಲಾವಧಿಯಲ್ಲೆ ಇನ್ನೊಂದು ವಿಚಾರ ಬಾಸೆಲ್ ಮಿಶನ್ ಕ್ರೈಸ್ತರನ್ನು ಬಹಳಷ್ಟು ಚರ್ಚೆಗೆ ಇಳಿಸುತ್ತದೆ. ಅದೇ ಮಡಗಾಸ್ಕರ್‌ನಲ್ಲಿ ದೇಶಿಯ ಮಿಶನ್ ಆರಂಭಿಸುವಂತೆ ಬಂದಿದ್ದ ಸಲಹೆ. ಈ ಸಲಹೆಯನ್ನು ಕೊಟ್ಟವರು ಮಡಗಾಸ್ಕರದಲ್ಲಿ ಮಿಶನರಿಯಾಗಿದ್ದ ಎಚ್. ರುಸಿಲ್ಲನ್ ಎಂಬವರು. ಇವರು ಬುರ್ಖಾರ್ಟ್‌ರವರಿಗೆ ಪತ್ರ ಬರೆದು ಇದರ ಬಗ್ಗೆ ತಿಳಿಸುತ್ತಾರೆ ಹಾಗೂ ಬುರ್ಖಾರ್ಟ್‌ರವರು ಇದನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಾರೆ. 1920ರಲ್ಲಿ ಎಚ್. ರುಸಿಲ್ಲನ್‌ರವರು ತಮ್ಮ ದೇಶದಲ್ಲಿದ್ದಾಗ, ಮಲಬಾರ್‌ನಲ್ಲಿ ನಡೆಯುತ್ತಿದ್ದ ಮಿಶನ್ ಕೆಲಸದ ಬಗ್ಗೆ ಒಂದು ಭಾಷಣವನ್ನು ಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ಅವರು ಬಾಸೆಲ್ ಮಿಶನ್ ಹಂಚಿನ ಕಾರ್ಖಾನೆಯ ಕೆಲಸವನ್ನು ವರ್ಣಿಸಿದ್ದರು. ಈ ಸಂದರ್ಭದಲ್ಲಿ ಇವರ ಭಾಷಣ ಮುಗಿದ ಕೂಡಲೇ ಮಡಗಾಸ್ಕರಿನ ಮತ್ತೊಬ್ಬ ಮಿಶನರಿಯು ಎದ್ದು ನಿಂತು ಈ ರೀತಿ ಹೇಳುತ್ತಾರೆ 'ನನಗೂ ಕೂಡಾ ಬಾಸೆಲ್ ಮಿಶನ್ ಹಂಚುಗಳ ಬಗ್ಗೆ ತಿಳಿದಿದೆ. ಏಕೆಂದರೆ ಮಡಗಾಸ್ಕರಿನ ಅನೇಕ ಮನೆಗಳ ಮಾಡುಗಳಿಗೆ ಅವು ಹೊದಿಸಲ್ಪಟ್ಟಿವೆ. ಆ ಹಂಚುಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ. ಯಾಕೆಂದರೆ ಅವು ಉತ್ತಮವಾಗಿದ್ದು, ಮಡಗಾಸ್ಕರಿನಲ್ಲಿ ಅಂತಹ ಹಂಚುಗಳನ್ನು ಮಾಡಲಿಕ್ಕಾಗುವುದಿಲ್ಲ. ಅದೇ ರೀತಿ ಮಡಗಾಸ್ಕರಕ್ಕೆ ಇಂಡಿಯಾದಿಂದ ಬಂದು ಅಲ್ಲಿ ಪ್ರವಾಸಿಗಳಾಗಿ ನೆಲೆಸಿಕೊಂಡಿರುವ ಭಾರತೀಯರೊಳಗೆ ಕೆಲಸ ಮಾಡುವ ಕೆಲವು ಇವಾಂಜೆಲಿಸ್ಟರು ಬೇಕು. ಮಡಗಾಸ್ಕರದ ಸಭೆಗಳಿಗೆ ಅವರೊಳಗೆ ಕೆಲಸ ಮಾಡುವುದು ಸಾಧ್ಯವಿಲ್ಲ' ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ. ಈ ವಿಚಾರವನ್ನು 1923ರಲ್ಲಿ ಬುರ್ಖಾರ್ಟ್‌ರವರು ಜಿಲ್ಲೆಯ ಸರ್ವಹಿರಿಯರ ಕೂಟದ ಮುಂದಿಟ್ಟಾಗ, ಇದರ ಬಗ್ಗೆ ಹೆಚ್ಚಿನ ವಿವರಣೆಯನ್ನು ಕೇಳಿ ತಿಳಿದುಕೊಳ್ಳಬೇಕೆಂದು ನಿರ್ಣಯವಾಗುತ್ತದೆ. ತದನಂತರ ಬುರ್ಖಾರ್ಟ್‌ರಿಗೆ, ಎಚ್. ರುಸಿಲ್ಲನ್‌ರವರು ಪತ್ರದ ಮೂಲಕ ಈ ಕೆಳಗಿನ ಮಾಹಿತಿಯನ್ನು ರವಾನಿಸುತ್ತಾರೆ.[190]

ಭಾರತದ ಪ್ರವಾಸಿಗಳು ಮುಖ್ಯವಾಗಿ ದ್ವೀಪದ ಪಶ್ಚಿಮ ಮತ್ತು ವಾಯುವ್ಯ ಭಾಗದಲ್ಲಿ ಇದ್ದಾರೆ. ಮುಂಬಾಯಿಯಿಂದ ಮಡಗಾಸ್ಕರಕ್ಕೆ ಬರಲಿಕ್ಕೆ 2-3 ವಾರಗಳ ಸಮುದ್ರ ಪ್ರಯಾಣ. ಇಂಡಿಯಾದಿಂದ ಬಂದವರಲ್ಲಿ ಮುಖ್ಯವಾಗಿ ಗುಜರಾತಿಗಳು ಹಾಗೂ ಕೆಲವು ಮರಾಠಿಗಳು ಇದ್ದಾರೆ.

ಅವರು ಗುಜರಾತಿ ಭಾಷೆಯಲ್ಲಿ ಮಾತನಾಡುತ್ತಿದ್ದು, ಅವರಿಗೆ ಅವರದೇ ದೇವಾಲಯಗಳಿವೆ. ಅವರಿಗೆ ಬೈಬಲನ್ನು ಕೊಟ್ಟಿದ್ದಾರೆಂದೂ, ಕೆಲವರು ಗುಜರಾತಿ ಬೈಬಲನ್ನು ಕೇಳುತ್ತಿದ್ದಾರೆಂದು ರುಸಿಲ್ಲನ್ ತಿಳಿಸುತ್ತಾರೆ. ಮರೊವೋಯೆ, ಮಜುಂಗ, ಮರುದವ ಎಂಬ ಪಟ್ಟಣಗಳಲ್ಲಿ ಸುಮಾರು 5000 ಮಂದಿ ಇದ್ದು, ಅವರು ಮುಖ್ಯವಾಗಿ ಈ ಮೂರು ಸ್ಥಳಗಳಲ್ಲಿ ಇರುವುದರಿಂದ ಅವರ ಮಧ್ಯದಲ್ಲಿ ಕೆಲಸ ನಿರ್ವಹಿಸುವುದು ಹೆಚ್ಚು ಸುಲಭವಾಗಿರುವುದು. ಇವುಗಳನ್ನು ಹೊರತುಪಡಿಸಿ ಇನ್ನೂ ಹೆಚ್ಚು ವಾಯವ್ಯ ದಿಕ್ಕಿಗೆ ನೊಸ್ಸಿ ಹಾಗೂ ನೈರುತ್ಯ ದಿಕ್ಕಿನಲ್ಲಿ ತುಲೆಯಾರ್ ಎಂಬ ಸ್ಥಳಗಳಿವೆ. ಈ ಪ್ರದೇಶಗಳಲ್ಲಿಯೂ ಹಿಂದೂ ಜನರಿದ್ದೂ ದಾಖಲೆಗಳ ಪ್ರಕಾರ ಸುಮಾರು 10,000 ಭಾರತೀಯರು ಮಡಗಾಸ್ಕರದಲ್ಲಿದ್ದಾರೆ ಎಂಬ ಮಾಹಿತಿಯನ್ನು ರುಸಿಲ್ಲನ್ ಒದಗಿಸಿದ್ದರು.[191]

ಮಡಗಾಸ್ಕರ್‌ನಲ್ಲಿ ದೇಶಿಯ ಮಿಶನನ್ನು ಆರಂಭಿಸುವ ವಿಚಾರ 1924ರ ಜಿಲ್ಲಾ ಸರ್ವ ಹಿರಿಯರ ವಾರ್ಷಿಕ ಸಮ್ಮೇಳನದಲ್ಲಿ ಚರ್ಚೆಗೆ ಬರುತ್ತದೆ. ಇದೊಂದು ದೊಡ್ಡ ಕೆಲಸವಾಗಿದೆ. ಜೊತೆಗೆ ಉಗಾಂಡ, ಕಿನ್ಯದಲ್ಲಿನ ಹಿಂದೂ ಜನರ ಮಧ್ಯೆಯೂ ಕೆಲಸ ನಿರ್ವಹಿಸಬಹುದು ಎಂಬ ಸಲಹೆ ಬರುತ್ತದೆ. ಸ್ವಿಜರ್‌ಲ್ಯಾಂಡಿನ ಒಂದು ಮಿಶನಿನವರು ಟ್ರಾನ್ಸ್‌ವಾಲ್‌ನಲ್ಲಿ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ವಿಚಾರಗಳು ಸಭೆಯಲ್ಲಿ ಚರ್ಚೆಯಾಗಿದ್ದವು. ತದನಂತರ ಮಡಗಾಸ್ಕರ್‌ನಲ್ಲಿ ಮಿಶನ್ ಆರಂಭಿಸುವ ಸಾಧ್ಯತೆಗಳ ಬಗ್ಗೆ ಚರ್ಚಿಸಲಾಗುತ್ತದೆ. ಮಡಗಾಸ್ಕರ್‌ನಲ್ಲಿ ಕೆಲಸ ಆರಂಭಿಸಲು ವಿವಿಧ ತೊಂದರೆಗಳಿವೆ. ಮೊದಲನೆಯದು ಭಾಷೆಯದ್ದು. ಗುಜರಾತಿ, ಫ್ರೆಂಚ್ ಹಾಗೂ ಸ್ಥಳೀಯ ಭಾಷೆಗಳನ್ನು ಅಲ್ಲಿಗೆ ತೆರಳುವ ಇವ್ಯಾಂಜಲಿಸ್ಟ್ ಕಲಿಯಬೇಕಾಗುತ್ತದೆ. ಎರಡನೆಯದಾಗಿ ಹಣದ ಸಮಸ್ಯೆ. ಇಲ್ಲಿನ ಸಭೆಗಳೇ ಸಭಾ ಕೆಲಸದ ಖರ್ಚಿಗೆ ಹಣದ ಆಡಚಣೆಯಿಂದ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಪರದೇಶದಲ್ಲಿ ಮಿಶನು ಸ್ಥಾಪಿಸಿ, ಕೆಲಸ ನಡೆಸುವುದರಿಂದ ದೇವರ ದೊಡ್ಡ ಆಶೀರ್ವಾದ ದೊರಕುತ್ತದೆ ಎಂಬುದನ್ನು ಬಾಸೆಲ್ ಮಿಶನಿನ ದೃಷ್ಟಾಂತದೊಂದಿಗೆ ಸಭೆಯ ಗಮನಕ್ಕೆ ತರಲಾಗುತ್ತದೆ. ನಂತರದಲ್ಲಿ ಅಲ್ಲಿಗೆ ತೆರಳುವ ಇವ್ಯಾಂಜಲಿಸ್ಟರು ಯಾರೆಂಬ ವಿಚಾರ ಚರ್ಚೆಗೆ ಬಂದಾಗ ಯುವಕರಾದ ಜೋನ್ ವಿಲ್ಲಿಯಮ್ಸ್‌ರವರ ಹೆಸರು ಬರುತ್ತದೆ. ಸಭೆಯಲ್ಲಿ ಚರ್ಚೆಯ ಸಂದರ್ಭದಲ್ಲಿ ಕೆಲವರು ಈ ಕೆಲಸವು ಒಳ್ಳೆಯದಾಗಿದ್ದು, ಇದನ್ನು ಶುರು ಮಾಡಬೇಕೆಂದು ತಿಳಿಸಿದರೆ, ಇನ್ನು ಕೆಲವರು ಸಭೆಗಳಲ್ಲಿ ಚರ್ಚಿಸಿ ತೀರ್ಮ ಕೈಗೊಳ್ಳುವ ಸಲಹೆ ನೀಡುತ್ತಾರೆ. ಕೊನೆಗೆ ಒಮ್ಮತದಿಂದ ಒಪ್ಪಿದಂತೆ ದೇಶಿಯ ಮಿಶನಿನ ಕೈಕೆಳಗೆ ಮಡಗಾಸ್ಕರದಲ್ಲಿ ಮಿಶನನ್ನು ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಸಿನೋಡಿನವರು ತಮ್ಮ ಸಭೆಗಳಲ್ಲಿ ಚರ್ಚಿಸಿ, 3 ತಿಂಗಳೊಳಗೆ ಅವರ ನಿರ್ಣಯಗಳನ್ನು ಜಿಲ್ಲಾ ಪಂಚಾಯಿತ್ ಕೂಟದವರಿಗೆ ತಿಳಿಸುವುದು. ಈ ಸಂದರ್ಭದಲ್ಲಿ ಸಿನೋಡಿನ ಇಬ್ಬರು ಸದಸ್ಯರು ವರ್ಷಕ್ಕೆ 5 ರೂಪಾಯಿಗಳನ್ನು ಈ

ಕಾರ್ಯಕ್ಕೆ ನೀಡುತ್ತೇವೆಂದು ತಿಳಿಸುತ್ತಾರೆ.[192] ಒಟ್ಟಾರೆ ಮಡಗಾಸ್ಕರದಲ್ಲಿ ಮಿಶನ್ ಆರಂಭಿಸಬೇಕೆಂಬ ಆಸಕ್ತಿ ಇವರಲ್ಲಿ ಇದ್ದುದನ್ನು ಗಮನಿಸಬಹುದು.

1925ರಲ್ಲಿ ಮಡಗಾಸ್ಕರದ ಮಿಶನಿನ ಬಗ್ಗೆ ಪ್ರಮುಖ ನಿರ್ಣಯಗಳಾಗುತ್ತವೆ. (1925 ಸೆಪ್ಟೆಂಬರ್‌ನಲ್ಲಿ ಜಿಲ್ಲಾ ಸರ್ವಹಿರಿಯರ ಸಮ್ಮೇಳನದಲ್ಲಿ) ಮೊದಲಿನ ನಿರ್ಣಯದಂತೆ ಸಿನೋಡಿನವರು ತಮ್ಮ ಸಭೆಯವರನ್ನು ಈ ಬಗ್ಗೆ ಕೇಳಿದಾಗ ಸಭೆಗಳಲ್ಲಿ ಹೆಚ್ಚಿನವರು ಮಡಗಾಸ್ಕರ ಮಿಶನಿಗೆ ಧೈರ್ಯಪಡಲಿಲ್ಲವಾದ್ದರಿಂದ ಆ ಆಲೋಚನೆ ಬಿದ್ದು ಹೋಗುತ್ತದೆ. ತದನಂತರ ದೇಶಿಯ ಮಿಶನನ್ನು ಪಣಂಬೂರಿನಲ್ಲಿಯೇ ಆರಂಭಿಸಬೇಕೆಂಬ ನಿರ್ಣಯವಾಗಿ, ಇದರ ಇವಾಂಜಲಿಸ್ಟರಾಗಿ ಯಾಸೊನ್ ಚಲ್ಲರನ್ನು ಆಯ್ಕೆ ಮಾಡಲಾಗುತ್ತದೆ. ಅವರು 1926ರ ಜನವರಿಯಿಂದ ಪಣಂಬೂರಿನಲ್ಲಿ ಕೆಲಸದಲ್ಲಿ ತೊಡಗಬೇಕೆಂಬ ನಿರ್ಣಯವಾಗುತ್ತದೆ. ಅದೇ ರೀತಿ ದೇಶಿಯ ಮಿಶನಿನ ಬೋರ್ಡಿಗೆ 7 ಸದಸ್ಯರನ್ನು ಆರಿಸಲಾಗುತ್ತದೆ. ರೆವೆ. ಲೆಮುವೇಲ್ ಸೋನ್ಸ್‌ರವರು ದೇಶಿಯ ಮಿಶನಿನ ಕಾರ್ಯದರ್ಶಿಯಾಗಿ ಆಯ್ಕೆಯಾಗುತ್ತಾರೆ.[193] ಹೀಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ದೇಶಿಯ ಮಿಶನ್ ಆರಂಭಿಸುವುದರ ಬಗ್ಗೆ ಬಹಳಷ್ಟು ಚರ್ಚೆಗಳಾಗುತ್ತವೆ ಹೊರತು, ದೇಶಿಯ ಮಿಶನಿನ ಕಾರ್ಯಗಳು ಆರಂಭವಾಗುವುದಿಲ್ಲ.

ಮಿಶನ್ ಫಾರ್ಮ್:

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಬಿಕ್ಕಟ್ಟಿದ್ದರೂ ಕೆಲವು ಪ್ರಮುಖ ನಿರ್ಧಾರಗಳನ್ನು ಅದು ತೆಗೆದುಕೊಂಡಿತ್ತು. ಕ್ರೈಸ್ತ ಧರ್ಮ ಸೇರುವವರಿಗೆ ಜೀವನೋಪಾಯಕ್ಕೆ ಸಂಬಂಧಿಸಿದಂತೆ ದಾರಿ ಮಾಡಿ ಕೊಡುವುದು ಮಿಶನ್‌ಗೆ ಒಂದು ದೊಡ್ಡ ಸವಾಲಾಗಿರುತ್ತದೆ. ಈ ಕ್ರೈಸ್ತರಾಗುವವರು ಅವರ ಸರ್ವಸ್ವವನ್ನೆ ತ್ಯಜಿಸಿ ಬರುವುದರಿಂದ ಪೂರಕ ವ್ಯವಸ್ಥೆ ಕಲ್ಪಿಸುವುದು ಮಿಶನಿಗೆ ಅನಿವಾರ್ಯವು ಆಗಿತ್ತು. ಇದೇ ವಿಚಾರವು 1924ರ ಜಿಲ್ಲಾ ಸರ್ವ ಹಿರಿಯರ ವಾರ್ಷಿಕ ಸಮ್ಮೇಳನದಲ್ಲಿ ಚರ್ಚೆಗೆ ಬರುತ್ತದೆ. ಕ್ರೈಸ್ತರಾಗುವವರನ್ನು ಸಾಧ್ಯವಾದಷ್ಟು ಅವರ ಮೊದಲಿನ ವೃತ್ತಿಯಲ್ಲೆ ಮುಂದುವರಿಯುವಂತೆ ನೋಡಿಕೊಳ್ಳುವುದು ಉತ್ತಮ ಎಂಬ ಸಲಹೆಯು ಸಭೆಯಲ್ಲಿ ವ್ಯಕ್ತವಾಗುತ್ತದೆ. ಆದರೆ ಇದಕ್ಕೆ ಅನುಕೂಲವಿಲ್ಲದವರ ವಿಚಾರದಲ್ಲಿ ಹಾಗೂ ಬಡತನದಲಿದ್ದು ಸಂಕಷ್ಟಕ್ಕೆ ಸಿಲುಕಿದವರ ವಿಚಾರದಲ್ಲಿ ಏನು ಮಾಡುವುದು ಎಂಬ ಪ್ರಶ್ನೆ ಉದ್ಭವಿಸಿದಾಗ, ಮೂಡಬಿದರೆಯ ಮಿಶನಿನ ಖಾಲಿ ಜಾಗದ ವಿಚಾರ ಪ್ರಸ್ತಾಪವಾಗುತ್ತದೆ. ಈ ಜಾಗವನ್ನು ತುಂಡು ತುಂಡಾಗಿ ಕೃಷಿ ಮಾಡಿ ತೆಂಗಿನ ತೋಟವಾಗಿ ಮಾರ್ಪಡಿಸುವ ಸಲಹೆ ಕೆಲವರಿಂದ ವ್ಯಕ್ತವಾಗುತ್ತದೆ. ಇದರ ಖರ್ಚಿಗಾಗಿ ಬಲ್ಮಠದ ಸಭಾಭಂಡಾರದಿಂದ ಪ್ರತಿ ವರ್ಷ 500 ರೂಪಾಯಿಗಳನ್ನು ಕೊಟ್ಟು, ಆ ಕೆಲಸದ ಮೇಲ್ವಿಚಾರಣೆಗೆ ಒಬ್ಬ ನಂಬಿಗಸ್ಥನನ್ನು ಸಂಬಳ ಕೊಟ್ಟು ಇರಿಸಿ, ಇದನ್ನು 10

ವರ್ಷಗಳವರೆಗೆ ಮುನ್ನಡೆಸಿದರೆ ಜಿಲ್ಲಾ ಸಭೆಗೆ ಒಂದು ಆಸ್ತಿಯುಂಟಾಗುತ್ತದೆ. ಇದರಿಂದ ಕ್ರೈಸ್ತರಾಗುವವರಿಗೂ ಉದ್ಯೋಗ ಕೊಟ್ಟು ಜೀವನಕ್ಕೆ ದಾರಿ ಮಾಡಿದಂತಾಗುತ್ತದೆ ಎಂಬ ಸಲಹೆ ಸೂಚಿಸಲ್ಪಡುತ್ತದೆ. ಇದನ್ನು ಸ್ವಾಗತಿಸಿದ ಜಿಲ್ಲಾ ಕೂಟವು ತೆಂಗಿನ ಕೃಷಿ ಬಲ್ಲವರಿಂದ ಮಾಹಿತಿ ಪಡೆದು ಮುನ್ನಡೆಯುವ ನಿರ್ಧಾರಕ್ಕೆ ಬರುತ್ತದೆ.[194]

1925ರ ಜಿಲ್ಲಾ ಸರ್ವ ಹಿರಿಯರ ಕೂಟದಲ್ಲಿ ಈ ವಿಚಾರವು ಮತ್ತೊಮ್ಮೆ ಚರ್ಚೆಗೆ ಬರುತ್ತದೆ. ಮಿಶನಿನ ಸೆಕ್ಯೂಲರ್ ಏಜೆಂಟರಾದ ಫ್ರಿಸ್ಸಿಯವರು, ಮೂಡಬಿದರೆಯ ಖಾಲಿ ಸ್ಥಳವನ್ನು ಖುದ್ದಾಗಿ ಪರಿಶೀಲಿಸಿ ಸರಕಾರದ ವ್ಯವಸಾಯ ಇಲಾಖೆಯೊಂದಿಗೆ ಚರ್ಚಿಸಿದ ವಿಚಾರಗಳನ್ನು ಸಭೆಗೆ ತಿಳಿಸಿದ್ದರು. ಅದರ ಪ್ರಕಾರ ಈ ಭೂಮಿಯು ತೆಂಗಿನ ಕೃಷಿಗೆ ಯೋಗ್ಯವಾಗಿದ್ದು, ಉತ್ತಮ ಫಸಲು ಸಿಗಬೇಕಾದರೆ ವಾರ್ಷಿಕವಾಗಿ ಒಂದು ಸಾವಿರ ರೂಪಾಯಿಗಳನ್ನು ಮುಂಬರುವ 18 ವರ್ಷಗಳವರೆಗೆ ಖರ್ಚು ಮಾಡಿ, 19ನೇ ವರ್ಷದಿಂದ, ವರ್ಷವೊಂದಕ್ಕೆ 18 ಸಾವಿರ ರೂಪಾಯಿ ಆದಾಯ ಸಿಗಬಹುದು. ಇದರಲ್ಲಿ 6 ಸಾವಿರ ಖರ್ಚು ಕಳೆದು 12 ಸಾವಿರ ರೂಪಾಯಿ ಉಳಿತಾಯವಾಗಬಹುದು. ಆದರೆ ಆರಂಭದಲ್ಲಿ ದೊಡ್ಡ ಖರ್ಚು ಮಾಡಬೇಕಾಗಿದ್ದು, ಉತ್ತಮ ಫಲ ಸಿಗಬೇಕಾದರೆ ಸ್ವಂತ ಕೃಷಿ, ಎಂದರೆ ಮಿಶನ್ ಕೂಲಿ ಅಥವಾ ಸಂಬಳಕ್ಕೆ ಕೆಲಸಗಾರರನ್ನು ಇಟ್ಟು ಅದನ್ನು ಮುನ್ನೆಡೆಸಬೇಕು ಎಂದು ಫ್ರಿಸ್ಸಿಯವರು ವಿವರಿಸಿದ್ದರು. ಇದರಿಂದಾಗಿ ಕೆಲಸವಿಲ್ಲದ ಅನೇಕ ಕ್ರೈಸ್ತರಿಗೂ ಉದ್ಯೋಗ ಲಭಿಸುವುದು ಎಂಬ ಉದ್ದೇಶವು ಇತ್ತು. ಅದರೆ ಕೆಲವು ಸದಸ್ಯರು ಈ ಭೂಮಿಯನ್ನು ತುಂಡುತುಂಡಾಗಿ ಮಾಡಿ, ಕ್ರೈಸ್ತರಿಗೆ ಗೇಣಿಗೆ ಕೊಡುವುದು ಒಳ್ಳೆಯದೆಂದು ವಾದಿಸಿದರೆ, ಇನ್ನು ಕೆಲವರು ಅದನ್ನು ಕ್ರೈಸ್ತ ವಸಾಹತುವಾಗಿ ಮಾಡಬೇಕೆಂದು ಹೇಳಿದ್ದರು. ಈ ರೀತಿ ವಿವಿಧ ಸಲಹೆಗಳು ಬಂದ ಕಾರಣದಿಂದ ಈ ಮೇಲಿನ ವಿಚಾರಗಳನ್ನು ಚರ್ಚಿಸಿ, ನಿರ್ಣಯ ತೆಗೆದುಕೊಳ್ಳುವುದರ ಬಗ್ಗೆ ಒಂದು ಕಮಿಶನನ್ನು ನೇಮಕ ಮಾಡಲಾಗುತ್ತದೆ. ಅದರ ಸದಸ್ಯರೆಂದರೆ, ಜೆ. ಬಿ ಸೋನ್ಸ್, ಅಬ್ನೇರ್ ಸೋನ್ಸ್, ಕ್ರಿಸ್ತಿಯಾನ್ ಮಾಬೆನ್, ಪೆನುವೇಲ್ ಸೋನ್ಸ್, ಸಾಮುವೇಲ್ ಕ್ಲೇರ್, ಮತ್ತಿಯಾನ್ ತೋಲಾರ್. ಈ ಕಮಿಷನಿಗೆ ಮುಖ್ಯಸ್ಥರನ್ನಾಗಿ ಫ್ರಿಸ್ಸಿಯವರನ್ನು ನೇಮಕ ಮಾಡಲಾಗುತ್ತದೆ. ಇವರಿಗೆ ಅವರ ಸಹಾಯಕ್ಕಾಗಿ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವನ್ನು ನೀಡಲಾಗುತ್ತದೆ.[195] ಹೀಗೆ ಬಾಸೆಲ್ ಮಿಶನ್ ಖರೀದಿಸಿದ ಭೂಮಿಯನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಸಮರ್ಪಕವಾಗಿ ಬಳಸಿಕೊಳ್ಳಲು ಮುಂದಾಗುತ್ತದೆ.

ಮೂಡಬಿದರೆಯ ಈ ಭೂಮಿಯನ್ನು ಬಾಸೆಲ್ ಮಿಶನಿನ ಪ್ರಖ್ಯಾತ ಮಿಶನರಿಯಾಗಿದ್ದ ರೆವೆ. ಫಿಶ್ಚರ್‌ರವರು (Rev. Fischer) 1910–12ರ ಕಾಲಾವಧಿಯಲ್ಲಿ ಖರೀದಿಸಿದ್ದರು. ಮೂಡಬಿದಿರೆಯ ಪಡು ಮಾರ್ನಾಡ್ ಗ್ರಾಮದ ಬನ್ನಡ್ಕ (Bannadka of padu-marnad

village in moodbidri) ಎಂಬಲ್ಲಿನ ಒಂದು ಭೂತಸ್ಥಾನದ (Bhutastana) 46 ಎಕರೆ ಕೃಷಿ ಭೂಮಿಯನ್ನು ಫಿಶ್ಚರ್ ಖರೀದಿಸಿದ್ದರು. 1926ರ ವರೆಗೆ ಅದು ಖಾಲಿಯಾಗಿತ್ತು.[196] 1926 ರಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಈ ಪ್ರದೇಶದಲ್ಲಿ ಒಂದು ಮಿಶನ್ ಫಾರ್ಮ್‌ನ್ನು ಸ್ಥಾಪಿಸಲು ಮುಂದಾಗುತ್ತದೆ. ಈ ಯೋಜನೆಗೆ ಸರಕಾರದ ಕೃಷಿ ಇಲಾಖೆಯಿಂದ ಪ್ರೋತ್ಸಾಹವು ದೊರಕಿತ್ತು. 2000 ತೆಂಗಿನ ಸಸಿಗಳನ್ನು ಇಝುಕೀಯಲ್ ಎಸ್. ಬಂಗೇರರವರ (Ezekuiel S. Bangera) ಮಾರ್ಗದರ್ಶನದಲ್ಲಿ ನೇಡಲಾಗುತ್ತದೆ. 1928ರಲ್ಲಿ ಅಲಹಾಬಾದ್ ಕೃಷಿ ವಿಶ್ವವಿದ್ಯಾನಿಲಯದಿಂದ ಡಿಪ್ಲೋಮ ಪದವಿಧರರಾದ ಆಲ್ಫ್ರೆಡ್ ಜೆ. ಸೋನ್ಸ್‌ರವರನ್ನು ಇದರ ಮಾರ್ಗದರ್ಶಕರಾಗಿ ನೇಮಿಸಲಾಗುತ್ತದೆ. 1920ರಲ್ಲಿ ಕೃಷಿ ಶಾಲೆಯನ್ನು ತೆರೆಯಲಾಗುತ್ತದೆ. ದೀರ್ಘಕಾಲ ಅವರ ನಿಯಂತ್ರಣದಲ್ಲಿದ್ದ ಫಾರ್ಮ್, ಕೊನೆಗೆ ಮಿಶನಿನ ಅನುಮತಿಯೊಂದಿಗೆ ದೀರ್ಘಕಾಲದ ಗುತ್ತಿಗೆಯ ಮೂಲಕ ಒಂದು ಖಾಸಾಗಿ ಉದ್ಯಮವಾಗಿ ಬೆಳೆಯುತ್ತದೆ. ಈ ಫಾರ್ಮ್‌ನ್ನು ಬಾಸೆಲ್ ಮಿಶನ್ ಫಾರ್ಮ್ ಎಂಬುದಾಗಿಯೇ ಕರೆಯಲಾಗುತಿತ್ತು. ಇಲ್ಲಿ ಭತ್ತ, ಅನಾನಸು, ಕೊಕಾ, ಮೆಣಸು, ಶುಂಠಿ, ಗೆಣಸು ಮುಂತಾದ ಹಲವು ವಾಣಿಜ್ಯ ಬೆಳೆಗಳನ್ನು ಯಶಸ್ವಿಯಾಗಿ ಬೆಳೆಯಲಾಗುತಿತ್ತು. ನಂತರದಲ್ಲಿ ಹಲವು ಗ್ರಾಮಗಳು ತಮ್ಮ ಒಣ ಭೂಮಿಯನ್ನು ಕೃಷಿ ಮಾಡಲು ಇದೇ ಮಾದರಿಯನ್ನು ಅನುಸರಿಸಿದ್ದವು. 1950ರಲ್ಲಿ ಹೆಚ್ಚು ಆಹಾರ ಉತ್ಪಾದಿಸಿ (Grow More Food) ಎಂಬ ಅಭಿಯಾನದಲ್ಲಿ ಭಾಗಿಯಾಗಿ ಅದರಲ್ಲಿ ಪ್ರಮುಖ ಪಾತ್ರವನ್ನು ಫಾರ್ಮ್ ನಿರ್ವಹಿಸಿತ್ತು. ಜೊತೆಗೆ ಇದು ಹಲವು ಗ್ರಾಮೀಣ ಕೃಷಿ ಕಮಿಟಿಗಳಲ್ಲಿ ಹಾಗೂ ಅಖಿಲ ಭಾರತೀಯ ಮಟ್ಟದ ಕೃಷಿ ಕಮಿಟಿಗಳಲ್ಲಿ (All India Agricultural Committees) ಪ್ರಮುಖ ಪಾತ್ರವನ್ನು ವಹಿಸಿರುವುದನ್ನು ಗಮನಿಸಬಹುದು. ಕ್ರಿಸ್ತ ಸೇವಕಿ ಆಶ್ರಮದ ಮಾರ್ಗದರ್ಶನದಲ್ಲಿ ಕಾರ್ಕಳದ ಪರ್ಪಳೆಯಲ್ಲಿ; ಮುಲ್ಕಿಯ ಹುಡುಗಿಯರ ಅನಾಥಾಲಯದ ಮೇಲ್ವಿಚಾರಣೆಯಲ್ಲಿ ಮುಲ್ಕಿಯಲ್ಲಿ; ಪುತ್ತೂರಿನ ಹುಡುಗರ ಅನಾಥಾಲಯದ ಮೇಲ್ವಿಚಾರಣೆಯಲ್ಲಿ ವೃದ್ಧಿಯಾಗಿರುವ ಕೃಷಿ ವ್ಯವಸ್ಥೆಯು ಬಾಸೆಲ್ ಮಿಶನ್ ಕೃಷಿ ಕ್ಷೇತ್ರದ ಪ್ರಗತಿಗೆ ಕೊಟ್ಟಿರುವ ಕೊಡುಗೆಗಳನ್ನು ಗಮನಕ್ಕೆ ತರುತ್ತದೆ.[197]

ಶಿಕ್ಷಣ ಮತ್ತು ಕೆನರೀಸ್ ಇವ್ಯಾಂಜಲಿಕಲ್ ಮಿಶನ್:

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಗಣನೀಯವಾದ ಬದಲಾವಣೆಗಳನ್ನು ತರಲಿಲ್ಲ. ಬದಲು ಇದ್ದ ಶಾಲೆಗಳನ್ನು ಮುಂದುವರಿಸಿತು. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಈ ಇದ್ದ ಶಾಲೆಗಳನ್ನೇ ಮುಂದುವರಿಸಲು ಕಷ್ಟಪಟ್ಟಿತ್ತು. ಭಾರತದಲ್ಲಿ ಬಾಸೆಲ್ ಮಿಶನನ್ನು ನಿರ್ಬಂಧಗೊಳಿಸಿದ ಕಾಲಾವಧಿಯಲ್ಲಿ ಅದು ಹಲವಾರು ವಿಭಿನ್ನ ರೀತಿಯ

ಶಾಲೆಗಳನ್ನು ನಿರ್ವಹಿಸುತಿತ್ತು. ಸರಕಾರಿ ದಾಖಲೆಗಳ ಪ್ರಕಾರ ಬಾಸೆಲ್ ಮಿಶನ್ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಒಂದು ಕಾಲೇಜು, ಒಂದು ಟ್ರೈನಿಂಗ್ ಶಾಲೆ (Training school), 11 ಹುಡುಗರ ಸೆಕೆಂಡರಿ ಶಾಲೆಗಳು, 2 ಹುಡುಗಿಯರ ಸೆಕೆಂಡರಿ ಶಾಲೆಗಳು, 136 ಹುಡುಗರ ಪ್ರಾಥಮಿಕ ಶಾಲೆಗಳು, (elementary schools for boys) ಮತ್ತು 14 ಹುಡುಗಿಯರ ಪ್ರಾಥಮಿಕ ಶಾಲೆಗಳನ್ನು ಹೊಂದಿತ್ತು. ಇವುಗಳಲ್ಲಿ ಕಾಲೇಜು ಮತ್ತು ಟ್ರೈನಿಂಗ್ ಶಾಲೆಯು ಮಲಬಾರ್ ಜಿಲ್ಲೆಯಲ್ಲಿತ್ತು. ಹುಡುಗರ ಆರು ಸೆಕೆಂಡರಿ ಶಾಲೆಗಳು (3 high shools and 3 incomplete secondary schools), ಒಂದು ಹುಡುಗಿಯರ ಹೈಸ್ಕೂಲ್, ಸುಮಾರು 50 ಪ್ರಾಥಮಿಕ ಶಾಲೆಗಳು ಮಲಬಾರ್ ಜಿಲ್ಲೆಯಲ್ಲಿದ್ದವು.[198]

ಹುಡುಗರ 5 ಸೆಕೆಂಡರಿ ಶಾಲೆಗಳು (2 High schools and 3 incomplete secondary schools), ಒಂದು ಹುಡುಗಿಯರ ಹೈಸ್ಕೂಲ್ ಹಾಗೂ ಸುಮಾರು 70 ಪ್ರಾಥಮಿಕ ಶಾಲೆಗಳು ದಕ್ಷಿಣ ಕೆನರಾ ಜಿಲ್ಲೆಯಲ್ಲಿದ್ದವು. ಸುಮಾರು 30 ಪ್ರಾಥಮಿಕ ಶಾಲೆಗಳು ನೀಲಗಿರಿಯಲ್ಲಿದ್ದುವು. ಅದೇ ರೀತಿ 6 ಶಾಲೆಗಳು ಕೊಡಗಿನಲ್ಲಿ ಮತ್ತು ಸುಮಾರು 9 ಶಾಲೆಗಳು ಮುಂಬಾಯಿ ಪ್ರಾಂತ್ಯದ ಧಾರವಾಡ ಮತ್ತು ಬಿಜಾಪುರಗಳಿದ್ದವು. ಈ ಮೇಲಿನ ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಲು ಮಿಶನ್ ಒಟ್ಟು 2,43,254 ರೂಪಾಯಿಗಳನ್ನು ವೆಚ್ಚ ಮಾಡುತಿತ್ತು.[199] ಈ ಒಟ್ಟು ವೆಚ್ಚವನ್ನು ಬೇರೆ ಬೇರೆ ಮೂಲಗಳ ಸಹಾಯದಿಂದ ಮಿಶನ್ ಭರಿಸುತಿತ್ತು. ಶಾಲೆಗಳಲ್ಲಿ ಸಂಗ್ರಹಿಸಿದ ಶುಲ್ಕಗಳ (Fees) ಮೂಲಕ 1,04,591 ರೂಪಾಯಿಯನ್ನು ಸರಕಾರವು ಅದರ ಬೇರೆ ಬೇರೆ ಶಾಲೆಗಳಿಗೆ ನೀಡುತ್ತಿದ್ದ ಅನುದಾನದ ಮೂಲಕ 60,169 ರೂಪಾಯಿಗಳನ್ನು ಹಾಗೂ ಮಿಶನ್ ಸ್ವತಃ 78,494 ರೂಪಾಯಿಗಳನ್ನು ಶೈಕ್ಷಣಿಕ ವ್ಯವಸ್ಥೆಗೆ ವೆಚ್ಚ ಮಾಡುತ್ತಿತ್ತು.[200] ಯುದ್ಧ ಆರಂಭವಾದ ಕಾಲದಲ್ಲಿ ಸರಕಾರ ಹಾಗೂ 'ಮದ್ರಾಸ್ ಎಜುಕೇಶನಲ್ ಕೌನ್ಸಿಲ್' (Madras Educational Council) ಬಾಸೆಲ್ ಮಿಶನಿನ ಶೈಕ್ಷಣಿಕ ಸಂಸ್ಥೆಗಳಿಗೆ ನೀಡಿದ್ದ ಮನ್ನಣೆ ಹಾಗೂ ಅನುದಾನವನ್ನು ಹಿಂಪಡೆಯುತ್ತದೆ. ಆದರೆ 'ಮಿಶನರಿ ಎಜುಕೇಶನಲ್ ಕೌನ್ಸಿಲ್ ಆಪ್ ಸೌತ್ ಇಂಡಿಯಾ'ವು (Missionary Educational Council of South India) ಮಧ್ಯ ಪ್ರವೇಶ ಮಾಡಿ, ಮಿಶನ್ ಶಾಲೆಗಳ ಸಂಪೂರ್ಣ ಜವಾಬ್ದಾರಿಯನ್ನು ತಾತ್ಕಾಲಿಕವಾಗಿ ವಹಿಸಿಕೊಳ್ಳುವ ಭರವಸೆ ನೀಡಿದ ಮೇಲೆ ಮದ್ರಾಸ್ ಸರಕಾರ ಮಿಶನ್ ಶಾಲೆಗಳಿಗೆ ನೀಡಿದ್ದ ಮನ್ನಣೆ ಹಾಗೂ ಅನುದಾನವನ್ನು ಮುಂದುವರಿಸುತ್ತದೆ ಹಾಗೂ ಈ ಅನುಮೋದನೆಯನ್ನು 1919 ಮಾರ್ಚ್ 31ರವರೆಗೆ ವಿಸ್ತರಿಸುತ್ತದೆ.[201] ಬಾಸೆಲ್ ಮಿಶನನ್ನು ಸಂಪೂರ್ಣವಾಗಿ ನಿರ್ಬಂಧಿಸಿದ ಕಾರಣದಿಂದ ನ್ಯಾಶನಲ್

ಮಿಶನರಿ ಕೌನ್ಸಿಲ್ ಬದಲಿ ವ್ಯವಸ್ಥೆಯನ್ನು ರೂಪುಗೊಳಿಸುವವರೆಗೆ ಅದರ ಎಲ್ಲಾ ಶೈಕ್ಷಣಿಕ ಜವಾಬ್ದಾರಿಗಳು 'ಮಿಶನರಿ ಎಜುಕೇಶನಲ್ ಕೌನ್ಸಿಲ್ ಆಫ್ ಸೌತ್ ಇಂಡಿಯಾ'ದ ನಿಯಂತ್ರಣದಲ್ಲಿರುತ್ತವೆ. ಈ ಕಾಲಾವಧಿಯ ನಂತರ ಬಾಸೆಲ್ ಮಿಶನಿನ ಶೈಕ್ಷಣಿಕ ಸಂಸ್ಥೆಗಳು ಪತನದತ್ತ ಮುಂದುವರಿಯುತ್ತವೆ. ನ್ಯಾಶನಲ್ ಮಿಶನರಿ ಕೌನ್ಸಿಲ್ ರೂಪುಗೊಳಿಸಿದ ಹೊಸ ಯೋಜನೆಯ ಅನುಸಾರ ಬಾಸೆಲ್ ಮಿಶನ್ ಶೈಕ್ಷಣಿಕ ಸಂಸ್ಥೆಗಳು ಬೇರೆ ಬೇರೆ ಮಿಶನ್‌ಗಳಿಗೆ ಹಂಚಿ ಹೋಗುತ್ತವೆ. ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠದ ಜವಾಬ್ದಾರಿಗಳು ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ಸೇರುತ್ತವೆ. ಬಹಳಷ್ಟು ಹಣಕಾಸಿನ ತೊಂದರೆಯಿಂದ ಬಳಲುತ್ತಿದ್ದ ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ಈ ಎಲ್ಲಾ ಶಾಲೆಗಳನ್ನು ಸಮರ್ಪಕವಾಗಿ ಮುಂದುವರಿಸಲು ಸಾಧ್ಯವಾಗುವುದಿಲ್ಲ. 1916ರಲ್ಲಿ ಮಿಶನಿನ ಒಟ್ಟು ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಯು 191 ಇದ್ದು[202], 1917ರಲ್ಲಿ ಅದು 163ಕ್ಕೆ[203] ಕುಸಿಯುತ್ತದೆ. 1918ರ ಕಾಲಾವಧಿಯಲ್ಲಿ ಬಾಸೆಲ್ ಮಿಶನಿಗೆ ಸೇರಿದ್ದ 153 ಶೈಕ್ಷಣಿಕ ಸಂಸ್ಥೆಗಳಿರುತ್ತವೆ.[204] ಮತ್ತೊಂದೆಡೆ 1916ರಲ್ಲಿ 14 ಹೈಸ್ಕೂಲುಗಳಿದ್ದು, 1918ರ ಕಾಲಕ್ಕೆ ಅವು 11ಕ್ಕೆ ಇಳಿಕೆಯಾಗುವುದನ್ನು ಗಮನಿಸಬಹುದು. 1924ರ ಕಾಲಾವಧಿಯಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ನಿರ್ವಹಿಸುತ್ತಿದ್ದ ಶೈಕ್ಷಣಿಕ ಸಂಸ್ಥೆಗಳು ಬಹಳಷ್ಟು ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಕಾರಣವೆಂದರೆ ಆ ಕಾಲದಲ್ಲಿ ಕೋಮನ್‌ವೆಲ್ತ್ ಟ್ರಸ್ಟ್‌ನಿಂದ ಬರುತ್ತಿದ್ದ ಹಣಕಾಸಿನ ಸಹಾಯ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಆ ಸಂದರ್ಭದಲ್ಲಿ ಅದು ಮಂಗಳೂರಿನಲ್ಲಿದ್ದ ತನ್ನ ಒಂದು ಹೈಸ್ಕೂಲನ್ನು ಮುಚ್ಚುವ ಚಿಂತನೆಯನ್ನು ಮಾಡುತ್ತದೆ. ದಕ್ಷಿಣ ಕೆನರಾದಲ್ಲಿನ ಅದರ ಶಾಲೆಗಳ ಸಂಖ್ಯೆಯು 45ರಿಂದ 30ಕ್ಕೆ ಕುಸಿಯುತ್ತದೆ.[205] ಹೀಗೆ ಒಟ್ಟಾರೆಯಾಗಿ ಬಾಸೆಲ್ ಮಿಶನಿನ ನಂತರದ ಕಾಲದಲ್ಲಿ ಅದು ಸ್ಥಾಪಿಸಿದ್ದ ಶಿಕ್ಷಣ ಸಂಸ್ಥೆಗಳು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ ಹಾಗೂ ಹಲವಾರು ಶಾಲೆಗಳು ಮುಚ್ಚಲ್ಪಡುತ್ತವೆ.

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಬಾಸೆಲ್ ಮಿಶನ್ ಹುಟ್ಟು ಹಾಕಿದ್ದ ಬಲಾಢ್ಯವಾದ ಶಿಕ್ಷಣ ವ್ಯವಸ್ಥೆಯು ಪತನದತ್ತ ಚಲಿಸುವುದನ್ನು ಕಂಡ ಬಾಸೆಲ್ ಮಿಶನ್ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ ಪ್ರಬಲ ಟೀಕೆಗಳನ್ನು ಮಾಡುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಶಿಕ್ಷಣ ಕ್ಷೇತ್ರದಲ್ಲಿ ವಿಫಲವಾದುದರಿಂದ ಅದರ ಮಿಶನರಿಗಳು ಸ್ಥಳೀಯ ಕ್ರೈಸ್ತರಿಂದ ವಿರೋಧಿಸಲ್ಪಡುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನ್ ಬೆಳೆಸಿದ್ದ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸಿದ್ದಾರೆ ಎಂಬ ಗುರುತರವಾದ ಆರೋಪವನ್ನು ಮಾಡಿದ್ದ ಕ್ರೈಸ್ತರು, ಬಾಸೆಲ್ ಮಿಶನ್ ಕಾಲದಲ್ಲಿ ಹಲವು ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳಿದ್ದವು. ಹೈಸ್ಕೂಲನ್ನು ಕಾಲೇಜನ್ನಾಗಿ ಮಾರ್ಪಡಿಸಬೇಕೆಂಬ ಆಲೋಚನೆಯೂ ಇತ್ತು. ಆ ಆಲೋಚನೆಗಳು

ಮತ್ತು ಶಾಲೆಗಳು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಎಲ್ಲಿಗೆ ಹೋದವು? ಎಂದು ಪ್ರಶ್ನಿಸುತ್ತಾ, ಇದಕ್ಕೆ ಉತ್ತರ ಕಂಡುಕೊಳ್ಳಲು ಒಂದು ವಾರ್ಷಿಕ ವರದಿಯು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಕಂಡು ಬರುವುದಿಲ್ಲ ಎಂದು ಖಂಡಿಸುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಶಾಲೆಗಳ ಸಂಖ್ಯೆ ಗಣನೀಯವಾಗಿ ಕುಸಿದಿದ್ದು, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹೇಗೆ ಮಿಶನ್ ಕ್ಷೇತ್ರದಲ್ಲಿ ಹಿಂದೆ ಬಿದ್ದಿದೆಯೋ, ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲೂ ಹಿಂದೆ ಬಿದ್ದಿದೆ ಎಂದು ಬಾಸೆಲ್ ಮಿಶನ್ ಕ್ರೈಸ್ತರು ಟೀಕಿಸುತ್ತಾರೆ.

ವೈದ್ಯಕೀಯ ಮಿಶನ್:

ವೈದ್ಯಕೀಯ ಸೇವೆಯ ಮೂಲಕ ಸ್ಥಳೀಯರನ್ನು ಕ್ರೈಸ್ತ ಧರ್ಮದ ಕಡೆಗೆ ಆಕರ್ಷಿಸುವುದು ಭಾರತದಲ್ಲಿ ಮಿಶನರಿಗಳು ಅನುಸರಿಸಿದ ನೀತಿಯಾಗಿತ್ತು. ವೈದ್ಯಕೀಯ ಸೇವೆಯ ಮೂಲಕ ಭಾರತೀಯರನ್ನು ಕ್ರೈಸ್ತ ಧರ್ಮದತ್ತ ಆಕರ್ಷಿಸಬಹುದು ಎಂಬ ಬಲವಾದ ನಂಬಿಕೆಯು ಮಿಶನರಿಗಳಲ್ಲಿರುತ್ತದೆ. ಅದೇ ರೀತಿ ಯೂರೋಪಿಯನೇತರ ರಾಷ್ಟ್ರಗಳ ಜನರ ಆರೋಗ್ಯ ವಿಚಾರಗಳನ್ನು ಉತ್ತಮ ಪಡಿಸುವುದು ಕೂಡಾ ಮಿಶನರಿಗಳ ಉದ್ದೇಶವಾಗಿತ್ತು. ಧಾರ್ಮಿಕ ಕಾರ್ಯಗಳಲ್ಲಿ ವೈದ್ಯಕೀಯ ಮಿಶನ್ ಎರಡು ರೀತಿಯ ಪ್ರಮುಖ ಪಾತ್ರಗಳನ್ನು ನಿಭಾಯಿಸುತಿತ್ತು. ಒಂದು ಮತಾಂತರದ (conversion) ಪಾತ್ರವಾದರೆ, ಇನ್ನೊಂದು ಮತಾಂತರ ಹೊಂದಿದವರು ಅವರ ಹಳೇ ಧರ್ಮಕ್ಕೆ ಹೋಗುವುದನ್ನು ತಡೆಯುವುದಾಗಿತ್ತು. ಆದರೆ ಬಾಸೆಲ್ ಮಿಶನ್ ಈ ಅಸ್ತ್ರವನ್ನು ಅದರ ಮಿಶನರಿ ಕಾರ್ಯದಲ್ಲಿ ವ್ಯವಸ್ಥಿತವಾಗಿ ಉಪಯೋಗಿಸುವಲ್ಲಿ ವಿಫಲವಾಗುತ್ತದೆ. ಮಿಶನರಿಗಳು ಇಲ್ಲಿ ನಿರಂತರವಾದ ವೈದ್ಯಕೀಯ ಸೇವೆಯನ್ನು ಆರಂಭಿಸುವಂತೆ ಬಾಸೆಲಿಗೆ ಬೇಡಿಕೆ ಮಂಡಿಸುತ್ತಾರಾದರೂ, 19ನೇ ಶತಮಾನದ ಅಂತ್ಯದವರೆಗೆ ವ್ಯವಸ್ಥಿತವಾದ ಆಸ್ಪತ್ರೆಯನ್ನು ಕರ್ನಾಟಕದ ಪ್ರದೇಶದಲ್ಲಿ ಆರಂಭಿಸಲು ಬಾಸೆಲ್ ಮಿಶನಿಗೆ ಸಾಧ್ಯವಾಗುವುದಿಲ್ಲ. ಆರಂಭದ ಕಾಲದಲ್ಲಿ ಬಾಸೆಲ್ ಮಿಶನರಿಗಳು ತಮ್ಮ ವೈಯಕ್ತಿಕ ಜ್ಞಾನದ ಆಧಾರದ ಮೇಲೆ ವೈದ್ಯಕೀಯ ಸೇವೆಯನ್ನು ಆರಂಭಿಸಿದ್ದರು. ತಮ್ಮ ಮತ ಪ್ರಚಾರದ ಸಂದರ್ಭದಲ್ಲಿ ಮಿಶನರಿಗಳು ತಮ್ಮೊಂದಿಗೆ ನೋವು ನಿವಾರಕ ಔಷಧಿಗಳು, ಮಾತ್ರೆಗಳು ಹಾಗೂ ಇತರ ಔಷಧಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಅದೇ ರೀತಿ ಬಾಸೆಲ್ ಮಿಶನರಿಗಳು ನೀಡುತ್ತಿದ್ದ ಟಿಶ್ಯೂ ಔಷಧಿ (Tissue Medicine) ಬಹಳಷ್ಟು ಪ್ರಖ್ಯಾತವಾಗಿತ್ತು.[206] ಬಾಸೆಲ್ ಮಿಶನರಿಗಳು ಭಾರತದಲ್ಲಿ ತಮ್ಮ ಮೊದಲ ವೈದ್ಯಕೀಯ ವ್ಯವಸ್ಥೆಯನ್ನು ಆರಂಭಿಸಿದ್ದು ಮಲಬಾರ್‌ನಲ್ಲಿ. 1914ರ ಕಾಲಾವಧಿಗಾಗುವಾಗ ಮಲಬಾರ್ ಜಿಲ್ಲೆಯಲ್ಲಿ 5 ಆಸ್ಪತ್ರೆಗಳು ಹಾಗೂ ಗಾಯಗೊಂಡ ರೋಗಿಗಳಿಗೆ ಚಿಕಿತ್ಸೆ ನೀಡುವ ಒಂದು ಚಿಕಿತ್ಸಾಲಯವಿತ್ತು.[207] 1886 ರಲ್ಲಿ ಮಲಬಾರ್‌ನ ಕ್ಯಾಲಿಕಟ್‌ನಲ್ಲಿ ಯುವ ಮಿಶನರಿಯಾಗಿದ್ದ

ಲೈಬೇನ್‌ಡೋಯೆರ್‌ಫರ್ (Liebendoerfer) ಒಂದು ಚಿಕಿತ್ಸಾಲಯವನ್ನು ಆರಂಭಿಸುತ್ತಾನೆ. ಈತ 3ನೇ ಅಕ್ಟೋಬರ್ 1902ರಲ್ಲಿ ಮರಣವನ್ನಪ್ಪಿದ ನಂತರ ಭಾರತದಲ್ಲಿ ವೈದ್ಯಕೀಯ ಸೇವೆಯನ್ನು ಮುಂದುವರಿಸುವ ಉದ್ದೇಶದಿಂದ 'ಜರ್ಮನ್ ಮೆಡಿಕಲ್ ಸೊಸೈಟಿ'ಯನ್ನು (German Medical Society) ಸ್ಥಾಪಿಸಲಾಗುತ್ತದೆ. ಇದು ಬಾಸೆಲ್ ಮಿಶನಿಗೆ ಸಹಾಯ ಮಾಡುವ ಉದ್ದೇಶವನ್ನು ಹೊಂದಿರುತ್ತದೆ. 1886ರಲ್ಲಿ ಸ್ಥಾಪಿಸಲ್ಪಟ್ಟ ಆಸ್ಪತ್ರೆಯು ಉತ್ತಮವಾಗಿ ಮುಂದುವರಿಯುತ್ತದೆ. ಹಲವು ಉಪಕೇಂದ್ರಗಳನ್ನು ಆರಂಭಿಸಲಾಗುತ್ತದೆ. 1908ರಲ್ಲಿ ಡಾ. ಸ್ಚನೈಟರ್‌ರವರನ್ನು (Dr. Schneiter) ಕ್ಯಾಲಿಕಟ್‌ನ ಸೇವೆಗೆ ಮಿಶನ್ ನಿಯೋಜಿಸುತ್ತದೆ. ಅದೇ ಸಂದರ್ಭದಲ್ಲಿ ಡಾ. ಸ್ಟೋಕ್ಸ್ ಕೂಡಾ ಇಲ್ಲಿ ಸೇವೆಯಲ್ಲಿರುತ್ತಾರೆ. 1921ರಲ್ಲಿ ಡಾ. ಸ್ಟೋಕ್ಸ್ ಬೆಟಗೇರಿಗೆ ಚಲಿಸಿದಾಗಿ, ಡಾ. ಮೆಹೆಮ್ಕ್ಯರ್‌ರವರು (Dr. Miss. Mehmker) 1928ರಲ್ಲಿ ಇಲ್ಲಿನ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಬಾಸೆಲ್ ಮಿಶನನ್ನು ನಿರ್ಬಂಧಿಸಿದ ಕಾಲದಲ್ಲಿಯೂ ಮುಂದುವರಿದ ಈ ಆಸ್ಪತ್ರೆಯು 1932ರಲ್ಲಿ ಮುಚ್ಚಿಹೋಗುತ್ತದೆ. 1914ರಲ್ಲಿ ವಾನಿಯಾಕುಲಮ್‌ನಲ್ಲಿನ (Vaniyakulam) ಹೊರ ಠಾಣ್ಯವು ಮುಚ್ಚಿಹೋಗುತ್ತದೆ. 1923ರಲ್ಲಿ ಭಾರತೀಯ ವೈದ್ಯನಾಗಿದ್ದ ಡಾ. ಮೋಸೆಸ್ಸ್ ಅಮ್‌ಬಲ್ (Dr. Moses Ambal) ಕೋಡಕಲ್‌ನ (codacal) ಜವಾಬ್ಧಾರಿಯನ್ನು ವಹಿಸಿ ಅದನ್ನು ಮುನ್ನಡೆಸುತ್ತಾರೆ. ಕ್ಯಾಲಿಕಟ್‌ನ ಆಸ್ಪತ್ರೆಯು ಮುಚ್ಚಿದ ನಂತರ ಅಲ್ಲಿನ ಸೇವೆಯಲ್ಲಿದ್ದ ಸಿಸ್ಟರ್ ಫ್ರೈಡಾ ರೈಕ್ಸರ್‌ರವರು (Sister Freidia Reicker) ಕೋಂಬ್ಲಾಕ್ಕೆ (Chombala) ವರ್ಗವಣೆಯಾಗಿ ಅವರ ಸೇವೆಯನ್ನು ಮುಂದುವರಿಸುತ್ತಾರೆ. ಇಲ್ಲಿ ಇವರು 1949ರ ವರೆಗೆ ಸೇವೆಯನ್ನು ನೀಡುತ್ತಾರೆ. ಅದೇ ರೀತಿ ವಯ್‌ನಾಡ್‌ನಲ್ಲಿಯೂ (Wynad) ಒಂದು ಚಿಕಿತ್ಸಾಲಯವನ್ನು ಬಾಸೆಲ್ ಮಿಶನ್ ಆರಂಭಿಸಿತ್ತು.[208] ಹೀಗೆ ಮಲಬಾರ್ ಪ್ರದೇಶದಲ್ಲಿ ಬಾಸೆಲ್ ಮಿಶನ್ ಪ್ರಾರಂಭದಿಂದ ಹಿಡಿದು ಸ್ವಾತಂತ್ರ್ಯದ ಕಾಲದವರೆಗೆ ತನ್ನ ವೈದ್ಯಕೀಯ ಸೇವೆಯನ್ನು ಒದಗಿಸಿತ್ತು.

ಬಾಸೆಲ್ ಮಿಶನ್ ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನ್‌ಗಳು ದಕ್ಷಿಣ ಮರಾಠ ಪ್ರದೇಶದಲ್ಲಿ ಅಮೂಲ್ಯವಾದ ವೈದ್ಯಕೀಯ ಸೇವೆಯನ್ನು ಒದಗಿಸಿದ್ದವು. ಬಾಸೆಲ್ ಮಿಶನ್ 1903ರಲ್ಲಿ ಬೆಟಗೇರಿಯಲ್ಲಿ ಒಂದು ವೈದ್ಯಕೀಯ ಕೇಂದ್ರವನ್ನು ಆರಂಭಿಸುತ್ತದೆ. ಯುದ್ಧದ ಕಾಲಾವಧಿಯಲ್ಲಿ ಇದರ ಕಾರ್ಯವು ಬಹಳಷ್ಟು ಮೊಟಕುಗೊಂಡು ಸುಮಾರು 9 ವರ್ಷ ಕುಂಟುತ್ತಾ ಸಾಗುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲಾವಧಿಯಲ್ಲಿ ಹಾವೇರಿಯಲ್ಲೊಂದು ಚಿಕಿತ್ಸಾಲಯವು ತೆರೆಯಲ್ಪಡುತ್ತದೆ. ನಂತರದಲ್ಲಿ ಹಿಪ್ಪರಗಿ (Hippargi) ಮತ್ತು ಹಾವೇರಿಯಲ್ಲಿ (Haveri) ಡಾ.

ಸ್ಟೋಕ್ಸ್‌ರವರ (Dr. Stokes) ಕಾಲದಲ್ಲಿ ಉಪಕೇಂದ್ರಗಳನ್ನು ಆರಂಭಿಸಲಾಗುತ್ತದೆ. ಆದರೆ ಸ್ವಲ್ಪ ಕಾಲದ ನಂತರ ಈ ಎರಡೂ ಉಪಚಿಕಿತ್ಸಾ ಕೇಂದ್ರಗಳು ಮುಚ್ಚಲ್ಪಡುತ್ತವೆ. 1920ರ ದಶಕದಲ್ಲಿ ಹುಳಕೋಟ (Hulakati) ಎಂಬಲ್ಲಿ ಒಂದು ಉಪಕೇಂದ್ರವನ್ನು ತೆರೆಯಲಾಗುತ್ತದೆ. ಬೆಟಗೇರಿಯಲ್ಲಿ ವೈದ್ಯಕೀಯ ಸೇವೆ ಸಲ್ಲಿಸಿದ ಪ್ರಮುಖರೆಂದರೆ ಡಾ. ಸ್ಚನೈಟರ್ (Dr. Schneiter), ಪೌಲ್ ವೊಲ್ಯಾಂಡ್ (Powl Voland), ಗ್ರೇಯ್‌ಲೋಜ್ (Greyloz), ಡಾ. ಸ್ಟೋಕ್ಸ್ (Dr. Stokes), (ಇವರು ಬ್ರಿಟಿಷ್ ಮೂಲದವರಾಗಿದ್ದ, ಬಾಸೆಲ್ ಮಿಶನ್ ಸೇವೆಯಲ್ಲಿದ್ದರು) ಡಾ. ಎಮ್ರಿ (Dr. Emery), ಡಾ. ಎಲಿಜಬೆತ್ ಪಿಯೇರೆ (Dr. Elizabeth Petit Pierre), ಡಾ. ಎಡನ್ (Dr. Eden) (ಭಾರತೀಯ ವೈದ್ಯ), ಡಾ. ವವೇರ್‌ಸೀಕ್ (Dr. Waversik), ಡಾ. ಇವಾ ಲೊಂಬಾರ್ಡ್ (Dr. Eva Lambard), ಡಾ. ವೆಂಜರ್ (Dr. Wenger), ಡಾ. ವರ್ನರ್ (Dr. Werner) ಇತ್ಯಾದಿ. ಬೆಟಗೇರಿಗೆ ಮಹಿಳಾ ವೈದ್ಯರ ಆಗಮನದಿಂದಾಗಿ ಇಲ್ಲಿಗೆ ಬರುವ ಮಹಿಳಾ ರೋಗಿಗಳ ಸಂಖ್ಯೆಯು ವೃದ್ಧಿಯಾಗುತ್ತದೆ. ಬಾಸೆಲ್ ಮಿಶನ್ ಕಾಲದಲ್ಲಿ ಬೆಟಗೇರಿಯಲ್ಲಿ ಆರಂಭವಾದ ವೈದ್ಯಕೀಯ ಸೇವೆಯು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲಾವಧಿಯಲ್ಲೂ ಮುಂದುವರಿಯುತ್ತದೆ. ತದನಂತರದ ಕಾಲದಲ್ಲಿ ಇದು ಬೆಳವಣಿಗೆಯನ್ನು ಕಂಡು ಸ್ವಾಯತ್ತತೆಯತ್ತ ಮುಂದುವರಿಯುವುದನ್ನು ಗಮನಿಸಬಹುದು. 1935ರಲ್ಲಿ ಹುಡುಗಿಯರ ಅನಾಥಾಲಯ ಹಾಗೂ ನಿರ್ಗತಿಕ ಮಹಿಳೆಯರ ಆಶ್ರಮವನ್ನು ಆರಂಭಿಸಿ, ಅವರಿಗೆ ಮನೆಯಲ್ಲಿಯೇ ನಡೆಸಬಹುದಾದ ಹಲವು ಕರಕುಶಲ ವಸ್ತುಗಳ ತಯಾರಿಕಾ ಕೌಶಲ್ಯಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಇವರಲ್ಲಿ ಕೆಲವರು ಬೆಟಗೇರಿಯ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿ ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುತ್ತಾರೆ. 1929ರ ಕಾಲಾವಧಿಯಲ್ಲಿ ದಾದಿಯರ ತರಬೇತಿ ಶಾಲೆ (Nurses Training), 1945ರಲ್ಲಿ ಉದ್ಯೋಗಿಗಳ ಮಕ್ಕಳಿಗಾಗಿ ಶಿಶುವಿಹಾರ (Creche School) ವನ್ನು ಸ್ಥಾಪಿಸಲಾಗುತ್ತದೆ.[209] ಹೀಗೆ ಸ್ವತಂತ್ರ ಪೂರ್ವ ಕಾಲದಲ್ಲಿ ಬೆಟಗೇರಿಯಲ್ಲಿನ ಆಸ್ಪತ್ರೆ ವಿಸ್ತೃತವಾಗಿ ಬೆಳೆಯುತ್ತದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆಸ್ಪತ್ರೆಗೆ ಜರ್ಮನ್ ಇಂಜಿನಿಯರ್‌ನ ಸಹಾಯದಿಂದ ಹೊಸ ಕಟ್ಟಡದ ರಚನೆಯಾಗಿ ಫಿಜಿಯೋಥೆರಪಿ ವಿಭಾಗ, 1927ರಲ್ಲಿ ಟಿ.ಬಿ (TB Ward) ವಾರ್ಡ್ ಹಾಗೂ ಹೆರಿಗೆ (Maternity) ವಾರ್ಡ್, 1958ರಲ್ಲಿ ಪುರುಷರ ವಾರ್ಡ್ ಇತ್ಯಾದಿಗಳನ್ನು ಸೇರ್ಪಡೆಗೊಳಿಸಲಾಗುತ್ತದೆ. ಹೀಗೆ ಬೆಟಗೇರಿಯಲ್ಲಿನ ಬಾಸೆಲ್ ಮಿಶನಿನ ವೈದ್ಯಕೀಯ ಸೇವೆಯು 1958ರಲ್ಲಿ 'ಚರ್ಚ್ ಆಫ್ ಸೌತ್ ಇಂಡಿಯಾ' ಕ್ಕೆ ವರ್ಗಾವಣೆಗೊಳ್ಳುತ್ತದೆ. ಇಲ್ಲಿ ಜರ್ಮನ್ ಹಾಗೂ

183. ಕಾನ್ಫರೆನ್ಸ್ ಆಫ್ ಮಿಶನರಿ ಸೊಸೈಟೀಸ್ ಇನ್ ಗ್ರೇಟ್ ಬ್ರಿಟನ್ ಆ್ಯಂಡ್ ಐರ್‌ಲ್ಯಾಂಡ್, *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ 39, ಡಿಸೆಂಬರ್ 1919, ನಂ. 12, ಪುಟ 477–478. ಜಯಪ್ರಕಾಶ್ ರಾಘವಯ್ಯ, *ಪೂರ್ವೋಕ್ತ*, ಪುಟ 50. ಪೀಟರ್ ವಿಲ್ಸನ್ ಪ್ರಭಾಕರ, *ಪೂರ್ವೋಕ್ತ*, ಪುಟ 269–270. ಜಿ. ಓ. ನಂ. 145, ಮಿಸಲೇನಿಯಸ್, ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, 11 ನೇ ಫೆಬ್ರವರಿ, 1925, ಪುಟ 1–2.

ಕಾಮನ್ ವೆಲ್ತ್ ಟ್ರಸ್ಟ್‌ನ ಪ್ರಾರಂಭದ ಸದಸ್ಯರುಗಳೆಂದರೆ, ಜೆ. ಹೆಚ್. ಓಲ್ಡ್‌ಹಾಮ್ (J. H. Oldham, chairman); ಜಿ. ಜೆ. ಬಾರ್‌ಬರ್ (G. J. Barbour); ರೆವೆ. ಡಬ್ಲ್ಯೂ. ಗೌಡ್ಯೆ (Rev. W. Goudie); ಲಾರ್ಡ್ ಮೇಸ್ಟನ್ (Lord Meston); ಚಾರ್ಲ್ಸ್ ಹೆಚ್. ರೋಬರ್ಸ್ (Charles H. Robers); ಸರ್. ಮೈಕಲ್ ಸ್ಯಡ್ಲರ್ (Sir. Michael Sadler); ಎ. ಎಲ್. ಸ್ಮಿತ್ (A. L. Smith); ಸರ್. ಅರ್ಥರ್ ಸ್ಟೀಲ್ ಮೈಟ್‌ಲ್ಯಾಂಡ್ (Sir. Arthur Steel Maitland); ಸರ್. ರೋಬರ್ಟ್ ವಿಲಿಯಮ್ಸ್ (Sir. Robert Williams) ಮತ್ತು ಅಲ್ಬರ್ಟ್ ಮನ್ಸ್ ಬ್ರೀಡ್ಜ್ (Albert Mansbridge).

184. ವಿಲಿಯಂ ಜೆ. ಡಂನ್‌ಕರ್, *ಪ್ರಾಫಿಟ್ ಫಾರ್ ದಿ ಲಾರ್ಡ್*, ಗ್ರ್ಯಾಂಡ್ ರ್‍ಯಾಪಿಡ್ಸ್, ಮಿಚ್ಚಿಗನ್, ಡಬ್ಲ್ಯೂ. ಬಿ. ಇರ್ಡ್ಮ್ಯಾನ್ಸ್ ಪಬ್ಲಿಕೇಶನ್, 1971, ಪುಟ 111–112.

185. ಅದೆ, ಪುಟ 114.

186. ಬಾಸೆಲಿನ ವ್ಯಾಪಾರ ಮಂಡಳಿಯವರ ಇಂಡಿಯದ ಆಸ್ತಿಯ ವಿಚಾರವು, *ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 22, 16ನೇ ಮೆ, 1929, ಮಂಗಳೂರು, ಪುಟ 177.

187. ವಿಲಿಯಂ ಜೆ. ಡಂನ್‌ಕರ್, *ಪೂರ್ವೋಕ್ತ*, ಪುಟ 116–119.

188. ಅದೆ, ಪುಟ 121–122.

Union Trading company Ltd. Operates a Kaleidoscopic variety of business enterprises in Ghana, Nigeria, Cameroun and Liberia. In Accra, it owns one of the best department stores on the whole west coast of Africa, a large five-story structure.

189. ಎಲ್. ಜೆ. ಸಮರ್ಥಾ, *ಪೂರ್ವೋಕ್ತ*, ಪುಟ 25.

190. ಪಿ. ಇ. ಬುರ್ಖಾರ್ಟ್, ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರಿಗೆ ಆಫ್ರಿಕದಲ್ಲಿ ಮಿಶನು ಸೇವೆ ನಡೆಸುವ ಬಗ್ಗೆ ಆದ ಕರಹ, *ಕ್ರೈಸ್ತ ಹಿತವಾದಿ*, ಸಂಪಾದಕ: ಪೆಡ್ರಿಕ್ ಜತ್ತನ್ನ, ಸಂಪುಟ 1, ಸಂಚಿಕೆ 3, ಮಂಗಳೂರು, ಸೆಪ್ಟೆಂಬರ್ 1924, ಪುಟ 44.

191. ಅದೆ, ಪುಟ 44–45.

192. ಜಿಲ್ಲಾ ಸರ್ವಹಿರಿಯರ ವಾರ್ಷಿಕ ಸಮ್ಮೇಳನವು, *ಕ್ರೈಸ್ತ ಹಿತವಾದಿ*, ಸಂಪಾದಕ: ಪೆಡ್ರಿಕ್ ಜತ್ತನ್ನ, ಸಂಪುಟ 1, ಸಂಚಿಕೆ 4, ಮಂಗಳೂರು, ಅಕ್ಟೋಬರ್, 1924, ಪುಟ 58–59.

193. ಜಿಲ್ಲಾ ಸರ್ವ ಹಿರಿಯರ ಸಾಂವತ್ಸರಿಕ ಸಮ್ಮೇಳನವು, *ಕ್ರೈಸ್ತಹಿತವಾದಿ*, ಸಂಪಾದಕ: ಪೆಡ್ರಿಕ್ ಜತ್ತನ್ನ, ಸಂಪುಟ 2, ಸಂಚಿಕೆ 3, ಮಂಗಳೂರು, ಸೆಪ್ಟೆಂಬರ್, 1925, ಪುಟ 40.
ದೇಶಿಯ ಮಿಶನಿನ ಬೋರ್ಡಿಗೆ ಆರಿಸಲ್ಪಟ್ಟ 7 ಸದಸ್ಯರುಗಳೆಂದರೆ: ಆರ್. ಡಿ. ಸತ್ಯವ್ರತ, ಲೆಮುವೇಲ್ ಸೋನ್ಸ್, ರೊಡೊಲ್ಫ್ ಸತ್ಯವ್ರತ, ಪೌಲ್ ಸೋನ್ಸ್, ಜೋಸೆಫ್ ಪ್ರಮೋದನ, ಗಾಬ್ರಿಯೇಲ್ ಜೋನ್ ಮತ್ತು ಕ್ರಿಸ್ತಾನಂದ ಸಾಲಿಸ್.

194. ಜಿಲ್ಲಾ ಸರ್ವಹಿರಿಯರ ವಾರ್ಷಿಕ ಸಮ್ಮೇಳನವು, *ಪೂರ್ವೋಕ್ತ*, ಪುಟ 58.

195. ಜಿಲ್ಲಾ ಸರ್ವಹಿರಿಯರ ಸಾಂವತ್ಸರಿಕ ಸಮ್ಮೇಳನವು, *ಪೂರ್ವೋಕ್ತ*, ಪುಟ 39–40.

196. *ಸಿ. ಎಸ್. ಐ. ಭೆತಾನೀಯ ಚರ್ಚ್, ಪರ್ಪಳೆ, ಸೆಂಟಿನರಿ ಸವೆನಿರ್*, ಕಾರ್ಕಳ, 1971, ಪುಟ 24–25.

197. ಪೀಟರ್ ವಿಲ್ಸನ್ ಪ್ರಭಾಕರ್, *ದಿ ಬಾಸೆಲ್ ಮಿಶನ್ ಇನ್ ಸೌತ್ ಕೆನರಾ (1834–1947)*, ಜೂನ್ 1988, ಪುಟ 209–210.

198. ಜಿ. ಓ. ನಂ. 366, ಪೂರ್ವೋಕ್ತ, ಪುಟ 16–17.

199. ಮದ್ರಾಸ್ ಪ್ರಾಂತ್ಯದಲ್ಲಿದ್ದ ಬಾಸೆಲ್ ಮಿಶನಿನ ಶೈಕ್ಷಣಿಕ ಸಂಸ್ಥೆಗಳಿಗೆ ಅದು ಮಾಡುತ್ತಿದ್ದ ಖರ್ಚುವೆಚ್ಚ

ಶಾಲೆಗಳು	ಸಂಖ್ಯೆ	ಒಟ್ಟು ವೆಚ್ಚ	ಶುಲ್ಕ	ಅನುದಾನ	ಮಿಶನ್ ಮಾಡುತ್ತಿದ್ದ ವೆಚ್ಚ
ಹುಡುಗರ ಸೆಕೆಂಡರಿ ಶಾಲೆಗಳು	11	1,05,164	72,542	16,205	16,417
ಹುಡುಗಿಯರ ಸೆಕೆಂಡರಿ ಶಾಲೆಗಳು	02	12,625	3,728	4,084	4,813
ಹುಡುಗರ ಪ್ರಾಥಮಿಕ ಶಾಲೆಗಳು	136	83,681	12,933	28,338	42,410
ಹುಡುಗಿಯರ ಪ್ರಾಥಮಿಕ ಶಾಲೆಗಳು	14	11,549	1,037	3,848	6,664

ಕಾಲೇಜು	1	23,718	14,351	4,047	5,320
ಟ್ರೈನಿಂಗ್ ಶಾಲೆ	1	6,517	–	3,647	2,870
ಒಟ್ಟು	165	2,43,254	1,04,591	60,169	78,494

200. ಜಿ. ಓ. ನಂ. 366, ಪೂರ್ವೋಕ್ತ, ಪುಟ 17.

201. ಅದೆ, ಪುಟ 18. ಪೀಟರ್ ವಿಲ್ಸನ್ ಪ್ರಭಾಕರ್, *ಪೂರ್ವೋಕ್ತ*, ಪುಟ 263. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ–XXXVI, ನಂ. 12, ಡಿಸೆಂಬರ್ 1916, ಪುಟ 460.

202. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ -XXXVII, ನಂ. 7, ಜುಲೈ, 1917, ಪುಟ 281–282.

203. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ -XXXVIII, ನಂ. 7, ಆಗಸ್ಟ್ 1918, ಪುಟ 321–322.

204. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ -XXXIX , ನಂ. 11, ನವೆಂಬರ್ 1919, ಪುಟ 441–442.

205. ರಿಪೋರ್ಟ್ ಆಫ್ ದಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಮಿಟಿ ಪೋರ್ ದಿ ಇಯರ್ ಎಂಡ್ಡಿಂಗ್, ಜುಲೈ 31, 1924, *ಪೂರ್ವೋಕ್ತ*, ಪುಟ 485.

206. ಡಾ. ಡೆನಿಸ್ ಫೆರ್ನಾಂಡಿಸ್, *ದಿ ತುಳು ವರ್ಲ್ಡ್ ಇನ್ ಯುರೋಪಿಯನ್ ರೈಟಿಂಗ್ಸ್*, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್. ಡಿ. ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, 2006, ಪುಟ 215–216.

207. ಜಿ. ಓ. ನಂ. 366, ಪೂರ್ವೋಕ್ತ, ಪುಟ 19.

208. ಇವ ಬೆಲ್, ಮೆಡಿಕಲ್ ವರ್ಕ್ ಆಫ್ ದಿ ಬಾಸೆಲ್ ಮಿಶನ್ ಇನ್ ಇಂಡಿಯಾ, *ಹೋಲಿನೆಸ್ ಇನ್ ಕ್ರೈಸ್ಟ್*, ಗೋಡ್ವಿನ್ ಶಿರಿ (ಸಂಪಾದಕ), ಕತ್ರಿ ಪಬ್ಲಿಕೇಶನ್, ಮಂಗಳೂರು, 1985, ಪುಟ 244–245.

209. ಅದೆ, ಪುಟ 248–250. ಡಾ. ಸ್ಟೆನಯ್‌ಟರ್ ಹಾಗೂ ಪೌಲ್ ವ್ಹೊಲ್ಯಾಂಡ್ ಕಾಲೆರಾ ರೋಗಕ್ಕೆ ಬಲಿಯಾಗುತ್ತಾರೆ.

210. ಅದೆ, ಪುಟ 251–252.

211. *ಮ್ಯಾಂಗಲೋರ್ ಮ್ಯಾಗಜೀನ್*, ಸಂಪುಟ 2, ನಂ. 2, 1903, ಕೊಡ್ಯಾಲ್ ಬೈಲ್ ಪ್ರೆಸ್, ಮಂಗಳೂರು, ಪುಟ 144.

212. ಪೀಟರ್ ವಿಲ್ಸನ್ ಪ್ರಭಾಕರ್, *ಪೂರ್ವೋಕ್ತ*, ಪುಟ 164–165. ಇವಾ ಬೆಲ್, *ಪೂರ್ವೋಕ್ತ*, ಪುಟ 252–254.

213. ಪೀಟರ್ ವಿಲ್ಸನ್ ಪ್ರಭಾಕರ್, *ಪೂರ್ವೋಕ್ತ*, ಪುಟ 173–174.

Hospital received donation from the following different foreign sources. Basel Mission; Diakonissen Hans Hans Stuttgart; Bread of Brethren; C.A.S.A; Bread for the World; Supentag; St Elizabeth and Titus Churches of Switzerland; Christoffel Blinden mission, West Germany; SIMAVI, Holland; The Muncipal Council of state of Basel, Switzerland; The Kindernothilfe, West Germany; Women's prayer Group of Bahrain National church etc.

The hospital has also received donation from some of the Indian sources, such as Christian Medical Association of India, south Kanara and coorg area churches of Karnataka, united Basel mission churches in Bombay, the local Jaycees, the Lions Club, the Rotary Club and from some of the Individual donors.

ಅಧ್ಯಾಯ: ಮೂರು

ಬಾಸೆಲ್ ಮಿಶನರಿಗಳ ಪುನರ್ ಆಗಮನ (1927–1939)

ಅಧ್ಯಾಯ: ಮೂರು
ಬಾಸೆಲ್ ಮಿಶನರಿಗಳ ಪುನರ್ ಆಗಮನ (1927–1939)

1ನೇ ಜುಲೈ 1927ರಂದು ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಬಾಸೆಲ್ ಮಿಶನಿಗೆ ಅದರ ಮೊದಲಿನ ಮಿಶನ್ ಠಾಣ್ಯಗಳಾದ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠಗಳ ಜವಾಬ್ದಾರಿಯನ್ನು ಹಸ್ತಾಂತರಿಸುತ್ತದೆ. ಈ ರೀತಿ ತನ್ನಿಂದ ಮಿಶನ್ ಕೆಲಸ ತಪ್ಪಿ ಹೋಗಬಹುದು ಎಂಬ ನಿರೀಕ್ಷೆಯು ಮಾಡದೇ ಇದ್ದ ಸಂದರ್ಭದಲ್ಲಿ, ಮಿಶನ್ ಠಾಣ್ಯಗಳನ್ನು ಕಳಕೊಂಡ 12 ವರ್ಷಗಳ ಬಳಿಕ, ಸಂದಿಗ್ಧ ಹಾಗೂ ಕಠಿಣ ಪರಿಸ್ಥಿತಿಯ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಇಲ್ಲಿನ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತದೆ. ಬಾಸೆಲ್ ಮಿಶನ್ ಭಾರತದಲ್ಲಿನ ಮಿಶನ್ ಪ್ರದೇಶಗಳಿಗೆ ಮರಳಿ ಬರಲು ಹಲವು ವಿಚಾರಗಳು ಪೂರಕವಾಗಿ ಕಾರ್ಯ ನಿರ್ವಹಿಸಿವೆ. ಸುಮಾರು 200 ವರ್ಷಗಳಷ್ಟು ಕಾಲ ಜರ್ಮನ್ ಮಿಶನ್‌ಗಳು ಬ್ರಿಟಿಷ್ ವಸಾಹತುಗಳಲ್ಲಿ ಸುಭದ್ರವಾಗಿ, ಬ್ರಿಟಿಷ್ ಬೆಂಬಲದೊಂದಿಗೆ ಅಭಿವೃದ್ಧಿಯನ್ನು ಕಂಡಿರುತ್ತವೆ. ಜರ್ಮನ್ ಮಿಶನ್‌ಗಳು ಬ್ರಿಟಿಷ್ ವಸಾಹತು ವ್ಯವಸ್ಥೆಗೆ ಹಾಗೂ ಅದರ ಆಸಕ್ತಿಗಳಿಗೆ ಅಧೀನವಾಗಿಯೇ ಇದ್ದವು. ಬಾಸೆಲ್ ಮಿಶನ್ ಭಾರತದಲ್ಲಿ ಬ್ರಿಟಿಷ್ ಅಧಿಕಾರಿ ವರ್ಗದಿಂದ ಬಹಳಷ್ಟು ಬೆಂಬಲವನ್ನು ಪಡೆದಿತ್ತು ಹಾಗೂ ಅದರೊಂದಿಗೆ ಬಹಳಷ್ಟು ಸಹಕಾರದಿಂದ ಇತ್ತು. ಆದರೆ ಯುದ್ಧದ ಕಾಲಾವಧಿಯಲ್ಲಿ ಅದರ ಮೇಲೆ ನಿರ್ಬಂಧವನ್ನು ಹೇರಲಾಗುತ್ತದೆ. ಯುದ್ಧ ಮುಗಿದ ಮೇಲೆ ಬ್ರಿಟಿಷ್ ಸರಕಾರ ಜರ್ಮನ್ ಮಿಶನರಿಗಳ ಮೇಲಿನ ನಿರ್ಬಂಧವನ್ನು ನಿಧಾನವಾಗಿ ಸಡಿಲಿಸುವ ಚಿಂತನೆಯನ್ನು ಆರಂಭಿಸುತ್ತದೆ. 1921ರಲ್ಲಿ ಬ್ರಿಟಿಷ್ ವಸಾಹತುಗಳಲ್ಲಿ ಮೊದಲು ಕಾರ್ಯನಿರ್ವಹಿಸಿದ್ದ, ಅಪರಾಧಕ್ಕೊಳಗಾದ ಜರ್ಮನ್ ಮಿಶನರಿಗಳು ಪುನಃ ಬ್ರಿಟಿಷ್ ವಸಾಹತುಗಳಲ್ಲಿ ಕಾರ್ಯ ನಿರ್ವಹಿಸಲು ಅನುಮತಿ ಕೇಳಿದರೆ ಅದನ್ನು ಪರಿಶೀಲಿಸಲಾಗುವುದು. ಆದರೆ ಜರ್ಮನ್ ಮಿಶನರಿಗಳು ಬ್ರಿಟಿಷ್ ವಸಾಹತುಗಳಲ್ಲಿ ಬ್ರಿಟಿಷ್ ಅಥವಾ ಅದರ ಮಿತ್ರ ರಾಷ್ಟ್ರಗಳ ಮಿಶನರಿ ಸಂಘದ ಮೂಲಕ ಮುಂದುವರಿದು, ಅವರ ನಿಯಂತ್ರಣದಲ್ಲಿರಬೇಕಾಗುತ್ತದೆ ಎಂದು 'ವಿನ್ಸೆಂಟ್ ಚರ್ಚಿಲ್'ರವರು ಹೇಳಿಕೆಯನ್ನು ನೀಡುತ್ತಾರೆ.[1] ಹೀಗೆ 1922ರಲ್ಲಿ ಬ್ರಿಟಿಷ್ ಸರಕಾರವು ಭಾರತಕ್ಕೆ ಜರ್ಮನ್ ಮಿಶನರಿಗಳನ್ನು ಪ್ರವೇಶಿಸಲು ಅವಕಾಶ ಮಾಡಿಕೊಡುವ ಸಲುವಾಗಿ ಕೆಲವು ಶರತ್ತುಗಳನ್ನು ವಿಧಿಸುತ್ತದೆ. ಆದರೆ ಯುದ್ಧಕಾಲದಲ್ಲಿ ಜರ್ಮನ್ ಮಿಶನರಿ ಸಂಘಗಳ ಮೇಲೆ ವಿಧಿಸಿದ ನಿರ್ಬಂಧವನ್ನು ಮುಂದುವರಿಸುತ್ತದೆ ಹಾಗೂ ಯಾವುದಾದರೂ ಮಿಶನ್ ಪ್ರದೇಶವು ಮಿಶನರಿಗಳ ಕೊರತೆಯನ್ನು ಎದುರಿಸಿ, ಸಂಕಷ್ಟವನ್ನು ಅನುಭವಿಸುತ್ತಿದ್ದರೆ, ಅಂತಹ ಪ್ರದೇಶಗಳಿಗೆ ಜರ್ಮನ್ ಮಿಶನರಿಗಳು ತೆರಳಲು ಅವಕಾಶವನ್ನು ಕಲ್ಪಿಸುತ್ತದೆ.[2]

ಜರ್ಮನ್ ಮಿಶನ್‌ಗಳ ವರ್ತನೆ:

ಬ್ರಿಟಿಷ್ ಸರಕಾರ ತನ್ನ ವಸಾಹತುಗಳಲ್ಲಿ ಜರ್ಮನ್ ಮಿಶನರಿಗಳಿಗೆ ತೆರಳಲು ಅವಕಾಶ ಕಲ್ಪಿಸಿದರೂ, 1920ನೇ ದಶಕದ ಪ್ರಾರಂಭದಲ್ಲಿ ಜರ್ಮನ್ ಮಿಶನ್‌ಗಳು ಅಂತಾರಾಷ್ಟ್ರೀಯ ಮಿಶನರಿ ವ್ಯವಸ್ಥೆಯಿಂದ ದೂರವೇ ಉಳಿಯುತ್ತವೆ. ಜರ್ಮನ್ ಮಿಶನರಿಗಳು ನಿರ್ವಹಿಸುತ್ತಿದ್ದ ಕಾರ್ಯವನ್ನು ಅವರಿಗೆ ಸಂಪೂರ್ಣವಾಗಿ ಹಸ್ತಾಂತರ ಮಾಡುವವರೆಗೆ ಅಂತಾರಾಷ್ಟ್ರೀಯ ಮಿಶನರಿ ಸಭೆಗಳಲ್ಲಿ ಭಾಗವಹಿಸುವುದಿಲ್ಲ ಎಂಬುದಾಗಿಯೂ ಜರ್ಮನ್ ಮಿಶನ್‌ಗಳು ಸ್ಪಷ್ಟಪಡಿಸುತ್ತವೆ.[3] ಇಂತಹ ಸನ್ನಿವೇಶದಲ್ಲಿ ಬ್ರಿಟಿಷ್ ಸರಕಾರ ತನ್ನ ವಸಾಹತುಗಳಿಗೆ ಜರ್ಮನ್ ಮಿಶನರಿಗಳ ಪ್ರವೇಶಕ್ಕೆ ಅನುವು ಮಾಡಿ ಕೊಡಲಾಗುವುದು ಎಂಬ ವಿಚಾರವು ಇನ್ನಷ್ಟು ಇಕ್ಕಟ್ಟಿನ ಸಮಸ್ಯೆಗಳಿಗೆ ಕಾರಣವಾಯಿತ್ತೆನ್ನಬಹುದು. ಏಕೆಂದರೆ ಮೊದಲನೆಯದಾಗಿ ಜರ್ಮನ್ ಮಿಶನರಿಗಳನ್ನು ಬೇರೆ ಸೊಸೈಟಿಗಳ ಮೂಲಕ ತಮ್ಮ ಮಿಶನ್ ಪ್ರದೇಶಗಳಿಗೆ ಕಳುಹಿಸಲು ಜರ್ಮನ್ ಮಿಶನ್‌ಗಳು ಹಿಂದೇಟು ಹಾಕಿರುವುದು. ಎರಡನೆಯದಾಗಿ ಜಾಗತಿಕ ಯುದ್ಧದ ಸಂದರ್ಭದಲ್ಲಿ ಹಲವು ಬದಲಾವಣೆಗಳನ್ನು ಕಂಡಿದ್ದ ಮಿಶನ್ ಪ್ರದೇಶಗಳ ಜನರನ್ನು ಸಂಪರ್ಕಿಸಿ, ಅವರ ಅಭಿಪ್ರಾಯವನ್ನೂ ಸಂಗ್ರಹಿಸಬೇಕಿತ್ತು. ಹಾಗೂ ಮೂರನೆಯದಾಗಿ ಜರ್ಮನ್ ಮಿಶನರಿಗಳು ಯಾವ ಬೇರೆ ಮಿಶನ್‌ಗಳ ಮೂಲಕ ತೆರಳಬೇಕು ಎಂಬುದನ್ನು ನಿರ್ಣಯಿಸಿ ಅವರನ್ನು ಸಂಪರ್ಕಿಸಿ ಒಪ್ಪಿಗೆ ಪಡೆಯಬೇಕಿತ್ತು. ಈ ರೀತಿ ಜರ್ಮನ್ ಮಿಶನರಿಗಳಿಗೆ ತಮ್ಮ ಹಳೆಯ ಠಾಣ್ಯಗಳಿಗೆ ತೆರಳಲು, ಬ್ರಿಟಿಷ್ ಸರಕಾರ ನೀಡಿದ ಅವಕಾಶವು ಮಿಶನರಿಗಳಿಗೆ ಇಕ್ಕಟ್ಟಿನ ಪರಿಸ್ಥಿತಿಯನ್ನು ತಂದೊಡ್ಡುತ್ತದೆ. ಈ ರೀತಿ ಬ್ರಿಟಿಷ್ ಸರಕಾರದ ಅನುಮತಿಯನ್ನು ಬಳಸಿಕೊಂಡು ಹಾಗೂ ಭಾರತದಲ್ಲಿನ ಪೂರಕ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಬಾಸೆಲ್ ಮಿಶನರಿಗಳು ಮಲಬಾರ್ ಮಿಶನ್ ಪ್ರದೇಶವನ್ನು ಪ್ರವೇಶಿಸಲು ಯಶಸ್ವಿಯಾಗುತ್ತಾರೆ.

ಮಲಬಾರಿಗೆ ಬಾಸೆಲ್ ಮಿಶನರಿಗಳ ಪುನರ್ ಆಗಮನ:

ಸೌತ್ ಇಂಡಿಯಾ ಯುನೈಟೆಡ್ ಚರ್ಚ್ 1920ರಲ್ಲಿಯೇ ಮಲಬಾರಿನ ಮಿಶನ್ ಕೆಲಸವನ್ನು ತನ್ನಿಂದ ಮುಂದುವರಿಸಲು ಸಾಧ್ಯವಾಗುವುದಿಲ್ಲವೆಂದು ಜರ್ಮನ್ ಮಿಶನ್ ಕಮಿಟಿಯವರಿಗೆ ತಿಳಿಸುತ್ತದೆ.[4] ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜರ್ಮನ್ ಮಿಶನ್ ಕಮಿಟಿ ಬಾಸೆಲ್ ಮಿಶನನ್ನು ಸಂಪರ್ಕಿಸಿ ಮಲಬಾರ್‌ನ್ನು ಪುನಃ ವಹಿಸಿಕೊಳ್ಳುವಂತೆ ಕೇಳಿಕೊಳ್ಳುತ್ತದೆ. ಈ ಆಹ್ವಾನವನ್ನು ಬಾಸೆಲ್ ಮಿಶನ್ ಒಪ್ಪಿಕೊಳ್ಳುವುದು ಮಾತ್ರವಲ್ಲದೇ, ಬ್ರಿಟಿಷ್ ಸರಕಾರ ತನ್ನ ಹೇಳಿಕೆಯಂತೆ ಬಾಸೆಲ್ ಮಿಶನರಿಗಳು ಮಲಬಾರ್‌ಗೆ ಬರಲು ಅವಕಾಶವನ್ನು ನೀಡುತ್ತದೆ. 1924ರಲ್ಲಿ ಬ್ರಿಟಿಷ್ ಸರಕಾರ ಹಾಗೂ ಭಾರತ ಬ್ರಿಟಿಷ್ ಸರಕಾರವು ಬಾಸೆಲ್ ಮಿಶನರಿಗಳಾದ ಜರ್ಮನ್

ಮೂಲದ ರೆವೆ.ಸೆಂಗ್ಲೆ ಮತ್ತು ಅವರ ಪತ್ನಿ, ಅದೇ ರೀತಿ ಸ್ವಿಸ್‌ರಾದ ರೆವೆ.ಅಡೊಲ್ಫ್ ಸ್ಟ್ರೆಕೆನ್ಸನ್‌ರವರಿಗೆ [Rev. and Mrs. Sengle; Rev. Adolph Streckeisen] ಮಲಬಾರಿಗೆ ಬರಲು ಅವಕಾಶವನ್ನು ಕಲ್ಪಿಸುತ್ತದೆ. ಈ ಮಿಶನರಿಗಳು ಲಂಡನ್ ಮಿಶನರಿ ಸೊಸೈಟಿಯ ಮೂಲಕ, ಅದರ ಮಾರ್ಗದರ್ಶನದಲ್ಲಿ ಮಲಬಾರ್ ಚರ್ಚ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸಬೇಕಾಗಿತ್ತು. ಸೆಂಗ್ಲೆ ಮತ್ತು ಅವರ ಪತ್ನಿ, ಯುದ್ಧದ ಮೊದಲು ಮಲಬಾರ್‌ನಲ್ಲಿ ಕಾರ್ಯ ನಿರ್ವಹಿಸಿದ್ದರು. ಬಾಸೆಲ್ ಮಿಶನರಿಗಳು ಪುನಃ ಮರಳುವಂತಾಗಲು ಜೆ.ಎಚ್.ಬಲ್ಡಾಹಾಮ್ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ.[5] ಅದೇ ರೀತಿ ಲಂಡನ್ ಮಿಶನರಿ ಸೊಸೈಟಿಯು ಅದರ ಸಹಾಯವನ್ನು ನೀಡಿರುತ್ತದೆ. ರೆವೆ.ಸೆಂಗ್ಲೆ, ಅವರ ಪತ್ನಿ ಮತ್ತು ಸ್ಟ್ರೆಕೆನ್ಸನ್‌ರವರನ್ನು ಬರೇ ಧಾರ್ಮಿಕ ಕಾರ್ಯದಲ್ಲಿ ಸೇವೆ ನಡೆಸಲು ಮಲಬಾರಿಗೆ ಬರಲು ಬ್ರಿಟಿಷ್ ಸರಕಾರ ಅನುಮತಿಯನ್ನು ನೀಡಿತ್ತು. ಈ ಮಿಶನರಿಗಳ ಎಲ್ಲಾ ಖರ್ಚನ್ನು ಬಾಸೆಲ್ ಮಿಶನ್ ನಿರ್ವಹಿಸಿತ್ತು.[6] 1924, ಸೆಪ್ಟೆಂಬರ್ 22ರಂದು ಬಾಸೆಲ್ ಜರ್ಮನ್ ಮಿಶನರಿಗಳಾದ ರೆವೆ. ಸೆಂಗ್ಲೆ, ಅವರ ಪತ್ನಿ ಮತ್ತು ರೆವೆ. ಸ್ಟ್ರೆಕೆನ್ಸನ್ ರವರು ಮಲಬಾರ್‌ನ್ನು ತಲುಪುತ್ತಾರೆ (ಕಲ್ಲಿಕೋಟೆಗೆ). ಇವರುಗಳನ್ನು ಮಿಶನ್ ಕಾರ್ಯದರ್ಶಿಯಾಗಿದ್ದ ರೆವೆ.ಜಿ.ಇ. ಫಿಲಿಪ್ಸರವರು ಸ್ವಾಗತಿಸುತ್ತಾರೆ. ಅಲ್ಲಿನ ಕ್ರೈಸ್ತರು ಈ ಬಾಸೆಲ್ ಮಿಶನರಿಗಳನ್ನು ಅದ್ದೂರಿಯಿಂದ ಸ್ವಾಗತಿಸುತ್ತಾರೆ. ಸ್ವಾಗತವನ್ನು ಸ್ವೀಕರಿಸಿ ಮಾತನಾಡಿದ ಸೆಂಗ್ಲೆಯವರು ತಮಗಾದ ಸಂತೋಷವನ್ನು ತೋರ್ಪಡಿಸಿ, ಬ್ರಿಟಿಷರ ಉಪಕಾರ ಸ್ಮರಣೆ ಮಾಡುವುದನ್ನು ಮರೆಯಲಿಲ್ಲ.[7] 1925ರಲ್ಲಿಯೂ ಹಲವು ಬಾಸೆಲ್ ಮಿಶನರಿಗಳನ್ನು, ಬಾಸೆಲ್ ಮಿಶನ್ ಮಲಬಾರಿಗೆ ಕಳುಹಿಸುವ ತಯಾರಿಯನ್ನು ಮುಂದುವರಿಸುತ್ತದೆ. ಹೊನ್ನಾವರದಲ್ಲಿದ್ದ ರೆವೆ.ಎ.ಮಂಚ್, ಮೊದಲು ತಲಚೇರಿಯಲ್ಲಿದ್ದ ರೆವೆ.ಜಿ. ಲುಬ್ಕೆ ಎಂಬ ಜರ್ಮನ್ ಮಿಶನರಿಗಳನ್ನು ಕಳುಹಿಸುವ ತಯಾರಿಯನ್ನು ನಡೆಸುತ್ತದೆ. ಹೀಗೆ ಮುಂದೆ ಮಲಬಾರನ್ನು ಬಾಸೆಲ್ ಮಿಶನ್ ಮರಳಿ ತೆಗೆದುಕೊಳ್ಳುವ ಲಕ್ಷಣಗಳು ಗೋಚರಿಸಲು ಆರಂಭಿಸುತ್ತವೆ.[8] 1925 ಡಿಸೆಂಬರ್‌ನಲ್ಲಿ ಬಾಸೆಲ್‌ನಿಂದ ಸ್ಟ್ರಾಸರ್ ಎಂಬ ಯೌವನ ಮಿಶನರಿ, 1926ರ ಜನವರಿಯಲ್ಲಿ ಮಲಬಾರಿನಲ್ಲಿ ಮೊದಲು ಬಹಳ ಪ್ರಸಿದ್ಧಿ ಪಡೆದಿದ್ದ ರೆವೆ. ಲುಬ್ಕೆಯವರು, ಅವರ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಮಲಬಾರ್‌ಗೆ ಬಂದು ಕಾರ್ಯವನ್ನು ಆರಂಭಿಸುತ್ತಾರೆ. ರೆವೆ. ಮಂಚ್‌ರವರು 1926ರ ಮೇ ತಿಂಗಳಲ್ಲಿ ಮಲಬಾರ್‌ಗೆ ಆಗಮಿಸುತ್ತಾರೆ. ಲುಬ್ಕೆಯವರು ಕಲ್ಲಿಕೋಟೆಯಲ್ಲಿರುವ ವಿದ್ಯಾ ಇಲಾಖೆಯಲ್ಲಿ ಕಾರ್ಯವನ್ನು ಆರಂಭಿಸುತ್ತಾರೆ. ಮಂಚ್‌ರವರು ಪಾಲಘಾಟ್‌ನಲ್ಲಿ ಕಾರ್ಯವನ್ನು ಆರಂಭಿಸುತ್ತಾರೆ. ಮಲಬಾರ್‌ನಲ್ಲಿನ ಥಿಯೋಲೊಜಿಕಲ್ ಸೆಮಿನರಿಯನ್ನು ತೆರೆಯಬೇಕೆಂಬುದಾಗಿ ರೆವೆ. ಸೆಂಗ್ಲೆಯವರು ಪ್ರಯತ್ನವನ್ನು

ಆರಂಭಿಸುತ್ತಾರೆ.[9] ಈ ರೀತಿಯಾಗಿ ಮಲಬಾರ್‌ಗೆ ಬಾಸೆಲ್ ಮಿಶನರಿಗಳು ತಿರುಗಿ ಬರುವುದರೊಂದಿಗೆ ಮಿಶನ್ ಕೆಲಸವು ಪ್ರಬಲಗೊಳ್ಳಲು ಆರಂಭವಾಗುತ್ತದೆ.

1926ರಲ್ಲಿ ಮಲಬಾರ್ ಬಾಸೆಲ್ ಮಿಶನ್ ಸಂಘದ ಕೈಕೆಳಗೆ ಬರುತ್ತದೆ. 1926ರ ಅಕ್ಟೋಬರ್ 3ರಂದು (ಆದಿತ್ಯವಾರ) ಬಾಸೆಲ್ ಮಿಶನ್ ಸಂಘದವರು ಹಿಂತೆರಳಿ ಬಂದು ಮಲಬಾರ್‌ನಲ್ಲಿ ಕೆಲಸ ಮಾಡುವುದಕ್ಕೆ ಸರಕಾರ ಅನುಮತಿ ನೀಡಿರುವುದನ್ನು ಮಲಬಾರ್‌ನ ಎಲ್ಲಾ ಸಭೆಗಳಲ್ಲಿ ಪ್ರಾರ್ಥನಾ ಕೂಟಗಳೊಂದಿಗೆ, ವಿಶೇಷ ದಿನವಾಗಿ ಆಚರಿಸಲಾಗುತ್ತದೆ. 1926 ಅಕ್ಟೋಬರ್ 7ರಂದು ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ಅದರ ಪ್ರತಿನಿಧಿ ವೈಟ್ [Whyte] ಮತ್ತು ಅದರ ಆಲೋಚನಾ ಸಭೆಯಾದ ಮಲಬಾರ್ ಸಬ್ ಕಮಿಟಿಯು ಮಲಬಾರ್‌ನ ಮಿಶನ್ ಕೆಲಸವನ್ನು ಬಾಸೆಲ್ ಮಿಶನಿಗೆ ವಹಿಸಿಕೊಡುತ್ತದೆ.[10] 1926ರ ಕಾಲಾವಧಿಗಾಗುವಾಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬ್ರಿಟಿಷ್ ನೀತಿಗಳು ಬದಲಾಗಲು ಆರಂಭವಾಗುತ್ತವೆ. ಆದುದರಿಂದ ಬಾಸೆಲ್ ಮಿಶನ್ ಸೇರಿದಂತೆ, ಜರ್ಮನ್ ಮಿಶನ್‌ಗಳಿಗೆ ಸಂಬಂಧಿಸಿದಂತೆ ಬ್ರಿಟಿಷ್ ಸರಕಾರ ತನ್ನ ವಸಾಹತುಗಳಿಗೆ ಈ ಮಿಶನ್‌ಗಳು ತಮ್ಮ ಕಾರ್ಯ ಮಾಡುವಂತೆ ಅವಕಾಶವನ್ನು ಕಲ್ಪಿಸಲು ಆರಂಭಿಸುತ್ತದೆ ಹಾಗೂ ಬ್ರಿಟಿಷ್ ಸರಕಾರ ತನ್ನ ಧೋರಣೆಯನ್ನು ಪುನರ್ವಿಮರ್ಶೆಗೆ ಒಳಪಡಿಸುತ್ತದೆ. ಆಫ್ರಿಕಾದ ಗೋಲ್ಡ್ ಕೋಸ್ಟ್‌ಗೆ (Gold coast) ಸಂಬಂಧಿಸಿದಂತೆ ಬಾಸೆಲ್ ಮಿಶನ್ ಹಾಗೂ ಬ್ರಿಮೆನ್ ಮಿಶನ್ಸ್‌ಗಳನ್ನು (Bremen Missions) 'ಅಂಗೀಕರಿಸಿದ' (Recognized) ಸೊಸೈಟಿಗಳ ಅಥವಾ ಮಿಶನ್‌ಗಳ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. 1925ರ ಅಂತ್ಯಕ್ಕಾಗುವಾಗ 5 ಬಾಸೆಲ್ ಮಿಶನರಿಗಳು ಗೋಲ್ಡ್ ಕೋಸ್ಟ್‌ನಲ್ಲಿ (Gold coast) ತಮ್ಮ ಕಾರ್ಯವನ್ನು ಆರಂಭಿಸಿದ್ದರು. ಆಫ್ರಿಕಾದ ಕ್ಯಾಮರೋನ್ಸ್‌ಗೆ (Camaroon's) ಸಂಬಂಧಿಸಿದಂತೆ ಬಾಸೆಲ್ ಮಿಶನನ್ನು 'ಅಂಗೀಕರಿಸಿದ' (Recognized) ಪಟ್ಟಿಗೆ ಸೇರಿಸಲಾಗುತ್ತದೆ. ಆಗಾಗಲೇ ಬಾಸೆಲ್ ಮಿಶನಿನ 4 ಮಿಶನರಿಗಳು ಪ್ಯಾರಿಸ್ ಮಿಶನ್‌ನ (Paris Mission) ಸಹಯೋಗದೊಂದಿಗೆ ಇಲ್ಲಿ ಕಾರ್ಯವನ್ನು ಆರಂಭಿಸಿದ್ದರು. ಚೈನಾಕ್ಕೆ ಸಂಬಂಧಿಸಿದಂತೆ ಬಾಸೆಲ್ ಮಿಶನ್ ತನ್ನ ಕಾರ್ಯವನ್ನು ಸಂಪೂರ್ಣವಾಗಿ ಆರಂಭಿಸದಿದ್ದರೂ ತನ್ನ ಪ್ರತಿನಿಧಿಯನ್ನು ಕ್ವಾಟುಂಗ್‌ಗೆ (Kwantung) ಖಜಾಂಜಿ ಹಾಗೂ ಏಜೆಂಟ್ ಆಗಿ ಕಳುಹಿಸಲು ನಿರ್ಧಾರಿಸುತ್ತದೆ. ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿದಂತೆ ಸರಕಾರ ಜರ್ಮನ್ ಮಿಶನ್‌ಗಳನ್ನು ಅಂಗೀಕರಿಸಿದ ಪಟ್ಟಿಗೆ ಸೇರಿಸುವ ಚಿಂತನೆ ನಡೆಸುತ್ತಿತ್ತು. ಬಾಸೆಲ್ ಮಿಶನ್ ಮಲಬಾರ್‌ಗೆ ಈಗಾಗಲೇ ಮಿಶನರಿಗಳನ್ನು ಲಂಡನ್ ಮಿಶನರಿ ಸೊಸೈಟಿಯ ಮೂಲಕ ಕಳುಹಿಸಿಕೊಟ್ಟಿತ್ತು ಹಾಗೂ ಮಲಬಾರ್‌ನಲ್ಲಿ ಬಾಸೆಲ್ ಮಿಶನ್ ತನ್ನ ಕಾರ್ಯವನ್ನು

ಆರಂಭಿಸಲು ಸರಕಾರ ಅನುಮತಿಯನ್ನು ನೀಡಿತ್ತು.[11] ಭಾರತದಲ್ಲಿ ಬಾಸೆಲ್ ಮಿಶನನ್ನು 'ಅಂಗೀಕರಿಸಿದ' ಮಿಶನ್‌ಗಳ ಪಟ್ಟಿಗೆ ಸೇರಿಸುವುದರ ಬಗ್ಗೆ ಸರಕಾರ ಚಿಂತನೆ ಆರಂಭಿಸಿತ್ತು.

1920ರ ದಶಕದ ಎರಡನೇ ಭಾಗದಲ್ಲಿ ಅಂತಾರಾಷ್ಟ್ರೀಯವಾಗಿ ಜರ್ಮನ್ ಮಿಶನುಗಳನ್ನು ತಮ್ಮ ಮೊದಲಿನ ಮಿಶನ್ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಲು ಅನುಮತಿ ನೀಡಬೇಕೆಂಬ ಒತ್ತಡ ಬ್ರಿಟಿಷ್ ಸರಕಾರದ ಮೇಲೆ ಹೆಚ್ಚಾಗುತ್ತದೆ. ಆದುದರಿಂದ ಮೊದಲು ಮಿಶನರಿಗಳಿಗೆ ಅವಕಾಶವನ್ನು ಕಲ್ಪಿಸಿದ ಬ್ರಿಟಿಷ್ ಸರಕಾರ, ನಂತರ ಮಿಶನ್‌ಗಳಿಗೆ ಅನುಮತಿ ನೀಡುವುದರ ಬಗ್ಗೆ ಚಿಂತಿಸುತ್ತದೆ. ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರ, ಜರ್ಮನ್ ಮಿಶನರಿಗಳು ಬಿಟ್ಟುಹೋದ ತರುವಾಯ ದೇಶಿಯ ಚರ್ಚುಗಳಿಗೆ ಯಾವ ಅಧಿಕಾರ ಸ್ವಾತಂತ್ರ್ಯವು ಸಿಕ್ಕಿತ್ತೋ, ಅಂಥ ಸ್ವಾತಂತ್ರ್ಯಗಳನ್ನು ಜರ್ಮನ್ ಮಿಶನ್ ಸಂಘಗಳು ಮುರಿಯಲು ಯತ್ನಿಸದೆ ಭದ್ರವಾಗಿ ಕಾಪಾಡಬೇಕೆಂಬ ಒಂದು ನಿಬಂಧನೆಯನ್ನು ಸರಕಾರ ಜರ್ಮನ್ ಮಿಶನ್‌ಗಳ ಮೇಲೆ ಹೇರುತ್ತದೆ. ಮಲಬಾರ್‌ಗೆ ಬಾಸೆಲ್ ಮಿಶನರಿಗಳ ಆಗಮನವು ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಭರವಸೆಯನ್ನು ಹೆಚ್ಚಿಸಿ, ಅವರ ಸಂತೋಷಕ್ಕೆ ಕಾರಣವಾಗುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ 1926ರ ನವೆಂಬರಿನಲ್ಲಿ ಉಡುಪಿಯಲ್ಲಿ ಜರುಗಿದ 'ಜನರಲ್ ಕಾನ್ಫರೆನ್ಸ್ ಆಫ್ ಮಿಶನರೀಸ್'ನಲ್ಲಿ [General Conference of Missionaries] ಎಲ್ಲಾ ವಿಚಾರಗಳನ್ನು ಕೂಲಂಕುಶವಾಗಿ ಚರ್ಚಿಸಿ, ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಅಂತ್ಯಗೊಳಿಸಿ, ಮಿಶನ್ ಕೆಲಸವನ್ನು ಬಾಸೆಲ್ ಮಿಶನಿಗೆ ಹಸ್ತಾಂತರಿಸುವಂತೆ 'ಜರ್ಮನ್ ಮಿಶನ್ಸ್ ಕಮಿಟಿ'ಗೆ ವಿನಂತಿಯನ್ನು ಮಾಡುತ್ತದೆ.[12] ಇದಕ್ಕೆ ಪೂರಕವಾಗುವಂತೆ 1926ರಲ್ಲಿ ಬ್ರಿಟಿಷ್ ಸರಕಾರ ಬಾಸೆಲ್ ಮಿಶನನ್ನು 'ಅಂಗೀಕರಿಸಿದ' ಮಿಶನ್‌ಗಳ ಪಟ್ಟಿಗೆ ಸೇರಿಸುತ್ತದೆ[13] ಹಾಗೂ ಅಂತಿಮವಾಗಿ 1927ರಲ್ಲಿ ಬಾಸೆಲ್ ಮಿಶನ್ ಬ್ರಿಟಿಷ್ ಸರಕಾರದ ಅನುಮತಿಯೊಂದಿಗೆ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠಗಳ ಜವಾಬ್ದಾರಿಯನ್ನು ಮರಳಿ ವಹಿಸಿಕೊಳ್ಳುತ್ತದೆ.[14]

ದಕ್ಷಿಣ ಕೆನರಾ ಮತ್ತು ಮರಾಠ ಪ್ರದೇಶಗಳಿಗೆ ಬಾಸೆಲ್ ಮಿಶನರಿಗಳ ಪುನರ್ ಆಗಮನ:

1927, ಮೇ 16ರಂದು ಬಾಸೆಲ್ ಮಿಶನಿನ ಮಿಶನರಿಗಳಾದ ಶೊಸ್ಸರ್, ಅವರ ಪತ್ನಿ ಹಾಗೂ ಹೊಸ ಯೌವನ ಮಿಶನರಿಯಾದ ರೆವೆ. ಶಿಸ್‌ರವರು ಮಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ಈ ಜರ್ಮನ್ ಮಿಶನರಿಗಳಿಗೆ ಇಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರು ಅಭೂತಪೂರ್ವವಾದ ಸ್ವಾಗತವನ್ನು ನೀಡುತ್ತಾರೆ.[15] ಶೊಸ್ಸರ್‌ರವರು ತಮ್ಮ ವಂದನಾ ಭಾಷಣದಲ್ಲಿ ಇಲ್ಲಿನ ಕ್ರೈಸ್ತರಿಗೆ ಎಚ್ಚರಿಕೆಯ ಹಾಗೂ ಜವಾಬ್ದಾರಿಯ ಮಾತುಗಳನ್ನು ಹೇಳುತ್ತಾರೆ. ತಾನು ಲುಸಾನ್ ಕಮಿಟಿಯ ಮಾರ್ಗದರ್ಶಕರಾಗಿದ್ದ ಟಾಮಿಲ್ಲನ್‌ರವರು ಸಿದ್ಧಪಡಿಸಿರುವ ಗಟ್ಟಿಯಾದ ಹಾದಿಯಲ್ಲಿ

ಗಾಡಿಯನ್ನು ಚಲಾಯಿಸುವ ಬಾಸೆಲ್ ಮಿಶನಿನ ಚಾಲಕ ಎಂಬಂತೆ ಅವರ ಮಾತುಗಳಿತ್ತು. ಪ್ರಜಾಪ್ರಭುತ್ವದ ಹಾದಿಯಲ್ಲಿ ಮುಂದುವರಿಯಲು ನನ್ನಷ್ಟು ಇಚ್ಛೆ ಪಡುವವರು ಯಾರೂ ಇಲ್ಲ. ಆದರೆ ಈ ವ್ಯವಸ್ಥೆಯಲ್ಲಿ ಅಂಧರಾಗಿ ಚಲಿಸಿ ಹಾದಿ ಅಥವಾ ಹಳಿ ತಪ್ಪುವವರ ಮೇಲೆ ಕಠಿಣ ನಿಗಾ ಇರಿಸುವುದಾಗಿ ಹೇಳುತ್ತಾ, ಬಾಸೆಲ್ ಮಿಶನ್ ಇಲ್ಲಿ ಬಂದಿರುವುದನ್ನು ಬಹಳಷ್ಟು ಸಂತೋಷದಿಂದ ಉಲ್ಲೇಖಿಸಿ, ಸೊಸೈಟಿ ಹಾಗೂ ಮಿಶನರಿಗಳು ದೈವಿಕ ಮಾರ್ಗದರ್ಶನದಲ್ಲಿ ಮುಂದುವರಿದು ಇಲ್ಲಿನ ಸಮುದಾಯದ, ದೇಶದ ಒಳಿತಿಗಾಗಿ ದೀರ್ಘಕಾಲ ಕೆಲಸ ನಿರ್ವಹಿಸುವಂತಾಗಲೀ ಎಂದು ಆಶಿಸುತ್ತಾರೆ.[16]

1927ರ ಜುಲೈ 1 ರಂದು ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ದಕ್ಷಿಣ ಕೆನರಾ ಮತ್ತು ದಕ್ಷಿಣ ಮರಾಠಗಳ ಜವಾಬ್ದಾರಿಯನ್ನು ಬಾಸೆಲ್ ಮಿಶನಿಗೆ ವಹಿಸಿ ಕೊಡುತ್ತದೆ. ಈ ಸಂದರ್ಭದಲ್ಲಿ ಡಾ. ಬುರ್ಕಾರ್ಡ್ಹಾಟ್, ಇತರ 11 ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಹಾಗೂ ಮಿಶನರಿಗಳ ಪತ್ನಿಯರು ಲಂಡನ್ ಮಿಶನರಿ ಸೊಸೈಟಿ ಸೇರಿದರೆ, ಉಳಿದ 16 ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನಿನಲ್ಲಿ ತಮ್ಮ ಕಾರ್ಯವನ್ನು ಮುಂದುವರಿಸುತ್ತಾರೆ. 1927ರ ಆಗಸ್ಟ್‌ನಲ್ಲಿ ಶೊಸ್ಸರ್‌ರವರು ಮಿಶನಿನ ಪಾಸ್ತರುಗಳಿಗೂ, ಇವಾಂಜೆಲಿಸ್ಟರಿಗೂ ಪತ್ರವನ್ನು ರವಾನಿಸಿ, ಭಾರತದಲ್ಲಿ 'ಬಾಸೆಲ್ ಇವಾಂಜಲಿಕಲ್ ಮಿಶನ್'[17] ತನ್ನ ಕಾರ್ಯವನ್ನು ಮರು ಆರಂಭಿಸಿರುವುದರ ಬಗ್ಗೆ ತಿಳಿಸುತ್ತಾರೆ. ಶೊಸ್ಸರ್‌ರವರು ಭಾರತದಲ್ಲಿ ಬಾಸೆಲ್ ಇವಾಂಜಲಿಕಲ್ ಮಿಶನಿನ ಅಧ್ಯಕ್ಷರಾಗುತ್ತಾರೆ.[18] 1927 ಸೆಪ್ಟೆಂಬರ್ 15ರಂದು ಬಾಸೆಲ್ ಮಿಶನಿನ ಹೋಮ್ ಕಮಿಟಿಯು, ಭಾರತದಲ್ಲಿ ಬಾಸೆಲ್ ಇವಾಂಜಲಿಕಲ್ ಮಿಶನ್ ಅಧ್ಯಕ್ಷರಾಗಿದ್ದ ಶೊಸ್ಸರ್‌ರವರ ಮೂಲಕ ದಕ್ಷಿಣ ಕೆನರಾ ಮತ್ತು ದಕ್ಷಿಣ ಮರಾಠಗಳ ಸಭೆಗಳಿಗೆ ಸಂದೇಶವನ್ನು ರವಾನಿಸುತ್ತದೆ. ಸಂದೇಶದಲ್ಲಿ ಮಿಶನನ್ನು ಮುನ್ನಡೆಸಿದ ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ಧನ್ಯತಾ ಭಾವವನ್ನು ವ್ಯಕ್ತಪಡಿಸುತ್ತಾ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನಿನಲ್ಲಿ ಮುಂದುವರಿಯುವುದನ್ನು ಸ್ವಾಗತಿಸುತ್ತದೆ. ಇನ್ನು ಕೆಲವು ಹಳೆ ಜರ್ಮನ್ ಮಿಶನರಿಗಳು ಇಲ್ಲಿಗೆ ಬರಲಿದ್ದು, ಅವರು ಇಲ್ಲಿನ ಕ್ರೈಸ್ತರ ಅಧ್ಯಾತ್ಮಿಕ ಬೆಳವಣಿಗೆಗೆ ಸಹಾಯಿಸುವರು ಎಂದಿದ್ದ ಬಾಸೆಲ್ ಮಿಶನ್ ಇಲ್ಲಿನ ಸಭೆಗಳು ಸ್ವತಂತ್ರವಾಗಿ ಮುಂದುವರಿಯಬೇಕಾಗಿದೆ ಎಂದು ತಿಳಿಸಿತ್ತು. ತನ್ನ ಹಣಕಾಸಿನ ಪರಿಸ್ಥಿತಿ ಹಾಗೂ ಅದಕ್ಕಿದ್ದ ಜವಾಬ್ದಾರಿಗಳನ್ನು ಇಲ್ಲಿನ ಕ್ರೈಸ್ತರಿಗೆ ತಿಳಿಸಲು ಪ್ರಯತ್ನಿಸಿದ್ದ ಬಾಸೆಲ್ ಮಿಶನ್ ಜಾಗತಿಕ ಯುದ್ಧದಿಂದಾಗಿ ಬಾಸೆಲ್ ಮಿಶನ್ ಮೇಲೂ ಅದರ ಪರಿಣಾಮಗಳಾಗಿವೆ. ಅದು ಭಾರತ, ಚೀನಾ, ಬೋರ್ನಿಯೋ, ಕೆಮರೂನ್ ಮತ್ತು ಗೋಲ್ಡ್‌ಕೋಸ್ಟ್ ಎಂಬ ಒಟ್ಟು ಐದು ಮಿಶನ್ ಕ್ಷೇತ್ರಗಳ

ಪಾಲನೆ ಮಾಡಬೇಕಾಗಿದ್ದು, ಇಲ್ಲಿನ ಕ್ರೈಸ್ತರು ಬಾಸೆಲ್ ಮಿಶನಿನಿಂದ ವಿಶೇಷ ಹಣದ ಸಹಾಯವನ್ನು ನಿರೀಕ್ಷಿಸದೇ, ತನ್ನೊಂದಿಗೆ ಸಹಕರಿಸಬೇಕು ಎಂದು ವಿನಂತಿಸಿತ್ತು.[19]

ಬಾಸೆಲ್ ಮಿಶನ್ ಇಲ್ಲಿನ ಮಿಶನ್ ಠಾಣ್ಯಗಳಿಗೆ ಹೆಚ್ಚಾಗಿ ಜಾಗತಿಕ ಯುದ್ಧದ ಮೊದಲು ಇಲ್ಲಿನ ಮಿಶನ್ ಕಾರ್ಯ ನಿರ್ವಹಿಸಿದ ಮಿಶನರಿಗಳನ್ನೇ ಕಳುಹಿಸುತ್ತದೆ. ರೊಡಾಲ್ಫ್ ಬುನ್ಜ್‌ರವರು [Rudolf Bunz] 1927ರಲ್ಲಿ ಇಲ್ಲಿಗೆ ಬಂದು ಮುಲ್ಕಿ ಠಾಣ್ಯದ ಜವಾಬ್ದಾರಿ ಹಾಗೂ ಮಿಶನಿನ ಜನರಲ್ ಏಜೆಂಟರಾಗಿ ಕಾರ್ಯ ಆರಂಭಿಸುತ್ತಾರೆ. 1927ರಲ್ಲಿ ಹರ್ಮನ್ ರಿಸ್ಚ್ [Herman Risch], ಜೆ. ಜೆ. ವುರ್‌ನರ್ [J.J.Urner] (ದಕ್ಷಿಣ ಮರಾಠದ ಮಿಶನ್ ಅಧ್ಯಕ್ಷರಾಗಿ)ರವರು, 1928ರ ಜನವರಿಯಲ್ಲಿ ಫ್ರಿಟ್ಜ್ ವೊಟರ್ಸ್‌ಡೋರ್ಫ್ [Fritz Ottersdorf] (ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ ಹಾಗೂ ಪುಸ್ತಕ ಮಳಿಗೆ ಜವಾಬ್ದಾರಿ), ತಿಯೋಡೋರ್ ರಿಟರ್ [Theodore Ritter] ಮುಂತಾದ ಮಿಶನರಿಗಳು ಮರಳಿ ತಮ್ಮ ಮಿಶನ್ ಕಾರ್ಯವನ್ನು ಆರಂಭಿಸುತ್ತಾರೆ. 1928ರ ಫೆಬ್ರವರಿಯಲ್ಲಿ ಫಿಶ್ಚರ್‌ರವರು ಆಗಮಿಸಿ ಕಾರ್ಕಳ ಠಾಣ್ಯದ ಜವಾಬ್ದಾರಿಯನ್ನು ವಹಿಸುತ್ತಾರೆ.[20] ಮಂಗಳೂರಿನ ಪ್ರಮುಖ ಸಭೆಗಳಾದ ಬಲ್ಮಠ, ಜೆಪ್ಪು, ಬೊಕ್ಕಪಟ್ಣ, ಮಿಶನಿನ ಪ್ರಮುಖ ಠಾಣ್ಯಗಳಾದ ಕಾಸರಗೋಡು, ಉಡುಪಿ, ಮಲ್ಪೆ, ಮುಲ್ಕಿ, ಬಸ್ರೂರು, ಕಾರ್ಕಳ, ಕುಂದಾಪುರ ಇತ್ಯಾದಿಗಳಿಗೆ ಮಿಶನರಿಗಳನ್ನು ನಿಯೋಜಿಸಲಾಗುತ್ತದೆ. ಬಾಸೆಲ್ ಇವಾಂಜಲಿಕಲ್ ಮಿಶನಿನ ಎಲ್ಲಾ ಠಾಣ್ಯಗಳ ಜವಾಬ್ದಾರಿಯನ್ನು ವಹಿಸುವುದರೊಂದಿಗೆ ಮಿಶನ್ ಕಾರ್ಯಗಳು ಆರಂಭವಾಗಿ ಮುಂದುವರಿಯುತ್ತವೆ. ಮಿಶನಿನ ಶಾಲೆಗಳಿಗೂ ಹೊಸ ಸ್ವರೂಪಗಳನ್ನು ಕಲ್ಪಿಸಲಾಗುತ್ತದೆ. ಬಾಸೆಲ್ ಮಿಶನ್ ಕ್ರೈಸ್ತರ ಅಧ್ಯಾತ್ಮಿಕ ಅಗತ್ಯಗಳನ್ನು ಪೂರೈಸಲು ಬಾಸೆಲ್ ಇವಾಂಜಲಿಕಲ್ ಮಿಶನಿನ ಮಿಶನರಿಗಳು ಸಕ್ರಿಯವಾಗಿ ಕಾರ್ಯವನ್ನು ಆರಂಭಿಸುತ್ತಾರೆ. ಫಿಶ್ಚರ್‌ರವರು ಕಾರ್ಕಳದ ಕಣಿವೆ ಹಾಗೂ ಪರ್ವತ ಪ್ರದೇಶಗಳಲ್ಲಿ ಇವ್ಯಾಂಜಲಿಸ್ಟಿಕ್ ಕಾರ್ಯವನ್ನು ಮುಂದುವರಿಸುತ್ತಾರೆ. ಶೊಸ್ಸರ್ ಬಲ್ಮಠದ ಶಾಂತಿ ದೇವಾಲಯದ ಪ್ರಗತಿಯ ಬಗ್ಗೆ ಉಲ್ಲೇಖಿಸುತ್ತಾ, 4,400 ಸಭಿಕರನ್ನು ಹೊಂದಿದ್ದರೂ, ಇವರ ನೈತಿಕ ಹಾಗೂ ಅಧ್ಯಾತ್ಮಿಕ ಪ್ರಗತಿ ಏನೂ ಸಾಲದು ಎಂಬುದಾಗಿ ಹೇಳಿದ್ದರು.[21] 1928ರ ಕಾಲಾವಧಿಯಲ್ಲಿ ದಕ್ಷಿಣ ಕೆನರಾ ಜಿಲ್ಲೆಯ ಬಾಸೆಲ್ ಮಿಶನ್ ಕ್ರೈಸ್ತರ ಸಂಖ್ಯೆಯು 9539 ಆಗಿತ್ತು.[22] ಬಾಸೆಲ್ ಮಿಶನ್ ಬಹುವಾಗಿ ಬ್ರಿಟಿಷರ ನಿಯಂತ್ರಣದಲ್ಲಿದ್ದ ಪ್ರದೇಶದಲ್ಲಿಯೇ ಕಾರ್ಯ ನಿರ್ವಹಿಸುತ್ತಿತ್ತು. ಆದರೂ ಅದು ಗಳಿಸಿಕೊಂಡ ಕ್ರೈಸ್ತರ ಸಂಖ್ಯೆ ಬಹಳಷ್ಟು ಕಡಿಮೆ ಎನ್ನಬಹುದು. ಮತ್ತೊಂದೆಡೆ ಮಲಬಾರ್‌ನ ದಕ್ಷಿಣಕ್ಕಿದ್ದ ಹಿಂದೂ ರಾಜರ ಆಡಳಿತವಿದ್ದ ಹಾಗೂ ಪರೋಕ್ಷವಾಗಿ ಬ್ರಿಟಿಷರ ನಿಯಂತ್ರಣದಲ್ಲಿದ್ದ ತಿರುವಾಂಕೂರಿನಲ್ಲಿ ಕಾರ್ಯ

ನಿರ್ವಹಿಸುತ್ತಿದ್ದ ಲಂಡನ್ ಮಿಶನರಿ ಸೊಸೈಟಿಯು 1931ಕ್ಕಾಗುವಾಗ 58,991 ಕ್ರೈಸ್ತರನ್ನು ಹೊಂದಿದ್ದರೆ, ಚರ್ಚ್ ಮಿಶನರಿ ಸೊಸೈಟಿಯು ಇದೇ ಕಾಲದಲ್ಲಿ 85,261 ಕ್ರೈಸ್ತರನ್ನು ಹೊಂದಿತ್ತು.[23] ಈ ಎರಡೂ ಬ್ರಿಟಿಷ್ ಮಿಶನರಿ ಸೊಸೈಟಿಗಳು ಯುದ್ಧದ ಕಾಲದಲ್ಲಿ ಮುಂದುವರಿದಿರುವುದು, ಮಾತ್ರವಲ್ಲದೇ ಕೆಳವರ್ಗದ ಜನರನ್ನು ಮುಖ್ಯವಾಗಿ ಗುರಿಯಾಗಿರಿಸಿಯೂ ಈ ಮೇಲಿನ ಮಿಶನ್‌ಗಳು ಕಾರ್ಯ ನಿರ್ವಹಿಸಿರುವುದರಿಂದ ಅಪಾರ ಸಂಖ್ಯೆಯ ಕ್ರೈಸ್ತರನ್ನು ಗಳಿಸುವಲ್ಲಿ ಸಫಲವಾಗುತ್ತವೆ.

ಬಾಸೆಲ್ ಮಿಶನರಿಗಳು ಹಾಗೂ ಮಿಶನ್ ಕಾರ್ಯ:

ಶೊಸ್ಸರ್‌ರವರು ಮಂಗಳೂರಿನಲ್ಲಿದ್ದು ಕಾರ್ಯನಿರ್ವಹಿಸುತ್ತಾರೆ. ಇವರು ಯುದ್ಧದ ಮೊದಲು ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದ ಮಂಗಳೂರಿನ ಸೆಮಿನರಿಯನ್ನು ಮರಳಿ ತೆರೆಯಬೇಕೆಂಬ ಮಹದಾಸೆಯನ್ನು ಇಟ್ಟುಕೊಂಡಿದ್ದರು. ಯುದ್ಧದ ಮೊದಲು ಬಾಸೆಲ್ ಮಿಶನಿಗೆ ಮಲಬಾರ್‌ನಲ್ಲಿ ನೆಟ್ಟೂರು [Nettur] ಸೆಮಿನರಿ ಹಾಗೂ ಮಂಗಳೂರಿನ ಸೆಮಿನರಿ ಹೀಗೆ ಒಟ್ಟು ಎರಡು ಸೆಮಿನರಿಗಳಿದ್ದವು. ಯುದ್ಧದ ಕಾಲದಲ್ಲಿ ಜರ್ಮನ್ ಮಿಶನರಿಗಳ ಮೇಲಿನ ನಿರ್ಬಂಧದಿಂದಾಗಿ ಇವುಗಳೆರಡು ಮುಚ್ಚಲ್ಪಡುತ್ತವೆ. ನಿರ್ಬಂಧ ತೆರವಾಗಿ ಬಾಸೆಲ್ ಮಿಶನ್ ಮರಳಿ ಭಾರತಕ್ಕೆ ಬಂದಾಗ ಮೊದಲು ಮಲಬಾರಿನಲ್ಲಿನ ನೆಟ್ಟೂರಿನ ಸೆಮಿನರಿಯನ್ನು 1ನೇ ಜುಲೈ 1927ರಲ್ಲಿ ಮರಳಿ ಆರಂಭಿಸಲಾಗುತ್ತದೆ. ಮಂಗಳೂರಿನಲ್ಲಿನ ಸೆಮಿನರಿಯು ಶೊಸ್ಸರನ ಪ್ರಯತ್ನದಿಂದಾಗಿ 15ನೇ ಜುಲೈ 1929ರಲ್ಲಿ ಪುನಃ ತೆರೆಯಲ್ಪಡುತ್ತದೆ. ಇದಕ್ಕೆ ಪೂರ್ವಭಾವಿಯಾಗಿ 1928ರ ಜನವರಿಯಲ್ಲಿ ಇವ್ಯಾಂಜಲಿಸ್ಟಿಕ್ ಕಮಿಟಿಯ ಸಭೆಯು ನಡೆಯುತ್ತದೆ. ಇದು ತುಮಕೂರು ಸೆಮಿನರಿಗೆ ಒಂದು ಪತ್ರವನ್ನು ರವಾನಿಸುತ್ತದೆ. 15ನೇ ಜುಲೈ 1929ರಂದು ಮಂಗಳೂರು ಸೆಮಿನರಿಯನ್ನು 11 ವಿದ್ಯಾರ್ಥಿಗಳೊಂದಿಗೆ ಆರಂಭಿಸಲಾಗುತ್ತದೆ. ಶೊಸ್ಸರ್ ಅದರ ಪ್ರಾಂಶುಪಾಲರಾಗುತ್ತಾರೆ. ನಂತರದಲ್ಲಿ ನೆಟ್ಟೂರು ಸೆಮಿನರಿಯನ್ನು, ಮಂಗಳೂರಿನ ಸೆಮಿನರಿಯಲ್ಲಿ ವಿಲೀನಗೊಳಿಸಿ, ಅದರ 5 ವಿದ್ಯಾರ್ಥಿಗಳನ್ನು ಹಾಗೂ ಒಂದು ಅಧ್ಯಾಪಕನನ್ನು ಮಂಗಳೂರಿನ ಸೆಮಿನರಿಗೆ ಸೇರಿಸಲಾಗುತ್ತದೆ. ಆರ್ಥಿಕ ದೃಷ್ಟಿಕೋನದಿಂದ ಮಾತ್ರ ಈ ನಿರ್ಧಾರ ಪ್ರಮುಖವಾಗಿರದೇ, ಭಾರತದಲ್ಲಿನ ಎಲ್ಲಾ ಬಾಸೆಲ್ ಮಿಶನಿನ ಚರ್ಚುಗಳನ್ನು ಒಟ್ಟಿಗೆ ತರುವುದು ಅವರ ಪ್ರಮುಖ ಉದ್ದೇಶವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಶೊಸ್ಸರ್‌ರವರು ತದನಂತರ ಅವರು ಮತಾಂತರಿಸಿದ ಬ್ರಾಹ್ಮಣ, ಕೆ.ಆರ್.ಕರುಣಾಕರ್‌ರವರನ್ನು [K.R. Karunakar] ಯುನೈಟೆಡ್ ತಿಯೋಲಾಜಿಕಲ್ ಕಾಲೇಜಿನಿಂದ[24] ಮಂಗಳೂರಿನ ಸೆಮಿನರಿಗೆ ಬೋಧಕರಾಗಿ ವಾಪಾಸ್ಸು ಕರೆಸುತ್ತಾರೆ. 1932ರಲ್ಲಿ ಸೆಮಿನರಿಯಲ್ಲಿ 8 ವಿದ್ಯಾರ್ಥಿಗಳಿದ್ದರೆ ತದನಂತರ 1937ರ ಕಾಲದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು

21ರ ವರೆಗೆ ಹೆಚ್ಚುತ್ತದೆ. ತದನಂತರ ಪುನಃ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗುತ್ತದೆ. 1947ರಲ್ಲಿ ಬಾಸೆಲ್ ಇವಾಂಜಲಿಕಲ್ ಮಿಶನಿನ ತಿಯೋಲಾಜಿಕಲ್ ಸೆಮಿನರಿಯು ಸೆರಾಂಪುರ ಕಾಲೇಜಿಗೆ ಸಂಯೋಜನೆ ಹೊಂದುತ್ತದೆ.[25] 1952ರಲ್ಲಿ ಮಂಗಳೂರಿನ ಬಾಸೆಲ್ ಇವಾಂಜಲಿಕಲ್ ಮಿಶನ್ ತಿಯೋಲಾಜಿಕಲ್ ಸೆಮಿನರಿಗೆ ದೇಶಿಯರ ನಾಯಕತ್ವವು ದೊರಕುತ್ತದೆ ಹಾಗೂ ಎಸ್.ಜೆ.ಸಮರ್ಥರವರು [S.J.Samartha] ಈ ಸೆಮಿನರಿಯ ಮೊದಲ ದೇಶಿಯ ಪ್ರಾಂಶುಪಾಲರಾಗುತ್ತಾರೆ. ಈ ಕಾಲಾವಧಿಗಾಗುವಾಗ ಭಾರತದಲ್ಲಿನ ಬಾಸೆಲ್ ಮಿಶನ್ ಚರ್ಚುಗಳು ಬಹಳಷ್ಟು ಸ್ವಾಯತ್ತತೆಯನ್ನು ಪಡೆದು, ಅದರ ಶೈಕ್ಷಣಿಕ ಮತ್ತು ಮಿಶನ್ ಕಾರ್ಯವನ್ನು ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ[26] [United Basel Mission Church in India] ನಿಯಂತ್ರಣಕ್ಕೆ ನೀಡಲಾಗುತ್ತದೆ. ಆದರೆ ಸೆಮಿನರಿಯು ಮಿಶನ್‌ನ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.[27]

ಬಾಸೆಲ್ ಮಿಶನರಿಗಳು ಮರಳಿ ಬಂದ ನಂತರದ ಕಾಲಾವಧಿಯಲ್ಲಿ ಅನಾಥಾಲಯಗಳ ಮೇಲ್ವಿಚಾರಣೆಯನ್ನು ಆರಂಭಿಸಲಾಗುತ್ತದೆ. ದಕ್ಷಿಣ ಕೆನರಾದಲ್ಲಿ ಹುಡುಗರ ಅನಾಥಾಲಯ, ಉಡುಪಿ ಹಾಗೂ ಮುಲ್ಕಿಯಲ್ಲಿ ಹುಡುಗಿಯರ ಅನಾಥಾಲಯಗಳಿದ್ದವು. ಇವು ಮಿಶನ್ ವ್ಯವಸ್ಥೆಯ ಪ್ರಮುಖ ಭಾಗಗಳಾಗಿದ್ದವು. ಈ ಅನಾಥಾಲಯಗಳು ಯಾವತ್ತೂ ಮಿಶನಿನ ನಿಯಂತ್ರಣದಲ್ಲಿರುತ್ತಿತ್ತು. ಅವುಗಳನ್ನು ಮಿಶನರಿಗಳೇ ಮೇಲ್ವಿಚಾರಣೆ ಮಾಡುತ್ತಿದ್ದರು. ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪಾದ್ರಿಗಳು [Pastor] ಅಥವಾ ಇವ್ಯಾಂಜಲಿಸ್ಟರುಗಳು ಇಲ್ಲಿನ ಮಕ್ಕಳ ಪೋಷಣೆ ಮಾಡುತ್ತಿದ್ದರು. ಮಾತ್ರವಲ್ಲದೆ, ಈ ಅನಾಥಾಲಯಗಳಿಗೆ ಸಂಬಂಧಿಸಿದ ಕೃಷಿ ಭೂಮಿಯನ್ನು ನಿರ್ವಹಿಸುತ್ತಿದ್ದರು. ಹೀಗೆ ಬಾಸೆಲ್ ಇವಾಂಜಲಿಕಲ್ ಮಿಶನಿನ ಕಾಲದಲ್ಲಿ ಮತ್ತೊಮ್ಮೆ ಅದರ ಅನಾಥಾಲಯಗಳಿಗೆ ಮರುಜೀವ ನೀಡಲಾಗುತ್ತದೆ. ಬಾಸೆಲ್ ಇವಾಂಜಲಿಕಲ್ ಮಿಶನಿನ ಕಾಲದಲ್ಲಿ ಸುಧಾರಣೆ ಕಂಡ ಮತ್ತೊಂದು ಪ್ರಮುಖ ಕ್ಷೇತ್ರವೆಂದರೆ ಮುದ್ರಣ. 1928ರಲ್ಲಿ ಬಾಸೆಲ್ ಮಿಶನಿನ ಮೊದಲಿನ ಮಿಶನರಿಯಾದ ಓಲ್ಟರ್ಸ್‌ಡೋರ್ಫ್‌ನ [F.Oltersdorf] ಮರು ಆಗಮನದೊಂದಿಗೆ ಮಂಗಳೂರಿನಲ್ಲಿ ಬಾಸೆಲ್ ಮಿಶನ್ ಸ್ಥಾಪಿಸಿದ್ದ ಪ್ರೆಸ್ ಹಾಗೂ ಬುಕ್ ಶಾಪ್‌ಗಳಿಗೆ [Press and Book Shop] ಹೊಸ ಆಯಾಮವನ್ನು ನೀಡಲಾಗುತ್ತದೆ. ಅಪಾರ ಮೊತ್ತದಲ್ಲಿ ಧಾರ್ಮಿಕ ಹಾಗೂ ಲೌಕಿಕ ಗ್ರಂಥಗಳನ್ನು [Sacred and Secular books] ಐದು ಭಾಷೆಗಳಲ್ಲಿ ಮುದ್ರಿಸಲಾಗುತ್ತದೆ. ಮತ್ತೊಂದೆಡೆ ಪುಸ್ತಕಗಳ ಮಾರಾಟವು ವರ್ಷಕ್ಕೆ 6,00,000 ಪ್ರತಿಗಳಾಗುತ್ತದೆ. ಅದೇ ರೀತಿ ಕೆಲವು ವಸ್ತುಗಳನ್ನು ಯುರೋಪ್‌ನಿಂದ ಆಮದು ಮಾಡಿ ಮಾರಾಟ ಮಾಡಲಾಗುತ್ತಿತ್ತು. ಸ್ವಲ್ಪ

ಕಾಲಾವಧಿಯ ನಂತರ ವುಟಮ್‌ಬರ್‌ಜರ್ [Wurttemberger] ಹಾಗು ಫ್ರೆಡ್ರಿಚ್ ರೌಲೀಡರ್‌ನ [Friedrich Rauleder] ಆಗಮನದೊಂದಿಗೆ, ಪ್ರೆಸ್ ಅದರ ಕಲಾತ್ಮಕ ಹಾಗೂ ವಾಣಿಜ್ಯದ [Artstic and Commercial] ಕಡೆಯಿಂದಲೂ ಬೆಳವಣಿಗೆಯನ್ನು ಕಾಣುತ್ತದೆ. ಇವರ ಆಗಮನದೊಂದಿಗೆ ಪ್ರೆಸ್ 'ಕ್ರೈಸ್ತ ಹಿತವಾದಿ' ಯ ಬದಲು 'ಕರ್ನಾಟಕ ಕ್ರೈಸ್ತ ಬಂಧು' ಎಂಬ ಮ್ಯಾಗಜೀನ್‌ನನ್ನು 1932 ಜುಲೈನಲ್ಲಿ ಆರಂಭಿಸುತ್ತದೆ. ಈ ರೀತಿ ಬಾಸೆಲ್ ಮಿಶನ್ ಪ್ರೆಸ್ ನೂರರಷ್ಟು ಕ್ರೈಸ್ತರಿಗೆ ಉದ್ಯೋಗವನ್ನು ನೀಡಿರುತ್ತದೆ.[28]

ಬಾಸೆಲ್ ಮಿಶನರಿಗಳು ಮರಳಿ ಬಂದಾಗ ಅವರು ಎದುರಿಸಬೇಕಾದ ಇನ್ನೊಂದು ಪ್ರಮುಖ ಸಮಸ್ಯೆ ನಿರುದ್ಯೋಗ. ನಿರುದ್ಯೋಗವು ಬಾಸೆಲ್ ಮಿಶನಿನ ದಕ್ಷಿಣ ಕೆನರಾ ಹಾಗೂ ಮಲಬಾರ್ ಮಿಶನ್ ಪ್ರದೇಶಗಳಲ್ಲಿ ಸಾಮಾನ್ಯವಾಗಿತ್ತು. ಮಂಗಳೂರಿನ ಪ್ರೆಸ್‌ನ್ನು ಬಿಟ್ಟರೆ, ಮೂಡಬಿದಿರೆಯ ಫಾರ್ಮ್ ಮಾತ್ರ ಮಿಶನಿನ ನಿಯಂತ್ರಣದಲ್ಲಿತ್ತು. ಫಾರ್ಮ್ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿರಲಿಲ್ಲ. ಮತ್ತೊಂದೆಡೆ ಕಾಮ್‌ನ್‌ವೆಲ್ತ್‌ನ ನಿಯಂತ್ರಣದಲ್ಲಿದ್ದ ಹಳೆ ಬಾಸೆಲ್ ಮಿಶನ್ ಕೈಗಾರಿಕೆಗಳಲ್ಲಿ ಕೆಲವು ಕೈಗಾರಿಕೆಗಳು ತಮ್ಮ ಕಾರ್ಯವನ್ನು ನಿಲ್ಲಿಸಿದ್ದವು. ಆದುದರಿಂದ ಒಂದು ಹೊತ್ತಿನ ಊಟಕ್ಕೂ ಕಷ್ಟ ಪಡಬೇಕಾದ ಪರಿಸ್ಥಿತಿ ಬಾಸೆಲ್ ಮಿಶನ್ ಕ್ರೈಸ್ತರಿಗೆ ಬಂದೊದಗಿತ್ತು. ನಗರಗಳಲ್ಲಿ ಮಧ್ಯಮ ಹಂತದವರೆಗೆ [Middle school] ಓದಿದ ಕ್ರೈಸ್ತರಿಗೂ ಉದ್ಯೋಗ ಲಭಿಸುತ್ತಿರಲಿಲ್ಲ. ಕೆಲವರು ಉದ್ಯೋಗವನ್ನು ಹುಡುಕುತ್ತಾ, ಘಟ್ಟ ಪ್ರದೇಶದ ಕಾಫಿ ಎಸ್ಟೇಟುಗಳಿಗೂ ಅಥವಾ ಮುಂಬಾಯಿಗೂ ವಲಸೆ ಹೋಗಲು ಆರಂಭಿಸಿದ್ದರು. ಪ್ರಮುಖ ಬಾಸೆಲ್ ಇವಾಂಜಲಿಕಲ್ ಮಿಶನಿನ ಮಿಶನರಿಯಾಗಿದ್ದ ಫಿಶ್ಚರ್ ಕಾರ್ಕಳದಲ್ಲಿ ಕ್ರೈಸ್ತರಿಗೆ ಉದ್ಯೋಗ ನೀಡಿ ವಲಸೆಯನ್ನು ತಡೆಯುವ ಪ್ರಯತ್ನವನ್ನು ಮಾಡಿದ್ದರು. ಇಲ್ಲಿದ್ದ ಮಿಶನರಿಗಳು, ಬಾಸೆಲ್ ಮಿಶನ್ ತನ್ನ ಹಳೆಯ ಉದ್ದೇಶದೊಂದಿಗೆ ಕೈಗಾರಿಕೆಗಳನ್ನು ಮರು ಆರಂಭಿಸಬೇಕೆಂದು ಬೇಡಿಕೆ ಮಂಡಿಸುತ್ತಾ, ಅದರ ಹೋಮ್ ಕಮಿಟಿಗೆ ನಿರಂತರವಾಗಿ ಹಲವು ಮನವಿಗಳನ್ನು ಕಳುಹಿಸಿದ್ದರು. ಆದರೆ ಆ ಬೇಡಿಕೆ ಈಡೇರುವುದೇ ಇಲ್ಲ.[29] 1927ರ ನಂತರ ಬಾಸೆಲ್ ಮಿಶನ್ ಇಲ್ಲಿ ಮರಳಿ ಕಾರ್ಯವನ್ನು ಆರಂಭಿಸಿದರೂ, ಬಾಸೆಲ್ ಇವಾಂಜಲಿಕಲ್ ಮಿಶನಿನ ಮಿಶನರಿಗಳು ಹೊಸ ಠಾಣ್ಯಗಳನ್ನಾಗಲೀ ಅಥವಾ ಉಪಠಾಣ್ಯಗಳನ್ನಾಗಲೀ ಆರಂಭಿಸದೇ ಅಸ್ತಿತ್ವದಲ್ಲಿದ್ದ ಕಾರ್ಯವನ್ನು ವ್ಯವಸ್ಥಿತವಾಗಿ ಮುಂದುವರಿಸುವುದರತ್ತ ಗಮನ ಹರಿಸಿದರು.

ಫಿಶ್ಚರ್‌ರವರು ನಂತರದ ಕಾಲದಲ್ಲಿ ಗುರುತಿಸಿಕೊಂಡಿರುವ ಮತ್ತೊಬ್ಬ ಪ್ರಮುಖ ಮಿಶನರಿಯಾಗಿದ್ದಾರೆ. ಜಾಗತಿಕ ಸಮರದ ಮೊದಲಿನ ಕಾಲಾವಧಿಯಲ್ಲೇ ಕಾರ್ಕಳ ಮಿಶನ್

ಪ್ರದೇಶದಲ್ಲಿ ಹಗಲಿರುಳು ದುಡಿದು ಅಲ್ಲಿನ ಎಲ್ಲಾ ವರ್ಗದ ಜನರ ಪ್ರೀತಿಯನ್ನು ಸಂಪಾದಿಸಿದ್ದರು. ಆದರೆ ಜಾಗತಿಕ ಯುದ್ಧದ ಸಂದರ್ಭದಲ್ಲಿ ಈ ಮಿಶನರಿಯ ಅನುಪಸ್ಥಿತಿಯಲ್ಲಿ ಇಲ್ಲಿನ ಮಿಶನ್ ಠಾಣ್ಯ ನಿರ್ಗತಿಕನಂತಾಗುತ್ತದೆ. ಬಾಸೆಲ್ ಮಿಶನರಿಗಳ ಅನುಪಸ್ಥಿತಿಯಲ್ಲಿ ಮಿಶನ್ ಠಾಣ್ಯದ ಪರಿಸ್ಥಿತಿಯ ಬಗ್ಗೆ ಮಿಶನರಿ ಪತ್ರಿಕೆಯಾದ 'ಹಿತವಾದಿ' ಹಾಗೂ ಬಾಸೆಲ್ ಮಿಶನ್ ಕ್ರೈಸ್ತರಿಂದ ನಡೆಸಲ್ಪಡುತ್ತಿದ್ದ 'ಸತ್ಯವ್ರತ' ಎರಡೂ ಪತ್ರಿಕೆಗಳು ಸ್ಪಷ್ಟವಾದ ಚಿತ್ರಣವನ್ನು ನೀಡುತ್ತವೆ. 'ಸತ್ಯವ್ರತ' ಪತ್ರಿಕೆಯು ಫಿಶ್ಚರ್‌ರವರು ಬೆಳೆಸಿದ ಮಿಶನ್ ಠಾಣ್ಯವು ಕಾಡಿನಂತಾಗಿದೆ. ಇದಕ್ಕೆ ಮುಖ್ಯ ಕಾರಣ ಅಲ್ಲಿದ್ದ ದೇಶಿಯ ಇವ್ಯಾಂಜಲಿಸ್ಟರೆ ಎಂದು ಪ್ರಬಲ ಆರೋಪವನ್ನು ಮಾಡುತ್ತದೆ. 'ನೀರೆಬೈಲೂರು' ಕ್ರೈಸ್ತರ ಪರಿಸ್ಥಿತಿಯು ಶೋಚನಿಯವಾಗಿದೆ ಎಂದು ವಿವರಿಸುತ್ತಾ ಪತ್ರಿಕೆಯು 'ಕಾರ್ಕಳಕ್ಕೆ 6–7 ಮೈಲು ದೂರದಲ್ಲಿ ರೆವ. ಫಿಶ್ಚರ್ ದೊರೆಗಳು ಹಸನು ಮಾಡಿದ ಮಿಶನ್ ಠಾಣ್ಯವಿದು. ಈಗ 12–13 ವರ್ಷಗಳ ಅವರ ಗೈರುಹಾಜರಿಯ ಕಾಲದಲ್ಲಿ ಅಲ್ಲಿದ್ದ ದೇಶಿಯ ಇವ್ಯಾಂಜಲಿಸ್ಟರ ಉದ್ಧಟತನದ ವರ್ತನೆಗಳಿಂದ ಫಿಶ್ಚರ್ ದೊರೆಗಳ ಕಾಲದಲ್ಲಿ ನಾಡಾಗಿದ್ದ ಈ ಠಾಣ್ಯವು ಪುನಃ ಕಾಡಿನಂತಾಗಿ ಎಷ್ಟೋ ಮಂದಿ ಕ್ರೈಸ್ತರು ಈ ಠಾಣ್ಯವನ್ನೇ ಬಿಟ್ಟರು. ಮತ್ತೆ ಕೆಲವರು ಹಿಂದೂ ಮತಕ್ಕೆ ಹಿಂತೆರಳಿದರು. ಅಳಿದುಳಿದ 50–60 ಮಂದಿ ಕ್ರೈಸ್ತರು ಈಗ ತಾನೇ ಇವ್ಯಾಂಜಲಿಸ್ಟರುಗಳ ಕಾಟದಿಂದ ಪಾರಾಗುವುದು ಸಾದ್ಯನೇ ಇಲ್ಲವೆಂದು ತಿಳಿದುಕೊಂಡಿರುವುದರಿಂದ ತನಗೆ ವಿಷಾದವಾಗಿದೆ'[30] ಎಂದು ಸತ್ಯವ್ರತವು ಎಂದು ವಿಷಾದಿಸುತ್ತದೆ. ಇಲ್ಲಿನ ಇವ್ಯಾಂಜಲಿಸ್ಟರ ವರ್ತನೆಯನ್ನು ಖಂಡಿಸುತ್ತಾ ಸತ್ಯವ್ರತವು 'ಹೋದ ಹೋದಲ್ಲಿ ದುರಹಂಕಾರವನ್ನು, ಅಧಿಕಾರವನ್ನೂ ತೋರಿಸಿ ಸಭಿಕರೊಡನೆ ದ್ವೇಷವನ್ನು ಕಟ್ಟಿಕೊಳ್ಳುವುದಾಗಲೀ, ಸಭಿಕರನ್ನು ಆದಷ್ಟು ಮಟ್ಟಿಗೆ ಹೊರಗೆ ಓಡಿಸಿ ತಾವು ಮನೆಯೊಳಗೆ ಕುಳಿತು ಸುಖಜೀವನ ಮಾಡುವುದಾಗಲೀ ಇಲ್ಲವೆ ಪೀಠದಲ್ಲಿ ನಿಂತು ಸಭಿಕರನ್ನು ನಿಂಧಿಸಿ ಮಾತನಾಡಿ ಅವರನ್ನು ಹುರಿದುಂಬಿಸುವುದಾಗಲೀ ಇವ್ಯಾಂಜಲಿಸ್ಟರ ಕರ್ತವ್ಯವೆಂದು ನಾವು ಭಾವಿಸಲಾರೆವು. ಅಲ್ಲಲ್ಲಿಯ ಮಿಶನ್ ಠಾಣ್ಯಗಳಲ್ಲಿ, ಸಭೆಗಳಲ್ಲಿ, ಇವ್ಯಾಂಜಲಿಸ್ಟರುಗಳು, ಸಭಾಪಾಸ್ಟರುಗಳೂ ಹಿಂದಿನ ಕಾಲದಂತೆ ಮುಂದಕ್ಕೂ ತಮ್ಮ ನಿಜವಾದ ಕರ್ತವ್ಯವನ್ನು ಹಿಂದಕ್ಕಿಟ್ಟು ದುರಹಂಕಾರದಿಂದಲೂ, ಅಧಿಕಾರದ ಹೆಮ್ಮೆಯಿಂದಲೂ ನಡೆಯುವುದಾದರೆ ಮಿಶನ್ ಕ್ಷೇತ್ರಗಳಲ್ಲಿ ನೆಮ್ಮದಿಯು ಉಳಿಯಲಾರದು'[31] ಎಂದು ಅಭಿಪ್ರಾಯಪಟ್ಟಿದೆ.

ಬಾಸೆಲ್ ಮಿಶನ್ ಅನುಪಸ್ಥಿತಿಯಲ್ಲಿ ಅಸ್ತಿತ್ವದಲ್ಲಿದ್ದ ಚರ್ಚ್ ಆಡಳಿತ ವ್ಯವಸ್ಥೆಯನ್ನು ಪ್ರಬಲವಾಗಿ ಖಂಡಿಸುತ್ತಾ ಸತ್ಯವ್ರತವು, ಅದು ಕಾರ್ಕಳ ಮಿಶನ್ ಠಾಣ್ಯದ ಪತನಕ್ಕೆ ಕಾರಣವಾಗಿದೆ ಎಂಬುದಾಗಿ ಟೀಕಿಸಿದೆ. ಇವ್ಯಾಂಜಲಿಸ್ಟರುಗಳ ಬಗ್ಗೆ ಚರ್ಚ್ ಬೋರ್ಡಿನವರಿಗೆ ಪತ್ರ ಬರೆದರೂ,

ಅದಕ್ಕೆ ಉತ್ತರಿಸದೇ, ಅದರ ಬಗ್ಗೆ ತನಿಖೆಯನ್ನೂ ಮಾಡದೇ ಉದಾಸೀನತೆಯನ್ನು ಅವರು ತೋರಿದ್ದಾರೆ. ಆದರೆ ಈಗ ಬಾಸೆಲ್ ಮಿಶನ್ ಬಂದಿರುವುದರಿಂದ ಇಂಥಾ ದಬ್ಬಾಳಿಕೆಯು ದೀರ್ಘಕಾಲ ಮುಂದುವರಿಯದು ಎಂಬುದಾಗಿಯೂ 'ಸತ್ಯವ್ರತ' ಎಚ್ಚರಿಸಿತ್ತು. ಬೃಹತ್ ಸಾಮ್ರಾಜ್ಯವನ್ನು ಆಳುವಂಥಾ ಬ್ರಿಟಿಷರಿಗೆ ಯಾರಾದರೂ ಪತ್ರ ಕಳುಹಿಸಿದರೆ, ಪತ್ರ ಮುಟ್ಟಿದೆ ಎಂಬ ಪ್ರತಿಕ್ರಿಯೆಯಾದರೂ ಲಭಿಸುತ್ತದೆ. ಆದರೆ ಚರ್ಚ್ ಬೋರ್ಡ್ ಉದ್ಧಟತನದ ಹಾಗೂ ಉದಾಸೀನತೆಯ ವರ್ತನೆಯನ್ನು ತೋರಿದ್ದು, ಇದರಿಂದ ಉಂಟಾಗುವ ಅಸಮಾಧಾನಕ್ಕೆ ಚರ್ಚ್ ಬೋರ್ಡಿನವರೇ ಹೊಣೆಗಾರರು ಎಂದು ಟೀಕಿಸಿದೆ.[32]

ಕಾರ್ಕಳದಲ್ಲಿ ಫಿಶ್ಚರ್‌ರವರಿಂದ ಸ್ಥಾಪಿಸಲ್ಪಟ್ಟಿದ್ದ ಠಾಣ್ಯವಾದ ಪರ್ಪಳೆಯು, ಅವರ ಪರಿಶ್ರಮದಿಂದಾಗಿ ಭವ್ಯವಾಗಿ ರೂಪುಗೊಂಡಿತ್ತು. ಆದರೆ ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಫಿಶ್ಚರ್‌ರವರ ನಿರ್ಗಮನದಿಂದಾಗಿ ಅಲ್ಲಿನ ಮಿಶನ್ ಠಾಣ್ಯ ಹಾಗೂ ಕ್ರೈಸ್ತರು ಹೇಗೆ ಅಧಃಪತನವನ್ನು ಕಂಡರು ಎಂಬುದನ್ನು 'ಹಿತವಾದಿ'ಯು ವಿವರಿಸುತ್ತಾ, 'ಎಷ್ಟೋ ಬಡ ಕುಟುಂಬಗಳು ಇಲ್ಲಿ ನೆಲೆಸಿದ್ದವು. ಆದರೆ ಫಿಶ್ಚರ್‌ರವರ ನಿರ್ಗಮನದಿಂದಾಗಿ, ಬಡ ಕ್ರೈಸ್ತ ಕುಟುಂಬಗಳೆಲ್ಲವೂ, ಕುರುಬನಿಲ್ಲದ ಕುರಿಗಳು ಚದುರಿಹೋಗುವಂತೆ ಚದುರಿ ಹೋದವು. ಇವರು ಜೀವನೋಪಾಯಕ್ಕೆ ದಿಕ್ಕು ಕಾಣದೆ, ಬೇರೆ ಕಡೆಗೆ ಹೋಗಿ, ಅನ್ಯರ ಸಂಪರ್ಕದಲ್ಲಿ ಇರುವವರಾದರು. ಹಲವರು ಹಳ್ಳಿಗಳಿಗೂ, ಕಾಫಿ ತೋಟಗಳಿಗೂ ಹೋಗಿ ಕ್ರೈಸ್ತ ಸಭೆಯ ಸಂಪರ್ಕವೇ ಇಲ್ಲದವರಾದರು. ಇಂಥವರಿಗೆ ದೇವರಾಧನೆ, ವೇದ ಪಠಣ, ಇಂಥ ವಿಷಯಗಳಿಲ್ಲದೇ, ದೈವ ಭಕ್ತಿ ಎಂಬ ಉರಿ ಕೆಂಡಕ್ಕೆ ಬೂದಿ ಮುಚ್ಚಿದಂತೆ ಇತ್ತು'[33] ಎಂಬುದಾಗಿ ಬಾಸೆಲ್ ಮಿಶನರಿಗಳಿಲ್ಲದ ಕಾಲದ ಮಿಶನ್ ಠಾಣ್ಯದ ಚಿತ್ರಣವನ್ನು ಪತ್ರಿಕೆ ನೀಡಿದೆ. ಬಾಸೆಲ್ ಮಿಶನರಿಯಾದ ಫಿಶ್ಚರ್‌ರವರ ಮರು ಆಗಮನದಿಂದಾಗಿ ಕಾರ್ಕಳ ಮಿಶನ್ ಠಾಣ್ಯವು ನವೀನ ಸೊಬಗನ್ನು ಪಡೆಯಿತು ಎಂದು ವಿವರಿಸಿರುವ 'ಹಿತವಾದಿ'ಯು, ಕೆಲವು ವರ್ಷಗಳಿಂದ ಕಾಡಾಗಿದ್ದ ಪರ್ಪಳೆಯು ಈಗ ನಾಡಾಗಿ ಬದಲಾಗಿ, ಶಿಥಿಲವಾಗಿದ್ದ ಕೆಲವು ಮಿಶನ್ ಕಟ್ಟಡಗಳು ಹೊಸ ಸ್ಥಿತಿಯನ್ನು ಪಡೆದಿವೆ. ಒಂದೆರಡು ಕುಟುಂಬಗಳಿದ್ದ ಪರ್ಪಳೆಯಲ್ಲಿ ಈಗ ಹೆಚ್ಚು ಕುಟುಂಬಗಳು ಬಂದು ನೆಲೆಸಿವೆ. ಚದುರಿ ಹೋಗಿರುವ ಕ್ರೈಸ್ತರ ಮಕ್ಕಳಿಗಾಗಿ 'ಬೋರ್ಡಿಂಗ್' ತೆರೆಯಲ್ಪಟ್ಟಿದ್ದು, ಅದರಲ್ಲಿ ಸುಮಾರು 20 ಮಕ್ಕಳು ವಿದ್ಯಾಭ್ಯಾಸ ಪಡೆಯುವಂತಾಗಿದೆ ಎಂದಿದೆ.[34] ಹೀಗೆ ಬಾಸೆಲ್ ಮಿಶನರಿಗಳ ಆಗಮನದೊಂದಿಗೆ ಮಿಶನ್ ಠಾಣ್ಯಗಳು ಹೊಸ ರೂಪವನ್ನು, ಹುಮ್ಮಸ್ಸನ್ನು ಪಡೆದುಕೊಂಡವು ಎಂಬುದನ್ನು ಪತ್ರಿಕೆಗಳು ವಿವರಿಸಿವೆ.

1927ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಸಭೆಗಳಲ್ಲಿನ ಕ್ರೈಸ್ತರಲ್ಲಿ ಬಹುಪಾಲು ಕ್ರೈಸ್ತರು ಬಡವರಾಗಿದ್ದು, ಇವರ ಸ್ಥಿತಿಯನ್ನು ಉತ್ತಮಪಡಿಸುವುದರ ಬಗ್ಗೆ ಮಿಶನ್ ಚಿಂತಿಸುತ್ತದೆ. ಕ್ರೈಸ್ತರು ಆದಷ್ಟು ವ್ಯವಸಾಯ ಕ್ಷೇತ್ರದಲ್ಲಿ ಮುಂದುವರಿಸುವಂತೆ ಪ್ರೋತ್ಸಾಹಿಸಬೇಕು ಎಂಬ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಈ ಕಾಲಾವಧಿಯಲ್ಲಿದ್ದ ಇನ್ನೊಂದು ಸಮಸ್ಯೆಯೆಂದರೆ, ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ವಿದ್ಯೆಯನ್ನು ಪಡೆಯುವುದರ ಬಗ್ಗೆ ಇದ್ದ ಆಸಕ್ತಿಯು ಕಡಿಮೆಯಾಗುತ್ತಾ ಬಂದಿರುವುದು. ಅದುದರಿಂದ ಕ್ರೈಸ್ತ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ನೋಡಿಕೊಳ್ಳುವುದು ಹಾಗೂ ಅವರನ್ನು 4ನೇ, 5ನೇ, ತರಗತಿಗಳವರೆಗೆ ಓದಿಸುವುದು ಉತ್ತಮ ಎಂಬ ನಿರ್ಣಯವಾಗುತ್ತದೆ.[35] ಹೀಗೆ ಬಾಸೆಲ್ ಇವಾಂಜಲಿಕಲ್ ಮಿಶನರಿಗಳು ನಂತರದಲ್ಲಿಯೂ ಕ್ರೈಸ್ತರಿಗೆ ಶಿಕ್ಷಣ ಒದಗಿಸುವ ನೀತಿಯನ್ನು ಮುಂದುವರಿಸುತ್ತಾರೆ. ಸಭೆಗಳು ಸ್ವತಂತ್ರಕ್ಕೆ, ಸ್ವಪರಿಪಾಲನೆಗೆ, ಸ್ವತಂತ್ರಾಡಳಿತೆಗೆ, ಸ್ವಾವರ್ಧನೆಗೆ ಮುಟ್ಟುವ ಸಮುದಾಯವಾಗಿ ಬೆಳೆಯುವಂತೆ ವಿಶೇಷ ಪ್ರಯತ್ನಗಳು ನಡೆಯುವ ಈ ಕಾಲದಲ್ಲಿ, ಕ್ರೈಸ್ತರು ಸಭೆಗಳಿಗೆ ನೀಡಬೇಕಾದ ದೇಣಿಗೆ ಸಹಾಯವು ಕ್ಷೀಣಿಸುತ್ತಿರುವುದರ ಬಗ್ಗೆ 1927ರ ಜಿಲ್ಲಾ ಸರ್ವಹಿರಿಯರ ಕೂಟದಲ್ಲಿ ಚರ್ಚೆಯಾಗುತ್ತದೆ. ಆದುದರಿಂದ ಸಭಾ ಹಣವನ್ನು ಸರಿಯಾಗಿ ವಸೂಲಾಗುವಂತೆ ನೋಡಿಕೊಳ್ಳಬೇಕೆಂಬ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಬಾಸೆಲ್ ಮಿಶನ್ ಕ್ರೈಸ್ತರ ನೈತಿಕ ಸ್ಥಿತಿಗತಿಗಳು ಬಹಳಷ್ಟು ಕ್ಷೀಣಿಸಿರುವುದನ್ನು ಗಮನಿಸಿದ ಕೂಟವು ಅದರ ಬಗ್ಗೆ ಬಹಳಷ್ಟು ಚಿಂತೆಯನ್ನು ವ್ಯಕ್ತಪಡಿಸುತ್ತದೆ. 'ಮಕ್ಕಳಲ್ಲಿ ದೇವರ ವಾಕ್ಯದ ತಿಳುವಳಿಕೆಯು ಬಹಳ ಕಡಿಮೆ. ಅನೇಕ ಮಂದಿ ಮಕ್ಕಳಲ್ಲಿ ದೇವರ ವಾಕ್ಯದ ವಚನಗಳನ್ನು ಕೇಳಿದರೆ ಅವರು ಕಂಗಾಲಾಗುತ್ತಾರೆ. ಗೀತೆಗಳು, ಸಂಗೀತ ಹಾಗೂ ಸ್ಪಷ್ಟವಾಗಿ ಓದಲು ಅವರಿಗೆ ಬರುವುದಿಲ್ಲ'. ಈ ದುರಾವಸ್ಥೆಯನ್ನು ನಿವಾರಿಸಲು ವಿಶೇಷ ಪ್ರಯತ್ನಗಳಾಗಬೇಕು. ಕ್ರೈಸ್ತ ಮಕ್ಕಳು ಸಾಧ್ಯವಾದಷ್ಟು ಮಟ್ಟಿಗೆ 5ನೇ ತರಗತಿವರೆಗೆ ಕಲಿಯಲೇಬೇಕು ಎಂಬ ಕಠಿಣ ನಿಲುವನ್ನು ಬಾಸೆಲ್ ಮಿಶನ್ ಮರಳಿ ಬಂದಾಗ ತೆಗೆದುಕೊಂಡಿತ್ತು. ದೇಶಿಯ ಮಿಶನ್‌ನ ಬಗ್ಗೆಯೂ ವಿಶೇಷವಾದ ಚರ್ಚೆಯಾಗಿ ಅದನ್ನು ಪಣಂಬೂರಿನ ಬದಲು, ಬೆಳ್ತಂಗಡಿ ಪ್ರದೇಶದಲ್ಲಿ ಆರಂಭಿಸಿ ಅಲ್ಲಿನ ಬಡ ಪಂಚಮರ ಮಧ್ಯೆ ಕಾರ್ಯ ನಡೆಸಬೇಕೆಂಬುದಾಗಿ ನಿರ್ಧಾರಗಳಾಗುತ್ತವೆ. ಈ ಸೇವೆಗೆ ಉಪದೇಶಕರಾದ ಜೇಮ್ಸ್ ಅಂಡ್ರೂಸ್‌ರನ್ನು ನೇಮಿಸಲಾಗುತ್ತದೆ.[36] ಸಭೆಗಳು ಆತ್ಮೀಯವಾಗಿ ಬಲಗೊಳ್ಳುವ ಉದ್ದೇಶದಿಂದ ಬಲವಾದ ಪ್ರಾರ್ಥನೆ ಮತ್ತು ಕುಟುಂಬಗಳಲ್ಲಿ ಪ್ರಾರ್ಥನೆ ಅಗತ್ಯ. ಆದುದರಿಂದ ಕ್ರೈಸ್ತರು ದೇವಾಲಯಕ್ಕೆ ಬರುವಂತೆ ನೋಡಿಕೊಳ್ಳಬೇಕೆಂಬ ನಿರ್ಣಯವಾಗುತ್ತದೆ. ಹೊಸದಾಗಿ ಕ್ರೈಸ್ತರಾಗುವವರನ್ನು ಆಗುವಷ್ಟು ಅವರು ತಮ್ಮ ಹಳೆಯ ಪ್ರವೃತ್ತಿಯಲ್ಲಿಯೇ ಮುಂದುವರಿಯುವಂತೆ ನೋಡಿಕೊಳ್ಳಬೇಕು. ಕುಡಿತಕ್ಕೆ ಒಳಗಾದವರಿಗೆ, ಮಾಟಮಂತ್ರ ಇತ್ಯಾದಿಗಳಲ್ಲಿ

ಸೇರಿರುವವರಿಗೆ ಪಾಸ್ತರರೂ, ಹಿರಿಯರೂ ಎಚ್ಚರಿಸಿ ಬುದ್ಧಿ ಹೇಳುವಂತೆ ಕೂಟವು ತಿಳಿಸುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದ ಅಪೀಲು ಕೋರ್ಟಿಗೆ ಬದಲಿಗೆ, ಮೊದಲು ಬಾಸೆಲ್ ಮಿಶನ್ ಕಾಲದಲ್ಲಿ ಇದ್ದ ಹಾಗೆ, ಮಲಬಾರ್, ದಕ್ಷಿಣ ಕನ್ನಡ, ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಿಗೆ ನಾಲ್ವರು ವಿದೇಶಿಯರು ಹಾಗೂ ಆರು ಮಂದಿ ದೇಶಿಯರು ಇರುವ ಚರ್ಚ್ ಕೌನ್ಸಿಲನ್ನು ಸ್ಥಾಪಿಸುವ ನಿರ್ಣಯವಾಗುತ್ತದೆ.[37] ಈ ರೀತಿ ಬಾಸೆಲ್ ಮಿಶನ್ ದಕ್ಷಿಣ ಕೆನರಾದ ಉಸ್ತುವಾರಿಯನ್ನು ಮರಳಿ ವಹಿಸಿಕೊಂಡ ಸಂದರ್ಭದಲ್ಲಿ ಅದು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿ ಬರುತ್ತದೆ. ಮೊದಲಿದ್ದ ಕೈಗಾರಿಕೆಗಳು ಈ ಸಂದರ್ಭದಲ್ಲಿ ಮಿಶನಿನ ಕೈ ತಪ್ಪಿ ಹೋದುದು, ಬಾಸೆಲ್ ಮಿಶನಿನ ಸಂಕಷ್ಟವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಇದು ಮಿಶನಿಗೆ ಹಣಕಾಸಿನ ಸಮಸ್ಯೆ ಹಾಗೂ ನಿರುದ್ಯೋಗದ ಸಮಸ್ಯೆಗಳನ್ನು ತಂದೊಡ್ಡುತ್ತದೆ.

ಹೊಸ ರೂಪ ಪಡೆದ ಮಿಶನ್ ಪತ್ರಿಕೆ ಕ್ರೈಸ್ತ ಹಿತವಾದಿ:

ಬಾಸೆಲ್ ಮಿಶನರಿಗಳ ಮರಳುವಿಕೆಯು ಇಲ್ಲಿನ ಮಿಶನ್ ಠಾಣ್ಯಗಳ ಹಲವು ವಿಚಾರಗಳಲ್ಲಿ ಗುರುತರವಾದ ಬದಲಾವಣೆಗಳಿಗೆ ಕಾರಣವಾಗುತ್ತದೆ. ಮಿಶನಿಗೆ ಸಂಬಂಧಪಟ್ಟ ಬಿದ್ದು ಹೋದ ಎಲ್ಲಾ ವಿಚಾರಗಳನ್ನು ಪುನರ್ ಸಂಘಟಿಸಲು ಅವುಗಳಿಗೆ ಹೊಸ ರೂಪ ನೀಡಲು ಬಾಸೆಲ್ ಮಿಶನರಿಗಳು ಮುಂದಾಗುತ್ತಾರೆ. ಆದುದರಿಂದ ಬಾಸೆಲ್ ಮಿಶನ್ ಮಂಗಳೂರಿನಲ್ಲಿ ಹೊಂದಿದ ಮುದ್ರಣಾಲಯವು ಗುರುತರವಾದ ಬದಲಾವಣೆಯನ್ನು ಗಮನಿಸುತ್ತದೆ. ಅಷ್ಟು ಮಾತ್ರವಲ್ಲದೆ ಅದು ಪ್ರಕಟಿಸುತ್ತಿದ್ದ ಪತ್ರಿಕೆಯಾದ 'ಕ್ರೈಸ್ತ ಹಿತವಾದಿ'ಯು ಹಲವು ಬದಲಾವಣೆಗಳನ್ನು ಕಂಡು, ತಾಂತ್ರಿಕವಾಗಿ, ಕಲಾತ್ಮಕವಾಗಿ ಹಾಗೂ ವಿಷಯಗಳಿಗೆ ಸಂಬಂಧಿಸಿದಂತೆ ಬದಲಾವಣೆಯನ್ನು ಕಂಡುಕೊಳ್ಳುತ್ತದೆ. 1928ರ 5ನೇ ಸಂಪುಟದ, 1ನೇ ಸಂಚಿಕೆಯಿಂದ 'ಕ್ರೈಸ್ತ ಹಿತವಾದಿ'ಯು ತನ್ನ ಪ್ರಕಟಣೆಯಲ್ಲಿ ಆಮೂಲಾಗ್ರವಾದ ಬದಲಾವಣೆಗಳನ್ನು ಜಾರಿಗೆ ತರುತ್ತದೆ. ಈ ಬದಲಾವಣೆಯು ಬಾಸೆಲ್ ಮಿಶನರಿಗಳ ಪ್ರಭಾವ ಹಾಗೂ ಅವರ ಕೆಲಸದಿಂದ ಎಂಬುದರಲ್ಲಿ ಸಂದೇಹವೇ ಇಲ್ಲ. ಬಾಸೆಲ್ ಇವಾಂಜಲಿಕಲ್ ಮಿಶನರಿಗಳು ಹೊಸ ಪತ್ರಿಕೆಯನ್ನು ಆರಂಭಿಸದೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದ ಅದೇ ಪತ್ರಿಕೆಯನ್ನು ಮುಂದುವರಿಸಿ, ಅದಕ್ಕೆ ಹೊಸ ರೂಪವನ್ನು ನೀಡುತ್ತಾರೆ. ಪತ್ರಿಕೆಯು ಕಲಾತ್ಮಕವಾಗಿ ಹಾಗೂ ತಾಂತ್ರಿಕವಾಗಿ ಬಹಳಷ್ಟು ಬದಲಾವಣೆಯನ್ನು ಗುರುತಿಸುತ್ತವೆ. ಇಲ್ಲಿ ಪತ್ರಿಕೆಯು ಅದರ ಜನನ, ನಂತರ ಅದಕ್ಕೆ ಸಿಕ್ಕಿದ ವಿವಿಧ ನಾಮಗಳು, ಪದೇ ಪದೇ ಅದಕ್ಕುಂಟಾದ ಆಪತ್ತು ವಿಪತ್ತುಗಳು, ಅದರಲ್ಲಾದ ಮಾರ್ಪಾಟುಗಳು ಹಾಗೂ 4 ವರ್ಷಗಳ ಹಿಂದೆ 'ಕ್ರೈಸ್ತ ಹಿತವಾದಿ' ಎಂಬ ನಾಮದೊಂದಿಗೆ ಕಾಣಿಸಿಕೊಂಡ ಬಗೆಯನ್ನು ನೆನಪಿಸಿಕೊಂಡಿದೆ. 1843ರಲ್ಲಿ ಎಂದರೆ 85 ವರ್ಷಗಳ ಹಿಂದೆ ಬಾಸೆಲ್ ಮಿಶನರಿಗಳು ಯಾವ ಉದ್ದೇಶದೊಂದಿಗೆ

ಪತ್ರಿಕೆಯನ್ನು ಆರಂಭಿಸಿದ್ದರೂ, ವಿವಿಧ ಮಾರ್ಪಾಡು, ವಿವಿಧ ವೇಷಗಳ ಹಾಗೂ ಯುದ್ಧ ಕಾಲದಲ್ಲಿ 9 ವರುಷಗಳ ಕಾಲದ ಮೌನದ ಹೊರತಾಗಿ ತನಗೆ ಈವರೆಗೆ ಇರುವ ಆ ಉದ್ದೇಶದಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂಬುದನ್ನು ಪತ್ರಿಕೆ ಸ್ಪಷ್ಟವಾಗಿ ಖಚಿತಪಡಿಸಿಕೊಂಡಿದೆ.[38]

4 ವರುಷಗಳ ಹಿಂದೆ 'ಕ್ರೈಸ್ತ ಹಿತವಾದಿ' ಎಂಬ ನಾಮಧೇಯದೊಂದಿಗೆ ತಿಂಗಳಿಗೊಮ್ಮೆ ಪ್ರಕಟಗೊಳ್ಳುತ್ತಿದ್ದುದನ್ನು ಉಲ್ಲೇಖಿಸುತ್ತಾ, ಈ ಕಾಲಾವಧಿಯಲ್ಲಿ ಓದುಗರಿಗೆ ಬೇಕಾದಷ್ಟು ಸೇವೆಯನ್ನು ಮಾಡಲು ಸಾಧ್ಯವಾಗಲಿಲ್ಲ ಎಂದಿದೆ. ಆದುದರಿಂದ ಇನ್ನು ಮುಂದೆ 14 ದಿವಸಗಳಿಗೊಮ್ಮೆ, ಎಂದರೆ ತಿಂಗಳಿಗೆ ಎರಡು ಸಲ ಪ್ರಕಟಗೊಳ್ಳುವುದಾಗಿಯೂ ಪತ್ರಿಕೆ ತಿಳಿಸುತ್ತದೆ. ಪತ್ರಿಕೆಯು ತನಗೆ ಈ ರೀತಿಯ ಹೊಸ ರೂಪ ಬದಲಾವಣೆಗೆ ಬಾಸೆಲ್ ಮಿಶನರಿಗಳ ಮರು ಆಗಮನವೇ ಕಾರಣವೆಂದು ತಿಳಿಸುತ್ತಾ ಈ ರೀತಿ ಉಲ್ಲೇಖಿಸುತ್ತದೆ. 'ನನ್ನನ್ನು ಸಲಹಿ, ಉದ್ಧರಿಸಿ ಬಹುಕಾಲ ಪೋಷಿಸಿಕೊಂಡು ಬರುತ್ತಿದ್ದು, ಯುದ್ಧದ ದುರ್ದೆಶೆಯ ದೆಸೆಯಿಂದ ದೇಶ ಬಿಡಬೇಕಾದವರಾಗಿ, ನಾನು 12 ವರುಷ ನಿರ್ಗತಿಕನಾಗಿ ಉಳಿಯಲಿಕ್ಕೂ, ಅದರಲ್ಲಿ 9 ವರುಷ ಅಜ್ಞಾತವಾಸದಲ್ಲಿರಲಿಕ್ಕೂ ಕಾರಣವಾಗಿದ್ದ ಆ ಬಾಸೆಲ್ ಜರ್ಮನ್ ಮಿಶನರಿಗಳು ದೇವರ ದಯೆಯಿಂದ ತಿರುಗಿ ತಮ್ಮ ಹಳೇ ಇಂಡಿಯಾ ಮಿಶನ್ ಕ್ಷೇತ್ರಕ್ಕೆ ಬರಲಿಕ್ಕಾದ್ದರಿಂದ ನನಗೆ ಈ ಹೊಸ ಸ್ಥಿತಿ ಬರಲಿಕ್ಕೆ ಕಾರಣವಾಯಿತು ಎಂಬುದನ್ನು ಕೇಳಿ ನಿಮಗೆ ಸಂತೋಷವಿರುವುದು?'[39] ಇಲ್ಲಿ ಪತ್ರಿಕೆಯು ತನ್ನ ಈ ಹೊಸ ರೂಪಕ್ಕೆ ಜರ್ಮನ್ ಮಿಶನರಿಗಳೇ ಕಾರಣಕರ್ತರೆಂದು ಹೇಳಿಕೊಂಡಿರುವುದನ್ನು ಗಮನಿಸಬಹುದು. ಮುಂಬರುವ ದಿನಗಳಲ್ಲಿ ತಿಂಗಳಿಗೆ ಎರಡಾವರ್ತಿ ಪ್ರಕಟಗೊಳ್ಳುವುದಾಗಿ ತಿಳಿಸುತ್ತಾ, ಓದುಗರಿಗೆ ಮೊದಲಿಗಿಂತಲೂ ಉತ್ತಮವಾದ ಬೇರೆ ಬೇರೆ ವಿಚಾರಗಳನ್ನು ಪ್ರಕಟಿಸುವುದರ ಬಗ್ಗೆ ಪತ್ರಿಕೆ ಸ್ಪಷ್ಟಪಡಿಸುತ್ತದೆ. 'ನಾನು ಇನ್ನು ಮುಂದಕ್ಕೆ ಪ್ರತಿ ತಿಂಗಳ 1ನೇ ತಾರೀಕಿಗೂ, 15ನೇ ತಾರೀಕಿಗೂ, ಹೀಗೆ ಪ್ರತಿ ಮಾಸದಲ್ಲಿ ಎರಡಾವರ್ತಿ ನಿಮ್ಮನ್ನು ಸಂದರ್ಶಿಸಲು ನಿರ್ಧರಿಸಿಕೊಂಡಿದ್ದೇನೆ. ಆ ಪಕ್ಷದಲ್ಲಿ ನಿಮಗೆ ಮುಂಚಿಗಿಂತಲೂ ಹೆಚ್ಚಾಗಿ ಆತ್ಮೀಯ, ನೈತಿಕ, ಮಾನಸಿಕ ಲಾಭಗಳು ಉಂಟಾಗುವ ಮಾರ್ಗವಾದೀತು. ಆ ನಿಮಿತ್ತ ವಿವಿಧ ಪ್ರಸಂಗಗಳನ್ನೂ, ದೇವರ ವಾಕ್ಯದ ವಿವಿಧ ವಚನಗಳ ವಿವರಣೆಗಳನ್ನೂ, ಲೋಕದಲ್ಲಿಯೂ ಸ್ವದೇಶದಲ್ಲಿಯೂ ನಡೆಯುವ ನಾನಾ ಮಹತ್ಕಾರ್ಯಗಳ ಅಥವಾ ಪ್ರಸ್ತಾಪಗಳ ವಿಚಾರವನ್ನೂ ಪ್ರಕಟಿಸುವೆನು. ಅದರ ಹೊರತು ವಿವಿಧ ಸ್ಥಿತಿಗತಿಗಳ ಪ್ರಯೋಜನಾರ್ಥವಾಗಿಯೂ ಜ್ಞಾನಲಾಭಕ್ಕಾಗಿಯೂ ವಿವಿಧ ಪ್ರಬಂಧಗಳನ್ನು ಬರೆಯುವೆನು. ಇನ್ನು ನೀತಿಕಥೆಗಳನ್ನೂ, ನಾನಾ ಲೋಕೋಪಕಾರಿಗಳು, ಶೂರರು, ಭಕ್ತರು ಮುಂತಾದವರ ಜೀವನಚರಿತ್ರೆಗಳನ್ನೂ ಲೇಖಿಸುವೆನು. ಅದಲ್ಲದೆ ಎಂದಿನಂತೆ ಮಿಶನು ಮತ್ತು ಸಭಾ ಸಂಬಂಧವಾದ

ವಿಶೇಷ ವಾರ್ತೆಗಳನ್ನೂ ಸ್ಥಳಿಕ, ಇಂಡಿಯಾ, ಲೋಕಸಂಬಂಧವಾದ ವಾರ್ತೆಗಳನ್ನು ಪ್ರಚುರಪಡಿಸುವೆನು'.[40]

ಪತ್ರಿಕೆಗೆ ಸಂಬಂಧಿಸಿದಂತೆ ಓದುಗರು, ಜ್ಞಾನಿಗಳು ಕೂಡುವ ಸೂಚನೆಗಳನ್ನೂ, ಬರೆದು ಕಳುಹಿಸುವ ಪ್ರಸಂಗ, ಪ್ರಬಂಧ, ವಾರ್ತೆ ಇತ್ಯಾದಿಗಳನ್ನು ಸಂತೋಷದಿಂದ ಸ್ವೀಕರಿಸುವುದಾಗಿ ತಿಳಿಸುತ್ತದೆ. ಮೇಲೆ ಹೇಳಿದ ವಿಚಾರಗಳನ್ನು ಹೊರತುಪಡಿಸಿ ಬೇರಾವುದೇ ಉದ್ದೇಶ ತನಗಿಲ್ಲ ಎನ್ನುತ್ತಾ ಪತ್ರಿಕೆಯು 'ನನಗೆ ಮೇಲೆ ಹೇಳಿದ ಈ ವಿವಿಧ ಕರ್ತವ್ಯಗಳಿದ್ದಾಗ್ಯೂ, ರಾಜಕೀಯ ಮತ್ತು ಸ್ವಕೀಯ ಕಾರ್ಯಗಳ ಸಂಬಂಧವಾದವುಗಳನ್ನು ಪ್ರಸ್ತಾಪಿಸಿ ಯಾವದೊಂದು ಪಕ್ಷ ಹಿಡಿದು ಸರಕಾರವನ್ನಾಗಲಿ ಇತರರನ್ನಾಗಲಿ ದೂಷಿಸುವ ಅಥವಾ ಖಂಡಿಸುವ ಅಭಿಪ್ರಾಯವು ನನಗೆ ಇಲ್ಲವೆ ಇಲ್ಲ. ಆದರೆ ಕ್ರೈಸ್ತನಾದ ನಾನು ಈ ವಿಷಯಗಳಲ್ಲಿ ಕ್ರೈಸ್ತರ ಯಥಾರ್ಥವಾದ ಅಭಿಪ್ರಾಯವು ಹೇಗಿರುವುದು ಎಂಬುದನ್ನು ಒಮ್ಮೊಮ್ಮೆ ಅವಶ್ಯ ಬಿದ್ದಾಗ ಹೇಳದಿರಲಾರೆನು. ಈ ಕಾರ್ಯವನ್ನು ನೆರವೇರಿಸುವುದರಲ್ಲಿ ಸರ್ವರ ಮೆಚ್ಚಿಗೆಯನ್ನು ಗಳಿಸಿಕೊಳ್ಳುವುದು ಅಸಾಧ್ಯವೆಂದು ನಿಮಗೂ ತಿಳಿದಿರುವುದು. ಆದರೆ ಈ ಘನವಾದ ಕೆಲಸವನ್ನು ನಡಿಸುವುದಕ್ಕೆ ಮೇಲಿನಿಂದ ಬರುವ ಜ್ಞಾನವೂ ದಿವ್ಯಾತ್ಮನ ಶಕ್ತಿಯೂ ಅತ್ಯಗತ್ಯವಾಗಿರುವುದಲ್ಲದೆ, ನಿಮ್ಮೆಲ್ಲರ ಸಹಾನುಭೂತಿಯೂ ಸಹಾಯವೂ ಉದಾರಭಾವವೂ ಅವಶ್ಯವಾಗಿದೆ'[41] ಎಂದು ಹಿತವಾದಿಯು ತಿಳಿಸುತ್ತದೆ. ಇಲ್ಲಿ ಪತ್ರಿಕೆಯು ಬ್ರಿಟಿಷ್ ಸರಕಾರದ ಬಗ್ಗೆ ಬಹಳ ಎಚ್ಚರಿಕೆಯ ನಡೆಯನ್ನು ತೋರಿದೆ. ಅದು ಹೇಳಿಕೊಳ್ಳುವಂತೆ ಅದಕ್ಕೆ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ ಅಂಶಗಳನ್ನು ಪ್ರಸ್ತಾಪಿಸಿ, ಸರಕಾರವನ್ನು ಖಂಡಿಸುವ ಆಸಕ್ತಿ ಇಲ್ಲವೆಂದು ಸ್ಪಷ್ಟಪಡಿಸಿಕೊಂಡಿದೆ. ಮತ್ತೊಂದೆಡೆ ತಾನು ಕ್ರೈಸ್ತರ ಅಭಿಪ್ರಾಯಗಳನ್ನು ಅವಶ್ಯವಿದ್ದಾಗ ವ್ಯಕ್ತಪಡಿಸುವುದಾಗಿಯೂ ಹೇಳಿಕೊಳ್ಳುತ್ತದೆ. ಎಂದರೆ ಹಿತವಾದಿಯು ಬಾಸೆಲ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಕ್ರೈಸ್ತರ ಧ್ವನಿಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ಬಾಸೆಲ್ ಮಿಶನರಿಗಳ ಮರು ಆಗಮನದೊಂದಿಗೆ ಪತ್ರಿಕೆಯು ಅಮೂಲಾಗ್ರವಾದ ಬದಲಾವಣೆಯನ್ನು ಕಂಡುಕೊಳ್ಳುತ್ತದೆ. ಇದು ಬಾಸೆಲ್ ಮಿಶನರಿಗಳ ಉತ್ತಮವಾದ ಕಾರ್ಯದಕ್ಷತೆಗೆ ಉದಾಹರಣೆಯಾಗಿದೆ ಎನ್ನಬಹುದು. ಆ ಕಾಲದಲ್ಲಿ ಬಾಸೆಲ್ ಮಿಶನರಿಗಳು ಸಂಕಷ್ಟವನ್ನು ಎದುರಿಸಿದರೂ, ಮಾಡುವಂತಹ ಕಾರ್ಯದಲ್ಲಿ ಶ್ರೇಷ್ಟತೆಯನ್ನು ಮೆರೆದಿದ್ದರು ಎಂಬುದರಲ್ಲಿ ಅನುಮಾನವಿಲ್ಲ. ಇದು ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳಿಗೆ ಅಪಾರವಾದ ಪ್ರಖ್ಯಾತಿಯನ್ನು ತಂದು ಕೊಟ್ಟಿತ್ತು.

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲಾವಧಿಯಲ್ಲಿ ಪ್ರಾರಂಭವಾದ ಕ್ರೈಸ್ತಹಿತವಾದಿಯು ತದನಂತರ ನಿರಂತವಾಗಿ ಲುಸಾನ್ ಕಮಿಟಿ ಹಾಗೂ ಕೆನರೀಸ್

ಇವ್ಯಾಂಜಲಿಕಲ್ ಮಿಶನ್ ಪರವಹಿಸುತ್ತಾ, ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ವಿರೋಧಿಗಳ ಮೇಲೆ ಟೀಕೆಗಳನ್ನು ಮಾಡುವುದನ್ನು ಗಮನಿಸಬಹುದು. ಒಂದು ಹಂತದಲ್ಲಿ ಹಿತವಾದಿಯು ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳು ವಾಪಾಸ್ಸು ಬರುವುದು ಬೇಡ ಎಂಬ ವಾದವನ್ನು ಮಾಡುವ ಹಂತಕ್ಕೆ ಮುಟ್ಟುತ್ತದೆ. ಈ ಹಂತದಲ್ಲಿ ಪತ್ರಿಕೆಗಳಾದ ಹಿತವಾದಿ ಮತ್ತು ಸತ್ಯವ್ರತಗಳ ನಡುವೆ ಭೀಕರ ಕಲಹವೇ ಆರಂಭವಾಗುತ್ತದೆ. ಕೊನೆಗೂ ಬಾಸೆಲ್ ಮಿಶನರಿಗಳು ಬರುವುದು ಖಚಿತವೆಂದಾದಾಗ 'ಹಿತವಾದಿ'ಯು ಬಾಸೆಲ್ ಮಿಶನರಿಗಳ ಬಗ್ಗೆ ತನಗಿದ್ದ ಮೊದಲಿನ ಅಭಿಪ್ರಾಯವನ್ನು ಬಿಟ್ಟು ಬಿಡುವುದನ್ನು ಗಮನಿಸಬಹುದು. ತದನಂತರದಲ್ಲಿ ಅದು ನಿಧಾನವಾಗಿ ಬಾಸೆಲ್ ಮಿಶನ್ ಪರವಾಗಿ ಮಾತನಾಡುತ್ತದೆ. 'ಬಾಸೆಲ್ ಮಿಶನು ತಿರುಗಿ ಇಂಡಿಯಾಕ್ಕೆ ಬರಬಾರದೆಂದು ನೆನಸುವ ಅಥವಾ ಅದಕ್ಕೆ ಪ್ರಯತ್ನಿಸುವ ದುಷ್ಟನು ನಮ್ಮ ಸಭೆಯಲ್ಲಿ ಯಾರಿದ್ದಾರೋ ನಾವರಿಯೆವು'[42] ಎಂದು ಬಾಸೆಲ್ ಮಿಶನ್ ವಾಪಾಸ್ಸು ಬರುವುದಕ್ಕೆ ಯಾರ ವಿರೋಧವೂ ಇಲ್ಲ ಎಂಬುದನ್ನು ತಿಳಿಸಲು ಪ್ರಯತ್ನಿಸಿದೆ. ಬಾಸೆಲ್ ಮಿಶನರಿಗಳು ಬರುವಂತಹ ಕಾಲದಲ್ಲಿ ಪತ್ರಿಕೆಯು 'ನಮಗೆ ಸ್ವಾತಂತ್ರ ಬೇಕೆಂಬುದನ್ನು ನಾವು ಅಪೇಕ್ಷಿಸುತ್ತೇವೆ. ಅದು ನ್ಯಾಯವಾದ ಅಪೇಕ್ಷೆಯೇ ಸರಿ. ಏಕೆಂದರೆ ಇನ್ನು 7 ವರುಷ ದಾಟಿದರೆ ನಮ್ಮ ಇಂಡಿಯಾ ಮಿಶನಿಗೆ 100 ವರುಷಗಳಾಗುತ್ತವೆ. ಸ್ವಾತಂತ್ರ ಎಂಬ ಶಬ್ದವನ್ನು ನಾವು ಲೌಕಿಕದ ಪ್ರಕಾರ ಅರ್ಥಮಾಡಿ ಆ ಸ್ವಾತಂತ್ರಕ್ಕೆ ಪೇಚಾಡಬಾರದು. ದೇವರ ರಾಜ್ಯದಲ್ಲಿರುವ ಸ್ವಾತಂತ್ರವು ಸಂಪೂರ್ಣ ಬೇರೆಯಾಗಿದೆ'[43] ಎಂದಿದೆ. ಮತ್ತೊಂದೆಡೆ 'ಸತ್ಯವ್ರತ'ವು ತನ್ನ ಹಳೇ ಸಾಮಾನ್ಯ ಶೈಲಿಯನ್ನೇ ಮುಂದುವರಿಸುತ್ತಾ, ವಿಚಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಬರೆಯುತ್ತದೆ. ಬಾಸೆಲ್ ಮಿಶನ್ ಬಗ್ಗೆ ಪತ್ರಿಕೆಯು 'ಬಾಸೆಲ್ ಮಿಶನ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುನಃ ಕಾರ್ಯಪ್ರವೃತ್ತರಾಗಿ ಒಂದು ವರ್ಷ ಮುಗಿಯಿತು. ಈ ಕಳೆದು ಹೋದ ಒಂದು ವರ್ಷದ ಕಾಲದಲ್ಲಿ ನಮ್ಮ ಜಿಲ್ಲೆಯ ಕ್ರೈಸ್ತ ಸಮಾಜದಲ್ಲಿ ಯಾವ ಯಾವ ಸುಧಾರಣೆಗಳು ಜಾರಿಗೆ ಬಂದುವು ಎಂಬುದಾಗಿ ನಮ್ಮ ಸಾಮಾಜಿಕರು ಒಮ್ಮೆ ಹಿಂದಕ್ಕೆ ತಿರುಗಿ ನೋಡುವುದು ಹಿತವಾಗಿದೆ'[44] ಎಂದು ಉಲ್ಲೇಖಿಸುತ್ತದೆ. ಹೀಗೆ ಬಾಸೆಲ್ ಮಿಶನರಿಗಳು ಇಲ್ಲಿಗೆ ಬಂದು ಒಂದು ವರ್ಷವಾದಾಗ ಅದರ ಕಾರ್ಯಗಳ ಬಗ್ಗೆ ವಿಶ್ಲೇಷಣೆ ಮಾಡಲು ಮುಂದಾಗುತ್ತದೆ. ಪುತ್ತೂರು, ಕಾರ್ಕಳ ಮುಂತಾದ ಠಾಣ್ಯಗಳಿಗೆ, ಈ ಠಾಣ್ಯಗಳಲ್ಲಿ ಮೊದಲಿದ್ದ ಅನುಭವಶಾಲಿಗಳಾದ ಫಿಶ್ಚರ್, ರಿಕ್ಟರ್ ಮುಂತಾದ ಮಿಶನರಿಗಳೇ ಬಂದಿರುವುದರಿಂದ ಮಿಶನ್ ಕಾರ್ಯ ಸರಾಗವಾಗಿ ಮುಂದುವರಿಯುತ್ತಿದೆ. ಇದ್ದ ಶಾಲೆಗಳು ಮುಚ್ಚಲ್ಪಡಲಿಲ್ಲ. ಹೀಗೆ ಈ ಒಂದು ವರ್ಷದ ಕಾಲದಲ್ಲಿ ತುಸು ಬದಲಾವಣೆಗಳಾಗಿವೆ ಎಂಬುದನ್ನು ಸತ್ಯವ್ರತ ಒಪ್ಪಿಕೊಂಡಿದೆ. ಮುಂದುವರಿದು ಪತ್ರಿಕೆಯು ಕೆಲವು ಟೀಕೆಗಳನ್ನು ಮಾಡುತ್ತಾ

'ಚಾಡಿಗಾರರಿಗೆ ಮತ್ತು ಸ್ತುತಿ ಪಾಠಕರಿಗೆ ಮಾತ್ರ ಈ ಕಾಲದಲ್ಲಿ ಯಾವ ಬಗೆಯ ಇಳಿಮುಖವೂ ಉಂಟಾಗದಿದ್ದುದು ಶೋಚನೀಯವಾಗಿದೆ. ಕ್ರೈಸ್ತ ಸಮಾಜವು ಶಿಕ್ಷಣದಲ್ಲಿ ಮುಂದುವರಿಯುವ ಚಿನ್ಹೆಗಳು ತೋರಿಬರುವುದಾದರೂ ಮಿಶನಿನಿಂದ ಶಿಕ್ಷಣಕ್ಕೆ ಪ್ರೋತ್ಸಾಹವು ದೊರೆಯುವಂತೆ ತೋರುವುದಿಲ್ಲ. ಟ್ರೈನಿಂಗಿಗೆ ಸೇರುವ ಯುವಕ ಯುವತಿಯರ ದಾಖಲು ಅರ್ಜಿಗೆ ದಸ್ಕತ್ತು ಹಾಕುವವರಿಲ್ಲ. ಪರೀಕ್ಷೆಯಲ್ಲಿ ಪಾಸಾದವರಿಗೆ ಕೆಲಸ ಕೊಡುವವರಿಲ್ಲ'[45] ಎಂದಿದೆ. ಬಾಸೆಲ್ ಮಿಶನ್ ಇಲ್ಲಿಗೆ ಬಂದು ವರ್ಷವಾದ ಸಂದರ್ಭದಲ್ಲಿ ವಿಶೇಷ ಬದಲಾವಣೆಗಳನ್ನು ಬಯಸುವುದು ನ್ಯಾಯವಲ್ಲ ಎನ್ನುತ್ತಾ, ಮುಂದೆ ಬರುವ ಕಾಲದಲ್ಲಿ ಬಾಸೆಲ್ ಮಿಶನರಿಗಳು ಕ್ರೈಸ್ತ ಸಮಾಜದ ಏಳಿಗೆಗೆ ತಕ್ಕ ಮನಸ್ಸು ಕೊಡುವರೆಂಬ ಆಶಾಭಾವನೆಯನ್ನು ಸತ್ಯವ್ರತವು ಇರಿಸಿಕೊಂಡಿತ್ತು. ಇದೇ ಕಾಲದಲ್ಲಿ ಬಾಸೆಲ್ ಮಿಶನ್ ತಾನು ಕೆಲಸದ ಕ್ಷೇತ್ರಗಳನ್ನು ವಿಸ್ತರಿಸಿಕೊಂಡಿದ್ದರಿಂದ ಖರ್ಚು ಕೂಡಾ ಹೆಚ್ಚಾಗಿದೆ ಎಂದು ಹೇಳಿಕೊಳ್ಳುತ್ತದೆ. ಆದುದರಿಂದ ಬಾಸೆಲ್ ಮಿಶನ್ ಕ್ರೈಸ್ತರು ಸಭೆಗಳಿಗೆ ಹಾಗೂ ಮಿಶನ್‌ಗೆ ಉದಾರವಾದ ವಂತಿಗೆ ದಾನಗಳನ್ನು ನೀಡಬೇಕು ಎಂದು ಮನವಿ ಮಾಡುವುದನ್ನು ಗಮನಿಸಬಹುದು.[46]

ಮಿಶನ್ ವ್ಯವಸ್ಥೆಯಲ್ಲಿನ ಅಸಮಾಧಾನ:

ಮಹಾತ್ಮ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿಕೊಂಡ ಕಾಲದಲ್ಲಿ, ಅದರಲ್ಲೂ ಅಸಹಕಾರ ಮತ್ತು ದಂಡಿ ಯಾತ್ರೆಯ ಕಾಲಾವಧಿಯಲ್ಲಿ, ರಾಷ್ಟ್ರೀಯ ಹೋರಾಟದ ಉತ್ಸಾಹ ಹಾಗೂ ಅದನ್ನು ಅನುಕರಿಸುವ ವರ್ತನೆಗಳು ಮಿಶನರಿಗಳಿಗೆ ಬಹಳಷ್ಟು ಇಕ್ಕಟ್ಟಿನ ಪರಿಸ್ಥಿತಿಯನ್ನು ತಂದೊಡ್ಡುತ್ತವೆ. ಏಕೆಂದರೆ ರಾಷ್ಟ್ರೀಯ ಹೋರಾಟದ ಉತ್ಸಾಹವು ಚರ್ಚ್ ವ್ಯವಸ್ಥೆಯ ಒಳಗಡೆ ಸ್ವಾತಂತ್ರ್ಯದ ಗಾಳಿಯನ್ನು ಬೀಸುವುದು ಮಾತ್ರವಲ್ಲದೇ, ಚರ್ಚ್‌ನ ವ್ಯವಸ್ಥೆಗೆ [authority in church] ಅವಿಧೇಯತೆಯನ್ನು [Insubordination] ತೋರ್ಪಡಿಸುವುದಕ್ಕೆ ಕಾರಣವಾಗುತ್ತದೆ. ಈ ರೀತಿಯ ವಿಚಾರಗಳು ಮುಖ್ಯವಾಗಿ ದಕ್ಷಿಣ ಮರಾಠ ಪ್ರದೇಶದಲ್ಲಿ ಕಂಡುಬರುತ್ತದೆ. ದಕ್ಷಿಣ ಮರಾಠದಲ್ಲಿ ಅಶಿಸ್ತು [breakdown of discipline] ಉದ್ಭವಿಸಲು ಗುಂಪುಗಾರಿಕೆಯು ಕಾರಣವಾಗುತ್ತದೆ. ಮಾಜಿ ಸೇನಾ ಡಾಕ್ಟರ್‌ರಾದ ಡಾ.ಸಿ.ಜೆ. ಪ್ರಭಾಕರ್ [Dr. C.J. Prabhakar] ರವರ ಪಕ್ಷವು/ಗುಂಪು, ಮಿಶನ್‌ನಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸಬೇಕೆಂಬ ಹಂಬಲವನ್ನು ಹೊಂದಿರುತ್ತದೆ. 1926ರಲ್ಲಿ ನಡೆದ ಚುನಾವಣೆಗಳಲ್ಲಿ ಸೋತ ಇವರ ಪಕ್ಷವು ನಂತರದಲ್ಲಿ ಚಿಕ್ಕ ಪಕ್ಷ ಅಥವಾ ಅಲ್ಪಸಂಖ್ಯಾತ [Small or Minority Party] ಪಕ್ಷ ಎಂದು ಕರೆದುಕೊಳ್ಳುತ್ತದೆ. ಇವರು ಟಾಮ್ಲಿನ್‌ಸನ್‌ರ ಕಾಲದಿಂದಲೆ ಚರ್ಚ್ ಮತ್ತು ಮಿಶನ್,

ಎರಡೂ ವಿಚಾರಗಳ ಆಡಳಿತದಲ್ಲಿ ಮಿಶನರಿಗಳು ಭಾಗವಹಿಸುವುದನ್ನು ಪ್ರಬಲವಾಗಿ ವಿರೋಧಿಸಿದ್ದರು. ಕೆಲವು ಪಾಸ್ಟರುಗಳಾದ ಮರಿ ಗೌಡ [Mari Gouda], ಚೆನ್ನಪ್ಪ ಉತ್ತಂಗಿ [Channappa Uttangi] ಮತ್ತು ಎನ್. ರಾಮ್‌ತಲ್ [N.Ramthal] ಮುಂತಾದ ವ್ಯಕ್ತಿಗಳ ಬೆಂಬಲ ಈ ಪಕ್ಷಕ್ಕಿತ್ತು. ಮತ್ತೊಂದು ಪಕ್ಷವಾದ 'ದೊಡ್ಡ ಪಕ್ಷ'ವು [Big party] ಮಿಶನಿನ ಉದ್ಯೋಗಿ ಹಾಗೂ ಪಾಸ್ಟರ್ಸ್‌ಗಳನ್ನು [pastors] ಒಳಗೊಂಡಿತ್ತು. ಇವರು ಮಿಶನಿನ ಮೇಲೆ ಬಹಳಷ್ಟು ಪ್ರೀತಿಯನ್ನು ಹಾಗೂ ಮಿಶನರಿಗಳ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದರು. 1926ರಲ್ಲಿ 'ಚಿಕ್ಕ ಪಕ್ಷ' ವನ್ನು ಸೋಲಿಸಿದ ನಂತರ, ಇವರು ಶಾಂತಪ್ಪ ಬುಡಗಿ [Shantappa Budagi], ಡಿ. ಬಂಕಾಪುರ್ [D.Bankapur] ಮತ್ತು ಬಿ.ಜಿ. ಮಟಪತಿಯವರ [B.G.Matapathi] ನೇತೃತ್ವದಲ್ಲಿ ಜಿಲ್ಲಾ ಚರ್ಚ್ ಬೋರ್ಡಿನಲ್ಲಿ ಪ್ರಾಬಲ್ಯವನ್ನು ಸಾಧಿಸಿರುತ್ತಾರೆ. ಈ ನಾಯಕರು 'ಚಿಕ್ಕ ಪಕ್ಷ'ದವರು ಪಾಸ್ಟರ್ಸ್ [Pastors] ಗಳ ಮೇಲೆ ಮಾಡುತ್ತಿದ್ದ ದಾಳಿಗಳಿಂದ [Harassments] ಅವರಿಗೆ ಭದ್ರತೆಯನ್ನು ಒದಗಿಸಿದ್ದರು.[47]

'ಚಿಕ್ಕ ಪಕ್ಷ'ದವರ ಅಸಮಾಧಾನಕ್ಕೆ ಅವರದ್ದೇ ಆದ ಕಾರಣಗಳಿದ್ದವು. ಅವರು ಹೇಳುವಂತೆ ಭಾರತೀಯ ಕ್ರೈಸ್ತರಿಗೆ ಆಡಳಿತದಲ್ಲಿ ಯಾವುದೆ ಅವಕಾಶವನ್ನು ಕಲ್ಪಿಸದೇ, 1922ರ ಸಂವಿಧಾನಕ್ಕೆ ಅಗೌರವವನ್ನು ಸೂಚಿಸಲಾಗಿದೆ. ಮಿಶನರಿಗಳ ಹಾಗೂ ಅವರ ಬೆಂಬಲಿಗರ ದರ್ಪಿಷ್ಟ ವರ್ತನೆಗಳು ಇವರ ಈ ಮೇಲಿನ ಅಭಿಪ್ರಾಯಕ್ಕೆ ಪ್ರಮುಖ ಕಾರಣಗಳಾಗಿವೆ. ಈ ಎರಡೂ ಪಕ್ಷಗಳೂ ಅಧಿಕಾರಕ್ಕಾಗಿ ಪರಸ್ಪರ ಪ್ರಬಲ ಹೋರಾಟವನ್ನು ನಡೆಸುತ್ತವೆ. ಮಾತ್ರವಲ್ಲದೇ ಅವರ ಗುರಿ ಸಾಧನೆಗಾಗಿ ಕಾನೂನು ಸಮರವನ್ನು ನಡೆಸುತ್ತವೆ. ಶೊಸ್ಸರ್ ಸೇರಿದಂತೆ ಬಾಸೆಲ್ ಮಿಶನಿನ ಕೆಲವು ಹಳೆ ಮಿಶನರಿಗಳು ಇವರ ಮಧ್ಯೆ ಶಾಂತಿ ಹುಟ್ಟುಹಾಕಲು ಮಾಡಿದ ಪ್ರಯತ್ನಗಳು ಪ್ರಯೋಜನಕಾರಿಯಾಗದೆ ಹೋಗುತ್ತವೆ. ಬಾಸೆಲ್ ಮಿಶನಿನ ಹೋಮ್ ಕಮಿಟಿಯ ಡೈರೆಕ್ಟರ್‌ರಾದ ಕೆ. ಹರ್ಟೆನ್‌ಸ್ಟೈನ್‌ರವರು ಭಾರತಕ್ಕೆ ಭೇಟಿ ನೀಡಿದ ಕಾಲಾವಧಿಯಲ್ಲಿ ಜನವರಿ 1929ರಲ್ಲಿ ದಕ್ಷಿಣ ಮರಾಠ ಪ್ರದೇಶಕ್ಕೆ ತೆರಳಿದ್ದ ಸಂದರ್ಭದಲ್ಲಿ ಅವರನ್ನು 'ಚಿಕ್ಕ ಪಕ್ಷ' ಸ್ವಾಗತಿಸುವುದಿಲ್ಲ. 'ಸತ್ಯವ್ರತ' ಪತ್ರಿಕೆಯಲ್ಲಿ ಪ್ರಕಟವಾದ ಹಾಗೂ ಶೊಸ್ಸರ್‌ರವರಿಗೆ ಬರೆದ ಪತ್ರದಲ್ಲಿ ಅವರು ತಮ್ಮ ಭಾವನೆಗಳನ್ನು ಹೊರಗೆಡವಿರುತ್ತಾರೆ. ಅವರು ಹೇಳಿರುವಂತೆ "ನಿಮ್ಮ ಸಿಂಹ ಘರ್ಜನೆಯನ್ನು ನಾವು ಗಮನಿಸಿದ್ದೇವೆ. ಅವು ಕೈಸರನ ಆಜ್ಞೆಗಳಾಗಿವೆ.........ಮಿಶನಿನ ಡೈರೆಕ್ಟರರು ಬಂದು ಹೋದರು........ಅವರ ಆಗಮನವು ಮೊದಲಿದ್ದ ಚಿತ್ರಣಕ್ಕಿಂತ ಬಹಳಷ್ಟು ಕೆಟ್ಟದಾದ ಚಿತ್ರಣವನ್ನು ಹುಟ್ಟು ಹಾಕಿದೆ.........ಬಾಸೆಲಿನ ನಮ್ಮ ಇಂದಿನ ಅಧಿಪತಿಗಳಿಗೆ ನಮ್ಮನ್ನು ಗುಲಾಮರಂತೆ ಮಾರಾಟ ಮಾಡಲಾಗಿದೆ. ನೀವು ಒಬ್ಬಂಟಿಗರಾಗಿ

ನಮ್ಮನ್ನು ನಿರ್ವಹಿಸುವಂತಾಗುವಂತೆ ಕಟ್ಟಿ ಹಾಕುವಲ್ಲಿ ನಮ್ಮ ಬಂಧು ಬಳಗದವರು ನಿಮಗೆ ಸಹಾಯ ಮಾಡಿದರು".[48] ಈ ರೀತಿ 'ಚಿಕ್ಕ ಪಕ್ಷ'ವು ಬಾಸೆಲ್ ಮಿಶನ್ ಹಾಗು ಮಿಶನರಿಗಳ ಬಗ್ಗೆ ತನಗಿದ್ದ ಅಭಿಪ್ರಾಯವನ್ನು ಹೊರಹಾಕುತ್ತದೆ.

ಬಾಸೆಲ್ ಮಿಶನಿನ ಡೈರೆಕ್ಟರ್‌ರಾದ ಡಾ.ಕೆ.ಹರ್ಟೆನ್‌ಸ್ಟೈನ್‌ರ ಭಾರತ ಭೇಟಿ:

ಬಾಸೆಲ್ ಮಿಶನಿನ ಹೋಮ್ ಕಮಿಟಿಯ ಡೈರೆಕ್ಟರ್‌ರಾದ ಡಾ.ಕೆ.ಹರ್ಟೆನ್‌ಸ್ಟೈನ್‌ರವರು [Dr.K.Hartenstein] 1928-29ರ ಕಾಲಾವಧಿಯಲ್ಲಿ ಭಾರತಕ್ಕೆ ತಮ್ಮ ಮೊದಲ ಭೇಟಿಯನ್ನು ನೀಡುತ್ತಾರೆ. ಸ್ವತಃ ಮಿಶನನ್ನು ಗಮನಿಸುವುದು ಹಾಗೂ ಮಿಶನ್ ಆಸ್ತಿಯನ್ನು ಪುನಃ ಪಡೆದುಕೊಳ್ಳುವುದು ಅವರ ಪ್ರಮುಖ ಉದ್ದೇಶಗಳಾಗಿದ್ದವು. ಯುದ್ಧದ ನಂತರ ಬಾಸೆಲ್ ಮಿಶನಿನ ಸ್ಥಿತಿಗತಿಗಳನ್ನು ಗಮನಿಸುವುದು ತಮ್ಮ ಪ್ರಯಾಣದ ಮೊದಲ ಉದ್ದೇಶವಾಗಿದೆ ಎಂದು ಹರ್ಟೆನ್‌ಸ್ಟೈನ್ ಹೇಳಿಕೊಂಡಿದ್ದರು. ಅವರು ಬಾಸೆಲ್ ಮಿಶನ್ ಸಭೆಗಳಲ್ಲಿನ ಜನರ ಸ್ಥಿತಿಗತಿಗಳ ಬಗ್ಗೆ ಚರ್ಚಿಸುತ್ತಾ, ಕ್ರೈಸ್ತರು ಬಹಳಷ್ಟು ಬಡತನದಲ್ಲಿದ್ದಾರೆ. ಈ ಬಡತನವನ್ನು ಹೇಗೆ ನಿವಾರಿಸಬಹುದು ಎಂಬುದರ ಬಗ್ಗೆ ಚಿಂತಿಸಬೇಕಾಗಿದೆ ಎಂಬ ವಿಚಾರದ ಬಗ್ಗೆ ಜಿಲ್ಲಾ ಸರ್ವ ಹಿರಿಯರ ಕೂಟದ ಗಮನಕ್ಕೆ ತಂದಿದ್ದರು. 'ನಮ್ಮ ಸಭೆಯವರಲ್ಲಿ ಹೆಚ್ಚಿನವರು ಬರೇ ಬಡತನದಲ್ಲಿ ಇದ್ದಾರೆ. ನಾನು ನೋಡಿದ ಮನೆಗಳಲ್ಲಿ ಗಂಡ-ಹೆಂಡಿರು ಎಷ್ಟೋ ಕಷ್ಟಪಟ್ಟು ಕೆಲಸ ಮಾಡಬೇಕು ಮತ್ತು ಮಾಡಿದ ಕೆಲಸದ ಫಲದಿಂದ ಜೀವನ ಮಾಡಿಕೊಳ್ಳುವುದು ಅತಿ ಕಷ್ಟವೆ. ಒಂದೊಂದು ವೇಳೆ ಅದು ಅಸಾಧ್ಯವೆಂಬುದನ್ನು ನೋಡಿದ್ದೇನೆ. ಈ ವಿಷಯ ನಮ್ಮ ಸಭೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಹೆಚ್ಚು ಆಲೋಚನೆ ಮಾಡತಕ್ಕದ್ದು. ಈ ಬಡತನವನ್ನು ಹೇಗೆ ನಿವಾರಿಸಬಹುದು ಮತ್ತು ಬೇರೆ ರೀತಿಯಲ್ಲಿ ಹೇಗೆ ಜೀವನೋಪಾಯ ಮಾಡಬಹುದು ಎಂಬುದನ್ನು ಕುರಿತು ನಾವು ಆಲೋಚಿಸುವುದು ಯುಕ್ತವಾಗಿದೆ. ಸಾಧ್ಯವಿರುವ ಮಟ್ಟಿಗೆ ನಮ್ಮ ಸಭೆಗೆ ಸೇರಬೇಕೆಂದಿರುವವರು ತಮ್ಮ ಮೊದಲಿನ ಸ್ಥಳಗಳಲ್ಲಿ ಉಳಿದು, ಅಲ್ಲಿಯ ವಿದ್ಯಮಾನಗಳಿಗನುಸಾರ ನಡೆದು ಇನ್ನು ಮುಂದೆಯೂ ಅದೇ ಜೀವನವನ್ನು ಮಾಡಲಿಕ್ಕಾಗುವಂತೆ ನಾವು ನೋಡಲಿಕ್ಕಾದರೆ ಆಗುತ್ತಿತ್ತು'.[49] ಮಲ್ಪೆ ಸಭೆಗೆ ಬೇಕಾಗಬಹುದಾದಂತೆ ಸಣ್ಣ ಮಕ್ಕಳ ಶಾಲೆ, ಕಾರ್ಕಳಕ್ಕೆ ಪ್ರಯೋಜನವಾಗಬಹುದಾದ ವ್ಯಾವಸಾಯಿಕ ಶಾಲೆ ಇತ್ಯಾದಿ ವಿಚಾರಗಳಿಗೆ ಏರ್ಪಾಡು ಮಾಡುವ ಭರವಸೆಯನ್ನು ಅವರು ನೀಡಿರುತ್ತಾರೆ. ಈ ರೀತಿ ಅವರ ಹೇಳಿಕೆಗಳು ಆ ಕಾಲದ ಬಾಸೆಲ್ ಮಿಶನ್ ಕ್ರೈಸ್ತರ ಸ್ಥಿತಿಗತಿ ಹಾಗೂ ಮಿಶನ್ ಸ್ಥಿತಿಗತಿ ತಿಳಿಯಲು ಬಹಳಷ್ಟು ಸಹಾಯಕಾರಿಯಾಗಿವೆ. ಕ್ರೈಸ್ತ ಉಪಾಧ್ಯಾಯನ ಜವಾಬ್ದಾರಿಯ ಬಗ್ಗೆ, ಸೆಮಿನರಿಯನ್ನು ತಿರುಗಿ ತೆರೆಯುವುದರ ಬಗ್ಗೆ, ಕ್ರೈಸ್ತರಿಗೆ ಶಿಕ್ಷಣದ ಅಗತ್ಯತೆಯ ಬಗ್ಗೆ ಅವರು ಕೂಟದ ಗಮನಕ್ಕೆ ತರುತ್ತಾರೆ.

ಬಾಸೆಲ್ ಮಿಶನಿನ ಸಭೆಗಳು ಸ್ವತಂತ್ರ ಸಭೆಗಳಾಗಬೇಕೆಂಬುದು ನಮ್ಮ ಗುರಿ ಎಂಬುದನ್ನು ತಿಳಿಸಿದ್ದ ಹರ್ಟೆನ್‌ಸ್ಟೈನ್‌ರವರು ಈ ಗುರಿಯನ್ನು ಮುಟ್ಟಲು ಶ್ರಮಿಸುವುದಾಗಿ ಭರವಸೆಯನ್ನು ನೀಡುತ್ತಾರೆ. ಇಲ್ಲಿ ಕ್ರೈಸ್ತರ ಜವಾಬ್ದಾರಿಯ ಬಗ್ಗೆ ತಿಳಿಸುತ್ತಾ, 'ಇಲ್ಲಿನ ಸಭೆಯು ನಮ್ಮ ಪಾಶ್ಚಿಮಾತ್ಯರ ಮಾರ್ಗಗಳನ್ನು ಹೇಗೆ ಸ್ವೀಕಾರ ಮಾಡುತ್ತದೋ, ಹಾಗೆಯೇ ಸಭೆಯು ತಮ್ಮ ಮೇಲಿರುವ ಹೊರೆಯ ವಿಷಯವನ್ನು ತಿಳಿಯಬೇಕು ಮತ್ತು ಈ ಹೊರೆಯಲ್ಲಿ ತಾವೂ ಹೇಗೆ ಪಾಲುಗಾರರಾಗಬೇಕೆಂಬುದನ್ನು ಅವರು ಮನಕ್ಕೆ ತಂದುಕೊಳ್ಳುವುದು. ಇದನ್ನು ನಮ್ಮ ಸಭೆಯವರು ಒಳ್ಳೆ ಮನಸ್ಸಿನಿಂದಲೂ, ಒಳ್ಳೆ ರೀತಿಯಿಂದಲೂ ತಿಳಿದುಕೊಳ್ಳುವರೆಂದು ನೆನೆಸುತ್ತೇನೆ'[50] ಎಂದು ಇಲ್ಲಿನ ಕ್ರೈಸ್ತರು ಸಭೆಯ ಖರ್ಚಿನ ವಿಚಾರದಲ್ಲಿ ಪಾಲುಗಾರರಾಗಬೇಕೆಂಬ ಕರೆಯನ್ನು ಕೊಡುತ್ತಾರೆ. ಬಾಸೆಲ್ ಮಿಶನಿನ ಕೆಲಸವು ವಿವಿಧ ಕಡೆಗಳಲ್ಲಿ, ವಿವಿಧ ತರದಲ್ಲಿ ನಡೆಯುತ್ತಿದೆ. ಆದುದರಿಂದ ಬಾಸೆಲ್ ಮಿಶನಿಗೆ ಎಲ್ಲವನ್ನೂ ಹೊತ್ತುಕೊಳ್ಳುವುದು ಅಸಾಧ್ಯ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಾರೆ. ಭಾರತದಲ್ಲಿನ ಮಿಶನ್ ಕೆಲಸದ ಬಗ್ಗೆ ಉಲ್ಲೇಖಿಸುತ್ತಾ, ಅವರು 'ಇಂಡಿಯಾದಲ್ಲಿ ನಾವು ವಹಿಸಿಕೊಳ್ಳಬೇಕಾದ ಕೆಲಸವನ್ನು ಇನ್ನು ಮುಂದೆ ಸಭೆಯು ವಹಿಸಿಕೊಳ್ಳಲು ದೇವರು ಸಹಾಯ ಮಾಡಿಯಾನು ಎಂದು ನಂಬುತ್ತೇವೆ. ಇಂಡಿಯಾದ ಕೆಲಸವು ನಮ್ಮ ಕೆಲಸದ ಒಂದು ಭಾಗ........ನಮ್ಮಲ್ಲಿ ಎಷ್ಟಕ್ಕೆ ಸಾದ್ಯವಿರುತ್ತದೋ ಅಷ್ಟಕ್ಕೆ ಮುಂದುವರಿಸಲು ಪ್ರಯತ್ನ ಪಡುವೆವು. ....ಈ ನಮ್ಮ ಇಂಡಿಯಾದಲ್ಲಿ ನಡೆಸುವ ನಮ್ಮ ಕೆಲಸದ ಸಂಬಂಧ ಮಾಡುವ ಖರ್ಚನ್ನು ಕಡಿಮೆ ಮಾಡುವುದಕ್ಕೆ ನಮ್ಮಿಂದಾದಷ್ಟು ಪ್ರಯತ್ನ ಮಾಡಬೇಕು. ಬಾಸೆಲ್ ಮಿಶನಿನ ಎಲ್ಲಾ ಕ್ಷೇತ್ರಗಳಿಗಾಗಿ 18 ಲಕ್ಷ ಫ್ರಾಂಕು ಖರ್ಚಾಗುತ್ತದೆ. ಈ 18 ಲಕ್ಷ ಫ್ರಾಂಕಿನಲ್ಲಿ ಇಂಡಿಯಾಕ್ಕೆ 7 ಲಕ್ಷಕ್ಕಿಂತಲೂ ಹೆಚ್ಚು ಬೇಕಾಗುತ್ತದೆ.......ಇದನ್ನು ಕಡಿಮೆ ಮಾಡುವುದು ಹೇಗೆ? ....ನಾನು ಈ ವಿಷಯಗಳಲ್ಲಿ ಕೆಲವು ಸಲಹೆಗಳನ್ನು ಮಾತ್ರ ಕೊಡಲು ಶಕ್ತನಾಗಿದ್ದೇನೆ. ಬಾಸೆಲ್ ಮಿಶನ್ ಕ್ರೈಸ್ತರು ಇದರ ಬಗ್ಗೆ ಚಿಂತಿಸಬೇಕು. ಮಿಶನ್, ಮಿಶನಿನ ನಿರ್ವಹಣೆಗೆ ಹಾಗೂ ಮಿಶನರಿಗಳನ್ನು ಕಳುಹಿಸುವುದಕ್ಕೆ ಆಗುವ ಖರ್ಚನ್ನು ಕಡಿಮೆ ಮಾಡಲು ಪ್ರಯತ್ನಿಸಲಿದೆ. ಬಾಸೆಲ್ ಮಿಶನ್ ಕ್ರೈಸ್ತರು ಶಾಲೆಗಳ ಹಾಗೂ ಸಭೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಬಾಸೆಲ್ ಮಿಶನನ್ನು ಒಂದು ಸರಕಾರ ಅಥವಾ ಕಾರ್ಖಾನೆ ಎಂದು ಪರಿಗಣಿಸದೇ, ಅದು ವಿದೇಶದಲ್ಲಿ ತನ್ನ ಭಕ್ತರನ್ನು ಬೇಡಿ ಹಣ ಸಂಗ್ರಹಿಸುವ ಸಂಘವಾಗಿದೆ ಎಂಬುವುದನ್ನು ಮರೆಯಬಾರದು'[51] ಎಂಬ ವಿನಂತಿಯನ್ನು ಮಾಡುತ್ತಾರೆ.

ಮಿಶನಿನ ಖರ್ಚನ್ನು ಕಡಿಮೆ ಮಾಡಬಹುದಾದ ಮಾರ್ಗಗಳ ಬಗ್ಗೆ ಚರ್ಚಿಸುತ್ತಾ ಹರ್ಟೆನ್‌ಸ್ಟೈನ್‌ರವರು 'ಸಭೆಗಳು ತಮ್ಮ ಖರ್ಚನ್ನು ತಾವೇ ವಹಿಸಿಕೊಳ್ಳುವುದು, ಸಭಾ ಕಂದಾಯ ಎಲ್ಲವು ಜಮವಾಗುವಂತೆ ನೋಡಿಕೊಳ್ಳುವುದು. ಸಾಧ್ಯವಾದರೆ ಸಭಾ ಕಂದಾಯವನ್ನು ಇನ್ನಷ್ಟು

ಹೆಚ್ಚಿಸುವುದು. ಅದಲ್ಲದೆ ಬಾಸೆಲ್ ಮಿಶನ್ ಸಭೆಗಳು ಸಭಾಶಾಲೆಗಳನ್ನು, ಅನಾಥ ಶಾಲೆಗಳನ್ನು ಸ್ವಂತ ವಹಿಸಿಕೊಳ್ಳುವುದು ಇತ್ಯಾದಿ ಸಲಹೆಗಳನ್ನು ಮಾಡುತ್ತಾರೆ. ಈ ಪ್ರಯತ್ನಗಳನ್ನು ಮಾಡದಿದ್ದರೆ ಖರ್ಚನ್ನು ಕಡಿಮೆಗೊಳಿಸಲು ಸಾಧ್ಯವಾಗದು. ಅದು ಸಾಧ್ಯವಾಗದಿದ್ದರೆ ಇದಕ್ಕಿಂತ ಕಠಿಣ ಉಪಾಯಗಳನ್ನು ಮಾಡಬೇಕಾದೀತು' ಎಂದು ಹರ್ಟೆನ್‌ಸ್ಟೈನ್‌ರವರು ಸಭಾ ಕೂಟಕ್ಕೆ ಎಚ್ಚರಿಕೆಯ ಮಾತನ್ನು ತಿಳಿಸುತ್ತಾರೆ. ಸಭಾಪಾಲಕರ ಹಾಗೂ ಉಪಾಧ್ಯಾಯರ ಪೆನ್ಶನ್ ಫಂಡನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದ ಇವರು, ಕಳೆದ 14 ವರ್ಷಗಳಲ್ಲಿ ಅವುಗಳನ್ನು ನಿರ್ವಹಿಸಿದ್ದರ ರೀತಿಯ ಬಗ್ಗೆ ಬಹಳಷ್ಟು ಅಸಮಾಧಾನವನ್ನು, ದುಃಖವನ್ನು ವ್ಯಕ್ತಪಡಿಸುತ್ತಾರೆ. ಪೆನ್ಶನ್ ಫಂಡುಗಳು ಹಾಗೂ ಮಿಶನ್ ಆಸ್ತಿಗಳು, ಮಿಶನ್ ಟ್ರಸ್ಟಿನ ನಿರ್ವಹಣೆಯಲ್ಲಿದ್ದು ಅದನ್ನು ಸುಧಾರಿಸಲಾಗುವುದೆಂದು ತಿಳಿಸುತ್ತಾ, ಸರ್ವ ಹಿರಿಯರ ಕೂಟದ ಸದಸ್ಯರು, ಸಭೆಗಳ ಹಾಗೂ ಕ್ರೈಸ್ತರ ಏಳಿಗೆಗಾಗಿ ಶ್ರಮಿಸಲು ಹರ್ಟೆನ್‌ಸ್ಟೈನ್ ಕರೆಕೊಟ್ಟಿದ್ದರು.[52]

ಬಾಸೆಲ್ ಮಿಶನಿನ ಅನುಪಸ್ಥಿತಿಯ ಕಾಲದಲ್ಲಿ ಮಿಶನಿನ ಹಣಕಾಸಿನ ಸ್ಥಿತಿಯು ಅವ್ಯವಸ್ಥೆಯಿಂದ ಕೂಡಿರುತ್ತದೆ ಹಾಗೂ ಅದರ ಕೆಲವು ಆಸ್ತಿಗಳನ್ನು ಅಡವು [Mortgaaged] ಹಾಕಲಾಗಿರುತ್ತದೆ. ಆದರೆ ತದನಂತರದ ಕಾಲಾವಧಿಯಲ್ಲಿ ಮದ್ರಾಸ್‌ನ ಬಿಷಪರ ಹಾಗೂ ಕಾಮನ್‌ವೆಲ್ತ್ ಟ್ರಸ್ಟ್‌ನ ಪ್ರವೇಶದೊಂದಿಗೆ ಸಮಸ್ಯೆಯನ್ನು ಬಗೆಹರಿಸಲಾಗುತ್ತದೆ. 1930 ಜೂನ್‌ನಲ್ಲಿ ಶೊಸ್ಸರ್‌ರವರು ಬಾಸೆಲ್ ಮಿಶನಿನ ಆಸ್ತಿಗಳನ್ನು ಮರಳಿ ಪಡೆಯುವಲ್ಲಿ [By a special power of attorney] ಯಶಸ್ವಿಯಾಗುತ್ತಾರೆ.[53] 1928ರ ಕೊನೆಯ ಹಂತಕ್ಕಾಗುವಾಗ ಕಾಮನ್‌ವೆಲ್ತ್ ಟ್ರಸ್ಟಿನವರು ಜೆಪ್ಪು, ಕುದ್ರೋಳಿ, ಮಲ್ಪೆ ಹಂಚಿನ ಕಾರ್ಖಾನೆಗಳನ್ನು ಕೆಲವು ಸಮಯದವರೆಗೆ ಮುಚ್ಚಿ ಬಿಡುತ್ತಾರೆ. ಇದರಿಂದಾಗಿ ಕೆಲವು ಮಂದಿಯನ್ನು ಹೊರತುಪಡಿಸಿ, ಇತರರಿಗೆ ಕೆಲಸವಿಲ್ಲದೇ ಸಂಕಷ್ಟಕ್ಕೆ ಗುರಿಯಾಗುತ್ತಾರೆ.[54] ಇಷ್ಟು ಮಾತ್ರವಲ್ಲದೇ ಈ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಅಲ್ಲಲ್ಲಿ ಹರಡಿದ್ದರು. 1929–30 ಕಾಲಾವಧಿಯಲ್ಲಿ ಬಾಂಬೆಯಲ್ಲಿ 310 ಮಂದಿ ಬಾಸೆಲ್ ಮಿಶನ್ ಕ್ರೈಸ್ತರಿದ್ದರು.[55] ಕೆಲವು ಬಾಸೆಲ್ ಮಿಶನ್ ಕ್ರೈಸ್ತರು ಮದ್ರಾಸಿಗೂ ವಲಸೆ ಹೋಗಿದ್ದರು. ಹೀಗೆ 1920ರ ದಶಕದ ಅಂತ್ಯದ ವೇಳೆಗೆ ಬಾಸೆಲ್ ಮಿಶನ್ ಕ್ರೈಸ್ತರು ಕೆಲಸವಿಲ್ಲದೆ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

ಮಿಶನ್ ಶಿಕ್ಷಣ ವ್ಯವಸ್ಥೆ:

1928ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಶಾಲೆಗಳ ಪರಿಸ್ಥಿತಿಯು ಯುದ್ಧದ ಮೊದಲಿನ ಪರಿಸ್ಥಿತಿಗಿಂತ ಭಿನ್ನವಾಗಿತ್ತು. ಯುದ್ಧಕ್ಕೆ ಮೊದಲು 1914ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಿಶನ್ ಶಾಲೆಗಳ ಸಂಖ್ಯೆ 65 ಆಗಿದ್ದು, 1928ರಲ್ಲಿ 47ಕ್ಕೆ ಇಳಿದಿತ್ತು. ಯುದ್ಧಕ್ಕೆ ಮೊದಲು ಉತ್ತರ

ಕನ್ನಡ ಮತ್ತು ಕೊಡಗು ಪ್ರದೇಶಗಳಲ್ಲಿ ಬಾಸೆಲ್ ಮಿಶನಿಗೆ 16 ಶಾಲೆಗಳಿದ್ದವು. ಆದರೆ 1928ರಲ್ಲಿ ಅವು ಬಾಸೆಲ್ ಮಿಶನ್ ನಿಯಂತ್ರಣದಲ್ಲಿರಲಿಲ್ಲ. ದಕ್ಷಿಣ ಮಹಾರಾಷ್ಟ್ರ ಪ್ರದೇಶದಲ್ಲಿ ಬಾಸೆಲ್ ಮಿಶನಿಗೆ 1914ರಲ್ಲಿ 34 ಶಾಲೆಗಳಿದ್ದು 1928ಕ್ಕೆ ಅವುಗಳ ಸಂಖ್ಯೆ 28ಕ್ಕೆ ಇಳಿದಿತ್ತು. ಹೀಗೆ 1928ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ವಶದಲ್ಲಿದ್ದ ಶಾಲೆಗಳ ಸಂಖ್ಯೆ 75 ಆಗಿತ್ತು. 1914ರಲ್ಲಿ ಇವುಗಳ ಸಂಖ್ಯೆ 99 ಆಗಿತ್ತು. (ಮಲಬಾರ್ ಹೊರತುಪಡಿಸಿ) ಈ ಪ್ರಕಾರ 24 ಶಾಲೆಗಳು ಮಿಶನಿನ ಕೈ ತಪ್ಪಿ ಹೋಗಿದ್ದವು. ಶಾಲೆಗಳು ಕಡಿಮೆಯಾಗಿರುವುದು ಮಾತ್ರವಲ್ಲದೆ ವಿದ್ಯಾರ್ಥಿಗಳ ಸಂಖ್ಯೆಯೂ ಬಹಳಷ್ಟು ಕಡಿಮೆಯಾಗಿತ್ತು. 1914ರ ಕಾಲಾವಧಿಯಲ್ಲಿ ದಕ್ಷಿಣ ಕನ್ನಡದಲ್ಲಿನ ಶಾಲಾ ಮಕ್ಕಳ ಸಂಖ್ಯೆ 6330 ಆಗಿದ್ದರೆ, 1928ರಲ್ಲಿ ಅದು 5493 ಕ್ಕೆ ಇಳಿದಿತ್ತು. (ಉತ್ತರ ಕನ್ನಡ ಮತ್ತು ಕೊಡಗು ಬಿಟ್ಟು) ದಕ್ಷಿಣ ಮರಾಠದಲ್ಲಿ 1914ರಲ್ಲಿ ಮಕ್ಕಳ ಸಂಖ್ಯೆ 2845ರಷ್ಟಿದ್ದರೆ 1928ಕ್ಕೆ ಅದು 2169ಕ್ಕೆ ತಗ್ಗಿರುತ್ತದೆ. ಹೀಗೆ ಒಟ್ಟಾರೆಯಾಗಿ ವಿದ್ಯಾರ್ಥಿಗಳ ಸಂಖ್ಯೆಯು 1514ರಷ್ಟು ಕಡಿಮೆಯಾಗಿರುತ್ತದೆ. ಮತ್ತೊಂದೆಡೆ ಸರಕಾರ, ಬೋರ್ಡುಗಳ, ಖಾಸಗಿ ವ್ಯಕ್ತಿಗಳ ಅಥವಾ ಸೊಸೈಟಿಗಳ ಆಡಳಿತೆಯೊಳಗಿರುವ ಶಾಲೆಗಳ ಸಂಖ್ಯೆಯಲ್ಲಿ ಯಾವುದೇ ಕಡಿತವಾಗಿರುವುದಿಲ್ಲ. ಅದನ್ನು ಹೊರತುಪಡಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1914ರಲ್ಲಿ 600 ರಷ್ಟಿದ್ದ ಶಾಲೆಗಳ ಸಂಖ್ಯೆ 1928ರಲ್ಲಿ 1061 ಕ್ಕೆ ಏರಿಕೆಯಾಗುತ್ತದೆ.[56] ಆದರೆ ಮಿಶನ್ ಶಾಲೆಗಳ ಸಂಖ್ಯೆಯಲ್ಲಿ ಹಾಗೂ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಯಾವುದೇ ಏರಿಕೆಯಾಗದೆ ಅದು ಇಳಿಮುಖವನ್ನು ಕಂಡಿರುತ್ತದೆ. ಹೀಗೆ ಬಾಸೆಲ್ ಮಿಶನರಿಗಳು ಮಿಶನನ್ನು ಮರಳಿ ವಹಿಸಿಕೊಂಡ ಅವಧಿಯಲ್ಲಿ ಮಿಶನಿನ ಶೈಕ್ಷಣಿಕ ವ್ಯವಸ್ಥೆಯ ಬಗ್ಗೆ ಕಾಳಜಿ ವ್ಯಕ್ತಪಡಿಸುವುದು ಕಂಡುಬರುತ್ತದೆ.

1927ರ ಅವಧಿಯಲ್ಲಿ ಬಾಸೆಲ್ ಮಿಶನ್ ಕ್ರೈಸ್ತರ ಸಂಖ್ಯೆಯು ವಿಶೇಷವಾದ ವೃದ್ಧಿಯನ್ನು ಕಂಡಿರುವುದಿಲ್ಲ. 1927ರಲ್ಲಿ 9539ರಷ್ಟಿದ್ದ ದಕ್ಷಿಣ ಕನ್ನಡದ ಬಾಸೆಲ್ ಮಿಶನ್ ಕ್ರೈಸ್ತರ ಸಂಖ್ಯೆಯು, 1928ರಲ್ಲಿ 9503ಕ್ಕೆ ಇಳಿಕೆಯಾಗಿದ್ದರೆ, ದಕ್ಷಿಣ ಮರಾಠದಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರ ಸಂಖ್ಯೆಯು 1927ರಲ್ಲಿ 3523 ರಷ್ಟಿದ್ದು, 1928ಕ್ಕಾಗುವಾಗ 3520 ಕ್ಕೆ ಇಳಿಯುತ್ತದೆ. ಮಲಬಾರ್‌ನಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರ ಸಂಖ್ಯೆಯು 7436 ರಿಂದ 7614 ಕ್ಕೆ ಏರಿಕೆಯಾಗಿರುತ್ತದೆ. ಈ ಕಾಲಾವಧಿಯಲ್ಲಿ ಕೆಲಸ ಹಾಗೂ ಇತರ ಕಾರಣಗಳಿಂದ ಊರು ಬಿಟ್ಟು ಹೋಗುವವರ ಸಂಖ್ಯೆ ಹೆಚ್ಚಾಗಿರುತ್ತದೆ. 1927ರ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 780 ಮಂದಿ ಹಾಗೂ ದಕ್ಷಿಣ ಮಹಾರಾಷ್ಟ್ರದ 273 ಮಂದಿ ವಲಸೆ ಹೋಗಿದ್ದರು.[57] ಆದುದರಿಂದ ಬಾಂಬೆ, ಮದ್ರಾಸ್ ಮುಂತಾದ ನಗರ ಪ್ರದೇಶಗಳಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಅಸ್ತಿತ್ವವನ್ನು ಕಂಡುಕೊಳ್ಳುವುದನ್ನು ಗಮನಿಸಬಹುದು. 1927ರ ಕೊನೆಯ ಕಾಲಾವಧಿಯಲ್ಲಿ ಮುಂಬಾಯಿಯಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರು, ತಾವು ಬಾಸೆಲ್ ಮಿಶನ್ ಪರಾಂಬರಿಕೆಯಲ್ಲಿದ್ದು ತಮ್ಮ ಖರ್ಚನ್ನು ತಾವೇ ನೋಡಿಕೊಳ್ಳುವೆವು ಎಂಬುದಾಗಿ ಕೇಳಿಕೊಂಡಿದ್ದರು.

ತದನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ ಬಾಸೆಲ್ ಮಿಶನಿನ ಅಗ್ರಸ್ಥರಿಗೂ, ಮುಂಬಾಯಿಯ ಮೆಥೊಡಿಸ್ಟ್ ಬಿಷಪರಿಗೂ ಕಾಗದಪತ್ರ ವ್ಯವಹಾರಗಳು 1927ರಲ್ಲೇ ನಡೆಯುತ್ತವೆ.[58] ಬಾಂಬೆಯಲ್ಲಿನ ಈ ಬಾಸೆಲ್ ಮಿಶನ್ ಕ್ರೈಸ್ತರು ಅಮೇರಿಕನ್ ಮೆಥೊಡಿಸ್ಟರ ಪಾಲನೆಯಲ್ಲಿರುತ್ತಾರೆ. ಆದರೆ 1927ರ ನವೆಂಬರ್‌ನಲ್ಲಿ ಶೊಸ್ಸರ್ ಬಾಂಬೆಗೆ ಭೇಟಿ ನೀಡಿ ಅವರು ಸ್ವತಂತ್ರವಾಗಿ ಮುಂದುವರಿಯುವಂತೆ ಅವರಿಗೆ ಮಾರ್ಗದರ್ಶನ ಮಾಡುತ್ತಾರೆ. ಈ ಕ್ರೈಸ್ತರ ಅಧ್ಯಾತ್ಮಿಕ ಉದ್ದೇಶಗಳನ್ನು ಪೂರೈಸಲು ಅವರದೇ ಆದ ಪಾಸ್ಟರರ [Pastor] ವ್ಯವಸ್ಥೆಯನ್ನು ಮಾಡುತ್ತಾರೆ. ಇದರ ನಂತರ ಮುಂದೆ ಈ ಬಾಸೆಲ್ ಮಿಶನ್ ಕ್ರೈಸ್ತರು ಅವರದ್ದೇ ಆದ ದೇವಾಲಯವನ್ನು ಕಟ್ಟಿಕೊಂಡು ಮುಂದುವರಿಯುವುದನ್ನು ಗಮನಿಸಬಹುದು.[59]

ಬಾಸೆಲ್ ಮಿಶನರಿಗಳಿಗಾಗಿ ಕೊಡಗು ಹಾಗೂ ನೀಲಗಿರಿ ಕ್ರೈಸ್ತರ ಬೇಡಿಕೆ:

ಬಾಸೆಲ್ ಮಿಶನಿನಿಂದ ಸ್ಥಾಪಿತವಾದ ಹಾಗೂ ಯುದ್ಧದ ಅವಧಿಯಲ್ಲಿ ಇತರ ಮಿಶನುಗಳಿಗೆ ವರ್ಗಾವಣೆಯಾದ ಮಿಶನ್ ಪ್ರದೇಶಗಳು ಪುನಃ ಬಾಸೆಲ್ ಮಿಶನರಿಗಳ ಆಶ್ರಯದಲ್ಲಿ ಮುಂದುವರಿಯುವ ಪ್ರಬಲವಾದ ಆಶಯವನ್ನು ವ್ಯಕ್ತಪಡಿಸುತ್ತದೆ. ನೀಲಗಿರಿ ಹಾಗೂ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ಬಾಸೆಲ್ ಮಿಶನ್ ಮರಳಿ ಬಂದು ದಕ್ಷಿಣ ಕನ್ನಡ ಹಾಗೂ ಮರಾಠ ಮಿಶನ್ ಪ್ರದೇಶಗಳ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ ತಮ್ಮನ್ನೂ ಬಾಸೆಲ್ ಮಿಶನರಿಗಳ ನಿಯಂತ್ರಣಕ್ಕೆ ವಹಿಸಿಕೊಡುವಂತೆ ಪ್ರಬಲ ಬೇಡಿಕೆಯನ್ನು ಮಂಡಿಸುತ್ತಾರೆ. ನೀಲಗಿರಿಯ ಮಿಶನ್ ಪ್ರದೇಶವನ್ನು ವೆಸ್ಲಿಯನ್ ಮಿಶನರಿಗಳಿಗೆ ಯುದ್ಧ ಕಾಲದಲ್ಲಿ ವಹಿಸಿಕೊಡಲಾಗಿತ್ತು. ಬಾಸೆಲ್ ಮಿಶನ್ ಅನುಪಸ್ಥಿತಿಯಲ್ಲಿ ಬಾಸೆಲ್ ಮಿಶನಿನ ವಿನಂತಿಯಂತೆ ನೀಲಗಿರಿಯ ಬಾಸೆಲ್ ಮಿಶನ್ ಕ್ರೈಸ್ತರು ವೆಸ್ಲಿಯನರ ಕೈಕೆಳಗೆ ಮುಂದುವರಿದರಾದರೂ, ಬಾಸೆಲ್ ಮಿಶನ್ ಮರಳಿ ಬಂದ ನಂತರ ಮತ್ತೆ ತಮ್ಮ ಉಸ್ತುವಾರಿಯನ್ನು ಬಾಸೆಲ್ ಮಿಶನರಿಗಳೇ ವಹಿಸಬೇಕೆಂಬ ಬೇಡಿಕೆಯನ್ನು ಮಂಡಿಸುತ್ತಾರೆ. 1931, ಫೆಬ್ರವರಿ 15 ರಂದು ನೀಲಗಿರಿಯಲ್ಲಿನ ಕೂನೂರ್, ಕೇತಿ, ಕೋತಗಿರಿಯ ಬಾಸೆಲ್ ಮಿಶನ್ ಸಭೆಗಳ ಸದಸ್ಯರು ಕೂನೂರ್‌ನಲ್ಲಿ ಒಂದು ಸಭೆಯನ್ನು ನಡೆಸುತ್ತಾರೆ. ಈ ಸಭೆಯಲ್ಲಿ ಒಂದು 'ಜಿಲ್ಲಾ ಚರ್ಚ್ ಕಮಿಟಿ'ಯನ್ನು [District Church Committee] ರಚಿಸಿಕೊಳ್ಳುತ್ತಾರೆ.[60] ಈ ಸಭೆಯಲ್ಲಿ ಕೆಲವು ಠರಾವುಗಳನ್ನು ಹೊರಡಿಸಲಾಗುತ್ತದೆ. ಅದರಂತೆ 'ನೀಲಗಿರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೆಸ್ಲಿಯನ್ ಮಿಶನರಿ ಸೊಸೈಟಿಯವರ ಮೇಲೆ ನೀಲಗಿರಿಯ ಬಾಸೆಲ್ ಮಿಶನ್ ಸಭೆಯವರಿಗೆ ನಂಬಿಕೆ ಇಲ್ಲದಿರುವುದರಿಂದ ಬಾಸೆಲ್ ಮಿಶನಿನ (ನೀಲಗಿರಿ) ಜಿಲ್ಲಾ ಪಂಚಾಯಿತಿಯ ಸಭೆಯವರು, ಬಾಸೆಲ್ ಮಿಶನಿನ ಹೋಮ್ ಕಮಿಟಿಯವರನ್ನು, ಅವರು ನೀಲಗಿರಿಯನ್ನು ಮರಳಿ ವಹಿಸಿಕೊಳ್ಳುವಂತೆ ವಿನಂತಿಸುವುದು ಹಾಗೂ ಬಾಸೆಲ್ ಮಿಶನಿಗೆ ನೀಲಗಿರಿಯಲ್ಲಿ ತಿರುಗಿ ತಮ್ಮ

ಕೆಲಸ ಆರಂಭಿಸಲಿಕ್ಕಾಗದೇ ಹೋದರೆ ಅಥವಾ ಯಾವುದಾದರೂ ಕಾರಣಗಳ ದೆಸೆಯಿಂದ ಸಭೆಯವರ ಒಪ್ಪಿಗೆ ಇಲ್ಲದೆ ಅವರು ಸಭೆಗಳನ್ನು, ಆಸ್ತಿಗಳನ್ನು, ಫಂಡುಗಳನ್ನು ವೆಸ್ಲಿಯನ್ ಮಿಶನರಿ ಸೊಸೈಟಿಯವರಿಗೆ ಕೊಟ್ಟು ಬಿಡುವುದು ಅಗತ್ಯವಾದರೆ, ಈ ಜಿಲ್ಲಾ ಪಂಚಾಯಿತಿ ಸಭೆಯವರು ಸರಕಾರದ ಮೂಲಕ ಅದನ್ನು ಪ್ರತಿಭಟಿಸುವ ಹಕ್ಕನ್ನು ತಮಗೆ ಇಟ್ಟುಕೊಂಡಿದ್ದಾರೆ. ಏಕೆಂದರೆ ನೀಲಗಿರಿಯಲ್ಲಿ ಬಾಸೆಲ್ ಮಿಶನ್ ಇರಲಿಕ್ಕಾಗದ ಸಂದರ್ಭದಲ್ಲಿ, ಸಭೆಯವರು ವೆಸ್ಲಿಯನರನ್ನು ತಮ್ಮಲ್ಲಿ ಸೇವೆ ನಡಿಸುವ ಬಗ್ಗೆ ಆರಿಸಿಕೊಂಡಿದ್ದರು'[61] ಎಂಬ ಕಠಿಣ ಠರಾವುಗಳನ್ನು ನೀಲಗಿರಿಯ ಬಾಸೆಲ್ ಮಿಶನ್ ಕ್ರೈಸ್ತರು ಹೊರಡಿಸುತ್ತಾರೆ. ಈ ರೀತಿ ತಮಗೆ ವೆಸ್ಲಿಯನರ ಮೇಲೆ ನಂಬಿಕೆ ಇಲ್ಲ. ಆದುದರಿಂದ ಬಾಸೆಲ್ ಮಿಶನ್ ತಕ್ಷಣದಲ್ಲಿ ಇಲ್ಲಿನ ಕೆಲಸವನ್ನು ವಹಿಸಿಕೊಳ್ಳಬೇಕೆಂಬ ಪ್ರಬಲ ಮನವಿಯನ್ನು ಮಾಡುತ್ತಾರೆ. ಒಂದು ವೇಳೆ ಬಾಸೆಲ್ ಮಿಶನ್ ಎಲ್ಲವನ್ನೂ ವೆಸ್ಲಿಯವರಿಗೆ ವಹಿಸಿದರೆ ಅದನ್ನು ಸರಕಾರದ ಮೂಲಕ ಪ್ರತಿಭಟಿಸಲಾಗುವುದು ಎಂಬ ಪ್ರಬಲ ಸಂದೇಶವನ್ನು ಬಾಸೆಲ್ ಮಿಶನಿಗೆ ರವಾನಿಸುತ್ತಾರೆ.

ನೀಲಗಿರಿಯ ಬಾಸೆಲ್ ಮಿಶನ್ ಕ್ರೈಸ್ತರ ಪ್ರಬಲ ಬೇಡಿಕೆಗಳ ಹೊರತಾಗಿಯೂ, ಈ ಮಿಶನ್ ಪ್ರದೇಶ ವೆಸ್ಲಿಯನ್ ಮೆಥೊಡಿಸ್ಟ್ ಮಿಶನಿನ ನಿಯಂತ್ರಣದಲ್ಲಿ ಮುಂದುವರಿಯುತ್ತದೆ. ಆದರೆ ಅಲ್ಲಿನ ಕೋತಗಿರಿ [Kotagiri] ಮತ್ತು ಕಾಲ್‌ಹಟ್ಟಿ [Kalhatti] ಯಲ್ಲಿನ ಎರಡು ಬಂಗಲೆಗಳು ಬಾಸೆಲ್ ಮಿಶನ್ ನಿಯಂತ್ರಣದಲ್ಲಿ ಮುಂದುವರಿದು, ಅವುಗಳನ್ನು ವಿಶ್ರಾಂತಿಗಾಗಿ ಬಾಸೆಲ್ ಮಿಶನರಿಗಳು ಬಳಸಿಕೊಳ್ಳುತ್ತಿದ್ದರು.[62] ನೀಲಗಿರಿಯ ಕೇತಿಯಲ್ಲಿ ಡಿ. ಕೇಸ ಮೇಜರ್ ಎಂಬ ಐ.ಸಿ.ಎಸ್. ಅಧಿಕಾರಿಯೊಬ್ಬರು ವಾಸ್ತವ್ಯವಿದ್ದು, ಅಲ್ಲಿನ ಬಡಗ ಜನರಲ್ಲಿ ಸುವಾರ್ತಾ ಕೆಲಸವನ್ನು ಆರಂಭಿಸಿ, ನಂತರದಲ್ಲಿ ಬಾಸೆಲ್ ಮಿಶನ್ ಸ್ನೇಹ ಬೆಳೆಸಿ, ಅವರು ಈ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತೆ ಕೇಳಿಕೊಂಡಿದ್ದರು. ತದನಂತರ ಇಲ್ಲಿ ಮಿಶನ್ ಕಾರ್ಯ ಆರಂಭಿಸಿದ ಬಾಸೆಲ್ ಮಿಶನ್ ಜಾಗತಿಕ ಯುದ್ಧದ ಸಂದರ್ಭದಲ್ಲಿ ಅದನ್ನು ವೆಸ್ಲಿಯನರಿಗೆ ವಹಿಸುತ್ತದೆ. ಕೇತಿಯಲ್ಲಿ ದೇವಾಲಯ ನಿರ್ಮಿಸಬೇಕೆಂಬ ಉದ್ದೇಶ ಬಾಸೆಲ್ ಮಿಶನಿಗೆ ಇದ್ದರೂ ಅದು ಸಾಧ್ಯವಾಗದೇ, 1934ರಲ್ಲಿ ವೆಸ್ಲಿಯನರು 25,000 ರೂಪಾಯಿ ವೆಚ್ಚ ಮಾಡುವುದರೊಂದಿಗೆ ಒಂದು ದೇವಾಲಯವನ್ನು ನಿರ್ಮಿಸುತ್ತಾರೆ.[63] ಈ ರೀತಿ ನೀಲಗಿರಿಯಲ್ಲಿ ವೆಸ್ಲಿಯನರು ಪ್ರಬಲ ಅಸ್ಥಿತ್ವವನ್ನು ಬೆಳೆಸುತ್ತಾ ಹೋದರೂ, ಅಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರ ಪ್ರಬಲ ವಿರೋಧ ಮುಂದುವರಿಯುತ್ತದೆ. 1934ರಲ್ಲಿ ಕೂನೂರು, ಕೋತಗಿರಿ ಮತ್ತು ಕೈತಿ ಎಂಬಲ್ಲಿರುವ ಬಾಸೆಲ್ ಮಿಶನ್ ಕ್ರೈಸ್ತರು 'ದಿ ನೀಲಗಿರಿ ಇಂಡಿಜೀನಸ್ ಇವ್ಯಾಂಜಲಿಕಲ್ ಲೂಥರನ್ ಚರ್ಚ್ ಸೊಸೈಟಿ' [The Nilgiri Indigenous Evangelical Lutheran Church Society] ಎಂಬ

ಸಂಘವನ್ನು ಕಟ್ಟಿಕೊಂಡು ಅದನ್ನು ನೊಂದಣಿ (registry) ಮಾಡಿಕೊಳ್ಳುತ್ತಾರೆ. ಇದರ ನಿಬಂಧನೆಯಂತೆ ಇವರು ನೀಲಗಿರಿಯಲ್ಲಿ ಬಾಸೆಲ್ ಮಿಶನ್ ಕೆಲಸವನ್ನು ಮುಂದುವರಿಸುತ್ತಿರುವ 'ವೆಸ್ಲಿಯನ್ ಮೆಥೊಡಿಸ್ಟ್ ಮಿಶನಿನ' ಧ್ಯೇಯದಿಂದ ದೂರವಾಗುತ್ತಾರೆ. ಅಲ್ಲದೆ ಮೊದಲು ಬಾಸೆಲ್ ಮಿಶನಿಗೆ ಸೇರಿದ್ದ ಎಲ್ಲಾ ಸ್ಥಿರಚರಾಸ್ತಿಗಳನ್ನು ಹಿಂದಕ್ಕೆ ಪಡೆಯುವ ಘೋಷಣೆಯನ್ನು ಮಾಡುತ್ತಾರೆ.[64] ಹೀಗೆ ನೀಲಗಿರಿ ವೆಸ್ಲಿಯನರ ಮೇಲ್ವಿಚಾರಣೆಯಲ್ಲಿ ಮುಂದುವರಿದರೂ, ಅಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರ ಪ್ರಬಲ ವಿರೋಧ ಮುಂದುವರಿಯತ್ತದೆ.

ವೆಸ್ಲಿಯನ್ ಮಿಶನ್‌ಗೆ ವಹಿಸಲ್ಪಟ್ಟ ಬಾಸೆಲ್ ಮಿಶನಿನ ಮತ್ತೊಂದು ಮಿಶನ್ ಪ್ರದೇಶವೆಂದರೆ ಕೊಡಗು. ಇದು ನಿರಂತರವಾಗಿ ವೆಸ್ಲಿಯನರ ವಿರುದ್ಧ ಮುಕ್ತವಾದ ಹೋರಾಟ ಹಾಗೂ ವಿರೋಧವನ್ನು ಪ್ರಾರಂಭದಿಂದಲೇ ವ್ಯಕ್ತಪಡಿಸುತ್ತದೆ. 1927ರ ಕಾಲಾವಧಿಯಲ್ಲಿ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು, ತಾವು ಬಾಸೆಲ್ ಮಿಶನ್ ಕೆಳಗೆ ಇದ್ದು, ತಮ್ಮ ಖರ್ಚನ್ನು ತಾವೇ ನೋಡಿಕೊಳ್ಳುವುದಾಗಿ ಹೇಳಿಕೊಳ್ಳುತ್ತಾರೆ. ಮತ್ತೊಂದೆಡೆ, ವೆಸ್ಲಿಯನ್ ಮಿಶನಿನವರು ಬಾಸೆಲ್ ಮಿಶನ್ ಮರಳಿ ಕೊಡಗನ್ನು ವಹಿಸಿಕೊಳ್ಳುವಂತೆಯೂ ಕೇಳಿಕೊಳ್ಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಉಭಯ ಮಿಶನುಗಳ ನಡುವೆ ಪತ್ರ ವ್ಯವಹಾರವು ನಡೆಯುತ್ತದೆ.[65] ಅಂತಿಮವಾಗಿ 1ನೇ ಏಪ್ರಿಲ್ 1929ರಂದು ಕೊಡಗು ಬಾಸೆಲ್ ಮಿಶನಿನ ನಿಯಂತ್ರಣಕ್ಕೆ ಮರಳುತ್ತದೆ ಹಾಗೂ ನಂತರದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೌನ್ಸಿಲಿನ ಭಾಗವಾಗಿ ಮುಂದುವರಿಯುತ್ತದೆ. ಬಾಸೆಲ್ ಮಿಶನ್ ಉತ್ತರ ಕನ್ನಡದ ಹೊನ್ನಾವರದಲ್ಲಿಯೂ ತನ್ನ ಮಿಶನ್ ಕಾರ್ಯವನ್ನು ಆರಂಭಿಸಿತ್ತು. ಬಾಸೆಲ್ ಮಿಶನ್ 1910ರಲ್ಲೇ ಬಾಸೆಲ್ ಮಿಶನಿನೊಂದಿಗೆ ಇಲ್ಲಿನ ಕಾರ್ಯದಲ್ಲಿ ಸೇರಿಕೊಳ್ಳುವಂತೆ ನ್ಯಾಶನಲ್ ಮಿಶನ್ ಸೊಸೈಟಿಗೆ ಆಹ್ವಾನವನ್ನು ನೀಡಿತ್ತು. ತದನಂತರ ಯುದ್ಧದ ಕಾಲಾವಧಿಯಲ್ಲಿ ಹೊನ್ನಾವರದ ಮಿಶನ್ ಕಾರ್ಯವು ಸಂಪೂರ್ಣವಾಗಿ ನ್ಯಾಶನಲ್ ಮಿಶನ್ ಸೊಸೈಟಿಗೆ ವರ್ಗಾವಣೆಯಾಗುತ್ತದೆ. ಇದು ಟ್ರಾವಂಕೂರ್‌ನಿಂದ ಕಳುಹಿಸಲ್ಪಡುತ್ತಿದ್ದ ಭಾರತೀಯ ಮಿಶನರಿಗಳ ಸಹಾಯದಿಂದ ಇಲ್ಲಿನ ಕಾರ್ಯವನ್ನು ಮುಂದುವರಿಸುತ್ತದೆ. ಮುಂದೆ ಇದು ಅದರ ಭಾಗವಾಗಿಯೇ [Mar Thom Church] ಮುಂದುವರಿಯುತ್ತದೆ. 1931ರಲ್ಲಿ ಇಲ್ಲಿ ಬಾಸೆಲ್ ಮಿಶನ್ ಹೊಂದಿದ್ದ ಎಲ್ಲಾ ಆಸ್ತಿಗಳನ್ನು ನ್ಯಾಶನಲ್ ಮಿಶನ್ ಸೊಸೈಟಿಗೆ ವರ್ಗಾಯಿಸಲಾಗುತ್ತದೆ.[66] ಈ ರೀತಿಯಾಗಿ ಭಾರತಕ್ಕೆ ಯುದ್ಧದ ತರುವಾಯ ಮರಳಿ ಬಂದ ಬಾಸೆಲ್ ಮಿಶನ್ ಹೊನ್ನಾವರ ಹಾಗೂ ನೀಲಗಿರಿ ಮಿಶನ್ ಪ್ರದೇಶಗಳೆರಡನ್ನು ಬಿಟ್ಟು ಉಳಿದ ಎಲ್ಲಾ ಮಿಶನ್ ಪ್ರದೇಶಗಳನ್ನು ತನ್ನ ಸುಪರ್ದಿಗೆ ಪಡೆಯುತ್ತಾರೆ. ಆದರೆ ಅದು ಹೊಸ ಠಾಣ್ಯಗಳನ್ನಾಗಲೀ ಅಥವಾ ಉಪಠಾಣ್ಯಗಳನ್ನಾಗಲೀ ತೆರೆಯಲಿಲ್ಲ. ಮತ್ತೊಂದೆಡೆ ಬಾಸೆಲ್ ಮಿಶನ್ ಕಾರ್ಯಾಚರಣೆಯ ಬೆನ್ನೆಲುಬಾಗಿದ್ದ ಕೈಗಾರಿಕೆಗಳು ಕೈ ತಪ್ಪಿ

ಹೋಗುತ್ತವೆ ಮಾತ್ರವಲ್ಲದೇ ಅವು ಪತನದಂಚಿಗೆ ಚಲಿಸಲಾರಂಭಿಸುತ್ತವೆ. ಹೀಗೆ ಮರಳಿ ಕಾರ್ಯ ಆರಂಭಿಸಿದ ಬಾಸೆಲ್ ಮಿಶನಿಗೆ ತನ್ನ ಮೊದಲಿನ ಛಾಪನ್ನು ಗಳಿಸಲು ಸಾಧ್ಯವಾಗುವುದೇ ಇಲ್ಲ.

ಶೊಸ್ಸರ್‌ರಿಂದ ಹೊಸ ಸಂವಿಧಾನದ ರಚನೆ:

ಬಾಸೆಲ್ ಮಿಶನ್ ತನ್ನ ಮಿಶನ್ ಕಾರ್ಯವನ್ನು ಆರಂಭಿಸಿ, ಅದು ಸಾಧಾರಣ ಹಂತಕ್ಕೆ ಬಂದ ಕೂಡಲೇ, ಮಿಶನ್ ಮುಖ್ಯಸ್ಥ ಶೊಸ್ಸರ್ [Schosser] ಮಿಶನ್ ಮತ್ತು ಚರ್ಚ್ ಸಂಘಟನಾ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಲು ಮುಂದಾಗುತ್ತಾರೆ. ಇದಕ್ಕಾಗಿ 1929ರಲ್ಲಿ ಶೊಸ್ಸರ್ ಹೊಸ ಸಂವಿಧಾನವನ್ನು ಸಿದ್ಧಪಡಿಸುವ ಕೆಲಸವನ್ನು ಆರಂಭಿಸುತ್ತಾರೆ. ಇದು ಚರ್ಚ್ ಹಾಗೂ ಮಿಶನಿನ ಜವಾಬ್ದಾರಿಗಳನ್ನು ಸ್ಪಷ್ಟವಾಗಿ ವಿಭಜಿಸುವ ಉದ್ದೇಶವನ್ನು ಹೊಂದಿತ್ತು. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಎದುರಿಸಿದ ಸಮಸ್ಯೆಗಳು ಹಾಗೂ ದಕ್ಷಿಣ ಮರಾಠದಲ್ಲಿ ಎದುರಾದ ಸಮಸ್ಯೆಗಳು ಶೊಸ್ಸರ್ ಈ ಸಂವಿಧಾನ ರಚನೆಗೆ ಕಾರಣವಾದವು. ಈ ಸಂವಿಧಾನವು ಕೆಲವು ಪ್ರಮುಖ ವಿಚಾರಗಳ ಮೇಲೆ ಮಿಶನಿಗೆ ನಿಯಂತ್ರಣದ ಹಕ್ಕನ್ನು ಹುಟ್ಟುಹಾಕುವ ಯೋಜನೆಯನ್ನು ಹೊಂದಿತ್ತು. ಪ್ರತಿ ಜಿಲ್ಲೆಗೂ 'ಜಿಲ್ಲಾ ಚರ್ಚ್ ಕೌನ್ಸಿಲ್'[67] [District Church Council] ಮತ್ತು 'ಜಿಲ್ಲಾ ಚರ್ಚ್ ಬೋರ್ಡ್'ನ್ನು [District Church Board] ಹುಟ್ಟು ಹಾಕಿ, ಅದರ ಮುಖ್ಯಸ್ಥ ಪದವಿಯನ್ನು [Chairman] ಭಾರತೀಯರಿಗೆ ನೀಡಲಾಗುತ್ತದೆ. ಆದರೆ ಪ್ರತಿ ಜಿಲ್ಲೆಯಲ್ಲಿ ಪರಮೋಚ್ಚ ಅಧಿಕಾರವನ್ನು 'ಮಿಶನ್ ಕಮಿಟಿ'ಗೆ [Mission Committee] ವಹಿಸಲಾಗುತ್ತದೆ. ಪ್ರಾರಂಭದಲ್ಲಿ 'ಮಿಶನ್ ಕಮಿಟಿ'ಯಲ್ಲಿ (ನಂತರದಲ್ಲಿ 'ಮಿಶನ್ ಕೌನ್ಸಿಲ್') [Mission Council] ಭಾರತೀಯರಿಗೆ ಹಾಗೂ ಮಿಶನರಿಗಳಿಗೆ ಸಮಾನವಾದ ಸ್ಥಾನಗಳಿದ್ದು, 1930ರ ನಂತರದಲ್ಲಿ 8 ಮಿಶನರಿಗಳಿಗೆ ಹಾಗೂ 4 ಭಾರತೀಯರಿಗೆ ಸ್ಥಾನವನ್ನು ಕಲ್ಪಿಸಲಾಗುತ್ತದೆ.[68] ಈ ರೀತಿ ಮತ್ತೊಮ್ಮೆ ಮಿಶನ್ ವ್ಯವಸ್ಥೆಯಲ್ಲಿ ಮಿಶನರಿಗಳು ತಮ್ಮ ಪ್ರಾಬಲ್ಯವನ್ನು ಕಾಯ್ದುಕೊಳ್ಳುತ್ತಾರೆ. ಮಲಬಾರ್ ಮಿಶನ್ ಪ್ರದೇಶವನ್ನು 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನಿಂದ ಮರಳಿ ಬಾಸೆಲ್ ಮಿಶನ್ ಅಧೀನಕ್ಕೆ ತಂದು, ಭಾರತದಲ್ಲಿನ ಎಲ್ಲಾ ಬಾಸೆಲ್ ಮಿಶನ್ ಚರ್ಚುಗಳನ್ನು ಒಟ್ಟುಗೂಡಿಸುವ ಆಲೋಚನೆಯು ಶೊಸ್ಸರ್‌ನಲ್ಲಿತ್ತು. 1931ರಲ್ಲಿ ಶೊಸ್ಸರ್ ಭಾರತ ಬಿಟ್ಟಾಗ, ಅವರ ಮಲಬಾರ್‌ನ ಸಹೋದ್ಯೋಗಿಯಾಗಿದ್ದ ಅಡಾಲ್ಫ್ ಸ್ಟ್ರೆಕೈಸೇನ್‌ರವರು [Adolf Streckeisen] ಸಂವಿಧಾನದ ಪರಿಷ್ಕರಣೆ ಹಾಗೂ ಆಡಳಿತದ ಪುನರ್ ಸಂಘಟನೆಯನ್ನು ಮುಂದುವರಿಸುತ್ತಾರೆ. ಈ ಮೇಲಿನ ವಿಚಾರದ ಕುರಿತು 'ಇದು ಪ್ರಜಾಪ್ರಭುತ್ವ ಮಾದರಿಯಲ್ಲಿ ಇರಲೇ ಇಲ್ಲ. ಭಾರತೀಯರಿಗೆ ಸ್ವಾತಂತ್ರ್ಯ ಲಭಿಸುವ ಹಂತದಲ್ಲಿ ಮಿಶನರಿಗಳು ಅವರ ಸ್ವಾತಂತ್ರ್ಯವನ್ನು ಉಳಿಸುವ ಹಾಗೂ ಮರಳಿ ಪಡೆಯುವ ಪ್ರಯತ್ನದಲ್ಲಿದ್ದರು' ಎಂಬುದಾಗಿ

ವಿಟ್ಸ್ಚಿಯವರು [Witschi] ಅಭಿಪ್ರಾಯಪಟ್ಟಿದ್ದಾರೆ. ಇವ್ಯಾಂಜಲಿಸ್ಟಿಕ್ ಕೆಲಸ, ವೈದ್ಯಕೀಯ ಕಾರ್ಯ, ಆಸ್ಪತ್ರೆಗಳು, ಛಾಪಖಾನೆ, ಸೆಮಿನರಿ, ಕೆಲವು ಶಾಲೆಗಳು, ಅನಾಥಾಲಯಗಳು ಹಾಗೂ ಈ ಕೆಲಸಗಳಿಗೆ ಬೇಕಾದ ಆಸ್ತಿಗಳ ಮೇಲೆ ಮಿಶನ್ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತದೆ. ಸಭೆಗಳಿಗೆ [Congregations] ಸಂಬಂಧಿಸಿದ ಶಾಲೆಗಳ ಜವಾಬ್ದಾರಿಯನ್ನು, ಅದಕ್ಕೆ ಸಂಬಂಧಿಸಿದ ಆಸ್ತಿಗಳಾದ ಚರ್ಚ್ ಕಟ್ಟಡ, ಶಾಲಾ ಕಟ್ಟಡ ಇತ್ಯಾದಿಗಳೊಂದಿಗೆ ಚರ್ಚ್‌ಗೆ ವಹಿಸಿಕೊಡಲಾಗುತ್ತದೆ. 1934ರಲ್ಲಿ ಈ ಆಸ್ತಿಗಳನ್ನು ಪ್ರತ್ಯೇಕವಾದ 'ಟ್ರಸ್ಟ್ ಅಸೋಸಿಯೇಶನ್'ಗೆ [Trust association] ವಹಿಸಲಾಗುತ್ತದೆ.[69]

ಬಾಸೆಲ್ ಮಿಶನ್ ಕಾಲದಲ್ಲಿನ ಕಲಹಗಳು:

ಹೊಸ ಟ್ರಸ್ಟಿನಡಿಯಲ್ಲಿ ಚರ್ಚ್ ಆಸ್ತಿ ಹಾಗೂ ಮಿಶನ್ ಆಸ್ತಿಯನ್ನು ಪ್ರತ್ಯೇಕಗೊಳಿಸುವ ಪ್ರಯತ್ನ ಹೊಸ ಕಲಹಕ್ಕೆ ಕಾರಣವಾಗುತ್ತದೆ. ಕೆಲವೊಂದು ಆಸ್ತಿಗಳನ್ನು ಸಮರ್ಪಕವಾಗಿ ನೋಡಿಕೊಳ್ಳದ ಕಾರಣ, ಅವು ಲಾಭದಾಯಕವಾಗಿರಲಿಲ್ಲ. ಮಿಶನ್ ಅವುಗಳನ್ನು ಮಾರಾಟ ಮಾಡುವುದು ಉಚಿತವೆಂದು ತಿಳಿಯುತ್ತದೆ. ಆದರೆ ಮಿಶನ್ ಹಣದ ಸಂಗ್ರಹಕ್ಕಾಗಿ ಅವುಗಳನ್ನು ಮಾರಾಟ ಮಾಡುತ್ತಿದೆ ಎಂಬೆಲ್ಲಾ ಊಹಾಪೋಹಗಳು ಹರಡುತ್ತವೆ. ಯಾವುದೇ ಸಮರ್ಪಕವಾದ ಪ್ರಚಾರವನ್ನು ನೀಡದೆ ಆಸ್ತಿಗಳನ್ನು ಮಾರಾಟ ಮಾಡಿದ್ದು ಮತ್ತಷ್ಟು ಟೀಕೆಗೆ ಕಾರಣವಾಗುತ್ತದೆ. ಈ ಹಂತದಲ್ಲಿ 'ಚರ್ಚ್ ಯೂನಿಯನ್ ಪಾರ್ಟಿ' ತನ್ನನ್ನು ತಾನೇ 'ಇಂಡಿಯನ್ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ಸ್ ಆಫ್ ಸೌತ್ ಕೆನರಾ ಡಿಸ್ಟ್ರಿಕ್ಟ್' [Indian Protestant Christians of South Kanara District] ಎಂದು ಕರೆದು, 1932ರ ಸೆಪ್ಟೆಂಬರ್‌ನಲ್ಲಿ ಮದ್ರಾಸ್ ಸರಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಈ ರೀತಿ ತಿಳಿಸುತ್ತದೆ. 'ಜರ್ಮನ್ ಮಿಶನರಿಗಳು ಅವರ ಹೃದಯ ಬದಲಿಸದೇ ವಾಪಾಸ್ಸಾಗುತ್ತಾರೆಂಬುದನ್ನು ಆಲೋಚಿಸದೇ, ಅವರು ವಾಪಾಸ್ಸು ಬರುವಂತಾಗಲು ಬೆಂಬಲ ಹಾಗೂ ಯಶಸ್ವಿ ಪ್ರಯತ್ನವನ್ನು ಮಾಡಲಾಯಿತು' ಎಂಬುದಾಗಿ ಹೇಳುತ್ತಾ ಮಿಶನರಿಗಳು ಮೊದಲಿನಂತೆ ಎಲ್ಲಾ ವಿಚಾರಗಳ ಮೇಲೆ ಪ್ರಬಲ ನಿಯಂತ್ರಣ ಸಾಧಿಸಲು ಹೊರಟಿರುವುದನ್ನು ಪ್ರಬಲವಾಗಿ ಖಂಡಿಸುತ್ತಾರೆ.[70] ಈ ಮನವಿಗೆ ಪ್ರತಿಯಾಗಿ [counter memorial] 1932 ಅಕ್ಟೋಬರ್‌ನಲ್ಲಿ ಮಿಶನ್ ಪರವಾಗಿರುವ 'ಬಹುಮತ ಪಕ್ಷ'ವು [Majority group] ತನ್ನನ್ನು ತಾನೇ 'ಇಂಡಿಯನ್ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ಸ್ ಬಿಲಾಂಗಿಂಗ್ ಟು ಅಲ್ ದಿ ಬಾಸೆಲ್ ಮಿಶನ್ ಚರ್ಚ್‌ಸ್ ಸಿಚುವೇಟೆಡ್ ಇನ್ ಸೌತ್ ಕೆನರಾ ಡಿಸ್ಟ್ರಿಕ್ಟ್' [Indian protestant Christians belonging to all the Basel mission Churches situated in S.K.

District] ಎಂದು ಕರೆದುಕೊಂಡು, 'ಚರ್ಚ್ ಯೂನಿಯನ್ ಪಾರ್ಟಿ'ಯ ಹಿಂದಿನ ಸಂಗತಿಗಳನ್ನೆಲ್ಲಾ ವಿವರಿಸುತ್ತಾ, ಮೊದಲಿನ ಮನವಿಯಲ್ಲಿ ಮಿಶನರಿಗಳ ವಿರುದ್ಧ ಮಾಡಿರುವ ಆಪಾದನೆಗಳ ವಿರುದ್ಧ ವಾದಿಸುತ್ತದೆ. ಈ ಮನವಿಯಲ್ಲಿ 'ಬಹುಮತ ಪಕ್ಷ'ವು ಹೇಗೆ ಚರ್ಚ್ ಯೂನಿಯನ್ ಪಾರ್ಟಿಯು ತನ್ನನ್ನು ತಾನೇ ಮಿಶನ್ ಆಸ್ತಿಯ ಸಂರಕ್ಷಕನೆಂದು ಕರೆಸಿಕೊಂಡಿದೆ ಎಂಬುದನ್ನು ವಿವರಿಸುತ್ತದೆ. ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಯೋಜನೆಗೆ ಬಲ್ಮಠ ಚರ್ಚ್ ತನ್ನ ಪ್ರಬಲ ವಿರೋಧವನ್ನು ವ್ಯಕ್ತಪಡಿಸುತ್ತದೆ. ಯಾಕೆಂದರೆ ಅದು ಅಪಾರವಾದ ಹಾಗೂ ಶ್ರೀಮಂತವಾದ ಆಸ್ತಿಯ ಮೇಲೆ ತನ್ನ ನಿಯಂತ್ರಣವನ್ನು ಹೊಂದಿದ್ದು, ಅದನ್ನು ವರ್ಗಾಯಿಸಲು ಅದಕ್ಕೆ ಒಲವಿರಲಿಲ್ಲ. ಮೂರು ಪ್ರದೇಶಗಳಿಗೂ ಒಂದೇ ರೀತಿಯ ನಿಯಮ ಅನ್ವಯವಾಗುವುದು ಎಂಬ ನಿಬಂಧನೆ ಹಾಗೂ ಫಿಶ್ಚರ್‌ರವರ [Fischer] ಸಮರ್ಪಕವಾದ ಪ್ರಯತ್ನಗಳಿಂದಾಗಿ ಅದು ಅಂತಿಮವಾಗಿ ಯೋಜನೆಯನ್ನು ಒಪ್ಪಿಕೊಳ್ಳುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಕೋರ್ಟಿನಲ್ಲಿ ಇಬ್ಬರು ದಾಖಲಿಸಿದ ಮೊಕದ್ದಮೆಯನ್ನು ವಾಪಾಸ್ಸು ಪಡೆಯಲಾಗುತ್ತದೆ. (ಫಿಶ್ಚರ್‌ರವರ ಕಾರ್ಯದಿಂದಾಗಿ) ತನ್ನ ಸ್ಥಳೀಯ ಸ್ವಾಯತ್ತೆಯನ್ನು ಉಳಿಸಿಕೊಂಡು, ದಕ್ಷಿಣ ಮರಾಠವು ಈ ಯೋಜನೆಯನ್ನು 12ನೇ ನವೆಂಬರ್ 1934ರಲ್ಲಿ[71] ಒಪ್ಪಿಕೊಳ್ಳುತ್ತದೆ. ಹೀಗೆ ದಕ್ಷಿಣ ಕನ್ನಡ ಹಾಗೂ ದಕ್ಷಿಣ ಮರಾಠ ಮಿಶನ್ ಪ್ರದೇಶಗಳು ಹೊಸ ವ್ಯವಸ್ಥೆಯಲ್ಲಿ ಮುಂದುವರಿಯುತ್ತವೆ. ಬಾಸೆಲ್ ಮಿಶನ್ ಭಾರತದಲ್ಲಿನ ತನ್ನ ಎಲ್ಲಾ ಮಿಶನ್ ಪ್ರದೇಶಗಳನ್ನು (ನೀಲಗಿರಿ ಮತ್ತು ಹೊನ್ನಾವರ ಹೊರತುಪಡಿಸಿ) ಒಂದೇ ಆಡಳಿತದಡಿಯಲ್ಲಿ ತರಬೇಕೆಂಬ ಗುರಿಯನ್ನು ಹೊಂದಿತ್ತು. ಇದಕ್ಕಾಗಿ ಅದು ಪ್ರಯತ್ನವನ್ನು ಮುಂದುವರಿಸಿರುತ್ತದೆ.

ಭಾರತದಲ್ಲಿ ಬಾಸೆಲ್ ಮಿಶನಿನ ಮುಖ್ಯಸ್ಥರಾಗಿದ್ದ ಶೊಸ್ಸರ್‌ರವರು ತಮ್ಮ ನಿರಂತರವಾದ 4 ವರ್ಷಗಳ ಸೇವೆಯ ನಂತರ, ತನ್ನ ಜವಾಬ್ದಾರಿಗಳನ್ನು 1931ರಲ್ಲಿ ಎ.ಮುನ್ಚ್‌ರವರಿಗೆ [A.Munch] ವಹಿಸುತ್ತಾರೆ. ಎನ್.ಸಿ.ಸಾರ್ಜೆಂಟ್‌ರವರು, ಶೊಸ್ಸರ್‌ರವರ 4 ವರ್ಷದ ಕಾರ್ಯವೈಖರಿಯ ಬಗ್ಗೆ ಉಲ್ಲೇಖಿಸುತ್ತಾ ಅವರು 'ಬಿಷಪರ ಹಾಗೆ' [like a bishop] ಕಾರ್ಯನಿರ್ವಹಿಸಿದರು ಎಂದಿದ್ದಾರೆ. ಎ.ಮುನ್ಚ್‌ರವರು 1933ರ ಜನವರಿಯಲ್ಲಿ ಅವರ ಜವಾಬ್ದಾರಿಯನ್ನು ಡಾ.ಜೆ.ಮೇಯರ್‌ರವರಿಗೆ [Dr.J.Meyer] ವಹಿಸುತ್ತಾರೆ.[72] 1932ರಲ್ಲಿ ಬಾಸೆಲ್ ಮಿಶನಿನ ಹೋಮ್ ಕಮಿಟಿಯ ನಿರ್ದೇಶಕರಾದ ಹರ್ಟೆನ್‌ಸ್ಟೈನ್‌ರವರು [Hartenstein] ಭಾರತಕ್ಕೆ ನೀಡಿದ ಎರಡನೇ ಭೇಟಿಯು, ಭಾರತದಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್‌ನ ರಚನೆಗೆ ಕಾರಣವಾಗುತ್ತದೆ. ಅವರು ದಕ್ಷಿಣ ಕನ್ನಡ, ದಕ್ಷಿಣ ಮರಾಠ ಮತ್ತು ಮಲಬಾರ್‌ನ ಭಾರತೀಯ

ನಾಯಕರುಗಳೊಂದಿಗೆ, ಭಾರತದಲ್ಲಿ ಬಾಸೆಲ್ ಮಿಶನ್ ಚರ್ಚುಗಳ ಒಕ್ಕೂಟ ರಚಿಸುವುದರ ಬಗ್ಗೆ ಮಾತುಕತೆ ನಡೆಸುತ್ತಾರೆ. ಬಾಸೆಲ್ ಮಿಶನಿನ ಹೋಮ್ ಬೋರ್ಡ್, ಮಲಬಾರ್ ಪ್ರದೇಶವು 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನಿಂದ ವಾಪಸ್ಸಾಗಿ, ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಪ್ರದೇಶದ, ಉದ್ದೇಶಿತ ಒಕ್ಕೂಟದೊಂದಿಗೆ ಸೇರಬೇಕೆಂದು ತಿಳಿಸುತ್ತದೆ. ಈ ಸಂದರ್ಭದಲ್ಲಿ ಮಲಬಾರ್ ಚರ್ಚ್ ಕೌನ್ಸಿಲ್, 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ ಜನರಲ್ ಅಸೆಂಬ್ಲಿಯನ್ನು ಸಂಪರ್ಕಿಸಿ ಅದರ ಅನುಮತಿ ಕೋರುತ್ತದೆ. ಬಾಸೆಲ್ ಮಿಶನಿನ ಈ ನಡೆಯು 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ಗೆ ಬಹಳಷ್ಟು ಅಸಂತುಷ್ಟಿಯನ್ನು ತಂದೊಡ್ಡುತ್ತದೆ. ಏಕೆಂದರೆ ಬಾಸೆಲ್ ಮಿಶನ್ ಪ್ರದೇಶಗಳಾದ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠಗಳು 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ್ನು ಸೇರಬಹುದು ಎಂಬ ನಿರೀಕ್ಷೆ ಅದರದ್ದಾಗಿತ್ತು. 1933ರ, ಸೆಪ್ಟೆಂಬರ್‌ನಲ್ಲಿ 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ 14ನೇ ಜನರಲ್ ಅಸೆಂಬ್ಲಿಯು ಕ್ಯಾಲಿಕಟ್‌ನಲ್ಲಿ ಸಭೆ ಸೇರಿ, ಒಂದು ಸುತ್ತೋಲೆಯೊಂದಿಗೆ [resolution] ಮಲಬಾರನ್ನು ಬಾಸೆಲ್ ಮಿಶನಿಗೆ ಸೇರಲು ಅನುಮತಿಯನ್ನು ನೀಡುತ್ತದೆ. ಅದರಂತೆ ಈ ನಿರ್ಧಾರವು ಮುಂದೆ ಅವು 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ್ನು ಸೇರಲು ಕಾರಣವಾಗಬಹುದು ಎಂಬುದು 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ ಆಲೋಚನೆಯಾಗಿತ್ತು.[73] ಹೀಗೆ ಬಾಸೆಲ್ ಮಿಶನ್ ಭಾರತಕ್ಕೆ ಬಂದು 100 ವರ್ಷ ತುಂಬಿದ ಸಂದರ್ಭದಲ್ಲಿ ಎಂದರೆ 1934ರಲ್ಲಿ ಸರಕಾರದ ಅನುಮತಿ ಪಡೆದು 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ'ವನ್ನು[74] [United Basel Mission Church in India [UBMCI] ಉದ್ಘಾಟಿಸಲಾಗುತ್ತದೆ. ಚರ್ಚ್‌ನ ಆಸ್ತಿಯನ್ನು 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್'ಗೆ ವಹಿಸಲಾಗುತ್ತದೆ. 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ'ದಲ್ಲಿ 3 ಜಿಲ್ಲಾ ಚರ್ಚ್ ಕೌನ್ಸಿಲ್‌ಗಳಾದ 'ಸೌತ್ ಕೆನರಾ ಆ್ಯಂಡ್ ಕೂರ್ಗ್ ಡಿಸ್ಟ್ರಿಕ್ಟ್ ಚರ್ಚ್ ಕೌನ್ಸಿಲ್' [South Kanara and Coorg District Church Council], 'ದಿ ಮಲಬಾರ್ ಡಿಸ್ಟ್ರಿಕ್ಟ್ ಚರ್ಚ್ ಕೌನ್ಸಿಲ್' [The Malabar District Church council] ಹಾಗೂ 'ದಿ ಬಾಂಬೆ ಕರ್ನಾಟಕ ಡಿಸ್ಟ್ರಿಕ್ಟ್ ಚರ್ಚ್ ಕೌನ್ಸಿಲ್' [The Bombay Karnataka District Church Council] ಗಳಿದ್ದವು. 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ'ದ ಮೊದಲ ಸಿನೋಡ್ 18ನೇ ಫೆಬ್ರವರಿ 1936ರಂದು ಮಿಶನಿನ ಜನರಲ್ ಪ್ರೆಸಿಡೆಂಟರಾದ ಡಾ.ಜೆ.ಮೇಯರ್‌ರವರ ನೇತೃತ್ವದಲ್ಲಿ ನಡೆದು ರೆವೆ.ಎರಿಯಲ್ ಸುಮಿತ್ರರವರು [Rev. Ariel Sumitra] ಅದರ ಅಧ್ಯಕ್ಷರಾಗಿ [Chairman] ಆಯ್ಕೆಯಾಗುತ್ತಾರೆ.

ಸಿನೋಡಿಗೆ ನಿಯಮಿತವಾದ ಕಾರ್ಯಗಳಿದ್ದು, ಅದು ಬಾಸೆಲ್ ಮಿಶನಿನ ಮೂರು ಜಿಲ್ಲಾ ಚರ್ಚುಗಳ ನಡುವೆ ಒಂದು ಕೊಂಡಿಯಾಗಿತ್ತು. ಸಿನೋಡ್ ಚರ್ಚುಗಳ ಅಧ್ಯಾತ್ಮಿಕ ವಿಚಾರ, ಪೂಜಾ ವಿಧಿ ವಿಧಾನ, ಚರ್ಚ್ ಯುನಿಯನ್ ಇತ್ಯಾದಿ ವಿಚಾರಗಳ ಬಗ್ಗೆ ಕಾರ್ಯ ನಿರ್ವಹಿಸುತ್ತಿತ್ತು.[75]

ಡಾ.ಜೆ.ಮೇಯೆರ್‌ರವರು 1936 ನವೆಂಬರ್‌ನಲ್ಲಿ ಭಾರತದಿಂದ ತೆರಳುತ್ತಾರೆ. ಅದೇ ವರ್ಷ ಡಾ.ಪಿ.ಇ.ಬುರ್ಕಾರ್ಡ್ಸಾಟ್ [Dr. P.E. Burckhardt] ರವರು ಬಾಸೆಲ್ ಮಿಶನ್ ಸೇವೆಗೆ ಮರಳುತ್ತಾರೆ. ಅವರು ಮಿಶನಿನ ಅಧ್ಯಕ್ಷರಾಗಿ ಹಾಗೂ ಸೆಮಿನರಿಯ ಪ್ರಾಂಶುಪಾಲರಾಗಿ ಮುಂದುವರಿಯುತ್ತಾರೆ. 1934ರಲ್ಲಿ ಬಾಸೆಲ್ ಮಿಶನ್ ಭಾರತಕ್ಕೆ ಬಂದು 100 ವರ್ಷಗಳಾದ ಸಂದರ್ಭದಲ್ಲಿ, ಅದನ್ನು ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಹೋಮ್ ಬೋರ್ಡಿನ ಪರವಾಗಿ ಡಾ. ಹರ್ಟೆನ್‌ಸ್ಟೈನ್ [Dr.Hartenstein] ಭಾರತಕ್ಕೆ ಬರುತ್ತಾರೆ. 1932ರಲ್ಲಿ 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ'ದ ರಚನೆಯೊಂದಿಗೆ ಬಾಸೆಲ್ ಮಿಶನ್ ಚರ್ಚುಗಳಿಗೆ ಸ್ವಾಯತ್ತತೆಯನ್ನು [Autonomy] ನೀಡಲಾಗುತ್ತದೆ. ಮಿಶನ್ ಅರ್ಧದಷ್ಟು ಆಸ್ತಿಯ ಮೇಲೆ, ಸೆಮಿನರಿ, ಇವ್ಯಾಂಜಲಿಕಲ್ ಕೆಲಸ, 2 ಆಸ್ಪತ್ರೆಗಳು, 8 ಅನಾಥಾಲಯಗಳು, 9 ಹೈಸ್ಕೂಲುಗಳು ಮತ್ತು ಮಲಬಾರ್ ಕ್ರಿಶ್ಚಿಯನ್ ಕಾಲೇಜು ಇತ್ಯಾದಿಗಳ ಮೇಲೆ ತನ್ನ ನಿಯಂತ್ರಣವನ್ನು ಮುಂದುವರಿಸುತ್ತದೆ.[76] ಇವ್ಯಾಂಜಲಿಸ್ಟರುಗಳ ಪಾಲನೆ ಮತ್ತು ಕ್ರೈಸ್ತೇತರರ ಮಧ್ಯೆ ಕೆಲಸ ನಿರ್ವಹಿಸುವುದು ಮಿಶನಿನ ಪ್ರಮುಖ ವಿಚಾರಗಳಾಗಿದ್ದು, ದೇಶಿಯ ಮಿಶನಿನ ಪಾಲನೆ ಚರ್ಚುಗಳ ಪ್ರಮುಖ ಜವಾಬ್ದಾರಿಯಾಗಿತ್ತು. 1930–31ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕೆಲವು ಮಿಶನರಿಗಳನ್ನು ಭಾರತಕ್ಕೆ ರವಾನಿಸುತ್ತದೆ. ಮಂಗಳೂರಿನ ತಿಯೊಲಾಜಿಕಲ್ ಸೆಮಿನರಿಗೆ ಆರ್.ಬ್ರೆಜ್ಲರ್‌ರವರನ್ನು, ದಕ್ಷಿಣ ಮರಾಠಕ್ಕೆ ಎ.ಶೇರರ್‌ರವರನ್ನು, ದಕ್ಷಿಣ ಕನ್ನಡದ ಹೈಸ್ಕೂಲಿಗೆ ಜೆ. ಮೈಲಿಯವರನ್ನು, ಮಲಬಾರಿಗೆ ಜಿ.ಡೆಂಗ್ಲರ್‌ರನ್ನು, ಕೆನರಾಕ್ಕೆ ಎಫ್.ಲೂಸರ್, ಎ.ಗ್ರೊಸ್ ಮತ್ತು ಇ. ಹೇಮಾನ್ ಎಂಬ ಮಿಶನರಿಗಳನ್ನು ಬಾಸೆಲ್ ಮಿಶನ್ ಕಳುಹಿಸಿತ್ತು.[77] 1933ರಲ್ಲಿ ಕೆಲವು ಹೊಸ ಮಿಶನರಿಗಳು ಕೆಲಸವನ್ನು ಆರಂಭಿಸುತ್ತಾರೆ.[78] ಬಾಸೆಲ್ ಮಿಶನಿನ ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಒಳಜಗಳ ಹಾಗೂ ಬಿಕ್ಕಟ್ಟು ಮುಂದುವರಿಯುತ್ತದೆ. 1933ರಲ್ಲಿ 'ದೊಡ್ಡ ಪಕ್ಷ'ದಲ್ಲೇ [Big party] ಭಿನ್ನಾಭಿಪ್ರಾಯ ಬೆಳೆದು, ಗುಂಪು ಇಬ್ಭಾಗವಾಗುತ್ತದೆ. ಮೊದಲು ಈ ಗುಂಪಿನ ಮಠಪತಿ [B.G.Matapathy] ಜಿಲ್ಲಾ ಚರ್ಚ್ ಕೌನ್ಸಿಲ್ ಹಾಗೂ ಜಿಲ್ಲಾ ಚರ್ಚ್ ಬೋರ್ಡಿನ ಅಧ್ಯಕ್ಷರಾಗಿ ಹಾಗೂ ಭಂಕಾಪುರ್‌ರವರು [D.Bankapur] ಖಜಾಂಜಿಯಾಗಿದ್ದರು. ನಂತರ ಇವರಿಬ್ಬರ ಮಧ್ಯೆ ಭಿನ್ನಾಭಿಪ್ರಾಯ ಮೂಡುತ್ತದೆ. ಮತ್ತೊಂದೆಡೆ ಮರಿಗೌಡರವರು [Marigouda] 'ಚಿಕ್ಕ ಪಕ್ಷ' ವನ್ನು

ಮುನ್ನಡೆಸುತ್ತಿದ್ದರು. ಹೀಗೆ 1933ರಲ್ಲಿ ಮೂರು ಗುಂಪುಗಳು ಉದಯಿಸಿದ್ದವು. ಕ್ರಿಶ್ಚಿಯನ್ ಎಸೋಸಿಯೇಶನ್‌ನ ಅಧ್ಯಕ್ಷರಾಗಿದ್ದ ಚಂದ್ರಶೇಖರ್ ಎಸ್.ಕಿರ್‌ಬೈರವರು [Chandrashekar S. Kirby] ಈ ಗುಂಪುಗಳ ಮಧ್ಯೆ ಮಧ್ಯವರ್ತಿಯಾಗಿ ಬಿಕ್ಕಟ್ಟು ಪರಿಹರಿಸಲು ನಡೆಸಿದ ಪ್ರಯತ್ನವು ವಿಫಲವಾಗುತ್ತದೆ. ಮಠಪತಿಯವರು ಜಿಲ್ಲಾ ಚರ್ಚ್ ಕೌನ್ಸಿಲಿನ ಪ್ರಮುಖ ಸಭೆಗಳಲ್ಲಿ ಭಾಗಿಯಾಗದೇ ಇರುತ್ತಿದ್ದುದರಿಂದ, ಭಂಕಾಪುರ್‌ರವರು ಜಿಲ್ಲಾ ಚರ್ಚ್ ಕೌನ್ಸಿಲಿನ ಅಧ್ಯಕ್ಷರಾಗುತ್ತಾರೆ ಹಾಗೂ ಇಲ್ಲಿನ ಸಂಪೂರ್ಣ ವಿಚಾರಗಳ ಬಗ್ಗೆ 1935 ಆಗಸ್ಟ್‌ನಲ್ಲಿ ಹರ್ಟನ್‌ಸ್ಟೈನ್‌ರವರಿಗೆ ಪತ್ರದ ಮೂಲಕ ತಿಳಿಸುತ್ತಾರೆ. ಈ ಬಿಕ್ಕಟ್ಟಿನ ಹೊರತಾಗಿ ಹುಬ್ಬಳ್ಳಿಯಲ್ಲಿ ಮಿಶನರಿಯಾದ ನೊವೆರಾಜ್ [Noverraz], ಸಿ.ಸ್ಚುಲರ್‌ರವರು [C.Schuler] ಬೆಟಗೇರಿಯಲ್ಲಿ ಉತ್ತಮವಾದ ಮಿಶನರಿ ಕೆಲಸವನ್ನು ಮುಂದುವರೆಸುತ್ತಾರೆ. 1930ರ ದಶಕದ ದ್ವಿತೀಯಾರ್ಧದಲ್ಲಿ ದೇಶಿಯ ಇವ್ಯಾಂಜಲಿಸ್ಟರು ಹಾಗೂ ಮಿಶನರಿಗಳ ಪ್ರಯತ್ನಗಳಿಂದಾಗಿ ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಹಲವು ಜನರು ಕ್ರೈಸ್ತರಾಗುವುದನ್ನು ಗಮನಿಸಬಹುದು. 1932ರಲ್ಲಿ ಸರ್ವಾಂಡ್‌ನಲ್ಲಿ [Sarvand], 1935ರಲ್ಲಿ ಗುಟ್ಟಲ್ [Guttal] ಮತ್ತು ನಗಲೂರ್‌ನಲ್ಲಿ [Nagalur], 1936ರಲ್ಲಿ ಉಕ್ಕುಂಡಾ [Ukkunda] ಮತ್ತು ಬನ್ನಿಮಟ್ಟಿ [Bannimatti], 1938ರಲ್ಲಿ ಹಿರಹಡಗಲಿ [Hirahadagali], 1937ರಲ್ಲಿ ಕರಡಗಿ [Karadgi], ಹುಲ್ಲಲ್ [Hullal] ಮತ್ತು ಕುಡುಪ್ಲಿ [Kudupli] ಇತ್ಯಾದಿ ಪ್ರದೇಶಗಳಲ್ಲಿ ಮತಾಂತರಗಳು ನಡೆಯುತ್ತವೆ.[79] 1929–30ರಲ್ಲಿ ಭಾರತದಲ್ಲಿ 95 ಪ್ರಾಯಸ್ತರು ಹಾಗೂ 70 ಮಕ್ಕಳು ಅನ್ಯಮತದಿಂದ ಬಾಸೆಲ್ ಮಿಶನ್ ಕ್ರೈಸ್ತರಾಗಿದ್ದರು. ಈ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಇತರ ಎಲ್ಲಾ ಮಿಶನ್ ಕ್ಷೇತ್ರಗಳಿಗಿಂತ ಕಡಿಮೆ ಯಶಸ್ಸು ಭಾರತದಲ್ಲಾಗಿರುತ್ತದೆ. ಕೆಮರೊನ್‌ನಲ್ಲಿ ಅತೀ ಹೆಚ್ಚು ಅನ್ಯಮತೀಯರು ಬಾಸೆಲ್ ಮಿಶನ್ ಕ್ರೈಸ್ತರಾಗಿದ್ದರು.[80] ಕಾಂಗ್ರೆಸ್ ಹಾಗೂ ರಾಷ್ಟ್ರೀಯ ಚಳುವಳಿಯು ಬಾಂಬೆ ಕರ್ನಾಟಕ ಪ್ರದೇಶಗಳಲ್ಲಿ ತೀವ್ರವಾಗಿತ್ತು ಮಾತ್ರವಲ್ಲದೇ, ಕಾಂಗ್ರೆಸ್ ಬೆಂಬಲಿಗರು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ತಮ್ಮ ಕಾರ್ಯಕ್ರಮಗಳನ್ನು ಪ್ರಚಾರ ಮಾಡುತ್ತಿದ್ದರು. ಜನರು ಕ್ರೈಸ್ತರಾಗುವುದನ್ನು ತಡೆಯುತ್ತಿದ್ದ ಇವರು, ಇವ್ಯಾಂಜಲಿಕಲ್ ಚಟುವಟಿಕೆಗಳಿಗೂ ಅಡ್ಡಿ ಪಡಿಸುತ್ತಿದ್ದರು. ಈ ಕಾಲಾವಧಿಯಲ್ಲಿ ಸ್ವಾತಂತ್ರ್ಯ ಚಳವಳಿಯು ತನ್ನ ಉನ್ನತ ಮಟ್ಟ ಮುಟ್ಟಿರುತ್ತದೆ. ಕರ್ನಾಟಕದ ಪ್ರದೇಶಗಳಲ್ಲಿ ಕಾಂಗ್ರೆಸ್ ಬಹಳಷ್ಟು ಪ್ರಬಲಗೊಂಡಿರುತ್ತದೆ. 1935ರ ಕಾಯ್ದೆ ಪ್ರಕಾರ ಚುನಾವಣೆ ನಡೆದು, ಮದ್ರಾಸ್ ಮತ್ತು ಬಾಂಬೆ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲಗಳು ಅಸ್ತಿತ್ವಕ್ಕೆ ಬರುತ್ತವೆ. ಈ ಸಂದರ್ಭದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಕಠಿಣ ಸಮಯಗಳನ್ನು ಎದುರಿಸಬೇಕಾಯಿತು. ನಿರುದ್ಯೋಗ, ಉದ್ಯೋಗವನ್ನು

ಹರಸುತ್ತಾ ವಲಸೆ, ನಗರದ ಸಭೆಗಳ ಶಕ್ತಿಗುಂದುವಿಕೆ ಮುಂತಾದ ಸಮಸ್ಯೆಗಳು ಎದುರಾಗುತ್ತವೆ. ಮತ್ತೊಂದೆಡೆ ಯುರೋಪಿನಲ್ಲಿನ ಬದಲಾದ ಪರಿಸ್ಥಿತಿಯಲ್ಲಿ ಬಾಸೆಲ್ ಮಿಶನ್ ಹೋಮ್ ಬೋರ್ಡು ಕೂಡಾ ಸಂಕಷ್ಟವನ್ನು ಎದುರಿಸುತ್ತದೆ.[81]

1930ರ ದಶಕದಲ್ಲಿ ಬಾಸೆಲ್ ಹೋಮ್ ಕಮಿಟಿಯ ಹಾಗೂ ಜರ್ಮನಿಯ ಸ್ಥಿತಿ-ಗತಿ:

1930ರ ದಶಕವು ಯುರೋಪಿನಲ್ಲಿ ಹಲವು ಕ್ಷಿಪ್ರ ರಾಜಕೀಯ ಬೆಳವಣಿಗೆಗಳಿಗೆ ಕಾರಣವಾಗುತ್ತದೆ. ಯುರೋಪಿನಲ್ಲಿ ಜರ್ಮನಿಯು ನಾಝಿಗಳ ಹಾಗೂ ಹಿಟ್ಲರನ ನಾಯಕತ್ವದಲ್ಲಿ ಪ್ರಬಲವಾಗಿ ಬೆಳೆಯಲು ಆರಂಭವಾಗುತ್ತದೆ. ಆದರೆ ಈ ರೀತಿಯ ಬೆಳವಣಿಗೆಯು ಬಾಸೆಲ್ ಮಿಶನಿನ ಬೆಳವಣಿಗೆಗೆ ಪೂರಕವಾಗದೇ ಮಾರಕವಾಯಿತೆನ್ನುವುದು ಒಪ್ಪಿಕೊಳ್ಳಬೇಕಾದ ಸತ್ಯ. 1934ರಲ್ಲಿ ಬಾಸೆಲ್ ಮಿಶನ್ ಹೋಮ್ ಕಮಿಟಿಯು ಎಚ್.ವಿಚ್ಚಿಯವರನ್ನು ಭಾರತಕ್ಕೆ ಕಳುಹಿಸುತ್ತದೆ. ಅವರು ಬಾಸೆಲ್ ಮಿಶನಿನ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ಚಿತ್ರಣ ನೀಡುತ್ತಾ, ಜರ್ಮನಿಯು ಸಮಸ್ಯೆಗಳ ಆರಂಭದಲ್ಲಿರದೆ ಅಂತ್ಯದಲ್ಲಿ ನಿಂತುಕೊಂಡಿದೆ. ಜರ್ಮನರು ಬಡವರಾಗಿದ್ದು, ಜೀವನೋಪಾಯಕ್ಕೆ ತೊಂದರೆಗಳಿವೆ. ಈ ಸಮಸ್ಯೆಗಳ ಹೊರತು ಅಲ್ಲಿನ ಮಿಶನ್ ಸ್ನೇಹಿತರು ಮಿಶನ್ ಮೇಲಿನ ಪ್ರೀತಿಯಿಂದ ಸಹಾಯ ನೀಡಲು ಸಿದ್ಧರಾಗಿದ್ದಾರೆ. ಆದರೆ ನಾಝಿ ಸರಕಾರದ ನಿರ್ಬಂಧದಿಂದಾಗಿ ಈ ಹಣವನ್ನು ಹೊರ ಸಾಗಿಸುವುದು ಕಷ್ಟವಾಗಿದೆ. ಆದ್ದರಿಂದ ಬಾಸೆಲ್ ಮಿಶನ್ ಜರ್ಮನಿ ಮತ್ತು ಸ್ವಿಡ್ಜರ್ಲ್ಯಾಂಡಿನ ಕೆಲಸವನ್ನು ಕಡಿಮೆ ಮಾಡಬೇಕೆಂಬ ಹಾಗೂ ಬಾಸೆಲ್ ಕಾಲೇಜಿನ ಒಂದು ತರಗತಿಯನ್ನು ಮುಚ್ಚುವ ಚಿಂತನೆ ನಡೆಸಿದೆ. ಅದೇ ರೀತಿ ಸದ್ಯ ಮಿಶನರಿಗಳನ್ನು ಕಳುಹಿಸಲಾಗುವುದಿಲ್ಲವಾದರೂ, ಮಿಶನಿಗೆ ಕೊಡುವ ಹಣವನ್ನು ಕಡಿಮೆ ಮಾಡಲಾಗುವುದಿಲ್ಲ ಎಂದು ಭರವಸೆಯನ್ನು ನೀಡುತ್ತಾರೆ.[82] ವಿಚ್ಚಿಯವರು ಜರ್ಮನಿಯವರಿಗಿರುವ ಅಧ್ಯಾತ್ಮಿಕ ತೊಂದರೆಗಳ ಬಗ್ಗೆ ತಿಳಿಸುತ್ತಾ, ಜರ್ಮನ್ ಸಭೆಗಳಲ್ಲಿ ಎರಡು ಪಂಗಡಗಳಾಗಿವೆ. ಸಾಮ್ರಾಜ್ಯ ಸಭೆಯವರು ಎಂದು ಕರೆದುಕೊಂಡಿರುವ ಪಂಗಡವು ನಾಝಿ ಬೆಂಬಲಿತವಾಗಿದ್ದು, ಸಾಮ್ರಾಜ್ಯದ ಹಾಗೂ ನಾಝಿಗಳ ಅಗತ್ಯಕ್ಕೆ ತಕ್ಕಂತೆ ಸಭೆಗಳು ನಡೆಯಬೇಕು ಎಂಬ ನಿಲುವನ್ನು ಹೊಂದಿದ್ದಾರೆ. ಮತ್ತೊಂದು ಪಂಗಡವಾದ 'ಕ್ರೈಸ್ತ ವಿಶ್ವಾಸ ಅರಿಕೆ' ಮಾಡುವವರು, ದೇವರ ವಾಕ್ಯದ ಪ್ರಕಾರ ನಡೆದುಕೊಳ್ಳುವವರಾಗಿದ್ದು, ಇದರಲ್ಲಿ ಮಿಶನ್ ಸ್ನೇಹಿತರು ಸೇರಿದ್ದರು. ಸಾಮ್ರಾಜ್ಯ ಸಭೆಯವರು ಕ್ರೈಸ್ತ ವಿಶ್ವಾಸಿಗಳನ್ನು ಹಿಂಸಿಸುತ್ತಿದ್ದು, ಇದು ಮಿಶನಿಗೆ ಕಷ್ಟ ನಷ್ಟವನ್ನುಂಟುಮಾಡಿದೆ. ಸಾಮ್ರಾಜ್ಯ ಸಭೆಯವರು ಮಿಶನಿಗೆ ವಿರುದ್ಧವಾಗಿದ್ದು, ಹಣ ಸಂಗ್ರಹಕ್ಕೆ ಅಡ್ಡಿಯಾಗಿದ್ದಾರೆ ಎಂದಿದ್ದರು.[83] ಹಿಟ್ಲರ್‌ನ ಕಾಲದಲ್ಲಿ ಜರ್ಮನಿಯಲ್ಲಿ ನಾಝಿಗಳು ಧರ್ಮ ಸೇರಿದಂತೆ ದೇಶದ ಎಲ್ಲಾ ವಿಚಾರಗಳ

ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿ, ಕ್ರೈಸ್ತರ ಮೇಲೆ ನಿರ್ಬಂಧಗಳನ್ನು ಹೇರಿ, ನಾಝಿ ಕ್ರೈಸ್ತರನ್ನು ಹುಟ್ಟುಹಾಕಲಾಗುತ್ತದೆ.

'ಕರ್ನಾಟಕ ಕ್ರೈಸ್ತ ಬಂಧು' 'ಜರ್ಮನಿಯ ಪ್ರಸ್ತುತ ಅವಸ್ಥೆಯು ಅಸಾಧಾರಣವಾದುದು. ಅಲ್ಲಿನ ಜನರು ಈಗ ತಮ್ಮ ಮನೆಯನ್ನೇ ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿರುವರು. ಕಳೆದ ಮಹಾಯುದ್ಧದ ನಂತರ ಜರ್ಮನಿ ದೇಶಕ್ಕೆ ಬಂದೊದಗಿದ ಬಿಕ್ಕಟ್ಟುಗಳಿಂದ ತಮ್ಮನ್ನು ಬಿಡಿಸಿಕೊಳ್ಳುವ ಕಾರ್ಯದಲ್ಲಿಯೇ ಜನರು ಮಗ್ನರಾಗಿರುವರು. ಅನೇಕರು ಈಗಲೂ ನಿರುದ್ಯೋಗಿಗಳಾಗಿರುವರು. ದೇಶದಲ್ಲಿ ಬಡತನವೂ, ರಾಷ್ಟ್ರೀಯ ಚಳವಳಿಯೂ, ಲೌಕಿಕ ಭಾವವೂ, ನಾಸ್ತಿಕತ್ವವೂ ಸಾಕಷ್ಟು ಇದೆ. ಅದಲ್ಲದೆ ಸಾರ್ವತ್ರಿಕ ಸಭೆಗಳ ಸ್ವಾತಂತ್ರ್ಯವು ರಾಷ್ಟ್ರೀಯ ಬಿಷಪರಾದ ಮಿಲ್ಲರರ ಆಡಳಿತೆಯೊಳಗೆ ದಿನೇ ದಿನೇ ಕ್ಷೀಣವಾಗುತ್ತಲಿದೆ. ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಈ ಸಭೆಗಳು ಹೋರಾಡುತ್ತಿವೆ. ಇಂತಹ ಸಂದಿಗ್ಧತೆಯಲ್ಲಿ ಹೊರನಾಡುಗಳ ಮಿಶನ್ ಕೆಲಸದ ಕಡೆಗೆ ಸಾರ್ವತ್ರಿಕ ಸಭೆಗಳು ವಿಶೇಷ ಗಮನ ಕೊಡದೆ ಹೋದರೆ ನಾವು ಆಶ್ಚರ್ಯಪಡಲು ಕಾರಣವಿಲ್ಲ' ಎಂಬುದಾಗಿ ತಿಳಿಸಿದೆ. ಆದರೆ ನಿಜಸ್ಥಿತಿಯು ಸಂಪೂರ್ಣವಾಗಿ ಭಿನ್ನವಾಗಿದೆ ಎಂದು ತಿಳಿಸುತ್ತಾ ಪತ್ರಿಕೆಯು 'ಜರ್ಮನ್ ಸಾರ್ವತ್ರಿಕ ಸಭೆಗಳು ಈಗಲೂ ಮಿಶನ್ ಕೆಲಸಗಳ ಕುರಿತು ಚಿಂತಿಸುತ್ತಿವೆಯೆಂದೂ, ತಮ್ಮಿಂದ ಕೈಲಾದಷ್ಟು ಮಟ್ಟಿಗೆ ಮಿಶನ್ ಕೆಲಸಕ್ಕೆ ಸಹಾಯ ಮಾಡಲು ಸಾಹಸ ಪಡುತ್ತಿವೆಯೆಂದೂ' ಟ್ರಾಂಕ್ವೆಬಾರಿನ ಲೂಥರನ್ ಬಿಷಪರಾದ ಜೆ. ಸೆಂಡೆಗ್ರೆನ್ (J.Sandegren) ಹಾಗೂ ಬಾಸೆಲ್ ಮಿಶನರಿಯಾದ ಶೊಸ್ಸರ್ ದೃಢಪಡಿಸಿದ್ದರು.[84] ಹೀಗೆ ಜರ್ಮನರು ತಮ್ಮ ಸಂದಿಗ್ಧ ಪರಿಸ್ಥಿತಿಯಲ್ಲೂ ಬಾಸೆಲ್ ಮಿಶನಿಗೆ ಸಹಾಯ ನೀಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಚರ್ಚ್ ಮಿಶನರಿ ಸೊಸೈಟಿಯು ತನ್ನ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಪ್ರಬಲಗೊಳ್ಳುತ್ತಿರುವ ಕಮ್ಯೂನಿಸ್ಟರ ಚಳವಳಿ, ಧಾರ್ಮಿಕ ವಿಚಾರಗಳ ಬಗ್ಗೆ ತಾತ್ಸಾರ ಹಾಗೂ ಲೋಕದೆಲ್ಲೆಡೆ ಹಬ್ಬಿರುವ ಆರ್ಥಿಕ ದುಸ್ಥಿತಿ ಇದಕ್ಕೆ ಕಾರಣ ಎನ್ನುತ್ತಾ, ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಮಿಶನುಗಳಿಗೂ ಸಮಸ್ಯೆ ಇವೆ. ಅದರಲ್ಲೂ ಜರ್ಮನ್ ಮಿಶನುಗಳಿಗೆ ವಿಶೇಷ ಸಮಸ್ಯೆಗಳಿವೆ ಎಂದಿತ್ತು.[85] 1934ರಲ್ಲಿಯೂ ಬಾಸೆಲ್ ಮಿಶನ್ ಸಂಕಷ್ಟವನ್ನು ಎದುರಿಸುತ್ತಿದೆ ಎಂಬುದನ್ನು ಇಲ್ಲಿನ ಕ್ರೈಸ್ತರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದ್ದ ವಿಚ್ಚಿಯವರು, ಇಲ್ಲಿನ ಕ್ರೈಸ್ತರು ಹೆಚ್ಚು ಜವಾಬ್ದಾರಿಗಳನ್ನು ವಹಿಸುತ್ತಾ, ಮಿಶನ್ ಬಗ್ಗೆಯೂ ಆಸಕ್ತಿಯನ್ನು ತೋರಿಸಬೇಕೆಂದು ಕರೆ ನೀಡಿದ್ದರು.[86]

ಎರಡನೇ ಜಾಗತಿಕ ಯುದ್ಧ ಆರಂಭವಾಗುವ ಮೊದಲೇ ಬಾಸೆಲ್ ಮಿಶನ್ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗಿರುವಂತೆ ಕಂಡುಬರುತ್ತದೆ. ಜಾಗತಿಕ ಯುದ್ಧ ಆರಂಭವಾದಲ್ಲಿ

ಭಾರತದಲ್ಲಿನ ಬಾಸೆಲ್ ಮಿಶನಿನ ಎಲ್ಲಾ ಠಾಣ್ಯಗಳ ಭದ್ರತೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಗಿತ್ತು. ಸ್ವಿಸ್ ಮಿಶನರಿಗಳು ತಕ್ಷಣದಲ್ಲಿ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕೆಂದು ತಿಳಿಸಲಾಗುತ್ತದೆ. ಜಾಗತಿಕ ಯುದ್ಧ ಆರಂಭವಾದಂದಿನಿಂದ ಬಾಸೆಲ್ ಮಿಶನ್ ಒಂದು ಸ್ವಿಸ್ ಮಿಶನ್ ಸಂಘವಾಗಿರುವುದು ಎಂಬುದನ್ನು ಮೊದಲೇ ಸ್ಪಷ್ಟಪಡಿಸಲಾಗಿತ್ತು.[87] ಹೀಗೆ ಜಾಗತಿಕ ಯುದ್ಧವು 19ನೇ ಶತಮಾನದುದ್ದಕ್ಕೂ ಬಾಸೆಲ್ ಮಿಶನ್ ಅನುಸರಿಸಿದ ಮಿಶನ್ ಹುದ್ದೆಗಳ ವ್ಯವಸ್ಥೆಯಲ್ಲಿ ಬದಲಾವಣೆಗೆ ಕಾರಣವಾಗುತ್ತದೆ. ಮೊದಲಿನ ವ್ಯವಸ್ಥೆಯಲ್ಲಿ ಮಿಶನಿನ ಅಧ್ಯಕ್ಷ [President] ಸ್ಥಾನವನ್ನು ಬಾಸೆಲಿನ ಪಾಸ್ಟರ್‌ಗೆ ಹಾಗೂ ಮಿಶನಿನ ನಿರ್ದೇಶಕ [Director] ಹುದ್ದೆಯನ್ನು ಜರ್ಮನಿಯ ವ್ರಹುಟೆಮ್‌ಬರ್ಗ್‌ನವರಿಗೆ [Wurttemberg] ನೀಡಲಾಗುತ್ತಿತ್ತು. 1939ರಲ್ಲಿ ಯುದ್ಧ ಘೋಷಣೆಯಾಗುತ್ತಿದ್ದಂತೆ ಮಿಶನಿನ ನಿರ್ದೇಶಕರಾದ ಹರ್ಟೆನ್‌ಸ್ಟೈನ್ [Hartenstein] ತನ್ನ ಎಲ್ಲಾ ಕಾರ್ಯ ಹಾಗೂ ಜವಾಬ್ದಾರಿಗಳನ್ನು ಮಿಶನಿನ ಅಧ್ಯಕ್ಷರಾದ ಕೊಚ್ಲಿನ್‌ರವರಿಗೆ [Kochlin] ವಹಿಸಿ ಜರ್ಮನಿಗೆ ತೆರಳುತ್ತಾರೆ. ಕೊಚ್ಲಿನ್‌ರವರು ಬಾಸೆಲ್ ಮಿಶನಿನ ಜರ್ಮನ್ ಶಾಖೆಯನ್ನು ಬಹಳಷ್ಟು ದೂರವಿರಿಸಿದ್ದರು. ತದನಂತರದ ಕಾಲದಲ್ಲಿ ಬಾಸೆಲ್ ಮಿಶನ್ ಮತ್ತು ಅದರ ಜರ್ಮನ್ ಶಾಖೆಯ ನಡುವಿನ ಸಂಬಂಧ ಗಣನೀಯವಾಗಿ ಹದಗೆಡುತ್ತಾ ಬರುತ್ತದೆ. ಯುದ್ಧದ ಕಾಲಾವಧಿಯಲ್ಲಿ ಮಿಶನಿನ ಕಾರ್ಯಕಾರಿ ಸಮಿತಿಯ [Executive committee] ಕೆಲವು ಸದಸ್ಯರು ಬಾಸೆಲ್ ಮಿಶನ್ ಇತರ ಯುರೋಪಿನ ರಾಷ್ಟ್ರಗಳೊಂದಿಗೆ ಸಂಬಂಧ ಹೊಂದುವುದನ್ನು ಇಷ್ಟಪಡಲಿಲ್ಲ. ಮತ್ತೊಂದೆಡೆ ಅದರ ಹಣಕಾಸಿನ ಕಮಿಟಿಯು [Finance Committee] ಬಾಸೆಲಿನ ವಾಣಿಜ್ಯ ಕಂಪನಿಯ [the Basel commercial company] ಇಬ್ಬರು ಸದಸ್ಯರನ್ನು ಹೊಂದಿದ್ದು, ಅವರು ಬಾಸೆಲ್ ಮಿಶನ್ ಜರ್ಮನರೊಂದಿಗೆ ಸಂಬಂಧ ಬೆಳೆಸಿದಲ್ಲಿ ವಾಣಿಜ್ಯ ಕಂಪನಿಗೆ ಬ್ರಿಟಿಷ್ ಸರಕಾರದಿಂದ ತೊಂದರೆಯಾದೀತೆಂಬ ಭಯವನ್ನು ಹೊಂದಿದ್ದರು. ಈ ಎಲ್ಲಾ ಕಾರಣಗಳಿಂದ ಬಾಸೆಲ್ ಮಿಶನ್ 1939ರ ನಂತರ ತನ್ನ ಜರ್ಮನ್ ಶಾಖೆಯಿಂದ ದೂರವಿರುತ್ತದೆ. ಜಾಗತಿಕ ಯುದ್ಧದ ತರುವಾಯ ಬಾಸೆಲ್ ಮಿಶನ್ ಮತ್ತು ಅದರ ಜರ್ಮನ್ ಶಾಖೆಯ ನಡುವಿನ ಸಂಬಂಧ ಮತ್ತೊಮ್ಮೆ ನಿಧಾನವಾಗಿ ಬೆಳೆಯುತ್ತದೆ.[88]

ಬಾಸೆಲ್ ಮಿಶನ್ ಮೇಲೆ ನಾಝಿಗಳ ಪ್ರಭಾವ ಹಾಗೂ ಪರಿಣಾಮ:

1933ರಲ್ಲಿ ಅಡಾಲ್ಫ್ ಹಿಟ್ಲರನ ನೇತೃತ್ವದ ನಾಝಿ ಪಕ್ಷವು ಜರ್ಮನಿಯಲ್ಲಿ ಆಡಳಿತಕ್ಕೆ ಬರುತ್ತದೆ. ನಾಝಿ ಸರಕಾರವು ಜರ್ಮನರು ವಿದೇಶಿ ಮಿಶನುಗಳಿಗೆ ಹಣ ನೀಡುವುದನ್ನು ನಿರ್ಬಂಧಿಸುತ್ತದೆ. ಇದು ಪರೋಕ್ಷವಾಗಿ ಬಾಸೆಲ್ ಮಿಶನ್ ಮೇಲೆ ಪರಿಣಾಮವನ್ನು ಬೀರುತ್ತದೆ.

ನಾಝಿಗಳು ಕ್ರೈಸ್ತ ಮೌಲ್ಯಗಳ (ನಂಬಿಕೆ, ಆಚಾರ ಇತ್ಯಾದಿ) ಮೇಲೆ ದಾಳಿ ಮಾಡಿದ್ದು, ಬಾಸೆಲ್ ಮಿಶನ್ ಶಕ್ತಿ ಕುಂದುವಂತೆ ಮಾಡುತ್ತದೆ. 1939ರಲ್ಲಿ ಯುದ್ಧ ಆರಂಭವಾದಾಗ ಬ್ರಿಟಿಷ್ ವಸಾಹತುಗಳಲ್ಲಿನ ಎಲ್ಲಾ ಜರ್ಮನ್ ಮಿಶನರಿಗಳನ್ನು ಸರಹದ್ದಿನ ಬಂಧನಕ್ಕೆ ಒಳಪಡಿಸಲಾಗುತ್ತದೆ ಹಾಗೂ ಕೆಲವೇ ಕೆಲವು ಸ್ವಿಸ್‌ರು ಸಂಪೂರ್ಣ ಕೆಲಸವನ್ನು ಮುಂದುವರಿಸುವಂತಾಗುತ್ತದೆ. ಅದೇ ರೀತಿ ಆ ಸಂದರ್ಭದಲ್ಲಿ ಬಾಸೆಲ್ ಮಿಶನರಿಗಳಿಗೆ ಅವಿರೋಧದ ಪ್ರತಿಕ್ರಿಯೆಯನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ನಾಝಿ ವಿರುದ್ಧವಿದ್ದ ಎಲ್ಲಾ ಜರ್ಮನ್ ಮಿಶನರಿಗಳಿಗೂ ಬಹಳಷ್ಟು ಮುಜುಗರವನ್ನು ಉಂಟುಮಾಡುತ್ತದೆ. ಜರ್ಮನ್ ಮಿಶನರಿಗಳು ತಾವು ನಾಝಿ ವಿರೋಧಿಗಳೆಂದು ಬಿಂಬಿಸಲು ಪ್ರಯತ್ನಿಸಿದರೂ, ಜರ್ಮನೇತರ ಮಿಶನರಿಗಳು ಅವರನ್ನು ವೈರಿ ದೇಶದವರೆಂದು ಪರಿಗಣಿಸಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಾಸೆಲ್ ಮಿಶನಿನ ಮುಖ್ಯ ಕಛೇರಿಯು ಬಹಳಷ್ಟು ಪ್ರಮುಖ ಪಾತ್ರವನ್ನು ನಿರ್ವಹಿಸಿತ್ತು. ಮಿಶನಿನ ಡೈರೆಕ್ಟರಾದ ಕಾರ್ಲ್ ಹರ್ಟೆನ್‌ಸ್ಟೈನ್ ಜರ್ಮನ್ ನಾಗರಿಕರಾಗಿದ್ದರಿಂದ ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟು ಸ್ವದೇಶಕ್ಕೆ ಮರಳಿದರೆ ಅದರ ಅಧ್ಯಕ್ಷರಾದ ಕೊಚ್ಲಿನ್‌ರವರು (Koechlin) ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಇವರು ಯುರೋಪ್ ಹಾಗೂ ಉತ್ತರ ಅಮೇರಿಕಾದ ಚರ್ಚ್ ನಾಯಕರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಈ ರೀತಿ ಬಾಸೆಲ್ ಮಿಶನ್ ಸಂಘಟನೆ ನಾಝಿ ವಿಚಾರಗಳಿಂದ ಮುಕ್ತವಾಗಿದ್ದು, ಮಿಶನ್ ಕೆಲಸದಲ್ಲಿ ತನ್ನ ಬದ್ಧತೆಯನ್ನು ತೋರ್ಪಡಿಸಿದರೆ ಅದರಲ್ಲಿನ ಕೆಲವು ಯುವ ಮಿಶನರಿಗಳು ನಾಝಿಗಳ ಬಗ್ಗೆ ಬಹಳಷ್ಟು ಒಲವನ್ನು ಇಟ್ಟುಕೊಂಡಿದ್ದರು.[89]

ಹಿಟ್ಲರ್ ತನ್ನ ನಾಝಿಝಂನ್ನು ಕೇವಲ ರಾಜಕೀಯ ತತ್ವ ಮತ್ತು ಸಿದ್ಧಾಂತವಾಗಿರಿಸದೇ, ಆಚರಣೆಯ ಪ್ರತಿಯೊಂದು ವಿಚಾರದಲ್ಲಿಯೂ ಅಸ್ಥಿತ್ವಕ್ಕೆ ತರಲು ಮುಂದಾಗಿದ್ದನು. ಇದರಂತೆ ಧರ್ಮದ ವಿಚಾರಕ್ಕೆ ಸಂಬಂಧಿಸಿದಂತೆ 'ಜರ್ಮನ್ ಕ್ರೈಸ್ತತ್ವ' (Hitler's German Christian) ಎಂಬುದನ್ನು ನಾಝಿಝಂನ ಭಾಗವಾಗಿ ಸೃಷ್ಟಿಸಿ ತನ್ನ ಅಸ್ಥಿತ್ವವನ್ನು ವಿರೋಧರಹಿತವಾಗಿ ಸೃಷ್ಟಿಸಲು ಮುಂದಾಗುವುದನ್ನು ಗಮನಿಸಬಹುದು. ಇದರ ಯಾವುದೇ ವಿಚಾರಗಳನ್ನು ವಿರೋಧಿಸಿದವರನ್ನು ಸದೆಬಡಿಯಲಾಗುತಿತ್ತು. ಇದು ಜರ್ಮನಿಯಲ್ಲಿ ನಾಝಿಗಳ ಹಾಗೂ ಕ್ರೈಸ್ತರ ಸಂಘರ್ಷಕ್ಕೆ ಕಾರಣವಾಗಿ ಬಾಸೆಲ್ ಮಿಶನ್ ಮೇಲೂ ಗುರುತರವಾದ ಪರಿಣಾಮಗಳನ್ನು ಬೀರುತ್ತದೆ.[90] ಈ ರೀತಿ ನಾಝಿಗಳ ನೀತಿಯನ್ನು ಜರ್ಮನ್ ಕ್ರೈಸ್ತರು ವಿರೋಧಿಸಿದ್ದರು. ಅದೇ ರೀತಿ ನಾಝಿಗಳ ಪರವಾಗಿ ಕೆಲವು ಮಿಶನರಿಗಳೂ ಕೂಡಾ ಒಲವಿಟ್ಟುಕೊಂಡಿದನ್ನು ಗಮನಿಸಬಹುದು. ಜರ್ಮನಿಯಲ್ಲಿ ನಾಝಿಗಳು ಅಧಿಕಾರಕ್ಕೆ ಬರುವ ಮೊದಲು ಭಾರತಕ್ಕೆ ಬಂದಿದ್ದ ಜರ್ಮನ್ ಮಿಶನರಿಗಳು ನಾಝಿಗಳ ಪ್ರಭಾವದಿಂದ ಬಹಳಷ್ಟು ಮುಕ್ತರಾಗಿದ್ದರು. ಅದರೆ ಬ್ರಿಟಿಷ್ ಸರಕಾರದ

ಅಭಿಪ್ರಾಯದಂತೆ ಕೆಲವೇ ಕೆಲವು ಜರ್ಮನ್ ಮಿಶನರಿಗಳು ನಾಝಿ ವಿರೋಧಿಗಳಾಗಿದ್ದರು. ಬಹುಪಾಲು ಜರ್ಮನ್ ಮಿಶನರಿಗಳನ್ನು ಅವರ ಲೂಥೇರಿಯನ್ ತಿಯೋಲಾಜಿ ಮತ್ತು ಜರ್ಮನ್ ವಿಧೇಯತೆಯಿಂದಾಗಿ ನಾಝಿ ಪರರು ಎನ್ನಲಾಗಿತ್ತು. ಜಾಗತಿಕ ಸಮರವು ಪ್ರಬಲ ರಾಷ್ಟ್ರೀಯ ಪ್ರಜ್ಞೆಯು ಜಾಗೃತಗೊಳ್ಳಲು ಕಾರಣವಾಗಿ, ಜರ್ಮನ್ ಮಿಶನರಿಗಳಲ್ಲೂ ಅದು ಜಾಗೃತಗೊಳ್ಳುತ್ತದೆ. ಆದರೆ ಮಿಶನರಿಗಳಾಗಿ ಈ ಜರ್ಮನ್ ಮಿಶನರಿಗಳು ಭಾರತದಲ್ಲಿನ ಮಿಶನಿನ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸುವುದನ್ನು ಗಮನಿಸಬಹುದು. ಅದೇ ರೀತಿ ಎರಡನೇ ಜಾಗತಿಕ ಯುದ್ಧವು ಮತ್ತೊಮ್ಮೆ ಅವರ ದಾರಿಗೆ ಅಡೆತಡೆಯಾಗಿ ನಿಲ್ಲುತ್ತದೆ. ಬಹುಪಾಲು ಜರ್ಮನ್ ಮಿಶನರಿಗಳು ಜರ್ಮನ್ ನಾಝಿಗಳ ಪರವಾಗಿ ಇರಲಿಲ್ಲ. ಆದರೆ ಕೆಲವು ಮಿಶನರಿಗಳು ತಮ್ಮ ರಾಷ್ಟ್ರಕೆ ಬಹಳಷ್ಟು ವಿಧೇಯತೆ ಹಾಗೂ ನಾಝಿ ಪರ ಅಭಿಪ್ರಾಯಗಳನ್ನು ಹೊಂದಿದ್ದರು. 'ಕೆಲವು ಜರ್ಮನ್ ಮಿಶನರಿಗಳು ನಾಝಿ ಪಕ್ಷದ ಸದಸ್ಯರಾಗಿದ್ದು, ಸರಹದ್ದಿನ ಬಂಧನದಲ್ಲಿದ್ದಾಗ ಮುಕ್ತವಾಗಿ ನಾಝಿಝಂ ಬಗ್ಗೆ ಮಾತನಾಡಿದ್ದರು.' ಎಂಬುದಾಗಿ ಈಸ್ಟ್‌ಬೋರ್ನ್‌ರವರು ವಿವರಿಸಿದ್ದಾರೆ. ಯುದ್ಧದ ಕಾಲಾವಧಿಯಲ್ಲಿ ಜರ್ಮನ್ ಮಿಶನರಿಗಳನ್ನು ಬಂಧಿಸಿದ್ದು, ಬ್ರಿಟಿಷ್ ಮಿಶನರಿಗಳಿಗೆ ಸಮಧಾನವನ್ನು ತರುತ್ತದೆ.[91]

ನಾಝಿಗಳು ಪ್ರತಿಯೊಂದು ವಿಚಾರದ ಮೇಲೂ ಪ್ರಬಲವಾದ ಹಿಡಿತವನ್ನು ಸಾಧಿಸಿದ್ದರು. 1938ರ ಡಿಸೆಂಬರ್‌ನಲ್ಲಿ ತಾಂಬರಮ್‌ನಲ್ಲಿ (Tambaram) ನಡೆದ ಮಿಶನರಿ ಸಮ್ಮೇಳನದಲ್ಲಿ ರೋಸೆಲ್‌ರವರು, ಜರ್ಮನಿಯಲ್ಲಿ ನಾಝಿಗಳಿಂದ ಚರ್ಚುಗಳು ಎದುರಿಸಿದ ಭಯ ಮತ್ತು ಸಮಸ್ಯೆಗಳನ್ನು ವಿವರಿಸುತ್ತಾ, ನಾಝಿಝಂ ಒಂದು ಧರ್ಮದಂತೆ ಬೆಳೆದಿತ್ತು ಎಂದಿದ್ದರು. ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಜರ್ಮನರು, ಜರ್ಮನಿಗೆ ತೆರಳಿದ ಬಳಿಕ ಈ ಸಮ್ಮೇಳನದ ಬಗ್ಗೆ ಹಾಗೂ ಈ ಸಮ್ಮೇಳನದಲ್ಲಿ ಅವರು ಏನನ್ನು ಮಾತನಾಡಿದ್ದಾರೆ ಎಂಬುದರ ಬಗ್ಗೆ ಸವಿವರವಾದ ವರದಿಯನ್ನು ನಾಝಿಗಳಿಗೆ ಸಲ್ಲಿಸಬೇಕಿತ್ತು. ಈ ಸಮ್ಮೇಳನದಲ್ಲಿ ಜರ್ಮನರ ನಾಯಕರಾಗಿದ್ದ ಹಾಗೂ ಬಾಸೆಲ್ ಮಿಶನಿನ ನಿರ್ದೇಶಕರೂ ಆಗಿದ್ದ ಹರ್ಟೆನ್‌ಸ್ಟೈನ್‌ರವರು, ಈ ಸಮ್ಮೇಳನದ ಸಾಮಾನ್ಯ ವರದಿಯಲ್ಲಿ ಜರ್ಮನ್ ಮಿಶನರಿಗಳ ವರದಿಯನ್ನು ಸೇರಿಸಬೇಕೆಂದು ಹೇಳಿದ್ದರು.[92] ಇದು ಧರ್ಮದ ವಿಚಾರದ ಮೇಲೆ ನಾಝಿಗಳ ಪ್ರಭಾವವನ್ನು ತೋರ್ಪಡಿಸುತ್ತದೆ. ಮತ್ತೊಂದೆಡೆ ನಾಝಿಗಳು ಧಾರ್ಮಿಕ ವಿಚಾರದಲ್ಲಿ ನಡೆಸುತ್ತಿದ್ದ ಹಸ್ತಕ್ಷೇಪವನ್ನು ವಿರೋಧಿಸುವವರು ಇದ್ದರು. ಆದರೆ ಅವರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳಿಕೊಳ್ಳುವಂತಿರಲಿಲ್ಲ. ಏಕೆಂದರೆ ನಾಝಿಗಳನ್ನು ವಿರೋಧಿಸಿದವರನ್ನು ಕಠಿಣವಾಗಿ ಸದೆಬಡಿಯಲಾಗುತಿತ್ತು. ತಾಂಬರಮ್‌ನ ಮಿಶನರಿ ಸಮ್ಮೇಳನದಲ್ಲಿ ಭಾಗವಹಿಸಿದ ಬರ್ಲಿನ್‌ನ ತಿಯೋಲಜಿಯನ್ ಆಗಿದ್ದ ಗರ್‌ಹರ್ಡ್‌ಟ್ ಬ್ರೆನ್ನಿಕೇ

(Gerhardt Brennecke) ರವರು ನಾಝಿಝಂನ ಪ್ರಬಲ ವಿರೋಧಿಯಾಗಿದ್ದರೂ, ಸಮ್ಮೇಳನದಲ್ಲಿ ಅದನ್ನು ಮುಕ್ತವಾಗಿ ವಿರೋಧಿಸುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ಜರ್ಮನಿಗೆ ತೆರಳಿದ ಬಳಿಕ ಅವರನ್ನು ಬಂಧಿಸುವ ಸಾಧ್ಯತೆಗಳಿದ್ದವು.[93]

ಬಾಸೆಲ್ ಮಿಶನಿನಲಿದ್ದ ಕೆಲವು ಮಿಶನರಿಗಳು ಕೂಡಾ ನಾಝಿಗಳ ಪರವಾಗಿದ್ದರು. ಕೆಲವು ಬಾಸೆಲ್ ಮಿಶನರಿಗಳು ತಮ್ಮ ಅಭಿಪ್ರಾಯಗಳಲ್ಲಿ ಪ್ರಬಲವಾದ ನಾಝಿ ಪರವಾದ ವಾದಗಳನ್ನು ಮಂಡಿಸಿದ್ದರು. ಬಾಸೆಲ್ ಮಿಶನಿನ ನಿರ್ದೇಶಕರಾದ ಹರ್ಟೆನ್‌ಸ್ಟೈನ್‌ರವರ ಸಲಹೆಯಂತೆ ರೋಸೆಲ್‌ರವರು (Rossel) ಭಾರತದ ಪಶ್ಚಿಮ ಕರಾವಳಿಗೆ ಭೇಟಿ ನೀಡುತ್ತಾರೆ. 1939ರ ಜನವರಿಯಲ್ಲಿ ಬಾಸೆಲ್ ಮಿಶನಿನ ಠಾಣ್ಯವಾಗಿದ್ದ ಕ್ಯಾಲಿಕಟ್‌ನಲ್ಲಿ ರೋಸೆಲ್‌ರವರು ನಾಝಿ ಪರವಾಗಿದ್ದ ಜರ್ಮನ್ ಮಿಶನರಿಯನ್ನು ಭೇಟಿ ಮಾಡಿದ್ದರು. ರೋಸೆಲ್‌ರವರು ಆ ಮಿಶನರಿಯನ್ನು ಭೇಟಿ ಮಾಡಿದಾಗ ಆಕೆಯು '1938ರಲ್ಲಿ ಆಸ್ಟ್ರೀಯವು ಜರ್ಮನರ ವಶವಾದಂತೆ ಸ್ವಿಜರ್‌ಲ್ಯಾಂಡ್ ಕೂಡಾ ಜರ್ಮನರ ವಶವಾಗುತ್ತದೆ' ಎಂಬ ಉತ್ಸುಕತೆಯನ್ನು ವ್ಯಕ್ತಪಡಿಸಿದ್ದಳು.[94] 1939ರಲ್ಲಿ ರೋಸೆಲ್‌ರವರು ಆ ವರ್ಷದಲ್ಲಿಯೇ ಬಾಸೆಲ್‌ನಿಂದ ಆಗಮಿಸಿದ್ದ ಯುವ ಮಿಶನರಿಯಾದ ರಿಚರ್ಡ್ ಲಿಫ್‌ರವರನ್ನು (Richard Lipp) ಕ್ಯಾನನೂರಿನಲ್ಲಿ (Cannanore) ಭೇಟಿ ಮಾಡಿದ್ದರು. ಈ ಮಿಶನರಿಯು 'ಸ್ವಿಸರು ಜರ್ಮನರಾಗುವ ದಿನ ಬಹುಬೇಗ ಬರುವುದೆಂದು' ಉಲ್ಲೇಖಿಸಿದ್ದನು.[95] ಬಾಸೆಲ್ ಮಿಶನಿಗೆ ಭಾರತದಲ್ಲೇ ಪ್ರಖ್ಯಾತವಾದ ಛಾಪಾಖಾನೆ ಮಂಗಳೂರಿನಲ್ಲಿತ್ತು. 1939ರ ಕಾಲಾವಧಿಯಲ್ಲಿ ಇದು ಒಬ್ಬ ನಾಝಿಯ ಮೇಲ್ವಿಚಾರಣೆಯಲ್ಲಿತ್ತು. ಈತನಿಗೆ ಒಂದು ನಾಝಿ ಮ್ಯಾಗಜೀನ್‌ನನ್ನು ಮುದ್ರಿಸುವ ಅವಕಾಶ ಜಾಗತಿಕ ಯುದ್ಧದ ಆರಂಭದ ಕಾಲದಲ್ಲಿ ಲಭಿಸಿತ್ತು. ಇದು ನಂತರ ಸಮಸ್ಯೆಗೂ ಕಾರಣವಾಗಿ, ಪೌಲ್ ಬುರ್ಕಾಹರ್ಡಟ್‌ರವರು (Paul Barckhardt) ಈ ಮ್ಯಾಗಜೀನ್‌ಗೆ ಸಂಬಂಧಿಸಿದ ಪ್ರಿಂಟ್ಟಿಂಗ್ ಪ್ಲೇಟ್‌ಗಳನ್ನು (Printing plates) ಅವರು ವಾಸವಿದ್ದ ಬಂಗಲೆಯ ಹೂತೋಟದಲ್ಲಿ ಹೂತಿದ್ದರು.[96] 1934ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ತಿಂಗಳಿಗೆ ಎರಡು ಬಾರಿ ಪ್ರಕಟಿಸುತ್ತಿದ್ದ, 'ಕರ್ಣಾಟಕ ಕ್ರೈಸ್ತ ಬಂಧು' ಎಂಬ ವೃತ್ತಾಂತ ಪತ್ರಿಕೆಯು ಕೂಡಾ ಹಿಟ್ಲರ್ ಪರವಾದ ಕುತೂಹಲಕಾರಿ ವರ್ತನೆಯನ್ನು ಹಾಗೂ ಸುದ್ದಿಯನ್ನು ಪ್ರಕಟಿಸುತ್ತದೆ. ಅದು ಹೇಳುವಂತೆ 'ಹೆರ್ ಹಿಟ್ಲರರು ಜರ್ಮನಿಯ ಸರ್ವಾಧಿಕಾರಿಯಾಗಿರುವರು. ಇವರ ಅಧಿಕಾರವು ರಾಜ್ಯದಲ್ಲೆಲ್ಲಾ ನಡೆಯುತ್ತದೆ. ಪ್ರೆಸಿಡೆಂಟ್ ಪದವಿಯೂ, ಚಾನ್ಸಲರ್ ಪದವಿಯೂ, ಸೈನ್ಯಾಧಿಕಾರಿ ಪದವಿಯೂ ಅವರಲ್ಲಿ ಐಕ್ಯವಾಗಿ ಹೆರ್ ಹಿಟ್ಲರರೇ ಜರ್ಮನ್ ಜನಾಂಗದ ಹೆಗ್ಗುರುತಾಗಿರುವವರು. ಜಗತ್ತೇ ಹೆರ್ ಹಿಟ್ಲರರು ಮುಂದೇನು ಮಾಡಲಿರುವರೆಂದು ನೋಡಲು

ಕುತೂಹಲದಿಂದ ಕೂಡಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗದು.'[97] ಎಂದು ಪತ್ರಿಕೆಯು ಹಿಟ್ಲರನ್ನು ವರ್ಣಿಸುತ್ತಾ, ಆತನ ಮುಂದಿನ ನಡೆಯ ಬಗ್ಗೆ ಕುತೂಹಲವನ್ನು ವ್ಯಕ್ತಪಡಿಸಿತ್ತು. ಈ ರೀತಿ ಬಾಸೆಲ್ ಮಿಶನರಿಗಳಲ್ಲಿ ಕೂಡಾ ನಾಝಿ ಪರವಾದ ವರ್ತನೆಗಳು ಹಾಗೂ ಅಭಿಪ್ರಾಯಗಳು ಇದ್ದವು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇತಂಹ ವರ್ತನೆಗಳು ಹಾಗೂ ಅಭಿಪ್ರಾಯಗಳು ಕೆಲವೇ ಕೆಲವು ಮಿಶನರಿಗಳಲ್ಲಿ ಇತ್ತು ಎಂಬುದನ್ನು ಗಮನಿಸಬಹುದು. ಅದೇ ರೀತಿ ಪತ್ರಿಕೆಯು ಹಿಟ್ಲರನ ನಡೆಯ ಬಗ್ಗೆ ತನಗಿದ್ದ ಕುತೂಹಲವನ್ನು ಹೊರಹಾಕಿರುವುದನ್ನು ಗಮನಿಸಬಹುದು.

ಸ್ಥಳೀಯ ಕ್ರೈಸ್ತರು ಮತ್ತು ಮಿಶನರಿಗಳು:

ಪ್ರಾರಂಭದಲ್ಲಿ ಮಿಶನರಿಗಳು ಮತಾಂತರ ಹೊಂದಿದ ಕ್ರೈಸ್ತರನ್ನು ಅನುಮಾನದ ದೃಷ್ಟಿಯಿಂದ ಗಮನಿಸಿದ್ದರು. ಹಲವು ಅನ್ಯಮತೀಯರು ದಿನನಿತ್ಯದ ಹೊಟ್ಟೆ ಪಾಡಿಗಾಗಿ ಹಾಗೂ ದುಡ್ಡಿಗಾಗಿ ಮತಾಂತರ ಹೊಂದಿದ್ದಾರೆಂದು 1905ರ ಬಾಸೆಲ್ ಮಿಶನಿನ ವರದಿಯು ತಿಳಿಸುತ್ತದೆ. ಮತಾಂತರ ಹೊಂದಿದ ಮೇಲೂ ಅವರು ಆದಿತ್ಯವಾರದಂದು ಚರ್ಚ್‌ಗಳಿಗೆ ಹೋಗುವ ಬದಲು, ಕೋಳಿ ಅಂಕ (Cockfighting) ಗಳಿಗೆ ಹೋಗುತ್ತಿದ್ದರು. ಅವರ ಮಕ್ಕಳನ್ನು ಶಾಲೆಗಳಿಗೂ ಕಳುಹಿಸುತ್ತಿರಲಿಲ್ಲ. ಚರ್ಚ್‌ಗೆ ಕೊಡಬೇಕಾಗಿದ್ದ ವಂತಿಗೆಗಳನ್ನು ಕೊಡುತ್ತಿರಲಿಲ್ಲ. ಮಿಶನರಿಗಳಿಂದ ಸಹಾಯ ಯಾಚಿಸಲು ಅವರ ಬಳಿ ಹೋಗುತ್ತಿದ್ದರು. ಅವರು ಸಹಾಯ ನೀಡದಿದ್ದರೆ ಮಿಶನಿನ ಬಗ್ಗೆ ದೂರುತ್ತಿದ್ದರು.[98] ಹೀಗೆ ಮಿಶನಿನಿಂದ ಸಹಾಯ ಸಿಗಬಹುದೆಂಬ ಆಲೋಚನೆಯೊಂದಿಗೆ ಹಲವು ಅನ್ಯಮತೀಯರು ಕ್ರೈಸ್ತರಾಗಿದ್ದರು. ಮತ್ತೊಂದೆಡೆ 1877ರ ಬರಗಾಲದ ಸಂದರ್ಭದಲ್ಲಿ ಹಲವರು ಕ್ರೈಸ್ತರಾಗಿದ್ದರು. ಬಾಸೆಲ್ ಮಿಶನರಿಗಳು ಜನರನ್ನು ಗುಂಪು ಗುಂಪಾಗಿ ಮತಾಂತರ ಮಾಡುವುದರ ಬಗ್ಗೆ ಬಹಳಷ್ಟು ಎಚ್ಚರದಿಂದಿದ್ದರು. ಅದೇ ರೀತಿ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಯಾವುದೇ ರೀತಿಯ ಜಾತಿ ಪದ್ಧತಿಯತಂಹ ವಿಚಾರಗಳಿಗೆ ಅವರು ಅವಕಾಶವನ್ನೇ ನೀಡಲಿಲ್ಲ. ಪ್ರಾರಂಭದಿಂದಲ್ಲೇ ಮಿಶನರಿಗಳು ಇಡೀ ವ್ಯವಸ್ಥೆಯ ಮೇಲೆ ತಮ್ಮ ಪ್ರಬಲವಾದ ನಿಯಂತ್ರಣವನ್ನು ಸಾಧಿಸಿ ಅದನ್ನು ಮುನ್ನಡೆಸಿದ್ದರು. ಕ್ರೈಸ್ತರನ್ನಾಗಿ ಮಾಡಿದವರನ್ನು ಸಂಘಟಿಸಿ, ಅವರನ್ನು ಚರ್ಚ್‌ಗಳಲ್ಲಿ ಸಂಘಟಿಸಿದ್ದರು. ಈ ಚರ್ಚ್‌ಗಳ ರಚನೆಗೆ ವಿದೇಶಿ ನೆರವನ್ನು ಬಳಸಿಕೊಂಡಿದ್ದರು. ಈ ಕ್ರೈಸ್ತರದವರ ಎಲ್ಲಾ ರೀತಿಯ ಅಧ್ಯಾತ್ಮಿಕ ಅವಶ್ಯಕತೆಗಳನ್ನು ಅವರೇ ಪೂರೈಸಿದ್ದರು. ಆದುದರಿಂದ ಭಾರತದಲ್ಲಿ ಬಾಸೆಲ್ ಮಿಶನ್ ಚರ್ಚ್ ಸಂಘಟನೆ ಎಂಬುದು ಸ್ವತಂತ್ರವಾಗಿ ಬಹುಬೇಗ ಬೆಳೆಯಲು ಸಾಧ್ಯವಾಗಲಿಲ್ಲ. ಅದೇ ರೀತಿ ಅದು ಅದರ ಅವಶ್ಯಕತೆಗೆ ಬೇಕಾದಂತೆ ಬೆಳೆಯಲು ಸಾಧ್ಯವಾಗುವುದಿಲ್ಲ. ಅದರ ಬದಲು ಚರ್ಚ್ ಸಂಘಟನೆ ಎಲ್ಲವನ್ನು ಪ್ರಾರಂಭದಿಂದಲೇ ಮಿಶನರಿಗಳಿಂದ ಪಡೆದು, ಅವರ ಯೋಜನೆಯ ಪ್ರಕಾರ ಬೆಳೆಯುತ್ತದೆ. ಹೀಗೆ ಭಾರತದ ವ್ಯವಸ್ಥೆಗೆ

ಸೂಕ್ತವಾದಂತಹ ರೀತಿಯ ಚರ್ಚ್ ಸಂಘಟನೆಯು ಮತಾಂತರಗೊಂಡವರಿಂದ ಸ್ಥಾಪನೆಯಾಗದೇ, ಅದು ಮಿಶನರಿಗಳ ಸೃಷ್ಟಿಯಾಗುತ್ತದೆ. ಮಂಗಳೂರಿನ ಶಾಂತಿ ಚರ್ಚ್‌ನಲ್ಲಿ ಮಿಶನರಿಗಳಿಗಾಗಿ ಪ್ರತ್ಯೇಕ ಕೋಣೆಗಳು ಹಾಗೂ ಆಸನಗಳಿದ್ದವು. ಇದನ್ನು ಸ್ಥಳೀಯ ಕ್ರೈಸ್ತರು ವಿರೋಧಿಸಿದ್ದರು. ಮಿಶನರಿಗಳ ಈ ವರ್ತನೆ ಹಾಗೂ ಸ್ವಭಾವದ ಬಗ್ಗೆ ಬಿಷಪ್ ಎಸ್. ಆರ್. ಪುರ್ಡಾಡೊರವರು ಹೇಳುವಂತೆ 'ಮಿಶನರಿಗಳು ಕರ್ನಾಟಕದಲ್ಲಿ ತಮ್ಮ ಕೊನೆಯ ದಿನಗಳವರೆಗೆ ಅವರ ಅಧಿಪತ್ಯವನ್ನು ಬಿಟ್ಟುಕೊಡಲಿಲ್ಲ. ಅವರು ತಮ್ಮ ಅಧಿಕಾರದಲ್ಲೇ ಮುಂದುವರಿದರು. ಅವರಲ್ಲಿ ಅಧಿಕಾರವಿತ್ತು. ಅವರು ಇಲ್ಲಿನ ಕ್ರೈಸ್ತರನ್ನು ಆಳ್ವಿಕೆ ಮಾಡಲು ಬಂದಿದ್ದು ಎಂಬ ಹಾಗೂ ಭಾರತೀಯರು ಬಡವರೆಂಬ ಕಲ್ಪನೆ ಯಾವತ್ತೂ ಅವರಲ್ಲಿತ್ತು. ಮತಾಂತರ ಹೊಂದಿದವರಿಂದ ಸಂಪೂರ್ಣ ವಿಧೇಯತೆಯನ್ನು ಮಿಶನರಿಗಳು ಬಯಸಿದ್ದರು. ಮತಾಂತರ ಹೊಂದಿದವರು ಹಿಂದೂಗಳಾಗಿರುವ ಅವರ ಕುಟುಂಬದವರನ್ನು ಮತ್ತು ಮನೆಯವರನ್ನು ಸಂಪೂರ್ಣವಾಗಿ ಬಿಟ್ಟು ಬರಬೇಕಿತ್ತು.[99]

ಬಾಸೆಲ್ ಮಿಶನ್ ಕ್ರೈಸ್ತರಿಗೆ ಮಿಶನರಿಗಳು ಆಶ್ರಯದಾತರು, ಸಂರಕ್ಷಕರು ಹಾಗೂ ಉದ್ಯೋಗದಾತರಾಗಿದ್ದರು. ಅದೇ ರೀತಿ ಕ್ರೈಸ್ತರಿಗೂ ಮಿಶನರಿಗಳ ಬಹಳಷ್ಟು ಅಗತ್ಯವಿತ್ತು. ಏಕೆಂದರೆ ಕ್ರೈಸ್ತರು ತಮ್ಮ ಜೀವನದ ಪ್ರತಿಯೊಂದು ವಿಚಾರಕ್ಕೂ ಮಿಶನರಿಗಳನ್ನು ಅವಲಂಬಿಸಿದ್ದರು. ಹೀಗೆ ಬಾಸೆಲ್ ಮಿಶನ್ ಭಾರತದ ಪಶ್ಚಿಮ ಕರಾವಳಿಯಲ್ಲಿ ಒಂದು ವಿಧೇಯ ವರ್ಗವನ್ನು ಹುಟ್ಟುಹಾಕುತ್ತದೆ. ಬಾಸೆಲ್ ಮಿಶನರಿಗಳು ಮತಾಂತರ ಹೊಂದಿದ ಕ್ರೈಸ್ತರು ಅವರ ಹಳೆಯ ಸಂಪ್ರದಾಯ, ವಿಧಿ ವಿಧಾನ ಆಚರಣೆಗಳೆಲ್ಲವನ್ನು ಸಂಪೂರ್ಣವಾಗಿ ತ್ಯಜಿಸುವಂತೆ ಮಾಡುತ್ತಾರೆ. ಹೀಗೆ ತಮ್ಮ ಹಳೆಯ ಸಾಮಾಜಿಕ ಸಂರಚನೆಯನ್ನು ಬಿಟ್ಟು ಬಂದ ಈ ಹೊಸ ಕ್ರೈಸ್ತರಿಗೆ ಮಿಶನರಿಗಳೇ ಹೊಸ ವ್ಯವಸ್ಥೆಯನ್ನು ಹುಟ್ಟು ಹಾಕುತ್ತಾರೆ. ಮಿಶನರಿಗಳು ಇಲ್ಲಿನ ಸಂಪ್ರದಾಯ ಮತ್ತು ಪದ್ಧತಿಗಳನ್ನು ವಿಗ್ರಹ ಆರಾಧನೆ ಎಂದು ಕರೆದು, ಅವು ಜನರ ಮೇಲೆ ಹೊರೆಯಾಗಿ, ಅವರ ಸಂಕಷ್ಟಗಳಿಗೆ ಕಾರಣವಾಗಿದೆ ಎಂದು ತಿಳಿದಿದ್ದರು. ತದನಂತರದಲ್ಲಿ ಈ ಕ್ರೈಸ್ತರ ಆಚಾರ–ವಿಚಾರ, ಸಂಪ್ರದಾಯ ಇತ್ಯಾದಿಗಳು ಪಾಶ್ಚಾತ್ಯ ಮಾದರಿಯಲ್ಲಿ ಅಭಿವೃದ್ಧಿ ಹೊಂದುತ್ತವೆ. ಹೀಗೆ ಬಾಸೆಲ್ ಮಿಶನ್ ಕ್ರೈಸ್ತರು ಅವರದೇ ಸಮಾಜದಲ್ಲಿ ಹೊರಗಿನವರಾಗಿ ಬಿಡುತ್ತಾರೆ. ಪಾಶ್ಚಾತ್ಯ ಕ್ರಿಶ್ಚಿಯನ್ ಮೌಲ್ಯಗಳು ಬಾಹ್ಯ ಶಕ್ತಿಗಳಿಂದ ಸ್ಥಳೀಯ ಕ್ರೈಸ್ತರ ಮೇಲೆ ಹೇರಲ್ಪಟ್ಟವುಗಳಾಗುತ್ತವೆ. ಸ್ಥಳೀಯ ಕ್ರೈಸ್ತರಿಗೆ ಅವರ ಅವಶ್ಯಕತೆಗಳಿಗನುಸಾರವಾಗಿ ಬೆಳೆಯುವ ಅವಕಾಶವನ್ನು ಬಾಸೆಲ್ ಮಿಶನರಿಗಳು ಒದಗಿಸಲಿಲ್ಲ. ಹೀಗೆ ಭಾರತದಲ್ಲಿ ಕ್ರೈಸ್ತತ್ವವು ವಿದೇಶಿ ಧರ್ಮವಾಗಿ ಉಳಿಯಿತು. ಬಾಸೆಲ್ ಮಿಶನರಿಗಳ ಕಠಿಣ ನೀತಿಗಳಿಗಿಂತ ಭಿನ್ನ ರೂಪದಲ್ಲಿ ಬೆಳೆದ ಬಾಸೆಲ್ ಮಿಶನ್ ಕ್ರೈಸ್ತರು ಇತರ ಮಿಶನಿನ ಕ್ರೈಸ್ತರೊಂದಿಗೆ ಉತ್ತಮವಾಗಿ ಬೆರೆತುಕೊಳ್ಳುವುದು ಕಷ್ಟವಾಗುತ್ತದೆ.

ಬಾಸೆಲ್ ಮಿಶನ್ ಕ್ರೈಸ್ತರಿಗಾಗಿ ಮಿಶನರಿಗಳು ಕೈಗಾರಿಕೆಗಳನ್ನು ಹಾಗೂ ಇತರ ಜೀವನಾಧಾರದ ಮೂಲಗಳನ್ನು ಹುಟ್ಟುಹಾಕುತ್ತಾರೆ. ಇಲ್ಲಿಯೂ ಕ್ರೈಸ್ತರು ಮಿಶನರಿಗಳ ಮಾರ್ಗದರ್ಶನದಲ್ಲಿ ಹಾಗೂ ನಿಯಂತ್ರಣದಲ್ಲಿ ಮುಂದುವರಿಯುತ್ತಾರೆ. 1914ರ ವರೆಗೆ ಇದೇ ರೀತಿಯ ನಿಯಂತ್ರಣವನ್ನು ಮುಂದುವರಿಸಿದ ಮಿಶನರಿಗಳು ಜಾಗತಿಕ ಯುದ್ಧದ ಸಂದರ್ಭದಲ್ಲಿ ಬ್ರಿಟಿಷರ ನಿರ್ಬಂಧದಿಂದಾಗಿ ಮಿಶನ್ ಪ್ರದೇಶಗಳಿಂದ ಹಿಂದೆ ಸರಿಯಬೇಕಾಗುತ್ತದೆ. ಇದು ಬಾಸೆಲ್ ಮಿಶನ್ ಪ್ರದೇಶಗಳಲ್ಲಿ ಬಿಕ್ಕಟ್ಟಿನ ಸೃಷ್ಟಿಗೆ ಕಾರಣವಾಗುತ್ತದೆ. ಮಾತ್ರವಲ್ಲದೇ ಮುಂದೆ ಬಾಸೆಲ್ ಮಿಶನ್ ಕ್ರೈಸ್ತರು ಮಿಶನಿನ ನಿಯಂತ್ರಣದಿಂದ ನಿಧಾನವಾಗಿ ಹೊರಬರಲು ಕಾರಣವೂ ಆಗುತ್ತದೆ. ಮತ್ತೊಂದೆಡೆ ಬಾಸೆಲ್ ಮಿಶನ್ ಕ್ರೈಸ್ತರಿಗೆ ಶಿಕ್ಷಣವನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿ ಮಾಡಿದರೂ, ಅವರನ್ನು ಉನ್ನತ ಶಿಕ್ಷಣದಿಂದ ದೂರವಿರಿಸುತ್ತಾರೆ. ಕ್ರೈಸ್ತರ ಮೇಲೆ ನಿಯಂತ್ರಣ ಸಾಧಿಸುವುದು ಇದರ ಉದ್ದೇಶವಾಗಿರಬೇಕು. ಸ್ಥಳೀಯ ಚರ್ಚುಗಳ ಕಡೆಗೆ ದರ್ಪಿಷ್ಠ ವರ್ತನೆ ತೋರಿದ ಮಿಶನರಿಗಳು ಭಾರತೀಯ ಕ್ರೈಸ್ತರು ಸ್ವಾಯತ್ತತೆ ಪಡೆಯುವ ಹಂತಕ್ಕೆ ಮಟ್ಟಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಮಿಶನರಿಗಳು ಭಾರತೀಯ ಕ್ರೈಸ್ತರನ್ನು ಕೆಲವೊಂದು ಕ್ಷೇತ್ರಗಳಲ್ಲಿ, ವಿಭಾಗಗಳಲ್ಲಿ ತರಬೇತುಗೊಳಿಸಿ ಅವರನ್ನು ತಮ್ಮ ನಿಯಂತ್ರಣದಲ್ಲಿ ಕೆಲವೊಂದು ಕಾರ್ಯಗಳಿಗೆ ನಿಯೋಜಿಸುತ್ತಾರೆ. ಬಾಸೆಲ್ ಮಿಶನ್ ಕ್ರೈಸ್ತರನ್ನು ಮಿಶನ್ ಏಜಂಟರುಗಳಾಗಿ, ಇವ್ಯಾಂಜಲಿಸ್ಟರಾಗಿ, ಅಧ್ಯಾಪಕರಾಗಿ, ಬೈಬಲ್ ಮಹಿಳೆಯರಾಗಿ (Bible women) ನೇಮಿಸಲಾಗುತ್ತಿತ್ತು. ಇವರ ಸಂಬಳವನ್ನು ಮಿಶನರಿಗಳೇ ನಿಗದಿಪಡಿಸುತ್ತಿದ್ದರು. ಇವರು ಮಿಶನರಿಗಳ ನಿರ್ದೇಶನದಲ್ಲಿ ಕಾರ್ಯನಿರ್ವಹಿಸಬೇಕಿತ್ತು. ಸ್ಥಳೀಯ ಇವ್ಯಾಂಜಲಿಸ್ಟರುಗಳು ಮಿಶನರಿಗಳ ಮೇಲ್ವಿಚಾರಣೆ ಇಲ್ಲದೆ ಹೊರ ಹೋಗುವಂತಿರಲಿಲ್ಲ. ಮಿಶನರಿಯನ್ನು ದೊರೆ ಎಂಬುದಾಗಿ ಕರೆಯಲಾಗುತ್ತಿದ್ದು ಬಹಳಷ್ಟು ಗೌರವವನ್ನು ಪಡೆದುಕೊಳ್ಳುತ್ತಿದ್ದನು. ಎಷ್ಟೇ ಅನುಭವವಿದ್ದರೂ ಭಾರತೀಯ ಕ್ರೈಸ್ತರ ಮೇಲ್ವಿಚಾರಣೆಗೆ ಮಿಶನರಿಗಳನ್ನು ನೇಮಿಸಲಾಗುತ್ತಿತ್ತು.

ಬಾಸೆಲ್ ಮಿಶನರಿಗಳಿಗೆ ಸ್ಥಳೀಯ ಕ್ರೈಸ್ತರ ಪ್ರಗತಿಯ ಬಗ್ಗೆ ಯಾವುದೇ ರೀತಿಯ ಸಮಾಧಾನವಿರಲಿಲ್ಲ. ಪ್ರಾರಂಭದಲ್ಲಿ ಚರ್ಚುಗಳು ಮಿಶನರಿಗಳ ನಿಯಂತ್ರಣದಲ್ಲಿದ್ದರೆ, ತದನಂತರ ಚರ್ಚುಗಳು ಬೆಳೆದು ಸ್ಥಳೀಯ ಕ್ರೈಸ್ತರಿಗೆ ಜವಾಬ್ದಾರಿಗಳನ್ನು ನೀಡಬೇಕಾಗಿ ಬಂದರೂ, ಜವಾಬ್ದಾರಿಗಳನ್ನು ನೀಡದಿರುವ ಮಿಶನರಿಗಳ ನೀತಿಗೆ ಕ್ರೈಸ್ತರಿಂದ ವಿರೋಧ ವ್ಯಕ್ತವಾಗುವುದನ್ನು ಗಮನಿಸಬಹುದು.[100] ಹೀಗೆ 1914ರಲ್ಲಿ ಬಾಸೆಲ್ ಮಿಶನರಿಗಳು ಸರಕಾರದ ನಿರ್ಬಂಧದಿಂದಾಗಿ ಮಿಶನ್ ಕಾರ್ಯದಿಂದ ಹಿಂದೆ ಸರಿಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಇಲ್ಲಿ ಮಿಶನ್ ಜವಾಬ್ದಾರಿ ವಹಿಸಿದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಸ್ಥಳೀಯರಿಗೆ ಚರ್ಚ್ ವ್ಯವಸ್ಥೆಯಲ್ಲಿ

ಸ್ವಾಯತ್ತತೆ ಲಭಿಸುತ್ತದೆ. ಅದೇ ರೀತಿ ಮಿಶನರಿಗಳಿಗೆ ಸ್ಥಳೀಯರಿಂದ ಪ್ರಬಲ ಪ್ರತಿರೋಧವು ವ್ಯಕ್ತವಾಗುತ್ತದೆ. 1927ರಲ್ಲಿ ಬಾಸೆಲ್ ಮಿಶನರಿಗಳು ಮರಳಿದರೂ, ಸ್ಥಳೀಯ ಕ್ರೈಸ್ತರ ಮೇಲೆ ಪ್ರಬಲ ನಿಯಂತ್ರಣ ಸಾಧ್ಯವಾಗುವುದಿಲ್ಲ. 1939ರಲ್ಲಿ ಎರಡನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಮತ್ತೊಂದು ಬಾರಿ ಬಾಸೆಲ್ ಮಿಶನರಿಗಳು ಮಿಶನ್ ಠಾಣ್ಯಗಳಿಂದ ತೆರಳಬೇಕಾಗುತ್ತದೆ. ಇದು ಬಾಸೆಲ್ ಮಿಶನ್ ಹುಟ್ಟು ಹಾಕಿದ ಚರ್ಚುಗಳು ಮತ್ತೊಮ್ಮೆ ಪತನವಾಗುವುದೇನೋ ಎಂಬ ಭಯವನ್ನು ಸೃಷ್ಟಿಸುತ್ತದೆ. ಈ ಸಂದರ್ಭವು ಸ್ಥಳೀಯ ಕ್ರೈಸ್ತರು ಜವಾಬ್ದಾರಿಯನ್ನು ವಹಿಸಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಿಸುತ್ತದೆ. ಈ ಕಾರಣದಿಂದ ಸ್ಥಳೀಯ ಬಾಸೆಲ್ ಮಿಶನ್ ಕ್ರೈಸ್ತರು ಚರ್ಚುಗಳ ಜವಾಬ್ದಾರಿಯನ್ನು ವಹಿಸಿಕೊಂಡು ಮಿಶನರಿಗಳೊಂದಿಗೆ ಜಂಟಿಯಾಗಿ ಮುಂದುವರಿಯುತ್ತಾರೆ.

ಬಾಸೆಲ್ ಮಿಶನರಿಗಳು ಸ್ಥಳೀಯ ಕ್ರೈಸ್ತರನ್ನು ತಮ್ಮ ಪ್ರಬಲವಾದ ನಿಯಂತ್ರಣದಲ್ಲಿರಿಸಿಕೊಂಡು, ಅವರ ಸ್ವತಂತ್ರ್ಯವಾದ ಬೆಳವಣಿಗೆಯನ್ನು ತಡೆದರು ಎಂಬ ಪ್ರಬಲವಾದ ಆರೋಪವನ್ನು ಸ್ಥಳೀಯ ಕ್ರೈಸ್ತರು ಮಾಡುತ್ತಾರೆ. ಬಾಸೆಲ್ ಮಿಶನ್ ತನ್ನ ಮಿಶನ್ ಪ್ರದೇಶಗಳುದ್ದಕ್ಕೂ ಪ್ರಾಥಮಿಕ ಶಾಲೆಗಳನ್ನು ತೆರೆದು ಕ್ರೈಸ್ತರಿಗೆ ಶಿಕ್ಷಣ ನೀಡಿತು. ಆದರೆ ಅವರನ್ನು ತನ್ನ ಕಠಿಣ ನಿಯಂತ್ರಣದಲ್ಲಿರಿಸಿತು ಎಂಬ ಆರೋಪವನ್ನು ಸ್ಥಳೀಯ ಕ್ರೈಸ್ತರು ಮಾಡುತ್ತಾರೆ. ಅಧಿಕಾರವನ್ನು ಬಯಸುವುದು ಮನುಷ್ಯನ ಸ್ವಭಾವವಾಗಿದೆ. ಅದನ್ನು ಹೊಂದಿದವರು ಸ್ವಸಂತೋಷದಿಂದ ಬಿಟ್ಟು ಕೊಡಲಾರರು. ಬಾಸೆಲ್ ಮಿಶನಿಗೂ ಇದೇ ರೀತಿಯ ದೌರ್ಬಲ್ಯವಿದೆ. 1914ರ ಕಾಲಾವಧಿಯಲ್ಲಿ ಮಿಶನ್ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಅದು ತನ್ನ ಉನ್ನತ ಮಟ್ಟಕ್ಕೆ ಮುಟ್ಟುತ್ತದೆ. ಆ ಹಂತದಲ್ಲಿ ಅದು ಅಧಿಕಾರ ಮಾಡಲು ಆರಂಭಿಸುತ್ತದೆ ಹಾಗೂ ಸೇವೆಯು ಕಡಿಮೆಯಾಗುತ್ತದೆ[101] ಎಂಬ ಬಲವಾದ ಟೀಕೆಯನ್ನು ಸ್ಥಳೀಯ ಕ್ರೈಸ್ತರು ಬಾಸೆಲ್ ಮಿಶನ್ ಮೇಲೆ ಮಾಡುತ್ತಾರೆ. ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳು ಇಲ್ಲಿ ಬಂದು ಅನುಭವ ಪಡೆದು, ಇಲ್ಲಿನ ಕ್ರೈಸ್ತರನ್ನು ಹೇಗೆ ಜಯಿಸಬೇಕು ಹಾಗೂ ನಿಯಂತ್ರಿಸಬೇಕೆಂಬುದನ್ನು ತಿಳಿದು, ನಮ್ಮವರನ್ನೇ ನಮ್ಮ ವಿರುದ್ಧ ಬಳಸಿಕೊಳ್ಳುವುದು ಅಗತ್ಯವೆಂದು ತಿಳಿದುಕೊಂಡರು. ಸಂದರ್ಭಗಳು ಬಂದಾಗ ಮಿಶನರಿಗಳು ಈ ವಿಧಾನವನ್ನು ಸೂಕ್ತವಾಗಿ ಬಳಸಿಕೊಂಡರು. ಇವರ ಈ ನಡವಳಿಕೆಯು ಸ್ಥಳೀಯ ಕ್ರೈಸ್ತರ ಕಣ್ಣು ತೆರೆಯುವಂತೆ ಮಾಡಿ, ನಮ್ಮ ಉದ್ದೇಶಗಳು, ಬೇಡಿಕೆಗಳು ಸಂಕಷ್ಟದಲ್ಲಿರುವಾಗ, ಕ್ರೈಸ್ತರು ಸಂಘಟಿತರಾಗಬೇಕು ಎಂಬುದಾಗಿ 'ಸತ್ಯವ್ರತ'ವು ತಿಳಿಸುತ್ತದೆ.[102] 1914ರಲ್ಲಿ ಜರ್ಮನ್ ಮಿಶನರಿಗಳು ಮಿಶನ್ ಪ್ರದೇಶಗಳಿಂದ ತೆರಳುವಾಗ ಭಾರೀ ದೊಡ್ಡ ತಪ್ಪನ್ನು ಎಸಗಿದ್ದಾರೆ. ಅವರು ಅವರೊಂದಿಗಿದ್ದ ಭಾರತೀಯ ಸಹಚರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಎಲ್ಲಾ ಜವಾಬ್ದಾರಿಗಳನ್ನು ಅವರ ಸ್ವಿಸ್ ಸಂಗಡಿಗರಿಗೆ ವಹಿಸಿದರು. ಆದರೆ ಅವರು ಎಲ್ಲಾ ರೀತಿಯಲ್ಲೂ ಆ ಕೆಲಸವನ್ನು

ನಿರ್ವಹಿಸಲು ಅಸಮರ್ಥರಾಗಿದ್ದರು.[103] ಎಂದು 'ಸತ್ಯವ್ರತ' ಬಾಸೆಲ್ ಮಿಶನರಿಗಳ ವರ್ತನೆಯನ್ನು ಖಂಡಿಸಿದೆ.

ಬಾಸೆಲ್ ಮಿಶನ್ ಶಿಕ್ಷಣ ಪ್ರಸರಣ ಕಾರ್ಯದಲ್ಲಿ ಬಹು ಪ್ರಮುಖವಾದ ಪಾತ್ರವನ್ನು ವಹಿಸಿದೆ. ಈ ಕಾರಣದಿಂದ ಹಿಂದು ಹಾಗೂ ಇತರ ಸಮಾಜಗಳ ಮೇಲೆ ಕೂಡಾ ಅದರಿಂದ ಒಂದು ಬಗೆಯ ಉಪಕಾರವುಂಟಾಗಿದೆಯಾದರೂ, ಸ್ವಂತ ಕ್ರೈಸ್ತ ಸಮಾಜದ ಹಿತವು ಸಾಕ್ಷರತೆಗಿಂತ ಮುಂದೆ ಹೋಗಿಲ್ಲ. ಓದು ಬರಹ ಕಲಿತ ಕ್ರೈಸ್ತರು ಮುಂದಿನ ಶಿಕ್ಷಣವನ್ನು ಸಂಪಾದಿಸಲು ಅಶಕ್ತರಾಗಿ ಕೊನೆಗೆ ಹಂಚಿನ ಕಾರಖಾನೆಗಳನ್ನು ಆಶ್ರಯಿಸುವಂತಾಯಿತು. ಕೂಲಿ ಕೆಲಸವೆ ಗತಿಯಲ್ಲದೆ, ಸಾಮಾನ್ಯವಾದ ಇನ್ನಾವ ಮಾರ್ಗವನ್ನು ಸ್ವಾಜನರಿಗಾಗಿ ಮಿಶನು ತಯಾರಿಸಿರಲಿಲ್ಲ ಎಂಬ ಅಭಿಪ್ರಾಯ ಜನರಲ್ಲಿ ಮೂಡುತ್ತದೆ.[104] ಜ್ಯಾಕ್ಸ್ ರೋಸೆಲ್‌ರವರು ಬಾಸೆಲ್ ಮಿಶನ್ ಶಿಕ್ಷಣ ನೀತಿಯ ಬಗ್ಗೆ ಉಲ್ಲೇಖಿಸುತ್ತಾ ಬಾಸೆಲ್ ಮಿಶನ್ ಮಂಗಳೂರಿನಲ್ಲಿ ಒಂದು ಕ್ರಿಶ್ಚಿಯನ್ ಕಾಲೇಜನ್ನು ಆರಂಭಿಸುವುದರ ಅಗತ್ಯವಿಲ್ಲವೆಂದು ತಿಳಿದಿತ್ತು ಎಂದಿದ್ದಾರೆ.[105] ಆದರೆ ಬಾಸೆಲ್ ಮಿಶನ್ ಕ್ರೈಸ್ತರು ಬಾಸೆಲ್ ಮಿಶನರಿಗಳು ಉನ್ನತ ಶಿಕ್ಷಣವನ್ನು ಒದಗಿಸಿಲ್ಲವೆಂಬ ಟೀಕೆಗಳನ್ನು ಮಿಶನರಿಗಳ ಮೇಲೆ ಮಾಡುತ್ತಾರೆ. ಅಷ್ಟು ಮಾತ್ರವಲ್ಲದೇ ಬಾಸೆಲ್ ಮಿಶನ್ ಕ್ರೈಸ್ತರು ಅವರು ನಡೆದು ಬಂದ ದಾರಿಯನ್ನು ಅವಲೋಕಿಸಿ ತಪ್ಪುಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದರು. ಬಾಸೆಲ್ ಮಿಶನ್ ಪತ್ರಿಕೆಯಾದ 'ಕರ್ನಾಟಕ ಕ್ರೈಸ್ತ ಬಂಧು' ಬಾಸೆಲ್ ಮಿಶನ್ ಕ್ರೈಸ್ತರನ್ನು ಉಲ್ಲೇಖಿಸಿ ನಮ್ಮ ಗತ ಚರಿತ್ರೆಯನ್ನು ನೋಡುವಾಗ ನಾವು ಅನೇಕ ತಪ್ಪುಗಳನ್ನು ಮಾಡಿರುವೆವೆಂದೂ ಮತ್ತು ನಮ್ಮ ಸಭೆಗಳಲ್ಲಿ ಕಾದಾಟ, ಜಗಳಗಳೂ, ವಿಶ್ವಾಸ ಬಲಹೀನತೆಯೂ, ತಣ್ಣಗಾದ ಪ್ರೀತಿಯೂ, ಸ್ವಾರ್ಥಮನಸ್ಸು ಇರುವುದೆಂದೂ ಹೇಳಬೇಕಾಗುತ್ತದೆ? ಎಂದಿದೆ. ಈ ಎಲ್ಲಾ ಲೋಪದೋಷಗಳನ್ನು ಸರಿಪಡಿಸಿ ಮುಂದುವರಿಯಬೇಕಾಗಿದೆ ಎಂದು ಅದು ಕ್ರೈಸ್ತರಿಗೆ ಎಚ್ಚರಿಸುತ್ತದೆ.[106] 1927ರಲ್ಲಿ ಬಾಸೆಲ್ ಮಿಶನರಿಗಳು ಪುನಃ ಮರಳಿ ಬಂದಾಗ ಸ್ಥಳೀಯ ಕ್ರೈಸ್ತರು, ಇಲ್ಲಿನ ಕ್ರೈಸ್ತರ ಜೀವನೋಪಾಯಕ್ಕಾಗಿ ಕೈಗಾರಿಕಾ ಶಾಲೆಯನ್ನು ತೆರೆಯಬೇಕು ಹಾಗೂ ಸ್ವತಂತ್ರವಾದ ವೃತ್ತಿಯನ್ನು ಮಾಡುವಂತಹ ತರಬೇತಿಗಳನ್ನು ಒದಗಿಸಿಬೇಕೆಂಬ ಬೇಡಿಕೆಯನ್ನು ಮಂಡಿಸಿದ್ದನ್ನು ಗಮನಿಸಬಹುದು.[107] ಈ ರೀತಿಯಾಗಿ ಬಾಸೆಲ್ ಮಿಶನರಿಗಳನ್ನು ಇಲ್ಲಿನ ಕ್ರೈಸ್ತರು ಬಹುವಾಗಿ ಇಷ್ಟಪಟ್ಟರೂ, ಅವರ ಕೆಲವು ನೀತಿಗಳ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ ಹಾಗೂ ಧೋರಣೆಗಳನ್ನು ಖಂಡಿಸಿದ್ದಾರೆ. ಜಿಲ್ಲೆಯಲ್ಲಿ ಮಿಶನ್ ಎರಡು ಹೈಸ್ಕೂಲ್‌ಗಳನ್ನು ನಿರ್ವಹಣೆ ಮಾಡುತ್ತಿದ್ದು, ಇವು ಕ್ರೈಸ್ತರಿಗಿಂತ ಕ್ರೈಸ್ತೇತರರಿಗೆ ಬಹಳಷ್ಟು ಉಪಯೋಗವಾಗಿವೆ. ಇಲ್ಲಿ ಕಲಿತ ಕ್ರೈಸ್ತೇತರ ವಿದ್ಯಾರ್ಥಿಗಳು ಇಲ್ಲಿಂದ ಹೊರ ಹೋಗಿ ಬ್ರಹ್ಮ ಸಮಾಜ, ಆರ್ಯ ಸಮಾಜ ಹಾಗೂ ಇವುಗಳಿಗೆ ಸಮಾನಾಂತರದಲ್ಲಿರುವ ಇತರ

ಸಂಘಟನೆಗಳನ್ನು ಸೇರಿ ಕ್ರೈಸ್ತತ್ವದ ಪ್ರಗತಿಗೆ ಬಹಳಷ್ಟು ತೊಡಕಾಗಿದ್ದಾರೆ ಎಂದು ಸತ್ಯವ್ರತವು ಬಾಸೆಲ್ ಮಿಶನರಿಗಳನ್ನು ಎಚ್ಚರಿಸಿತ್ತು.[108] ಬಾಸೆಲ್ ಮಿಶನ್ ಕ್ರೈಸ್ತರು ಪ್ರಾರಂಭದಲ್ಲಿ ಮಿಶನರಿಗಳಿಗೆ ಬಹಳಷ್ಟು ವಿಧೇಯರಾಗಿದ್ದರು. ಆದರೆ 1927ರ ನಂತರ ಆ ಮೊದಲಿನ ವಿಧೇಯತೆ ಕಂಡು ಬರುವುದಿಲ್ಲ. ಅದೇ ಮಿಶನರಿಗಳಿಗೆ ಮೊದಲಿದ್ದ ಹಿಡತ ಸಡಿಲಗೊಂಡಂತೆ ಕಂಡುಬರುತ್ತದೆ. 1933ರ ಡಿಸೆಂಬರ್‌ನಲ್ಲಿ ಆ ವರ್ಷ ನಡೆಯಬೇಕಿದ್ದ ಮಿಶನ್ ಹಬ್ಬವು ಮಂಗಳೂರಿನ ಸಭೆಯಲ್ಲಿದ್ದ ಅಸಮಾಧಾನದ ಕಾರಣದಿಂದಾಗಿ ನಡೆಯುವುದಿಲ್ಲ. ಮತ್ತೊಂದೆಡೆ 1933ರ ಡಿಸೆಂಬರ್ 2ರಂದು ಬಲ್ಮಠದಲ್ಲಿನ ಬಾಸೆಲ್ ಮಿಶನ್ ಛಾಪಖಾನೆಯ ಸುಮಾರು 80 ಜನರು, ಕೆಲಸಕ್ಕೆ ಹಾಜರಾಗದೇ ಮುಷ್ಕರವನ್ನು ಆರಂಭಿಸುತ್ತಾರೆ. ತದನಂತರ ಸಂಧಾನ ನಡೆದು ಡಿಸೆಂಬರ್ 14ರಂದು ಮುಷ್ಕರವು ಮುಗಿಯುತ್ತದೆ.[109] ಈ ರೀತಿ ಮಿಶನ್‌ನಲ್ಲಿ ಮೊದಲಿದ್ದ ಸ್ಥಿತಿಯು ಸಂಪೂರ್ಣವಾಗಿ ಬದಲಾಗುತ್ತದೆ.

ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಮಿಶನ್ ಪತ್ರಿಕೆಯಾದ 'ಹಿತವಾದಿ' ಹಾಗೂ ಮಿಶನೇತರ ಪತ್ರಿಕೆಯಾದ 'ಸತ್ಯವ್ರತ'ದ ನಡುವೆ ಕಲಹ ನಡೆಯುತ್ತದೆ. ಸತ್ಯವ್ರತವು ಹಿತವಾದಿ, ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಹಾಗೂ ಅದರ ಬೆಂಬಲಿಗರ ಮೇಲೆ ನಿರಂತರವಾದ ನೇರ ದಾಳಿ ಹಾಗೂ ಆರೋಪವನ್ನು ಮಾಡುತ್ತದೆ. ಈ ಕಾಲಾವಧಿಯಲ್ಲಿ ಸತ್ಯವ್ರತವನ್ನು ನಿಯಂತ್ರಿಸಲು ಅಸಾಧ್ಯವಾದ ಮಟ್ಟಕ್ಕೆ ಮುಟ್ಟುತ್ತದೆ ಹಾಗೂ ಅದು ಬಹಳಷ್ಟು ಬೆಂಬಲವನ್ನು ಪಡೆದಿರುತ್ತದೆ. 1927ರಲ್ಲಿ ಬಾಸೆಲ್ ಮಿಶನರಿಗಳು ಮರಳಿದ ಮೇಲೂ ತನ್ನ ಮೊದಲಿನ ಶೈಲಿಯನ್ನು ಮುಂದುರಿಸಿದ್ದ ಸತ್ಯವ್ರತ, ಹಿತವಾದಿಯ ಮೇಲೆ ಆಗಾಗ ದಾಳಿಯನ್ನು ನಡೆಸುತ್ತದೆ. ಆದರೆ ಬಾಸೆಲ್ ಮಿಶನರಿಗಳ ಆಗಮನದ ನಂತರ 'ಸತ್ಯವ್ರತ'ದ ಓದುಗರ ಸಂಖ್ಯೆಯು ಇಳಿಮುಖವಾಗುವುದನ್ನು ಗಮನಿಸಬಹುದು. ಈ ವಿಚಾರವಾಗಿ ಸತ್ಯವ್ರತವು ಬಾಸೆಲ್ ಮಿಶನ್ ಪುನಃ ನಮ್ಮ ಜಿಲ್ಲೆಯಲ್ಲಿ ಬಂದು ತಲುಪಿದಂದಿನಿಂದ 'ಸತ್ಯವ್ರತ'ನ ಪ್ರೋತ್ಸಾಹಕರ ಸಂಖ್ಯೆಯು ಕಡಿಮೆಯಾದಂತೆ ತೋರಿಬರುತ್ತದೆ. ಇದನ್ನು ನೋಡುವಾಗ 'ಹೊಳೆದಾಟಿದ ನಂತರ ಅಂಬಿಗನ ಬಲವೇಕೆ' ಎಂಬ ಗಾದೆಯು ನಮಗೆ ಜ್ಞಾಪಕ ಬರುತ್ತದೆಯಾದರೂ ಇದರಂತೆ ನಮ್ಮ ಬಂಧುಗಳು ವರ್ತಿಸಲಾರರು ಎಂದು ತುಂಬಾ ನಂಬಿದ್ದೇವೆ?[110] ಎನ್ನುತ್ತದೆ. ಈ ರೀತಿ ಬಾಸೆಲ್ ಮಿಶನಿನ ಅನುಪಸ್ಥಿತಿಯಲ್ಲಿ ಸತ್ಯವ್ರತದ ಪರವಾಗಿದ್ದ ಬಾಸೆಲ್ ಮಿಶನ್ ಕ್ರೈಸ್ತರು ಬಾಸೆಲ್ ಮಿಶನರಿಗಳು ಮರಳಿದ ಮೇಲೆ ಸತ್ಯವ್ರತದಿಂದ ದೂರವಾಗಿದ್ದರು ಎನ್ನಬಹುದು.

ಬಾಸೆಲ್ ಮಿಶನರಿಗಳು ಮರಳಿದ ಮೇಲೂ 'ಸತ್ಯವ್ರತ', 'ಹಿತವಾದಿ'ಯ ಮೇಲೆ ತನ್ನ ಟೀಕೆಯನ್ನು ಮುಂದುವರಿಸುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಕಾಲದಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಪರವಾಗಿದ್ದ ಹಿತವಾದಿಯು ನಂತರ ಬಾಸೆಲ್ ಮಿಶನರಿಗಳ ಪರವಹಿಸಲು

ಆರಂಭಿಸುತ್ತದೆ. ಆ ಸಂದರ್ಭದಲ್ಲಿ ಸತ್ಯವ್ರತವು, 'ಹಿತವಾದಿ'ಯನ್ನು 'ಪಕ್ಷ ಪತ್ರಿಕೆ',[111] 'ಹೊಸ ಪೋಷಾಕಿನ ಹಳಬ'[112]ಎಂದೆಲ್ಲಾ ಟೀಕಿಸುತ್ತದೆ. ಮತ್ತೊಂದೆಡೆ ಮಿಶನರಿ ಪತ್ರಿಕೆಯಾದ ಕ್ರೈಸ್ತಹಿತವಾದಿಯು, ಸತ್ಯವ್ರತದ ಮೇಲೆ ಟೀಕೆಗಳನ್ನು ಮಾಡುತ್ತಾ, ಸತ್ಯವ್ರತಕ್ಕೆ ಎಚ್ಚರಿಕೆ ಮತ್ತು ಬುದ್ಧಿವಾದ ಹೇಳುವುದನ್ನು ಗಮನಿಸಬಹುದು.[113] 1930ರಲ್ಲಿ ತಾರಕಕ್ಕೇರಿದ್ದ ಈ ಎರಡು ಪತ್ರಿಕೆಗಳ ನಡುವಿನ ಕಲಹ ಅಂತಿಮವಾಗಿ ಕೋರ್ಟು ಮೆಟ್ಟಿಲೇರುತ್ತದೆ. ಸತ್ಯವ್ರತವು ಹಿತವಾದಿಯ ಮೇಲೆ ಪ್ರಬಲವಾಗಿ ಟೀಕೆಗಳನ್ನು ನಡೆಸಿದ ಸಂದರ್ಭದಲ್ಲಿ ಹಿತವಾದಿಯ ಸಂಪಾದಕರಾದ ಫ್ರೆಡ್ ಜತ್ತನ್ನರು ಸತ್ಯವ್ರತದ ಸಂಪಾದಕರಾದ ಐಮನರ ಮೇಲೆ ದಾವೆಯನ್ನು ಹೂಡುತ್ತಾರೆ. ಮೊಕದ್ದಮೆಯು ಕೆಳ ಕೋರ್ಟಿನಲ್ಲಿ ಅಂತ್ಯವಾಗಿ ಐಮನರಿಗೆ 200 ರೂಪಾಯಿ ಜುಲ್ಮಾನೆಯಾಗುತ್ತದೆ. ಆದರೆ ಐಮಾನರು ಜಿಲ್ಲಾ ಕೋರ್ಟಿಗೆ ಅಪೀಲು ಮಾಡುತ್ತಾರೆ. ಅಲ್ಲಿಯೂ ಸೋತು, ಹಿತವಾದಿಯ ಸಂಪಾದಕರಾದ ಜತನ್ನರಿಗೆ, ಲಿಖಿತ ಕ್ಷಮಾಪಣೆಯನ್ನು ಕೇಳಿ, ಸತ್ಯವ್ರತದಲ್ಲಿ ಮಾಡಿದ ನಿಂದೆಯ ಮಾತುಗಳನ್ನು ಹಾಗೂ ದೋಷರೋಪಣೆಗಳನ್ನು ಹಿಂದೆಗೆದು ಕೊಳ್ಳುತ್ತಾರೆ.[114] ಹೀಗೆ ಎರಡು ಪತ್ರಿಕೆಗಳ ನಡುವಿನ ಕಲಹವು 1931ರಲ್ಲಿ ಅಂತ್ಯಗೊಳ್ಳುತ್ತದೆ.

1927ರಲ್ಲಿ ತನ್ನ ಹಳೆ ಮಿಶನ್ ಠಾಣ್ಯಗಳಲ್ಲಿ ಕಾರ್ಯವನ್ನು ಮರು ಆರಂಭಿಸಿದ ಬಾಸೆಲ್ ಮಿಶನರಿಗಳು ಅದು ಇಲ್ಲಿ ಹುಟ್ಟು ಹಾಕಿದ ಚರ್ಚ್, ಇತರ ಸಂಘಟನೆಗಳು ಹಾಗೂ ಮಿಶನನ್ನು ಉತ್ತಮವಾಗಿ ನಿರ್ವಹಿಸುತ್ತಾರೆ. ಆದರೆ 1927ರ ನಂತರ ಬಾಸೆಲ್ ಮಿಶನ್ ಕಾರ್ಯವಾಗಲೀ, ಠಾಣ್ಯಗಳಾಲೀ ವಿಸ್ತರಣೆಯಾಗುವುದಿಲ್ಲ. ಮತ್ತೊಂದೆಡೆ ಬ್ರಿಟಿಷ್ ಸರಕಾರ ಪ್ರಥಮ ಜಾಗತಿಕ ಯುದ್ಧದ ಸಂದರ್ಭದಲ್ಲಿ ಅದು ಬಾಸೆಲ್ ಮಿಶನ್ ಮೇಲೆ ಹಾಕಿದ್ದ ನಿರ್ಬಂಧಗಳನ್ನು ಹಿಂತೆಗೆದುಕೊಂಡಿರುತ್ತದೆ. ಆದರೆ ಈ ರೀತಿಯ ಬಾಸೆಲ್ ಮಿಶನಿನ ಮುಂದುವರಿಕೆಯು ದೀರ್ಘಕಾಲಿಕವಾಗದೇ, 1939ರಲ್ಲಿ ಎರಡನೇ ಜಾಗತಿಕ ಯುದ್ಧ ಆರಂಭಗೊಳ್ಳುವುದರೊಂದಿಗೆ ಅದು ಅಂತ್ಯಗೊಳ್ಳುತ್ತದೆ. ಈ 12 ವರುಷಗಳ ಕಾಲಾವಧಿಯಲ್ಲಿ ಬಾಸೆಲ್ ಮಿಶನರಿಗಳು ಮಿಶನ್ ಮೇಲೆ ತಮ್ಮ ನಿಯಂತ್ರಣವನ್ನು ಮುಂದುವರಿಸಿದರೂ, ಸ್ಥಳೀಯ ಬಾಸೆಲ್ ಮಿಶನ್ ಕ್ರೈಸ್ತರಿಗೆ ಕೆಲವು ಜವಾಬ್ದಾರಿಗಳನ್ನು ವಹಿಸುತ್ತಾರೆ. ಚರ್ಚ್ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ಬಾಸೆಲ್ ಮಿಶನ್ ಕ್ರೈಸ್ತರು ನಿರ್ವಹಿಸಲು ಆರಂಭಿಸುತ್ತಾರೆ. ಆದರೆ ಮಿಶನರಿಗಳ ಮಾರ್ಗದರ್ಶನ ಹಾಗೂ ಅಸ್ತಿತ್ವ ಮುಂದುವರಿಯುತ್ತದೆ. ಬಾಸೆಲ್ ಮಿಶನರಿಗಳು ಮಲಬಾರ್, ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಮಿಶನ್ ಪ್ರದೇಶಗಳನ್ನು ಸೇರಿಸಿ ಪ್ರಬಲವಾಗಿ ಬಾಸೆಲ್ ಮಿಶನ್ ಪ್ರದೇಶಗಳನ್ನು ಸಂಘಟಿಸುವ ಪ್ರಯತ್ನಗಳು ಈ ಕಾಲಾವಧಿಯಲ್ಲಿ ನಡೆಯುತ್ತವೆ. 1934ರಲ್ಲಿ 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ'ವನ್ನು ಸ್ಥಾಪಿಸಿ ಎಲ್ಲಾ ಬಾಸೆಲ್ ಮಿಶನ್ ಚರ್ಚ್‌ಗಳನ್ನು

ಒಂದಾಗಿ ಮುಂದುವರಿಸುವ ಯೋಜನೆಯು ಜಾರಿಯಾಗುತ್ತದೆ. ಹೀಗೆ ಈ ಕಾಲಾವಧಿಯಲ್ಲಿ ಬಾಸೆಲ್ ಮಿಶನರಿಗಳು ನಿಧಾನವಾಗಿ ಸ್ಥಳೀಯ ಕ್ರೈಸ್ತರಿಗೆ ಅಧಿಕಾರವನ್ನು ನೀಡುವ ಪ್ರಯತ್ನಗಳನ್ನು ಮುಂದುವರಿಸುತ್ತಾರೆ ಹಾಗೂ ಇದು ಮುಂದೆ ಬಾಸೆಲ್ ಮಿಶನ್ ಚರ್ಚುಗಳು ಸ್ವತಂತ್ರವಾಗಿ ಮುಂದುವರಿಯಲು ಸಾಧ್ಯವಾಗಬಹುದು ಎಂಬುದು ಮಿಶನಿನ ಅಭಿಪ್ರಾಯವಾಗಿತ್ತು.

1927 ನಂತರ ಕಾಲಾವಧಿಯಲ್ಲಿ ಬಾಸೆಲ್ ಮಿಶನರಿಗಳು ಸ್ಥಳೀಯ ಕ್ರೈಸ್ತರ ಪ್ರಶ್ನಾತೀತ ದೊರೆಗಳಾಗಿ ಕಂಡು ಬರುವುದಿಲ್ಲ. ಏಕೆಂದರೆ ಬಾಸೆಲ್ ಮಿಶನರಿಗಳ ಈ ಕಾಲಾವಧಿಯಲ್ಲಿ ಅವರ ವಿರುದ್ಧ ಕೆಲವೊಂದು ಸಂದರ್ಭದಲ್ಲಿ ಸ್ಥಳೀಯ ಕ್ರೈಸ್ತರು ಧ್ವನಿ ಎತ್ತುವುದನ್ನು ಗಮನಿಸಬಹುದು. 1939ರಲ್ಲಿ ಬಾಸೆಲ್ ಮಿಶನರಿಗಳು ಮತ್ತೊಂದು ಬಾರಿ ಮಿಶನ್ ಕ್ಷೇತ್ರಗಳನ್ನು ಬಿಟ್ಟು ಹೋಗಬೇಕಾದ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗಿದ್ದಂತೆ ಕಂಡು ಬರುತ್ತದೆ. ಏಕೆಂದರೆ ಯುದ್ಧ ಆರಂಭವಾಗುತ್ತಿದ್ದಂತೆ ಎಲ್ಲಾ ಜವಾಬ್ದಾರಿಗಳನ್ನು ಸ್ವಿಸ್‌ರು ವಹಿಸಿಕೊಳ್ಳಬೇಕೆಂಬ ನಿರ್ಣಯವಾಗಿರುತ್ತದೆ. 1939ರಲ್ಲಿ ಯುದ್ಧ ಘೋಷಣೆಯಾಗುತ್ತಿದ್ದಂತೆ ಬ್ರಿಟಿಷ್ ಸರಕಾರ 'ದಿ ಡಿಫೇನ್ಸ್ ಆಫ್ ಇಂಡಿಯ ಆಕ್ಟ್, 1939' (The Defence of India Act, 1939) ಮತ್ತು 'ಫೋರಿನರ್ಸ್ ಓರ್ಡರ್ 1939' (Foreigners order,1939) ನ್ನು ಜಾರಿಗೊಳಿಸಿ ಬಾಸೆಲ್ ಮಿಶನ್ ಸೇರಿದಂತೆ ಜರ್ಮನರಿದ್ದ ಹಲವು ಮಿಶನರಿ ಸಂಘಟನೆಗಳನ್ನು 'ವೈರಿ ದೇಶದ ಸಂಘಟನೆ'ಗಳೆಂಬುದಾಗಿ (organization of enemy alien nations) ಘೋಷಿಸಿ, ದೇಶದಲ್ಲಿ ಅವರ ಕಾರ್ಯಚಟುವಟಿಕೆಗಳ ಮೇಲೆ ನಿರ್ಬಂಧ ಹೇರಿ, ಅವುಗಳನ್ನು ನಿಯಂತ್ರಿಸಲು ಮುಂದಾಗುತ್ತದೆ. ಇದರೊಂದಿಗೆ ಭಾರತದಲ್ಲಿ ಬಾಸೆಲ್ ಮಿಶನಿನ ಅಭೂತಪೂರ್ವ ಕಾಲಾವಧಿ ಅಂತ್ಯವಾಯಿತು ಎನ್ನಬಹುದು.

ಸಂದರ್ಭ ಸೂಚಿ:

1. ದಿ ರಿಟರ್ನ್ ಆಫ್ ಜರ್ಮನ್ ಮಿಶನರೀಸ್, *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ–XLI, ನಂ. 9, ಸೆಪ್ಟೆಂಬರ್, 1921, ಪುಟ 321–322.

   ....that "application from individual German missionaries of unimpeachable antecedent for permission to enter the colonies would be considered, provided they were under the control of local British, Allied or Anociated subjects and vouched for by responsible British ecclesiastical authority".

2. ದಿ ರಿಟರ್ನ್ ಆಫ್ ಜರ್ಮನ್ ಮಿಶನರಿಸ್ ಟು ಇಂಡಿಯ, *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ–XLII, ನಂ. 3, ಮಾರ್ಚ್, 1922, ಪುಟ 84.

3. ಅದೆ.

4. ಮದ್ರಾಸಿನ ಲಾರ್ಡ್ ಬಿಶೋಪರು ಮಡಿಕೇರಿಯ ವೆಸ್ಲಿಯನ್ ಮಿಶನ್ ದೇವಾಲಯದಲ್ಲಿ ಮಾಡಿದ ಭಾಷಣದ ಸಾರಾಂಶ, *ಕ್ರೈಸ್ತ ಹಿತವಾದಿ*, ಸಂಪುಟ–2, ಸಂಚಿಕೆ–5, ಮಂಗಳೂರು, ನವೆಂಬರ್, 1925, ಪುಟ 73.

5. ರೀಪೋರ್ಟ್ ಆಫ್ ಕಮಿಟಿ ಆನ್ ಜರ್ಮನ್ ಮಿಶನ್ಸ್ ಆಫ್‌ದಿ ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಿಲ್ ಆ್ಯಂಡ್ ದಿ ಮೆಡ್ರಾಸ್ ಕ್ರಿಶ್ಚಿಯನ್ ಕೌನ್ಸಿಲ್, *ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಿಲ್ ರಿವ್ಯಿವ್*, ಸಂಪುಟ–XLIV, ನಂ 12, ಡಿಸೆಂಬರ್, 1924, ಪುಟ 482.

6. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 1, ಸಂಚಿಕೆ 1, ಮಂಗಳೂರು, ಜುಲೈ, 1924, ಪುಟ 13.

7. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 1, ಸಂಚಿಕೆ 4, ಮಂಗಳೂರು, ಅಕ್ಟೋಬರ್, 1924, ಪುಟ 61.

8. ವರ್ತಮಾನಸರ, *ಕ್ರೈಸ್ತ ಹಿತವಾದಿ*, ಸಂಪುಟ 2, ಸಂಚಿಕೆ 2, ಮಂಗಳೂರು, ಆಗಸ್ಟ್, 1925, ಪುಟ 28.

9. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 2, ಸಂಚಿಕೆ 8, ಮಂಗಳೂರು, ಫೆಬ್ರವರಿ, 1926, ಪುಟ 124.

0. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 3, ಸಂಚಿಕೆ 4, ಮಂಗಳೂರು, ಅಕ್ಟೋಬರ್, 1926, ಪುಟ 64.

1. ಜರ್ಮನ್ ಮಿಶನ್ಸ್ ಇನ್ ಬ್ರಿಟಿಷ್ ಟೆರಿಟೋರಿ, *ಸತ್ಯವ್ರತ*, ಸಂಪುಟ 2, ಸಂಚಿಕೆ 1, ಮಂಗಳೂರು, ಅಕ್ಟೋಬರ್, 1926, ಪುಟ 8–9.

2. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 3, ಸಂಚಿಕೆ 10, ಮಂಗಳೂರು, ಏಪ್ರಿಲ್, 1927, ಪುಟ 157.

13. ಜಿ. ಓ. ನಂ. 889, ಮಿಸಲೇನಿಯಸ್, ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, 13ನೇ ಅಕ್ಟೋಬರ್, 1926, ಪುಟ 1.

14. ಜಿ. ಓ. ನಂ. 637, ಮಿಸಲೇನಿಯಸ್, ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, 18ನೇ ಜುಲೈ, 1927, ಪುಟ 1. ಜಿ. ಓ. ನಂ. 923, ಮಿಸಲೇನಿಯಸ್, ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, 28ನೇ ಸೆಪ್ಟೆಂಬರ್, 1927, ಪುಟ 1.

15. ರೆವೆರೆಂಡ್ ಎ. ಶೊಸ್ಸರ್ ದೊರೆಯವರ ಪುನರಾಗಮನವೂ, ಬಲ್ಮಠ ಶಾಂತಿ ದೇವಾಲಯದಲ್ಲಿ ಅವರು ಮಾಡಿದ ವಂದನಾಭಾಷಣವೂ, *ಕ್ರೈಸ್ತ ಹಿತವಾದಿ*, ಸಂಪುಟ 3, ಸಂಚಿಕೆ 12, ಮಂಗಳೂರು, ಜೂನ್, 1927, ಪುಟ 177–178.

ಈಗ ನಮಗೂ ಒಂದು ಮಾತು ಹೇಳಬೇಕು. ನೀವು ಈ ಸಾಯಂಕಾಲ ನಮ್ಮನ್ನು ಆದರದ ಸ್ವಾಗತ ನೀಡಿದ್ದರಿಂದ ನಿಮಗೆ ಉಪಕಾರ ಹೇಳುತ್ತೇನೆ. ನಿಮ್ಮ ಈ ಗದ್ದಲದ ಸ್ವಾಗತವನ್ನು ಕಂಡು ಸಂತೋಷದಿಂದ ಉಪಸ್ಮರಣೆ ಮಾಡಿದರೂ ಅದರಿಂದ ನನಗೆ ಪೂರ್ಣ ಸಂತೋಷವುಂಟಾಯಿತೆಂದು ಹೇಳಲಾರೆನು. ನೀವು ದೊಡ್ಡ ಗದ್ದಲ ಮಾಡುತ್ತೀರಿ ಎಂಬುದು ನನಗೆ ಮೊದಲು ಗೊತ್ತಿದ್ದದ್ದಾದರೆ, ನಾನು ನಿಮಗೆ ತಿಳಿಸದೆ ಗುಟ್ಟಾಗಿ ಕತ್ತಲಿರುವ ವೇಳೆಯಲ್ಲಿ ಏಕಾಂತವಾಗಿ ಬಂದು ಸೇರುತ್ತಿದ್ದೆನು. ಆದರೆ ನೀವು ನಿಮ್ಮ ಎಲ್ಲಾ ಭೋದಕರನ್ನು ಸನ್ಮಾನಿಸಿ ಅವರ ಉಪಕಾರಸ್ಮರಣೆ ಮಾಡುತ್ತೀರಿ ಎಂದು ಗ್ರಹಿಸುತ್ತೇನೆ. ದೇವರು ನಿಮ್ಮನ್ನು ಕೈ ಬಿಡದೆ ನಾವು ಇಲ್ಲದ ವೇಳೆಯಲ್ಲಿ ಆತನು ನಿಮ್ಮನ್ನು ಅನಾಥರಾಗಿ ಬಿಡಲಿಲ್ಲ. ನಾವು ಹೋದ ಮೇಲೆ ನಿಮ್ಮಲ್ಲಿ ಉಳಿದ ಬೋಧಕರೂ ತಾಸಾನ್ ಕಮಿಟಿಯಿಂದ ನಿಮ್ಮ ಬಳಿಗೆ ಕಳುಹಿಸಲ್ಪಟ್ಟ ಬೋಧಕರೂ ಇತರರು ತಮ್ಮಿಂದಾದಷ್ಟು ಪ್ರಯತ್ನಿಸಿ. ಈ ಮಿಶನನ್ನು ನಡಿಸಿದರೆಂದು ನಿಮಗೆ ಗೊತ್ತಿದೆ. ಆದರೆ ಈ ಸಾಯಂಕಾಲ ನಾನು ಇದನ್ನು ಪ್ರತ್ಯೇಕವಾಗಿ ಹೇಳಬೇಕು. ಏನೆಂದರೆ ನಾನೀಗ ಲೌಸಾನಿನವರಿಂದ

ನಿಮ್ಮ ಬಳಿಗೆ ಕಳುಹಿಸಲ್ಪಟ್ಟಿದ್ದೆ. ಬಾಸೆಲ್ ಮಿಷನಿನವರು ಈ ಮಿಷನನ್ನು ತಿರಿಗಿ ತಕ್ಕೊಳ್ಳುತ್ತಾರೆಂಬುದು ಗೊತ್ತಿರುವ ಮೊದಲೇ ನಾನು ಲೌಸಾನ್ ಕಮಿಟಿಯವರಿಂದ ಕರೆಸಲ್ಪಟ್ಟವನಾಗಿ ಬಂದು ಇಲ್ಲಿರುವ ಬೋಧಕರೊಡನೆ ನಿಮ್ಮ ಮಧ್ಯದಲ್ಲಿ ಕೆಲಸ ಮಾಡಲು ಮನಸ್ಸು ಮಾಡಿದೆ. ಈಗ ಬಾಸೆಲ್ ಮಿಶ್ಯನಿನವರು ಈ ಮಿಷನನ್ನು ತಮ್ಮ ಮೇಲೆ ವಹಿಸಿಕೊಳ್ಳುವುದರಿಂದ ಇನ್ನಷ್ಟು ಸಂತೋಷದಿಂದ ಈ ಕೆಲಸವನ್ನು ವಹಿಸಿಕೊಳ್ಳುವ ಮನಸ್ಸು ಮಾಡಿದ್ದೇನೆ. ಇಲ್ಲಿರುವವರ ಸಂಗಡ ಕೆಲಸ ಮಾಡಲು ನನಗೆ ಮನಸ್ಸಿದೆ.

16. *ಸತ್ಯವ್ರತ*, ಸಂಪುಟ 2, ಸಂಚಿಕೆ 10, ಮಂಗಳೂರು, ಜುಲೈ, 1927, ಪುಟ 11–12.

Rev. A Schosser replied the welcome address presented to him in chaste canarese and in clear tones, he was careful and weighed each word as it fell from his lips. The Address of Welcome contained an expression of hope that he as the new Charioteer of the Basel Missionary Society would drive the car on the beaten track. Prepared for him by the Laussanne Auxillary Committees Supervising Engineer Tomlinson. Hi said none would be more pleased than himself to move on the democratic track. But he added he would keep a vigilant eye against any derailment by blindly traversing on the path out to him.

The Basel Missionary Society thus comes again into possession and power over its fields once last. May no cloud ever cross its sunny path. May the Society and its Missionaries conduct themselves, under divine guidance, in such way as never to cause regret to any who have received them with warm hearts and open arms. The people have vied with each other in their joy and enthusiasm to receive the first Ambassador of the Basel Mission and may be prove worth of it, may Basel Missionary Society Continue to work for many a long year among and amidst us for the good of our community and country and the Glory of God.

17. ಇನ್ನು ಮುಂದೆ ಬಿ. ಇ. ಎಮ್. ಎಂದು ಉಲ್ಲೇಖಿಸಲಾಗುವುದು.

8. ವರ್ತಮಾಸಾರ, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 3, ಮಂಗಳೂರು, ಸೆಪ್ಟೆಂಬರ್, 1927, ಪುಟ 45.
9. ಬಾಸೆಲ್ ಮಿಶನ್ ಹೋಮ್ ಕಮಿಟಿಯವರ ಸಂದೇಶ, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 5, ಮಂಗಳೂರು, ನವೆಂಬರ್, 1927, ಪುಟ 65–66. ಬಾಸೆಲ್ ಮಿಶನ್ ಹೋಮ್ ಕಮಿಟಿಯವರ ಸಂದೇಶ, *ಸತ್ಯವ್ರತ*, ಸಂಪುಟ 3, ಸಂಚಿಕೆ 2, ಮಂಗಳೂರು ನವೆಂಬರ್, 1927, ಪುಟ 9–10.

'ಬಾಸೆಲಿನಲ್ಲಿರುವ ಸೌವಾರ್ತಿಕ ಮಿಶನಿನ ಸಂಘವು (ಬಾಸೆಲ್ ಮಿಶನ್) ಹತ್ತು ವರುಷಗಳಿಗಿಂತಲೂ ಹೆಚ್ಚಾದ ಸಮಯ ತನ್ನ ಕೆಲಸವನ್ನು ನಡೆಸಲು ಅಭ್ಯಂತರವಾದ ನಂತರ ತಿರಿಗಿ ದಕ್ಷಿಣ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಸೀಮೆಗಳಲ್ಲಿ ತನ್ನ ಮುಂಚಿನ ಮಿಶನ್ ಕೆಲಸವನ್ನು ನಡಿಸುವ ಜವಾಬ್ದಾರಿಕೆಯನ್ನು ವಹಿಸಿಕೊಂಡಿರುತ್ತದೆ. ಕನ್ನಡ ಸೌವಾರ್ತಿಕ ಮಿಶನಿನವರು ಈ ಕೆಲಸವನ್ನು ನಮಗೆ ಹಿಂದೆ ಕೈವರ್ತಿಸಿ ಕೊಡುವ ಸಮಯವು ಬಂದಿರುತ್ತದೆಂದು ಯೋಚಿಸಿದ ಮೇಲೆ, ಈ ಕಾರ್ಯವು ದೇವರ ನಡಿಸುವಿಕೆಯಿಂದ ಸಮಾಧಾನದಿಂದಲೂ ಇಂಡಿಯಾ ಸರಕಾರದ ಅನುಮತಿಯಿಂದಲೂ ನೆರವೇರಿತು. ಆದುದರಿಂದ, ನಿಮ್ಮ ಹಳೇ ಮಿಶನರಿಗಳಲ್ಲಿ ಘನ. ಎ. ಶೊಸ್ಸರ್ ದೊರೆಗಳು ಮೊದಲಾಗಿ ನಿಮ್ಮ ಮಧ್ಯಕ್ಕೆ ಹಿಂದೆ ಬಂದಿರುತ್ತಾರೆ ಮತ್ತು ಇನ್ನೂ ಕೆಲವರು ಬೇಗನೆ ಬರುವರು. ಆದಾಗ್ಯೂ, ಬಾಸೆಲ್ ಮಿಶನಿನ ಆಡಳಿತೆಯೊಳಗೆ ಕೆನರೀಸ್ ಮಿಶನಿನ ಮಿಶನರಿಗಳಲ್ಲಿ ಯಾವನಾದರೂ ತನ್ನ ಕೆಲಸದಲ್ಲಿ ಮುಂದುವರಿಯುವುದಾದರೆ ನಾವು ಬಹು ಸಂತೋಷ ಪಡುವೆವು..................ಗತ ವರುಷಗಳಲ್ಲಿ ಕೆನರಿಸ್ ಮಿಶನಿನವರು ನಡಿಸಿದ ಸೇವೆಗಾಗಿಯೂ ಮಿಶನ್ ಕೆಲಸದ ಮತ್ತು ಬಾಸೆಲಿನಿಂದ ಸ್ಥಾಪಿತವಾದ ಸಭೆಗಳ ಕಡೆಗೆ ಅವರು ಸ್ಥಿರವಾಗಿ ತೋರಿಸುತ್ತಾ ಬಂದ ಪ್ರೀತಿಗಾಗಿಯೂ ನಾವು ತುಂಬಾ ಕೃತಜ್ಞರಾಗಿರುತ್ತೇವೆಂದು ಈ ಸಂದರ್ಭದಲ್ಲಿ ಬಹು ಸಂತೋಷದಿಂದ ನಿಮಗೆ ಹೇಳಬಲ್ಲೆವು, ಹಿಂದುಸ್ಥಾನಕ್ಕೆ ಇನ್ನು ಹಿಂತಿರುಗಿ ಬಾರದಿರುವ ಆ ಮಿಶನರಿಗಳನ್ನು ಕೂಡಾ ನೀವು ಕೃತಜ್ಞತಾಭಾವದಿಂದ ಜ್ಞಾಪಕದಲಿ ಇಟ್ಟುಕೊಂಡಿರಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ'.

'ನೀವು ನಿಮ್ಮ ಮಾತೆಯಾದ ಬಾಸೆಲ್ ಮಿಶನಿನ ಕಡೆಗೆ ತೋರಿಸಿದಂಥಾ ಮಮತೆಯು ನಮ್ಮ ಮನಸ್ಸಿಗೆ ನಾಟಿಯದೆ. ಮತ್ತು ನಾವು ಮರಳಿ ನಿಮ್ಮ ಮಧ್ಯೆ ಬರುವುದಕ್ಕೆ ಇದೇ ಒಂದು ಕಾರಣವಾಗಿತ್ತು. ಇದು ಮಾತ್ರವಲ್ಲದೆ, ನಮ್ಮಿಂದ ನಿಮ್ಮ ಬಳಿಗೆ ಕಳುಹಿಸಲ್ಪಟ್ಟ ಹಳೇ ಮಿಶನರಿಗಳಲ್ಲಿ ಮೊದಲನೆಯವರಿಗೆ ನೀವು ಆದರ ಪೂರ್ವಕವಾಗಿ ಮಾಡಿದ ಸ್ವಾಗತವು ಇನ್ನಷ್ಟು ನಮ್ಮ ಮನಸ್ಸಿಗೆ ತಾಗಿಯದೆ. ನಾವೂ ನಮ್ಮ ಮನಃ ಪೂರ್ವಕವಾದ ವಂದನೆಯನ್ನು ನಿಮಗೆ ತಿಳಿಸುತ್ತೇವೆ'.

'ಕಳೆದ ಹತ್ತು ವರುಷಗಳಲ್ಲಿ ನಿಮ್ಮ ಮಧ್ಯದಲ್ಲಿ ಅನೇಕ ಬದಲಾವಣೆಗಳು ಆಗಿಯವೆ ಎಂಬುದನ್ನು ನಾವು ಬಲ್ಲೆವು. ಮುಂಚಿನ ಕಾಲದಲ್ಲಿ ಇರದ ಕರ್ತವ್ಯ ಮತ್ತು ಸ್ವತಂತ್ರಗಳನ್ನೊಳಗೊಡಿದ ಹೊಸ ಸಭಾವ್ಯವಸ್ಥಾಪನಾ ಕ್ರಮಗಳೂ ನಿಮಗಿವೆ. ಹೀಗಿರುತ್ತಾ, ಬಾಸೆಲ್ ಮಿಶನ್ ಮರಳಿ ಬಂದು ಮಿಶನ್ ಕೆಲಸವನ್ನು ವಹಿಸಿಕೊಂಡದ್ದರಿಂದ, ಯುದ್ಧಕ್ಕೆ ಮೊದಲಿದ್ದಂಥಾ ಹಳೆಯ ಸ್ಥಿತಿಯೇ ನಿಮ್ಮ ಮಧ್ಯೆ ತಿರಿಗಿ ಬಂದೀತೆಂದು ಭಾವಿಸಲಾಗದು. ಈಗಿನ ಕಾಲದಲ್ಲಿ ಮಿಶನ್ ಕ್ಷೇತ್ರಗಳಲ್ಲಿ ಏನು ಬೇಕಾಗಿದೆ ಎಂಬುದನ್ನು ಬಾಸೆಲಿನಲ್ಲಿರುವ ನಾವು ಚೆನ್ನಾಗಿ ಬಲ್ಲೆವು. ಸಭೆಗಳು ಸ್ವತಂತ್ರಾಭಿಮುಖವಾಗಿ ಮುಂದುವರಿಯುವುದನ್ನು ನಾವು ಕಾಣಲು ತುಂಬಾ ಹರ್ಷಿತರಾಗುವೆವು. ಮುಖ್ಯವಾಗಿ ನಿಮ್ಮ ಆತ್ಮಿಕ ಬೆಳವಣಿಗೆಯಲ್ಲಿ ನಿಮ್ಮ ಸೇವೆ ಮೊದಲು ನಾವು ಅಪೇಕ್ಷಿಸುತ್ತೇವೆ ಮತ್ತು ನಮ್ಮಿಂದ ಕಳುಹಿಸಲ್ಪಟ್ಟ ಮಿಶನರಿಗಳು ದೇವರ ಜತೆ ಸೇವಕರಾಗಿ ಈ ಸೇವೆಯನ್ನು ಮಾಡಲಪೇಕ್ಷಿಸುವರೇ ಹೊರತು ಬೇರೇನೂ ಅಪೇಕ್ಷಿಸುವುದಿಲ್ಲ'.

20. ಯೂರೋಪದಿಂದ ಮಂಗಳೂರಿಗೆ ಬಂದು ತಲಪಿದ ಹಳೆ ಮಿಶನರಿಗಳ ಪುನರಾಗಮನ, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 8, ಮಂಗಳೂರು, ಫೆಬ್ರವರಿ, 1928, ಪುಟ 124.

21. ಎಸ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 130–132.

22. *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 10, ಮಂಗಳೂರು, ಏಪ್ರಿಲ್, 1928, ಪುಟ 157.

23. *ಸೆನ್ಸಸ್ ಆಫ್ ಇಂಡಿಯಾ, 1931*, ಸಂಪುಟ XXVIII, ಟ್ರಾವಂಕೂರು, ಭಾಗ–1, (ವರದಿ), ಸರಕಾರೀ ಪ್ರೆಸ್, ಟ್ರುವಾಂಡ್ರಾಮ್, 1932, ಪುಟ–338.

24. ಯುನೈಟೆಡ್ ತಿಯೊಲಜಿಕಲ್ ಕಾಲೇಜು.

25. ಎಸ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 133. ವಿಜಯ ಕುಮಾರ್, *ಎಕ್ಯುಮಿನಿಕಲ್ ಕೋ–ಅಪರೇಶನ್ ಆಫ್ ದಿ ಮಿಶನ್ಸ್ ಇನ್ ಕರ್ನಾಟಕ, (ಇಂಡಿಯಾ), 1834–1989: ಎ ಹಿಸ್ಟೋರಿಕಲ್ ಎನಾಲಿಸಿಸ್ ಆಫ್ ದಿ ಇವ್ಯಾಂಜಲಿಸ್ಟಿಕ್ ಸ್ಟ್ರ್ಯಾಟರ್ಜಿ ಆಫ್ ದಿ ಮಿಶನ್ಸ್*, ಐಎಸ್‌ಪಿಸಿಕೆ, ದೆಹಲಿ, 2005, ಪುಟ 122–223. ಗೋಡ್ವಿನ್ ಶಿರಿ (ಸಂಪಾದಿತ) *ಪೋಲಿನೆಸ್ ಇನ್ ಕ್ರೈಸ್ಟ್*, ದಿ ಕರ್ನಾಟಕ ತಿಯೋಲಜಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಬಲ್ಮಠ, ಮಂಗಳೂರು, 1985, ಪುಟ 101.

    In 1947 the B.E.M. Theological Seminary was affiliated to Serampore college for L.Th.

26. ಇನ್ನು ಮುಂದೆ ಯು.ಬಿ.ಎಮ್.ಸಿ.ಐ ಎಂದು ಉಲ್ಲೇಖಿಸಲಾಗುವುದು.

27. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 124.

28. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 134.

29. ಅದೆ, ಪುಟ 135.

30. ನೀರೆಬೈಲೂರು ಕ್ರೈಸ್ತರು, *ಸತ್ಯವ್ರತ*, ಸಂಪುಟ 3, ಸಂಚಿಕೆ 4, ಮಂಗಳೂರು, ಜನವರಿ, 1928, ಪುಟ–6.

31. ಅದೆ.

32. ಅದೆ.

33. ಕಾರ್ಕಳ ಠಾಣ್ಯದ ನವೀನ ಸೊಬಗು, *ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 5, ಮಂಗಳೂರು, 1ನೇ ಸೆಪ್ಟೆಂಬರ್, 1928, ಪುಟ 37.

34. ಅದೆ.

35. ಜಿಲ್ಲಾ ಸರ್ವಹಿರಿಯರ ಕೂಟ, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 5, ಮಂಗಳೂರು, ನವೆಂಬರ್, 1927, ಪುಟ 76. ಬಾಸೆಲ್ ಮಿಶನ್ ಡಿಸ್ಟ್ರಿಕ್ಟ್ ಸಿನಡ್, ಮಂಗಳರು, *ಬೋಧಕ ಬೋಧಿನಿ*, ಸಂಪುಟ 24, ಸಂಚಿಕೆ 1, ವೆಸ್ಲಿಯನ್ ಮಿಶನ್ ಮುದ್ರಾಲಯ, ಮೈಸೂರು, ಜನವರಿ, 1928, ಪುಟ 18–20.

36. ಅದೆ, ಪುಟ 76–77. ಅದೆ, ಪುಟ 20–22.

37. ಜಿಲ್ಲಾ ಸರ್ವಹಿರಿಯರ ಕೂಟ, *ಕ್ರೈಸ್ತ ಹಿತವಾದಿ*, ಪೂರ್ವೋಕ್ತ, ಪುಟ 76.

38. ಸನ್ಮಾನ್ಯ ವಾಚಕ ಮಹಾಶಯರಿಗೆ ಶುಭಮಸ್ತು, *ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 1, ಮಂಗಳೂರು, 1ನೇ ಜುಲೈ, 1928, ಪುಟ 1.
'ನಾನು ಈ ತೀರದಲ್ಲಿ ನನ್ನಂಥ ವಿವಿಧ ಬಂಧುಗಳಿಗಿಂತ ಬಹು ಮೊದಲೇ ಜನಿಸಿ, ಈಗ 85 ವರುಷ ಪ್ರಾಯದ ವೃದ್ಧನಾಗಿ ತನ್ಮಧ್ಯೆ ವಿವಿಧ ಮಾರ್ಪಾಟುಹೊಂದಿ ಬಾಹ್ಯವಾದ ನಾನಾ ವೇಷಗಳನ್ನು ಧರಿಸಿದರೂ ನನ್ನ ಜನ್ಮದಿಂದ, ಯುದ್ಧಕಾಲ ನಾನು ಮೌನವಾಗಿದ್ದ 9 ವರುಷಗಳ ಕಾಲ ಬಿಟ್ಟು ಈ ವರೆಗೆ ನನಗೆ ಇರುತ್ತಿದ್ದ ಉದ್ದೇಶವು ಒಂದೇ. ನಾನು 'ಕನ್ನಡ ಸಮಾಚಾರ', 'ಕನ್ನಡ ಸುವಾರ್ತೆ', 'ಕರ್ಣಾಟಕ ಪತ್ರಿಕೆ,' 'ಸಭಾಪತ್ರ', 'ಬಾಲಪತ್ರ', 'ಸತ್ಯದೀಪಿಕೆ', 'ಕ್ರೈಸ್ತಹಿತವಾದಿ', ಎಂಬ ವಿವಿಧ ನಾಮಗಳಲ್ಲಿ ನಿಮ್ಮ ಮುಂದೆ ಪ್ರತ್ಯಕ್ಷವಾದಾಗ್ಯೂ ನನ್ನ ಧ್ಯೇಯವು ಸರ್ವದಾ ಒಂದೇಯಾಗಿದೆ.

39. ಅದೆ.

40. ಅದೇ.

41. ಅದೇ, ಪುಟ 1–2.

42. *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 2, ಮಂಗಳೂರು, ಆಗಸ್ಟ್, 1927, ಪುಟ 25.

43. ಅದೇ.

44. ಒಂದು ವರ್ಷ ದಾಟಿತು, *ಸತ್ಯವ್ರತ*, ಸಂಪುಟ 3, ಸಂಚಿಕೆ 9, ಮಂಗಳೂರು, ಜೂನ್, 1928, ಪುಟ 3.

45. ಅದೇ.

46. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 8, ಮಂಗಳೂರು, ಫೆಬ್ರವರಿ, 1928, ಪುಟ 125.

47. ಎನ್.ಸಿ.ಸಾರ್ಜೆಂಟ್, *ಪೂರ್ವೋಕ್ತ*, ಪುಟ 135–136.

48. ಅದೇ, ಪುಟ 137. ಕ್ರಿಸ್ಟೋಫರ್ ಎಲ್. ಪುರ್ಟಾಡೋ, *ಪೂರ್ವೋಕ್ತ*, ಪುಟ 9.

    "We have noticed your leonine roar,' these are the Kaiser's orders'….. The Director of the mission came and went…. The path of a would rogue elephant might present a more pitiful appearance. His advent has left behind a worse picture than was existing before…. We have been sold as salves to our present masters in Base. Our own Kith and Kin have helped you to chain us down more heavily than your alone could manage".

49. ಬಾಸೆಲ್ ಮಿಶನ್ ಹೋಮ್ ಕಮಿಟಿಯ ಡೆರೈಕ್ಟರರಾದ ರೆವೆ. ಕೆ. ಹರ್ಟೆನ್‌ಸ್ಟೈನ್ ದೊರೆಗಳು ದಕ್ಷಿಣ ಕನ್ನಡ ಜಿಲ್ಲಾ ಸರ್ವಹಿರಿಯರ ಕೂಟದಲ್ಲಿ ಮಾಡಿದ ಎರಡನೆಯ ಭಾಷಣ, *ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 11, ಮಂಗಳೂರು, 1ನೇ ಡಿಸೆಂಬರ್, 1928, ಪುಟ 81.

50. ಅದೇ, ಪುಟ 82.

51. ಅದೇ, ಪುಟ 83.

52. ಅದೇ, ಪುಟ 83–84.

53. ಕ್ರಿಸ್ಟೋಫರ್ ಎಲ್. ಪುರ್ಟಾಡೋ, *ಪೂರ್ವೋಕ್ತ*, ಪುಟ 9.

54. ವರ್ತಮಾನಸಾರ, *ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 4, ಮಂಗಳೂರು, 16ನೇ ಆಗಸ್ಟ್, 1928, ಪುಟ 30.

55. *ಕ್ರೈಸ್ತ ಹಿತವಾದಿ*, ಸಂಪುಟ 6, ಸಂಚಿಕೆ 23, ಮಂಗಳೂರು, 15ನೇ ಜೂನ್, 1930, ಪುಟ 23.

56. *ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 2, ಮಂಗಳೂರು, 16ನೇ ಜುಲೈ, 1928, ಪುಟ 12.

57. ಅದೆ, ಪುಟ 13.

58. *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 4, ಮಂಗಳೂರು, ಅಕ್ಟೋಬರ್, 1927, ಪುಟ 61.

59. ಎನ್. ಸಿ. ಸಾರ್ಜೆಟ್, *ಪೂರ್ವೋಕ್ತ*, ಪುಟ 141.

60. ನೀಲಗಿರಿಯ ಬಾಸೆಲ್ ಮಿಶನ್ ಸಭೆಯವರು ಜರುಗಿಸಿದ ಸಭಾ ಕೂಟವು, *ಕ್ರೈಸ್ತ ಹಿತವಾದಿ*, ಸಂಪುಟ 7, ಸಂಚಿಕೆ 16, ಮಂಗಳೂರು, 1ನೇ ಮಾರ್ಚ್, 1931, ಪುಟ 124.
ಜಿಲ್ಲಾ ಪಂಚಾಯಿತಿ ಸಭೆಗೆ ಆರಿಸಲ್ಪಟ್ಟ ಕಮಿಟಿ ಮೆಂಬರುಗಳೆಂದರೆ: ಎ. ಎಸ್. ಮಲ್ಲಿ, ಚೇಯರ್ಮೆನ್; ಎ. ಸಾಮುವೇಲ್ ಮತ್ತು ಯೋಸೆಫ್ ಚಿನ್ನಮೀಥ, ವೈಸ್ ಚೇಯರ್ಮೆನ್; ಮನೋಹ ಪಿ. ಡೇವಿಡ್, ಜನರಲ್ ಸೆಕ್ರೆಟರಿ; ಇ.ಬಿ. ಮೋಸೆಸ್ ಮತ್ತು ಯೋಶುವ ಫಿಲಿಪ್, ಅಸಿಸ್ಟೆಂಟ್ ಸೆಕ್ರೆಟರಿ.

61. ಅದೆ, ಪುಟ 124–125.

62. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 141.

63. ನೀಲಗಿರಿಯಲ್ಲಿ ಹೊಸತೊಂದು ಮೆಥೊಡಿಸ್ಟ್ ದೇವಾಲಯವು ಪ್ರತಿಷ್ಠೆಯಾದದ್ದು, *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 5, ಮಂಗಳೂರು, 1ನೇ ಸೆಪ್ಟೆಂಬರ್, 1934, ಪುಟ 93.

64. *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 5, ಮಂಗಳೂರು, 1ನೇ ಸೆಪ್ಟೆಂಬರ್, 1934, ಪುಟ 92.

65. *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 4, ಮಂಗಳೂರು, ಅಕ್ಟೋಬರ್, 1927, ಪುಟ 61.

66. ಎನ್. ಸಿ. ಸಾರ್ಜೆಟ್, *ಪೂರ್ವೋಕ್ತ*, ಪುಟ 141.

67. ಇನ್ನು ಮುಂದೆ ಡಿ. ಸಿ. ಸಿ. ಎಂಬುದಾಗಿ ಉಲ್ಲೇಖಿಸಲಾಗುವುದು.

68. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 142. ಕ್ರಿಸ್ಟೋಫರ್ ಎಲ್. ಪುರ್ಟಾಡೊ, *ಪೂರ್ವೋಕ್ತ*, ಪುಟ 10.

These were the chairman of the DCC, one chosen by this body and two others nominated by the mission council itself.

69. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 142. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 10.

70. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 10.

    'A sustained and successful effort….. to secure the return of the German missionaries, little thinking that these missionaries will come back without a change of heart'.

71. ಅದೆ, ಪುಟ 10–11.

72. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 143.

73. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 11.

    'It is resolved to approve the action of the Malabar church council in writing with the churches in South Kanara and South Maratha on the understanding that such action will probably lead to union with the SIUC, and that this union will lead to a larger union'.

74. ಇನ್ನು ಮುಂದೆ ಯು.ಬಿ.ಎಮ್.ಸಿ.ಐ ಎಂದು ಉಲ್ಲೇಖಿಸಲಾಗುವುದು.

75. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 145–146. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 11.

76. ಜ್ಯಾಕ್ಸ್ ರೋಸೆಲ್, *ಟ್ರ್ಯಾಕಿಂಗ್ ಕ್ರಿಶ್ಚಿಯಾನಿಟಿ ವರ್ಲ್ಡ್‌ವೈಡ್*, ಏಷ್ಯನ್ ಟ್ರೇಡಿಂಗ್ ಕಾರ್ಪೋರೇಶನ್, ಬೆಂಗಳೂರು, 2010, ಪುಟ 105.

77. *ಕ್ರೈಸ್ತ ಹಿತವಾದಿ*, ಸಂಪುಟ 7, ಸಂಚಿಕೆ 2, ಮಂಗಳೂರು, 1ನೇ ಆಗಸ್ಟ್, 1930, ಪುಟ 13.

78. ಧಾರವಾಡದಲ್ಲಿ ಲುಡ್‌ವಿಗ್ ಬೈಯರ್ [Ludwig Bier], ಕಾರ್ಕಳದಲ್ಲಿ ಜೋನ್ನೆಸ್ಸ್ ದೌಬ್ [Johannes Daub], ಬೆಟಗೇರಿಯಲ್ಲಿ ಮಾರ್ಗರೇಟ್ ವಾರ್‌ಸೇರ್‌ಸೈಕ್ [Margaret warsersik], ಉಡುಪಿಯಲ್ಲಿ ಕ್ಯತರೀನ್ ಕುಹನೇರ್ [Katherin Kuhner], 1934ರಲ್ಲಿ ಅರ್‌ನಾಲ್ಡ್ ವ್ಹೆಸ್‌ಮ್ಯಾನ್ [Arnold wessman], ಉಡುಪಿಯಲ್ಲಿ 1935ರಲ್ಲಿ ಹಾನ್ನ ಹೆಸ್ಪಮನ್ [Hanna Aeschimann], ಹಾನ್ನ ಸ್ವೈಟ್‌ಜರ್ [Hanna Schweitzer], 1937ರಲ್ಲಿ ಎಲ್ಫ್ರಡೇ

ರಾಪೋಲ್ಡ್ [Elbriede Rappold], 1938 ರಲ್ಲಿ ಸೂಸನ್ನೆ ಫ್ಲಿಯ್ಯುರೀ [Susanne Fleury] ಮುಂತಾದ ಮಿಶನರಿಗಳು ತಮ್ಮ ಕಾರ್ಯವನ್ನು ಆರಂಭಿಸುತ್ತಾರೆ.

79. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 147–151.

80. *ಕ್ರೈಸ್ತ ಹಿತವಾದಿ*, ಪೂರ್ವೋಕ್ತ, ಪುಟ 12.
ಚೀನದಲ್ಲಿ 432 ಪ್ರಾಯಸ್ತರು ಮತ್ತು 102 ಮಕ್ಕಳು, ಬೋರ್ನಿಯೋದಲ್ಲಿ 148 ಪ್ರಾಯಸ್ಥರು ಮತ್ತು 37 ಮಕ್ಕಳು, ಗೋಲ್ಡ್‌ಕೋಸ್ಟ್‌ನಲ್ಲಿ 286 ಪ್ರಾಯಸ್ಥರು ಮತ್ತು 46 ಮಕ್ಕಳು ಹಾಗೂ ಕಮರೊನ್‌ನಲ್ಲಿ 1,483 ಪ್ರಾಯಸ್ಥರು ಮತ್ತು 374 ಮಕ್ಕಳು ಅನ್ಯಮತದಿಂದ ಬಾಸೆಲ್ ಮಿಶನ್ ಕ್ರೈಸ್ತರಾಗಿದ್ದರು.

81. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 151–152.

82. *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 10, ಮಂಗಳೂರು, 16ನೇ ನವೆಂಬರ್, 1934, ಪುಟ 180.

83. ಅದೆ, ಪುಟ 180–181.

84. ಜರ್ಮನಿಯ ಸೌವಾರ್ತಿಕ ಸಭೆಗಳೂ ಮಿಶನ್ ಸೇವೆಯೂ, *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 2, ಸಂಚಿಕೆ 20, ಮಂಗಳೂರು, 16ನೇ ಏಪ್ರಿಲ್, 1934, ಪುಟ 306–307.

85. *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 15, ಮಂಗಳೂರು, 1ನೇ ಫೆಬ್ರವರಿ, 1935, ಪುಟ 274.

86. *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಪೂರ್ವೋಕ್ತ, ಪುಟ 181.

87. ಎನ್. ಸಿ. ಸಾರ್ಜೆಂಟ್, ಪೂರ್ವೋಕ್ತ, ಪುಟ 152.

88. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ 218–223.

89. ವಿಜಯ ಕುಮಾರ್, *ಎಕ್ಯುಮೇನಿಕಲ್ ಕೋಪರೇಶನ್ ಆಫ್ ದಿ ಮಿಶನ್ಸ್ ಇನ್ ಕರ್ನಾಟಕ (ಇಂಡಿಯಾ), 1834–1989: ಎ ಹಿಸ್ಟೋರಿಕಲ್ ಎನಾಲಿಸಿಸ್ ಆಫ್ ದಿ ಇವ್ಯಾಂಜಲಿಸ್ಟಿಕ್ ಸ್ಟ್ರಾಟರ್ಜಿ ಆಫ್ ದಿ ಮಿಶನ್ಸ್*, ಐಎಸ್‌ಪಿಸಿಕೆ, ದೆಹಲಿ, 2005, ಪುಟ 167–168.

90. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ 70.

91. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 170–173.

92. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ 71.

'........ I explained in my halting English the danger the churches faced from Nazi politics and the difficulties churches were suffering in Germany, to the great astonishment of the Anglo-saxons among us, who would not believe that Nazism was a kind of religion. I learnt from the Germans at the conference that on their return to Germany they would have to give an account of the conference to the Nazis and tell them what they had said in India. The leader of the Germans at the conference, Karl Hartenstein, who was also the Director of the Basel Mission, asked that the German missionaries report should be included in the conferences general report'.

93. ಅದೆ.

94. ಅದೆ, ಪುಟ 72–73.

'...... there was a German missionary who was probably a Nazi. She asked me if I thought Switzerland would go the same way as Austria had gone in 1938 and be annexed by Germany, welcoming the Germans with enthusiasm'.

95. ಅದೆ, ಪುಟ 73.

'The day will come when you swiss will be Germans too'

96. ಅದೆ, ಪುಟ 74–75.

97. *ಕರ್ಣಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 4, ಮಂಗಳೂರು, 16ನೇ ಆಗಸ್ಟ್, 1934, ಪುಟ 63.

98. *ಬಾಸ್ಲರ್ ಮಿಶನ್‌ಬರಿಚಟ್ [Basler missionbericht] 1904*, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1905, ಪುಟ 40.

99. *27th ಅನ್ಯುವಲ್ ರಿಪೋರ್ಟ್ ಆಪ್ ದಿ ಬಾಸೆಲ್ ಇವ್ಯಾಂಜಲಿಕಲ್ ಮಿಶನರಿ ಸೊಸೈಟಿ ಫಾರ್ ದಿ ಇಯರ್ 1874*, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1875, ಪುಟ 11.

Physical contact with a convert is considered to make an orthodox Hindu unclean. Converts have been regarded as outcasts and even their nearest relations gave up all intercourse with one who embraced Christianity.

100. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 186–188.

101. ಜೋರ್ಜ್ ಹರ್ಬಟ್, *ಸತ್ಯವ್ರತ*, ಸಂಪುಟ 2, ಸಂಚಿಕೆ 10, ಮಂಗಳೂರು, ಜುಲೈ, 1927, ಪುಟ 8.

102. ಅದೆ, ಪುಟ 8–9.

'Our German missionaries as they grew in experience, soon realised that to conquer us and to overthrow us they must use our own men against us. They practiced this very effectively, as occasion arose. This must prove an eye opener to us and must teach us to close our ranks and to stand united when our dearest interests are at stake!

103. ಅದೆ, ಪುಟ 9.

'The German missionaries while leaving us in 1914abruptly, committed a grave blunder which I feel sure, they must have sincerely and surely regretted later on. They would not and did not trust their Indian colleagues and therefore did not confide their affairs in them'.

104. ಮಿಶನ್ ಮಂಡಲಿಯೂ ವಿದ್ಯಾಪ್ರಚಾರವೂ, *ಸತ್ಯವ್ರತ*, ಸಂಪುಟ 1, ಸಂಚಿಕೆ 9, ಮಂಗಳೂರು, ಜೂನ್, 1926, ಪುಟ 5.

105. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ 106.

106. *ಕರ್ಣಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 10, ಮಂಗಳೂರು, 16ನೇ ನವೆಂಬರ್, 1934, ಪುಟ 177.

107. *ಸತ್ಯವ್ರತ*, ಸಂಪುಟ 3, ಸಂಚಿಕೆ 1, ಮಂಗಳೂರು, ಅಕ್ಟೋಬರ್, 1927, ಪುಟ 15–16.

108. *ಸತ್ಯವ್ರತ*, ಸಂಪುಟ 3, ಸಂಚಿಕೆ 1, ಮಂಗಳೂರು, ಆಗಸ್ಟ್, 1928, ಪುಟ 10.

109. ವರ್ತಮಾನ ಸಂಗ್ರಹ, *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 2, ಸಂಚಿಕೆ 12, ಮಂಗಳೂರು, 16ನೇ ಡಿಸೆಂಬರ್, 1933, ಪುಟ 185.

110. 'ಸತ್ಯವ್ರತ' ನಿಗೆ ಪ್ರೋತ್ಸಾಹ, *ಸತ್ಯವ್ರತ*, ಸಂಪುಟ 3, ಸಂಚಿಕೆ 8, ಮಂಗಳೂರು, ಮೇ, 1928, ಪುಟ 5.

111. ಪಕ್ಷ ಪತ್ರಿಕೆ, *ಸತ್ಯವ್ರತ*, ಸಂಪುಟ 3, ಸಂಚಿಕೆ 10, ಮಂಗಳೂರು, ಜುಲೈ, 1928, ಪುಟ 10.

112. ಹೊಸ ಪೋಷಾಕಿನ ಹಳಬ, *ಸತ್ಯವ್ರತ*, ಸಂಪುಟ 3, ಸಂಚಿಕೆ 10, ಮಂಗಳೂರು, ಜುಲೈ, ಪುಟ 12.

113. *ಕ್ರೈಸ್ತ ಹಿತವಾದಿ*, ಸಂಪುಟ 6, ಸಂಚಿಕೆ 4, ಮಂಗಳೂರು, 1ನೇ ಸೆಪ್ಟೆಂಬರ್, 1929, ಪುಟ 29.

114. 'ಕ್ರೈಸ್ತ ಹಿತವಾದಿ'ಯ ಸಂಪಾದಕರು 'ಸತ್ಯವ್ರತ'ದ ಸಂಪಾದಕರ ಮೇಲೆ ಮಾಡಿದ ಮಾನನಷ್ಟದ ಮೊಕದ್ದಮೆ ಅಂತ್ಯವಾಯಿತು, *ಕ್ರೈಸ್ತ ಹಿತವಾದಿ*, ಸಂಪುಟ 7, ಸಂಚಿಕೆ 19, ಮಂಗಳೂರು, 16ನೇ ಏಪ್ರಿಲ್, 1931, ಪುಟ 150–151.

'I hereby express my sincere and unqualified regret and apology for the articles that I wrote or that appeared in my newspaper concerning the complainant. They were written in the heat of the moment and in the course of a newspaper controversy and as the complainant feels that there are allegations, insinuations and imputations therein that are defamatory of him, I hereby withdraw all of them!'

ಅಧ್ಯಾಯ: ನಾಲ್ಕು

ಸ್ವಾಯತ್ತ ಚರ್ಚ್‌ನತ್ತ ಬಾಸೆಲ್ ಮಿಶನ್

ಅಧ್ಯಾಯ: ನಾಲ್ಕು
ಸ್ವಾಯತ್ತ ಚರ್ಚ್‌ನತ್ತ ಬಾಸೆಲ್ ಮಿಶನ್

ಎರಡನೇ ಜಾಗತಿಕ ಯುದ್ಧದ ಆರಂಭವು ಬ್ರಿಟಿಷ್ ಸರಕಾರ ಬಾಸೆಲ್ ಮಿಶನಿನ ಮೇಲೆ ನಿರ್ಬಂಧ ಹೇರುವುದಕ್ಕೆ ಕಾರಣವಾಗುತ್ತದೆ. ಬ್ರಿಟಿಷ್ ಸರಕಾರವು ಯುದ್ಧ ಆರಂಭವಾಗುತ್ತಿದ್ದಂತೆ 'ದಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್, 1939' (The Defense of India Act, 1939) ಹಾಗೂ 'ಫೋರಿನರ್ಸ್ ಓರ್ಡರ್, 1939'ನ್ನು (Foreigners order, 1939) ಜಾರಿಗೊಳಿಸಿ, ಬಾಸೆಲ್ ಮಿಶನ್ ಸೇರಿದಂತೆ, ಜರ್ಮನ್ ನಾಗರೀಕರಿರುವ ಎಲ್ಲಾ ಮಿಶನರಿ ಸಂಘಟನೆಗಳನ್ನು 'ವೈರಿ ದೇಶದ ಸಂಘಟನೆ'ಗಳೆಂದು (organizations of enemy alien nations) ಘೋಷಿಸಿ, ಈ ಮಿಶನುಗಳ ಕಾರ್ಯಾಚರಣೆಯ ಮೇಲೆ ನಿರ್ಬಂಧವನ್ನು ಹೇರಿ, ತನ್ನ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತದೆ. ಮತ್ತೊಂದೆಡೆ ಯುರೋಪಿನಲ್ಲಿ ಯುದ್ಧ ಆರಂಭವಾಗುತ್ತಿದ್ದಂತೆ ಬಾಸೆಲ್ ಮಿಶನ್ ತನ್ನ ಮಿಶನ್ ಭದ್ರತೆಗೆ ಬೇಕಾದಂತಹ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನವನ್ನು ನೀಡುತ್ತದೆ. ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಿಲ್ ಡಾ. ಬುರ್ಕಾರ್ಡಾಟ್‌ರವರಿಗೆ[1] [Dr. Burckhardt] ಮಾಹಿತಿಯನ್ನು ರವಾನಿಸಿ, ಸರಕಾರವು ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಬಂಧಿಸಬಹುದಾದ ಸಾಧ್ಯತೆಗಳ ಬಗ್ಗೆ ಮಾಹಿತಿಯನ್ನು ರವಾನಿಸಿರುತ್ತದೆ. 1939ರ ಸೆಪ್ಟೆಂಬರ್‌ನಲ್ಲಿ ದಕ್ಷಿಣ ಕೆನರಾದಲ್ಲಿದ್ದ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಬಂಧಿಸಿ ಮದ್ರಾಸ್‌ಗೆ ಕಳುಹಿಸಲಾಗುತ್ತದೆ. ಅದೇ ರೀತಿ ಮಲಬಾರ್‌ನಲ್ಲಿದ್ದ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಮದ್ರಾಸ್‌ಗೆ ಕಳುಹಿಸಲಾಗುತ್ತದೆ. ಮತಿಲ್‌ಡೇ ದೌಬ್‌ರವರ [mathilde Daub] ಪತ್ನಿ ಹಾಗೂ ಇತರ ಕೆಲವು ಮಿಶನರಿಗಳ ಪತ್ನಿಯಂದಿರನ್ನು[2] ಮಂಗಳೂರು ಹಾಗೂ ಉಡುಪಿಯಲ್ಲಿ ಉಳಿಯಲು ಸರಕಾರವು ಅನುಮತಿಯನ್ನು ನೀಡುತ್ತದೆ. ಬಾಂಬೆ ಕರ್ನಾಟಕದಲ್ಲಿನ ಮಿಶನರಿಗಳಾದ ಎರ್ನಸ್ಟ್ ಹಸ್ [Earnst Has], ಲುಡ್‌ವಿಗ್ ಬೈರ್ [Ludwig Bier] ಮತ್ತು ಕಾರ್ಲ್ ಬಾರಿಸ್ಸ್‌ರವರುಗಳನ್ನು [Karl Bariess] ಅಹಮದ್‌ನಗರಕ್ಕೆ ಕಲುಹಿಸಲಾಗುತ್ತದೆ. ಈ ಮಿಶನರಿಗಳ ಪತ್ನಿಯರು ಹಾಗೂ ಇಲ್‌ಫ್ರೈಡೇ ರಾ ಪೋಲ್ಡ್‌ರವರಿಗೆ [Elfriede Rappold] ಕ್ರಮವಾಗಿ ಧಾರವಾಡ ಮತ್ತು ಬೆಟಗೇರಿಗಳಲ್ಲಿ ಉಳಿಯಲು ಅನುವು ಮಾಡಿಕೊಡಲಾಗುತ್ತದೆ. ಬಂಧಿತ ಎಲ್ಲಾ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಅಹಮದ್ ನಗರದ ಕ್ಯಾಂಪ್‌ಗೆ ವರ್ಗಾಯಿಸಲಾಗುತ್ತದೆ. ಮಿಶನ್ ಠಾಣ್ಯಗಳಲ್ಲಿ ಉಳಿದಿದ್ದ ಮಹಿಳಾ ಮಿಶನರಿಗಳು ಹಾಗೂ ಮಿಶನರಿಗಳ ಪತ್ನಿಯರು ದಿನನಿತ್ಯ

ಪೋಲೀಸರಿಗೆ ವರದಿ ಮಾಡಬೇಕಾಗಿತ್ತು. ಅದೇ ರೀತಿ ಅವರು ವಾಸವಿದ್ದ ಪ್ರದೇಶದ 5 ಮೈಲು ವ್ಯಾಪ್ತಿಯೊಳಗಡೆ ಮಾತ್ರ ಸಂಚರಿಸಬಹುದಿತ್ತು.[3]

ಜಾಗತಿಕ ಸಮರದ ಕಾಲದಲ್ಲಿ ಮಿಶನಿನ ನಿರ್ವಹಣೆ:

ಬಂಧಿಸಿದ ಮಿಶನರಿಗಳನ್ನು ಬಿಡುಗಡೆಗೊಳಿಸಬೇಕೆಂಬ ಪ್ರಬಲವಾದ ಒತ್ತಡಗಳ ಕಾರಣದಿಂದ ಬ್ರಿಟಿಷ್ ಸರಕಾರ 1940ನೇ ಫೆಬ್ರವರಿಯಲ್ಲಿ ಮಿಶನರಿಗಳನ್ನು ಮುಕ್ತಗೊಳಿಸುತ್ತದೆ. ಇದರ ಬಳಿಕ ಕೆಲವು ಮಿಶನರಿಗಳು ತಮ್ಮ ಕುಟುಂಬ ಸಮೇತ ಸ್ವದೇಶಕ್ಕೆ ತೆರಳುತ್ತಾರೆ. ಆದರೆ ಯುರೋಪಿನ ಮೇಲೆ ಜರ್ಮನ್ ಆಕ್ರಮಣದ ಭೀತಿ ಹೆಚ್ಚಾಗುತ್ತಿದ್ದಂತೆ, 1ನೇ ಜೂನ್ 1940ರಂದು ಬಾಸೆಲ್ ಮಿಶನಿನ ಎಲ್ಲಾ ಜರ್ಮನ್ ಮಿಶನರಿಗಳನ್ನು ಬಂಧಿಸಿ ಕೊಡೈಕೆನಾಲ್‌ನಲ್ಲಿ [Kodaikanal] ಸರಹದ್ದಿನ ಬಂಧನಕ್ಕೆ ಒಳಪಡಿಸಲಾಗುತ್ತದೆ. ಬಾಸೆಲ್ ಮಿಶನ್ ಠಾಣ್ಯಗಳಲ್ಲಿ ಮಹಿಳಾ ಮಿಶನರಿಗಳು ಮುಂದುವರಿಯಲು ಅನುವು ಮಾಡಿಕೊಟ್ಟರೂ, ಅವರು ಪ್ರಬಲ ಪೋಲೀಸ್ ಕಣ್ಗಾವಲಲ್ಲಿ ಇರಬೇಕಿತ್ತು. ಈ ಮಹಿಳಾ ಮಿಶನರಿಗಳಿಗೆ ನೀಲಗಿರಿಗೆ ತೆರಳುವುದನ್ನು ನಿರ್ಬಂಧಿಸಿದ್ದರಿಂದ, ಅವರು ತಮ್ಮ ರಜಾ ದಿನಗಳನ್ನು ಮರ್ಕೆರಾದಲ್ಲಿ [mercara] ಕಳೆಯಬೇಕಾಗಿತ್ತು. ಎರಡನೇ ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಜರ್ಮನ್ ಹಾಗೂ ಸ್ವಿಸ್ ಮಿಶನರಿಗಳ ನಡುವಿನ ಸಂಬಂಧ ಬಹಳಷ್ಟು ಉತ್ತಮವಾಗಿತ್ತು. ಈ ಸಂದರ್ಭದಲ್ಲಿ ಬಾಸೆಲ್ ಮಿಶನ್ ಠಾಣ್ಯಗಳ ಜವಾಬ್ದಾರಿಯನ್ನು ಬಾಸೆಲ್ ಮಿಶನಿನ ಸಮರ್ಥ ಸ್ವಿಸ್ ಮಿಶನರಿಗಳು ನಿರ್ವಹಿಸುತ್ತಾರೆ. ಮಂಗಳೂರಿನಲ್ಲಿ ಡಾ. ಬುರ್ಕಾರ್ಡ್ಟ್ [Dr. Burckhardt], ಹುಬ್ಬಳ್ಳಿಯಲ್ಲಿ ನೊವೆರಾಜ್ [Noverraz] ಮತ್ತು ಮಲಬಾರ್‌ನ ಕ್ಯಾಲಿಕಟ್‌ನಲ್ಲಿ ಮಿಶನಿನ ಜನರಲ್ ಪ್ರೆಸಿಡೆಂಟ್ ಆಗಿದ್ದ ಸ್ಟ್ರೈಸೇನ್ [Streckeisen] ರವರು ಮಿಶನಿನ ನಾಯಕತ್ವವನ್ನು ವಹಿಸಿ, ನಿರ್ವಹಿಸಿ, ಅದು ಪತನವಾಗದಂತೆ ನೋಡಿಕೊಂಡಿದ್ದರು. ಸ್ಟ್ರೈಸೇನ್‌ರವರು ನಿರಂತರವಾಗಿ ದಕ್ಷಿಣ ಕೆನರಾ ಹಾಗೂ ಬಾಂಬೆ ಕರ್ನಾಟಕದ ಮಿಶನ್ ಪ್ರದೇಶಗಳಿಗೂ ಭೇಟಿ ನೀಡುತ್ತಿದ್ದರು. ಯುದ್ಧದ ಕಾಲಾವಧಿಯಲ್ಲಿ ಮಿಶನರಿಗಳ ಪತ್ರ ವ್ಯವಹಾರಗಳ ಮೇಲೆ ನಿರ್ಬಂಧವಿದ್ದು, [cesorship] ಅವರು ಪತ್ರಗಳನ್ನು ಇಂಗ್ಲೀಷ್ ಭಾಷೆಯಲ್ಲೇ ಬರೆಯಬೇಕಿತ್ತು.[4]

ಎರಡನೇ ಜಾಗತಿಕ ಯುದ್ಧವು ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತತೆಯತ್ತ ಚಲಿಸಲು ಕಾರಣವಾಯಿತೆನ್ನಬಹುದು. ಯುದ್ಧದ ಕಾಲಾವಧಿಯಲ್ಲಿ ಬ್ರಿಟಿಷ್ ಸರಕಾರ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳ ಮೇಲೆ ನಿರ್ಬಂಧ ಹೇರಿದ್ದರಿಂದ, ಕೆಲವೇ ಸ್ವಿಸ್ ಮಿಶನರಿಗಳು ಜವಾಬ್ದಾರಿಯಲ್ಲಿ ಮುಂದುವರಿಯುವಂತಾಗುತ್ತಾರೆ. ಆದರೆ ವಿಸ್ತಾರವಾದ ಮಿಶನ್ ಕಾರ್ಯವನ್ನು

ನಿರ್ವಹಿಸುವಲ್ಲಿ ಅವರು ಸಾಧ್ಯವಾದಷ್ಟು ಭಾರತೀಯರನ್ನು ಸೇರಿಸಿಕೊಂಡು ಮುಂದುವರಿಯುತ್ತಾರೆ. ಮಿಶನ್ ಅಧ್ಯಕ್ಷರಾಗಿದ್ದ ಸ್ಪ್ರೈಸೇನ್‌ರವರು ಯುದ್ಧದ ಕಾಲಾವಧಿಯಲ್ಲಿ ಭಾರತದಲ್ಲಿ ನಡೆಯುತ್ತಿದ್ದ ಹಾಗೂ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದಲ್ಲಿ ನಡೆಯುತ್ತಿದ್ದ ಗುರುತರವಾದ ಬದಲಾವಣೆಗಳನ್ನು ಬಹಳಷ್ಟು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಯುದ್ಧದ ಕಾಲಾವಧಿಯಲ್ಲಿ ಭಾರತೀಯ ಚರ್ಚ್‌ಗಳು ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಂಡಿರುವುದನ್ನು ಮನಗಂಡಿದ್ದ ಅವರು ಭವಿಷ್ಯತ್ತಿನಲ್ಲಿ ಚರ್ಚುಗಳ ಜವಾಬ್ದಾರಿ ಭಾರತೀಯರ ಕೈಯಲ್ಲೇ ಮುಂದುವರಿಯಲಿದೆ ಎಂಬುದನ್ನು ಉಲ್ಲೇಖಿಸಿದ್ದರು. ಯುದ್ಧವು ಮುಂದುವರಿಯುತ್ತಿದ್ದಂತೆ, ಇತ್ತ ಚರ್ಚುಗಳು ಹೆಚ್ಚು ಹೆಚ್ಚು ಸ್ವತಂತ್ರವನ್ನು ಪಡೆದು ಮುಂದುವರಿಯುತ್ತಿದ್ದವು. ಹೀಗೆ ಯುದ್ಧವು ಚರ್ಚುಗಳು ಸ್ವಾಯತ್ತತೆ ಪಡೆಯುವ ಪ್ರಕ್ರಿಯೆಗೆ ಚಾಲನೆಯನ್ನು ನೀಡಿತು ಎನ್ನಬಹುದು. ಮಿಶನ್ ಭಾರತೀಯ ಪಾಸ್ಟರ್‌ಗಳಿಗೆ [pastors] ಮಿಶನ್ ಠಾಣ್ಯಗಳ ಜವಾಬ್ದಾರಿ ವಹಿಸುವಂತೆ ತಿಳಿಸುತ್ತದೆ. ಚರ್ಚಿನ ಅಧ್ಯಕ್ಷರುಗಳನ್ನು [Church Chairman] ಪ್ರತಿ ಜಿಲ್ಲಾ ಮಿಶನ್ ಕೌನ್ಸಲ್‌ನ ಅಧ್ಯಕ್ಷರಾಗುವಂತೆ [chairmen of the mission council] ಅವಕಾಶವನ್ನು ನೀಡಲಾಗುತ್ತದೆ. ಪಾಸ್ಟರ್‌ಗಳಾಗಿದ್ದ ಪೆನ್‌ಯೋಲ್ ಸೋನ್ಸ್ [penuel soans] ರವರು ಕಾಸರಗೋಡಿನಲ್ಲಿ, ಎಮ್.ಇ. ಸಟ್‌ವಾಟರವರು [M.E.Satwata] ಕಾರ್ಕಳದಲ್ಲಿ, ಸಂಜೀವ ರಾವ್‌ರವರು [Sanjiva Rao] ಬಾಂಬೆ ಕರ್ನಾಟಕದ ಸುಮಡ್ಡಿಯಲ್ಲಿನ [Sumaddi] ಮಿಶನ್ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಹೀಗೆ ಯುದ್ಧದಿಂದಾಗಿ ನಿರ್ಮಾಣವಾದ ಪರಿಸ್ಥಿತಿಯು ನಿಧಾನವಾಗಿ ಹಲವು ಜವಾಬ್ದಾರಿಗಳನ್ನು ದೇಶಿಯರು ವಹಿಸುವಂತೆ ಮಾಡುತ್ತದೆ. ಈ ಕಾಲಾವಧಿಯಲ್ಲಿ ಮಿಶನರಿಗಳು ಹಾಗೂ ಅವರ ದೇಶಿಯ ಸಹಚರರು ಜೊತೆಯಾಗಿ ಕಾರ್ಯನಿರ್ವಹಿಸಲು ಆರಂಭಿಸಿದ್ದರಿಂದ ಅವರ ನಡುವಿನ ಸಂಬಂಧಗಳು ನಿಕಟಗೊಳ್ಳುತ್ತದೆ. ಅದೇ ರೀತಿ ಮಿಶನ್ ಅಧ್ಯಕ್ಷರಾಗಿದ್ದ ಸ್ಪ್ರೈಸೇನ್‌ರವರು ಶಾಲೆಗಳ (ಹೈಸ್ಕೂಲ್‌ಗಳ) ಜವಾಬ್ದಾರಿಯನ್ನು ಭಾರತೀಯ ಮುಖ್ಯೋಪಾಧ್ಯಾರಿಗೆ ವರ್ಗಾಯಿಸಲು ಉತ್ತೇಜನವನ್ನು ನೀಡಿದ್ದರು. 1941–42ರ ನೊವೆರಾಜ್‌ರವರ ಅನುಪಸ್ಥಿತಿಯಲ್ಲಿ ಬಾಂಬೆ ಕರ್ನಾಟಕದ ಶಾಲೆಗಳ ಜವಾಬ್ದಾರಿಯನ್ನು ಸಿ.ಜಿ.ಅಮ್ಮನ್ನರವರಿಗೆ [C.G.Ammanna] ನೀಡಲಾಗಿತ್ತು. ಈ ಅನುಭವವು ಅವರು ಮುಂದೆ ಧಾರವಾಡದಲ್ಲಿ ಉನ್ನತ ಶಿಕ್ಷಣ ಸೊಸೈಟಿಯನ್ನು [Higher Education Society] ಸ್ಥಾಪಿಸಲು ಕಾರಣವಾಗುವುದನ್ನು ಗಮನಿಸಬಹುದು. ಯುದ್ಧದ ಕಾಲವು ಬಾಸೆಲ್ ಮಿಶನ್ ಇತರರ ಸಹಾಯದ ನಿರೀಕ್ಷೆ ಮಾಡುವಂತೆ ಮಾಡುತ್ತದೆ. ಇಂಟರ್‌ನ್ಯಾಶನಲ್ ಮಿಶನರಿ ಕೌನ್ಸಿಲ್ ಹಾಗೂ ಬರ್ನೆಯ [Berne] ರಾಜಕೀಯ ವಿಭಾಗದ

ಹಸ್ತಕ್ಷೇಪದಿಂದಾಗಿ ಬಾಸೆಲ್ ಮಿಶನನ್ನು ತಟಸ್ಥ ಮಿಶನ್ [Neutral Mission] ಎಂಬುದಾಗಿ ಘೋಷಿಸಲಾಗುತ್ತದೆ. ಈ ರೀತಿ ಬಾಸೆಲ್ ಮಿಶನ್ ಅದರ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಒಂದು ಸ್ವಿಸ್ ಸೊಸೈಟಿಯಾಗಿ ಗುರುತಿಸಿಕೊಳ್ಳುತ್ತದೆ. ಭಾರತದಲ್ಲಿ ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಿಲ್, ಬಾಸೆಲ್ ಮಿಶನಿನ ಸಹಾಯಕ್ಕೆ ಧಾವಿಸುತ್ತದೆ. ಯುದ್ಧ ಆರಂಭವಾದ ನಂತರ ಅದರ ಅಧ್ಯಕ್ಷರಾಗಿದ್ದ ಬಿಷಪ್ ಅಜಾರಿಯಾರವರು [Bishop Azariah] ಬಾಸೆಲ್ ಮಿಶನ್ ಪ್ರದೇಶವಾದ ಕ್ಯಾಲಿಕಟ್‌ಗೆ ಭೇಟಿ ನೀಡುತ್ತಾರೆ ಮತ್ತು ಅದರ ಕಾರ್ಯದರ್ಶಿಯಾಗಿದ್ದ ಹೋಡ್ಜ್‌ರವರು [J.Z.Hodge] ಮಂಗಳೂರಿನಲ್ಲಿ ಬಾಸೆಲ್ ಮಿಶನಿನ ಜಿಲ್ಲಾ ಸಿನೋಡಿನ ಸಭೆಯಲ್ಲಿ ಭಾಗವಹಿಸುತ್ತಾರೆ. ಆಡಳಿತಾತ್ಮಕ ವಿಚಾರಗಳಲ್ಲಿ ಬಾಸೆಲ್ ಮಿಶನ್ ಮೆಥೊಡಿಸ್ಟರಿಂದ ಸಹಾಯವನ್ನು ಪಡೆಯುತ್ತದೆ. 1944ರಲ್ಲಿ 'ಕರ್ನಾಟಕ ಕ್ರಿಶ್ಚಿಯನ್ ಕೌನ್ಸಿಲ್'ನ [Karnataka Christian Council] ಉದ್ಘಾಟನೆಯ ಸಂದರ್ಭದಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚುಗಳಿಗೆ ಅದರ ಸದಸ್ಯತ್ವವನ್ನು ನೀಡಲಾಗುತ್ತದೆ. ಮೈಸೂರಿನ ವೆಸ್ಲಿ ಮುದ್ರಣಾಲಯವು [Wesley Press] ಬಾಸೆಲ್ ಮಿಶನ್ ಮಂಗಳೂರಿನಲ್ಲಿದ್ದ ಛಾಪಾಖಾನೆಯು ಮುಂದುವರಿಯುವಂತಾಗಲೂ ಸಾಲವನ್ನು ನೀಡುತ್ತದೆ. ಮಿಶನ್ ವ್ಯವಸ್ಥೆಯಲ್ಲಿ ದೇಶಿಯರು ಕಾರ್ಯನಿರ್ವಹಿಸಲು ಆರಂಭಿಸಿದಂತೆ ಛಾಪಾಖಾನೆಯಲ್ಲಿ ಕೆಲವು ಹುದ್ದೆಗಳನ್ನು ದೇಶಿಯ ಕ್ರೈಸ್ತರು ನಿರ್ವಹಿಸಲು ಆರಂಭಿಸುತ್ತಾರೆ.[5]

ದೇಶಿಯ ಕ್ರೈಸ್ತರಿಗೆ ಮಿಶನ್ ಕಾರ್ಯಗಳ ಜವಾಬ್ದಾರಿ:

ಯುದ್ಧದ ಕಾಲಾವಧಿಯಲ್ಲಿ ಮಂಗಳೂರಿನಲ್ಲಿದ್ದ ಬಾಸೆಲ್ ಮಿಶನಿನ ಸೆಮಿನರಿಯು ತಾತ್ಕಾಲಿಕವಾಗಿ ಮತ್ತೊಂದು ಬಾರಿ ಮುಚ್ಚಲ್ಪಡುತ್ತದೆ. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಬೆಂಗಳೂರಿನ ಯುನೈಟೆಡ್ ತಿಯೋಲಾಜಿಕಲ್ ಕಾಲೇಜು ಹಾಗೂ ತಿರುವನಂತಪುರಕ್ಕೆ [Trivandrum] ತರಬೇತಿಗಾಗಿ ಕಳುಹಿಸಲಾಗುತ್ತದೆ. ಬಾಸೆಲ್ ಮಿಶನ್ ಚರ್ಚುಗಳ ಅಧ್ಯಾತ್ಮಿಕ ಬೇಡಿಕೆಗಳ ಪೂರೈಕೆಗೆ ಸೆಮಿನರಿಯು ಅವಶ್ಯವೆಂದು ಮನಗಂಡಿದ್ದ ಬುರ್ಕಾರ್ಡ್‌ಟ್‌ರವರು ವಿದ್ಯಾರ್ಥಿಗಳನ್ನು ತುಮಕೂರಿನ ಸೆಮಿನರಿಗೆ ಕಳುಹಿಸುವುದಿಲ್ಲ. ಆದುದರಿಂದ ಸಂಪೂರ್ಣ ಸೆಮಿನರಿಯನ್ನು ಬಿಟ್ಟುಬಿಡಲು ತಯಾರಿಲ್ಲದ ಬುರ್ಕಾರ್ಡ್‌ಟ್‌ರವರು 1947ರಲ್ಲಿ ಮಂಗಳೂರಿನ ಸೆಮಿನರಿಯನ್ನು ಸೆರಾಂಪುರ ಕಾಲೇಜಿಗೆ ಸಂಯೋಜನೆಗೊಳಿಸುತ್ತಾರೆ [Affiliated]. ಈ ಹಂತದಲ್ಲಿ ಸಮರ್ಥ [S.J. Samartha] ಮುಂತಾದ ದೇಶಿಯ ತಿಯೋಲಾಜಿಕಲ್ ಅಧ್ಯಾಪಕರುಗಳ ಹೊಸ ವರ್ಗವು ನಿಧಾನವಾಗಿ ಬೆಳೆಯುತ್ತಿದ್ದು, ಅವರು ಮಂಗಳೂರಿನ ಸೆಮಿನರಿಗೆ ಹೊಸ ಆಯಾಮವನ್ನು ತಂದುಕೊಡುತ್ತಾರೆ. ಹೀಗೆ ತಿಯೋಲಾಜಿಕಲ್ ಶೈಕ್ಷಣಿಕ ವ್ಯವಸ್ಥೆಯಲ್ಲೂ ದೇಶಿಯ ಬಾಸೆಲ್ ಮಿಶನ್

ಕ್ರೈಸ್ತರು ಪ್ರವೇಶವನ್ನು ಪಡೆಯುತ್ತಾರೆ. ಬಾಸೆಲ್ ಮಿಶನಿನ ಯುವ ಕ್ರೈಸ್ತರಿಗೆ ಅಧ್ಯಾಪಕರಾಗಲು, ಇವ್ಯಾಂಜಲಿಸ್ಟ್‌ರಾಗಲು ಹಾಗೂ ಇತರ ಕ್ಷೇತ್ರಗಳಲ್ಲಿ ಪರಿಣಿತರಾಗಲು ಧಾರವಾಡದಲ್ಲಿ ಬಾಸೆಲ್ ಮಿಶನ್ ಮಿಶನರಿಯಾದ ನೊವೆರಾಜ್‌ರವರು ಇಲ್ಫ್ರಿಡೇ ರಾಪೋಲ್ಡ್‌ರವರ [Elfriede Rappold] ಸಹಾಯದಿಂದ ತರಬೇತಿಯನ್ನು ನೀಡುತ್ತಾರೆ. ಹೀಗೆ ಮಿಶನರಿಗಳು ಹೆಚ್ಚು ಹೆಚ್ಚು ದೇಶಿಯ ಕ್ರೈಸ್ತರನ್ನು ಮಿಶನ್ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಆರಂಭಿಸುತ್ತಾರೆ. ಸುಮಡ್ಡಿ [Sumaddi] ಯಲ್ಲಿ ಸಂಜೀವ ರಾವ್ ಹಾಗೂ ಅವರ ಪತ್ನಿ ಇಂತಹ ತರಬೇತಿಯನ್ನು ಕ್ರೈಸ್ತರಿಗಾಗಿ ನೀಡುತ್ತಾರೆ. ಯುದ್ಧದ ಕಾಲಾವಧಿಯಲ್ಲಿ ದೇಶಿಯ ಇವ್ಯಾಂಜಲಿಸ್ಟರು ಹಾಗೂ ಮಿಶನರಿಗಳು ಜಂಟಿಯಾಗಿ ಮಿಶನ್ ಕಾರ್ಯವನ್ನು ಮುಂದುವರಿಸುತ್ತಾರೆ. ಬೆಟಗೇರಿಯಲ್ಲಿ [Betageri] ಮಾರ್ಥಾ ಗೋಟ್ಜ್‌ರವರು [Martha Goetz] ಮಹಿಳೆಯರಿಗೆ ಮಿಶನ್ ಕಾರ್ಯದಲ್ಲಿ ಭಾಗಿಯಾಗಲು ಸಹಾಯವಾಗುವಂತೆ [Bible Women] ಅವರಿಗೆ ತರಬೇತಿಯನ್ನು ನೀಡಿದ್ದರು. ದಕ್ಷಿಣ ಮರಾಠದಲ್ಲಿ ಮೊಂಟಿಬೆನ್ನೂರ್ [Montebennur] ಪ್ರದೇಶವು ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿಗೆ ಫಲಪ್ರದವಾದ ಮಿಶನ್ ಪ್ರದೇಶವಾಗಿ ಪರಿಣಮಿಸುತ್ತದೆ. 1943ರ ಕಾಲಾವಧಿಯಲ್ಲಿ ಇಲ್ಲಿ ಚರ್ಚ್‌ನ್ನು ನಿರ್ಮಿಸುವ ಕಾರ್ಯವನ್ನು ಆರಂಭಿಸಲಾಗುತ್ತದೆ. ಓನ್ನೆವೇಲಿಯ [Tinnevelly] ಪ್ರಖ್ಯಾತ ಮಿಶನರಿ ನಿರ್ಮಾಣಕಾರನಾದ ಹುಬಾರ್ಡ್‌ರವರು [Hubbard] ಯೋಜನೆಯನ್ನು ಸಿದ್ಧಪಡಿಸಿದರೆ, 1920ರವರೆಗೆ ಮಂಗಳೂರಿನ ಛಾಪಾಖಾನೆಯಲ್ಲಿ ಮ್ಯಾನೇಜರಾಗಿ ಕಾರ್ಯನಿರ್ವಹಿಸಿದ್ದ ಸ್ವಿಡ್ಜರ್ಲ್ಯಾಂಡಿನ ಹಾನ್ಸ್ ವ್ರತ್‌ರಿಚ್‌ರವರು [Hans Wuthrich] ಈ ಚರ್ಚ್ ನಿರ್ಮಾಣದ ಸಂಪೂರ್ಣ ವೆಚ್ಚವನ್ನು ಭರಿಸುತ್ತಾರೆ. ಹೀಗೆ 1944ರಲ್ಲಿ ಇಲ್ಲಿ ಹೊಸದಾದ ಚರ್ಚ್ ನಿರ್ಮಾಣವಾಗುತ್ತದೆ. ಕೊರಿಯಾದಲ್ಲಿ ಮಿಶನರಿಗಳಾಗಿದ್ದ ಚಾರ್ಲ್ಸ್ ಕೌಮ್ಯಾನ್ [Charles Cowman] ಎಂಬುವರಿಂದ ಸ್ಥಾಪಿತವಾದ 'ಓರಿಯಂಟಲ್ ಮಿಶನರಿ ಸೊಸೈಟಿ'ಯು ಜಾಗತಿಕ ಸಮರದ ಅಂತ್ಯದ ಕಾಲಾವಧಿಯಲ್ಲಿ ತನ್ನ ಕಾರ್ಯವನ್ನು ಬಿಜಾಪುರ ಪ್ರದೇಶದಲ್ಲಿ ಆರಂಭಿಸುತ್ತದೆ. ಈ ಪ್ರದೇಶದಲ್ಲಿ ಬಾಸೆಲ್ ಮಿಶನ್ ಆಗಲೇ ಕಾರ್ಯನಿರ್ವಹಿಸುತ್ತಿದ್ದು, ಇದು ಬಾಸೆಲ್ ಮಿಶನಿಗೆ ಸಮಸ್ಯೆಯಾಗಿ ಕಂಡುಬಂದರೂ, ಇಲ್ಲಿ ಸಭೆಯನ್ನು [congregation] ಹುಟ್ಟುಹಾಕಬಾರದು ಎಂಬ ಷರತ್ತಿನೊಂದಿಗೆ, ಗದಗದಲ್ಲಿ ಬೈಬಲ್ ಸ್ಕೂಲ್‌ನ್ನು ಆರಂಭಿಸಲು ಅನುಮತಿಯನ್ನು ಬಾಸೆಲ್ ಮಿಶನ್ ನೀಡಿತ್ತು. ಮಿಶನರಿಗಳ ಜೊತೆ ದೇಶಿಯ ಪಾಸ್ಟರ್‌ಗಳಾದ [pastors] ಎಸ್.ಎಸ್.ಜೋಗುಳ [S.S.Jogal], ಎಸ್.ಡಿ. ಇಂಡಿಗೇರಿ [S.D.Endigeri], ಎ.

ನಂದಿಕೇಶ್ವರ್ [A. Nandikeshwar], ಐ.ಆರ್. ಪಾಟ್ಟರ್ [I R Pattar] ಮುಂತಾದವರು ದಕ್ಷಿಣ ಮರಾಠ ಮಿಶನ್ ಪ್ರದೇಶದಲ್ಲಿ ಅಮೂಲಾಗ್ರವಾದ ಸೇವೆಯನ್ನು ಸಲ್ಲಿಸುತ್ತಾರೆ. ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಇವ್ಯಾಂಜಲಿಕಲ್ ಸೇವೆ ಮುಂದುವರಿಯುತ್ತದೆ. ವೈದ್ಯಕೀಯ ಸೇವೆಯಲ್ಲೂ ಭಾರತೀಯ ಕ್ರೈಸ್ತರು ವೈದ್ಯರಾಗಿ ಹಾಗೂ ಮೇಲ್ವಿಚಾರಕರಾಗಿ ಸೇವೆಯನ್ನು ಆರಂಭಿಸುತ್ತಾರೆ. ಹೀಗೆ ಜಾಗತಿಕ ಯುದ್ಧದ ಕಾಲಾವಧಿಯು ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತವಾಗಿ ಬೆಳೆಯುವಂತಾಗಲು ಕಾರಣವಾಯಿತು. ಮತ್ತೊಂದೆಡೆ ಬ್ರಿಟಿಷ್ ಸರಕಾರವು ಭಾರತದಲ್ಲಿ ಬಂಧಿಸಿದ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಯುದ್ಧದ ಕೊನೆವರೆಗೂ ಸರಹದ್ದಿನ ಬಂಧನದಲ್ಲೇ ಮುಂದುವರಿಸುತ್ತದೆ. 1947ರ ಮೇ ಯಲ್ಲಿ ಸರಕಾರವು ಬಂಧಿತ ಬಾಸೆಲ್ ಮಿಶನರಿಗಳನ್ನು ಮುಕ್ತಗೊಳಿಸುತ್ತದೆ.

ದೇಶಿಯರಿಗೆ ನಾಯಕತ್ವ ವಹಿಸುವುದರ ಬಗ್ಗೆ ಸ್ವಿಸ್ ಮಿಶನರಿಗಳ ಚಿಂತನೆ:

ಎರಡನೇ ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಪ್ರದೇಶದಲ್ಲಿ ಮುಂದುವರಿದ ಸ್ವಿಸ್ ಮಿಶನರಿಗಳು ಬಹು ದೀರ್ಘಕಾಲ ಶ್ರಮವಹಿಸಿ ಕಾರ್ಯವನ್ನು ಮುಂದುವರಿಸುತ್ತಾರೆ. 1945ರಲ್ಲಿ ಯುದ್ಧ ಮುಕ್ತಾಯವಾಗುತ್ತಿದ್ದಂತೆ ಇಲ್ಲಿದ್ದ ಮಿಶನರಿಗಳು ರಜೆಯಲ್ಲಿ ತೆರಳಲು ಹೆಸರನ್ನು ನಮೂದಿಸಿಕೊಳ್ಳುತ್ತಾರೆ. ಅದರಂತೆ 1946ರ ಮೇ ಯಲ್ಲಿ ನೊವೆರಾಜ್ [Noverraz], ಸ್ಟ್ರೈಸೇನ್ [Streckeisen] ಮುಂತಾದ ಮಿಶನರಿಗಳು ಸ್ವದೇಶಕ್ಕೆ ತೆರಳುತ್ತಾರೆ. ಇದರ ನಂತರ ಬುರ್ಕಾರ್ಡಾಟ್‌ರವರು ಮಿಶನಿನ ಜನರಲ್ ಪ್ರೆಸಿಡೆಂಟ್ ಆಗಿ ಕಾರ್ಯ ನಿರ್ವಹಿಸುತ್ತಾರೆ. ಇದೇ ವರ್ಷದಲ್ಲಿ ಜ್ಯಾಕ್ಸ್ ರೋಸೆಲ್ ಹಾಗೂ ಅವರ ಪತ್ನಿ ಭಾರತಕ್ಕೆ ಬರುತ್ತಾರೆ. ಭಾರತದಲ್ಲಿನ ಮಿಶನ್ ಕೆಲಸವನ್ನು ಮಿಶನರಿಗಳು ಭಾರತೀಯರಿಗೆ ವರ್ಗಾಯಿಸಲು ಇನ್ನೂ ಹೆಚ್ಚು ಕಡಿಮೆ 3 ವರ್ಷಗಳು ಲಭ್ಯವಿರಬಹುದು ಎಂಬುದು ಇವರ ಅಭಿಪ್ರಾಯವಾಗಿತ್ತು. ರೋಸೆಲ್‌ರವರು [Rossel] ಬಾಸೆಲ್ ಮಿಶನಿನ ಸೆಕ್ಯುಲರ್ ಎಜೆಂಟ್ ಆಗಿ ಹಾಗೂ ಮಂಗಳೂರಿನ ಸೆಮಿನರಿಯಲ್ಲಿ ಬುರ್ಕಾರ್ಡಾಟ್‌ರವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಬುರ್ಕಾರ್ಡಾಟ್ ಹಾಗೂ ರೋಸೆಲ್ ಈ ಇಬ್ಬರೂ ದೇಶಿಯರಿಗೆ ಚರ್ಚ್‌ನಲ್ಲಿ ನಾಯಕತ್ವವನ್ನು ವಹಿಸಬೇಕೆಂಬ ವಿಚಾರಕ್ಕೆ ಪ್ರಬಲವಾದ ಬೆಂಬಲವನ್ನು ನೀಡಿದ್ದರು. 1946ರ ಕಾಲಾವಧಿಯಲ್ಲಿ ನಿರೀಕ್ಷೆಯಂತೆ ಅಂದ್ರೆ ಪೀಟೆಟ್ [Andre Pittet] ಮಿಶನರಿಯು ದಕ್ಷಿಣ ಮರಾಠದಲ್ಲಿ ನೊವೆರಾಜ್‌ರ ಸ್ಥಾನವನ್ನು ತುಂಬುತ್ತಾರೆ. ಹೀಗೆ ಜಾಗತಿಕ ಯುದ್ಧದ ನಂತರದಲ್ಲಿ ಕೆಲವು ಹೊಸ ಮಿಶನರಿಗಳು ಕೂಡಾ ಆಗಮಿಸಿ ಮಿಶನರಿ ಕಾರ್ಯವನ್ನು ಮುನ್ನಡೆಸುತ್ತಾರೆ. 1947ರಲ್ಲಿ ಬೆಟಗೇರಿಯಲ್ಲಿ ನಡೆದ ಮಿಶನರಿಗಳ ಜನರಲ್

ಕಾನ್ಫರೆನ್ಸ್‌ನಲ್ಲಿ [General Conference of Missionaries] ಮಿಶನ್ ಮತ್ತು ಚರ್ಚ್ ನಡುವಿನ ಹೊಸ ಸಂಬಂಧಗಳ ಬಗ್ಗೆ ಚರ್ಚೆ ನಡೆಯುತ್ತದೆ. ಡಾ. ಬುರ್ಕಾರ್ಡ್ಹಾರ್ಟ್‌ರವರು 3ನೇ ಫೆಬ್ರವರಿ 1947ರಲ್ಲಿ ಬಾಸೆಲ್ ಮಿಶನಿನ ಹೋಮ್‌ಬೋರ್ಡ್‌ಗೆ ಪತ್ರ ಬರೆದು, ಮಿಶನ್ ಮತ್ತು ಚರ್ಚ್ ನಡುವೆ ಬೆಳೆಯಬೇಕಾದ ಹೊಸ ಸಂಬಂಧಗಳ ಬಗ್ಗೆ ಸ್ಪಷ್ಟವಾಗಿ ವಿಟ್ಸ್ಚಿಯವರಿಗೆ [Witschi] ತಿಳಿಸಿದ್ದರು[7]. 1940ರ ದಶಕದಲ್ಲಿ ಭಾರತದ ಸ್ವಾತಂತ್ರ ಹೋರಾಟವು ಅದರ ನಿರ್ಣಾಯಕ ಹಂತವನ್ನು ಮುಟ್ಟಿದ್ದು, ಭಾರತವು ಸ್ವಾತಂತ್ರವನ್ನು ಗಳಿಸುವ ಎಲ್ಲಾ ಲಕ್ಷಣಗಳು ಗೋಚರಿಸುತ್ತವೆ. ಆದುದರಿಂದ ಮಿಶನ್ ಹಾಗೂ ಚರ್ಚ್ ಎರಡರ ನಾಯಕತ್ವ ಮತ್ತು ಜವಾಬ್ದಾರಿಗಳನ್ನು ಭಾರತೀಯರಿಗೆ ವಹಿಸುದರತ್ತ ಮಿಶನರಿಗಳು ಹೆಚ್ಚು ಆಸಕ್ತಿಯನ್ನು ವಹಿಸಿ ಕಾರ್ಯಪ್ರವೃತ್ತರಾಗಿದ್ದುದನ್ನು ಗಮನಿಸಬಹುದು. ಕೆಲವು ಭಾರತೀಯರಿಗೆ ಪ್ರಮುಖ ಸ್ಥಾನಗಳನ್ನು ನೀಡಬೇಕು. ದೇಶಿಯ ನಾಯಕತ್ವವನ್ನು ಬೆಳೆಸಿಕೊಳ್ಳುವಂತಾಗಲು ಇರುವ ಅತೀ ತುರ್ತಾದ ಅಗತ್ಯವೆಂದರೆ ಉತ್ತಮವಾದ ಜನರಿಗೆ ತರಬೇತಿಯನ್ನು ನೀಡುವುದಾಗಿದೆ. ಚರ್ಚ್ ಮತ್ತು ಮಿಶನಿನ ಸಂಬಂಧವನ್ನು ಸರಿಯಾಗಿ ಮುನ್ನಡೆಸಬೇಕಾದಲ್ಲಿ ಇದು ಅತೀ ಅಗತ್ಯವಾಗಿದೆ. ಶಾಲೆಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಕೆಲವು ಕ್ರೈಸ್ತ ನಾಯಕರಿದ್ದು ಚರ್ಚ್‌ನಲ್ಲಿ ಇಲ್ಲ. ಆದುದರಿಂದ ಪ್ರತಿ ಜಿಲ್ಲೆಯಿಂದ ಒಬ್ಬ ಯುವ ಕ್ರೈಸ್ತನನ್ನಾದರೂ ಕಲಿಕೆಗಾಗಿ ವಿದೇಶಕ್ಕೆ ಕಳುಹಿಸಬೇಕು ಎಂಬುದಾಗಿ ಬುರ್ಕಾರ್ಡ್ಹಾರ್ಟ್‌ರವರು ತಮ್ಮ ಪತ್ರದಲ್ಲಿ ಪ್ರಬಲವಾಗಿ ವಿವರಿಸಿದ್ದರು[8]. ಈ ಪತ್ರಕ್ಕೆ ತಕ್ಷಣದಲ್ಲಿ ಹೋಮ್ ಬೋರ್ಡ್ ಬಹಳಷ್ಟು ಪೂರಕವಾದ ಪ್ರತಿಕ್ರಿಯೆಯನ್ನು ನೀಡಿದರೂ, ಅದನ್ನು ಈಡೇರಿಸುವಲ್ಲಿ ವಿಫಲವಾಗುತ್ತದೆ. ತದನಂತರ ಎಸ್.ಜೆ. ಸಮರ್ಥಾ [S.J.Samartha] ರವರು ಇತರರ ಸಹಾಯದಿಂದ ನ್ಯೂಯಾರ್ಕ್ ಹಾಗೂ ಬಾಸೆಲಿಗೆ ತೆರಳಿ ಉನ್ನತ ವಿದ್ಯಾಭ್ಯಾಸ ಪಡೆದು, ಭಾರತಕ್ಕೆ ಮರಳಿದ ಮೇಲೆ 1952ರಲ್ಲಿ ಬುರ್ಕಾರ್ಡ್ಹಾರ್ಟ್‌ರವರು ಮಂಗಳೂರಿನ ಸೆಮಿನರಿಯ ಜವಾಬ್ದಾರಿಯನ್ನು ಅವರಿಗೆ ವಹಿಸುವುದನ್ನು ಗಮನಿಸಬಹುದು. ಹೀಗೆ ನಿಧಾನವಾಗಿ ಮಿಶನಿನ ಪ್ರತಿಯೊಂದು ಕ್ಷೇತ್ರವನ್ನು ದೇಶಿಯರ ಮೇಲ್ವಿಚಾರಣೆಗೆ ನೀಡಿ, ಅದನ್ನು ಸ್ವಾಯತ್ತವಾಗಿ ಬೆಳೆಸುವ ಪ್ರಯತ್ನವನ್ನು ಮಿಶನರಿಗಳು ಬೆಂಬಲಿಸಿದ್ದರು.

ಯುದ್ಧ ಕಾಲಾವಧಿಯಲ್ಲಿ ಬಾಸೆಲ್ ಮಿಶನಿಗೆ ಹಲವು ಹಣಕಾಸಿನ ಸಮಸ್ಯೆಗಳು ಎದುರಾಗುತ್ತವೆ. ಇವುಗಳನ್ನು ವಿಭಿನ್ನ ಮಾರ್ಗಗಳ ಮೂಲಕ ಬಗೆಹರಿಸಲಾಗುತ್ತದೆ. ಅದಕ್ಕಾಗಿ ಅನಗತ್ಯವಾದ ಕೆಲವು ಆಸ್ತಿಗಳನ್ನು ಮಾರಾಟ ಮಾಡಲಾಗುತ್ತದೆ. ಉದಾ: 1941ರಲ್ಲಿ ಮಂಗಳೂರಿನಲ್ಲಿರುವ ಲೈಟ್ ಹೌಸ್ ಬಂಗಲೆಯನ್ನು [Light House Bungalow] ಮಾರಾಟ ಮಾಡಲಾಗುತ್ತದೆ. 1941ರಲ್ಲಿ ಕಾಮನ್‌ವೆಲ್ತ್ ಟ್ರಸ್ಟ್‌ನ ವೆಲ್‌ಫೇರ್ ಕಮಿಟಿಯು [The welfare

committee of the commonwealth Trust] ಶಾಲೆಗಳ ಅಭಿವೃದ್ಧಿಗಾಗಿ, ಆಸ್ಪತ್ರೆಗೆ ಎಕ್ಸ್-ರೇ ಯಂತ್ರದ ಖರೀದಿಗಾಗಿ, ವೈದ್ಯಕೀಯ ಅಗತ್ಯತೆಗಳಿಗಾಗಿ ಹಾಗೂ ಇತರ ಕೆಲವು ಉದ್ದೇಶಗಳಿಗಾಗಿ ಹಣಕಾಸಿನ ನೆರವನ್ನು ನೀಡುತ್ತದೆ. ಬಾಂಬೆ ಕರ್ನಾಟಕದಲ್ಲಿ, ಬಾಂಬೆ ಸರಕಾರದಿಂದ ಮಿಶನ್ 99 ವರ್ಷಗಳಿಗೆ ಪಡೆದ ಭೂಮಿಯ ಗುತ್ತಿಗೆಯನ್ನು ಮರುನವೀಕರಿಸಲಾಗುತ್ತದೆ. ಹುಬ್ಬಳ್ಳಿಯ ಬೃಹತ್ ಮೈದಾನವನ್ನು ಸರಕಾರಕ್ಕೆ ಮರಳಿ ನೀಡಲಾಗುತ್ತದೆ. ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿನ ಶೈಕ್ಷಣಿಕ ಕಾರ್ಯಗಳನ್ನು ಮುಂದುವರೆಸಲು ಒಂದು ಶೈಕ್ಷಣಿಕ ಸೊಸೈಟಿಯನ್ನು [An educational society] 'ದಿ ಬಾಂಬೆ ಟ್ರಸ್ಟ್ ಆಕ್ಟ್ 1950' ರ [The Bombay Trust Act 1950] ಅನ್ವಯ ನೊಂದಣಿ ಮಾಡಲಾಗುತ್ತದೆ. ಇದು ಹುಡುಗರ ಹಾಗೂ ಹುಡುಗಿಯರ ಹೈಸ್ಕೂಲು, ಧಾರವಾಡದಲ್ಲಿನ ಟೀಚರ್ ಟ್ರೈನಿಂಗ್ ಕಾಲೇಜು [Teacher's Training College], ಹುಬ್ಬಳ್ಳಿಯ ಕೋ-ಎಜುಕೇಶನಲ್ ಹೈಸ್ಕೂಲ್ ಇತ್ಯಾದಿ ಶೈಕ್ಷಣಿಕ ಸಂಸ್ಥೆಗಳನ್ನು ನಿರ್ವಹಿಸುತ್ತಿದ್ದು, ಈ ಯೋಜನೆಯಲ್ಲಿ ಆರ್.ಎಸ್. ಬಂಗೇರ [R.S.Bangera] ಮತ್ತು ಸಿ.ಜಿ. ಅಮ್ಮನ್ನರವರು [C. G. Ammanna] ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. 1939ರಲ್ಲಿ ಅಸ್ಥಿತ್ವಕ್ಕೆ ಬಂದಿದ್ದ ಹಾಗೂ ಮಿಶನ್ ಆಸ್ತಿಗಳನ್ನು ನಿರ್ವಹಿಸುತ್ತಿದ್ದ ಆಡಳಿತಾತ್ಮಕ ಕಮಿಟಿಯ ನಿಯಂತ್ರಣದಲ್ಲಿದ್ದ ಮಿಶನ್ ಬಳಕೆಯ ಆಸ್ತಿಗಳನ್ನು ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್‌ನ ನೇರ ನಿರ್ವಹಣೆಗೆ 1952ರಲ್ಲಿ ವಹಿಸಲಾಗುತ್ತದೆ. ಚರ್ಚ್ ಬಳಕೆಗೆ ಸಂಬಂಧಿಸಿದ ಆಸ್ತಿಗಳನ್ನು 1932ರಲ್ಲೇ ಈ ಟ್ರಸ್ಟ್‌ನ ನಿಯಂತ್ರಣಕ್ಕೆ ಒಳಪಡಿಸಲಾಗಿತ್ತು. ಇದು ಆಸ್ತಿಗಳ ವಿಚಾರಕ್ಕೆ ಸಂಬಧಿಸಿದಂತೆ ಮಿಶನ್ ಹಾಗೂ ಚರ್ಚ್‌ನ್ನು ಒಗ್ಗೂಡಿಸುತ್ತದೆ.[9] ಹೀಗೆ ಜಾಗತಿಕ ಯುದ್ಧದ ಅಂತ್ಯದ ಕಾಲಾವಧಿಯಾಗುವಾಗ ಹಲವು ಗುರುತರವಾದ ಮಾರ್ಪಾಡುಗಳು ಚರ್ಚ್ ಹಾಗೂ ಮಿಶನ್ ವ್ಯವಸ್ಥೆಯೊಳಗೆ ನಡೆದು ಚರ್ಚ್ ಸ್ವಾಯತ್ತತೆಯತ್ತ ಚಲಿಸುವ ಲಕ್ಷಣಗಳು ಗೋಚರಿಸುತ್ತವೆ.

ಚರ್ಚ್ ಮತ್ತು ಮಿಶನ್ ವ್ಯವಸ್ಥೆಯಲ್ಲಿನ ಕಲಹಗಳು:

ಜಾಗತಿಕ ಯುದ್ಧದ ಸಂದರ್ಭದಲ್ಲಿ ಯುನೈಟೆಡ್ ಬಾಸೆಲ್ ಮಿಶನಿನ ಚರ್ಚ್ ಸಿನೋಡ್ ಕಾಲ ಕಾಲಕ್ಕೆ ಸಭೆ ಸೇರುತ್ತಿತ್ತು. 1941 ನವೆಂಬರಿನಲ್ಲಿ ಬಾಸೆಲ್ ಮಿಶನಿನ ಬಾಂಬೆ ಚರ್ಚ್‌ನ್ನು ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾಕ್ಕೆ ಸೇರಿಸಿ ಸದಸ್ಯತ್ವವನ್ನು ನೀಡಲಾಗುತ್ತದೆ. ಎರಡನೇ ಜಾಗತಿಕ ಯುದ್ಧದ ಕಾಲಾವಧಿಯಲ್ಲೂ ಬಾಸೆಲ್ ಮಿಶನ್ ಪ್ರದೇಶಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. 1941ರಲ್ಲಿ ಬಾಂಬೆ ಕರ್ನಾಟಕ ಪ್ರದೇಶದ ಮರಿಗೌಡರ [Marigouda] ಚಿಕ್ಕ ಪಕ್ಷವು ಸಂಪೂರ್ಣವಾಗಿ ಸೋಲನ್ನು ಅನುಭವಿಸುತ್ತದೆ. ಇವರು ಮಿಶನಿನಿಂದ ಸಂಪೂರ್ಣವಾದ

ಸ್ವಾತಂತ್ರ್ಯವನ್ನು ನಿರೀಕ್ಷಿಸುತ್ತಿದ್ದರು. ಈ ಕಾಲಾವಧಿಯಲ್ಲಿ ಸಾಮ್ ಗೋಕಾವಿರವರು [Sam Gokavi] ಚರ್ಚ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಇವರು ಬಂಕಾಪುರ್ ಹಾಗೂ ಮಠಪತಿ ಇವರ ಸಹಕಾರವನ್ನು ಪಡೆದಿದ್ದು, ಮಿಶನ್ ಬಗ್ಗೆ ಉತ್ತಮ ಅಭಿಪ್ರಾಯವನ್ನು ಹೊಂದಿದ್ದರು. 1942ರಲ್ಲಿ ಮಠಪತಿಯವರು ಚರ್ಚ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಈ ಕಾಲಾವಧಿಯಲ್ಲಿ ಮರಿಗೌಡರಿಗೆ ನೀಡಲಾಗಿದ್ದ ವರ್ಗಾವಣೆಯನ್ನು ಅವರು ತಿರಸ್ಕರಿಸುತ್ತಾರೆ. ಇದು ಮೊಕದ್ದಮೆಗೆ [litigation] ಕಾರಣವಾಗಿ, ಅದು 1945ರಲ್ಲಿ ಮರಿಗೌಡರ ನಿವೃತ್ತಿಯವರೆಗೆ ಮುಂದುವರಿಯುತ್ತದೆ. 1947ರಲ್ಲಿ ಹಾವೇರಿಯ ಡಾ. ಜಿ. ಎಸ್. ದೆವೋಧರ್‌ರವರು [Dr.G.S.Deodhar] ಚರ್ಚ್‌ನ ಅಧ್ಯಕ್ಷರಾಗುವುದರೊಂದಿಗೆ, ಮಠಪತಿಯವರೊಂದಿಗಿನ [Matapathy] ಮೊಕದ್ದಮೆಯು ಅದರ ಉನ್ನತ ಹಂತಕ್ಕೆ ಮುಟ್ಟುತ್ತದೆ. ಈ ಕಾಲದಲ್ಲಿ ಹುಬ್ಬಳ್ಳಿಯಲ್ಲಿ ಎರಡು ಬಣಗಳ ಪ್ರತ್ಯೇಕ ಕೂಟಗಳೂ ಜರಗುತ್ತವೆ. ಪಾಸ್ಟರ್‌ಗಳ [pastors] ಸಂಬಳವನ್ನು ತಡೆಹಿಡಿಯಲಾಗುತ್ತದೆ. ಈ ಸಂದರ್ಭದಲ್ಲಿ ಮಠಪತಿಯವರು ತಮ್ಮ ಬೆಂಬಲಿಗರಿಂದ ಹಣವನ್ನು ಪಡೆದು ಅಗತ್ಯತೆಗಳಿಗೆ ವ್ಯಯ ಮಾಡುವುದನ್ನು ಗಮನಿಸಬಹುದು. ಈ ಸಮಸ್ಯೆಯನ್ನು ಬಗೆಹರಿಸಲು ಕೋರ್ಟು ಮಾಡಿದ ಪ್ರಯತ್ನವು ವಿಫಲವಾಗುತ್ತದೆ. 1950ರಲ್ಲಿ ಡಾ. ಬುರ್ಕಾರ್ಡ್‌ಟ್‌ರವರು ಹುಬ್ಬಳ್ಳಿಗೆ ಭೇಟಿ ನೀಡಿ ಇಬ್ಬರೊಂದಿಗೂ ಮಾತುಕತೆ ನಡೆಸಿ, ಮದ್ರಾಸಿನ ಉತ್ತಮ ಇವ್ಯಾಂಜಲಿಸ್ಟರಾದ ಡೇನಿಯಲ್‌ರನ್ನು [Daniel] ಕರೆಯಿಸಿ ಪ್ರಾರ್ಥನಾ ಕೂಟಗಳನ್ನು ನಡೆಸುತ್ತಾರೆ. ಆದರೆ ಈ ಪ್ರಯತ್ನಗಳು ಫಲಪ್ರದವಾಗದೆ, ದಕ್ಷಿಣ ಮರಾಠದ ನಾಯಕರ ನಡುವಿನ ಭಿನ್ನಾಭಿಪ್ರಾಯಗಳು ಮುಂದುವರಿದವು ಎಂಬುದಾಗಿ ಬುರ್ಕಾರ್ಡ್‌ಟ್ ಹೇಳಿಕೊಂಡಿದ್ದರು. ಆದರೆ 1951ರಲ್ಲಿ ಡಾ. ಫ್ರೇಡಿಕ್ಸ್‌ರವರು [Dr. Fredericks] ಅಧ್ಯಕ್ಷರಾಗಿ ಆಯ್ಕೆಯಾಗುವುದರೊಂದಿಗೆ, ನಿಧಾನವಾಗಿ ಅಲ್ಲಿದ್ದ ಭಿನ್ನಾಭಿಪ್ರಾಯಗಳು, ಗುಂಪು ಕಲಹಗಳು ಮಾಯವಾಗುತ್ತವೆ. ಅಧ್ಯಾತ್ಮಿಕ ವಿಚಾರ ಹಾಗೂ ಶಿಕ್ಷಣ ವ್ಯವಸ್ಥೆಯನ್ನು ಭದ್ರಪಡಿಸುತ್ತಾ, ಅವರು ಹೊಸ ಕ್ರೈಸ್ತ ನಾಯಕರ ಉಗಮಕ್ಕೆ ಕಾರಣರಾಗುತ್ತಾರೆ.[10]

ದಕ್ಷಿಣ ಕೆನರಾದಲ್ಲಿ ಕೆ.ಆರ್.ಕರುಣಾಕರ್‌ರವರು [K.R. Karunakar] ಚರ್ಚ್‌ನ ಅಧ್ಯಕ್ಷರಾಗಿರದೇ, ಮಿಶನಿನ ಅಧ್ಯಕ್ಷರೂ ಆಗಿದ್ದರು. ಇವರಿಗೆ ಕೆಲವು ಪಾಸ್ಟರ್ಸ್‌ಗಳ, ಜನರ, ಅಧ್ಯಾಪಕರುಗಳ ಪ್ರಬಲ ಬೆಂಬಲವು ಇತ್ತು. ಇವರಿಗೆ ಡಬ್ಲ್ಯು. ಆರ್. ಸುನೀತಾರವರ [W. R. Sunitha] ಪ್ರಬಲವಾದ ವಿರೋಧವಿತ್ತು. 1947ರಲ್ಲಿ ಸುನೀತಾರವರು ಜಿಲ್ಲಾ ಚರ್ಚ್ ಬೋರ್ಡಿನ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಹೀಗೆ ಬಾಸೆಲ್ ಮಿಶನಿನ ಕರ್ನಾಟಕದ ಎರಡೂ ಜಿಲ್ಲೆಗಳಲ್ಲೂ

ಗುಂಪು ಭಿನ್ನಾಭಿಪ್ರಾಯಗಳಿದ್ದವು. 1947ಕ್ಕಾಗುವಾಗ 'ಚರ್ಚ್ ಯೂನಿಯನ್'ಗೆ [Church Union] ಸಂಬಂಧಿಸಿದ ವಿಚಾರಗಳು ಪ್ರಬಲ ಚರ್ಚೆಗೆ ಗ್ರಾಸವಾಗುತ್ತವೆ.[11] ಹೀಗೆ ಎರಡನೇ ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಹೆಚ್ಚು ಹೆಚ್ಚು ಸ್ಥಳೀಯ ಕ್ರೈಸ್ತರು ಚರ್ಚ್ ಹಾಗೂ ಮಿಶನ್ ವ್ಯವಸ್ಥೆಯ ಕಾರ್ಯಗಳಲ್ಲಿ ಭಾಗಿಯಾಗುವುದರ ಮೂಲಕ ಬಾಸೆಲ್ ಮಿಶನ್ ಸ್ವಾಯತ್ತತೆ ಹಾಗೂ ದೇಶಿಯ ನಾಯಕತ್ವವುಳ್ಳ ಚರ್ಚ್ ಆಗಿ ಬೆಳೆಯುವ ಲಕ್ಷಣಗಳು ಗೋಚರಿಸುತ್ತವೆ. ಜಾಗತಿಕ ಯುದ್ಧದ ಸಂದರ್ಭದಲ್ಲಿ ಬಾಸೆಲ್ ಮಿಶನ್ ಜವಾಬ್ದಾರಿಯು ಬುರ್ಕಾರ್ಡ್‌ಟ್‌ರವರ ಮೇಲಿರುತ್ತದೆ. ಬಾಸೆಲ್ ವಿಶ್ವವಿದ್ಯಾನಿಲಯದಿಂದ ಪ್ರಾಚೀನ ಗ್ರೀಕ್ ಸಾಹಿತ್ಯದ ಮೇಲೆ ಡಾಕ್ಟರೇಟ್ ಪದವಿ ಪಡೆದಿದ್ದ ಇವರನ್ನು, 1912ರಲ್ಲಿ ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವಂತೆ ಬಾಸೆಲ್ ಮಿಶನ್ ಕಳುಹಿಸಿತಾದರೂ, ಆ ಕೆಲಸ ಲಭಿಸದೆ ಇರುವುದರಿಂದ ಅವರು ಟ್ರಾವಂಕೂರಿನಲ್ಲಿ ಲಂಡನ್ ಮಿಶನರಿ ಸೊಸೈಟಿಗಾಗಿ ಕಾರ್ಯನಿರ್ವಹಿಸಿದರು. ಪ್ರಥಮ ಜಾಗತಿಕ ಯುದ್ಧದ ಕಠಿಣ ಕಾಲದಲ್ಲಿ ಅವರು ಬಾಸೆಲ್ ಮಿಶನಿನ ನೆರವಿಗೆ ಧಾವಿಸಿ 1927ರವರೆಗೆ ಕಾರ್ಯ ನಿರ್ವಹಿಸುತ್ತಾರೆ. ಎರಡನೆ ಜಾಗತಿಕ ಯುದ್ಧದ ಮೊದಲು ಪುನಃ ಬಾಸೆಲ್ ಮಿಶನ್ ಸೇವೆಗೆ ಮರಳಿದ ಅವರು, ಜರ್ಮನ್ ಮಿಶನರಿಗಳ ಹಾಗೂ ಸ್ಟ್ರಕೆನ್‌ಸನ್‌ರವರ ಅನುಪಸ್ಥಿತಿಯಲ್ಲಿ ಬಾಸೆಲ್ ಮಿಶನನ್ನು ಮುನ್ನಡೆಸುತ್ತಾರೆ.[12]

19ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಹಾಗೂ 20ನೇ ಶತಮಾನದಲ್ಲಿ ಭಾರತದಲ್ಲಿನ ಚರ್ಚುಗಳಿಗೆ ಸ್ವಾಯತ್ತತೆ ನೀಡಬೇಕು ಎಂಬುದರ ಬಗ್ಗೆ ಪ್ರಬಲವಾದ ಚರ್ಚೆಗಳು ಆರಂಭವಾಗುತ್ತವೆ. ಮಿಶನರಿಗಳು ಚರ್ಚುಗಳ ಮೇಲೆ ಹಾಗೂ ಕ್ರೈಸ್ತರ ಮೇಲೆ ಬಿಗುವಾದ ಹಿಡಿತ ಸಾಧಿಸಿಕೊಂಡಿದ್ದಾರೆ. ಆದುದರಿಂದ ಮಿಶನರಿಗಳು ಚರ್ಚುಗಳ ಆಡಳಿತ ಹಾಗೂ ಮೇಲ್ವಿಚಾರಣೆಯನ್ನು ದೇಶಿಯ ಕ್ರೈಸ್ತರಿಗೆ ವಹಿಸಬೇಕು ಎಂಬ ಬಲವಾದ ವಾದ ಕೇಳಿ ಬರುತ್ತದೆ. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇತರ ಕೆಲವು ಮಿಶನ್ ಸಂಘಗಳಾದ ಲಂಡನ್ ಮಿಶನರಿ ಸೊಸ್ಯಟಿ, ವೆಸ್ಲಿಯನ್ ಮಿಶನ್, ಚರ್ಚ್ ಮಿಶನರಿ ಸೊಸ್ಯಟಿ ಇತ್ಯಾದಿಗಳು ಬಾಸೆಲ್ ಮಿಶನ್‌ಗಿಂತ ಮೊದಲೇ ತನ್ನ ದೇಶಿಯ ಕ್ರೈಸ್ತರಿಗೆ ಜವಾಬ್ದಾರಿಯನ್ನು ವಹಿಸಿರುತ್ತವೆ. ವೆಸ್ಲಿಯನ್ ಮೆಥೋಡಿಸ್ಟ್ ಮಿಶನ್ 1920ರ ದಶಕದಲ್ಲೇ ತನ್ನ ದೇಶಿಯ ಕ್ರೈಸ್ತರಿಗೆ ಜವಾಬ್ದಾರಿಯನ್ನು, ನಾಯಕತ್ವವನ್ನು ವಹಿಸುತ್ತದೆ. 'ಭಾರತೀಯರು ಕೇವಲ ಬ್ರಿಟಿಷ್ ಸಾಮ್ರಾಜ್ಯಶಾಹಿ ನಿಯಂತ್ರಣದಲ್ಲಿದ್ದಾರೆ. ಆದರೆ ಭಾರತೀಯ ಕ್ರೈಸ್ತರು ಬ್ರಿಟಿಷ್ ಸಾಮ್ರಾಜ್ಯಶಾಹಿ ಹಾಗೂ ಮಿಶನರಿ ಸಾಮ್ರಾಜ್ಯಶಾಹಿ ಎಂಬ ಎರಡು ನಿಯಂತ್ರಣಗಳಿಗೆ ಒಳಪಟ್ಟಿದ್ದಾರೆ' ಎಂದು ಇ.ಸಿ.ಭಟೀಯವರು [E. C. Bhatty] ಅಭಿಪ್ರಾಯಪಟ್ಟಿದ್ದಾರೆ. ಶೈಕ್ಷಣಿಕ ವಿಫಲತೆಗಳು ಹಾಗೂ ಮಿಶನರಿಗಳ ವಿಫಲತೆಗಳಿಂದಾಗಿ ಮಿಶನರಿಗಳು ಸ್ವತಂತ್ರವಾದ ಚರ್ಚನ್ನು ಹುಟ್ಟುಹಾಕುವಲ್ಲಿ ವಿಫಲರಾದರು. ದೇಶಿಯ ಕ್ರೈಸ್ತರಿಗೆ ಅವರ

ಬಗ್ಗೆ ಸ್ವಾಚಿಂತನೆ ನಡೆಸುವ ಅಥವಾ ಸ್ವಂತ ನಿರ್ಧಾರಗಳನ್ನು ಕೈಗೊಳ್ಳುವ ಅವಕಾಶಗಳನ್ನು ನೀಡಲಾಗಿಲ್ಲ. ಸಾಧ್ಯವಾದಷ್ಟು ಬೇಗ ತಮ್ಮ ಸಹಾಯವನ್ನು ಹಿಂದಕ್ಕೆ ಪಡೆಯುವುದು ತಮ್ಮ ಕರ್ತವ್ಯವೆಂದು ಪರಿಗಣಿಸದ ಮಿಶನರಿಗಳು, ಭಾರತೀಯ ಚರ್ಚುಗಳು ಅದರದ್ದೇ ಸಂಪನ್ಮೂಲಗಳೊಂದಿಗೆ ಅಭಿವೃದ್ಧಿಯಾಗಲು ಅವಕಾಶ ನೀಡಲಿಲ್ಲ[13] ಎಂಬ ವಾದವನ್ನು ವಿದ್ವಾಂಸರು ಮಂಡಿಸಿದ್ದರು. ಭಾರತೀಯ ಕ್ರೈಸ್ತರು ದೇಶಪ್ರೇಮ ಉಳ್ಳವರಲ್ಲ. ಅವರು ವಿದೇಶಿಯ ಧರ್ಮದವರು ಎಂಬ ವಾದ ಚರ್ಚ್ ಹೊರಗಡೆಯಿಂದ ಕೇಳಿಬರುತ್ತದೆ. ಈ ಮೇಲಿನ ವಾದದ ಬಗ್ಗೆ ಚರ್ಚ್ ಒಳಗಡೆ ಭಯವಿತ್ತು.[14] ಆದುದರಿಂದ 'ಮಿಶನರಿಗಳು ತಮ್ಮ ಅಸ್ತಿತ್ವವನ್ನು ಕೊನೆಗೊಳಿಸಬೇಕು. ಸಾಧ್ಯವಾದರೆ ಮಿಶನುಗಳನ್ನು ಚರ್ಚುಗಳೊಂದಿಗೆ ವಿಲೀನಗೊಳಿಸಬೇಕು. ಈ ರೀತಿ ಇಲ್ಲಿ ಕೇವಲ ಚರ್ಚ್ ಸಂಘಟನೆ ಮಾತ್ರ ಅಸ್ತಿತ್ವದಲ್ಲಿರಬೇಕು' ಎಂದು ಎನ್.ಸಿ.ಮುಖರ್ಜಿಯವರು ಅಭಿಪ್ರಾಯಪಟ್ಟಿದ್ದರು.[15] ಭವಿಷ್ಯತ್ತಿನಲ್ಲಿ ವಿದೇಶಿ ಮಿಶನರಿಗಳು ಭಾರತೀಯ ಚರ್ಚುಗಳ ಭಾಗವಾಗಿರಬೇಕು ಹಾಗೂ ಅದು ಈ ದೇಶದಲ್ಲಿ ಮಿಶನರಿಗಳ ಕಾರ್ಯದ ಬಗ್ಗೆ ನಿರ್ಧರಿಸಬೇಕು. ಇಲ್ಲಿ ಸಮಾನ ಸಹಭಾಗಿತ್ವ [equal partnership] ಎಂಬ ತತ್ವವನ್ನು ಅನುಸರಿಸಬೇಕು. ಇದರಿಂದ ಭಾರತೀಯರು ಯುರೋಪಿಯನರ ಕೈಕೆಳಗೆ ಅಥವಾ ಯುರೋಪಿಯನರು ಭಾರತೀಯರ ಕೈಕೆಳಗೆ ಕಾರ್ಯನಿರ್ವಹಿಸಬೇಕೆಂಬ ಪ್ರಶ್ನೆ ಉದ್ಭವಿಸಲಾರದು. ದೇಶಿಯ ಕ್ರೈಸ್ತರಲ್ಲಿ ನಾಯಕತ್ವವನ್ನು ಹುಟ್ಟುಹಾಕುವುದು ಹಾಗೂ ಭಾರತೀಯ ಚರ್ಚುಗಳು ಅವರ ಆಡಳಿತವನ್ನು ಅವರೇ ನಿರ್ವಹಿಸುವಂತೆ ಅವರಿಗೆ ಸಹಾಯ ಮಾಡುವುದು ಮಿಶನರಿಗಳು ಅತಿ ಅಗತ್ಯವಾಗಿ ಮಾಡಬೇಕಾದ ಕೆಲಸಗಳಾಗಿವೆ ಎಂಬ ಸಲಹೆಯನ್ನು ನೀಡಿದ್ದರು. ಮುಖರ್ಜಿಯವರು ಉನ್ನತ, ಸಮರ್ಥ ಭಾರತೀಯರನ್ನು ಸಮರ್ಪಕವಾಗಿ ಬಳಸಿಕೊಂಡು ಅವರಿಗೆ ಜವಾಬ್ದಾರಿಗಳನ್ನು ವಹಿಸಬೇಕು ಎಂದು ತಿಳಿಸಿದ್ದರು.[16] 1921ರಲ್ಲಿ ಲಾಹೋರಿನಲ್ಲಿ ನಡೆದ ಅಖಿಲ ಭಾರತೀಯ ಕ್ರೈಸ್ತ ಸಮಾವೇಶದಲ್ಲಿ 'ವಿದೇಶೀ ಮಿಶನ್ ಹಾಗೂ ಭಾರತೀಯ ಚರ್ಚುಗಳು' ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಕೆಲವು ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಚರ್ಚುಗಳನ್ನು ಸ್ವಾಯತ್ತತೆಯತ್ತ ಮುನ್ನಡೆಸುವಂತಾಗಲು ಸಹಾಯವಾಗುವಂತೆ ಈ ಸಲಹೆಗಳನ್ನು ನೀಡಲಾಗುತ್ತದೆ. ಈ ಸಮಾವೇಶದಲ್ಲಿ ಭಾಗಿಯಾಗಿದ್ದ ಮಿಶನರಿಗಳು, ಜವಾಬ್ದಾರಿಯುತ ಸ್ಥಾನಗಳನ್ನು ನಿರ್ವಹಿಸಲು ಶಿಕ್ಷಿತ ಭಾರತೀಯರು ಲಭ್ಯವಿಲ್ಲ ಎಂಬ ವಾದವನ್ನು ಮುಂದಿಟ್ಟಿದ್ದರು. ಇದಕ್ಕೆ ಪ್ರತ್ಯುತ್ತರವಾಗಿ ಸೂಕ್ತವಾದ ದೇಶಿಯ ಕ್ರೈಸ್ತರನ್ನು ಮಿಶನ್ ಗುರುತಿಸಬೇಕೆಂದು ಸಮಾವೇಶದಲ್ಲಿ ತಿಳಿಸಲಾಗಿತ್ತು.[17] ದೇಶಿಯ ಕ್ರೈಸ್ತರಿಗೆ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದರ ವಿಚಾರವಾಗಿ ಮಿಶನರಿಗಳಿಂದ ಸ್ವಲ್ಪ ಮಟ್ಟಿನ ಪ್ರತಿರೋಧ ಇದ್ದಂತೆ ಮೇಲಿನ ಮಾತುಗಳಿಂದ ತೋರುತ್ತದೆ.

ದೇಶಿಯ ಚರ್ಚುಗಳು ಸ್ವಾಯತ್ತವಾಗಿ ಬೆಳೆಯಬೇಕೆಂಬ ವಾದ ಮಂಡನೆಯ ಕಾಲದಲ್ಲೂ ಕೆಲವು ವಿದ್ವಾಂಸರು, ದೇಶಿಯ ಚರ್ಚ್ ಸ್ವಾಯತ್ತವಾಗಿ ಬೆಳೆಯಲು ಅದಕ್ಕಿದ್ದ ಕೆಲವು ಸಮಸ್ಯೆಗಳ ಅಡೆತಡೆಗಳ ಕಡೆ ಗಮನ ಹರಿಸಿದ್ದರು. ದೇಶಿಯ ಚರ್ಚುಗಳು ಮತ ಪ್ರಚಾರಕ್ಕೆ [Self-propagation] ಸಂಬಂಧಿಸಿದಂತೆ ಪ್ರಗತಿಯನ್ನು ದಾಖಲಿಸಿಲ್ಲ. ಚರ್ಚನ್ನು ಸ್ವಂತವಾದ ಬೆಂಬಲದೊಂದಿಗೆ [self-support] ನಡೆಸುವ ಸಾಮರ್ಥ್ಯವನ್ನು ಹೊಂದಿಲ್ಲ. ಅದೇ ರೀತಿ ಪ್ರಬಲ ವಿದೇಶಿಯರ ಅಸ್ತಿತ್ವವಿರುವಾಗ ಸ್ವಾಯತ್ತ ಆಡಳಿತ ದೇಶಿಯ ಕ್ರೈಸ್ತರಿಗೆ ಕಷ್ಟಸಾಧ್ಯವಾಗಿದೆ ಎಂಬ ಸಮಸ್ಯೆಗಳನ್ನು ದೇಶಿಯ ಕ್ರೈಸ್ತರಲ್ಲಿ ಕೆಲವು ವಿದ್ವಾಂಸರು ಗುರುತಿಸಿದ್ದರು.[18] ಅಸೀರ್‌ವತಮ್‌ರವರು [Asirvatham] ಅಭಿಪ್ರಾಯ ಪಡುವಂತೆ ಭಾರತೀಯ ಕ್ರೈಸ್ತರು ಜವಾಬ್ದಾರಿಗಳನ್ನು ವಹಿಸಲು ಸಿದ್ಧರಾಗುತ್ತಿದ್ದಂತೆಯೇ, ಮಿಶನರಿಗಳು ವ್ಯವಸ್ಥೆಯಲ್ಲಿ ಹಿಂದಿನ [back seat] ಸ್ಥಾನಗಳನ್ನು ವಹಿಸಬೇಕು ಎಂದಿದ್ದರು.[19] ಹಣಕಾಸಿನ ಅಗತ್ಯತೆಗಳ ನಿರ್ವಹಣೆಯು ದೇಶಿಯ ಚರ್ಚುಗಳಿಗಿರುವ ಪ್ರಮುಖ ಸಮಸ್ಯೆ ಎಂದಿರುವ ಆಸೀರ್‌ವತಮ್, ಕ್ರೈಸ್ತ ನಾಯಕರು ಹಾಗೂ ಮಾರ್ಗದರ್ಶಕರು ಎಲ್ಲರೂ ವಿದೇಶಿಯರಾಗಿರುವಾಗ, ಸ್ವಾಯತ್ತ ಚರ್ಚ್‌ನ ಹುಟ್ಟು ಸಾಧ್ಯವೇ ಎಂದು ಪ್ರಶ್ನಿಸಿದ್ದರು. ದೇಶಿಯ ಕ್ರೈಸ್ತರು ಶಿಕ್ಷಿತರಾಗಿ, ಸ್ವತಂತ್ರವಾದ ಉದ್ಯೋಗದಲ್ಲಿ ಬೆಳೆಯದೇ ಇರುವುದು ದೇಶಿಯ ಚರ್ಚುಗಳ ಹಣಕಾಸಿನ ಸಮಸ್ಯೆಗಳಿಗೆ ಕಾರಣಗಳಾಗಿವೆ. ದೇಶಿಯ ಕ್ರೈಸ್ತರನ್ನು ಮಿಶನರಿಗಳು ತಮ್ಮ ನಿಯಂತ್ರಣದಲ್ಲಿ ಇರಿಸಿದ್ದೇ ಇದಕ್ಕೆ ಕಾರಣವಾಗಿದೆ. ಮತ್ತೊಂದೆಡೆ ಚರ್ಚ್ ಆಡಳಿತವನ್ನು ನಿರ್ವಹಿಸುವಂತಾಗಲು, ಸಮರ್ಥ ನಾಯಕತ್ವದ ಬೆಳವಣಿಗೆಗೆ ದೇಶಿಯ ಕ್ರೈಸ್ತರನ್ನು ತರಬೇತುಗೊಳಿಸಿ, ಅವರಿಗೆ ಅಧಿಕಾರ ವಹಿಸಬೇಕು. ಧರ್ಮ ಮತ್ತು ನೈತಿಕ ಮೌಲ್ಯಗಳಿಗೆ ಸಂಬಂಧಿಸಿದಂತೆ ಮಾತ್ರ ಕ್ರೈಸ್ತರು ಮತ್ತು ಕ್ರೈಸ್ತೇತರರ ನಡುವೆ ಭಿನ್ನತೆಗಳಿದ್ದು, ಭಾರತೀಯ ಕ್ರೈಸ್ತರು ದೇಶದ ಕಲೆ, ಸಂಸ್ಕೃತಿ, ನಾಗರಿಕತೆಗಳ ಬಗ್ಗೆ ಹೆಮ್ಮೆ ಪಡುವವರಾಗಬೇಕು[20] ಎಂಬ ಅಭಿಪ್ರಾಯವನ್ನು ಅವರು ಹೊಂದಿದ್ದರು.

ಸ್ವಾಯತ್ತ ಚರ್ಚ್ ಬಗ್ಗೆ ಬಾಸೆಲ್ ಮಿಶನಿನ ದೃಷ್ಟಿಕೋನ:

ದೇಶಿಯ ಮಟ್ಟದಲ್ಲಿ ಚರ್ಚುಗಳು ಸ್ವಾಯತ್ತವಾಗಬೇಕು. ಅವು ಸ್ವಾಯತ್ತವಾಗಿ ಬೆಳೆಯಲು ಇರುವ ಸಮಸ್ಯೆಗಳ ಬಗ್ಗೆ ಚರ್ಚೆಗಳಾಗುವ ಸಂದರ್ಭದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಕೂಡಾ ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತವಾಗಿ ಬೆಳೆಯಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಬಾಸೆಲ್ ಮಿಶನ್ ಚರ್ಚುಗಳನ್ನು ಸ್ವಾಯತ್ತವಾಗಿ ಬೆಳೆಸುವ ವಿಚಾರವಾಗಿ ಬಾಸೆಲ್ ಮಿಶನರಿಗಳು 20ನೇ ಶತಮಾನದ ಆರಂಭದಿಂದಲೇ ಅದರ ಬಗ್ಗೆ ಒಲವು ವ್ಯಕ್ತಪಡಿಸಿರುವುದನ್ನು

ಗಮನಿಸಬಹುದು. ಬಾಸೆಲ್ ಮಿಶನ್ 1911ನೇ ವರ್ಷದ ತನ್ನ 72ನೇ ವರದಿಯಲ್ಲಿ ಸ್ವಾಯತ್ತ ಆಡಳಿತದ ಸಮಸ್ಯೆಗಳ [The problem of self-government] ಬಗ್ಗೆ ಚರ್ಚಿಸುತ್ತಾ, 'ದೇಶದಲ್ಲಿ 2 ಶತಮಾನಗಳಿಗಿಂತಲೂ ಹೆಚ್ಚು ಕಾಲದಿಂದ ಪ್ರೊಟೆಸ್ಟೆಂಟ್ ಮಿಶನರಿಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಸ್ವಾಯತ್ತ ಆಡಳಿತವಿರುವ ಚರ್ಚುಗಳ ಸಂಖ್ಯೆ ಬಹಳ ವಿರಳವಾಗಿದೆ ಎನ್ನುತ್ತಾ ಚರ್ಚುಗಳ ಬಹುಪಾಲು ಜವಾಬ್ದಾರಿಗಳನ್ನು ಅವುಗಳಿಗೆ ವಹಿಸುವ ಕಾಲ ಸನ್ನಿಹಿತವಾಗಿದೆ. ಆದುದರಿಂದ ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತ ಆಡಳಿತದ ಕಡೆ ಮುಂದುವರಿಯುವಂತಾಗಲು ಹಲವು ಕ್ರಮಗಳನ್ನು ಕೈಗೊಂಡಿದೆ' ಎಂದು ವಿವರಿಸಿದೆ.[21] ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ಬಾಸೆಲ್ ಮಿಶನ್ ಭಾರತೀಯ ಪಾಸ್ಟರ್‌ಗಳಿಗೆ [Indian pastors] ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತಿದ್ದು, ಇದು ಭಾರತೀಯ ಚರ್ಚುಗಳಿಗೆ ಸಮರ್ಥ ಹಾಗೂ ಉತ್ತಮ ನೈತಿಕ ಮೌಲ್ಯಗಳುಳ್ಳ ನಾಯಕತ್ವವನ್ನು ಒದಗಿಸಲಿದೆ. ಆದುದರಿಂದ ಸಮರ್ಥ ಉದ್ಯೋಗಿಗಳಿಗೆ ತರಬೇತಿ ನೀಡುವುದು ಪಾಶ್ಚಾತ್ಯ ಮಿಶನರಿಗಳ ಪ್ರಮುಖ ಜವಾಬ್ದಾರಿಯಾಗಿರಬೇಕು ಎಂದು ಬಾಸೆಲ್ ಮಿಶನ್ ವರದಿ ತಿಳಿಸುತ್ತದೆ.[22] ಆದರೆ ಬಾಸೆಲ್ ಮಿಶನರಿಗಳು ತರಬೇತುಗೊಂಡ ಸ್ಥಳೀಯರನ್ನು ತಮ್ಮ ಪ್ರಬಲ ನಿಯಂತ್ರಣದಲ್ಲಿ ಮುಂದುವರಿಸುತ್ತಾರೆ ಹೊರತು, ಈ ಮೇಲಿನ ವಿಚಾರಗಳನ್ನು ಅನುಷ್ಠಾನಗೊಳಿಸುವ ಪ್ರಾಮಾಣಿಕ ಪ್ರಯತ್ನಗಳನ್ನು ಅವರು ಮಾಡಿರುವುದಿಲ್ಲ.

20ನೇ ಶತಮಾನದ ಆರಂಭದಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತ ಆಡಳಿತದತ್ತ ಮುಂದುವರಿಯುವುದರ ಬಗ್ಗೆ ಬಹಳಷ್ಟು ಸೂಕ್ಷ್ಮವಾಗಿ ಆಲೋಚನೆ ಮಾಡಿದಂತೆ ಕಂಡುಬರುತ್ತದೆ. ಬಾಸೆಲ್ ಮಿಶನ್ 1912ನೇ ವರ್ಷದ ತನ್ನ 73ನೇ ವರದಿಯಲ್ಲಿ ಸ್ವಾಯತ್ತ ಆಡಳಿತದ ಬಗ್ಗೆ ಬಹಳಷ್ಟು ದೀರ್ಘವಾದ ಚರ್ಚೆಯನ್ನು ನಡೆಸಿದೆ. ಬಾಸೆಲ್ ಮಿಶನ್ ಚರ್ಚ್‌ಗಳನ್ನು ಸ್ವಾಯತ್ತತೆ ಕಡೆ ನಡೆಸಲು ಅದು ಯಾವೆಲ್ಲಾ ಕ್ರಮಗಳನ್ನು ಕೈಗೊಂಡಿದೆ ಹಾಗೂ ಈ ಕ್ರಮಗಳು ಯಾವ ರೀತಿ ಬಾಸೆಲ್ ಮಿಶನ್ ಚರ್ಚುಗಳಲ್ಲಿ ಸ್ವಾಯತ್ತ ಆಡಳಿತವನ್ನು ಹುಟ್ಟುಹಾಕಲಿದೆ ಎಂಬುದನ್ನು ವರದಿಯಲ್ಲಿ ಸವಿವರವಾಗಿ ವಿವರಿಸಲಾಗಿದೆ. ಈ ಮೂಲಕ ಬಾಸೆಲ್ ಮಿಶನ್ ತನ್ನ ಚರ್ಚುಗಳನ್ನು ಸ್ವಾಯತ್ತ ಆಡಳಿತೆಯತ್ತ ಮುಂದುವರಿಯುವಂತಾಗಲು ಬಹಳಷ್ಟು ಉತ್ಸುಕವಾಗಿತ್ತು ಎಂಬುದನ್ನು ಈ ಮೂಲಕ ತಿಳಿಯಪಡಿಸಿದೆ. ಭಾರತೀಯ ಚರ್ಚುಗಳು ಸ್ವಾಯತ್ತ ಆಡಳಿತೆಯತ್ತ ಮುಂದುವರಿಯುವಂತಾಗಲು ಮಿಶನುಗಳು ಅಡ್ಡಿಯಾಗಿವೆ[23] ಎಂಬುದನ್ನು ಬಾಸೆಲ್ ಮಿಶನ್ ಒಪ್ಪಿಕೊಂಡಿದೆ. ವರದಿಯು ಹೇಳುವಂತೆ ಬಾಸೆಲ್ ಮಿಶನ್ ಚರ್ಚುಗಳು ಮಿಶನರಿಗಳಿಗಾಗಿ ಹಾಗೂ ಹಣಕಾಸಿನ ಅವಶ್ಯಕತೆಗಾಗಿ ಇಂದಿಗೂ ಮಿಶನಿನ ಮೇಲೆ ಅವಲಂಬಿತವಾಗಿವೆ. ಹೀಗಿದ್ದರೂ ಮತ್ತೊಂದೆಡೆ ಬಾಸೆಲ್ ಮಿಶನ್ ಕ್ರೈಸ್ತರು ನಿಭಾಯಿಸಲು ಶಕ್ತರಾಗಿರುವ ಜವಾಬ್ದಾರಿಗಳನ್ನು ಅವರಿಗೆ

ವಹಿಸಲು ಮಿಶನರಿಗಳು ಸಿದ್ಧರಾಗಿದ್ದಾರೆ. ಈ ರೀತಿ ಬಾಸೆಲ್ ಮಿಶನ್ ಚರ್ಚುಗಳು ನಿಧಾನವಾಗಿ ಸ್ವಾಯತ್ತ ಆಡಳಿತದತ್ತ ಮುಂದುವರಿಯುತ್ತಿವೆ. ಸ್ವಾಯತ್ತ ಆಡಳಿತದ ಕಡೆಗೆ ಮುಂದುವರಿಯುವಂತಾಗಲು ಕೈಗೊಂಡ ಕ್ರಮಗಳ ಬಗ್ಗೆ ತಿಳಿಸುತ್ತಾ, ಭಾರತೀಯ ಪಾಸ್ಟರ್‌ಗಳಿಗೆ ಸಾಧ್ಯವಿರುವ ಸ್ವತಂತ್ರ ಜವಾಬ್ದಾರಿಗಳನ್ನು ನೀಡಲಾಗಿದೆ. ಅವರಿಗೆ ಪೂಜಾವಿಧಿ ವಿಧಾನ [divine services], ಶಾಲೆಗಳ ಆಡಳಿತ ಹಾಗೂ ಪಾದ್ರಿಯಾಗಿ ಸಭೆಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ನೀಡಲಾಗಿದೆ. ಸ್ಥಾನಿಕ ಚರ್ಚಿನ ಕೂಟಗಳಲ್ಲಿ ಮಿಶನರಿಗಳಿಗೆ 1/3ರಷ್ಟು ಸೀಟುಗಳಿಗಿಂತ ಹೆಚ್ಚು ಸೀಟುಗಳನ್ನು ನೀಡಲಾಗುವುದಿಲ್ಲ. ಅದೇ ರೀತಿ ಜಿಲ್ಲಾ ಸಿನೋಡುಗಳಲ್ಲಿ ಯುರೋಪಿಯನ್ ಸದಸ್ಯರ ಸಂಖ್ಯೆಯನ್ನು ಕಡಿತಗೊಳಿಸಲಾಗುವುದು. ಅದೇ ರೀತಿ ಬಾಸೆಲ್ ಮಿಶನಿನ ಹೋಮ್‌ಬೋರ್ಡ್, ಜನರಲ್ ಸಿನೋಡ್ ಬೋರ್ಡ್ ಅಥವಾ ಚರ್ಚ್ ಕೌನ್ಸಿಲ್‌ನ ರಚನೆಗೆ ಅವಕಾಶವನ್ನು ನೀಡಿದೆ. ಭಾರತೀಯ ಚರ್ಚುಗಳನ್ನು ಒಟ್ಟು ಸೇರಿಸಿ ಅವರಲ್ಲಿ ಐಕ್ಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ[24] ಎಂದು ತನ್ನ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿತ್ತು. ಈ ವರದಿಯು ಚರ್ಚ್ ಕೌನ್ಸಿಲ್‌ನಲ್ಲಿರಬೇಕಾದ ಸದಸ್ಯರುಗಳ ಬಗ್ಗೆ ಮಾಹಿತಿ ಹಾಗೂ ಅದರ ಕಾರ್ಯಗಳ ಬಗ್ಗೆಯೂ ವಿವರಿಸಿದೆ.[25] ಈ ರೀತಿ ತನ್ನ ಚರ್ಚುಗಳನ್ನು ಸ್ವಾಯತ್ತತೆಯತ್ತ ಮುಂದುವರೆಸಲು ತಾನು ಪ್ರಬಲ ಕ್ರಮಗಳನ್ನು ಕೈಗೊಂಡಿರುವುದಾಗಿ ತನ್ನ ವರದಿಯಲ್ಲಿ ತಿಳಿಸಿದೆ.

ಸ್ವಾಯತ್ತ ಚರ್ಚ್ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರ ನಿಲುವು:

ಬಾಸೆಲ್ ಮಿಶನ್ ಕ್ರೈಸ್ತರು ಕೂಡಾ ತಮ್ಮ ಚರ್ಚುಗಳಿಗೆ ಸ್ವಾಯತ್ತತೆ ಬೇಕು. ನಾವು ಸ್ವತಂತ್ರರಾಗಿ ಬೆಳೆಯಬೇಕು. ಚರ್ಚುಗಳನ್ನು ಮಿಶನರಿಗಳ ನಿಯಂತ್ರಣದಿಂದ ಮುಕ್ತಗೊಳಿಸಬೇಕು. ಮಿಶನರಿಗಳ ಮೇಲಿನ ಅವಲಂಬನೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂಬ ಆಲೋಚನೆ ಮತ್ತು ಅಭಿಪ್ರಾಯಗಳನ್ನು ಹೊಂದಿದ್ದರು. ಬಾಸೆಲ್ ಮಿಶನರಿಗಳು ಮಲಬಾರ್, ದಕ್ಷಿಣ ಕೆನರಾ ಮತ್ತು ದಕ್ಷಿಣ ಮರಾಠ ಪ್ರದೇಶಗಳಲ್ಲಿ ಮಿಶನ್‌ಗಳನ್ನು ಸ್ಥಾಪಿಸಿ, ದೇಶವಾಸಿಗಳ ಮೇಲೆ ದೊರೆತನ ಮಾಡುತ್ತಿದ್ದಾರೆ. ಮಿಶನ್‌ಗಳನ್ನು ಸ್ಥಾಪಿಸಿ, ದೇಶಿಯರನ್ನು ಉನ್ನತಿಯತ್ತ ಮುನ್ನಡೆಸಿ, ನಂತರ ಅವುಗಳನ್ನು ದೇಶಿಯರಿಗೇನೇ ಬಿಟ್ಟುಕೊಡುವುದು ತಮ್ಮ ಉದ್ದೇಶವೆಂದು ಹಲವು ವರ್ಷಗಳಿಂದ ಮಿಶನರಿಗಳು ಹೇಳುತ್ತಾ ಬಂದರೂ, ಅದನ್ನು ಸಾಧಿಸುವುದರತ್ತ ಸ್ವಲ್ಪವೂ ಮಿಶನರಿಗಳು ಗಮನ ಕೊಡಲಿಲ್ಲ ಎಂದು ಬಾಸೆಲ್ ಮಿಶನರಿಗಳನ್ನು 'ಸತ್ಯವ್ರತ' ಟೀಕಿಸಿತ್ತು.[26] ಜಾಗತಿಕ ಯುದ್ಧದ ಸಂದರ್ಭದಲ್ಲಿ ಜರ್ಮನರು ಸ್ವದೇಶಕ್ಕೆ ಮರಳಿದ ಸಂದರ್ಭದಲ್ಲಿ ನಮ್ಮ ಸಭೆಗಳನ್ನು ನಾವೇ ನೋಡಿಕೊಳ್ಳುವ ಅವಕಾಶ ಸಿಕ್ಕಿತಾದರೂ, ಅದನ್ನು ಸದುಪಯೋಗಗೊಳಿಸಲಾರದೆ ಹೋದದ್ದು ಬಾಸೆಲ್ ಮಿಶನ್ ಕ್ರೈಸ್ತರ ದೌರ್ಭಾಗ್ಯವಾಗಿದೆ. ಅಷ್ಟು ಮಾತ್ರವಲ್ಲದೇ ಇನ್ನು ನಮಗೆ ಗುಲಾಮಗಿರಿ

ಬೇಕು. ಜರ್ಮನರು ಬರಲಿ, ಸ್ವಿಸರು ಉಳಿಯಲಿ ಎಂದು ವಾದಿಸುವುದು ಎಷ್ಟು ಸಮಂಜಸ ಎಂದು ಪತ್ರಿಕೆ ಪ್ರಶ್ನಿಸಿತ್ತು.[27] ದೇಶಿಯ ಕ್ರೈಸ್ತರು ಪಾಶ್ಚಾತ್ಯರನ್ನು ಅನುಸರಿಸುವುದನ್ನು ಬಿಟ್ಟು, ದೇಶಿಯ ವಿಚಾರಗಳನ್ನು ಅನುಸರಿಸಿ ಅಭಿವೃದ್ಧಿ ಹೊಂದಬೇಕೆಂದು ಸತ್ಯವ್ರತ ಬಾಸೆಲ್ ಮಿಶನ್ ಕ್ರೈಸ್ತರಿಗೆ ಕರೆ ಕೊಟ್ಟಿತ್ತು.[28] ಜರ್ಮನ್ ಮಿಶನರಿಗಳು ಪುನಃ ಮರಳಿ ತಮ್ಮ ಠಾಣ್ಯಗಳಿಗೆ ಬರುವ ತಯಾರಿಯಲ್ಲಿರುವಾಗ ಸತ್ಯವ್ರತವು ಹಲವು ದೃಷ್ಟಿಕೋನಗಳೊಂದಿಗೆ ಒಂದು ಪ್ರಬಲ ಚರ್ಚೆಯನ್ನು ನಡೆಸುತ್ತದೆ. ಅದು ಹೇಳುವಂತೆ 'ನಮ್ಮನ್ನು ನಾವೇ ಯಾಕೆ ಆಳಿಕೊಳ್ಳಬಾರದು?' ಎಂದು ಪ್ರಶ್ನಿಸಿದೆ. 20ನೇ ಶತಮಾನವು ಪ್ರಜಾಪ್ರಭುತ್ವದ ಕಾಲಾವಧಿಯಾಗಿದೆ. ಲೋಕದಲ್ಲಿ ಎಲ್ಲರು ತಮ್ಮನ್ನು ತಾವೇ ಆಳಿಕೊಳ್ಳಬೇಕು ಮತ್ತು ಒಬ್ಬನು ಇನ್ನೊಬ್ಬನನ್ನು ಅಧಿಕಾರದ ಬಲದಿಂದ ನಿಯಂತ್ರಿಸುವುದು ನ್ಯಾಯವಾದುದಲ್ಲ ಎಂದು ವಾದಿಸಿದೆ. ರಷ್ಯಾ, ಜರ್ಮನಿ ಮುಂತಾದ ರಾಷ್ಟ್ರಗಳಲ್ಲಿ ರಾಜಪ್ರಭುತ್ವ ಹೋಗಿ ಸ್ವಯಂ ನಿರ್ಣಯದ ತತ್ವಗಳು ನೆಲೆಗೊಂಡಿವೆ. ರಾಜಕೀಯ ಕ್ಷೇತ್ರದಲ್ಲಿ ಸ್ವಯಂ ನಿರ್ಣಯದ ತತ್ವಕ್ಕೆ ಅವಕಾಶವಿರುವಾಗ ನಮ್ಮ ಮಿಶನಿನಂತಹ ಧಾರ್ಮಿಕ ಕಾರ್ಯಗಳಲ್ಲಿ ಆ ತತ್ವಕ್ಕೆ ಯಾಕೆ ಅವಕಾಶ ಸಿಕ್ಕಬಾರದು? ಎಂದು ಪ್ರಶ್ನಿಸಿದೆ. 'ಧರ್ಮರಾಜ್ಯದಲ್ಲಿ ಒಬ್ಬರು ಇನ್ನೊಬ್ಬರ ಆಳಾಗಿ ಯಾಕೆ ಇರಬೇಕು?' ಎಂದು ಪ್ರಶ್ನಿಸುತ್ತಾ, ಅವರವರ ಮಿಶನುಗಳನ್ನು ಅವರವರೇ ಆಳಿಕೊಳ್ಳುವುದು ಉತ್ತಮ. ಇದು ಸ್ವಾವಲಂಬನೆಯಾಗಿದೆ ಎಂದು ಸತ್ಯವ್ರತ ವಾದಿಸಿದೆ.[29]

ಬಾಸೆಲ್ ಮಿಶನ್ ಕ್ರೈಸ್ತರಿಗೆ ಸ್ವಯಂ ಆಡಳಿತದಲ್ಲಿ ತಿಳುವಳಿಕೆ ಇಲ್ಲ ಮತ್ತು ಅನುಭವವಿಲ್ಲ ಎಂಬ ವಿಚಾರವನ್ನು ಕುರಿತು, ಸತ್ಯವ್ರತವು 'ಆಳುವುದು ಒಂದು ಕಸುಬು. ಯಾವುದಾದರೂ ಒಂದು ಕಸುಬು ತಿಳಿಯಬೇಕಾದರೆ ಅದನ್ನು ಕೈಗೊಳ್ಳಬೇಕು. ಅದನ್ನು ಕೈಗೊಳ್ಳದೇ ಅನುಭವ ಸಿಗಲಾರದು. ಅನುಭವ ಸಿಗುವ ತನಕ ಎಷ್ಟೋ ತಪ್ಪುಗಳು ಸಂಭವಿಸಬಹುದು. ಆದರೆ ತಪ್ಪುಗಳನ್ನು ಮಾಡಿಯೇ ಮುಂದೆ ತಪ್ಪುಗಳನ್ನು ಮಾಡದಿರಲು ಸಾಧ್ಯವಾಗುತ್ತದೆ' ಎಂದು ವಾದಿಸುತ್ತಾ ಸ್ವಾವಲಂಬನೆಯೇ ಶ್ರೇಷ್ಠವಾದುದೆಂದು ಹೇಳಿದೆ.[30] ನಮ್ಮನ್ನು ಕೇಳುವವರು ಇರಕೂಡದು, ಇತರರ ಅಧಿಕಾರ ನಮ್ಮ ಮೇಲೆ ಇರಬಾರದು ಎಂಬ ಅಭಿಪ್ರಾಯ ಮತ್ತು ಕಾರಣಗಳಿಂದ ನಾವು ಸ್ವಾವಲಂಬನೆಯ ತತ್ವವನ್ನು ಪ್ರತಿಪಾದಿಸುತ್ತಿಲ್ಲ ಎಂದಿರುವ ಪತ್ರಿಕೆ, ನಮ್ಮ ಕಾಲಿನ ಮೇಲೆ ನಾವು ನಿಂತುಕೊಳ್ಳಬೇಕು. ಹಾಗಿದ್ದಲ್ಲಿ ಮಿಶನ್ ಕಾರ್ಯವನ್ನು ಇನ್ನೂ ಉತ್ತಮವಾಗಿ ನಡೆಸಬಹುದು. ಯಾವಾಗಲೂ ಪರರ ಮೇಲೆ ಅವಲಂಭಿಸಿರುವುದು ಯುಕ್ತವಾದುದಲ್ಲ ಎಂಬ ಕಾರಣಗಳಿಂದ ತಾನು ಸ್ವಾವಲಂಬನೆಯನ್ನು ಪ್ರತಿಪಾದಿಸುತ್ತಿರುವುದಾಗಿ ವಾದಿಸಿದೆ.[31] ಹೀಗೆ ಬಾಸೆಲ್ ಮಿಶನ್ ಕ್ರೈಸ್ತರಿಗೆ ಧಾರ್ಮಿಕ ಸ್ವಾವಲಂಬನೆಯನ್ನು ಒದಗಿಸಬೇಕು ಎಂಬ ಬಲವಾದ ಬೇಡಿಕೆಯನ್ನು ಸತ್ಯವ್ರತ ಮಂಡಿಸಿತ್ತು. ರೋಮನ್ ಕ್ಯಾಥೋಲಿಕರ ಸಭೆಗಳು ಸ್ವತಂತ್ರವುಳ್ಳವಾಗಿದ್ದು ತಮ್ಮ ಪರಿಪಾಲನೆಯನ್ನು ಅವರೇ

ನೋಡಿಕೊಳ್ಳುತ್ತಿದ್ದು, ವಿದೇಶಿ ಸಹಾಯವನ್ನು ನಿರೀಕ್ಷಿಸುತ್ತಿರಲಿಲ್ಲ. ಆದರೆ ಬಾಸೆಲ್ ಮಿಶನ್ ತನ್ನ ಸಭೆಗಳಿಗೆ ಸಹಾಯ ದ್ರವ್ಯವನ್ನು ನೀಡುವುದರ ಕಾರಣದಿಂದಾಗಿ, ಈ ಸಭೆಗಳು ಸ್ವಪರಿಪಾಲನೆಗೆ ಏನೂ ಪ್ರಯತ್ನವನ್ನು ಮಾಡದೆ ಹೆಚ್ಚು ಹೆಚ್ಚಾಗಿ ಬಾಸೆಲ್ ಮಿಶನ್ ಮೇಲೆ ಅವಲಂಬಿಸುವಂತಾಗಿದೆ. ಆದುದರಿಂದ ಬಾಸೆಲ್ ಮಿಶನ್ ತಾನು ಸ್ಥಾಪಿಸಿದ ಸಭೆಗಳಿಗೆ ಆದಷ್ಟು ಬೇಗನೇ ಸ್ವಾಪರಿಪಾಲನಾ ಕಾರ್ಯವನ್ನು ಬಿಟ್ಟುಕೊಟ್ಟು, ಅವು ಮುಂದೆ ಹೊರಗಿನ ಸಹಾಯವನ್ನು ನಿರೀಕ್ಷಿಸದೆ, ತಮ್ಮ ಕಾರ್ಯವನ್ನು ತಾವೇ ನಡೆಸುವಂತೆ ಮಾಡಬೇಕು. ತಮ್ಮ ಸಭಾಪಾಲಕರಿಗೆ ತಾವೇ ಸಂಬಳ ಕೊಟ್ಟು, ಬಡವರನ್ನು ಸಂರಕ್ಷಿಸಿ, ಶಾಲೆಗಳನ್ನು ಮುನ್ನಡೆಸಬೇಕು. ಮಿಶನ್ ಸೊಸೈಟಿಯು ಅನ್ಯರೊಳಗೆ ಸುವಾರ್ತೆ ಸಾರುವುದರತ್ತ ಗಮನ ಹರಿಸಬೇಕು. ಧಾರ್ಮಿಕ ಪಾಠಗಳನ್ನು ಕೊಡುವ ಉಪಾಧ್ಯಾಯರನ್ನು ತರಬೇತು ಮಾಡುವುದು, ಪಾಸ್ಟರ್‌ಗಳಿಗೆ ತರಬೇತಿ ನೀಡುವುದು, ವೈದಿಕ ಶಾಲೆಯನ್ನು ನಡೆಸುವುದು ಮುಂತಾದ ವಿಚಾರಗಳ ಕಡೆ ಮಿಶನರಿಗಳು ಗಮನಹರಿಸಬೇಕು ಎಂಬುದು ಸ್ಥಳೀಯ ಕ್ರೈಸ್ತರ ಬೇಡಿಕೆಯಾಗಿತ್ತು.[32]

ಬಾಸೆಲ್ ಮಿಶನ್ ಕ್ರೈಸ್ತರ ಪರವಾಗಿ ಎರಡು ಪತ್ರಿಕೆಗಳು (ಪಕ್ಷಗಳು) ಕಾರ್ಯ ನಿರ್ವಹಿಸುತ್ತಿವೆ. ಇವು ಸಮಾಜವನ್ನು ಯಾವ ಕಡೆಗೆ ನಡೆಸುತ್ತಿವೆ ಎಂಬುದರ ಬಗ್ಗೆ ಇವುಗಳಿಗೆ ಸ್ಪಷ್ಟನೆ ಇರಬೇಕು ಎಂದಿರುವ ಸತ್ಯವ್ರತ, ಎಲ್ಲಿಯವರೆಗೆ ವಿದೇಶಿ ಮಿಶನರಿಗಳ ಸಹಾಯವಿಲ್ಲದೇ ಸ್ವತಂತ್ರವಾದ ಸಮಾಜವಾಗಿ, ಒಂದು ಮತವಾಗಿ ಬಾಸೆಲ್ ಮಿಶನ್ ಕ್ರೈಸ್ತರು ಇರಲಾರರೋ, ಅಲ್ಲಿಯವರೆಗೆ ಅವರು ಸ್ವತಂತ್ರರಲ್ಲ ಎಂದಿದೆ. 'ಸ್ವಿಸರು ಬೇಡ, ಜರ್ಮನರು ಬೇಕು ಎಂದು ಹೋರಾಡುವ ಪಕ್ಷವಾಗಲೀ ಅಥವಾ ಸ್ವಿಸ್ಸರೇ ಸಾಕು, ಜರ್ಮನರು ಅಗತ್ಯವಿಲ್ಲ ಎಂದು ಹೋರಾಡುವ ಮತ್ತೊಂದು ಪಕ್ಷವಾಗಲೀ ಬಾಸೆಲ್ ಮಿಶನ್ ಕ್ರೈಸ್ತ ಸಮಾಜವನ್ನು ಯಾವ ಮಹತ್ವದ ಗುರಿಯ ಕಡೆಗೆ ನಡೆಸುವ ಉದ್ದೇಶವನ್ನಿಟ್ಟುಕೊಂಡಂತೆ ತೋರುವುದಿಲ್ಲ. ಇವು ಒಂದಲ್ಲ ಮತ್ತೊಂದು ರೀತಿಯಲ್ಲಿ ಗುಲಾಮಗಿರಿಯ ಕಡೆಗೆ ಬಾಸೆಲ್ ಮಿಶನ್ ಕ್ರೈಸ್ತರನ್ನು ನುಗ್ಗಿಸುವ ಪ್ರಯತ್ನಗಳನ್ನು ಮಾಡುತ್ತಿವೆ ಎಂದು ಕ್ರೈಸ್ತರು ಆರೋಪಿಸಿದ್ದರು.[33] ಬೇರೆ ಬೇರೆ ಸಮುದಾಯಗಳು ಪರದೇಶದಿಂದ ಭಾರತಕ್ಕೆ ಬಂದರೂ ಅವು ದೇಶಿಯತೆಯನ್ನು ಮೈಗೂಡಿಸಿ, ಸ್ವತಂತ್ರವಾಗಿ ಬೆಳೆದಿಲ್ಲವೇ ಎನ್ನುವುದನ್ನು ಅವಲೋಕಿಸುತ್ತಾ, 400 ವರ್ಷಗಳ ಹಿಂದೆ ಕೊಂಕಣದಿಂದ ತುಳುನಾಡಿಗೆ ಬಂದ 8 ಕೊಂಕಣಸ್ಥರ ಕುಟುಂಬಗಳು ಪರರ ಸಹಾಯವಿಲ್ಲದೇ ಎಷ್ಟು ಅಭಿವೃದ್ಧಿಯಾಗಿಲ್ಲವೇ? ಪರ್ಶಿಯಾದಿಂದ ಗುಜರಾತಿಗೆ ಬಂದ ಪಾರ್ಸಿಗಳು, ಜೆರುಸಲೇಮ್‌ನಿಂದ ಕೊಚ್ಚಿಗೆ ಬಂದ ಯಹೂದಿಗಳು ಪರರ ಆಶ್ರಯವಿಲ್ಲದೇ ಸ್ವತಂತ್ರ ಸಮಾಜಗಳಾಗಿ ಬೆಳೆದಿಲ್ಲವೇ? ಎಂದು ಸ್ಥಳೀಯ ಕ್ರೈಸ್ತರು ಪ್ರಶ್ನಿಸಿದ್ದರು. ಮಿಶನರಿಗಳಿಲ್ಲದಿದ್ದರೆ ನಮ್ಮಿಂದೇನೂ ಸಾಧ್ಯವಾಗದು ಎಂದು ಹೇಳಿ

ಸ್ವಾವಲಂಬನೆ ಮುಂತಾದ ವಿಚಾರಗಳನ್ನು ತಿಳಿಯದೆ ಹೋದರೆ ಮುಂದಿನ ಪೀಳಿಗೆಗೂ ನಾವು ಗುಲಾಮಗಿರಿಯನ್ನೇ ತಯಾರಿಸಿಟ್ಟಂತಾಗುತ್ತದೆ. ಬಿಳಿ ಜನರು ನಮ್ಮನ್ನು ಬಿಟ್ಟು ಹೋಗಿ, ನಮಗೆ ಸ್ವತಂತ್ರದ ದಾರಿಯನ್ನು ಕಲ್ಪಿಸಿಕೊಟ್ಟಾರು ಎಂದು ಕನಸಿನಲ್ಲೂ ನೆನೆಸುವುದು ಬೇಡ. ಮಾತ್ರವಲ್ಲದೇ ನಮಗೆ ಸ್ವಾಯತ್ತ ಅಧಿಕಾರವನ್ನು ಕೊಡಿರಿ ಎಂದು ಕೇಳಿದಾಗ, ಕೊಡುವವರು ಅಲ್ಲ. ಆದುದರಿಂದ ಸ್ವಾತಂತ್ರ್ಯವೆಂಬುದು ಪರರಿಂದ ಕೊಡಲ್ಪಡುವುದಲ್ಲ. ಬದಲು ನಾವೇ ಪರರಿಂದ ಪಡಕೊಳ್ಳುವಂಥದ್ದಾಗಿದೆ ಎಂಬುದು ಕ್ರೈಸ್ತರ ಆಲೋಚನೆಯಾಗಿತ್ತು.[34]

ವಿದೇಶಿಯರಿಂದ ಮಿಶನುಗಳ ಸ್ಥಾಪನೆಯ ಹಿಂದಿನ ಉದ್ದೇಶದ ಬಗ್ಗೆ ತಮ್ಮದೇ ವಾದವನ್ನು ಮಂಡಿಸಿರುವ ಬಾಸೆಲ್ ಮಿಶನ್ ಕ್ರೈಸ್ತರು, ಮಿಶನು ಸ್ಥಾಪನೆ ಮಾಡುವುದು ಬಿಳಿ ಜನರು ವಿದೇಶಗಳಲ್ಲಿ ಮಾಡುವ ಒಂದು ಕಸುಬಾಗಿದೆ. ಎದುರಿನಲ್ಲಿ ಮತ ಮತ್ತು ಧರ್ಮ ಕಾರ್ಯಗಳನ್ನು ಮಾಡುವುದರಿಂದ ತಮ್ಮ ಮೇಲೆ ಜನರಿಂದಲೂ, ಸ್ಥಳೀಯ ಸರಕಾರದಿಂದಲೂ ವಿಶ್ವಾಸವನ್ನು ಸಂಪಾದಿಸಿ, ಜನರನ್ನು ಮರುಳು ಮಾಡುವುದು ಅವರ ಪ್ರೊಪಗಾಂಡವಾಗಿದ್ದು, ಹಿಂದಿನಿಂದ ಹಣ ಮಾಡುವ ಧ್ಯೇಯವೇ ಮಿಶನುಗಳನ್ನು ನಡೆಸುವ ಶಕ್ತಿಯಾಗಿದೆ ಎಂದು ಮಿಶನುಗಳನ್ನು ಬಾಸೆಲ್ ಮಿಶನ್ ಕ್ರೈಸ್ತರು ಟೀಕಿಸಿದ್ದರು. ಆದರೆ ಮಿಶನರಿಗಳು ಸಂಬಳಕ್ಕೆ ಕೆಲಸ ಮಾಡುವವರಾಗಿರುವುದರಿಂದ ಅವರು ಹಣ ಮಾಡುವುದಕ್ಕೆ ಬಂದವರೆಂದು ದೂಷಿಸಲು ಸಾಧ್ಯವಿಲ್ಲ ಎನ್ನುತ್ತಾ, ಬಾಸೆಲ್ ಮಿಶನನ್ನು ನಡೆಸುವವರು ಬಂಡವಾಳಶಾಹಿಗಳು (ಕ್ಯಪಿಟಲಿಸ್ಟರು) ಎಂದು ಕ್ರೈಸ್ತರು ಪ್ರಬಲ ಆರೋಪವನ್ನು ಮಾಡಿದ್ದರು.[35] ಬಾಸೆಲ್ ಮಿಶನ್ ದೇವಾಲಯಗಳಿರುವ ಜಾಗಗಳು ದೇಶಿಯರ ನಿಯಂತ್ರಣಕ್ಕೆ ಬರಬೇಕು. ಇದರಿಂದ ಬಾಸೆಲ್ ಮಿಶನ್ ದೇವಾಲಯಗಳಲ್ಲಿ ನಮ್ಮ ಹಕ್ಕು ಸ್ವಾತಂತ್ರ್ಯಗಳನ್ನು, ಸಭೆಯವರ ಹಿತವನ್ನು ರಕ್ಷಣೆ ಮಾಡುವುದು ಸಾಧ್ಯವಾದೀತು. ಬಾಸೆಲ್ ಮಿಶನ್ ಸಮಾಜವು ಬಡವರನ್ನು ಹೊಂದಿದ್ದು, ಇದು ಸ್ವಾತಂತ್ರ್ಯಕ್ಕೆ ಮುಖ್ಯ ಅಡ್ಡಿಯಾಗಿದೆ. ಆದುದರಿಂದ ಬಾಸೆಲ್ ಮಿಶನ್ ಸಭೆಗಳು ಸ್ವತಂತ್ರವಾಗಬೇಕಾದರೆ ಬಾಸೆಲ್ ಮಿಶನ್ ಕ್ರೈಸ್ತರು ಸ್ವತಂತ್ರವಾದ ಉದ್ಯೋಗಗಳನ್ನು ನಿರ್ವಹಿಸಿ ಸಂಪನ್ನರಾಗಬೇಕು[36] ಎಂಬ ಸಲಹೆಯನ್ನು ಕೆಲವು ಕ್ರೈಸ್ತರು ನೀಡಿದ್ದರು. ಒಂದು ಜನಾಂಗವಾಗಲೀ, ಸಮಾಜವಾಗಲೀ, ನೂರಾರು ವರ್ಷಗಳವರೆಗೆ ಬಡತನದಲ್ಲಿಯೇ ಹೊರಳಾಡುತ್ತಾ ಇದ್ದು ಪ್ರತಿ ವಿಚಾರಕ್ಕೂ ಇತರರ ಮೇಲೆ ಹೊಂದಿಕೊಳ್ಳುವುದು ಸಮಂಜಸವಲ್ಲ. ಶಿಕ್ಷಣ, ಉದ್ಯೋಗ, ಕಲೆ ಮುಂತಾದ ವಿಚಾರಗಳಲ್ಲಿ ಮುಂದೆ ಬರದಿದ್ದರೆ, ಸ್ವತಂತ್ರಾಭಿಮುಖವಾಗಿ ಮುಂದುವರಿಯುವುದು ಹೇಗೆ? ಎಂಬ ಆಲೋಚನೆ ಸ್ಥಳೀಯರಲ್ಲಿತ್ತು. ಆದುದರಿಂದ ಕೆಳಸ್ಥಿತಿಯಲ್ಲಿನ ಸಮಾಜವನ್ನು ಮೇಲೆತ್ತುವುದರ ಬಗ್ಗೆ ಚಿಂತಿಸುತ್ತಾ, ಇತರರಿಗೆ ಉದ್ಯೋಗವೇ ವ್ಯಸನವಾಗಿದೆ. ನಮ್ಮ ಸಮಾಜಕ್ಕೆ ನಿರುದ್ಯೋಗವೇ ವ್ಯಸನವಾಗಿದೆ. ಇದುವೇ ಬಾಸೆಲ್

ಮಿಶನ್ ಕ್ರೈಸ್ತರ ಬಡತನಕ್ಕೆ ಕಾರಣವಾಗಿದೆ. ಹೊಟ್ಟೆಪಾಡಿಗಾಗಿ ಚಾಕರಿ ಮಾಡುವುದು ಉದ್ಯೋಗವಲ್ಲ. ಉದ್ಯೋಗದ ನೈಜ ವಿಚಾರ ತಿಳಿಯಬೇಕಾದರೆ ಶಿಕ್ಷಣವು ಅಗತ್ಯ. ಆದರೆ ಬಾಸೆಲ್ ಮಿಶನರಿಗಳು, ಬಾಸೆಲ್ ಮಿಶನ್ ಕ್ರೈಸ್ತರಿಗೆ ಶಿಕ್ಷಣವನ್ನು ಕೊಟ್ಟು, ಅಂಥವರನ್ನು ಅವರ ನಿಯಂತ್ರಣದಲ್ಲಿ ಇರಿಸಿಕೊಂಡಿದ್ದಾರೆ. ಆದರೆ ಇದು ಮಿಶನರಿಗಳ ತಪ್ಪಲ್ಲ. ಯಾಕೆಂದರೆ ಶಿಕ್ಷಣಕ್ಕಾಗಿ ಮಿಶನರಿಗಳು ಅಪಾರವಾದ ಮೊತ್ತವನ್ನು ವ್ಯಯಿಸಿದ್ದಾರೆ. ನಮ್ಮ ಕ್ರೈಸ್ತರಲ್ಲಿ ಕೆಲವೇ ಕೆಲವರು ಉನ್ನತ ಶಿಕ್ಷಣ ಪಡೆದಿರುವುದು ನಮ್ಮ ಮುಖಂಡರ ತಪ್ಪಿನಿಂದಾಗಿದೆ ಎಂಬುದು ಸ್ಥಳೀಯ ಕ್ರೈಸ್ತರ ಅಭಿಪ್ರಾಯವಾಗಿತ್ತು.[37] ಬಾಸೆಲ್ ಮಿಶನ್ ಸಮಾಜ ಶಿಕ್ಷಣ, ಉದ್ಯೋಗದಲ್ಲಿ ಪ್ರಗತಿ ಗಳಿಸಬೇಕು. ಶಿಕ್ಷಣವನ್ನು ಪ್ರೋತ್ಸಾಹಿಸಲು ವೇತನ ಫಂಡುಗಳನ್ನು ತೆರೆಯಬೇಕು. ಯಾವುದೇ ಭೇದವಿಲ್ಲದೇ ಸಮರ್ಥರಿಗೆ ಪ್ರೌಢಶಿಕ್ಷಣ, ಔದ್ಯೋಗಿಕ ಶಿಕ್ಷಣವನ್ನು ಒದಗಿಸಬೇಕು. ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಒಗ್ಗಟ್ಟು ಮೂಡಬೇಕು. ಇದರಿಂದಾಗಿ ಬಾಸೆಲ್ ಮಿಶನ್ ಸಭೆಗಳನ್ನು ಸ್ವಾಯತ್ತತೆಯತ್ತ ಮುಂದುವರಿಸಬಹುದು[38] ಹಾಗೂ ಮುಂದೆ ಬಾಸೆಲ್ ಮಿಶನ್ ಸಮಾಜವು ಸುಶಿಕ್ಷಿತ ವರ್ಗದವರಿಂದ ಕೂಡಿದ ಸಮಾಜವೆನಿಸಿ, ವಿದೇಶಿಯರ ಹಣಕ್ಕೆ ಕೈ ನೀಡುವುದನ್ನು ಬಿಟ್ಟು ಸ್ವತಂತ್ರ ದೇಶಿಯ ಸಭೆ ಎಂದು ಕರೆಯಲ್ಪಡುವ ಕಾಲವು ಬಂದೀತು ಎಂಬ ನಿರೀಕ್ಷೆ ಬಾಸೆಲ್ ಮಿಶನ್ ಕ್ರೈಸ್ತರಲ್ಲಿತ್ತು.

ಬಾಸೆಲ್ ಮಿಶನ್ ಕ್ರೈಸ್ತರು ತಮಗೆ ಮಿಶನರಿಗಳ ನಿಯಂತ್ರಣದಿಂದ ಹೊರಬಂದು ಸ್ವತಂತ್ರವಾಗಿ ಮುಂದುವರಿಯುವಂತಾಗಬೇಕು ಎಂಬ ಪ್ರಬಲವಾದ ಬೇಡಿಕೆ ಮಂಡಿಸಿದ್ದರೆ, ಇನ್ನು ಕೆಲವರು ಅದನ್ನು ಪಡೆಯತಕ್ಕ ವಿಚಾರಗಳ ಬಗ್ಗೆ ಚಿಂತಿಸಿದ್ದರು. ಸಭೆಗಳು ಸ್ವತಂತ್ರ ಸಭೆಗಳಾಗುವುದಕ್ಕೆ ಪರದೇಶಗಳಿಂದ ಬಂದಿರುವ ಮಿಶನರಿಗಳ ವಿರೋಧವಿಲ್ಲ. ಆದರೆ ಅನುಕೂಲವಾದ ನಡತೆಯೂ ಬೇಕು. ಸಭೆಗೆ ಕೊಡತಕ್ಕ ವಂತಿಕೆಗಳನ್ನು ಕೊಡಬೇಕು ಎಂಬುದು ಕೆಲವು ಕ್ರೈಸ್ತರ ವಾದವಾಗಿತ್ತು.[39] ಹೀಗೆ ಬಾಸೆಲ್ ಮಿಶನ್ 20ನೇ ಶತಮಾನದಲ್ಲಿ ತನ್ನ ಸಭೆಗಳನ್ನು ಸ್ವಾಯತ್ತತೆಯತ್ತ ಮುಂದುವರೆಸಬೇಕೆಂದಿದ್ದ ಕಾಲದಲ್ಲಿ ಜಾಗತಿಕ ಯುದ್ಧದಿಂದಾಗಿ ಅದರ ನಿರ್ಗಮನವಾಗುತ್ತದೆ. ಮತ್ತೊಂದೆಡೆ ಇತ್ತ ಬಾಸೆಲ್ ಮಿಶನ್ ಕ್ರೈಸ್ತರು ತಮಗೆ ಸ್ವಾಯತ್ತತೆ ಬೇಕು ಎಂಬ ಪ್ರಬಲವಾದ ಬೇಡಿಕೆಯನ್ನು, ಆಲೋಚನೆಗಳನ್ನು ಮಂಡಿಸಲು ಆರಂಭಿಸುತ್ತಾರೆ. ಹೀಗೆ 1934ರಲ್ಲಿ ಬಾಸೆಲ್ ಮಿಶನ್ ತನ್ನ ಎಲ್ಲಾ ಚರ್ಚುಗಳನ್ನು ಒಟ್ಟು ಸೇರಿಸಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವನ್ನು ಹುಟ್ಟು ಹಾಕಿ, ಸಭೆಗಳಿಗೆ ಸ್ವಾಯತ್ತತೆ ನೀಡುವ ವಿಚಾರದಲ್ಲಿ ಪ್ರಮುಖ ನಿರ್ಧಾರವನ್ನು ಕೈಗೊಳ್ಳುತ್ತದೆ. ಎರಡನೇ ಜಾಗತಿಕ ಯುದ್ಧದ ಕಾಲಾವಧಿಯ ಪರಿಸ್ಥಿತಿಯು ಮಿಶನ್ ಸಾಧ್ಯವಾದಷ್ಟು ಬಾಸೆಲ್ ಮಿಶನ್ ಕ್ರೈಸ್ತರನ್ನು ವಿಭಿನ್ನ ಕ್ಷೇತ್ರಗಳಲ್ಲಿ

ಬಳಸಿಕೊಳ್ಳುವಂತೆ ಮಾಡುತ್ತದೆ. ಇದು ಬಾಸೆಲ್ ಮಿಶನ್ ಸಭೆಗಳು ಸ್ವಾಯತ್ತತೆಯತ್ತ ಮುಂದುವರಿಯಲು ಇನ್ನಷ್ಟು ಪೂರಕ ವಾತಾವರಣವನ್ನು ನಿರ್ಮಿಸುತ್ತದೆ. ಈ ಕಾಲಾವಧಿಯಲ್ಲಿ ದೇಶಿಯ ಕ್ರೈಸ್ತರು ಹಾಗೂ ಮಿಶನರಿಗಳು ಜಂಟಿಯಾಗಿ ಕಾರ್ಯವನ್ನು ಮುಂದುವರಿಸುತ್ತಾರೆ. 1934ರಲ್ಲಿ ಬಾಸೆಲ್ ಮಿಶನ್ ತಾನು ಪ್ರಾರಂಭಿಸಿದ ಮಿಶನ್ ಕೆಲಸವು ಇಂದು ದೊಡ್ಡ ವೃಕ್ಷವಾಗಿ ಬೆಳೆದಿದೆ. ಬಾಸೆಲ್ ಮಿಶನಿನ ಮೂರು ಜಿಲ್ಲಾ ಸಭೆಗಳು ಬೇರೆ ಬೇರೆ ವಿಚಾರಗಳಲ್ಲಿ ಸಧ್ಯದಲ್ಲೇ ಸ್ವಾಯತ್ತತೆಯನ್ನು ಪಡೆಯಲಿವೆ ಎಂದು ತಿಳಿಸಿತ್ತು.[40] ಪ್ರಥಮ ಜಾಗತಿಕ ಯುದ್ಧದ ಮೊದಲೇ ತನ್ನ ಎಲ್ಲಾ ಸಭೆಗಳನ್ನು ಸಂಯೋಜಿಸಿ, ಒಂದು ಸಿನೋಡನ್ನು ರಚಿಸಬೇಕೆಂಬ ಆಲೋಚನೆ ಬಾಸೆಲ್ ಮಿಶನಿನಲ್ಲಿತ್ತು. ಆದರೆ ಈ ರೀತಿ ತನ್ನ ಎಲ್ಲಾ ಸಭೆಗಳನ್ನು ಸಂಯೋಜಿಸಿ 'ಇವ್ಯಾಂಜಲಿಕಲ್ ಸಿನೋಡ್ ಆಫ್ ದಿ ವೆಸ್ಟ್ ಕೋಸ್ಟ್ ಆಫ್ ಇಂಡಿಯಾ' ಸ್ಥಾಪಿಸುವ ಉದ್ದೇಶವು ಇನ್ನೂ ಕೈಗೊಂಡಿಲ್ಲವೆಂಬ ಚಿಂತೆ ತನಗಿದೆ ಎಂದು ಬಾಸೆಲ್ ಮಿಶನ್ ತಿಳಿಸಿತ್ತು.[41]

ಕ್ರೈಸ್ತ ಸಭಾ ಐಕ್ಯತಾ ಚಳುವಳಿ:

ಬಾಸೆಲ್ ಮಿಶನ್ ಸಭೆಗಳು ಪ್ರಬಲವಾಗಿ ಸ್ವಾಯತ್ತತೆಯತ್ತ ದಾಪುಗಾಲು ಹಾಕುತ್ತಿರುವಾಗಲೇ, ಮತ್ತೊಂದೆಡೆ ಬೇರೆ ಬೇರೆ ಮಿಶನುಗಳಿಂದ ಸ್ಥಾಪಿತವಾದ ಚರ್ಚುಗಳನ್ನು ಒಟ್ಟು ಸೇರಿಸುವ [Church Union] ಕುರಿತಾದ ಚರ್ಚೆಗಳು ವೇಗವನ್ನು ಪಡೆದುಕೊಂಡಿರುತ್ತದೆ. ಚರ್ಚ್ ಯೂನಿಯನ್ ಬಗ್ಗೆ ಬಾಸೆಲ್ ಮಿಶನ್ ಪ್ರಾರಂಭದಿಂದಲೇ ಬಹಳಷ್ಟು ಒಲವನ್ನು ಹೊಂದಿತ್ತು. 20ನೇ ಶತಮಾನವನ್ನು 'ಕ್ರೈಸ್ತ ಸಭಾ ಐಕ್ಯತಾ' ಚಳುವಳಿಯ ಕಾಲವೆಂದು ಕರೆಯಲಾಗಿದೆ.[42] ಭಾರತದಲ್ಲಿ 19ನೇ ಶತಮಾನದಲ್ಲಿ ಮಿಶನರಿಗಳು ಕ್ರೈಸ್ತ ಧರ್ಮವನ್ನು ಹರಡಿದರೆ, 20ನೇ ಶತಮಾನದಲ್ಲಿ ಅವರು ಹುಟ್ಟು ಹಾಕಿದ ಬೇರೆ ಬೇರೆ ಮೂಲದ ಸಭೆಗಳನ್ನು ಏಕೀಕರಿಸುವ ಪ್ರಯತ್ನಗಳು ನಡೆದವು. ಈ ಐಕ್ಯತಾ ಚಳುವಳಿಯು ಕೆಲವು ಕಾರಣಗಳನ್ನು ಒಳಗೊಂಡಿತ್ತು. ಅದರ ಪ್ರಕಾರ ಪ್ರೊಟೆಸ್ಟೆಂಟ್ ಮಿಶನರಿ ಚಳುವಳಿಯು ಮುಖ್ಯವಾಗಿ ಮೂರು ಸಂಪ್ರದಾಯಗಳನ್ನು ಭಾರತಕ್ಕೆ ತಂದಿತ್ತು. ಅವುಗಳೆಂದರೆ ಕಾಂಗ್ರಿಗೇಶನಲ್[43] [Congregational], ಪ್ರೆಸ್ಬೆಟೇರಿಯನ್[44] [Presbyterian] ಹಾಗೂ ಎಪಿಸ್ಕೋಪಲ್[45] [Episcopal]. ಈ ಸಂಪ್ರದಾಯಗಳಿಗೆ ಸಂಬಂಧಿಸಿದ ಬೇರೆ ಬೇರೆ ಪಂಗಡಗಳ ಹಾಗೂ ಬೇರೆ ಬೇರೆ ದೇಶಗಳ ಮಿಶನರಿ ಸಂಘಗಳು ಭಾರತದಲ್ಲಿ ಕ್ರೈಸ್ತರನ್ನು ಬೆಳೆಸಿ, ತಮ್ಮ ತಮ್ಮ ಸಂಪ್ರದಾಯಗಳೇ ಮುಖ್ಯವೆಂದು ಅವರ ಕ್ರೈಸ್ತರಿಗೆ ತಿಳಿಸಿ ಬೆಳೆಸುತ್ತಾರೆ. ಹೀಗೆ ಭಾರತದಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತರು ಬೇರೆ ಬೇರೆ ವಿಶ್ವಾಸ, ಆಡಳಿತ ಕ್ರಮ, ಆರಾಧನಾ ಕ್ರಮ, ಶಿಸ್ತುಗಳಲ್ಲಿ ಬೆಳೆದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟು ವಿವಿಧ ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದರು. ಎಲ್ಲಾ ಮಿಶನುಗಳ ಉದ್ದೇಶ ಒಂದೇಯಾಗಿದ್ದರೂ ಈ ಮೇಲಿನ

ಭಿನ್ನತೆ, ಭಾರತೀಯ ಕ್ರೈಸ್ತರಲ್ಲಿ ಪರಸ್ಪರ ದ್ವೇಷ, ವೈರತ್ವವನ್ನು ಹುಟ್ಟಿಸಿತು. ಈ ಪರಿಸ್ಥಿತಿಯು ಕೆಲವು ಮಿಶನರಿಗಳು ಹಾಗೂ ಭಾರತೀಯ ಕ್ರೈಸ್ತರು ಭಾರತೀಯ ಸಭೆಗಳ ಐಕ್ಯತೆಗಾಗಿ ಶ್ರಮಿಸಲು ಕಾರಣವಾಯಿತು[46]. ಅಷ್ಟು ಮಾತ್ರವಲ್ಲದೇ ಆರಂಭದಲ್ಲಿ ಮಿಶನರಿ ಸಂಘಗಳ ನಡುವೆ ಕೆಲಮಟ್ಟಿಗಾದರೂ ಒಗ್ಗಟ್ಟು, ಸಹಕಾರವಿತ್ತು. ಆದರೆ ಅವರ ಚಟುವಟಿಕೆಗಳು ವೃದ್ಧಿಗೊಂಡಂತೆ ಆರಂಭದಲ್ಲಿದ್ದ ಸಹಕಾರವು ಮಾಯವಾಗಿ, ಸ್ಪರ್ಧೆಯ ಮನೋಭಾವವು ಹುಟ್ಟಿಕೊಂಡಿತು. ಈ ಹಂತದಲ್ಲಿ ಪರಸ್ಪರ ಪೈಪೋಟಿಯು ಬೆಳೆದು ಜಗಳಕ್ಕೂ, ದ್ವೇಷಕ್ಕೂ ಕಾರಣವಾಯಿತು. ಪಂಗಡ ಪ್ರೇಮವು [Denominationalism] ಪ್ರತಿಯೊಬ್ಬರಲ್ಲಿ ಬೆಳೆಯಿತು. ಈ ದುಃಸ್ಥಿತಿಯನ್ನು ಮನಗಂಡ ಕೆಲವು ಮಿಶನರಿಗಳು ಈ ಸ್ಪರ್ಧೆ, ಭೇದಗಳು ಮಿಶನ್ ಸೇವೆಗೆ ಅಡ್ಡಗೋಡೆಯಂತಿವೆ ಎಂದು ಅಭಿಪ್ರಾಯಪಟ್ಟು, ಮಿಶನರಿಗಳ ಹಾಗೂ ಸಭೆಗಳ ಐಕ್ಯತೆಗೆ ಕರೆ ನೀಡಿದರು.[47]

ಕ್ರೈಸ್ತ ಸಭೆಗಳಲ್ಲಿ ಐಕ್ಯತೆಯ ಚಳುವಳಿಯು ಮೊದಲು ಪ್ರಾರಂಭವಾದದ್ದು ದಕ್ಷಿಣಭಾರತದಲ್ಲಿ. ಈ ಮೇಲಿನ ಕಾರಣಗಳ ಹೊರತು, ಈ ಐಕ್ಯತಾ ಚಳುವಳಿಯು ಭಾರತದಲ್ಲಿ ಪ್ರಾರಂಭವಾಗಲು ಇತರ ಕೆಲವು ವಿಚಾರಗಳು ಪೂರಕವಾದವು. 1850ರ ಕಾಲಾವಧಿಯಲ್ಲಿ ಭಾರತದ ಬೇರೆ ಬೇರೆ ಮಿಶನಿನ ಮಿಶನರಿಗಳು ಸಮಾವೇಶಗಳಲ್ಲಿ ಒಟ್ಟುಗೂಡಲು ಆರಂಭಿಸುತ್ತಾರೆ. ಹೀಗೆ ಕೆಲವು ಸ್ಥಳೀಯ ಹಾಗೂ ಪ್ರಾಂತೀಯ ಸಮಾವೇಶಗಳು [conferences] ನಡೆಯಲಾರಂಭವಾಗುತ್ತವೆ[48]. ಇದರ ಫಲವಾಗಿ 1872ರಲ್ಲಿ ಮೊದಲ ಜನರಲ್ ಮಿಶನರಿ ಕಾನ್ಫರೆನ್ಸ್, ಅಲಹಾಬಾದ್‌ನಲ್ಲಿ ನಡೆಯುತ್ತದೆ. 1900ರಲ್ಲಿ ಮದ್ರಾಸಿನಲ್ಲಿ 'ಸೌತ್ ಇಂಡಿಯನ್ ಮಿಶನರಿ ಕಾನ್ಫರೆನ್ಸ್' ನಡೆಯುತ್ತದೆ. ಈ ಸಮಾವೇಶಗಳನ್ನು ಹೊರತುಪಡಿಸಿ ಪ್ರತಿ ಮೇ ತಿಂಗಳಿನಲ್ಲಿ ಪಾಶ್ಚಾತ್ಯ ಮಿಶನರಿಗಳು ಎತ್ತರದ ಪ್ರದೇಶಗಳಾದ ಕೊಡೈಕೆನಾಲ್ [Kodaikanal], ಕೂನೂರು [Coonoor], ಉದಕಮಂಡಲ [Ootacamund] ಮುಂತಾದ ಪ್ರದೇಶಗಳಿಗೆ ವಿಶ್ರಾಂತಿಗಾಗಿ ತೆರಳುತ್ತಿದ್ದರು. ಈ ಪ್ರದೇಶದಲ್ಲಿ ಮಿಶನರಿಗಳು ಪರಸ್ಪರ ಅನೌಪಚಾರಿಕ ಚರ್ಚೆಗಳನ್ನು ನಡೆಸುತ್ತಿದ್ದರು. ಈ ಚರ್ಚೆಗಳು ಅವರಲ್ಲಿ ಸಹಕಾರಯುತ ಪ್ರಯತ್ನಗಳಿಗೆ [Co-operative efforts] ಪ್ರೋತ್ಸಾಹಿಸಿ, ಅವರು 1897ರಲ್ಲಿ 'ದಿ ಸೌತ್ ಇಂಡಿಯನ್ ಮಿಶನರಿ ಅಸೋಸಿಯೇಶನ್'ನನ್ನು ಹುಟ್ಟುಹಾಕಲು ಕಾರಣವಾಯಿತು. ಇದು ತದನಂತರ ಪ್ರತಿ ವರ್ಷವು ಕಾನ್ಫರೆನ್ಸ್‌ಗಳನ್ನು ಸಂಘಟಿಸಲು ಅರಂಭಿಸಿತು. ಇದು 1900ರಲ್ಲಿ ಮದ್ರಾಸಿನಲ್ಲಿ 'ಸೌತ್ ಇಂಡಿಯನ್ ಮಿಶನರಿ ಕಾನ್ಫರೆನ್ಸ್'ನ್ನು ನಡೆಸಿತು.[49] ಈ ರೀತಿಯಾಗಿ ಮಿಶನರಿ ಕಾನ್ಫರೆನ್ಸ್‌ಗಳು ಮಿಶನರಿಗಳಲ್ಲಿ ಸಹಕಾರವನ್ನು ಹುಟ್ಟು ಹಾಕಿ, ಬೇರೆ ಬೇರೆ ಸಭೆಗಳು ಒಟ್ಟುಗೂಡುವ ಐಕ್ಯತಾ ಚಳುವಳಿಗೆ ಪ್ರೋತ್ಸಾಹ ನೀಡಿದವು. ಈ ಕಾನ್ಫರೆನ್ಸ್‌ಗಳಲ್ಲಿ

ಪ್ರಾರಂಭದಲ್ಲಿ ಭಾರತೀಯರ ಭಾಗವಹಿಸುವಿಕೆ ಕಡಿಮೆಯಾಗಿದ್ದರೂ, ನಂತರದಲ್ಲಿ ಸಕ್ರಿಯವಾಗಿ ಪಾತ್ರ ವಹಿಸುವುದನ್ನು ಗಮನಿಸಬಹುದು.

20ನೇ ಶತಮಾನದ ಆರಂಭದ ವರ್ಷಗಳಲ್ಲಿ ಒಂದೇ ಸಂಪ್ರದಾಯಕ್ಕೆ ಸಂಬಂಧಪಟ್ಟ ಹಾಗೂ ವಿವಿಧ ಹಿನ್ನೆಲೆಯಿಂದ ಬಂದ ಸಭೆಗಳು ಒಂದುಗೂಡಲಾರಂಭಿಸಿದವು. 1901ರಲ್ಲಿ ಮದ್ರಾಸ್ ವಿಭಾಗದಲ್ಲಿದ್ದ ಅಮೇರಿಕಾ ಹಾಗೂ ಸ್ಕಾಟ್‌ಲ್ಯಾಂಡ್ ಮಿಶನುಗಳಿಗೆ ಸೇರಿದ ಸುಮಾರು 12,000ಕ್ಕಿಂತಲೂ ಹೆಚ್ಚು ಸದಸ್ಯತ್ವವನ್ನು ಹೊಂದಿದ್ದ ಪ್ರೆಸ್ಬ್‌ತೇರಿಯನ್ ಸಭೆಗಳು ಒಂದುಗೂಡಿದವು. 1904ರಲ್ಲಿ ಈ ಸಂಯುಕ್ತ ಒಕ್ಕೂಟವು ಉತ್ತರ ಭಾರತದಲ್ಲಿದ್ದ ಎಂಟು ಪ್ರೆಸ್ಬ್‌ತೇರಿಯನ್ ಮಿಶನುಗಳ ಸಭೆಗಳೊಂದಿಗೆ ಒಂದಾಗಿ 'ಭಾರತೀಯ ಪ್ರೆಸ್ಬ್‌ತೇರಿಯನ್ ಸಭೆ' ಎಂದು ಕರೆಯಲ್ಪಟ್ಟಿತ್ತು. 1905ರಲ್ಲಿ ತಮಿಳುನಾಡಿನಲ್ಲಿದ್ದ ಅಮೇರಿಕಾ ಹಾಗೂ ಬ್ರಿಟಿಷ್ ಮಿಶನರಿಗಳಿಗೆ ಸಂಬಂಧಪಟ್ಟ ಸುಮಾರು 1,33,000 ಸದಸ್ಯರನ್ನು ಹೊಂದಿದ್ದ ಕಾಂಗ್ರಿಗೇಶನಲ್ ಸಭೆಗಳು ಐಕ್ಯವಾದವು. 1908ರಲ್ಲಿ ಮೇಲೆ ಹೇಳಿದ ಅಂದರೆ ದಕ್ಷಿಣ ಭಾರತದ ಹಾಗೂ ಶ್ರೀಲಂಕಾದ ಜಾಪ್ನಾ ಜಿಲ್ಲೆಯ ಪ್ರೆಸ್ಬ್‌ತೇರಿಯನ್ ಹಾಗೂ ಕಾಂಗ್ರಿಗೇಶನಲ್ ಸಭೆಗಳು ಒಂದಾದವು. ಇದು ಪ್ರಪ್ರಥಮ ಅಂತರ್ ಪಂಥೀಯ ಐಕ್ಯತೆಯಾಗಿದ್ದು, ಸಭಾ ಐಕ್ಯತಾ ಚರಿತ್ರೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿತ್ತು. ಈ ಎರಡು ಪಂಥದ ಸಭೆಗಳು ಒಟ್ಟುಗೂಡುವ ಮೊದಲು ತಾವು ಸ್ಥಾಪಿಸುವ ನೂತನ ಸಭೆಯು ಭಾರತೀಯವಾಗಿರಬೇಕು ಹಾಗೂ ರಾಷ್ಟ್ರೀಯವಾಗಿರಬೇಕು ಎಂದು ಒತ್ತಾಯಿಸಿದವು. ಈ ಕಾರಣದಿಂದ ಈ ನೂತನ ಸಭೆಯನ್ನು ಅವರು 'ದಕ್ಷಿಣ ಭಾರತ ಸಂಯುಕ್ತ ಸಭೆ' [South Indian United Church] ಎಂದು ಕರೆದರು[50].

ಕ್ರೈಸ್ತ ಸಭಾ ಐಕ್ಯತಾ ಚಳುವಳಿಯ ಬಗ್ಗೆ ಬಾಸೆಲ್ ಮಿಶನಿನ ನಿಲುವು:

'ದಕ್ಷಿಣ ಭಾರತ ಸಂಯುಕ್ತ ಸಭೆ'ಗಳ ಉದ್ಘಾಟನೆಯಾದ ದಿನದಿಂದಲೇ ಅದನ್ನು ಸೇರಿಕೊಳ್ಳುವ ಆಸಕ್ತಿಯನ್ನು ಬಾಸೆಲ್ ಮಿಶನ್ ತೋರಿಸಿರುತ್ತದೆ. 1912ನೇ ವರ್ಷದ ಬಾಸೆಲ್ ಮಿಶನಿನ ವರದಿಯು, ಬಾಸೆಲ್ ಮಿಶನ್, ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ್ನು ಸೇರಲು ವಹಿಸಿದ ಆಸಕ್ತಿಯನ್ನು ತೋರ್ಪಡಿಸುತ್ತದೆ. ವರದಿಯು ವಿವರಿಸುವಂತೆ 'ಚರ್ಚ್ ಕೌನ್ಸಿಲ್'ನ ಪ್ರಥಮ ಪ್ರಮುಖ ಕಾರ್ಯವೆಂದರೆ, ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ಗೆ ಬಾಸೆಲ್ ಮಿಶನ್ ಸಭೆಗಳು ಸೇರುವುದರ ಪ್ರಶ್ನೆಯ ಬಗ್ಗೆ ಅದು ನಿರ್ಧರಿಸಬೇಕು. ಈ ವಿಚಾರದ ಬಗ್ಗೆ ಮಿಶನರಿಗಳು 'ಯುರೋಪಿಯನ್ ಮಿಶನರಿಗಳ ಜನರಲ್ ಕಾನ್ಫರೆನ್ಸ್'ನಲ್ಲಿ ಔಪಚಾರಿಕವಾಗಿ ಚರ್ಚಿಸಿದ್ದು, ಬಾಸೆಲ್ ಮಿಶನಿನ ಭಾರತೀಯ ಕ್ರೈಸ್ತರು ಈ ವಿಚಾರದಲ್ಲಿ ಆಸಕ್ತಿಯುತವಾಗಿ ಭಾಗವಹಿಸಲಿಲ್ಲ. ಬಾಸೆಲ್ ಮಿಶನ್ ಕ್ರೈಸ್ತರು ಪಂಗಡ ಪ್ರೇಮದ [Denominationalism] ನ್ಯೂನತೆಗಳ ಬಗ್ಗೆ ತಿಳಿಯಬೇಕು

ಎಂದಿದೆ. ವರದಿಯು ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ಮತ್ತು ಬಾಸೆಲ್ ಮಿಶನಿಗಿರುವ ಸಾಮ್ಯತೆಗಳ ಬಗ್ಗೆ ತಿಳಿಸುತ್ತಾ, ಬಾಸೆಲ್ ಮಿಶನ್ ಸಭೆಗಳು ಈ ಒಕ್ಕೂಟಕ್ಕೆ ಸೇರಿರುವುದರಿಂದ ಬಾಸೆಲ್ ಮಿಶನ್ ಕ್ರೈಸ್ತರಿಗೆ ಒಳಿತುಗಳಿವೆ ಎಂದು ಅದು ತನ್ನ ಕ್ರೈಸ್ತರಲ್ಲಿ ಐಕ್ಯತೆಯ ಬಗ್ಗೆ ತಿಳುವಳಿಕೆ ಮೂಡಿಸುವ ಪ್ರಯತ್ನವನ್ನು ಮಾಡಿತ್ತು ಎಂಬುದು ಸ್ಪಷ್ಟವಾಗುತ್ತದೆ.[51] ಹೀಗೆ ಬಾಸೆಲ್ ಮಿಶನ್ ಪ್ರಥಮ ಜಾಗತಿಕ ಯುದ್ಧ ಆರಂಭವಾಗುವ ಮೊದಲೇ ಎಂದರೆ 20ನೇ ಶತಮಾನದ ಆರಂಭದಲ್ಲೇ ತನ್ನ ಚರ್ಚುಗಳನ್ನು ಸ್ವಾಯತ್ತತೆಯತ್ತ ಕೊಂಡೊಯ್ಯುವ ಹಾಗೂ ಬಾಸೆಲ್ ಮಿಶನ್ ಚರ್ಚ್‌ಗಳನ್ನು ಇತರ ಸಂಪ್ರದಾಯದ ಚರ್ಚುಗಳಲ್ಲಿ ಸೇರಿಸುವ 'ಚರ್ಚ್ ಯೂನಿಯನ್' ಚಳುವಳಿಯ ಬಗ್ಗೆ ಆಸಕ್ತಿಯನ್ನು ವಹಿಸಿತ್ತು.

1913ರಲ್ಲಿ 'ಚರ್ಚ್ ಯೂನಿಯನ್' ಬಗ್ಗೆ ನಿಗದಿತ ಕ್ರಮಗಳನ್ನು ಕೈಗೊಂಡಿದ್ದ ಬಾಸೆಲ್ ಮಿಶನ್ ಎ. ಶೊಸ್ಸರ್‌ರವರನ್ನು [Rev. A. Schoosser] ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ಜೊತೆ ಮಾತುಕತೆ ನಡೆಸಲು ನೇಮಿಸಿತ್ತು. ಆದರೆ ಈ ಯೋಜನೆಯು ಕಾರ್ಯರೂಪಕ್ಕೆ ಬರುವ ಮೊದಲೇ ಯುದ್ಧ ಘೋಷಣೆಯಾಗುವುದರಿಂದ, ತಾತ್ಕಾಲಿಕವಾಗಿ ಯಾವುದೇ ಮಾತುಕತೆಗಳು ನಡೆಯುವುದಿಲ್ಲ. ಬಾಸೆಲ್ ಮಿಶನಿನಲ್ಲಿದ್ದ ಜರ್ಮನ್ ಮಿಶನರಿಗಳನ್ನು ಹಾಗೂ ಇತರ ಜರ್ಮನ್ ಮಿಶನ್‌ಗಳ ಮಿಶನರಿಗಳನ್ನು ಬಂಧಿಸಿದ ಕಾಲಾವಧಿಯಲ್ಲಿ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ ಮಿಶನರಿಗಳು ಬಾಸೆಲ್ ಮಿಶನಿನ ಮುಂದುವರಿಕೆಗೆ ಸಹಾಯ ಮಾಡುತ್ತಾರೆ. ಇದು ಬಾಸೆಲ್ ಮಿಶನ್ ಹಾಗೂ ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ನಡುವೆ ನಿಕಟ ಸಂಪರ್ಕ ಬೆಳೆಯಲು ಕಾರಣವಾಗುತ್ತದೆ. ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಜರ್ಮನ್ ಮಿಶನರಿಗಳನ್ನು ಮಿಶನ್ ಪ್ರದೇಶದಿಂದ ತೆಗೆದದ್ದು, ಬಾಸೆಲ್ ಮಿಶನ್ ಸಂಕಷ್ಟಕ್ಕೆ ಗುರಿಯಾಗುವಂತೆ ಮಾಡುತ್ತದೆ. ಮಿಶನ್ ಕ್ಷೇತ್ರಗಳಲ್ಲಿ ಉಳಿದ ಕೆಲವೇ ಸ್ವಿಸ್ ಮಿಶನರಿಗಳು ತಮ್ಮ ಕಾರ್ಯದಲ್ಲಿ ಮುಂದುವರಿಯುತ್ತಾರೆ. ಮತ್ತೊಂದೆಡೆ ಬಾಸೆಲ್ ಮಿಶನಿನ ಮಿಶನ್ ಕಾರ್ಯ ಮುಂದುವರಿಯುವಂತಾಗಲು ಬದಲಿ ವ್ಯವಸ್ಥೆಗಳು ಆಗುತ್ತಿರುವ ಸಂದರ್ಭದಲ್ಲಿ ಬಾಸೆಲ್ ಮಿಶನಿನ ಮಲಬಾರ್ ಪ್ರದೇಶದ 'ಜನರಲ್ ಲೋಕಲ್ ಕಮಿಟಿ'ಯು [The General Local Committee of the Basel Malabar Mission] 1918ರಲ್ಲಿ ಸಭೆ ಸೇರಿ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ್ನು ಸೇರಲು ನಿರ್ಧರಿಸುತ್ತದೆ. ಹೀಗೆ 1919ರ ಮಾರ್ಚ್‌ನಲ್ಲಿ ಬಾಸೆಲ್ ಮಿಶನಿನ ಮಲಬಾರ್ ಚರ್ಚ್ ಅದರದ್ದೇ ಆದ ಮಲಬಾರ್ ಚರ್ಚ್ ಕೌನ್ಸಿಲ್‌ನೊಂದಿಗೆ [Malabar Church Council] ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ್ನು ಸೇರಿಕೊಳ್ಳುತ್ತದೆ[52]. ಬಾಸೆಲ್ ಮಿಶನಿನ ಮಲಬಾರ್

ಚರ್ಚ್‌ಗಳು ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ್ನು ಸೇರಿದರೂ, ಬಾಸೆಲ್ ಮಿಶನಿನ ಇತರ ಚರ್ಚುಗಳು ಅದನ್ನು ಸೇರದೇ ಪ್ರತ್ಯೇಕವಾಗಿ ಮುಂದುವರಿಯುತ್ತವೆ. 1919ರ ನಂತರ ದಕ್ಷಿಣ ಮರಾಠ ಮತ್ತು ದಕ್ಷಿಣ ಕೆನರಾ ಬಾಸೆಲ್ ಮಿಶನ್ ಪ್ರದೇಶದ ಜವಾಬ್ದಾರಿಯನ್ನು ವಹಿಸಿದ್ದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲಾವಧಿಯಲ್ಲಿ ಚರ್ಚ್ ವ್ಯವಸ್ಥೆಯಲ್ಲಿ ಸ್ಥಳೀಯ ಕ್ರೈಸ್ತರನ್ನು ಸೇರಿಸಿಕೊಳ್ಳಲಾಗುತ್ತದೆ. ಈ ಪ್ರದೇಶದ ಚರ್ಚುಗಳಿಗೆ ಹೊಸ ಸಭಾ ನಿಯಾಮಾವಳಿಗಳನ್ನು ರಚಿಸಲಾಗುತ್ತದೆ. ಹೀಗೆ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಚರ್ಚುಗಳು 'ಚರ್ಚ್ ಯೂನಿಯನ್' ವಿಚಾರದಲ್ಲಿ ಪ್ರಗತಿ ಸಾಧಿಸದಿದ್ದರೂ, ಸ್ವಯಂ ಆಡಳಿತದಲ್ಲಿ ಪ್ರಗತಿಯನ್ನು ದಾಖಲಿಸುತ್ತವೆ. ಆದರೆ 1920ರ ದಶಕದಲ್ಲಿ ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ಮಲಬಾರ್‌ನಲ್ಲಿ ಮಿಶನರಿ ಕಾರ್ಯದ ಜವಾಬ್ದಾರಿಯನ್ನು ಮರಳಿ ಬಾಸೆಲ್ ಮಿಶನರಿಗಳಿಗೆ ವಹಿಸುತ್ತದೆ. 1927ರಲ್ಲಿ ಬಾಸೆಲ್ ಮಿಶನ್ ಭಾರತದಲ್ಲಿ ಮರಳಿ ತನ್ನ ಸೇವೆಯನ್ನು ಆರಂಭಿಸಿದ ಕಾಲಾವಧಿಯ ನಂತರ ಮತ್ತೊಂದು ಬಾರಿ 'ಚರ್ಚ್ ಯೂನಿಯನ್' ವಿಚಾರವು ಚರ್ಚೆಗೆ ಗ್ರಾಸವಾಗುತ್ತದೆ.

1929ರಲ್ಲಿ ಭಾರತದಲ್ಲಿ ಬಾಸೆಲ್ ಮಿಶನ್ ಮುಖ್ಯಸ್ಥರಾಗಿದ್ದ ಶೊಸ್ಸರ್‌ರವರು ಬಾಸೆಲ್ ಮಿಶನ್ ಚರ್ಚುಗಳಿಗೆ ಸುಧಾರಿತ ಹೊಸ ಸಂವಿಧಾನವನ್ನು ರಚಿಸುವ ಕಾರ್ಯದೊಂದಿಗೆ ಬಾಸೆಲ್ ಮಿಶನ್ ಚರ್ಚುಗಳಿಗೆ ಹೆಚ್ಚು ಸ್ವಾಯತ್ತತೆ ದೊರಕುತ್ತದೆ. ಭಾರತದಲ್ಲಿನ ಬಾಸೆಲ್ ಮಿಶನಿನ ಎಲ್ಲಾ ಚರ್ಚುಗಳನ್ನು ಒಟ್ಟುಗೂಡಿಸುವುದು ಶೊಸ್ಸರ್‌ರವರ ಚಿಂತನೆಯಾಗಿತ್ತು. 1931ರಲ್ಲಿ ಶೊಸ್ಸರ್ ಮರಳಿದ ಬಳಿಕ ಈ ಕಾರ್ಯವನ್ನು ಅವರ ಸಹೋದ್ಯೋಗಿಯಾಗಿದ್ದ ಅಡಾಲ್ಫ್ ಸ್ಟ‌ರ್‌ಕೈಸೆನ್‌ರವರು [Adolf Streckeisen] ಮುಂದುವರಿಸುತ್ತಾರೆ. ಹೀಗೆ ಅಂತಿಮವಾಗಿ 1934ರಲ್ಲಿ ಬಾಸೆಲ್ ಮಿಶನಿನ ಎಲ್ಲಾ ಚರ್ಚುಗಳನ್ನು ಒಟ್ಟುಗೂಡಿಸಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವನ್ನು ರಚಿಸಲಾಗುತ್ತದೆ. ಇಲ್ಲಿ ಮಲಬಾರ್ ಚರ್ಚುಗಳು ಕೂಡಾ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವನ್ನು ಸೇರಿಕೊಳ್ಳುತ್ತವೆ. ಇದು ಸ್ವಾಭಾವಿಕವಾಗಿಯೇ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ಗೆ ನಿರಾಶೆಯನ್ನುಂಟುಮಾಡುತ್ತದೆ. ಯಾಕೆಂದರೆ ಭವಿಷ್ಯತ್ತಿನಲ್ಲಿ ಮಲಬಾರ್ ಚರ್ಚುಗಳ ಹಾಗೆ ಬಾಸೆಲ್ ಮಿಶನಿನ ಇತರ ಚರ್ಚುಗಳು ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ್ನು ಸೇರಬಹುದು ಎಂಬುದು ಅದರ ನಿರೀಕ್ಷೆಯಾಗಿತ್ತು. ಹೀಗೆ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವನ್ನು ರಚಿಸಿ ಬಾಸೆಲ್ ಮಿಶನ್ ಚರ್ಚುಗಳ ಮಧ್ಯೆ ಉತ್ತಮ ನಿಕಟ ಸಂಬಂಧವನ್ನು ಹುಟ್ಟುಹಾಕುವ ಪ್ರಯತ್ನವನ್ನು ಬಾಸೆಲ್ ಮಿಶನ್ ನಡೆಸುತ್ತದೆ. ಬಾಸೆಲ್ ಮಿಶನಿನ ಎಲ್ಲಾ ಚರ್ಚುಗಳನ್ನು ಒಟ್ಟು ಸೇರಿಸಿ ಒಂದು ಸಿನೋಡನ್ನು ರಚಿಸಬೇಕೆಂಬ ಉದ್ದೇಶ

ಬಾಸೆಲ್ ಮಿಶನಿಗೆ ಜಾಗತಿಕ ಸಮರದ ಮೊದಲೇ ಇತ್ತು ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಬಾಸೆಲ್ ಮಿಶನಿನಲ್ಲಿ ಆಂತರಿಕವಾದ ಈ ಬದಲಾವಣೆಗಳಾಗುತ್ತಿರುವ ಕಾಲದಲ್ಲಿಯೂ ಅದು 'ಚರ್ಚ್ ಯೂನಿಯನ್'ಗೆ ಸಂಬಂಧಿಸಿದ ವಿಚಾರದ ಕಡೆ ಬಹಳಷ್ಟು ಒಲವನ್ನು ತೋರ್ಪಡಿಸುತ್ತದೆ.

ಬಾಸೆಲ್ ಮಿಶನಿನ ಹೋಮ್ ಕಮಿಟಿಯ ನಿರ್ದೇಶಕರಾಗಿದ್ದ ಹರ್ಟೆನ್‌ಸ್ಟೈನ್‌ರವರು [Hartenstein] ದಕ್ಷಿಣ ಭಾರತದಲ್ಲಿನ 'ಚರ್ಚ್ ಯೂನಿಯನ್'ನ [church union in South India] ಪ್ರಬಲ ಬೆಂಬಲಿಗರಾಗಿದ್ದರು. ಅವರು 1930ರಲ್ಲಿ 'ಚರ್ಚ್ ಯೂನಿಯನ್'ಗೆ ಸಂಬಂಧಿಸಿದಂತೆ ಬರೆದ ಗ್ರಂಥದಲ್ಲಿ [ten theses on church union] ಅವರು ಯೂನಿಯನ್ ಬಗ್ಗೆ, ಅವರ ವಾದವನ್ನು ಮಂಡಿಸಿದ್ದರು. ಇದು ಮಲಬಾರ್ ಸಭೆಗಳು ಮುಂದೆ ಆಂಗ್ಲೀಕನ್ [Anglicans] ಹಾಗೂ ಮೆಥೋಡಿಸ್ಟರುಗಳೊಂದಿಗೆ [Methodists] ವಿಸ್ತೃತವಾದ ಐಕ್ಯತೆ ಸಾಧಿಸಲು ಉತ್ತೇಜನವನ್ನು ನೀಡುತ್ತದೆ. ಹರ್ಟೆನ್‌ಸ್ಟೈನ್‌ರವರು ಈ ಒಕ್ಕೂಟ [union] ದಿಂದಾಗಬಹುದಾದ 3 ಪ್ರಮುಖ ಸಮಸ್ಯೆಗಳ ಬಗ್ಗೆಯೂ ಬೆಳಕು ಹರಿಸಿದ್ದರು[53]. ಮತ್ತೊಂದೆಡೆ ಭಾರತದಲ್ಲಿ ಬಾಸೆಲ್ ಮಿಶನಿನ ಮುಖ್ಯಸ್ಥರಾಗಿದ್ದ ಸ್ಟರ್‌ಕೈಸೇನ್‌ರವರು ಯೂನಿಯನ್‌ನ ಕೆಲವೊಂದು ವಿಚಾರಗಳಲ್ಲಿ ಬಹಳಷ್ಟು ಅಸ್ಪಷ್ಟತೆ ಇದೆ ಎಂದು ಅಭಿಪ್ರಾಯಪಟ್ಟಿದ್ದರು. ಹೀಗೆ ಬಾಸೆಲ್ ಮಿಶನ್ ದಕ್ಷಿಣ ಭಾರತದಲ್ಲಿನ 'ಚರ್ಚ್ ಯೂನಿಯನ್'ಗೆ ತನ್ನದೇ ಆದ ಕೆಲವು ಕೊಡುಗೆಗಳನ್ನು ಈ ಸಲಹೆಗಳ ಮೂಲಕ ನೀಡಿತ್ತು. ಈ ಮೇಲಿನ ಚರ್ಚೆಗಳ ಹೊರತಾಗಿಯೂ ಬಾಸೆಲ್ ಮಿಶನ್ ದಕ್ಷಿಣ ಭಾರತದಲ್ಲಿನ ಬೇರೆ ಬೇರೆ ಹಿನ್ನಲೆಯ ಚರ್ಚ್‌ಗಳೊಂದಿಗೆ ಐಕ್ಯವಾಗಿ ಮುಂದುವರೆಯುವ ವಿಚಾರದಲ್ಲಿ ಒಲವನ್ನು ತೋರಿಸುತ್ತದೆ. ಹರ್ಟೆನ್‌ಸ್ಟೈನ್‌ರವರ ಪ್ರಕಾರ ಭಾರತದಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಅತೀ ಚಿಕ್ಕ ಘಟಕವಾಗಿರುವುದರಿಂದ, ಇವು ಒಂದು ಚರ್ಚಾಗಿ [as one Basel mission church] 'ಹೊಸ ಯೂನಿಯನ್'ನಲ್ಲಿ ಸೇರಬೇಕೆಂದು ಅಭಿಪ್ರಾಯ ಪಟ್ಟಿದ್ದರು. 1938ರಲ್ಲಿ ತಾಂಬರಮ್‌ನಲ್ಲಿ [Tambaram] ನಡೆದ 'ವರ್ಲ್ಡ್ ಮಿಶನರಿ ಕಾನ್ಫರೆನ್ಸ್'ನಲ್ಲಿ [world missionary conference] ಭಾಗವಹಿಸಿದ್ದರು. ತದನಂತರ 1939ರ ಮಾರ್ಚ್‌ನಲ್ಲಿ ಕ್ಯಾಲಿಕಟ್‌ನಲ್ಲಿ ನಡೆದ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಸಿನೋಡ್‌ನಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಒಂದು ವಿಸ್ತೃತವಾದ ಒಕ್ಕೂಟವನ್ನು ಸೇರುವುದರ ಬಗ್ಗೆ ಬಹಳಷ್ಟು ಚರ್ಚೆಗಳಾಗಿದ್ದವು. ಅದೇ ವರ್ಷ ಬಾಸೆಲಿಗೆ ಮರಳಿದ ಹರ್ಟೆನ್‌ಸ್ಟೈನ್‌ರವರು ಹೋಮ್ ಬೋರ್ಡ್ ಜೊತೆ ದೀರ್ಘವಾಗಿ ಚರ್ಚಿಸಿ, ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ

ಸದಸ್ಯರುಗಳಿಗೆ, ಸಹ ಕೆಲಸಗಾರರಿಗೆ [co-workers] ಹಾಗೂ ಪಾದ್ರಿಗಳಿಗೆ ಒಂದು ಸುತ್ತೋಲೆ ಪತ್ರವನ್ನು [circular letter] ರವಾನಿಸಿದ್ದರು. ಇದನ್ನು ಮಲಯಾಳಂ ಹಾಗೂ ಕನ್ನಡ ಭಾಷೆಗಳಿಗೆ ಭಾಷಾಂತರಿಸಿ ದಕ್ಷಿಣ ಕೆನರಾ, ದಕ್ಷಿಣ ಮರಾಠ ಮತ್ತು ಮಲಬಾರ್‌ನ ಚರ್ಚ್ ಸದಸ್ಯರುಗಳಿಗೆ ವಿತರಿಸಲಾಗಿತ್ತು[54].

ತಾಂಬರಮ್‌ನಲ್ಲಿ ನಡೆದ ವರ್ಲ್ಡ್ ಮಿಶನರಿ ಕಾನ್ಫರೆನ್ಸ್ ಬಾಸೆಲ್ ಮಿಶನ್ ಮೇಲೆ ಗುರುತರವಾದ ಪ್ರಭಾವವನ್ನು ಬೀರಿತ್ತು ಎಂಬುದು ಈ ಪತ್ರದಿಂದ ಸ್ಪಷ್ಟವಾಗಿತ್ತು. ತಾಂಬರಮ್ ಸಮ್ಮೇಳನದಲ್ಲಿ ಭಾಗಿಯಾಗಿದ್ದ 'ಕಿರಿಯ ಚರ್ಚುಗಳು' [younger churches] ಬೇರೆ ಬೇರೆ ಸಂಪ್ರದಾಯದ ಪ್ರೊಟೆಸ್ಟೆಂಟ್ ಚರ್ಚುಗಳ ನಡುವಿನ ಸ್ಪರ್ಧೆಯಿಂದಾಗಿ ಆಗುವ ಕೆಟ್ಟ ಪರಿಣಾಮಗಳ ಬಗ್ಗೆ ಬಹಳಷ್ಟು ಬೆಳಕು ಹರಿಸಿದ್ದವು. ಈ ಕಿರಿಯ ಚರ್ಚುಗಳು, ತಾವು ಐಕ್ಯದ ಕಡೆಗೆ ಚಲಿಸುವಲ್ಲಿ ತಮಗೆ ಹಿರಿಯ ಚರ್ಚುಗಳು [elder churches] ಸಹಕರಿಸಬೇಕೆಂದು ವಿನಂತಿಸಿದ್ದವು. ಪತ್ರದಲ್ಲಿ 'ತಾಂಬರಮ್ ಸಮ್ಮೇಳನವು ಕ್ರೈಸ್ತ ಚರ್ಚುಗಳಲ್ಲಿ ಪಂಗಡ ಭೇದಗಳ ಬಗ್ಗೆ ಮರು ಚಿಂತಿಸಲು ಹಾಗೂ ಇವುಗಳ ಒಗ್ಗೂಡುವಿಕೆಗೆ ಪ್ರಯತ್ನಿಸಲು ಕರೆ ನೀಡಿದೆ' ಎಂಬುದನ್ನು ಒತ್ತಿ ಹೇಳಲಾಗಿತ್ತು.[55] ಜಗತ್ತಿನಾದ್ಯಂತ ಐಕ್ಯ ಚಳುವಳಿಯಲ್ಲಿ [world–wide union movement] ಬಾಸೆಲ್ ಮಿಶನ್ ಭಾಗವಹಿಸಬೇಕೇ ಎಂಬ ವಿಚಾರಕ್ಕೆ ಬಾಸೆಲ್ ಮಿಶನಿನ ಹೋಮ್ ಬೋರ್ಡ್ ತನ್ನ ಸಂಪೂರ್ಣವಾದ ಸಮ್ಮತಿಯನ್ನು ಸೂಚಿಸಿರುತ್ತದೆ. ಬಾಸೆಲ್ ಮಿಶನಿನ ಹಿನ್ನೆಲೆಯನ್ನು ಗಮನಿಸಿದರೆ, ಅದು ತನ್ನ ಆರಂಭದಲ್ಲೇ ಒಂದು ಐಕ್ಯ ಮಿಶನ್ [union mission] ಆಗಿತ್ತು ಎಂಬುದಾಗಿ ಸಿ.ಎಲ್. ಪುಟಾರ್ಡೋರವರು ಅಭಿಪ್ರಾಯ ಪಟ್ಟಿದ್ದರು. ಇದು ಜರ್ಮನ್, ಸ್ವಿಸ್, ಫ್ರೆಂಚ್ ಚರ್ಚುಗಳಿಗೆ ಸೇರಿದ ಕ್ರೈಸ್ತರನ್ನು ಒಳಗೊಂಡಿತ್ತು ಹಾಗೂ ಅವರಿಂದ ಬೆಂಬಲಿತವಾಗಿತ್ತು. ಅಷ್ಟೇ ಮಾತ್ರವಲ್ಲದೇ ಲೂಥೇರಿಯನರು, [Litherans] ರಿಫೋರ್ಮ್ಡ್ ಕ್ರೈಸ್ತರು [Reformed Christians] ಹಾಗೂ 'ಫ್ರೀ ಚರ್ಚ್‌ಸ್'ನ [Free Churches] ಸದಸ್ಯರು ಮತ ಪ್ರಚಾರದ ಉದ್ದೇಶದೊಂದಿಗೆ ಬಾಸೆಲ್ ಮಿಶನಿನಲ್ಲಿ ಸಂಘಟಿತರಾಗಿದ್ದರು. ಬಾಸೆಲ್ ಮಿಶನ್ ತನ್ನ ಯಾವುದೇ ಮಿಶನ್ ಪ್ರದೇಶಗಳಲ್ಲಿ ಒಂದು ಪಂಗಡಕ್ಕೆ ಸಂಬಂಧಿಸಿದ [Denominational churches] ಚರ್ಚುಗಳನ್ನು ಸ್ಥಾಪಿಸಿರಲಿಲ್ಲ. ಅದು ಕೇವಲ ಚರ್ಚುಗಳನ್ನು ಹಾಗೂ ಸಭೆಗಳನ್ನು [Congregations] ಸ್ಥಾಪಿಸಿತ್ತು ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಭಾರತದಲ್ಲಿನ ಬಾಸೆಲ್ ಮಿಶನ್ ಚರ್ಚುಗಳು ಐಕ್ಯತೆಯತ್ತ ಮುಂದುವರಿಯುವ ವಿಚಾರಕ್ಕೆ ಸಂಬಂಧಿಸಿದಂತೆ ಬಾಸೆಲ್ ಮಿಶನ್ ಹೋಮ್ ಬೋರ್ಡ್ ಅದರ ಸಂಪೂರ್ಣ ಸಮ್ಮತಿಯನ್ನು ನೀಡಿರುತ್ತದೆ. ಭಾರತದ

ಪಶ್ಚಿಮ ಕರಾವಳಿಯಲ್ಲಿನ ಬಾಸೆಲ್ ಮಿಶನ್ ಚರ್ಚುಗಳು ಪ್ರತ್ಯೇಕವಾಗಿದ್ದು, ದಕ್ಷಿಣ ಭಾರತದ ಇತರ ಚರ್ಚುಗಳೊಂದಿಗೆ ಕಡಿಮೆ ಸಂಪರ್ಕವನ್ನು ಹೊಂದಿದ್ದು, ಇತರ ಚರ್ಚುಗಳಿಂದ ಕಡಿಮೆ ಅಧ್ಯಾತ್ಮಿಕ ಸಹಾಯವನ್ನು ಪಡೆದಿದ್ದು, ಅವು ಬೃಹತ್ ಕ್ರೈಸ್ತೇತರ ಪರಿಸರದಲ್ಲಿ ಅಸ್ತಿತ್ವದಲ್ಲಿದ್ದುದರಿಂದ ಬಾಸೆಲ್ ಮಿಶನ್ ಐಕ್ಯವಾಗುವುದು ಒಳಿತು ಎಂಬುದು ಅದರ ಅಭಿಪ್ರಾಯವಾಗಿತ್ತು. ಅಧ್ಯಾತ್ಮಿಕ ಜೀವನ ಹಾಗೂ ಇವ್ಯಾಂಜಲಿಸ್ಟಿಕ್ ಕಾರ್ಯವನ್ನು ಬಳಪಡಿಸುವ ಕಾರಣಗಳಿಂದ ಬಾಸೆಲ್ ಮಿಶನ್ ಇತರ ಚರ್ಚ್ ಹಾಗೂ ಮಿಶನುಗಳೊಂದಿಗೆ ವಿಲೀನವಾಗುವುದು ಅತಿ ಅಗತ್ಯವಾಗಿತ್ತು[56]. ಹೀಗೆ ಬಾಸೆಲ್ ಮಿಶನ್ ಭಾರತದಲ್ಲಿನ ತನ್ನ ಚರ್ಚುಗಳು ಇತರ ಪಂಗಡದ ಚರ್ಚುಗಳೊಂದಿಗೆ ಐಕ್ಯವಾಗುವ ವಿಚಾರದಲ್ಲಿ ತನ್ನ ಸಂಪೂರ್ಣವಾದ ಬೆಂಬಲ ಹಾಗೂ ಪೂರಕವಾದ ಅಭಿಪ್ರಾಯಗಳನ್ನು ಹೊಂದಿತ್ತು.

'ದಕ್ಷಿಣ ಭಾರತದ ಚರ್ಚ್ ಐಕ್ಯತಾ ಯೋಜನೆ'ಗೆ [South India Church Union Scheme] ಸಂಬಂಧಿಸಿದಂತೆ ಬಾಸೆಲ್ ಮಿಶನ್ ಹೋಮ್ ಬೋರ್ಡ್ ತನ್ನ ಸಭೆಗಳಿಗೆ ಕೆಲವು ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ಸೂಚಿಸಿತ್ತು. ಅದರಂತೆ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಅದರ ಸ್ವಚ್ಛವಾದ ಗುರಿಗಳ ರಕ್ಷಣೆ ಬಗ್ಗೆ ಪರಿಶೀಲಿಸಬೇಕು. ವಿಸ್ತಾರವಾದ, ಬಲಿಷ್ಠವಾದ, ಶಕ್ತಿಶಾಲಿಯಾದ ಚರ್ಚ್ ರಚಿಸುವ ಉದ್ದೇಶದಿಂದಾಗಲೀ, ಶ್ರೀಮಂತ ಚರ್ಚಾಗುವ ಉದ್ದೇಶದಿಂದಾಗಲೀ ಅಥವಾ ಪಾಶ್ಚಾತ್ಯ ಪಂಗಡಗಳಿಂದ ಮುಕ್ತವಾಗುವ ಉದ್ದೇಶಕ್ಕಾಗಲೀ ಈ ಐಕ್ಯತೆಯು ನಡೆಯಬಾರದು. ಐಕ್ಯತೆಯು ನಂಬಿಕೆಯ ಪಯಣವಾಗಿದ್ದು, [venture] ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಅದು ಪ್ರಾರಂಭದಿಂದಲೂ ಅನುಸರಿಸಿದ ಸ್ಪಷ್ಟವಾದ, ಸ್ವಚ್ಛವಾದ, ಅಧ್ಯಾತ್ಮಿಕ ವಿಚಾರಗಳನ್ನು ಆ ಐಕ್ಯದಲ್ಲಿ ಸಂರಕ್ಷಿಸಬೇಕು. ಈ ವಿಚಾರಗಳು, ನಂಬಿಕೆಗಳು ಐಕ್ಯ ಚರ್ಚ್‌ನಲ್ಲಿ ಹಾಗೂ ಅದರ ಭೋದನೆಯಲ್ಲಿ ಸ್ಥಾನವನ್ನು ಪಡೆಯುವಂತೆ ನೊಡಬೇಕು. ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಮಾರ್ಗದರ್ಶನಕ್ಕಾಗಿ ಬೈಬಲ್‌ನ್ನೇ ಪರಿಗಣಿಸಬೇಕು ಎಂಬ ಪ್ರಬಲವಾದ ತನ್ನ ವಿಚಾರಧಾರೆ ಹಾಗೂ ಅಂಶಗಳನ್ನು ಬಾಸೆಲ್ ಮಿಶನ್ ತನ್ನ ಚರ್ಚುಗಳಿಗೆ ತಿಳಿಸಿತ್ತು. ಹೀಗೆ ಹೋಮ್ ಬೋರ್ಡ್ ತನ್ನ ಸಲಹೆಗಳನ್ನು ಸೂಚನೆಗಳನ್ನು ಪರಿಶೀಲಿಸಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವು 'ಐಕ್ಯತಾ ಜಂಟಿ ಸಮಿತಿ'ಯೊಂದಿಗೆ [Joint Committee on Union] ಮಾತುಕತೆಗೆ ಮುಂದಾಗಿ ಉತ್ತಮ ಯಶಸ್ಸನ್ನು ನಿರೀಕ್ಷಿಸುವಂತೆ ಕರೆ ನೀಡುತ್ತದೆ. ಭವಿಷ್ಯತ್ತಿನಲ್ಲೂ ಬಾಸೆಲ್ ಮಿಶನ್ ಹೋಮ್ ಬೋರ್ಡ್, ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಎಲ್ಲಾ ರೀತಿಯ ಸಮಸ್ಯೆಗಳನ್ನು ಬಗೆಹರಿಸಲು

ಸಹಕರಿಸುವುದಾಗಿಯೂ ಅದು ತಿಳಿಸುತ್ತದೆ.[57] ಈ ರೀತಿ ಹರ್ಟೆನ್‌ಸ್ಟೈನ್‌ರವರ ಅಭಿಪ್ರಾಯಗಳು ಹಾಗೂ ಬಾಸೆಲ್ ಮಿಶನ್ ಹೋಮ್ ಬೋರ್ಡಿನ ಸ್ಪಷ್ಟವಾದ ಸಂದೇಶಗಳು ಬಾಸೆಲ್ ಮಿಶನ್ ಐಕ್ಯದ ಪರವಾಗಿತ್ತು ಎಂಬುದನ್ನು ಪುಷ್ಟೀಕರಿಸುತ್ತದೆ.

ಕ್ರೈಸ್ತ ಸಭಾ ಐಕ್ಯತಾ ಚಳುವಳಿಯ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರ ನಿಲುವು:

ಬಾಸೆಲ್ ಮಿಶನ್ ಚರ್ಚ್ ಯೂನಿಯನ್‌ಗೆ ಸಂಬಂಧಿಸಿದಂತೆ ಚರ್ಚೆಯಲ್ಲಿ ನಿರತವಾಗಿರುವ ಕಾಲದಲ್ಲಿ, ಎಷ್ಟು ಸ್ಥಳೀಯ ಬಾಸೆಲ್ ಮಿಶನ್ ಕ್ರೈಸ್ತರು ಚರ್ಚೆಯಲ್ಲಿ ಭಾಗವಹಿಸಿದ್ದರು? ಎಂಬುದು ಇಲ್ಲಿ ಉಲ್ಲೇಖಿಸಬೇಕಾದ ಪ್ರಮುಖ ಪ್ರಶ್ನೆಯಾಗಿದೆ. ಅದೇ ರೀತಿ ಐಕ್ಯತಾ ಚಳುವಳಿಯ ಬಗ್ಗೆ ಬಾಸೆಲ್ ಮಿಶನ್ ಸ್ಥಳೀಯ ಕ್ರೈಸ್ತರ ಅಭಿಪ್ರಾಯಗಳೇನಾಗಿದ್ದವು? ಎಂಬುದನ್ನು ಗಮನಿಸಬೇಕಾಗಿದೆ. 20ನೇ ಶತಮಾನದಲ್ಲಿ ನಡೆದ ಐಕ್ಯತಾ ಮಾತುಕತೆಗಳಲ್ಲಿ, ಚರ್ಚೆಗಳಲ್ಲಿ ಕೆಲವರನ್ನು ಹೊರತುಪಡಿಸಿ, ಹೆಚ್ಚಾಗಿ ಭಾಗವಹಿಸಿದವರು ವಿದೇಶಿ ಮಿಶನರಿಗಳೇ. ಅದೇ ರೀತಿ ಹೆಚ್ಚಿನ ಕಡೆಗಳಲ್ಲಿ ಐಕ್ಯತಾ ಚಳುವಳಿಗೆ ವಿರೋಧ ಕಂಡುಬಂದದ್ದು ದೇಶಿಯ ಕ್ರೈಸ್ತರಿಂದಲೇ ಎಂಬುದನ್ನು ಗಮನಿಸಬೇಕಾಗಿದೆ. ಅವರೊಂದಿಗೆ ಕೆಲವು ಮಿಶನರಿಗಳು ಸೇರಿಕೊಂಡು ಸಭೆಗಳ ಐಕ್ಯತೆಯನ್ನು ವಿರೋಧಿಸಿದ್ದರು.[58] ಭಾರತೀಯ ಕ್ರೈಸ್ತರು ಒಂದು ಪಂಗಡದ ಸದಸ್ಯರಾದುದು ಚಾರಿತ್ರಿಕ ಅವಘಡವೇ ಹೊರತು ಯಾರೂ ಒಂದು ಪಂಗಡವನ್ನು ಆಯ್ದುಕೊಂಡದ್ದಲ್ಲ. ಪಾಶ್ಚಾತ್ಯ ಮಿಶನರಿಗಳು ಒಂದೊಂದು ಸ್ಥಳಕ್ಕೆ ಹೋಗಿ, ಅಲ್ಲಿ ಮತಪ್ರಚಾರ ನಡೆಸಿ, ಸ್ಥಳೀಯರನ್ನು ಕ್ರೈಸ್ತರನ್ನಾಗಿ ಮಾಡಿದರು. ಈ ಎಲ್ಲಾ ಮಿಶನುಗಳ ಉದ್ದೇಶ ಒಂದೇ ಆಗಿದ್ದು, ಅದು ಕ್ರೈಸ್ತ ಮತ ಪ್ರಚಾರವೇ ಆಗಿತ್ತು. ಆದರೆ ಬೇರೆ ಬೇರೆ ಮಿಶನುಗಳಿಂದ ಸ್ಥಾಪಿಸಲ್ಪಟ್ಟ ಈ ಕ್ರೈಸ್ತರನ್ನು ಆ ಮಿಶನುಗಳ ಹೆಸರಿನಿಂದಲೇ ಕರೆಯುವುದು ರೂಢಿಯಾಯಿತು. ಉದಾ: ಮೆಥೊಡಿಸ್ಟ್ ಕ್ರೈಸ್ತರು, ಬಾಸೆಲ್ ಮಿಶನ್ ಕ್ರೈಸ್ತರು ಇತ್ಯಾದಿ. ನಂತರದಲ್ಲಿ ಈ ಕ್ರೈಸ್ತರಲ್ಲಿಯೂ ಪಂಗಡ ಪ್ರೇಮ ಬೆಳೆಯುವುದನ್ನು ಕಾಣಬಹುದು. ಐಕ್ಯತಾ ಚಳುವಳಿಯ ಸಂದರ್ಭದಲ್ಲಿ ಈ ಕ್ರೈಸ್ತರು ಅದರಲ್ಲಿ ಸಕ್ರಿಯವಾಗಿ ಭಾಗವಹಿಸದೇ, ಅದನ್ನು ವಿರೋಧಿಸಿದ್ದು ಕಂಡುಬರುತ್ತದೆ. ಬಾಸೆಲ್ ಮಿಶನ್ ಹೋಮ್ ಬೋರ್ಡಿನ ಬೆಂಬಲದ ಹೊರತಾಗಿಯೂ, ತಿಯೋಲಾಜಿಕಲ್ ದೃಷ್ಟಿಕೋನದಿಂದ ಕೆಲವು ಭಿನ್ನಾಭಿಪ್ರಾಯಗಳು ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಕೇಳಿಬರುತ್ತವೆ.

ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್‌ನ ಮೂರು ಜಿಲ್ಲಾ ಚರ್ಚುಗಳು ಒಟ್ಟಾಗಿ ಐಕ್ಯತಾ ಯೋಜನೆಯನ್ನು ಒಪ್ಪಿಕೊಂಡು ಮುಂದುವರಿಯಬೇಕೆನ್ನುವುದು ಬಾಸೆಲ್ ಮಿಶನ್ ಹೋಮ್ ಬೋರ್ಡಿನ ಇಚ್ಛೆಯಾಗಿತ್ತು. 1943ರಲ್ಲಿ ಮಂಗಳೂರಿನಲ್ಲಿ ನಡೆದ ಸಿನೋಡಿನಲ್ಲಿ ಈ ವಿಚಾರವು ಚರ್ಚೆಗೆ ಬಂದಾಗ, ಐಕ್ಯತೆಯಿಂದಾಗಿ ಬಾಸೆಲ್ ಮಿಶನ್ ತನ್ನ ಆಸ್ತಿಗಳನ್ನು ಕಳಕೊಳ್ಳಬೇಕಾಗುತ್ತದೆ

ಎಂಬ ಕಾರಣಕ್ಕಾಗಿ ಕೆ.ಆರ್. ಕರುಣಾಕರ್‌ರವರ [K.R.Karunakar] ನೇತೃತ್ವದಲ್ಲಿ ಪ್ರಬಲವಾದ ವಿರೋಧ ವ್ಯಕ್ತವಾಗುತ್ತದೆ. ಆದುದರಿಂದ ಮತ್ತೊಮ್ಮೆ ಸಿನೋಡ್, ಬಾಸೆಲ್ ಮಿಶನ್ ಹೋಮ್ ಬೋರ್ಡ್ ಮೂರು ಜಿಲ್ಲಾ ಚರ್ಚುಗಳು ಒಟ್ಟಾಗಿ ಐಕ್ಯವಾಗುವುದನ್ನು ಬಯಸುತ್ತಿದ್ದು, ಮಲಬಾರ್ ಸ್ವಲ್ಪ ಕಾಲದವರೆಗೆ ಮುಂದುವರಿಯದೆ, ಕಾಯುವಂತೆ ಸೂಚಿಸುತ್ತದೆ. ಮತ್ತೊಂದೆಡೆ ಐಕ್ಯತೆಯ ಅಗತ್ಯತೆಯ ಬಗ್ಗೆ ದಕ್ಷಿಣ ಕೆನರ ಹಾಗೂ ಬಾಂಬೆ ಕರ್ನಾಟಕದ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ತಿಳುವಳಿಕೆ ಮೂಡಿಸಲು ಬಹಳಷ್ಟು ಪ್ರಯತ್ನಗಳನ್ನು ಮಾಡಲಾಗುತ್ತದೆ. 1944ರ ಫೆಬ್ರವರಿಯಲ್ಲಿ ಲೇಸ್ಲೈ ನ್ಯೂಬಿಗಿನ್ [Lesslie Newbigin] ರವರು ಹುಬ್ಬಳ್ಳಿಗೆ ಭೇಟಿ ಕೊಟ್ಟು, ಚರ್ಚೆಗಳಲ್ಲಿ ಭಾಗವಹಿಸುತ್ತಾರೆ. ಈ ಚರ್ಚೆಗಳಿಂದಾಗಿ ಹಲವು ಅಪನಂಬಿಕೆಗಳು ದೂರವಾಗುತ್ತವೆ. ಆದರೆ ಮಂಗಳೂರಿನಲ್ಲಿ ಪ್ರಬಲವಾದ ವಿರೋಧವು ಕಂಡುಬರುತ್ತದೆ. ಈ ಸಂದರ್ಭವನ್ನು ಉಲ್ಲೇಖಿಸುತ್ತಾ, 1920ರ ದಶಕದಲ್ಲಿ ಟಾಮ್ಲಿನ್‌ಸನ್ [Tomlinson] ಎದುರಿಸಿದ ಪರಿಸ್ಥಿತಿಯನ್ನೇ, ಐಕ್ಯತೆಯ ವಿಚಾರದಲ್ಲಿ ಸ್ಟ್ರೈಸೇನ್‌ರವರು ಎದುರಿಸಬೇಕಾಯಿತು ಎಂದು ಸಾರ್ಜೆಂಟ್‌ರವರು ಅಭಿಪ್ರಾಯಪಟ್ಟಿದ್ದಾರೆ. ಮಂಗಳೂರಿನಲ್ಲಿ ಕಂಡ ವಿರೋಧದ ಬಗ್ಗೆ ಸ್ಟ್ರೈಸೇನ್‌ರವರು [Streckeisen] ಹೇಳುವಂತೆ 'ವಿವೇಚನೆಯುಳ್ಳ ಅನುಮಾನಗಳಿಂದ ವಿರೋಧ ಉದ್ಭವಿಸದೇ, ಅವರ ಪ್ರಸ್ತುತ ಪರಿಸ್ಥಿತಿಯಿಂದ ಬದಲಾದರೆ ಅವರು ಎಲ್ಲವನ್ನು ಕಳಕೊಳ್ಳುತ್ತಾರೆ ಎಂಬ ಪ್ರಬಲವಾದ ಭಯದಿಂದಾಗಿದೆ. ಈ ವಿಚಾರವನ್ನು ಜವಾಬ್ದಾರಿಯುತವಾದ ಜನರು ಬೆಂಬಲಿಸಿದಾಗ ಸಮಸ್ಯೆಯಿಂದ ಹೊರಬರುವುದು ಕಷ್ಟವಾಗುತ್ತದೆ'[59] ಎಂದು ಅಭಿಪ್ರಾಯಪಟ್ಟಿದ್ದರು. ಈ ಪ್ರಬಲವಾದ ವಿರೋಧದಿಂದಾಗಿ 1945ರಲ್ಲಿ ನಡೆಯಬೇಕಿದ್ದ ಸಿನೋಡ್ ಮುಂದೂಡಲ್ಪಡುತ್ತದೆ.

ಚರ್ಚ್ ಆಫ್ ಸೌತ್ ಇಂಡಿಯಾದ ರಚನೆ:

ಮತ್ತೊಂದೆಡೆ 1939ರಲ್ಲಿಯೇ ಸೌತ್ ಇಂಡಿಯಾ ಯುನೈಟೆಡ್ ಚರ್ಚ್[60] ಅದರ 17ನೇ ಜನರಲ್ ಅಸ್ಸೆಂಬ್ಲಿಯಲ್ಲಿ [17th general assembly] ಹರ್ಟೆನ್‌ಸ್ಟೈನ್ ಹಾಗೂ ಬಾಸೆಲ್ ಮಿಶನ್ ಹೋಮ್ ಬೋರ್ಡ್ ಸೂಚಿಸಿದ ವಿಚಾರಗಳನ್ನು ಪರಿಗಣಿಸುತ್ತದೆ. ಸೌತ್ ಇಂಡಿಯಾ ಯುನೈಟೆಡ್ ಚರ್ಚ್ 1942ರಲ್ಲಿ ಐಕ್ಯದ ಯೋಜನೆಯನ್ನು [scheme of union] ಅಂತಿಮಗೊಳಿಸಿರುತ್ತದೆ ಹಾಗೂ 1946ರಲ್ಲಿ ನಡೆದ ಅದರ ಜನರಲ್ ಅಸೆಂಬ್ಲಿಯಲ್ಲಿ ಅದು 'ಚರ್ಚ್ ಆಫ್ ಸೌತ್ ಇಂಡಿಯಾ' [Church of South India (CSI)] ವನ್ನು ಸೇರಲು ನಿರ್ಧರಿಸುತ್ತದೆ. 1947, ಸೆಪ್ಟೆಂಬರ್ 27ರಂದು 'ಚರ್ಚ್ ಆಫ್ ಸೌತ್ ಇಂಡಿಯಾ'ದ[61] ಉದ್ಘಾಟನೆಯ ಸಂದರ್ಭದಲ್ಲಿ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ ಭಾಗವಾಗಿದ್ದ ಬಾಸೆಲ್ ಮಿಶನಿನ 'ಮಲಬಾರ್ ಜಿಲ್ಲಾ ಕೌನ್ಸಿಲ್'

[Malabar District Council] ಚರ್ಚ್ ಆಫ್ ಸೌತ್ ಇಂಡಿಯಾದಲ್ಲಿ ವಿಲೀನವಾಗುತ್ತದೆ. ಹೀಗೆ ಬಾಸೆಲ್ ಮಿಶನಿನ ಮಲಬಾರ್ ಪ್ರದೇಶದ ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾದ ಉದ್ಘಾಟನೆಯ ಸಂದರ್ಭದಲ್ಲಿಯೇ ಅದರ ಭಾಗವಾಗಿಬಿಡುತ್ತವೆ. ಆದರೆ 1968ರವರೆಗೆ ಅಂದರೆ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಸಿನೋಡಿನ ಕೊನೆಯವರೆಗೆ 'ಮಲಬಾರ್ ಜಿಲ್ಲಾ ಕೌನ್ಸಿಲ್' ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಸದಸ್ಯನಾಗಿಯೂ ಮುಂದುವರಿಯುತ್ತದೆ.[62]

1919ರಲ್ಲಿ ತ್ರಾಕ್ವೆಂಬಾರ್‌ನಲ್ಲಿ ಸಭಾ ಅನ್ಯೋನ್ಯತೆಯ ವಿಚಾರದ ಮೇಲೆ ಒಂದು ಪರಿಷತ್ತು ಸಭೆ ಸೇರುತ್ತದೆ. ಇದರಲ್ಲಿ ಆಂಗ್ಲಿಕನ ಸಭೆಯ ಹಾಗೂ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ (ಪ್ರೆಸ್ಬೆತೇರಿಯನ್ ಹಾಗೂ ಕಾಂಗ್ರಿಗೇಶನಲ್) 33 ಸದಸ್ಯರು ಭಾಗವಹಿಸುತ್ತಾರೆ. ಇದರ ನಂತರ ಆಂಗ್ಲೀಕನ್ ಬಿಷಪರುಗಳ ಸಿನೋಡು ಹಾಗೂ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ ಸರ್ವಸಾಮಾನ್ಯ ಪರಿಷತ್ತು ಅಂಗೀಕರಿಸಿದ ವಿಚಾರಗಳ ಬಗ್ಗೆ ಮಾತುಕತೆ ನಡೆಸಲು ಒಂದು ಸಂಧಾನ ಸಮಿತಿಯನ್ನು [negotiating committee] ನೇಮಿಸಲಾಗುತ್ತದೆ. 1920ರಲ್ಲಿ ಸಂಯುಕ್ತ ಸಂಧಾನ ಸಮಿತಿ [joint negotiating committee] ತನ್ನ ಕೆಲಸವನ್ನು ಆರಂಭಿಸುತ್ತದೆ. 1925ರಲ್ಲಿ ವೆಸ್ಲಿಯನ್ ಮೆಥೋಡಿಸ್ಟರು, ನಂತರದಲ್ಲಿ ಲೂಥರನ್ ಹಾಗೂ ಬ್ಯಾಪ್ಟಿಸ್ಟ್ ಸಭೆಗಳು ಸಮಿತಿಯನ್ನು ಸೇರಿಕೊಳ್ಳುತ್ತವೆ. ಸಂಧಾನ ಸಮಿತಿಯು 1929ರಲ್ಲಿ ಅನ್ಯೋನ್ಯತೆ ಯೋಜನೆಯ ಪ್ರಥಮ ಕರಡನ್ನು ಸಿದ್ಧಪಡಿಸಿದರೂ, ಆರು ಭಾರಿ ಪರಿಷ್ಕರಣೆಯ ನಂತರ 1942ರಲ್ಲಿ ಅಂಗೀಕೃತವಾಗುತ್ತದೆ. 1920 ರಿಂದ 1947ರ ವರೆಗೆ ಸಂಧಾನ ಸಮಿತಿಯು ಅತೀ ತೀಕ್ಷ್ಣವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಂಧಾನ ಸಮಿತಿಯ ಚರ್ಚೆಯಲ್ಲಿ ವೈದಿಕ ಸೇವಾ ವರ್ಗದ ಪ್ರಶ್ನೆಯು ಮುಖ್ಯವಾಗಿ ಸಮಸ್ಯೆಯಾಗಿ ಪರಿಣಮಿಸುತ್ತದೆ. 1942ರಲ್ಲಿ ಸಂಧಾನ ಸಮಿತಿಯು ಅನ್ಯೋನ್ಯತೆಯ ಯೋಜನೆಯನ್ನು ಅಂತಿಮಗೊಳಿಸಿದ ನಂತರ, ಅದಕ್ಕೆ ಒಪ್ಪಿಗೆ ಪಡೆಯಲು ಆಯಾ ಸಭೆಗಳಿಗೆ ಕಳುಹಿಸಿ ಒಪ್ಪಿಗೆ ಪಡೆಯಬೇಕಿತ್ತು. ಇದು ಬಹು ಕಠಿಣವಾದ ಕಾರ್ಯವಾಗಿತ್ತು. ಮೊದಲು ವೆಸ್ಲಿಯನ್ ಮೆಥೊಡಿಸ್ಟರು 1945ರಲ್ಲಿ, ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ಸಭೆಗಳು 1946ರಲ್ಲಿ ಯೋಜನೆಗೆ ಒಪ್ಪಿಗೆಯನ್ನು ನೀಡುತ್ತವೆ. ಆದರೆ ಆಂಗ್ಲಿಕನರು ಇದನ್ನು ಒಪ್ಪಿಕೊಳ್ಳಲು ಸಮಸ್ಯೆಗಳಿದ್ದು, ಅಂತಿಮವಾಗಿ 1947ರಲ್ಲಿ ಚರ್ಚ್ ಆಫ್ ಇಂಡಿಯಾ, ಪಾಕಿಸ್ತಾನ, ಬರ್ಮಾ ಹಾಗೂ ಸಿಲೋನಿನ [C.I.P.B.C.] ಆಂಗ್ಲಿಕನ್ ಸಭೆಗಳು ಅನ್ಯೋನ್ಯ ಯೋಜನೆಯನ್ನು ಒಪ್ಪಿಕೊಳ್ಳುತ್ತವೆ. ಹೀಗೆ ಅಂತಿಮವಾಗಿ 'ದಕ್ಷಿಣ ಭಾರತ ಸಭೆ'ಯ [church of south India] ಉದ್ಘಾಟನೆಯು

ಮದ್ರಾಸ್‌ನ ಸಂತ ಜಾರ್ಜ್ ದೇವಾಲಯದಲ್ಲಿ 1947ನೇ ಸೆಪ್ಟೆಂಬರ್ 27ರಂದು ಜರಗುತ್ತದೆ. ಇದು ಇಡೀ ಜಗತ್ತಿನಲ್ಲಿಯೇ ಹಾಗೂ ಕ್ರೈಸ್ತ ಸಭಾ ಚರಿತ್ರೆಯಲ್ಲಿಯೇ ಪ್ರಪ್ರಥಮವಾಗಿ ಎಪಿಸ್ಕೋಪಲ (ಬಿಷಪರ ಆಡಳಿತದಲ್ಲಿದ್ದ ಸಭೆಗಳು) ಹಾಗೂ ಎಪಿಸ್ಕೋಪಲವಲ್ಲದ (ಬಿಷಪರ ಆಡಳಿತ/ಅಸ್ತಿತ್ವವಿರದ ಸಭೆಗಳು) ಸಭೆಗಳ ಅನ್ಯೋನ್ಯತೆಯಾಗಿದ್ದು, ವೈದಿಕ ವರ್ಗ, ಆರಾಧನಾ ಕ್ರಮ, ಆಡಳಿತ ಕ್ರಮ ಇತ್ಯಾದಿ ವಿಚಾರಗಳಲ್ಲಿ ಅತಿ ಭಿನ್ನ ಭಿನ್ನವಾದ ಅಭಿಪ್ರಾಯಗಳುಳ್ಳ ಪಂಗಡಗಳ ಐಕ್ಯವಾಗಿತ್ತು.[63]

ಮಲಬಾರ್‌ನ ಬಾಸೆಲ್ ಮಿಶನ್ ಸಭೆಗಳ ವಿಲೀನ ಮತ್ತು ಕ್ರೈಸ್ತರ ವಿರೋಧ:

1931ರಲ್ಲಿಯೇ 'ಮಲಬಾರ್ ಜಿಲ್ಲಾ ಕೌನ್ಸಿಲ್' ಐಕ್ಯ ಯೋಜನೆಯ ಪರವಾಗಿ ನಿರ್ಧಾರವನ್ನು ಕೈಗೊಳ್ಳುತ್ತದೆ. ಅದರ ಮೂರು ಸ್ಥಳೀಯ ಚಿಕ್ಕ ಸಭೆಗಳು [congregations] ಈ ಯೋಜನೆಯ ವಿರುದ್ಧ ಮತ ಚಲಾಯಿಸಿದರೆ, ಉಳಿದ 12 ಸಭೆಗಳು ಐಕ್ಯತೆಯ ಪರವಾಗಿ ಮತ ಚಲಾಯಿಸುತ್ತವೆ.[64] ಐಕ್ಯತಾ ನಿರ್ಧಾರಗಳು ಕೆಲವು ವಿರೋಧಿ ಗುಂಪುಗಳನ್ನು ಹುಟ್ಟುಹಾಕುತ್ತದೆ. ಆದರೆ ಇದರಿಂದ ಕ್ರೈಸ್ತರು ವಿಸ್ತೃತ ಒಕ್ಕೂಟದಲ್ಲಿ ವಿಲೀನವಾಗುವುದಕ್ಕೆ ಹಿಂಜರಿಯಲಿಲ್ಲ. ಒಂದು ವರ್ಗದ ನಾಯಕರು ಚರ್ಚ್ ಆಫ್ ಸೌತ್ ಇಂಡಿಯಾದ ರಚನೆಯನ್ನು ಪ್ರಬಲವಾಗಿ ವಿರೋಧಿಸಿದರು. ಯಾಕೆಂದರೆ ಅವರ ಪ್ರಕಾರ ಐಕ್ಯತೆಯು 'ನೈಜ ಸುವಾರ್ತೆ'ಗೆ [true Gospel] ಧಕ್ಕೆ ತರುವಂತದ್ದಾಗಿದ್ದು, ಅದರಿಂದಾಗಿ ಚರ್ಚ್ ಶಕ್ತಿಗುಂದಲಿದೆ ಎಂಬುದು ಅವರ ವಾದವಾಗಿತ್ತು. ಕರ್ನಾಟಕದಲ್ಲಿ ಐಕ್ಯತೆಗೆ ಪ್ರಬಲವಾದ ವಿರೋಧ ಕಂಡುಬಂದಿದ್ದು ಬಾಸೆಲ್ ಮಿಶನ್ ಚರ್ಚುಗಳಿಂದಾಗಿದೆ. ಈ 'ಐಕ್ಯ' ಯೋಜನೆಯು ಮಿಶನರಿಗಳ ಹಾಗೂ ಜನರ ಮಧ್ಯೆ ಕಲಹವನ್ನು ಹುಟ್ಟುಹಾಕುತ್ತದೆ.[65] ಬಾಸೆಲ್ ಮಿಶನಿನ ಮಲಬಾರ್ ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾ ಸ್ಥಾಪನೆಯ ಸಂದರ್ಭದಲ್ಲೇ ಅದನ್ನು ಸೇರಿಕೊಳ್ಳುತ್ತವೆ. ಇದು ಮಲಬಾರ್‌ನಲ್ಲಿ ಕೆಲವು ಬಾಸೆಲ್ ಮಿಶನ್ ಕ್ರೈಸ್ತರಿಂದ ಪ್ರಬಲವಾಗಿ ವಿರೋಧಿಸಲ್ಪಡುತ್ತದೆ. ಮಲಬಾರ್‌ನಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರಲ್ಲಿನ ಕೆಲವು ಉಪಾಧ್ಯಾಯರು ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದುದ್ದಕ್ಕೆ ಪ್ರಬಲವಾದ ವಿರೋಧ ಮತ್ತು ಆಕ್ಷೇಪವನ್ನು ವ್ಯಕ್ತಪಡಿಸುತ್ತಾರೆ ಹಾಗೂ ತಕ್ಷಣದಲ್ಲಿ ಒಕ್ಕೂಟದಿಂದ ಹೊರಬರಬೇಕೆಂಬ ಬೇಡಿಕೆಯನ್ನು ಮಂಡಿಸುತ್ತಾರೆ. ಬಾಸೆಲ್ ಮಿಶನ್ ಶಿಕ್ಷಕರು ಅಪಾರವಾದ ಅಧಿಕಾರವನ್ನು ಅನುಭವಿಸುತ್ತಿದ್ದು, ಅವರು ಈ ಅನ್ಯೋನ್ಯತೆಯಿಂದಾಗಿ ಅವರ ಈ ಅಧಿಕಾರ ಕೈ ತಪ್ಪಿ ಹೋಗಲಿದೆ ಎಂಬ ಭಯ ಇವರಲ್ಲಿತ್ತು. ಮಲಬಾರ್‌ನಲ್ಲಿ ಚರ್ಚ್ ಅನ್ಯೋನ್ಯತೆಗೆ ಬಹಳ ಪ್ರಬಲವಾದ ವಿರೋಧ ವ್ಯಕ್ತವಾಗುತ್ತದೆ. ಬಾಸೆಲ್ ಮಿಶನಿನ ಮಲಬಾರ್ ಚರ್ಚ್ ಸಿನೋಡ್ ಬಹುಮತದೊಂದಿಗೆ ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ನಿರ್ಧರಿಸಿದ್ದರೂ ಹಠಾತ್ತಾಗಿ ಪ್ರಾಥಮಿಕ ಶಾಲಾ ಶಿಕ್ಷಕರು, ಶಾಲಾ ಮುಖ್ಯೋಪಾಧ್ಯಾಯರು ಹೋರಾಟಕ್ಕಿಳಿಯುವುದು

ಮಾತ್ರವಲ್ಲದೇ ಇತರರನ್ನು ತಮ್ಮ ಹೋರಾಟದ ಕಡೆ ಸೆಳೆದು ಹಳೆಯ ವ್ಯವಸ್ಥೆಯನ್ನು ಪುನರ್ ಸ್ಥಾಪಿಸಬೇಕೆಂದು ಒತ್ತಾಯಿಸುತ್ತಾರೆ. ಈ ಶಿಕ್ಷಕರು ಬಾಸೆಲ್ ಮಿಶನ್ ನಿಯಂತ್ರಣದಲ್ಲಿ ಅಪಾರವಾದ ಅಧಿಕಾರವನ್ನು ಹೊಂದಿದ್ದು, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರಿಂದ ಅವರು ಮೊದಲು ಹೊಂದಿದ್ದ ಅಧಿಕಾರವನ್ನು ಕಳಕೊಳ್ಳುವ ಭೀತಿಯಿಂದಾಗಿ ಹೋರಾಟವನ್ನು ಆರಂಭಿಸುತ್ತಾರೆ.[66]

ಚರ್ಚ್ ಆಫ್ ಸೌತ್ ಇಂಡಿಯಾ ವ್ಯವಸ್ಥೆಯಲ್ಲಿ ಬಿಷಪ್ [Bishop] ಅಸ್ತಿತ್ವದಲ್ಲಿದ್ದು, ಆತ ಮಲಬಾರ್ ಪ್ರದೇಶದ ಶಿಕ್ಷಣ ಸಂಸ್ಥೆಗಳನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿದ್ದನು. ಶಿಕ್ಷಕರ ನೇಮಕ, ಮುಖ್ಯೋಪಾಧ್ಯಾಯರ ನೇಮಕ ಇತ್ಯಾದಿ ಅಧಿಕಾರಗಳನ್ನು ಹೊಂದಿದ್ದನು. ಚರ್ಚ್ ಆಫ್ ಸೌತ್ ಇಂಡಿಯಾವನ್ನು ಸೇರಿದ ಮಲಬಾರ್ ಪ್ರದೇಶವು 'ಉತ್ತರ ಕೇರಳ ಧರ್ಮ ಪ್ರಾಂತ್ಯ'ದ [Diocese of North Kerala] ಭಾಗವಾಗುತ್ತದೆ. ಇದರ ಮೊದಲ ಬಿಷಪರಾಗಿ ಆಂಗ್ಲಿಕನ್ ಪಾದ್ರಿಯೊಬ್ಬರನ್ನು ಆಯ್ಕೆ ಮಾಡಲಾಗುತ್ತದೆ. ಆದರೆ ನಂತರ ಅವರು ರಾಜಿನಾಮೆಯನ್ನು ಕೊಡುತ್ತಾರೆ. ನಂತರ ಅವರ ಉತ್ತರಾಧಿಕಾರಿಯಾಗಿ ಬಾಸೆಲ್ ಮಿಶನಿನ ರಿಚರ್ಡ್ ಲೀಫ್‌ರವರು ಆಯ್ಕೆಯಾಗುತ್ತಾರೆ. ಇವರ ಕಾಲಾವಧಿಯಲ್ಲಿಯೂ ವಿರೋಧ ಮುಂದುವರಿಯುತ್ತದೆ. ಆದರೆ ಲೀಫ್‌ರವರು ಮಲಬಾರನ್ನು ಚರ್ಚ್ ಆಫ್ ಸೌತ್ ಇಂಡಿಯಾದಲ್ಲಿ ಮುಂದುವರಿಸುವಲ್ಲಿ ಯಶಸ್ವಿಯಾಗುತ್ತಾರೆ. ಕ್ಯಾಲಿಕಟ್‌ನ ಕಾಲೇಜು [Malabar Christian college] ಚರ್ಚ್ ಆಫ್ ಸೌತ್ ಇಂಡಿಯಾ ಜೊತೆಗಿನ ಐಕ್ಯತೆಯನ್ನು ವಿರೋಧಿಸುವವರ ಕೇಂದ್ರವಾಗಿ ಪರಿಣಮಿಸುತ್ತದೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಜ್ಯಾಕ್ಸ್ ರೋಸೆಲ್ [Jacques Rossel] ರವರು ಮಲಬಾರ್‌ಗೆ ಹಲವು ಭೇಟಿಗಳನ್ನು ನೀಡಬೇಕಾಗಿ ಬರುತ್ತದೆ.[67] ಈ ಬಿಕ್ಕಟ್ಟು ನಂತರ ಕೋರ್ಟು ಮೆಟ್ಟಿಲೇರುತ್ತದೆ. ಕೋರ್ಟಿನಲ್ಲಿ ವ್ಯಾಜ್ಯಗಳು ನಡೆದು, ಬಾಸೆಲ್ ಮಿಶನ್ ನಂಬಿಕೆಯೂ, ದಕ್ಷಿಣ ಭಾರತ ಸಭೆಯ ನಂಬಿಕೆಯೂ ಒಂದೇ ಎಂಬ ತೀರ್ಪನ್ನು ಕೇರಳ ಹೈಕೋರ್ಟು ನೀಡುತ್ತದೆ. ನಂತರ ಸುಪ್ರೀಂ ಕೋರ್ಟ್ ಕೂಡಾ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿಯುತ್ತದೆ.[68] ಹೀಗೆ ವಿರೋಧದ ಮಧ್ಯೆಯೂ, ಬಾಸೆಲ್ ಮಿಶನಿನ ಮಲಬಾರ್ ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾದ ಅವಿಭಾಜ್ಯ ಅಂಗವಾಗಿ ಮುಂದುವರಿಯುತ್ತವೆ. ಮಲಬಾರ್‌ನ ಚರ್ಚ್‌ನಲ್ಲಿ ಸಮಾನ ಬಲವುಳ್ಳ ಎರಡು ಪಕ್ಷಗಳಿ(ಗುಂಪು)ದ್ದವು. ಒಂದು ಪಕ್ಷವು 'ಚರ್ಚ್ ಪಕ್ಷ' [church party] ಎಂದು ಗುರುತಿಸಿಕೊಂಡಿದ್ದು, ಅದರಲ್ಲಿದ್ದವರು ಸ್ವತಂತ್ರರಾಗಿದ್ದು, ಮಿಶನಿನ ಮೇಲೆ ಅವಲಂಭಿತರಾಗಿರಲಿಲ್ಲ. ಇವರು ಮುಕ್ತ ಮನಸ್ಸಿನವರಾಗಿದ್ದು, ಮಲಬಾರ್‌ನ ಹೊರಗಿದ್ದ ಇತರ ಚರ್ಚುಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡಿದ್ದರು. ಈ ಪಕ್ಷದಲ್ಲಿ ವೈದ್ಯರು, ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು

ಹಾಗೂ ಜನಸಾಮಾನ್ಯರಿದ್ದು, ಚರ್ಚ್ ಆಫ್ ಸೌತ್ ಇಂಡಿಯಾದೊಂದಿಗೆ ಮಲಬಾರ್ ಚರ್ಚನ್ನು ಭದ್ರವಾಗಿ ಕಟ್ಟಬೇಕೆಂಬ ಇಚ್ಛೆಯನ್ನು ಹೊಂದಿದ್ದರು. ಅಲ್ಲಿದ್ದ ಮತ್ತೊಂದು ಪಕ್ಷವೆಂದರೆ, 'ಮಿಶನ್ ಪಕ್ಷ' [mission party]. ಇವರು ಸಂಪ್ರದಾಯವಾದಿಗಳಾಗಿದ್ದು ಶಾಲಾ ಶಿಕ್ಷಕರು ಹಾಗೂ ಹೈಸ್ಕೂಲಿನ ಮುಖ್ಯ ಶಿಕ್ಷಕರಿಂದ ಬೆಂಬಲಿತರಾಗಿದ್ದರು. ತಮ್ಮ ಉದ್ಯೋಗದ ಮೇಲೆ ಪರಿಣಾಮ ಬೀರಬಹುದೆಂಬ ಭಯ ಇವರ ವಿರೋಧಕ್ಕೆ ಮುಖ್ಯ ಕಾರಣವಾಗಿರುತ್ತದೆ. ಬಾಸೆಲ್ ಮಿಶನ್ ಕಾಲದಲ್ಲಿ ಸಾಕಷ್ಟು ಮಿಶನರಿಗಳಿದ್ದಿದ್ದರಿಂದ ಇವರು ಬಹಳಷ್ಟು ಸ್ವತಂತ್ರವನ್ನು ಅನುಭವಿಸಿದ್ದು, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರೊಂದಿಗೆ ಈ ಸ್ವತಂತ್ರ್ಯಗಳನ್ನು ಅವರು ಕಳಕೊಳ್ಳುತ್ತಾರೆ. ಮಾತ್ರವಲ್ಲದೇ ಚರ್ಚ್ ಆಡಳಿತಕ್ಕೆ ಉತ್ತರ ನೀಡಬೇಕಾಗಿ ಬರುತ್ತದೆ.[69]

ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ದಕ್ಷಿಣ ಕೆನರಾದಲ್ಲಿ ವಿರೋಧ:

ಪ್ರಾರಂಭದಿಂದಲೇ ದಕ್ಷಿಣ ಕೆನರಾ ಚರ್ಚ್ ಕೌನ್ಸಿಲ್, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಿರುತ್ತದೆ. ಅದರಲ್ಲಿನ ಆಂಗ್ಲಿಕನ್ ವ್ಯವಸ್ಥೆಗಳನ್ನು ಬಾಸೆಲ್ ಮಿಶನ್ ಕ್ರೈಸ್ತರು ಪ್ರಬಲವಾಗಿ ವಿರೋಧಿಸಿದ್ದರು. ಚರ್ಚ್ ಆಫ್ ಸೌತ್ ಇಂಡಿಯಾದಲ್ಲಿ ಬಿಷಪರುಗಳು ಅಸ್ತಿತ್ವದಲ್ಲಿದ್ದು, ಅವರಿಗೆ ಪ್ರಬಲವಾದ ಅಧಿಕಾರಗಳಿದ್ದವು. ಈ ರೀತಿ ಬಾಸೆಲ್ ಮಿಶನ್ ಕ್ರೈಸ್ತರು ಅವರ ನಂಬಿಕೆ ವಿಚಾರದಲ್ಲಿ ಬಹಳಷ್ಟು ಸಂಪ್ರದಾಯವಾದಿಗಳಾಗಿದ್ದರು. ಬಾಸೆಲ್ ಮಿಶನ್ ಕ್ರೈಸ್ತರು ಕೆಲವು ಮಿಶನರಿಗಳ ಬೆಂಬಲದಿಂದಾಗಿ ಪ್ರತಿ ಕ್ರೈಸ್ತರ ಮನೆ ಮನೆಗೆ ತೆರಳಿ, ಜನರು ಐಕ್ಯತಾ ಯೋಜನೆಯನ್ನು ವಿರೋಧಿಸುವ ಹಾಗೆ ಮಾಡುತ್ತಾರೆ. ಏಕೆಂದರೆ ಅವರಿಗೆ ಬಾಸೆಲ್ ಮಿಶನಿನ ಹಳೆ ಸಂಪ್ರದಾಯಗಳನ್ನು ಬಿಟ್ಟು ಬಿಡಲು ಮನಸ್ಸಿರಲಿಲ್ಲ. ಬಾಸೆಲ್ ಮಿಶನ್ ಕ್ರೈಸ್ತರು, ಬಾಸೆಲ್ ಮಿಶನ್ ಪಾಸ್ಟರುಗಳು ಐಕ್ಯತೆಗೆ ಸಿದ್ಧವಿರಲಿಲ್ಲ ಹಾಗೂ ಈ ದಿಕ್ಕಿನಲ್ಲಿ ಅವರ ಸಹಕಾರವು ಇರಲಿಲ್ಲ ಎಂಬುದಾಗಿ ಎಸ್.ಆರ್. ಫುರ್ಟಾಡೊರವರು ಅಭಿಪ್ರಾಯಪಟ್ಟಿದ್ದರು. ಕರುಣಾಕರ್‌ರವರಂತಹ ಚರ್ಚ್ ನಾಯಕರು ಐಕ್ಯತೆಯ ಪರವಾಗಿರಲಿಲ್ಲ. ಅದಕ್ಕೆ ಬದಲಾಗಿ ಅವರು ಅವರು ಬಾಸೆಲ್ ಮಿಶನ್ ಚರ್ಚ್ ಆಸ್ತಿಗಳು ಸ್ಥಳೀಯ ಕ್ರೈಸ್ತರ ಅಗತ್ಯಕ್ಕಾಗಿ ಬಳಕೆಯಾಗಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದರು.[70] ಈ ಮೇಲಿನ ಅಭಿಪ್ರಾಯಗಳ ಹೊರತಾಗಿಯೂ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಈ ಐಕ್ಯತೆಯ ಬಗ್ಗೆ ತಿಳಿವಳಿಕೆ ಮೂಡಿಸುವ ಪ್ರಯತ್ನಗಳು ಮುಂದುವರಿಯುತ್ತವೆ. ಚರ್ಚ್ ಆಫ್ ಸೌತ್ ಇಂಡಿಯಾ ಆಗಾಗಲೇ ಮಿಲಿಯದಷ್ಟು ಕ್ರೈಸ್ತರನ್ನು ಹೊಂದಿದ್ದು, ಆರೋಗ್ಯ, ಶಿಕ್ಷಣ ಮುಂತಾದ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮುಂದುವರಿಸುವಷ್ಟು ಶಕ್ತವಾಗಿದೆ. ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಆಫ್ ಸೌತ್ ಇಂಡಿಯಾದಲ್ಲಿ ಐಕ್ಯವಾದಲ್ಲಿ, ಬಾಸೆಲ್ ಮಿಶನ್ ತನ್ನ ಮಿಶನರಿಗಳನ್ನು ಹಿಂತೆಗೆದುಕೊಳ್ಳಲು ಸಹಾಯವಾಗುವುದು. ಆದರೆ

ಬಹುಪಾಲು ಬಾಸೆಲ್ ಮಿಶನ್ ಕ್ರೈಸ್ತರು ಅವರ ಮೊದಲಿನ ಮಿಶನರಿಗಳಿಗೆ ಹಾಗೂ ಸಂಪ್ರದಾಯವಾದಕ್ಕೆ ಅಂಟಿಕೊಂಡವರಾಗಿದ್ದಾರೆ ಎಂಬುದು ಜ್ಯಾಕ್ಸ್ ರೋಸೆಲ್‌ರವರ ಅಭಿಪ್ರಾಯವಾಗಿತ್ತು. ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರಿಂದಾಗಿ ಅವರಿಗೆ ಬಹಳಷ್ಟು ಲಾಭಗಳಿವೆ ಎಂಬುದರ ಬಗ್ಗೆಯೂ ಅವರಲ್ಲಿ ತಿಳುವಳಿಕೆ ಮೂಡಿಸುವ ಪ್ರಯತ್ನಗಳು ನಡೆದಿದ್ದವು.[71] ಪೈಗಲ್ [Fiegal] ಎಂಬ ಬಾಸೆಲ್ ಮಿಶನರಿ, ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ಉತ್ತೇಜಿಸಲು ಪ್ರಯತ್ನಿಸಿದರೂ, ಜಿಲ್ಲಾ ಚರ್ಚ್ ಬೋರ್ಡ್ ಅವರಿಗೆ ಬೆಂಬಲವನ್ನು ನೀಡುವುದಿಲ್ಲ. ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ಅನಾಸಕ್ತಿ ತೋರಿಸಲು ಮುಖ್ಯ ಕಾರಣ ಕರುಣಾಕರ್ ಹಾಗೂ ಇತರ ಕೆಲವರಾಗಿದ್ದಾರೆ ಎಂಬುದಾಗಿ ಐ. ಎ. ಸೋನ್ಸ್ [I.A.Soans] ಅಭಿಪ್ರಾಯಪಟ್ಟಿದ್ದರು. ಬಾಸೆಲ್ ಮಿಶನ್, ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದರೆ ಬಾಸೆಲ್ ಮಿಶನ್ ಕ್ರೈಸ್ತರು ತಮ್ಮ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸಲು ಅಸಾಧ್ಯವಾದೀತು ಹಾಗೂ ವಿದೇಶಿ ಸಹಾಯವನ್ನು ಪಡೆಯುವುದು ಸಾಧ್ಯವಾಗಲಿಕ್ಕಿಲ್ಲ ಎಂಬ ಅಭಿಪ್ರಾಯವನ್ನು ಆರ್. ಡಿ. ಜತ್ತನ್ನ [R.D.Jathanna] ವ್ಯಕ್ತಪಡಿಸಿದ್ದರು. ಚರ್ಚ್ ಆಫ್ ಸೌತ್ ಇಂಡಿಯಾ ಜನರು ಸ್ಥಳೀಯ ಸಂಸ್ಕೃತಿಗಳನ್ನು ಚರ್ಚ್‌ನಲ್ಲಿ ಪಾಲನೆ ಮಾಡಲು ಸಹಾಯಿಸಿತು. ಆದರೆ ಬಾಸೆಲ್ ಮಿಶನ್ ಇಂತಹ ವಿಚಾರಗಳಿಗೆ ಅವಕಾಶವನ್ನೇ ನೀಡಲಿಲ್ಲ. ಇದು ಬಾಸೆಲ್ ಮಿಶನ್ ಕ್ರೈಸ್ತರ ವಿರೋಧಕ್ಕೆ ಇನ್ನೊಂದು ಕಾರಣವಾಗಿತ್ತು.[72]

1936 ರಿಂದಲೇ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಐಕ್ಯ ಯೋಜನೆಯ ಬಗ್ಗೆ ಆಸಕ್ತಿಯನ್ನು ತೋರಿಸುತ್ತಾ ಬಂದರೂ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕೆನರಾ ಮತ್ತು ಕೊಡಗು ಪ್ರದೇಶದ ಬಾಸೆಲ್ ಮಿಶನ್ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ಬಗ್ಗೆ ಯಾವುದೇ ಅಂತಿಮ ನಿರ್ಧಾರಕ್ಕೆ ಬಂದಿರುವುದಿಲ್ಲ. 1938ರ ಸಿನೋಡಿನ ಸಭೆಯಲ್ಲಿ ಎರಡೂ ಜಿಲ್ಲಾ ಸಭೆಗಳು ಐಕ್ಯತಾ ಯೋಜನೆಯ ಬಗ್ಗೆ ಮಾತುಕತೆಗಳನ್ನು ಆರಂಭಿಸಬೇಕೆಂಬ ನಿರ್ಧಾರಗಳಾಗುತ್ತವೆ. ಪರಿಸ್ಥಿತಿಯ ಅಧ್ಯಯನಕ್ಕೆ ಚರ್ಚ್ ಆಫ್ ಸೌತ್ ಇಂಡಿಯಾ ಒಂದು ಉಪ ಸಮಿತಿಯನ್ನು ರಚಿಸುತ್ತದೆ. ಈ ಉಪಸಮಿತಿಯೊಂದಿಗೆ ಮಾತುಕತೆಗಳನ್ನು ಆರಂಭಿಸಬೇಕೆಂಬುದಾಗಿ ಎರಡು ಜಿಲ್ಲಾ ಚರ್ಚ್ ಕೌನ್ಸಿಲ್‌ಗಳಿಗೂ ಚರ್ಚ್ ಆಫ್ ಸೌತ್ ಇಂಡಿಯಾ ಸಿನೋಡ್ ವಿನಂತಿಯನ್ನು ಮಾಡುತ್ತದೆ. 1939ರಲ್ಲಿ ಬಾಸೆಲ್ ಮಿಶನ್ ಅಧ್ಯಕ್ಷರಾಗಿದ್ದ ಎ. ಸ್ಟ್ರೆಕೈಸೇನ್ [A. Streckeisen] ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ

ಚರ್ಚ್ ಕೌನ್ಸಿಲ್‌ಗಳಲ್ಲಿ ಐಕ್ಯತೆ ಸಂಬಂಧಿಸಿದಂತೆ ಸದಸ್ಯರಿಗೆ ತಿಳಿಸುತ್ತಾರೆ. ಹೀಗೆ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಸಿನೋಡ್‌ಗಳಲ್ಲಿ ದಕ್ಷಿಣ ಕೆನರಾ ಹಾಗೂ ಉತ್ತರ ಕರ್ನಾಟಕದ ಬಾಸೆಲ್ ಮಿಶನ್ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ಬಗ್ಗೆ ನಿರಂತರವಾದ ಚರ್ಚೆಗಳಾಗುತ್ತವೆ. 1953ರಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಸಿನೋಡ್ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕೆನರಾ ಮತ್ತು ಕೊಡಗು ಜಿಲ್ಲಾ ಚರ್ಚ್ ಕೌನ್ಸಿಲ್‌ಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಬೇಕೆಂಬುದಾಗಿ ಒಮ್ಮತದ ನಿರ್ಧಾರವನ್ನು ಕೈಗೊಳ್ಳುತ್ತದೆ.[73] ಚರ್ಚ್ ಯೂನಿಯನ್ ಬಗ್ಗೆ ಸಭೆಯವರಲ್ಲಿ ತಿಳುವಳಿಕೆ ಮೂಡಿಸುವ ಉದ್ದೇಶದಿಂದ 1954ರಲ್ಲಿ ಜೆ. ರೋಸೆಲ್ [J. Rossel] ಮತ್ತು ಎನ್. ಬರ್ನಾಬಸ್ [N.Barnabas] ರವರು 'ಚರ್ಚ್ ಯೂನಿಯನ್ ವಿಷಯದಲ್ಲಿ ಪ್ರಶ್ನೋತ್ತರಗಳು' ಎಂಬ ಕರಪತ್ರವನ್ನು ಮುದ್ರಿಸಿ ಹೊರಡಿಸುತ್ತಾರೆ.[74] 1954ರಲ್ಲಿ ಉತ್ತರ ಕರ್ನಾಟಕ ಚರ್ಚ್ ಕೌನ್ಸಿಲ್, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರ ಬಗ್ಗೆ ಮಾತುಕತೆಗಳನ್ನು ಮುಂದುವರೆಸುತ್ತದೆ. ಈ ಹಂತದಲ್ಲಿಯೂ ವಿರೋಧಗಳು ವ್ಯಕ್ತವಾಗುತ್ತದೆ. ಕೆಲವರಿಗೆ ಚರ್ಚ್ ಯೂನಿಯನ್ ಎಂದರೆ ಮತ್ತೊಂದು ಪಂಗಡವನ್ನು ಸೇರಿಕೊಳ್ಳುವುದಾಗಿತ್ತು. ಹಲವರು ಐಕ್ಯತೆಯು ಸಾಧಿಸಲ್ಪಟ್ಟರೆ ಅಧಿಕಾರ ಸ್ಥಾನಮಾನ ಮತ್ತು ಮಿಶನಿನ ಆಸ್ತಿಗಳನ್ನು ಕಳಕೊಳ್ಳಬೇಕಾಗುತ್ತದೆಂಬ ಭಯವಿತ್ತು. ಬಾಸೆಲ್ ಮಿಶನ್, ಜಿಲ್ಲಾ ಚರ್ಚ್ ಕೌನ್ಸಿಲ್ ಸೇರಿದರೆ ಅದರ ಅಸ್ತಿತ್ವವೇ ನಾಶವಾಗಬಹುದೆಂಬ ಭಯ ಇನ್ನು ಕೆಲವರಲ್ಲಿತ್ತು. ಹೀಗೆ ಈ ಎಲ್ಲಾ ವಿಭಿನ್ನ ಕಾರಣಗಳಿಂದಾಗಿ ಕೆಲವು ಬಾಸೆಲ್ ಮಿಶನ್ ಕ್ರೈಸ್ತರು ಐಕ್ಯತಾ ಯೋಜನೆಯನ್ನು ಪ್ರಬಲವಾಗಿ ವಿರೋಧಿಸಿದರು.[75] ಕೆಲವು ಬಾಸೆಲ್ ಮಿಶನ್ ಕ್ರೈಸ್ತರು ಚರ್ಚ್ ಯೂನಿಯನ್ ವಿಚಾರಕ್ಕೆ ಪ್ರಬಲ ವಿರೋಧ ವ್ಯಕ್ತಪಡಿಸಿದ್ದರೆ, ಇನ್ನು ಕೆಲವು ಕ್ರೈಸ್ತರು ಇದರ ಬಗ್ಗೆ ಸಭಿಕರ ಅಭಿಪ್ರಾಯ ಪಡೆದು ಮುಂದುವರಿಯುವುದು ಅಗತ್ಯವೆಂದು ವಿವರಿಸಿದ್ದರು. ಎಸ್. ಡಬ್ಲ್ಯು. ಜೋಶ್ವರವರು ಹೇಳುವಂತೆ 'ಕಳೆದ ಕೆಲವು ವರ್ಷಗಳಿಂದ ಚರ್ಚ್ ಯೂನಿಯನ್ ಪರವಾದ ಪ್ರಚಾರ ದಕ್ಷಿಣ ಕನ್ನಡ ಜಿಲ್ಲಾ ಕ್ರೈಸ್ತರ ಮುಂದೆ ಭರದಿಂದ ನಡೆಯುತ್ತಿದೆ. ಆಡಳಿತ ವರ್ಗವು ಈ ವಿಚಾರದಲ್ಲಿ ಜಿಲ್ಲಾ ಚರ್ಚ್ ಕೌನ್ಸಿಲ್‌ನ ಅಭಿಪ್ರಾಯ ಕೊಡಬೇಕೆಂದು ಸಲಹೆ ನೀಡುತ್ತಿದೆ..............ಜಿಲ್ಲಾ ಚರ್ಚ್ ಕೌನ್ಸಿಲ್, ಜಿಲ್ಲಾ ಚರ್ಚ್ ಮೆಂಬರ್‌ಗಳ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ಸಭೆಗಳಲ್ಲಿ ಚರ್ಚ್ ಯೂನಿಯನ್ ಆಗಬೇಕೆನ್ನುವವರು ಇದ್ದಾರೆ. ಬಾರದೆನ್ನುವವರೂ ಇದ್ದಾರೆ. ಈ ಎರಡೂ ಪಂಗಡದಲ್ಲೂ ಇರದೆ ತಮ್ಮ ಅಭಿಪ್ರಾಯ ಪ್ರಕಟಿಸದವರೂ ಧಾರಾಳ ಇದ್ದಾರೆ. ಯೂನಿಯನ್‌ಗೆ ಸೇರುವುದು ಇಲ್ಲವೇ ಸೇರದಿರುವುದು ಪ್ರತಿಯೊಬ್ಬ ಸದಸ್ಯನಿಗೂ ನೇರವಾಗಿ ಅನ್ವಯಿಸುತ್ತದೆ. ಪರಿಸ್ಥಿತಿ ಹೀಗಿರುವಾಗ

ಯಾವುದೇ ಕ್ರಮವನ್ನು ಕೈಗೊಳ್ಳುವ ಮೊದಲು ಸಭಿಕರಿಂದ ನೇರ ಅಭಿಪ್ರಾಯ ಪಡೆಯುವುದು ಉಚಿತ ಹಾಗೂ ಅನಿವಾರ್ಯ. ಈ ನೇರ ದಾರಿಯನ್ನು ಬಿಟ್ಟು ಯಾರಾದರೂ ತಮ್ಮ ವರ್ಚಸ್ಸಿನಿಂದ ಅಡ್ಡದಾರಿಯಲ್ಲಿ ಹೋಗಲು ಯತ್ನಿಸುವವರಾದರೆ, ಸಭೆಯಲ್ಲಿ ಬಿಕ್ಕಟ್ಟು, ಕಲಹ ಉಂಟಾಗುವುದು ಸ್ವಾಭಾವಿಕ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿ ಚರ್ಚ್ ಯೂನಿಯನ್‌ಗೆ ಸಂಬಂಧಪಟ್ಟಂತೆ ಬಾಸೆಲ್ ಮಿಶನ್ ಕ್ರೈಸ್ತರ ಬೇಕುಬೇಡಗಳನ್ನು ಪರಿಗಣಿಸದೆ ಹೋದರೆ ಸಭೆಗಳಲ್ಲಿ ಬಿಕ್ಕಟ್ಟು ಕಲಹಗಳಾಗಬಹುದು ಎಂದು ಜೋಶ್ವರವರು ಎಚ್ಚರಿಸಿದ್ದರು.[76]

ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದ ಉತ್ತರ ಕರ್ನಾಟಕದ ಸಭೆಗಳು:

1950ರ ದಶಕದಲ್ಲಿ ಉತ್ತರ ಕರ್ನಾಟಕದ ಚರ್ಚ್ ಕೌನ್ಸಿಲ್‌ಗೆ ಹೊಸ ಹುರುಪಿನ ನಾಯಕತ್ವ ಸಿಗುವುದರೊಂದಿಗೆ ಅದು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವತ್ತ ಮುಂದುವರಿಯುತ್ತದೆ. 1951ರಲ್ಲಿ ಡಾ. ಪೆಡ್ರಿಕ್ಸ್‌ರವರು [Dr. Fredericks] ಉತ್ತರ ಕರ್ನಾಟಕದ ಜಿಲ್ಲಾ ಚರ್ಚ್ ಕೌನ್ಸಿಲ್‌ನ ಅಧ್ಯಕ್ಷರಾಗುತ್ತಾರೆ. ಇವರ ಹತ್ತು ವರ್ಷದ ಅವಧಿಯಲ್ಲಿ ಮೊದಲಿದ್ದ ಭಿನ್ನತೆಗಳು, ಕಲಹಗಳು ಕಡಿಮೆಯಾಗುತ್ತವೆ. ಅಧ್ಯಾತ್ಮಿಕ ಜೀವನ ಹಾಗೂ ಶೈಕ್ಷಣಿಕ ವಿಚಾರಗಳನ್ನು ಉತ್ತೇಜಿಸುತ್ತಾ, ಇವರು ಹೊಸ ಕ್ರೈಸ್ತ ನಾಯಕತ್ವವನ್ನು ಹುಟ್ಟು ಹಾಕುವ ಪ್ರಯತ್ನವನ್ನು ಮಾಡುತ್ತಾರೆ. ಅಷ್ಟು ಮಾತ್ರವಲ್ಲದೇ, ಉತ್ತರ ಕರ್ನಾಟಕದ ಬಾಸೆಲ್ ಮಿಶನ್ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಬೇಕೆಂಬ ಬಹಳಷ್ಟು ಒಲವು ಇವರಲ್ಲಿರುತ್ತದೆ. ಆದುದರಿಂದ ಎಸ್.ಎನ್.ಜೋಗಳ್ [S.N.Jogal] ಹಾಗೂ ಮಠಪತಿಯವರನ್ನು [Matapathy] ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ವಿಚಾರಗಳ ಕುರಿತಾದ ಮಾತುಕತೆಗಳಲ್ಲಿ ಭಾಗಿಯಾಗುವಂತೆ ಬೆಂಬಲಿಸುತ್ತಾರೆ.[77] ಡಾ. ಪೆಡ್ರಿಕ್ಸ್ ಹಾಗೂ ಇಬ್ಬರು ಹೈಸ್ಕೂಲಿನ ಪ್ರಾಂಶುಪಾಲರುಗಳು ಉತ್ತರ ಕರ್ನಾಟಕದ ಬಾಸೆಲ್ ಮಿಶನ್ ಚರ್ಚುಗಳು, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ಹಾಗೆ ಪರಿಸ್ಥಿತಿಯನ್ನು ನಿರ್ಮಿಸಿದರು ಎಂಬುದಾಗಿ ಜ್ಯಾಕ್ಸ್ ರೋಸೆಲ್ ಅಭಿಪ್ರಾಯ ಪಟ್ಟಿದ್ದಾರೆ.[78] ಹೀಗೆ 1957ರಲ್ಲಿ ತನಗೆ ಪ್ರತ್ಯೇಕ ಧರ್ಮ ಪ್ರಾಂತ್ಯದ ಬೇಡಿಕೆಯನ್ನು ಮಂಡಿಸುತ್ತಾ ಉತ್ತರ ಕರ್ನಾಟಕದ ಚರ್ಚ್ ಕೌನ್ಸಿಲ್ [NKCC] ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ನಿರ್ಧರಿಸುತ್ತದೆ. 1957 ಆಗಸ್ಟ್‌ನಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಸಿನೋಡ್, ಉತ್ತರ ಕರ್ನಾಟಕದ ಚರ್ಚ್ ಕೌನ್ಸಿಲ್‌ಗೆ ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ಅನುಮತಿಯನ್ನು ನೀಡುತ್ತದೆ. 1958ರ ಮೇ 22ರಂದು ಉತ್ತರ ಕರ್ನಾಟಕದ ಬಾಸೆಲ್ ಮಿಶನ್ ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾದಲ್ಲಿ ವಿಲೀನವಾಗಿ, ಚರ್ಚ್ ಆಫ್ ಸೌತ್ ಇಂಡಿಯಾದ ಮೈಸೂರು ಧರ್ಮ ಪ್ರಾಂತ್ಯದ ಭಾಗವಾಗುತ್ತದೆ. ಆದರೆ ಉತ್ತರ ಕರ್ನಾಟಕದ ಸಭೆಗಳು ಯುನೈಟೆಡ್ ಬಾಸೆಲ್

ಮಿಶನ್ ಚರ್ಚ್ ಇನ್ ಇಂಡಿಯಾದ ಸಿನೋಡ್‌ನೊಂದಿಗಿನ ತನ್ನ ಸಂಬಂಧಗಳನ್ನು ಮುಂದುವರಿಸುತ್ತವೆ.[79]

ದಕ್ಷಿಣ ಕೆನರಾದಲ್ಲಿ ಮುಂದುವರಿದ ಬಿಕ್ಕಟ್ಟು:

ಬಾಸೆಲ್ ಮಿಶನಿನ ಎರಡು ಪ್ರದೇಶಗಳಾದ ಮಲಬಾರ್ ಹಾಗೂ ಉತ್ತರ ಕರ್ನಾಟಕದ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದರೂ, ದಕ್ಷಿಣ ಕೆನರಾ ಮತ್ತು ಕೊಡಗು ಚರ್ಚುಗಳು ಇನ್ನೂ ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ಹಿಂದೇಟು ಹಾಕುತ್ತಿರುತ್ತವೆ. 1939ರಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಸಿನೋಡ್, ದಕ್ಷಿಣ ಕೆನರಾ ಮತ್ತು ಕೊಡಗಿನ ಚರ್ಚ್ ಕೌನ್ಸಿಲ್, ಚರ್ಚ್ ಆಫ್ ಸೌತ್ ಇಂಡಿಯಾ ಜೊತೆ ಐಕ್ಯವಾಗುವುದರ ಬಗ್ಗೆ ಚರ್ಚಿಸಬೇಕೆಂದು ತಿಳಿಸುತ್ತದೆ. ತದನಂತರದ ಕಾಲದಲ್ಲಿ ಇಲ್ಲಿನ ಸ್ಥಳೀಯ ಚರ್ಚುಗಳು ಜನರಲ್ಲಿ ತಿಳುವಳಿಕೆ ಮೂಡಿಸುವ ಪ್ರಯತ್ನವನ್ನು ಮಾಡಬೇಕೆಂದು ಸಿನೋಡಿನ ಉಪಸಮಿತಿಯು ತಿಳಿಸುತ್ತದೆ. 1948ರಲ್ಲಿ ನಡೆದ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಸಿನೋಡ್, ಕೆನರಾ ಮತ್ತು ಕೊಡಗಿನ ಬಾಸೆಲ್ ಮಿಶನ್ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಚರ್ಚುಗಳೊಂದಿಗೆ ನಿಕಟ ಸಂಪರ್ಕವನ್ನು ಬೆಳೆಸಬೇಕೆಂದು ಕರೆ ನೀಡುತ್ತದೆ.[80] ಈ ಕಾಲಾವಧಿಯಲ್ಲಿ ದಕ್ಷಿಣ ಕೆನರಾದಲ್ಲಿ ಕೆ.ಆರ್. ಕರುಣಾಕರ್‌ರವರು [K.R.Karunakar] ಚರ್ಚ್ ಅಧ್ಯಕ್ಷರು ಮಾತ್ರವಲ್ಲದೆ ಮಿಶನ್ನಿನ ಅಧ್ಯಕ್ಷರು ಆಗಿರುತ್ತಾರೆ. ಇವರಿಗೆ ಕೆಲವು ಜನರ, ಪಾಸ್ಟರ್‌ಗಳ, ಅಧ್ಯಾಪಕರುಗಳ, ಮುಖ್ಯೋಪಾಧ್ಯಾಯರ ಮತ್ತು ಇತರರ ಬೆಂಬಲವಿರುತ್ತದೆ. ಆದರೆ ಇವರ ಪ್ರಬಲ ಅಸ್ತಿತ್ವವು ನಿಧಾನವಾಗಿ ಡಬ್ಲ್ಯು. ಆರ್. ಸುನೀತಾ [W.R.Sunitha] ರವರ ಪ್ರಬಲ ವಿರೋಧಿ ನಾಯಕತ್ವವನ್ನು ಹುಟ್ಟು ಹಾಕುತ್ತದೆ. ಕೆ.ಆರ್. ಕರುಣಾಕರ್‌ರವರು ಬಾಸೆಲ್ ಮಿಶನ್, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದನ್ನು ಪ್ರಬಲವಾಗಿ ವಿರೋಧಿಸಿದ್ದರು. ಅವರ ಪ್ರಕಾರ ಬಾಸೆಲ್ ಮಿಶನ್, ಚರ್ಚ್ ಆಫ್ ಸೌತ್ ಇಂಡಿಯಾವನ್ನು ಸೇರಿದರೆ ಅದು ತನ್ನ ಆಸ್ತಿಗಳನ್ನು ಕಳಕೊಳ್ಳಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿದ್ದರು. 1947ರಲ್ಲಿ ಡಬ್ಲ್ಯು. ಆರ್. ಸುನೀತಾರವರು ಜಿಲ್ಲಾ ಚರ್ಚ್ ಬೋರ್ಡಿನ ಅಧ್ಯಕ್ಷರಾಗುತ್ತಾರೆ.[81] ಇವರು ವಸಾಹತುಶಾಹಿ ಸರಕಾರದ ಕಾಲಾವಧಿಯಲ್ಲಿ ದಕ್ಷಿಣ ಕೆನರಾದ ಪೋಲಿಸ್ ಅಧಿಕಾರಿಯಾಗಿದ್ದು, 1947ರಲ್ಲಿ ಭಾರತ ಸ್ವಾತಂತ್ರ್ಯ ಪಡೆದಾಗ ಸೇವೆಯಿಂದ ಸ್ವಯಂ ನಿವೃತ್ತಿಯನ್ನು ಪಡೆದಿದ್ದರು. ಇವರು ಚರ್ಚ್ ಕೌನ್ಸಿಲ್ ಸದಸ್ಯರಾಗುವ ಮೊದಲೇ ಕೆನರಾದ ಬಾಸೆಲ್ ಮಿಶನ್ ಕ್ರೈಸ್ತರ ಮೇಲೆ ಹಾಗೂ ಅವರ ವರ್ತನೆಗಳ ಮೇಲೆ ಪ್ರಬಲ ಪರಿಣಾಮವನ್ನು ಬೀರಿದ್ದರು ಎಂಬುದಾಗಿ ರೋಸೆಲ್ ಅಭಿಪ್ರಾಯಪಟ್ಟಿದ್ದಾರೆ. ಚರ್ಚ್ ವ್ಯವಸ್ಥೆಯನ್ನು ಪ್ರವೇಶಿಸಿದ ಅವರು ಕೆಲವೆ ತಿಂಗಳುಗಳಲ್ಲಿ ಉನ್ನತ ಸ್ಥಾನಕೇರುತ್ತಾರೆ. ಬಾಸೆಲ್ ಮಿಶನ್, ಚರ್ಚ್ ಆಫ್ ಸೌತ್

ಇಂಡಿಯಾ ಸೇರುವುದನ್ನು ತಿಯೋಲಾಜಿಕಲ್ ಹಾಗೂ ಅದು ತನ್ನ ಆಸ್ತಿಗಳನ್ನು ಕಳಕೊಳ್ಳಬೇಕಾಗುತ್ತದೆಂಬ ಕಾರಣಗಳಿಂದ ಪ್ರಬಲವಾಗಿ ವಿರೋಧಿಸಿದ್ದರು. ಅವರ ಪ್ರಕಾರ ಒಂದು ಪ್ರೆಸ್ಬ್ಟೇರಿಯನ್ [presbyterian] ಚರ್ಚ್ ಚರ್ಚ್ ಆಫ್ ಸೌತ್ ಇಂಡಿಯಾದಂತಹ ಎಪಿಸ್ಕೋಪಾಲ್ [Episcopal] ಚರ್ಚ್‌ನ್ನು ಸೇರಿಕೊಳ್ಳುವುದು ಉಚಿತವಲ್ಲವೆಂದಾಗಿತ್ತು. ಸುನೀತಾರವರು ಭಾರತದಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟವಾಗುತ್ತಿದ್ದ 'ಬೈಬ್ಲಿಕಲ್ ವಿಟ್‌ನೆಸ್' [Biblical Witness] ಎಂಬ ಪತ್ರಿಕೆಯನ್ನು ದಕ್ಷಿಣ ಕೆನರಾದಲ್ಲಿ ಉಚಿತವಾಗಿ ಹಂಚಿದ್ದರು. ಈ ಪತ್ರಿಕೆಯು ಚರ್ಚ್ ಆಫ್ ಸೌತ್ ಇಂಡಿಯಾದ ಮೇಲೆ ಪ್ರಬಲವಾದ ಟೀಕೆಗಳನ್ನು ಒಳಗೊಂಡಿತ್ತು. ಜ್ಯಾಕ್ಸ್ ರೋಸೆಲ್, ಸುನೀತಾರವರು ಚರ್ಚ್ ಆಫ್ ಸೌತ್ ಇಂಡಿಯಾ ಕಡೆ ತೋರ್ಪಡಿಸಿದ ನಡೆಯನ್ನು ಪ್ರಬಲವಾಗಿ ಅವರ ಆತ್ಮಕಥನದಲ್ಲಿ ಖಂಡಿಸಿದ್ದಾರೆ. ರೋಸೆಲ್‌ರವರು ಹೇಳುವಂತೆ ಸುನೀತಾರವರು ತಮ್ಮ ಬಾಲ್ಯದಲ್ಲಿ ಲುಥೇರಿಯನ್ ವಿಚಾರಗಳಿಂದ ಪ್ರಭಾವಿತರಾಗಿದ್ದರು ಎಂದಿದ್ದಾರೆ.[82] ಹೀಗೆ ಸುನೀತಾರವರ ಕಾಲದಲ್ಲಿ ಕೆನರಾ ಹಾಗೂ ಕೊಡಗು ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ಸಾಧ್ಯವಾಗುವುದಿಲ್ಲ. 1951ರ ಚುನಾವಣೆಯಲ್ಲಿ ಸುನೀತಾರವರು ಸೋತು ಪುನಃ ಕರುಣಾಕರ್‌ರವರು ಅಧ್ಯಕ್ಷರಾಗುತ್ತಾರೆ.

ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ಸಂಬಂಧಿಸಿದಂತೆ ದಕ್ಷಿಣ ಕೆನರಾ ಬಾಸೆಲ್ ಮಿಶನಿನ ಇತರ ಪ್ರದೇಶಗಳಿಗಿಂತ ಹೆಚ್ಚು ಪ್ರತಿರೋಧವನ್ನು ವ್ಯಕ್ತಪಡಿಸುತ್ತದೆ. 'ಇಡೀ ಜಾಗತಿಕ ಕ್ರೈಸ್ತ ಸಮುದಾಯವೇ ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದ ಸಭೆಗಳ ಏಕತೆಗಾಗಿ ಯತ್ನಿಸಿ ಮುಂದುವರಿಯುತ್ತಿರುವ ಕಾಲದಲ್ಲಿ, ಬಾಸೆಲ್ ಮಿಶನಿನ ಕೆಲವು ಸದಸ್ಯರು ಸಂಕುಚಿತ ಸಂಪ್ರದಾಯವಾದಿಗಳಾಗಿ, ಮುಂದೆಯೂ ಯಥಾಃಸ್ಥಿತಿಯಲ್ಲಿರಲು ಇಚ್ಛೆಪಡುತ್ತಿದ್ದಾರೆ' ಎಂಬುದಾಗಿ ಎಸ್.ಆರ್. ಪೂರ್ಟಾಡೋರವರು ದಕ್ಷಿಣ ಕೆನರಾದ ಬಾಸೆಲ್ ಮಿಶನ್ ಕ್ರೈಸ್ತರ ವಿರೋಧದ ಬಗ್ಗೆ ಅಭಿಪ್ರಾಯಪಟ್ಟಿದ್ದರು.[83] ವಿರೋಧದ ನಡುವೆಯೂ 1953ರಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಸಿನೋಡ್, ಕೆನರಾವು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ಸಂಬಂಧಿಸಿದಂತೆ ಮಾತುಕತೆಗಳನ್ನು ಆರಂಭಿಸಬೇಕೆಂದು ತಿಳಿಸುತ್ತದೆ. 1954ರಲ್ಲಿ ದಕ್ಷಿಣ ಕೆನರಾದ ಜಿಲ್ಲಾ ಚರ್ಚ್ ಬೋರ್ಡ್ ತನ್ನ ಸಭೆಯವರಿಗೆ ಚರ್ಚ್ ಯೂನಿಯನ್ ಬಗ್ಗೆ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಕರಪತ್ರಗಳನ್ನು ರಚಿಸುತ್ತದೆ. ಈ ಕರಪತ್ರಗಳನ್ನು ಜೆ. ರೋಸೆಲ್‌ರವರು ಹಾಗೂ ಎನ್. ಬರ್ನಾಬಸ್‌ರವರು 'ಚರ್ಚ್ ಯೂನಿಯನ್‌ನ ವಿಷಯದಲ್ಲಿ ಪ್ರಶ್ನೋತ್ತರಗಳು' ಎಂಬ ಶೀರ್ಷಿಕೆಯಡಿ ತಯಾರಿಸುತ್ತಾರೆ. 1955ರಲ್ಲಿ 'ದಕ್ಷಿಣ ಕೆನರಾ ಜಿಲ್ಲಾ ಚರ್ಚ್ ಕೌನ್ಸಿಲ್' ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ನಿರ್ಧರಿಸಿ ತನಗೆ ಪ್ರತ್ಯೇಕ ಧರ್ಮಪ್ರಾಂತ್ಯದ ಬೇಡಿಕೆಯನ್ನು

ಮಂಡಿಸುತ್ತದೆ. ಈ ನಿರ್ಧಾರವನ್ನು ಬಹುಮತದಿಂದ [43 ಪರ, 29 ವಿರೋಧ ಹಾಗೂ 1 ಗೈರು ಹಾಜರು] ಹೊರಡಿಸಲಾಗುತ್ತದೆ. ಆದರೆ ಈ ನಿರ್ಧಾರಕ್ಕೆ ಪ್ರಬಲವಾದ ವಿರೋಧಗಳು ವ್ಯಕ್ತವಾದುದರಿಂದ 1955ರ ಕೂಟದ ನಿರ್ಧಾರಗಳ [resolutions] ಬಗ್ಗೆ ಅಂತಿಮ ಮತದಾನವನ್ನು 1956 ಜಿಲ್ಲಾ ಚರ್ಚ್ ಕೌನ್ಸಿಲ್‌ನಲ್ಲಿಯೂ ಮುಂದೂಡಲಾಗುತ್ತದೆ. 1957ರಲ್ಲಿ 'ಜಿಲ್ಲಾ ಚರ್ಚ್ ಕೌನ್ಸಿಲ್' ಮತ್ತೊಮ್ಮೆ ಸಭೆ ಸೇರಿದಾಗ ಐಕ್ಯ ಯೋಜನೆಗೆ ಪ್ರಬಲ ವಿರೋಧ ವ್ಯಕ್ತವಾಗುತ್ತದೆ. ಆದುದರಿಂದ ಆ ಸಭೆಯಲ್ಲಿ ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರ ಬಗ್ಗೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. 1958ರಲ್ಲಿ ಜಿಲ್ಲಾ ಚರ್ಚ್ ಬೋರ್ಡಿನ ಸಭೆ ಸೇರಿದಾಗ, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ವಿಚಾರವು ಚರ್ಚೆಯಾಗಿ, 50 ಮಂದಿ ಸದಸ್ಯರು ಐಕ್ಯತೆಯ ಪರವಾಗಿ ಹಾಗೂ 37 ಮಂದಿ ಸದಸ್ಯರು ವಿರೋಧವಾಗಿ ಮತ ಚಲಾಯಿಸುತ್ತಾರೆ. ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ನಿಯಮಾವಳಿಗಳ ಪ್ರಕಾರ ಯಾವುದೇ ನಿರ್ಧಾರಗಳನ್ನು ಅನುಮೋದಿಸಲು 75% ದಷ್ಟು ಸದಸ್ಯರು ಪರವಾಗಿ ಮತ ಚಲಾಯಿಸಬೇಕಾಗುತ್ತದೆ. ಆದುದರಿಂದ 1958ರ ಸಭೆಯಲ್ಲಿ ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದಿಲ್ಲ.[84]

ಕರುಣಾಕರ್‌ರವರು ಚರ್ಚ್ ಯೂನಿಯನ್ ಬಗ್ಗೆ ತಮಗಿದ್ದ ಮೊದಲಿನ ವಿರೋಧವನ್ನು ನಿಧಾನವಾಗಿ ಸಡಿಲಿಸಿದಂತೆ ಕಂಡುಬರುತ್ತದೆ. 1958ರಲ್ಲಿ ಉತ್ತರ ಕರ್ನಾಟಕದ ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದ ನಂತರ ಕೆನರಾದಲ್ಲೂ ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ಪರವಾದ ಅಭಿಪ್ರಾಯಗಳು ಬೆಳೆಯುತ್ತವೆ. ಪ್ರತಿ ಸಭೆಯನ್ನು [congregation] ಸಂದರ್ಶಿಸಿ, ಸಭೆಯವರೊಂದಿಗೆ ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ಬಗ್ಗೆ ಮುಕ್ತವಾಗಿ ಚರ್ಚಿಸಲಾಗುತ್ತದೆ. ಜಿಲ್ಲಾ ಚರ್ಚ್ ಕೌನ್ಸಿಲ್‌ನ ಜೊತೆಗೆ ರೋಸೆಲ್‌ರವರು ದಕ್ಷಿಣ ಕೆನರಾ, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ಬಹಳಷ್ಟು ಶ್ರಮಿಸುತ್ತಾರೆ.[85] 1961ರ ಜಿಲ್ಲಾ ಚರ್ಚ್ ಕೌನ್ಸಿಲ್ ಸಭೆಯಲ್ಲಿ ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ವಿಚಾರ ಚರ್ಚೆಯಾಗಿ ಮತದಾನವಾಗುತ್ತದೆ. ಇದರಲ್ಲಿ 84 ಮತಗಳು ಪರವಾಗಿ ಹಾಗೂ 13 ಮತಗಳು ವಿರೋಧವಾಗಿ ಚಲಾವಣೆಯಾಗುವುದರೊಂದಿಗೆ ಚರ್ಚ್ ಆಫ್ ಸೌತ್ ಇಂಡಿಯಾ ಸೇರುವ ನಿರ್ಧಾರವನ್ನು ಬಹುಮತಗಳಿಂದ [87%] ಕೈಗೊಳ್ಳಲಾಗುತ್ತದೆ. ಆದರೆ ಈ ನಿರ್ಧಾರವನ್ನು ಕಾರ್ಯಗತಗೊಳಿಸುವುದು ಬಹಳಷ್ಟು ಕಷ್ಟಕರವಾಗುತ್ತದೆ.[86] ಏಕೆಂದರೆ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಸಿನೋಡ್, ಜಿಲ್ಲಾ ಚರ್ಚ್ ಕೌನ್ಸಿಲ್‌ನ ನಿರ್ಧಾರಕ್ಕೆ ಒಪ್ಪಿಗೆಯನ್ನು ಕೊಡುವ ಮೊದಲೇ, ತಕ್ಷಣದಲ್ಲಿ ಈ ನಿರ್ಧಾರಕ್ಕೆ ವಿರೋಧವಾಗಿ ಸುನೀತಾ,

ಸಲ್ವದೋರ್ ಮಥಾಯಸ್ [Salvadore Mathias] ಸೇರಿದಂತೆ ನಾಲ್ವರು 'ಐಕ್ಯತಾ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರ ಜಿಲ್ಲಾ ಚರ್ಚ್ ಕೌನ್ಸಿಲ್‌ಗೆ ಇರುವುದಿಲ್ಲವೆಂದು' ಮಂಗಳೂರು ಮುನ್ಸೀಫ್ ಕೋರ್ಟಿನಲ್ಲಿ ದಾವೆ ಹೂಡುತ್ತಾರೆ. ಆದುದರಿಂದ ತದನಂತರ 1968ರವರೆಗೆ ಕೋರ್ಟಿನ ತೀರ್ಪು ಬರುವವರೆಗೆ ದಕ್ಷಿಣ ಕೆನರಾ ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ಸಾಧ್ಯವಾಗುವುದಿಲ್ಲ. ಈ ಕಾಲಾವಧಿಯಲ್ಲಿ ಚರ್ಚ್ ಜನರಲ್ಲಿ ಐಕ್ಯತೆಯ ಅಗತ್ಯತೆಯ ಬಗ್ಗೆ ಮನವರಿಕೆ ಮಾಡುವ ಕೆಲಸವನ್ನು ನಿರ್ವಹಿಸುತ್ತದೆ. 1968ರ ಏಪ್ರಿಲ್‌ನಲ್ಲಿ ಮಂಗಳೂರಿನ ಮುನ್ಸೀಫ್‌ರು ತೀರ್ಪು ನೀಡುತ್ತಾ ಈ ಮೇಲಿನ ದಾವೆಯನ್ನು ತಿರಸ್ಕರಿಸುತ್ತಾರೆ. ಹೀಗೆ ಕೋರ್ಟಿನ ತಡೆ ಇಲ್ಲದ ಕಾರಣ 24ನೇ ಜೂನ್ 1968ರಲ್ಲಿ ದಕ್ಷಿಣ ಕೆನರಾ ಮತ್ತು ಕೊಡಗು ಜಿಲ್ಲಾ ಸಭೆಯು, ಯುನೈಟೆಡ್ ಬಾಸೆಲ್ ಮಿಶನ್ ಚರ್ಚಿನ ಅಪ್ಪಣೆಯೊಂದಿಗೆ ಚರ್ಚ್ ಆಫ್ ಸೌತ್ ಇಂಡಿಯಾವನ್ನು ಸೇರಿ ಮೈಸೂರು ಡಯಾಸಿಸ್‌ನ ಅಂಗವಾಗುತ್ತದೆ. ಬಾಸೆಲ್ ಮಿಶನನ್ನು ಸ್ವಾಯತ್ತ ಮಿಶನ್ ಆಗಿ ಮಾಡುವ ದೆಸೆಯಿಂದಾಗಿ 1952ರಲ್ಲೇ ಮಿಶನ್ ಶಾಲೆಗಳನ್ನು, ಮಿಶನ್‌ಗಳೆಲ್ಲವನ್ನೂ ಬಾಸೆಲ್ ಮಿಶನ್ ಭಾರತೀಯರಿಗೆ ವಹಿಸಿತ್ತು ಹಾಗೂ ಅದರ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದಕ್ಕೆ ನಿರಂತರವಾದ ಬೆಂಬಲವನ್ನು ನೀಡಿತ್ತು. ಹೀಗೆ 1968ರಲ್ಲಿ ಬಾಸೆಲ್ ಮಿಶನಿನ ಕೆನರಾ ಮತ್ತು ಕೊಡಗು ಪ್ರದೇಶಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದರೊಂದಿಗೆ 1968, 24 ಜೂನ್‌ನಂದೇ 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಸಿನೋಡ್' ಬರ್ಖಾಸ್ತು ಹೊಂದುತ್ತದೆ. 1970 ಮೇ 1 ರಂದು ಬೃಹತ್ ವಿಸ್ತಾರವನ್ನು ಹೊಂದಿದ್ದ ಚರ್ಚ್ ಆಫ್ ಸೌತ್ ಇಂಡಿಯಾದ ಮೈಸೂರು ಡಯಾಸೀಸ್‌ನ್ನು [Diocese] ಮೈಸೂರು ಕೇಂದ್ರ, ಮೈಸೂರು ಉತ್ತರ ಮತ್ತು ಮೈಸೂರು ದಕ್ಷಿಣ ಡಯಾಸೀಸ್‌ಗಳಾಗಿ ವಿಭಜಿಸಲಾಗುತ್ತದೆ. ಇದರೊಂದಿಗೆ ಮಂಗಳೂರು ಕೇಂದ್ರವಾಗಿರುವ ದಕ್ಷಿಣ ಮೈಸೂರು ಡಯಾಸೀಸ್ ಹಾಗೂ ಹುಬ್ಬಳ್ಳಿ ಕೇಂದ್ರವಾಗಿರುವ ಉತ್ತರ ಮೈಸೂರು ಡಯಾಸೀಸ್‌ಗಳ ಉದಯವಾಗುತ್ತದೆ. 1972ರಲ್ಲಿ ಬಾಸೆಲ್ ಮಿಶನಿನ ಹೋಮ್ ಬೋರ್ಡ್ ತನ್ನ ಎಲ್ಲಾ ಆಸ್ತಿಗಳನ್ನು 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಎಸೋಸಿಯೇಶನ್' [UBMCI - TA] ನಿಂದ ರದ್ದುಗೊಳಿಸಲಾಗದ ಡೀಡ್‌ಗಳ ಮೂಲಕ 'ದಿ ಚರ್ಚ್ ಆಫ್ ಸೌತ್ ಇಂಡಿಯಾ ಟ್ರಸ್ಟ್ ಎಸೋಸಿಯೇಶನ್'ಗೆ [CSI-TA] ವರ್ಗಾಯಿಸುತ್ತದೆ. ಹೀಗೆ 1834ರಲ್ಲಿ ಭಾರತದಲ್ಲಿ ತನ್ನ ಕಾರ್ಯಾಚರಣೆ ಆರಂಭಿಸಿದ ಬಾಸೆಲ್ ಮಿಶನ್ 1972ರಲ್ಲಿ ತನ್ನ ಅಸ್ತಿತ್ವವನ್ನು ಕೊನೆಗಾಣಿಸುತ್ತದೆ. 1972ರಿಂದ ಬಾಸೆಲ್ ಮಿಶನ್ 'ದಿ ಪ್ರೊಟೆಸ್ಟೆಂಟ್ ಎಸೋಸಿಯೇಶನ್ ಆಫ್ ಚರ್ಚಸ್ ಎಂಡ್ ಮಿಶನ್ಸ್ ಇನ್ ಸೌತ್ ವೆಸ್ಟ್ ಜರ್ಮನಿ' (ಇ.ಎಮ್.ಎಸ್.) ಎಂಬ ಬೇರೆ

ಬೇರೆ ಕ್ರೈಸ್ತ ಪಂಗಡಗಳಿಗೆ ಸೇರಿದ ಕ್ರೈಸ್ತ ಸಭೆಗಳ ಮತ್ತು ಕ್ರೈಸ್ತ ಮಿಶನರಿ ಸೊಸೈಟಿಗಳ ಒಕ್ಕೂಟ ಸೇರಿಕೊಳ್ಳುತ್ತದೆ.[87] ತದನಂತರವೂ ಬಾಸೆಲ್ ಮಿಶನ್ ಇ.ಎಮ್.ಎಸ್. ಮೂಲಕ ಅದರ ಮೊದಲಿನ ಚರ್ಚುಗಳೊಂದಿಗೆ ಸಂಬಂಧವನ್ನು ಮುಂದುವರೆಸುತ್ತದೆ.

ಬಾಸೆಲ್ ಮಿಶನ್‌ನಲ್ಲಿನ ಕಾನೂನು ಕಲಹಗಳು (ಮೊಕದ್ದಮೆಗಳು):

20ನೇ ಶತಮಾನದಲ್ಲಿ ಬಾಸೆಲ್ ಮಿಶನ್ ಚರ್ಚುಗಳು ನಿರಂತರವಾದ ಆಂತರಿಕ ಕಲಹ ಹಾಗೂ ಮೊಕದ್ದಮೆಗಳನ್ನು ಗಮನಿಸಬೇಕಾಗುತ್ತದೆ. ಬಾಸೆಲ್ ಮಿಶನ್ ಕರ್ನಾಟಕದಲ್ಲಿ ತನ್ನ ದೀರ್ಘವಾದ ಮಿಶನ್ ಕಾರ್ಯದಿಂದಾಗಿ ಅಪಾರವಾದ ಆಸ್ತಿಗಳನ್ನು ಹುಟ್ಟುಹಾಕುತ್ತದೆ. ಪ್ರಥಮ ಜಾಗತಿಕ ಯುದ್ಧದವರೆಗೆ ಸಮರ್ಥವಾಗಿ ಇವುಗಳನ್ನು ಬಾಸೆಲ್ ಮಿಶನರಿಗಳು ನಿರ್ವಹಿಸುತ್ತಾರೆ. ಆದರೆ ಯುದ್ಧದ ಕಾಲಾವಧಿಯಲ್ಲಿ ಈ ಆಸ್ತಿಗಳ ಭದ್ರತೆಯ ಬಗ್ಗೆ ಸ್ಥಳೀಯ ಕ್ರೈಸ್ತರಲ್ಲಿ ಚಿಂತೆಯ ವಾತಾವರಣ ಸೃಷ್ಟಿಯಾಗುತ್ತದೆ. ಈ ಸಂದರ್ಭದಲ್ಲಿ ಈ ಎಲ್ಲಾ ಆಸ್ತಿಗಳ ನಿರ್ವಹಣೆಯನ್ನು ಬ್ರಿಟಿಷ್ ಸರಕಾರ ಟ್ರಸ್ಟಿಗಳಿಗೆ ವಹಿಸುತ್ತದೆ ಹಾಗೂ ಅವುಗಳನ್ನು ಬಾಸೆಲ್ ಮಿಶನ್ ಚರ್ಚ್‌ಗಳ ಉಪಯೋಗಕ್ಕಾಗಿ ಬಳಸುವಂತೆ ಸೂಚಿಸುತ್ತದೆ. ಈ ರೀತಿ ಬಾಸೆಲ್ ಮಿಶನ್ ಇಲ್ಲಿ ಹುಟ್ಟು ಹಾಕಿದ್ದ ಆಸ್ತಿಗಳು ನಂತರ ಚರ್ಚುಗಳಿಗೆ ವರದಾನವಾಗುವ ಬದಲು ಹಲವು ಕಲಹಗಳಿಗೆ ಹಾಗೂ ಬಾಸೆಲ್ ಮಿಶನ್ ಕ್ರೈಸ್ತರ ಮಧ್ಯೆ ಹೋರಾಟಕ್ಕೆ ನಾಂದಿಯಾಗುತ್ತದೆ. ಬಾಸೆಲ್ ಮಿಶನ್ ಕ್ರೈಸ್ತರ ನಡುವಿನ ಬಹುಪಾಲು ಕಾನೂನು ಹೋರಾಟಗಳು ಕಲಹಗಳು ಬಾಸೆಲ್ ಮಿಶನಿನ ಆಸ್ತಿ ನಿರ್ವಹಣೆ ವಿಚಾರಕ್ಕೆ ಸಂಬಂಧಿಸಿದವುಗಳಾಗಿವೆ. ಅದೇ ರೀತಿ ಚರ್ಚ್ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರ ಪಡೆಯುವ ಉದ್ದೇಶದಿಂದಲೂ ಕೆಲವೊಂದು ಕಲಹಗಳು ಮತ್ತು ಮೊಕದ್ದಮೆಗಳು ನಡೆದಿರುವುದನ್ನು ಗಮನಿಸಬಹುದು. ಬಾಸೆಲ್ ಮಿಶನ್ ಚರ್ಚುಗಳಲ್ಲಿನ ನಿರಂತರವಾದ ಮೊಕದ್ದಮೆ ಹಾಗೂ ಕಲಹಗಳ ಬಗ್ಗೆ ಉಲ್ಲೇಖಿಸುತ್ತಾ, ಎನ್.ಸಿ. ಸಾರ್ಜೆಂಟ್‌ರವರು ಈ 'ನಿರಂತರವಾದ ಕಲಹಗಳ ಬಗ್ಗೆ ವಿಶೇಷವಾಗಿ ಹೇಳಬೇಕಾಗಿದೆ. ಇದು ಕರ್ನಾಟಕದಲ್ಲಿನ ಲಂಡನ್ ಮಿಶನರಿ ಸೊಸೈಟಿ ಹಾಗೂ ಮೆಥೊಡಿಸ್ಟ್ ಮಿಶನರಿ ಸೊಸೈಟಿಗಳಲ್ಲಿ ತಿಳಿದಿಲ್ಲದ ವಿಚಾರವಾಗಿದೆ. ಬಾಸೆಲ್ ಮಿಶನ್ ಕ್ರೈಸ್ತರು ತಮ್ಮ ಮೊದಲಿನ ಜರ್ಮನ್ ಮಿಶನರಿಗಳು, ಅವರ ಸಭೆಗಳ ತಪ್ಪು ಮಾಡಿದ ಸದಸ್ಯರನ್ನು ಸಭೆಗಳಿಂದ ಬಹಿಷ್ಕರಿಸುತ್ತಿದ್ದಾಗ, ಅವರು ಕೋರ್ಟಿಗೆ ಹೋಗುವ ಅಥವಾ ಇತರ ಕಡೆ ಹೋಗುವ ವಿಚಾರಕ್ಕೆ ಕಾರಣವಾಯಿತು' ಎಂದಿದ್ದಾರೆ.[88] ಮಿಶನಿನೊಳಗಡೆ ಇದ್ದ ಗುಂಪು ಕಲಹಗಳ ಬಗ್ಗೆ ತಿಳಿಸುತ್ತಾ ಸಾರ್ಜೆಂಟ್‌ರವರು 'ಒಂದು ಗುಂಪು ಯಾವುದೋ ಕೆಲಸಕ್ಕೆ ಮುಂದಾದಾಗ ಮತ್ತೊಂದು ಗುಂಪು ಅದನ್ನು ವಿರೋಧಿಸಿ, ತನ್ನ ಹಕ್ಕು, ಸವಲತ್ತು, ಅಧಿಕಾರ ಮತ್ತು ಸ್ಥಾನಮಾನಗಳನ್ನು ರಕ್ಷಿಸಲು ಈ ಕಾನೂನಿನ ಹೋರಾಟವನ್ನು ಆರಂಭಿಸಿದರು' ಎಂದಿದ್ದಾರೆ. ಇದು ಮಿಶನನ್ನು ಚರ್ಚ್ ಜೊತೆ

ವಿಲೀನಗೊಳಿಸಲು ಮಿಶನ್ ಹಿಂಜರಿಯುವಂತೆ ಮಾಡಿತು ಎಂದಿದ್ದಾರೆ.[89] ಬಾಸೆಲ್ ಮಿಶನ್ ಚರ್ಚುಗಳಿಗೆ ಸ್ವಾತಂತ್ರ್ಯ ಲಭಿಸಿದ್ದು, ಅದರೊಳಗೆ ಗುಂಪು ಹೋರಾಟಕ್ಕೆ ನಾಂದಿಯಾಯಿತು ಹಾಗೂ ಈ ಹೋರಾಟಗಳು ಅಧಿಕಾರಕ್ಕಾಗಿ ನಡೆದವೆಂದು ಸಿ.ಎಲ್. ಪುರ್ತಾಡೋರವರು ಅಭಿಪ್ರಾಯಪಟ್ಟಿದ್ದಾರೆ. ಬಾಸೆಲ್ ಮಿಶನಿನ ಪ್ರತಿ ಜಿಲ್ಲೆಗಳಲ್ಲಿ ಎರಡೆರಡು ಗುಂಪುಗಳಿದ್ದು ಒಂದು ಗುಂಪು 'ಚರ್ಚ್ ಪಾರ್ಟಿ' [Church party] ಎಂದು ಕರೆಸಿಕೊಂಡರೆ, ಇನ್ನೊಂದು 'ಮಿಶನ್ ಪಾರ್ಟಿ' [mission party] ಎಂದು ಕರೆಸಿಕೊಂಡಿತ್ತು. ಚರ್ಚ್ ಪಾರ್ಟಿಯು ಶಿಕ್ಷಿತ ಮಧ್ಯಮ ವರ್ಗದವನ್ನು ಒಳಗೊಂಡಿದ್ದರೆ, 'ಮಿಶನ್ ಪಾರ್ಟಿ'ಯು ಮಿಶನನ್ನು ಅವಲಂಭಿಸಿ, ಮಿಶನಿನಲ್ಲಿ ಉದ್ಯೋಗದಲ್ಲಿದ್ದ ಸದಸ್ಯರನ್ನು ಹೊಂದಿತ್ತು.[90] ಈ ಎರಡು ಗುಂಪುಗಳು ಅಧಿಕಾರದ ಹೋರಾಟದಲ್ಲಿ ಮಾತ್ರ ತೊಡಗದೇ, ನಿರಂತರವಾಗಿ ಮೊಕದ್ದಮೆಗಳನ್ನು ಪರಸ್ಪರ ವಿರುದ್ಧ ಹೇರಿ ಮುಂದುವರಿಯುತ್ತಾರೆ.

ಭಾರತೀಯ ಕ್ರೈಸ್ತರು ಆಸ್ತಿಗಳ ಮಾರಾಟವನ್ನು ಪ್ರಬಲವಾಗಿ ವಿರೋಧಿಸಿದ್ದರು. ಇವು ಭಾರತದಲ್ಲಿನ ಯುವ ಚರ್ಚುಗಳ ಬೆಳವಣಿಗೆಗೆ ಅತಿ ಅಗತ್ಯವೆಂದು ತಿಳಿಸಿದ್ದರು. ಆದರೆ ಜಾಗತಿಕ ಯುದ್ದದ ನಂತರ ಬಾಸೆಲ್ ಮಿಶನ್ ಹಲವು ಸಂಕಷ್ಟಗಳನ್ನು ಎದುರಿಸುತ್ತದೆ. ಇಂತಹ ಕಾಲಾವಧಿಯಲ್ಲಿ ಅದು ಅನುಪಯುಕ್ತವಾದ ಹಾಗೂ ಲಾಭದಾಯಕವಲ್ಲದ ಅದರ ಕೆಲವು ಆಸ್ತಿಗಳನ್ನು ಮಾರಾಟ ಮಾಡಿ, ಅದರಿಂದ ಬಂದ ಮೊತ್ತವನ್ನು ಮಿಶನ್ ಕಾರ್ಯಕ್ಕೆ ಬಳಸಿಕೊಳ್ಳಲು ಆರಂಭಿಸಿತು. ಆದರೆ ಇದು ಸ್ಥಳೀಯ ಕ್ರೈಸ್ತರಿಂದ ವಿರೋಧಿಸಲ್ಪಡುವುದನ್ನು ಗಮನಿಸಬಹುದು. ಜಾಗತಿಕ ಯುದ್ಧದವರೆಗೆ ಬಾಸೆಲ್ ಮಿಶನಿನ ಆಸ್ತಿಗಳನ್ನು ಅದೇ ನಿರ್ವಹಿಸುತ್ತಿತ್ತು. ಆದರೆ ಜಾಗತಿಕ ಯುದ್ಧದ ಸಂದರ್ಭದಲ್ಲಿ ಬಾಸೆಲ್ ಮಿಶನನ್ನು ವೈರಿ ದೇಶದ ಮಿಶನ್ ಎಂದು ಕರೆದ ಬ್ರಿಟಿಷ್ ಸರಕಾರ ಅದರ ಎಲ್ಲಾ ಆಸ್ತಿಗಳನ್ನು ಮುಟ್ಟುಗೋಲು ಹಾಕುತ್ತದೆ. ತದನಂತರ ಆ ಆಸ್ತಿಗಳ ಸಂಪೂರ್ಣ ನಿರ್ವಹಣೆಯನ್ನು ಮೊದಲು 'ದಿ ಕಸ್ಟೋಡಿಯನ್ ಆಫ್ ಎನಿಮಿ ಪ್ರಾಪಾರ್ಟಿ'ಗೆ [The custodian of enemy property] ನಂತರ 'ದಿ ಸದರ್ನ್ ಇಂಡಿಯಾ ಮಿಶನ್ ಟ್ರಸ್ಟ್'ಗೆ ವಹಿಸುತ್ತದೆ. ಯುದ್ಧದ ನಂತರ ಈ ಆಸ್ತಿಗಳನ್ನು ಸರಕಾರ ಮರಳಿ ಬಾಸೆಲ್ ಮಿಶನಿಗೆ ವಹಿಸುತ್ತದೆ. ಬಾಸೆಲ್ ಮಿಶನ್ 1934ರಲ್ಲಿ ಭಾರತದಲ್ಲಿನ ತನ್ನ ಎಲ್ಲಾ 3 ಜಿಲ್ಲೆಗಳಲ್ಲಿನ ಚರ್ಚುಗಳನ್ನು ಒಟ್ಟುಗೂಡಿಸಿ, ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವನ್ನು ರಚಿಸುತ್ತದೆ. ಇದೇ ಕಾಲದಲ್ಲಿ ಬಾಸೆಲ್ ಮಿಶನ್ ತನ್ನ ಸ್ಥಿರಾಸ್ಥಿಗಳನ್ನೆಲ್ಲಾ 'ದಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ – ಟ್ರಸ್ಟ್ ಎಸೋಸಿಯೇಶನ್' [UBMCI- TA] ಎಂಬ ಕಂಪನಿ ಕಾಯಿದೆಗಳ

ಪ್ರಕಾರ ನೊಂದಾಯಿಸಲ್ಪಟ್ಟ ಟ್ರಸ್ಟ್‌ಗೆ ಆಸ್ತಿಗಳ ನಿರ್ವಹಣೆಯನ್ನು ವಹಿಸುತ್ತದೆ. 1972ರಲ್ಲಿ ಬಾಸೆಲ್ ಮಿಶನ್ ಹೋಮ್ ಬೋರ್ಡ್ 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಎಸೋಸಿಯೇಶನ್'ಗೆ ವಹಿಸಿದ ಆಸ್ತಿಗಳನ್ನೆಲ್ಲಾ ಹಿಂದಕ್ಕೆ ಪಡೆದು, ಆ ಆಸ್ತಿಗಳನ್ನು ರದ್ದುಪಡಿಸಲಾಗದ ಡೀಡ್‌ಗಳ ಮೂಲಕ 'ದಿ ಚರ್ಚ್ ಆಫ್ ಸೌತ್ ಇಂಡಿಯಾ ಟ್ರಸ್ಟ್ ಎಸೋಸಿಯೇಶನ್'ಗೆ ವಹಿಸುತ್ತದೆ. ಇದು ಕೂಡಾ ಕಂಪನಿ ಕಾಯಿದೆಯ ಅನ್ವಯ ನೊಂದಾಯಿಸಲ್ಪಟ್ಟಿದ್ದಾಗಿತ್ತು.[91]

20ನೇ ಶತಮಾನದ ಆರಂಭದಲ್ಲಿ ಪ್ರಾರಂಭವಾದ ಗುಂಪು ಕಲಹಗಳು, ಬಾಸೆಲ್ ಮಿಶನ್ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಬೇಕೆಂಬ ಸಿದ್ಧತೆ ಮಾಡುತ್ತಿರುವಾಗ ಇನ್ನಷ್ಟು ತೀವ್ರವಾಗುತ್ತವೆ. ಬಾಸೆಲ್ ಮಿಶನ್ ಚರ್ಚುಗಳು 'ಚರ್ಚ್ ಆಫ್ ಸೌತ್ ಇಂಡಿಯಾ' ಸೇರುವುದನ್ನು ಸ್ಥಳೀಯ ಕ್ರೈಸ್ತರು ತೀವ್ರವಾಗಿ ವಿರೋಧಿಸುತ್ತಾರೆ. ಏಕೆಂದರೆ ಬಾಸೆಲ್ ಮಿಶನ್ ಚರ್ಚುಗಳಿಗೆ ಅದಕ್ಕಿರುವ ಆಸ್ತಿಗಳ ಮೇಲಿನ ನಿಯಂತ್ರಣ ತಪ್ಪಿ ಹೋಗುತ್ತದೆಂಬ ಭಯ ಅವರಲ್ಲಿರುತ್ತದೆ. ಈ ಆಧಾರದ ಮೇಲೆ ಮುಖ್ಯವಾಗಿ ವಿರೋಧ ಕಂಡುಬರುತ್ತದೆ. ಆದರೆ ಬಾಸೆಲ್ ಮಿಶನ್ ಕ್ರೈಸ್ತರ ನಡುವಿನ ಮೊಕದ್ದಮೆಗಳ ಕಲಹ 20ನೇ ಶತಮಾನದ ಆರಂಭದಲ್ಲೇ ಪ್ರಾರಂಭವಾಗುತ್ತದೆ. 1924ರಲ್ಲಿ ಬಲ್ಮಠ ಚರ್ಚ್ ಕೂಟದ ಚುನಾವಣೆಯ ಸಂದರ್ಭದಲ್ಲಿ, ಸಭಾವಂತಿಗೆ ಕೊಟ್ಟವರಿಗೆ ಮಾತ್ರ ಮತದಾನದ ಹಕ್ಕನ್ನು ಕೊಟ್ಟು, ಮತದಾರರ ಪಟ್ಟಿಯನ್ನು ತಯಾರಿಸಲಾಗುತ್ತದೆ. ಆದರೆ 'ಚರ್ಚ್ ಯೂನಿಯನ್' ಪಕ್ಷದ ಐಮನರು ಇದನ್ನು ವಿರೋಧಿಸಿ ಕೋರ್ಟಿನಿಂದ ಚುನಾವಣೆಗೆ ತಡೆಯಾಜ್ಞೆಯನ್ನು ತರುತ್ತಾರೆ. ಈ ಮೊಕದ್ದಮೆಯು ಸುಮಾರು ಒಂದೂವರೆ ವರ್ಷ ಕಾಲ ನಡೆದು, ಐಮನರ ವಿರುದ್ಧ ತೀರ್ಪು ಪ್ರಕಟವಾಗುತ್ತದೆ. ಕೆಳಗಿನ ಕೋರ್ಟಿನಲ್ಲಿ ಸೋತ ಐಮನರು ಮೇಲಿನ ಕೋರ್ಟಿಗೆ ಅಪೀಲು ಮಾಡಿ, ಅಲ್ಲಿಯೂ ಒಂದು ವರ್ಷದಷ್ಟು ಕಾಲ ವ್ಯಾಜ್ಯ ನಡೆಸಿ ಅಲ್ಲಿಯೂ ಐಮನರು ಸೋಲುತ್ತಾರೆ.[92] ಈ ಬೆಳವಣಿಗೆಯ ನಂತರ ಐಮನರು 'ಸತ್ಯವ್ರತ'ದ ಮೂಲಕ ನಿರಂತರವಾಗಿ ಮಿಶನ್ ಪತ್ರಿಕೆಯಾದ 'ಹಿತವಾದಿ'ಯ ಮೇಲೆ ಆರೋಪ ಹಾಗೂ ಟೀಕೆಗಳನ್ನು ಮಾಡುತ್ತಾರೆ. ಈ ಕಾರಣದಿಂದಾಗಿ 1930ರಲ್ಲಿ 'ಸತ್ಯವ್ರತ'ದ ಸಂಪಾದಕರಾದ ಡಾ. ವಿನ್ಸೆಂಟ್ ಪೆಡ್ರಿಕ್‌ರವರು ಕೋರ್ಟಿನಲ್ಲಿ ಐಮನರ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ದಾಖಲಿಸುತ್ತಾರೆ. ಕೋರ್ಟಿನಲ್ಲಿ ವ್ಯಾಜ್ಯವು ಮುಗಿದು ಐಮನರಿಗೆ 200 ರೂಪಾಯಿ ಜುಲುಮಾನೆಯಾಗುತ್ತದೆ. ಆದರೆ ಐಮನರು ಜಿಲ್ಲಾ ಕೋರ್ಟಿಗೆ ಅಪೀಲು ಮಾಡಿ, ಅಲ್ಲೂ ಸೋಲನ್ನು ಅನುಭವಿಸುತ್ತಾರೆ.[93] ಹೀಗೆ ಆರಂಭವಾದ ಮೊಕದ್ದಮೆ ಕಲಹಗಳು ಇನ್ನೂ ಮುಂದುವರೆಯುತ್ತಿವೆ. ಹೀಗೆ ಬಾಸೆಲ್ ಮಿಶನ್ ಚರ್ಚುಗಳಿಗೆ ಸಂಬಂಧಿಸಿದ ಹಲವು ಮೊಕದ್ದಮೆಗಳಿದ್ದು ಇಲ್ಲಿ ಪ್ರಮುಖವಾದದನ್ನು ಚರ್ಚಿಸಲಾಗಿದೆ.

1961ರಲ್ಲಿ ದಕ್ಷಿಣ ಕೆನರಾ ಹಾಗೂ ಕೊಡಗು ಜಿಲ್ಲಾ ಚರ್ಚ್ ಕೌನ್ಸಿಲ್‌ನ ನಿರ್ಣಯದಂತೆ, ದಕ್ಷಿಣ ಕೆನರಾ ಹಾಗೂ ಕೊಡಗು ಬಾಸೆಲ್ ಮಿಶನ್ ಸಭೆಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರ್ಪಡೆಗೊಳ್ಳುವ ನಿರ್ಧಾರವನ್ನು ಕೈಗೊಳ್ಳುತ್ತವೆ. ಆದರೆ ಇದನ್ನು ಪ್ರಬಲವಾಗಿ ವಿರೋಧಿಸಿದ ಸಲ್ವಾದೋರ್ ನಿಕೋಲಸ್ ಮಥ್ಯಸ್ [Salvador Nicholas Mathias], ಡಬ್ಲ್ಯು. ಆರ್. ಸುನೀತಾ ಹಾಗೂ ಇತರ ಇಬ್ಬರು ಈ ಐಕ್ಯತಾ ನಿರ್ಧಾರವನ್ನು ಪ್ರಶ್ನಿಸಿ, ಮಂಗಳೂರು ಮುನ್ಸಿಫ್ ಕೋರ್ಟಿಗೆ ದಾವೆ ಹೂಡುತ್ತಾರೆ. ಹೀಗೆ 1961ರಲ್ಲಿ ಬಾಸೆಲ್ ಮಿಶನ್ ಸಭೆಗಳು, ಚರ್ಚ್ ಆಫ್ ಸೌತ್ ಇಂಡಿಯಾ ಸೇರಲು ಸಾಧ್ಯವಾಗುವುದಿಲ್ಲ. ವಾದಿಗಳು 'ಐಕ್ಯತಾ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರ, ಜಿಲ್ಲಾ ಚರ್ಚ್ ಕೌನ್ಸಿಲ್‌ಗೆ ಇರುವುದಿಲ್ಲ' ಎಂಬ ಪ್ರಬಲ ವಾದವನ್ನು ಮಂಡಿಸಿದರು. ಆದರೆ 1968ರ ಏಪ್ರಿಲ್‌ನಲ್ಲಿ ಮಂಗಳೂರಿನ ಮುನ್ಸೀಫರು ತೀರ್ಪು ನೀಡುತ್ತಾ, ಮೇಲಿನ ದಾವೆಯನ್ನು ತಿರಸ್ಕರಿಸುತ್ತಾರೆ.[94] ಇದರ ನಂತರ ಜಿಲ್ಲಾ ಸಭೆಗಳು, ಚರ್ಚ್ ಆಫ್ ಸೌತ್ ಇಂಡಿಯಾ ಸೇರುವುದನ್ನು ಗಮನಿಸಬಹುದು.

ತದನಂತರ ಪುನಃ ಅರ್ಜಿದಾರರು ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಮಾಡುತ್ತಾರೆ. ಆದರೆ 1971ನೇ ಏಪ್ರಿಲ್‌ನಲ್ಲಿ ವಾದಿಗಳ ಅರ್ಜಿಯು ತಿರಸ್ಕೃತವಾಗುತ್ತದೆ. ಹೀಗೆ ಮುನ್ಸೀಫ್ ಕೋರ್ಟ್ ಹಾಗೂ ದಕ್ಷಿಣ ಕೆನರಾ ಜಿಲ್ಲಾ ನ್ಯಾಯಾಲಯಗಳೆರಡರಲ್ಲೂ ಚರ್ಚ್ ಆಫ್ ಸೌತ್ ಇಂಡಿಯಾ ಪರವಾಗಿ ತೀರ್ಪು ಹೊರಬೀಳುತ್ತದೆ. ಆದರೆ ಇಷ್ಟಕ್ಕೆ ಬಿಡದ ವಾದಿಗಳು ಕರ್ನಾಟಕ ಹೈಕೋರ್ಟಿಗೆ ಅಪೀಲು ಸಲ್ಲಿಸಿ ದಾವೆಯನ್ನು ನಡೆಸುತ್ತಾರೆ. ಕರ್ನಾಟಕ ಹೈಕೋರ್ಟ್ ತನ್ನ ನಿರ್ಧಾರವನ್ನು ತಿಳಿಸುತ್ತಾ, [No.R.S.A No.741/71 vide ILR 1974, Kar. 1002] ದಕ್ಷಿಣ ಕೆನರಾ ಮತ್ತು ಕೊಡಗಿನ ಬಾಸೆಲ್ ಮಿಶನ್ ಚರ್ಚುಗಳನ್ನು ಚರ್ಚ್ ಆಫ್ ಸೌತ್ ಇಂಡಿಯಾದೊಂದಿಗೆ ಸೇರಿಸಬಾರದೆಂಬುದಾಗಿ ಹಾಗೂ ಅದು ಸ್ವತಂತ್ರವಾಗಿದ್ದು, 'ದಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್' ಎಂಬುದಾಗಿ ಕರೆಸಲ್ಪಡಬೇಕೆಂದು ಸೂಚಿಸುತ್ತದೆ. 1974ರಲ್ಲಿ ಕರ್ನಾಟಕ ಹೈಕೋರ್ಟ್ ಜಿಲ್ಲಾ ಸಭೆಯು, ದಕ್ಷಿಣ ಭಾರತ ಸಭೆಯೊಂದಿಗೆ ಸೇರ್ಪಡೆಯಾದುದನ್ನು ಪುಷ್ಟೀಕರಿಸಲು ಬೇಕಾದ ಪುರಾವೆಗಳನ್ನು ಕೋರ್ಟಿನ ಮುಂದೆ ಹಾಜರುಪಡಿಸಿಲ್ಲವೆಂದು ಅಭಿಪ್ರಾಯಪಡುತ್ತದೆ ಹಾಗೂ ಸೇರ್ಪಡೆಯ ಸಿಂಧುತ್ವವನ್ನು ಪ್ರಶ್ನಿಸಿ ತೀರ್ಪು ನೀಡುತ್ತದೆ. ಆದುದರಿಂದ ಹೈಕೋರ್ಟಿನ ತೀರ್ಪನ್ನು ಪ್ರಶ್ನಿಸಿ, 1974ರಲ್ಲಿ ಜಿಲ್ಲಾ ಸಭೆಯು ಸುಪ್ರೀಂ ಕೋರ್ಟಿಗೆ ಅಪೀಲು ಸಲ್ಲಿಸುತ್ತದೆ.[95] [civil appeal No.84/75] ಈ ವಿಚಾರಣೆಯು ಸುಮಾರು 14 ವರ್ಷಗಳಷ್ಟು ಸುದೀರ್ಘವಾಗಿ ಮುಂದುವರಿದು, ಸುಪ್ರೀಂ ಕೋರ್ಟು 20ನೇ ಜನವರಿ 1988ರಂದು ತನ್ನ ತೀರ್ಪನ್ನು ನೀಡುತ್ತದೆ. ಈ ತೀರ್ಪಿನಲ್ಲಿ ಕೋರ್ಟು 1961ರಲ್ಲಿ ಬಾಸೆಲ್ ಮಿಶನ್ ಸಭೆಗಳು,

ಚರ್ಚ್ ಆಫ್ ಸೌತ್ ಇಂಡಿಯಾ ಸೇರಿದುದನ್ನು ಎತ್ತಿ ಹಿಡಿಯುತ್ತದೆ. ಆದರೆ ಬಾಸೆಲ್ ಮಿಶನ್ ಆಸ್ತಿಗಳು ದಕ್ಷಿಣ ಕೆನರಾ ಮತ್ತು ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರ ಉಪಯೋಗಕ್ಕಾಗಿ ಬಳಸಲ್ಪಡಬೇಕು ಎಂದು ತಿಳಿಸುತ್ತದೆ. ಮೊದಲಿದ್ದ 'ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಎಸೋಸಿಯೇಶನ್' ಮುಂದುವರಿಯಲಿದ್ದು, ದಕ್ಷಿಣ ಕೆನರಾ ಮತ್ತು ಕೊಡಗಿನ ಎಲ್ಲಾ ಬಾಸೆಲ್ ಮಿಶನ್ ಆಸ್ತಿಗಳು ಇದರ ನಿರ್ವಹಣೆಯಲ್ಲಿ ಮುಂದುವರಿಯಲಿವೆ ಹಾಗೂ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾ ಈ ಆಸ್ತಿಗಳನ್ನು ಚರ್ಚ್ ಆಫ್ ಸೌತ್ ಇಂಡಿಯಾಕ್ಕೆ ವರ್ಗಾಯಿಸಿದಲ್ಲಿ ಅದು ಕಾನೂನಿನ ಉಲ್ಲಂಘನೆಯಾದಂತೆ ಎಂದು ತನ್ನ ಆದೇಶದಲ್ಲಿ ತಿಳಿಸುತ್ತದೆ.[96]

1977ರಲ್ಲಿ [23–8–1977] ಡಿ. ಐ. ಆನಂದ ಹಾಗೂ ಇತರ 18 ಮಂದಿ ವಾದಿಗಳು 'ದಕ್ಷಿಣ ಕೆನರಾ ಹಾಗೂ ಕೊಡಗಿನಲ್ಲಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾದ ಆಸ್ತಿಗಳ ಸಮರ್ಪಕ ಆಡಳಿತ ಮತ್ತು ನಿರ್ವಹಣೆಗೆ' ಸಂಬಂಧಿಸಿದಂತೆ ಮಂಗಳೂರಿನ ಜಿಲ್ಲಾ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸುತ್ತಾರೆ. [O.S.No.22/1977][97] ವಾದಿಗಳ ಪ್ರಕಾರ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವು ದಕ್ಷಿಣ ಕೆನರಾ ಹಾಗೂ ಕೊಡಗಿನಲ್ಲಿ ಸಂಪೂರ್ಣವಾಗಿ ವೃದ್ಧಿಯಾಗಿರುವ ಇವ್ಯಾಂಜಲಿಕಲ್ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಚರ್ಚಾಗಿದೆ. ಇದಕ್ಕೆ ಅದರದ್ದೇ ಸಂವಿಧಾನವಿದ್ದು, ವಾದಿಗಳು ಅದರ ಸದಸ್ಯರಾಗಿದ್ದಾರೆ. ವಾದಿಗಳು ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಇನ್ ಇಂಡಿಯಾವು ದಕ್ಷಿಣ ಕೆನರಾ ಹಾಗೂ ಕೊಡಗಿನಲ್ಲಿರುವ ಆಸ್ತಿಗಳ ಸಮರ್ಪಕ ಹಾಗೂ ಸಮರ್ಥವಾದ ಆಳ್ವಿಕೆಗೆ ಆಸಕ್ತಿಯನ್ನು ಹೊಂದಿದ್ದಾರೆ ಎಂದು ತಿಳಿಸುತ್ತಾರೆ. ಅದೇ ರೀತಿ ಇವರು ಚರ್ಚ್ ಆಫ್ ಸೌತ್ ಇಂಡಿಯಾ ಹಾಗೂ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ನಡುವೆ ಹಲವು ರೀತಿಯ ಮೂಲಭೂತವಾದ ಭಿನ್ನತೆಗಳಿರುವುದರಿಂದ [Faith doctrine, tradition, practices and forms of worship] ಬಾಸೆಲ್ ಮಿಶನ್ ಚರ್ಚುಗಳು ಚರ್ಚ್ ಆಫ್ ಸೌತ್ ಇಂಡಿಯಾ ಸೇರಿರುವುದನ್ನು ವಿರೋಧಿಸುತ್ತಾರೆ.[98] ಈ ವ್ಯಾಜ್ಯವು ಜಿಲ್ಲಾ ನ್ಯಾಯಾಲಯದಲ್ಲಿ 23 ವರ್ಷಗಳಷ್ಟು ದೀರ್ಘ ಕಾಲ ನಡೆದು 16ನೇ ಡಿಸೆಂಬರ್ 2000ನೇ ಇಸವಿಯಲ್ಲಿ ನ್ಯಾಯಾಲಯವು ವಾದಿಗಳ ದಾವೆಯನ್ನು ತಿರಸ್ಕರಿಸಿ ತೀರ್ಪನ್ನು ಹೊರಡಿಸುತ್ತದೆ. ನಂತರ ವಾದಿಗಳು ಕರ್ನಾಟಕ ಹೈಕೋರ್ಟಿಗೆ ಅಪೀಲು ಸಲ್ಲಿಸಿ, ಇಲ್ಲಿ ದಾವೆಯು ಸರಿಯಾಗಿ ಹೂಡಲ್ಪಡಲಿಲ್ಲವೆಂಬ ಕಾರಣದಿಂದಾಗಿ ಅದು ತಿರಸ್ಕೃತವಾಗುತ್ತದೆ.[99] ಹೀಗೆ ಬಾಸೆಲ್ ಮಿಶನ್ ಕ್ರೈಸ್ತರಲ್ಲಿನ ಗುಂಪುಗಳು ನಿರಂತರವಾಗಿ ಕಲಹದಲ್ಲಿ ತೊಡಗಿರುವುದನ್ನು ಗಮನಿಸಬಹುದು. ಈ ರೀತಿ ಕರ್ನಾಟಕದಲ್ಲಿನ ಬಾಸೆಲ್ ಮಿಶನ್ ಕ್ರೈಸ್ತರ ಮಧ್ಯೆ ವಿಭಜನೆಗಳಿರುವುದು ಸ್ಪಷ್ಟವಾಗುತ್ತದೆ.

ಮಿಶನರಿಗಳು ಕೊನೆಯವರೆಗೆ ಸ್ಥಳೀಯ ಕ್ರೈಸ್ತರಿಗೆ ನಾಯಕತ್ವವನ್ನು ವಹಿಸದೆ, ಅವರು ತೆರಳಲು ಯೋಜನೆ ಹಾಕುವ ಕಾಲದಲ್ಲಿ ಸ್ಥಳೀಯರಿಗೆ ಉಸ್ತುವಾರಿಯನ್ನು ವಹಿಸಿ ಹಲವು ಬಿಕ್ಕಟ್ಟಿಗೆ ಕಾರಣರಾದರು. ಅದೇ ರೀತಿ ಮಿಶನರಿಗಳ ಕಾರ್ಯಾಚರಣೆಯ ಸಂದರ್ಭದಲ್ಲಿ ಸ್ಥಳೀಯ ಕ್ರೈಸ್ತರಲ್ಲಿ ಪಂಗಡ ಪ್ರೇಮವನ್ನು ಹುಟ್ಟು ಹಾಕಿ ಪರಸ್ಪರರು ಒಗ್ಗಟ್ಟಾಗಿ ಬೆಳೆಯಲು ಅವಕಾಶ ನೀಡದಿರುವುದು ಇವತ್ತಿನ ಐಕ್ಯದಲ್ಲಿನ ವಿಭಜನೆಗೆ ಕಾರಣವಾಗಿದೆ ಎನ್ನಬಹುದು. ಅಷ್ಟು ಮಾತ್ರವಲ್ಲದೇ ಅಧಿಕಾರದ ಮೇಲಿನ ದಾಹ, ಆಸ್ತಿಗಳ ನಿರ್ವಹಣೆಯ ಆಸಕ್ತಿ ಇತ್ಯಾದಿಗಳು ಬಾಸೆಲ್ ಮಿಶನ್ ಚರ್ಚುಗಳಲ್ಲಿ ಗುಂಪುಗಾರಿಕೆಯನ್ನು ಹುಟ್ಟು ಹಾಕಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 'ನಮ್ಮ ಸಮಾಜವು ನಮ್ಮ ಜಿಲ್ಲೆಯಲ್ಲಿ ಸರ್ವ ವಿಧದಲ್ಲೂ ತೀರ ಹಿಂದುಳಿದಿದೆ. ನಮ್ಮ ಸಭೆಗಳ ಹಣವನ್ನೂ, ಆಸ್ತಿಯನ್ನೂ ಕೇವಲ ಒಂದೆರಡು ಕುಟುಂಬಗಳು ಅನುಭವಿಸುತ್ತಿವೆ. ನಿರಪರಾಧಿಗಳನ್ನು ನಿರ್ದಾಕ್ಷಿಣ್ಯವಾಗಿ ಹಿಂಸಿಸಿ ಅಯೋಗ್ಯರಿಗೆ ಸ್ಥಾನಮಾನಗಳನ್ನು ಕೊಡುತ್ತಿದ್ದಾರೆ' ಎಂಬ ಆರೋಪಗಳನ್ನು ಸ್ಥಳೀಯ ಕ್ರೈಸ್ತರು ಮಾಡಿರುವುದನ್ನು ಗಮನಿಸಬಹುದು.[100] ಈ ಮೇಲಿನ ವ್ಯಾಜ್ಯಗಳು, ಚರ್ಚುಗಳಲ್ಲಿನ ಗುಂಪುಗಾರಿಕೆಗಳು ಚರ್ಚ್‌ನ ಪ್ರಗತಿಗೆ ಮಾರಕವಾಗಿ ಪರಿಣಮಿಸಿವೆ ಎಂದು ಅಭಿಪ್ರಾಯಪಡಬಹುದು.

1947ರಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಗಿ ಉದಯವಾದ ನಂತರ ಅದು ಜಾತ್ಯಾತೀತ ಸಂವಿಧಾನವನ್ನು ಅನುಕರಿಸುವುದರಿಂದ, ಎಲ್ಲಾ ಧಾರ್ಮಿಕ ಹಾಗೂ ಮಿಶನರಿ ಸಂಘಟನೆಗಳು ಯಾವುದೇ ಹಸ್ತಕ್ಷೇಪವಿಲ್ಲದೆ ಮುಂದುವರಿಯಲು ಸಾಧ್ಯವಾಗುತ್ತದೆ. ಎರಡನೇ ಜಾಗತಿಕ ಯುದ್ಧದ ನಂತರ ಬಾಸೆಲ್ ಮಿಶನ್ ತನ್ನ ಕಾರ್ಯವನ್ನು ಮರಳಿ ಆರಂಭಿಸಿದರೂ, ಅದು ತನ್ನ ಭಾಗಶಃ [partial] ಸಣ್ಣ ಪಾತ್ರವನ್ನು ನಿರ್ವಹಿಸುತ್ತದೆ. ಬಹುಪಾಲು ಮಿಶನ್ ಹಾಗೂ ಆಡಳಿತ ವಿಭಾಗಗಳಲ್ಲಿ ದೇಶಿಯ ಕ್ರೈಸ್ತರು ಆಗಾಗಲೇ ಭಾಗವಹಿಸಲು ಆರಂಭಿಸಿದ್ದು, ಸ್ವಾಯತ್ತತೆಯತ್ತ ದೇಶಿಯ ಚರ್ಚುಗಳು ಮುಂದುವರಿಯುತ್ತಿದ್ದವು. ಹೀಗೆ ಅಂತಿಮವಾಗಿ 1952ರಲ್ಲಿ ಬಾಸೆಲ್ ಮಿಶನ್ ಭಾರತದಲ್ಲಿನ ಮಿಶನ್ ಹಾಗೂ ಚರ್ಚ್ ಎರಡರ ಸಂಪೂರ್ಣ ಜವಾಬ್ದಾರಿಯನ್ನು ಸ್ಥಳೀಯ ಕ್ರೈಸ್ತರಿಗೆ ವಹಿಸಿ, ಅದು ಕೇವಲ ಮಾರ್ಗದರ್ಶನವನ್ನು ನೀಡುವ ಅಂಗವಾಗಿ ಮುಂದುವರಿಯುತ್ತದೆ. 1968ರಲ್ಲಿ ಚರ್ಚ್ ಆಫ್ ಸೌತ್ ಇಂಡಿಯಾದಲ್ಲಿ ಐಕ್ಯವಾದ ಬಾಸೆಲ್ ಮಿಶನ್ ಚರ್ಚುಗಳು ಹಲವು ಬಿಕ್ಕಟ್ಟು ಹಾಗೂ ಕಲಹಗಳ ಮಧ್ಯೆಯೂ ಇಂದು ಚರ್ಚ್ ಆಫ್ ಸೌತ್ ಇಂಡಿಯಾದ ಭಾಗವಾಗಿ ಮುಂದುವರಿಯುತ್ತಿವೆ. ಇಂದು ಬಾಸೆಲ್ ಮಿಶನ್ ಹಿನ್ನೆಲೆಯ ಸಭೆಗಳು ಹೊಸ ಅಸ್ತಿತ್ವವನ್ನು ಪಡೆದಿವೆ. ಅವು ಇಂದು ಸ್ವತಂತ್ರ, ಸ್ವಾವಲಂಬಿ ದೇಶಿಯ ಸಭೆಗಳಾಗಿ, ವಿಶಾಲ ಭಾರತ ಕ್ರೈಸ್ತ ಸಭೆಯ ಒಂದು ಅಂಗವಾಗಿವೆ. ಅವು ಚರ್ಚ್ ಆಫ್ ಸೌತ್ ಇಂಡಿಯಾದೊಡನೆ ವಿಲೀನವಾದರೂ,

ಬಾಸೆಲ್ ಮಿಶನ್ ಹಿನ್ನೆಲೆಯ ಸಂಪ್ರದಾಯ, ಚಾರಿತ್ರ್ಯ, ಅಸ್ತಿತ್ವವನ್ನು ಮುಂದುವರಿಸಿಕೊಂಡು ಹೋಗುತ್ತಿವೆ.

ಸಂದರ್ಭ ಸೂಚಿ:

1. 1927ರಲ್ಲಿ ಲಂಡನ್ ಮಿಶನರಿ ಸೊಸೈಟಿಗೆ ಸೇರಿದ್ದ ಡಾ. ಪಿ.ಇ. ಬುರ್ಕಾರ್ಡ್ಟ್ [Dr. P.E. Burckhardt] ರವರು, 1936ರಲ್ಲಿ ಬಾಸೆಲ್ ಮಿಶನ್‌ಗೆ ಮರಳಿದ್ದರು.
2. Wives of Friso melzer Wilhelm kling and Alfred Reichenbacher, Celesta von Biberstein and Dr. Schneider, were allowed to remain in Mangalore and Udupi.
3. ಎನ್. ಸಿ. ಸಾರ್ಜೆಂಟ್, *ಫ್ರಮ್ ಮಿಶನ್ಸ್ ಟು ಚರ್ಚ್ ಇನ್ ಕರ್ನಾಟಕ*, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮದ್ರಾಸ್, 1987, ಪುಟ 153. ಪೀಟರ್ ವಿಲ್ಸನ್ ಪ್ರಭಾಕರ, *ದಿ ಬಾಸೆಲ್ ಮಿಶನ್ ಇನ್ ಸೌತ್ ಕೆನರಾ (1834–1947)*, ಜೂನ್ 1988, ಪುಟ 276.
4. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 153–154.
5. ಕ್ರಿಸ್ಟೋಫರ್ ಎಲ್. ಪುರ್ತಾಡೊ, *ಚರ್ಚ್ ಯುನಿಯನ್ ಮುವ್‌ಮೆಂಟ್ ಇನ್ ದಿ ಫಾರ್ಮರ್ ಬಾಸೆಲ್ ಮಿಶನ್ ಎರಿಯಾಸ್: ಎ ಹಿಸ್ಟೋರಿಕಲ್ ರಿವ್ಯೂ, ಫೆಬ್ರವರಿ 19–21, 2009*, ಕೆ.ಟಿ.ಸಿ., ಬಲ್ಮಠ, ಮಂಗಳೂರು, ಪುಟ 15. ಎನ್.ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 154–156.
6. ಎನ್. ಸಿ. ಸಾರ್ಜೆಂಟ್, ಪೂರ್ವೋಕ್ತ, ಪುಟ 156–160.
7. ಜ್ಯಾಕ್ಸ್ ರೋಸೆಲ್, *ಟ್ರ್ಯಾಕಿಂಗ್ ಕ್ರಿಶ್ಚಿಯಾನಿಟಿ ವರ್ಲ್ಡ್‌ವೈಡ್*, ಏಷ್ಯನ್ ಟ್ರೇಡಿಂಗ್ ಕಾರ್ಪೊರೇಷನ್, ಬೆಂಗಳೂರು, 2010, ಪುಟ 219.

   ಜಾಗತಿಕ ಯುದ್ಧದ ಕಾಲಾವಧಿಯಲ್ಲಿ ಹರ್ಮನ್ ವಿಟ್‌ಸ್ಚಿ [Hermann Witschi] ಯವರು ಬಾಸೆಲ್ ಮಿಶನ್ ಹೋಮ್ ಬೋರ್ಡ್‌ನ ಕಾರ್ಯಕಾರಿ [Executive] ಸದಸ್ಯರಾಗಿದ್ದರು. ಸ್ವಿಟ್ಜರ್ಲ್ಯಾಂಡಿನ ಫ್ರೆಂಚ್ ಭಾಷಾ ಪ್ರಭಾವವಿರುವ ಪ್ರದೇಶದಲ್ಲಿ ಚಿರಪರಿಚಿತರಾಗಿದ್ದ ಇವರು, ಬಾಸೆಲ್ ಮಿಶನಿನ ಏಷ್ಯಾದ ಮಿಷನ್ ಕೆಲಸಕ್ಕೆ ಜವಾಬ್ದಾರರಾಗಿದ್ದರು.
8. ಎನ್.ಸಿ.ಸಾರ್ಜೆಂಟ್, *ಪೂರ್ವೋಕ್ತ*, ಪುಟ 161–162.

   'Give to a few Indians a leading position. The best constitutions are worthless when there are none to work them. The most urgent need is for indigenous leadership, i.e. men of outstanding ability to whom the best training has been given. Such men must be for the moment on the mission budget. This measure is necessary to put right the mission/church

relationship. There are a few in schools and hospitals but none in such church work besides Karunakar and Sanjiva Rao. I propose to select for the present one young man from each district for studies abroad.

9. ಅದೆ, ಪುಟ 163–164. ಕ್ರಿಸ್ಟೋಫರ್ ಎಲ್. ಫುರ್ಟಾಡೊ, *ಪೂರ್ವೋಕ್ತ*, ಪುಟ 16.

10. ಎಸ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 166–167.

11. ಕ್ರಿಸ್ಟೋಫರ್ ಎಲ್. ಫುರ್ಟಾಡೊ, *ಪೂರ್ವೋಕ್ತ*, ಪುಟ 17.

12. ಜ್ಯಾಕ್ಸ್ ರೋಸೆಲ್, *ಟ್ರ್ಯಾಕಿಂಗ್ ಕ್ರಿಶ್ಚಿಯಾನಿಟಿ ವರ್ಲ್ಡ್‌ವೈಡ್*, ಏಷ್ಯನ್ ಟ್ರೇಡಿಂಗ್ ಕಾರ್ಪೊರೇಶನ್, ಬೆಂಗಳೂರು, 2010, ಪುಟ 74 ಮತ್ತು 94.

13. ಯು. ಮೇಯರ್, ಇಂಡಿಜನೈಸೇಶನ್–ಎ ಕ್ರಿಟಿಕಲ್ ರಿವ್ಯೂವ್ ಆಫ್ ದಿ ಡಿಸ್ಕಶನ್ ಇನ್ ಇಂಡಿಯಾ 1942–65, *ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಯೂವ್*, ಸಂಪುಟ VII, ನಂ. 2, ಡಿಸೆಂಬರ್ 1973, ಪುಟ 97–98.

14. ಅದೆ, ಪುಟ 98.

15. ಎಸ್. ಸಿ. ಮುಖರ್ಜಿ, ಫೊರಿನ್ ಮಿಶನ್ಸ್ ಆಂಡ್ ದಿ ಇಂಡಿಯನ್ ಚರ್ಚ್, *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ–XLII, ನಂ.2, ಫೆಬ್ರವರಿ, 1922, ಪುಟ 51.

16. ಅದೆ, ಪುಟ 51–52.

17. ಅದೆ, ಪುಟ 55.

18. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ–XLI, ನಂ. 12, ಡಿಸೆಂಬರ್, 1921, ಪುಟ 445–446.

19. ಅಸೀರ್‌ವಥಮ್, ಚೇಜಿಂಗ್ ಇಂಡಿಯಾ ಲ್ಯಾಂಡ್ ದಿ ಮಿಶನರಿ, *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ–XLI, ನಂ. 11, ನವೆಂಬರ್, 1921, ಪುಟ 402–403.

20. ಅದೆ, ಪುಟ 409–411.

21. *ದಿ 72nd ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಇನ್ ಸೌತ್ – ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1911*, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು 1912, ಪುಟ 27–28.

22. ಅದೆ, ಪುಟ 28.

23. *ದಿ 73rd ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1912*, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1913, ಪುಟ 34.

24. ಅದೆ, ಪುಟ 35–36.

We know that the branch of the Indian Church, connected with the Basel Mission is still in need of the mission, not only of her money but also of her representatives .... on the other hand, we are fully aware that our Indian brethren should as soon as possible be entrusted with all the responsibilities they are able to take upon themselves. It is from this point of view that we are moving slowly yet surely on towards the goal of self government. Steps towards self government which were of late taken in our church are the following: our Indian pastors are to be given, wherever possible, an independent position. They are not only to be responsible for the conducting of divine services, and the management of parochial schools, but also, as a rule, preside over the meetings of the presbyteries. In the presbyteries of the larger stations, where the number of European missionaries is great, the Europeans are not to be allowed occupy more than one third of the seats on the presbytery. In the same way, the number of European members of the district synods has been reduced. In addition to this, the home committee of the Basel Mission acting on the advice of the general conference of missionaries, has sanctioned the formation of a general Synod Board or church council. This step is taken not only because it lies in the economy of the organization of our church, in which we would bain serve the future church of India with the experience of the old churches of the west, but also in the hope of creating and strengthening thereby the sense of solidarity, and awaking in the Indian church the consciousness that they are bound to help each other.

25. ಅದೆ, ಪುಟ 36.

This church council is to be composed of the three European members of the general local committee of the mission, namely the president, the statistical and educational secretary and the treasurer, and of three Indian members, are from each of the three synods. While the European members are nominated by the home board, the Indian members are elected by the members of their respective synods. The church council is authorized to govern the church of the whole field according to the existing church rules. Measures, however, involving a change of principle or of church organization have to be submitted to the home board.

26. ಪಾಶ್ಚಾತ್ಯ ಮಿಶನರಿಗಳೂ ದಕ್ಷಿಣ ಹಿಂದುಸ್ಥಾನದ ಪಶ್ಚಿಮಕರಾವಳಿಯೂ, *ಸತ್ಯವ್ರತ,* ಸಂಪುಟ 1, ಸಂಚಿಕೆ 1, ಅಕ್ಟೋಬರ್ 1925, ಪುಟ 5–6.

27. ಅದೆ, ಪುಟ 6.

28. ಭಾರತೀಯ ಕ್ರೈಸ್ತ ಬಂಧುಗಳಿಗೊಂದು ಮಾತು, *ಸತ್ಯವ್ರತ,* ಸಂಪುಟ 1, ಸಂಚಿಕೆ 5, ಫೆಬ್ರವರಿ, 1926, ಪುಟ 5–6.

29. ಜರ್ಮನ್ ಮಿಶನರಿಗಳ ಆಗಮನ, *ಸತ್ಯವ್ರತ,* ಸಂಪುಟ 1, ಸಂಚಿಕೆ 6, ಮಾರ್ಚ್, 1926, ಪುಟ 3.

30. ಅದೆ.

31. ಅದೆ, ಪುಟ 4.

32. *ಕ್ರೈಸ್ತ ಹಿತವಾದಿ,* ಸಂಪುಟ 3, ಸಂಚಿಕೆ 4, ಅಕ್ಟೋಬರ್, 1926, ಪುಟ 51.

33. ಸ್ವತಂತ್ರ ಸಭೆಯ ಕಲ್ಪನೆ, *ಸತ್ಯವ್ರತ,* ಸಂಪುಟ II, ಸಂಚಿಕೆ 4, ಜನವರಿ, 1927, ಪುಟ 10–11.

34. ಅದೆ, ಪುಟ 11–13.

35. ಅದೆ, ಪುಟ 13–14.

36. *ಸತ್ಯವ್ರತ,* ಸಂಪುಟ III, ಸಂಚಿಕೆ 1, ಅಕ್ಟೋಬರ್, 1927, ಪುಟ 15.

37. ನಮಗೆ ಸ್ವತಂತ್ರವೆಲ್ಲಿ?, *ಸತ್ಯವ್ರತ,* ಸಂಪುಟ III, ಸಂಚಿಕೆ 3, ಡಿಸೆಂಬರ್ 1927, ಪುಟ 3–4.

38. ಅದೆ, ಪುಟ 5.

39. ಕ್ರೈಸ್ತ ಸಭೆಯ ಸ್ವಾತಂತ್ರ್ಯವು, *ಕ್ರೈಸ್ತ ಹಿತವಾದಿ,* ಸಂಪುಟ–7, ಸಂಚಿಕೆ–7, 16ನೇ ಅಕ್ಟೋಬರ್ 1930, ಪುಟ 49.

40. *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 10, 16ನೇ ನವೆಂಬರ್, 1934, ಪುಟ 177.

41. ಅದೆ.

42. ಎಸ್. ಡಿ. ಎಲ್. ಅಳಗೋಡಿ, *ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ*, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, 2001, ಪುಟ 201.

43. ಇ. ಎ. ಲಿವ್ವಿಂಗ್‌ಸ್ಟೋನ್, (ಸಂಪಾದಕ), *ದಿ ಕನ್‌ಸೈಜ್ ಓಕ್ಸ್‌ಫೋರ್ಡ್ ಡಿಕ್ಷನರಿ ಆಫ್ ದಿ ಕ್ರಿಶ್ಚಿಯನ್ ಚರ್ಚ್*, ಓಕ್ಸ್‌ಫೋರ್ಡ್ ಯುನಿವರ್ಸಿಟಿ ಪ್ರೆಸ್, ಓಕ್ಸ್‌ಫೋರ್ಡ್, 1977, ಪುಟ 125.

    The form of church polity which rests on the independence and autonomy of each local church. The system is held to represent the primitive form of church order.

44. ಅದೆ, ಪುಟ 413.

    A form of ecclesiastical polity wherein the church is governed by presbyters. [The earliest organization of the Christian churches in Palestine resembled that of the jewish synagogues, each of which was administered by a board of 'elders' (i.e. presbyters)]

45. ಅದೆ, ಪುಟ 173.

    The system of church government by bishops.

46. ಎಸ್. ಡಿ. ಎಲ್. ಅಳಗೋಡಿ, *ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ*, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, 2001, ಪುಟ 201–202.

47. ಅದೆ, ಪುಟ 202–203.

48. ಬೆನ್‌ಜೆಟ್ ಸುಂಡ್‌ಕ್ಲರ್ [Bengt Sundkler], *ಚರ್ಚ್ ಆಫ್ ಸೌತ್ ಇಂಡಿಯಾ; ದಿ ಮೂವ್‌ಮೆಂಟ್ ಟುವರ್ಡ್ಸ್ ಯೂನಿಯನ್ 1900–1947*, ಯುನೈಟೆಡ್ ಸೊಸೈಟಿ ಫಾರ್ ಕ್ರಿಶ್ಚಿಯನ್ ಲಿಟರೇಚರ್, ಲೂಟರ್‌ವರ್ಥ ಪ್ರೆಸ್, ಲಂಡನ್, 1965, ಪುಟ 23.

    'local or provincial conferences were held, for Bengal in Calcutta 1855, for North West India in Benares 1857, for South India in the hill resort ootacamund in 1858, for Panjab in Lahore, 1862'.

49. ಅದೆ, ಪುಟ 23–33.

In 1900 the south Indian missionary conference in Medras brought together some one hundred and fifty missionaries representing some forty five different missionary organizations and a Christian community of 3,50,000. Ten of these organizations were, as yet, only very small; their membership was in each case less than 1000. Others again represented numerically impressive attainments.

'Of the one hundred and fifty who met at the south Indian missionary conference in Medras in 1900 only twenty four were Indians. Their number was small and they did not take a prominent part in the discussions. This was characteristic of the situation in mission and church, as of the relative role of the Indian in the affairs of his own country. But this position was not to last long.

50. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 209.

51. *ದಿ 73[rd] ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ 1912*, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, 1913, ಪುಟ 36–37.

One of the first things the church council will have to consider, as soon as it is finally constituted, will be the question of our joining the South India United Church. This question have been discussed so far, only in the general conference of European missionaries, and more or less informally, in the conventions of our Indian preachers. As far as we can see our Indian brethren have, on the whole, not taken very enthusiastically to the idea. But this is not hard to understand if one considers that our people know practically nothing about the disadvantages of denominationalism, since their church is almost the only church in most of our stations, and this a church, which, though itself of a mild Lutheran type, as far as doctrine is concerned, has from the very beginning as a matter od principle eschewed denominationalism, and as a church has not only recognized the ministry of

other denominations for its own members, but has also granted to every earnest Christian of other denominations the privilege to partake with us the Lord's supper. This being the case, our people feel practically one with the other branches of christ's church in India, and do not feel any necessity of formal union with other churches. That the South India United Church is not a union, but rather a federation of churches has by, this time, been recognized in our congregations. We have no doubt that in course of time our people will recognize the benefits acquiring from a federation of different churches. The horizon of our Christians would become larger, helpful suggestions would be received and given and our Christians would realize that they are the members of larger body. Besides this, our Christians would discover that we have not kept back from them any liberty which others enjoy and probably, feel more stimulated to live up to the liberty granted to them till now.

52. ಬೆನ್ಜ್‌ಂಟ್ ಸುಂಡ್‌ಕ್ಲರ್, *ಪೂರ್ವೋಕ್ತ*, ಪುಟ 81.

53. ಕ್ರಿಸ್ಟೋಫರ್ ಎಲ್. ಪುರ್ಟಾಡೊ, *ಪೂರ್ವೋಕ್ತ*, ಪುಟ 12.

According to Hartensatein, the three – fold basic of unity is that the church has one lord, one word of god and one creed. The church has in its history acquired rich diversity and the foundation of church unity is Christ himself and his kingdom. True unity is unity of faith and doctrine and not the uniformity of a frame and constitution. The historical heritage of the uniting denominations should be retained – the Anglican doctrine of ministry, especially the episcopate; the Presbyterian emphasis on the ministry of elders and responsibility of the synod; and the Congregationalists stress on the individual religious community and of the individual layman. Out of this heritage an organic union should evolve, emphasizing the unifying factors.

Hartenstein also warned against three dangers in the proposed union: a)The danger of sacerdotalism – over –emphasis on the ministry, especially of the episcopate at the cost of personal conversion; importance of the living community and above all the retention of the pre – eminence of the word of god. (b) The danger of secularism, by which is meant the danger of worldly power and insistence on constitution rather on purity of faith and the working of the Holy Spirit. (c) The danger of syncretism: Nationalist ideals should not be mixed with the ideals of the kingdom, and Indian spiritual heritage should undergo complete conversion under the cross.

54. ಅದೆ, ಪುಟ 12–13.

55. ಅದೆ, ಪುಟ 13.

The message stated that "----- the Tambarom conference has itself become an earnest summons to the Christian churches to reconsider the question of their denominational divisions, and to pray for the unity of the body of Christ among the nations".

56. ಅದೆ.

57. ಅದೆ, ಪುಟ 13–14.

58. ಎಸ್.ಡಿ.ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ. 209.

59. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 164.

Streckein wrote: the opposition does not come from reasonable doubt but from a stronger fear that if they move from their present position , all will be lost and they will be swallowed up……… this kind of fear, especially when it is backed by responsible people, is very hard to overcome.

60. In 1904, Landon Mission Church, American Madura Mission Church United pre-church of Scotland, mission, American Arkat Mission, Americal Jatan Mission church, Scottland mission church jopined together in south India to form south India United Church.

61. ಇನ್ನು ಮುಂದೆ ಸಿ.ಎಸ್.ಐ. ಎಂದು ಉಲ್ಲೇಖಿಸಲಾಗುವುದು.
62. ಕ್ರಿಸ್ಟೋಫರ್ ಎಲ್. ಫುರ್ಟಾಡೊ, *ಪೂರ್ವೋಕ್ತ,* ಪುಟ 15.
63. ಎಸ್. ಡಿ. ಎಲ್.ಅಳಗೋಡಿ, *ಪೂರ್ವೋಕ್ತ,* ಪುಟ 210–216.
64. ಬೆನ್ಸ್‌ಂಟ್ ಸುಂಡ್‌ಕ್ಲರ್, *ಪೂರ್ವೋಕ್ತ,* ಪುಟ 224.
65. ವಿಜಯ ಕುಮಾರ್, *ಎಕ್ಯುಮೇನಿಕಲ್ ಕೋ ಆಪರೇಶನ್ ಆಫ್ ದಿ ಮಿಶನ್ಸ್ ಇನ್ ಕರ್ನಾಟಕ (ಇಂಡಿಯಾ), 1834–1989: ಎ ಹಿಸ್ಟೋರಿಕಲ್ ಎನಾಲಿಸಿಸ್ ಆಫ್ ದಿ ಇವ್ಯಾಂಜಲಿಸ್ಟಿಕಲ್ ಸ್ಟ್ರಾಟರ್ಜಿ ಆಫ್ ದಿ ಮಿಶನ್ಸ್,* ಐಎಸ್‌ಪಿಸಿಕೆ, ಡೆಲ್ಲಿ, 2005, ಪುಟ 4–6.
66. ಜ್ಯಾಕ್ಸ್ ರೋಸೆಲ್, *ಟ್ರ್ಯಾಕಿಂಗ್ ಕ್ರಿಶ್ಚಿಯಾನಿಟಿ ವರ್ಲ್ಡ್ ವೈಡ್,* ಏಶಿಯನ್ ಟ್ರೇಡಿಂಗ್ ಕಾರ್ಪೊರೇಶನ್, ಬೆಂಗಳೂರು, 2010, ಪುಟ 160–161.
67. ಅದೆ, ಪುಟ 162.
68. *ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲಾ ಸಭೆಗಳ ಸರ್ವ ಸದಸ್ಯರ ಅವಗಣನೆಗೆ,* ಡಿ.ಪಿ. ಶೆಟ್ಟಿಯಾನ್ ತಯಾರಿಸಿದ್ದ ಕರಪತ್ರ, ಪುಟ 3.
69. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ,* ಪುಟ 162– 163.
70. ವಿಜಯ ಕುಮಾರ್, *ಪೂರ್ವೋಕ್ತ,* ಪುಟ 194–195.
71. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ,* ಪುಟ 164–165.
72. ವಿಜಯ ಕುಮಾರ್, *ಪೂರ್ವೋಕ್ತ,* ಪುಟ 196–197.
73. ಅದೆ, ಪುಟ 136.
74. ಜೆ. ರೋಸೆಲ್ ಮತ್ತು ಎನ್. ಬರ್ನಾಬಸ್, *ಚರ್ಚ್ ಯುನಿಯನ್‌ನ ವಿಷಯದಲ್ಲಿ ಪ್ರಶ್ನೋತ್ತರಗಳು,* ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, ಮಾರ್ಚ್ 1954, ಪುಟ 1.
75. ವಿಜಯ ಕುಮಾರ್, *ಪೂರ್ವೋಕ್ತ,* ಪುಟ 198.
76. ಎಸ್. ಡಬ್ಲ್ಯು. ಜೋಶ್ವ, ಚರ್ಚ್ ಯೂನಿಯನ್, *ಸತ್ಯ ದೀಪಿಕ,* ಸಂಪುಟ 1, ಸಂಚಿಕೆ 1, ಮಂಗಳೂರು, ಮಾರ್ಚ್, 1962, ಪುಟ 14–15.
77. ಎನ್.ಸಿ. ಸಾರ್ಜೆಂಟ್, *ಪೂರ್ವೋಕ್ತ,* ಪುಟ 167.
78. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ,* ಪುಟ 166.

79. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 137.

80. ಅದೆ, ಪುಟ 138.

81. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 17.

82. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ 120–121.

    'However, he knew quite well that the churches which had grown out of the basel mission though their structure was Presbyterian, were equally Lutherean, since their teenagers had to learn by heart the questions answeres of Luther's shorter Catechism W.R.S. himself ahd not escaped Luther's influence in his youth!'

83. ಗೋಡ್ವಿನ್ ಶಿರಿ (ಸಂಪಾದಿತ), *ಹೋಲಿನೆಸ್ ಇನ್ ಕ್ರೈಸ್ಟ್*, ದಿ ಲೇಗಸಿ ಆಫ್ ದಿ ಬಾಸೆಲ್ ಮಿಶನ್ ಇನ್ ಇಂಡಿಯಾ, ಸೆಬಾಸ್ಟಿಯನ್ ಆರ್. ಫುರ್ಟಾಡೊ, ದಿ ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಎಡ್ಮಿನಿಸ್ಟ್ರೇಶನ್ ಸ್ಟ್ರಕ್ಚರ್, ದಿ ಕರ್ನಾಟಕ ತಿಯೋಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮಂಗಳೂರು, 1985, ಪುಟ 259.

    'Some members of the Basel Mission prefer to remain eternally status quo, I mean concervative, while the whole of Christendom is moving towards unio of all churches'

84. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 138–139.

85. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 18.

86. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 139. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ 171.

87. *ಡಿ. ಪಿ. ಶೆಟ್ಟಿಯಾನ್‌ರವರು ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲಾ ಸಭೆಗಳ ಸರ್ವ ಸದಸ್ಯರ ಅವಗಣನೆಗೆ ಹೊರಡಿಸಿದ ಕರಪತ್ರ*, ಪುಟ 3–7.

88. ಎನ್. ಸಿ. ಸಾರ್ಜೆಂಟ್, *ಪೂರ್ವೋಕ್ತ*, ಪುಟ 165.

    A special word shold be said about the recurring litigation in the Basel Mission churches. This was quite unknown in the M.M.S & L.M.S areas of Karnataka. The need of the B.M. Christians to go to court stemmed perhaps from the previous authorization attitude of the German Missanaries

towards the erring and recalcitrant members of their congregations, whose remeby against ex-communication and perhaps eviction was to go to court or emigration.

89. ಅದೆ.

'when it came to inter – party strite, it was been said that legal cases were deliberately set up by a party against itself in order ro resist doing something it did not want to do, and in this way to establish a lien or the right to sateguard some privilege or to keep permission of some power until something done in respect of it was discharged or was it just that legal cases made people feel important and gave tehm a sense of power over others?'

90. ಕ್ರಿಸ್ಟೋಫರ್ ಎಲ್. ಫುರ್ಟಾಡೋ, *ಪೂರ್ವೋಕ್ತ*, ಪುಟ 17.

Freedom in the church entailed continuing struggle for power among groups which were called by different names in SK and BK.

91. ಡಿ.ಪಿ. ಶೆಟ್ಟಿಯಾನ್, *ಪೂರ್ವೋಕ್ತ*, ಪುಟ 5.

92. ಸತ್ಯವ್ರತನ ವಿಚಾರ, *ಕ್ರೈಸ್ತ ಹಿತವಾದಿ*, ಸಂಪುಟ 6, ಸಂಚಿಕೆ 121, ಮಂಗಳೂರು, 1ನೇ ಜನವರಿ, 1930, ಪುಟ 93.

93. *ಕ್ರೈಸ್ತ ಹಿತವಾದಿ*, ಸಂಪುಟ 7, ಸಂಚಿಕೆ 19, ಮಂಗಳೂರು, 16ನೇ ಏಪ್ರಿಲ್, 1931, ಪುಟ 150.

94. ಡಿ.ಪಿ. ಶೆಟ್ಟಿಯಾನ್, *ಪೂರ್ವೋಕ್ತ*, ಪುಟ 4.

95. ಅದೆ, ಪುಟ 4–5.

96. ವಿಜಯ ಕುಮಾರ್, *ಪೂರ್ವೋಕ್ತ*, ಪುಟ 204–206.

97. *ಇನ್ ದಿ ಕೋರ್ಟ್ ಆಫ್ ದಿ ಪ್ರಿನ್ಸಿಪಲ್ ಡಿಸ್ಟ್ರಿಕ್ಟ್ ಜಡ್ಜ್ ದಕ್ಷಿಣ ಕನ್ನಡ, ಮಂಗಳೂರು, ಜಡ್ಜ್‌ಮೆಂಟ್ ಆಂಡ್ ಡಿಕ್ರಿ ಇನ್ ಒರಿಜಿನಲ್ ಸೂಟ್ ನಂ. 7, ಆಫ್ 1991, ಡೇಟೆಡ್, 16ನೇ ಡಿಸೆಂಬರ್ 2000,* ಪುಟ 1–11.

'Nature of suit: For setting scheme dor proper and due administrative and management of the properties of united Basel Mission church of India, South Kanara and Coorg'.

98. ಅದೆ, ಪುಟ 11–12.

'The averments of the plaint are as follows: The united Basel mission church in India of the district of South Kanara and Coorg (in Short UBMC) is a fully evolved evangelical protestant Christian church. It has its own governed by its own constitution known as 'The constitution of the United Basel Mission church in India". The plaintiffs are the members of UBMC……………the plaintiffs are interested in the proper and efficient management of the religious and secular institutions, activities, assets and affairs of the UBMC of South Kanara and Coorg'.

99. ಡಿ. ಪಿ. ಶೆಟ್ಟಿಯಾನ್, *ಪೂರ್ವೋಕ್ತ*, ಪುಟ 6.

100. *ಸತ್ಯದೀಪಿಕ*, ಸಂಪುಟ 1, ಸಂಚಿಕೆ 1, ಮಂಗಳೂರು, ಮಾರ್ಚ್, 1962, ಪುಟ 2.

ಅಧ್ಯಾಯ: ಐದು

ರಾಷ್ಟ್ರೀಯ ಹೋರಾಟ ಮತ್ತು ಮಿಶನ್

ಅಧ್ಯಾಯ: ಐದು
ರಾಷ್ಟ್ರೀಯ ಹೋರಾಟ ಮತ್ತು ಮಿಶನ್

20ನೇ ಶತಮಾನದಲ್ಲಿ ಭಾರತವು ತೀವ್ರವಾದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೆ ಸಾಕ್ಷಿಯಾಗುತ್ತದೆ. ಈ ರಾಷ್ಟ್ರೀಯ ಹೋರಾಟದಲ್ಲಿ ಭಾರತೀಯ ಜನರು, ಜಾತಿ, ಧರ್ಮ, ಪಂಗಡ ಎಂಬ ಬೇಧ ಭಾವವಿಲ್ಲದೇ ಒಮ್ಮನಸ್ಸಿನಿಂದ ಭಾಗವಹಿಸುತ್ತಾರೆ. ಮಹಾತ್ಮ ಗಾಂಧೀಜಿಯವರು ಹೋರಾಟದ ನಾಯಕತ್ವವನ್ನು ವಹಿಸುವುದರೊಂದಿಗೆ ಅದು ತನ್ನ ಪರಾಕಾಷ್ಠೆಯನ್ನು ಮುಟ್ಟಿ, ದೇಶದ ಪ್ರತಿ ಮೂಲೆ ಮೂಲೆಗೂ ವ್ಯಾಪಿಸುತ್ತದೆ. ಅಂತಿಮವಾಗಿ 1947ರಲ್ಲಿ ಬ್ರಿಟಿಷ್ ವಸಾಹತು ಆಳ್ವಿಕೆ ಅಂತ್ಯವಾಗಿ ಭಾರತ ಸ್ವತಂತ್ರವಾಗುವುದರೊಂದಿಗೆ ಈ ತೀವ್ರವಾದ ಸ್ವಾತಂತ್ರ್ಯ ಹೋರಾಟ ಅಂತ್ಯವಾಗುತ್ತದೆ. ಭಾರತದ ಇತಿಹಾಸದ ಅತೀ ಪ್ರಮುಖ ಮೈಲಿಗಲ್ಲಾಗಿರುವ ಈ ರಾಷ್ಟ್ರೀಯ ಹೋರಾಟ ಹಾಗೂ ರಾಷ್ಟ್ರೀಯತೆಯ ಕಡೆ ಬಾಸೆಲ್ ಮಿಶನ್ ಹಾಗೂ ಬಾಸೆಲ್ ಮಿಶನ್ ಕ್ರೈಸ್ತರು ಯಾವ ರೀತಿಯ ಪ್ರತಿಕ್ರಿಯೆಯನ್ನು ನೀಡುತ್ತಿದ್ದರು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ರಾಷ್ಟ್ರೀಯ ಹೋರಾಟದ ಕಡೆ ಮಿಶನಿನ ಪ್ರತಿಕ್ರಿಯೆಯನ್ನು ಸ್ಪಷ್ಟವಾಗಿ ಅಧ್ಯಯಿಸುವ ಸಲುವಾಗಿ, ಮಿಶನರಿಗಳ ಹಾಗೂ ವಸಾಹತುಶಾಹಿ ಸರಕಾರದ ನಡುವಿನ ಸಂಬಂಧವನ್ನು ಕೂಲಂಕುಶವಾಗಿ ಚರ್ಚಿಸಬೇಕಾಗಿದೆ. ಮಿಶನರಿ ಚಟುವಟಿಕೆಗಳು ಹಾಗೂ ವಸಾಹತುಶಾಹಿ ಚಟುವಟಿಕೆಗಳು ಜೊತೆ ಜೊತೆಯಾಗಿ ಮುನ್ನಡೆಯುತ್ತವೆ. ಇ.ಸಿ.ಭಟೀಯವರು (E. C. Bhatty) 'ಭಾರತೀಯರು ಬ್ರಿಟಿಷರ ಏಕ ವಸಾಹತು ನಿಯಂತ್ರಣದಲ್ಲಿದ್ದರೆ, ಭಾರತೀಯ ಕ್ರೈಸ್ತರು ಬ್ರಿಟಿಷ್ ಹಾಗೂ ಮಿಶನರಿಗಳೆಂಬ ಎರಡು ವಸಾಹತುಶಾಹಿ ನಿಯಂತ್ರಣದಲ್ಲಿದ್ದಾರೆ'[1] ಎಂದು ಅಭಿಪ್ರಾಯ ಪಟ್ಟಿದ್ದರು. ಮಿಶನರಿಗಳು ತಾವು ಮತಾಂತರಿಸಿದ ಕ್ರೈಸ್ತರನ್ನು ತಮ್ಮ ಪ್ರಬಲ ನಿಯಂತ್ರಣದಲ್ಲಿಟ್ಟು ಮುಂದುವರಿದರೆ, ಬ್ರಿಟಿಷರು ಇಲ್ಲಿ ಪ್ರಬಲವಾದ ಆಡಳಿತವನ್ನು ಹುಟ್ಟುಹಾಕಿ ಮುಂದುವರಿಯುತ್ತಾರೆ. ಆದರೆ ಕಾಲ ಕ್ರಮೇಣ 20ನೇ ಶತಮಾನದಲ್ಲಿ ಈ 2 ಶಕ್ತಿಗಳು ದೇಶಿಯರಿಂದ ವಿರೋಧವನ್ನು ಎದುರಿಸುತ್ತವೆ. ಆದುದರಿಂದ ಬ್ರಿಟಿಷರ ಹಾಗೂ ಬಾಸೆಲ್ ಮಿಶನ್ ನಡುವಿನ ಸಂಬಂಧ ಹೇಗೆ ಆರಂಭದಿಂದ ಬದಲಾವಣೆಗಳನ್ನು ಕಂಡಿತ್ತು ಹಾಗೂ ಬಾಸೆಲ್ ಮಿಶನ್ ಸ್ವಾತಂತ್ರ್ಯ ಹೋರಾಟದ ಬಗ್ಗೆ ಯಾವ ಅಭಿಪ್ರಾಯ ಹೊಂದಿತ್ತು ಎಂಬುದನ್ನು ಚರ್ಚಿಸುವುದು ಅಗತ್ಯವಾಗಿದೆ.

ಮಿಶನರಿಗಳತ್ತ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ನೀತಿ:

ವಸಾಹತುಶಾಹಿಯು ತನ್ನ ಅಸ್ತಿತ್ವದುದ್ದಕ್ಕೂ ಮಿಶನರಿಗಳ ಕಡೆಗೆ ಕಾಲದಿಂದ ಕಾಲಕ್ಕೆ ವಿಭಿನ್ನ ನೀತಿಗಳನ್ನು ಅನುಸರಿಸುತ್ತಿರುತ್ತದೆ. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಧಾರ್ಮಿಕ ತಟಸ್ಥ ನೀತಿಯನ್ನು ಅನುಸರಿಸುತ್ತದೆ. ಏಕೆಂದರೆ ಭಾರತದಲ್ಲಿ ಬ್ರಿಟಿಷ್ ಆಡಳಿತವು ತನ್ನ ಆಸ್ತಿತ್ವವನ್ನು

ಸ್ಥಾಪಿಸುತ್ತಿದ್ದುದಷ್ಟೇಯಾಗಿದ್ದು, ಭಾರತೀಯರ ಧಾರ್ಮಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದರೆ ಭಾರತೀಯರ ಪ್ರತಿರೋಧವನ್ನು ಎದುರಿಸಬೇಕಾದೀತು ಎಂಬ ಭಯ ಬ್ರಿಟಿಷರಲ್ಲಿರುತ್ತದೆ[2] ಹಾಗೂ ಪ್ರಾರಂಭದಲ್ಲಿ ಕಂಪನಿಯ ಉದ್ದೇಶ ಲಾಭದಾಯಕ ವ್ಯಾಪಾರ ನಡೆಸುವುದೇ ಆಗಿತ್ತು. ಆದರೂ ಅದು 18ನೇ ಶತಮಾನದ ಮಧ್ಯಕಾಲದವರೆಗೂ ಕ್ರೈಸ್ತಧರ್ಮ ಪ್ರಸಾರಣೆಯ ಕೆಲಸಕ್ಕೆ ವಿರೋಧಿಯಾಗಿರಲಿಲ್ಲ. ಸಾಧ್ಯವಾದ ಎಲ್ಲಾ ವಿಧಾನಗಳನ್ನು ಬಳಸಿ, ಭಾರತೀಯರಲ್ಲಿ ಕ್ರೈಸ್ತ ಧರ್ಮ ಹಬ್ಬಿಸಲು ಅದು ವಿರೋಧಿಯಾಗಿರದೇ ತನ್ನ ಹಡಗುಗಳಲ್ಲಿ ಮಿಶನರಿಗಳು ಪ್ರಯಾಣಿಸಲು ಅನುಮತಿ ನೀಡಿತ್ತು. ದಕ್ಷಿಣ ಭಾರತದಲ್ಲಿ ಕಂಪನಿಯು ಟ್ರಾಂಕ್ಯೂಬಾರ ಮಿಶನಿನೊಂದಿಗೆ ಸ್ನೇಹಪರವಾದ ಸಂಬಂಧವನ್ನು ಹೊಂದಿತ್ತು ಹಾಗೂ ಮದ್ರಾಸಿನ ಇಂಗ್ಲೀಷ್ ಅಧಿಕಾರಿಗಳು ಡೇನಿಶ್ ಮಿಶನರಿಗಳಿಗೆ ಸಹಾಯವನ್ನು ನೀಡಿದ್ದರು. ಸ್ವೀಡಿಶ್ ಮಿಶನರಿಯಾಗಿದ್ದ ಜೋನ್ ಕೀರನ್ಯಾಂಡರ್ (John Kiernander) 1758ರಲ್ಲಿ ಬಂಗಾಲಕ್ಕೆ (ಕಲ್ಕತ್ತ) ಬಂದು ಮಿಶನರಿ ಕಾರ್ಯವನ್ನು ಮುನ್ನಡೆಸಲು ಕಂಪನಿ ಅಧಿಕಾರಿಗಳು ಯಾವ ಅಡಚಣೆಯನ್ನು ಒಡ್ಡುವುದಿಲ್ಲ. ಆದರೆ 1780ರ ನಂತರ ಕಂಪನಿಯ ನೀತಿಯಲ್ಲಿ ಬದಲಾಣೆಗಳುಂಟಾಗುತ್ತವೆ. ಕಂಪನಿಯು ಭಾರತದಲ್ಲಿ ಹಲವು ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡು ಅದರ ಆಡಳಿತವನ್ನು ನಿರ್ವಹಿಸಲು ಆರಂಭಿಸಿದ ಮೇಲೆ ಅದರ ಧಾರ್ಮಿಕ ನೀತಿಯಲ್ಲಿ ಬದಲಾವಣೆಗಳಾಗುತ್ತವೆ. ಅದು ಭಾರತೀಯರ ಧರ್ಮ, ಆಚಾರ-ವಿಚಾರ, ಸಂಪ್ರದಾಯಗಳಲ್ಲಿ ಹಸ್ತಕ್ಷೇಪ ಮಾಡದಿರುವ ಹಾಗೂ ಕ್ರೈಸ್ತ ಸುವಾರ್ತಾ ಪ್ರಸಾರಣವನ್ನು ವಿರೋಧಿಸುವ ನೀತಿಯನ್ನು ಅನುಸರಿಸುತ್ತದೆ. ಒಂದು ವೇಳೆ ಮತ ಪ್ರಚಾರವನ್ನು ಬೆಂಬಲಿಸಿದರೆ, ಭಾರತೀಯರ ವಿರೋಧಕ್ಕೆ (ದಂಗೆಗೆ) ಗುರಿಯಾಗ ಬೇಕಾಗಬಹುದೆನ್ನುವ ಭಯವು ಕಂಪನಿಯಲ್ಲಿತ್ತು. ಆದುದರಿಂದ ಕಂಪನಿಯು ತಮ್ಮ ಲಾಭಾದಾಯಕ ವ್ಯಾಪಾರ ಹಾಗೂ ಸಾಮ್ರಾಜ್ಯ ಸ್ಥಾಪನೆಗೆ ಅಡ್ಡಿಯಾಗುವ ಯಾವುದೇ ಕೆಲಸವನ್ನು ಮಾಡುವುದಿಲ್ಲ. ಹೀಗೆ 18ನೇ ಶತಮಾನದ ಕೊನೆಯಲ್ಲಿ ಕಂಪನಿಯು ಒಂದು ರಾಜಕೀಯ ಶಕ್ತಿಯಾಗಿ ರೂಪುಗೊಳ್ಳುತ್ತಿರುವ ಸಮಯದಲ್ಲಿ ಅದು ಧಾರ್ಮಿಕ ವಿಚಾರದಲ್ಲಿ ಬಹಳ ಎಚ್ಚರಿಕೆಯ ನೀತಿಯನ್ನು ಅನುಸರಿಸಿತು ಹಾಗೂ ತನ್ನ ರಾಜಕೀಯ ಮತ್ತು ಆರ್ಥಿಕ ಹತೋಟಿಯನ್ನು ಬಲಪಡಿಸುವುದಕ್ಕೆ ಹೆಚ್ಚಿನ ಗಮನಹರಿಸಿತು.[3]

ಮತ್ತೊಂದೆಡೆ 18ನೇ ಶತಮಾನದ ಕೊನೆಯಲ್ಲಿ ಇಂಗ್ಲೆಂಡ್ ಆರ್ಥಿಕ, ಸಾಮಾಜಿಕ ಹಾಗೂ ಸೌವಾರ್ತಿಕ ಪುನರುಜ್ಜೀವನದ ಕಾಲವನ್ನು ದಾಟಿರುತ್ತದೆ. 18ನೇ ಶತಮಾನದಲ್ಲಿ ಇಂಗ್ಲೆಂಡಿನ ಕ್ರೈಸ್ತ ಸಭೆಗಳಲ್ಲಿ ಸೌವಾರ್ತಿಕ ಪುನರುಜ್ಜೀವನವುಂಟಾಗಿ, ಪ್ರಪಂಚದ್ಯಾದಂತ ಕ್ರಿಸ್ತನ ಸುವಾರ್ತೆಯನ್ನು ಪ್ರಚಾರ ಮಾಡಬೇಕೆಂಬ ಹಂಬಲ ಅವರಲ್ಲಿ ಬೆಳೆದು, ಹಲವು ಮಿಶನರಿ ಸಂಘಗಳನ್ನು ಕಟ್ಟಿಕೊಳ್ಳುತ್ತಾರೆ.[4] ಭಾರತದಲ್ಲಿ ಕಂಪನಿಗೆ ರಾಜಕೀಯ ಅಧಿಕಾರ ದೊರೆತ ಬಳಿಕ

ಭಾರತವನ್ನು ಪಾಶ್ಚಾತ್ಯ ಅಧ್ಯಾತ್ಮಿಕತೆ ಹಾಗೂ ನೈತಿಕ ಶಿಕ್ಷಣಕ್ಕೆ ಮುಕ್ತವಾಗಿರಿಸಬೇಕೆಂಬ ಬೇಡಿಕೆ ಇಂಗ್ಲೆಂಡಿನಲ್ಲಿ ಆರಂಭವಾಗುತ್ತದೆ. 1793ರಲ್ಲಿ ಕಂಪನಿಯ ಚಾರ್ಟರ್‌ನ ತಿದ್ದುಪಡಿಯ ಸಂದರ್ಭದಲ್ಲಿ ಭಾರತಕ್ಕೆ ಮಿಶನರಿಗಳನ್ನು ಕಳುಹಿಸಲು ಅನುಮತಿ ನೀಡಬೇಕೆಂಬ ಪ್ರಬಲವಾದ ಬೇಡಿಕೆಯನ್ನು ಬ್ರಿಟಿಷ್ ಪಾರ್ಲಿಮೆಂಟಿನ ಮುಂದಿರಿಸಿದರೂ, ಭಾರತೀಯರ ಧಾರ್ಮಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದು ದಂಗೆಗೆ ಕಾರಣವಾಗಬಹುದೆಂಬ ಕಾರಣದಿಂದ ಮಿಶನರಿಗಳಿಗೆ ಪ್ರವೇಶವನ್ನು 1793ರ ಚಾರ್ಟರ್‌ನಲ್ಲಿ ನಿರಾಕರಿಸಲಾಗುತ್ತದೆ. ಇಷ್ಟಾದರೂ ಮಿಶನರಿಗಳಿಗೆ ಅನುಮತಿ ನೀಡಬೇಕೆಂಬ ಹೋರಾಟ ಇಂಗ್ಲೆಂಡಿನಲ್ಲಿ ನಿಲ್ಲದೆ, ಅದು ಪ್ರಬಲಗೊಳ್ಳುತ್ತಾ ಮುಂದುವರಿಯುತ್ತದೆ. ಚಾರ್ಲ್ಸ್ ಗ್ರ್ಯಾಂಟ್, ಡೇವಿಡ್ ಬ್ರೌನ್, ವಿಲಿಯಂ ಕೇರಿ, ಕ್ಲೌಡಿಯಸ್ ಬುಖನನ್, ಡಾನಿಯೇಲ್ ಕೊರ್ರಿ, ಹೆನ್ರಿ ಮಾರ್ಟಿನ್, ವಿಲಿಯಂ ವಿಲ್‌ಭರ್ ಪೋರ್ಸ್, ತೋಮಸ್ ತೋಮಾಸನ್ ಮುಂತಾದವರು ಭಾರತದಲ್ಲಿ ಮತ ಪ್ರಚಾರ ನಡೆಸಲು ಅವಕಾಶ ಕಲ್ಪಿಸುವಂತೆ ಪ್ರಬಲ ಹೋರಾಟವನ್ನು ಸಂಘಟಿಸುತ್ತಾರೆ. ಹೀಗೆ 18ನೇ ಶತಮಾನದವರೆಗೆ ಕಂಪನಿ ಮತ ಪ್ರಚಾರಕ್ಕೆ ಯಾವುದೇ ಅವಕಾಶವನ್ನು ಭಾರತದಲ್ಲಿ ಕಲ್ಪಿಸದಿರುವುದನ್ನು ಗಮನಿಸಬಹುದು. ಆದರೆ ಈ ಕಾಲದಲ್ಲಿ ಕೆಲವು ಮಿಶನರಿಗಳಾದ ಡಬ್ಲ್ಯೂ. ಟಿ. ರಿಂಗಲ್ ಟೌಬ ಕನ್ಯಾಕುಮಾರಿಯಲ್ಲಿ, ಜಾನ್ ಹ್ಯಾಂಡ್ಸ್ ಬಳ್ಳಾರಿ ಪ್ರದೇಶದಲ್ಲಿ ಕಾರ್ಯನಿರ್ವಹಿಸಿದ್ದಾಗ ಬ್ರಿಟಿಷ್ ಅಧಿಕಾರಿಗಳು ಯಾವ ಆಕ್ಷೇಪಣೆಯನ್ನು ಎತ್ತಿರಲಿಲ್ಲ. ಬಹುಶಃ ಕಂಪನಿಯ ಅಧಿಕಾರಿಗಳು ಇವರ ಬಗ್ಗೆ ಅಷ್ಟೊಂದು ಕಟ್ಟು ನಿಟ್ಟಿನ ನೀತಿಯನ್ನು ಅನುಸರಿಸಿಲ್ಲದಿರಬೇಕು. ಅದೇ ರೀತಿ ಬ್ರಿಟಿಷರು ವಿಲಿಯಂ ಕೇರಿಯಂತಹ ಕೆಲವು ಮಿಶನರಿಗಳ ಸೇವೆಯನ್ನು ಈ ಕಾಲದಲ್ಲಿ ಪಡೆದಿರುವುದನ್ನು ಗಮನಿಸಬಹುದು.[5]

1813ರಲ್ಲಿ ಚಾರ್ಟರ್ ಕಾಯ್ದೆಯ ತಿದ್ದುಪಡಿಯ ಸಂದರ್ಭದಲ್ಲಿ ಮಿಶನರಿಗಳ ಸ್ನೇಹಿತರು, ಮಿಶನರಿಗಳು ಭಾರತ ಪ್ರವೇಶಿಸಲು ತಕ್ಕುದಾದ ಕಾನೂನನ್ನು ಜಾರಿಗೊಳಿಸುವಲ್ಲಿ ಸಫಲರಾಗುತ್ತಾರೆ. ಇದರಂತೆ 'ಭಾರತೀಯರಲ್ಲಿ ಧಾರ್ಮಿಕ ಹಾಗೂ ಇನ್ನಿತರ ಜ್ಞಾನವನ್ನು ಹಬ್ಬಿಸುವ ಮತ್ತು ಅವರ ನೈತಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಭಾರತಕ್ಕೆ ಹೋಗುವ ಜನರಿಗೆ ಶಾಸನಬದ್ಧವಾಗಿ ಸಕಲ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು' ಎಂಬ ಅಂಶಗಳನ್ನು ಸೇರಿಸಲಾಗುತ್ತದೆ. ಅದೇ ರೀತಿ ಮುಂದೆ ಭಾರತಕ್ಕೆ ಹೋಗುವ ಮಿಶನರಿಗಳು ಅಲ್ಲಿನ ಸರಕಾರಕ್ಕೆ ವಿಧೇಯರಾಗಬೇಕು ಹಾಗೂ ಅಲ್ಲಿನ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ನೋಡಿಕೊಂಡು ಹೋಗಬೇಕೆಂಬ ಎಚ್ಚರಿಕೆಯನ್ನು ನೀಡಲಾಗಿತ್ತು. ಇದರೊಂದಿಗೆ ಇಂಗ್ಲೀಷ್ ಹಾಗೂ ಸ್ಕೋಟಿಷ್ ಮಿಶನರಿಗಳು (English and scotch missionary societies) ಭಾರತದಲ್ಲಿ ಮತ ಪ್ರಚಾರವನ್ನು ಆರಂಭಿಸುತ್ತವೆ. ಪುನಃ 1833ರಲ್ಲಿ ಚಾರ್ಟರ್ ಕಾಯ್ದೆಯು ಪುನಃ ತಿದ್ದುಪಡಿಗೊಂಡಾಗ, ಭಾರತವನ್ನು ಪ್ರಪಂಚದ ಎಲ್ಲಾ

ದೇಶಗಳ ಮಿಶನರಿಗಳಿಗೂ ಮುಕ್ತವಾಗಿರಿಸಲಾಗುತ್ತದೆ. ಈ ಅನುಮತಿಯೊಂದಿಗೆ ಯೂರೋಪಿನ ಹಾಗೂ ಅಮೇರಿಕಾದ ಹಲವು ಮಿಶನರಿ ಸಂಘಗಳು, ಭಾರತದಲ್ಲಿ ತಮ್ಮ ಕಾರ್ಯವನ್ನು ಆರಂಭಿಸುತ್ತವೆ. ಇದರಂತೆ ಬಾಸೆಲ್ ಮಿಶನ್ 1834 ರಲ್ಲಿಯೇ ತನ್ನ ಕಾರ್ಯವನ್ನು ಭಾರತದಲ್ಲಿ ಆರಂಭಿಸುವುದನ್ನು ಗಮನಿಸಬಹುದು.[6]

ಬಾಸೆಲ್ ಮಿಶನಿನತ್ತ ಬ್ರಿಟಿಷ್ ನೀತಿ:

14ನೇ ಅಕ್ಟೋಬರ್ 1834ರಂದು ಬಾಸೆಲ್ ಮಿಶನಿನ ಮೂವರು ಮಿಶನರಿಗಳಾದ ಸಾಮ್ಯೂವೆಲ್ ಹೆಬಿಕ್, ಜೋನ್ ಕ್ರಿಸ್ಟೋಫ್ ಲೇಹ್ಣನರ್ ಮತ್ತು ಕ್ರಿಸ್ಟೋಫ್ ಲಿಯೋನ್‌ಲ್‌ಹಾರ್ಡ್ ಗ್ರೈನರ್‌ರವರು (Rev. Samuel Hebich, John Christoph Lehner and Christoph Leonhard Greiner) ಕ್ಯಾಲಿಕಟ್‌ಗೆ ಆಗಮಿಸಿದಾಗ ಅಲ್ಲಿನ ಬ್ರಿಟಿಷ್ ಅಧಿಕಾರಿಯಾಗಿದ್ದ (British Judge in Calicut, Nelson) ನೆಲ್ಸನ್‌ರವರು ಇವರನ್ನು ಆತ್ಮೀಯವಾಗಿ ಸ್ವಾಗತಿಸಿ, ಆತನ ಮನೆಯಲ್ಲಿಯೇ ತಂಗಲು ಅವಕಾಶ ಕಲ್ಪಿಸುತ್ತಾನೆ. ಈ ಮಿಶನರಿಗಳು ಮಂಗಳೂರಿಗೆ ಮುಂದುವರಿಯಲು ಉದ್ದೇಶಿಸಿರುವುದನ್ನು ತಿಳಿದು, ಮಂಗಳೂರಿನ ಬ್ರಿಟಿಷ್ ಅಧಿಕಾರಿಯಾಗಿದ್ದ (Sub-Collector of Mangalore, Findley Anderson) ಆತನ ಸ್ನೇಹಿತ ಫಿನ್ಡ್ಲೇ ಆ್ಯಡರ್‌ಸನ್‌ಗೆ ಪತ್ರ ಬರೆದು ಈ ಮಿಶನರಿಗಳಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ಮಾಡುವಂತೆ ತಿಳಿಸಿ, ಪತ್ರಕ್ಕೆ ಪ್ರತ್ಯುತ್ತರ ಬರುವವರೆಗೆ ಮಿಶನರಿಗಳನ್ನು ತನ್ನೊಂದಿಗೆನೇ ಇರಿಸಿಕೊಳ್ಳುತ್ತಾನೆ. ಆ್ಯಡರ್‌ಸನ್‌ಗೆ ಪತ್ರ ತಲುಪಿದ ಕೂಡಲೇ ಮಂಗಳೂರಿಗೆ ಪ್ರಯಾಣಿಸಿದ ಮಿಶನರಿಗಳನ್ನು ಆ್ಯಡರ್‌ಸನ್ ಸ್ವಾಗತಿಸುವುದು ಮಾತ್ರವಲ್ಲದೇ ಮುಂದಿನ 20 ವರ್ಷಗಳವರೆಗೆ ಆತ ಬಾಸೆಲ್ ಮಿಶನರಿಗಳ ಉತ್ತಮ ಸ್ನೇಹಿತನಾಗಿರುತ್ತಾನೆ. ಹೀಗೆ ಪ್ರಾರಂಭದಲ್ಲಿಯೇ ಬಾಸೆಲ್ ಮಿಶನರಿಗಳಿಗೆ ಬ್ರಿಟಿಷ್ ಅಧಿಕಾರಿಗಳಿಂದ ಉತ್ತಮ ಬೆಂಬಲ ದೊರಕಿರುವುದನ್ನು ಗಮನಿಸಬಹುದು. 1857 ದಂಗೆಯ ಸಂದರ್ಭದಲ್ಲಿ ಬ್ರಿಟಿಷ್ ಸರಕಾರ ಯಾವುದೇ ಮಿಶನರಿ ಸಂಘಟನೆಗಳಿಗೆ ಸಹಾಯ ಮಾಡುವ ನೀತಿಯನ್ನು ಅನುಸರಿಸುವುದಿಲ್ಲ. ಆದರೆ ಬಾಸೆಲ್ ಮಿಶನರಿಗಳಿಗೆ ಅವರ ಕಾರ್ಯವನ್ನು ಮೊದಲಿನಂತೆ ಮುನ್ನಡೆಸಲು ಅವಕಾಶ ಕಲ್ಪಿಸುತ್ತದೆ. ಹೀಗೆ 19ನೇ ಶತಮಾನದ ಪ್ರಥಮಾರ್ಧದಲ್ಲಿ ಕಂಪನಿ ಅಧಿಕಾರಿಗಳು ದಕ್ಷಿಣ ಭಾರತದಲ್ಲಿ ಜರ್ಮನ್ ಮಿಶನರಿಗಳನ್ನು ಸ್ವಾಗತಿಸಿ, ಬೆಂಬಲಿಸಿದ್ದರು ಎಂಬುದು ಗಮನಾರ್ಹ.[7]

1858ರ ನಂತರ ಭಾರತವು ಬ್ರಿಟಿಷ್ ರಾಣಿಯ ನೇರ ಆಳ್ವಿಕೆಗೆ ಒಳಪಟ್ಟ ಮೇಲೂ ಮಿಶನರಿ ಚಟುವಟಿಕೆಗಳು ಯಾವುದೇ ಅಡೆತಡೆಗಳಿಲ್ಲದೆ ಮುಂದುವರಿಯುತ್ತವೆ. ಬ್ರಿಟಿಷ್ ಸರಕಾರವು

ತನ್ನ ನೇರವಾದ ಸಹಾಯವನ್ನು ಮಿಶನರಿಗಳಿಗೆ ನೀಡದಿದ್ದರೂ, ಅದರ ಹಲವು ಅಧಿಕಾರಿಗಳು ವೈಯಕ್ತಿಕ ನೆಲೆಯಲ್ಲಿ ಬಾಸೆಲ್ ಮಿಶನಿಗೆ ಮಾತ್ರವಲ್ಲದೇ ಇತರ ಮಿಶನ್ ಸಂಘಗಳಿಗೂ ಸಹಾಯವನ್ನು ಮಾಡಿದ್ದರು. 1858ರ ನಂತರ ಬ್ರಿಟಿಷ್ ಸರಕಾರ ಧಾರ್ಮಿಕವಾಗಿ ತನ್ನ 'ತಟಸ್ಥ' ನೀತಿಯನ್ನು ಅನುಸರಿಸುತ್ತದೆ. ಬ್ರಿಟಿಷ್ ಸರಕಾರ ಎಲ್ಲಾ ಮತದವರಿಗೂ ತಮ್ಮ ಮತವನ್ನು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಕೊಟ್ಟದ್ದು ಮಿಶನರಿ ಸಂಘಗಳಿಗೆ ತಮ್ಮ ಕಾರ್ಯವನ್ನು ವಿಸ್ತರಿಸಲು ಸಾಧ್ಯವಾಯಿತ್ತೆನ್ನಬಹುದು. ಮತ್ತೊಂದೆಡೆ ಬ್ರಿಟಿಷ್ ಅಧಿಕಾರಿಗಳ[8] ಅತ್ಯಗತ್ಯದ ಬೆಂಬಲವು ಬಾಸೆಲ್ ಮಿಶನರಿಗಳಿಗೆ ತಮ್ಮ ಕಾರ್ಯವನ್ನು ವಿಸ್ತರಿಸಲು ಬಹು ಉಪಯುಕ್ತವಾಗುತ್ತದೆ. ಭಾರತದಲ್ಲಿ ಬಾಸೆಲ್ ಮಿಶನಿನ ಮೊದಲ ಠಾಣ್ಯವಾದ ಮಂಗಳೂರಿನ ಬಲ್ಮಠವನ್ನು ಮಂಗಳೂರಿನ ಬ್ರಿಟಿಷ್ ಕಲೆಕ್ಟರ್ ಆಗಿದ್ದಂತಹ ಬ್ಲೇರ್ (Blair) ದಾನವಾಗಿ ನೀಡಿದ್ದಾಗಿದ್ದು, ಬಾಸೆಲ್ ಮಿಶನ್ ತನ್ನ ಮೊದಲ ಪ್ರೆಸ್ ಆರಂಭಿಸಿದ ತಲಚ್ಚೇರಿಯ ಹತ್ತಿರದ ನೆಟ್ಟೂರಿನ (Nettur) ಭೂಮಿಯನ್ನು ಬ್ರಿಟಿಷ್ ಜಡ್ಜ್ ಆಗಿದ್ದ ಥೋಮಸ್ ಸ್ಟ್ರೇಂಜ್ (Thomas Strange) ದಾನವಾಗಿ ನೀಡಿದ್ದಾಗಿತ್ತು. ಮತ್ತೊಬ್ಬ ಬ್ರಿಟಿಷ್ ಅಧಿಕಾರಿ ಪ್ರಾಸೆರ್ (Fraser) ಕೊಡಗಿನಲ್ಲಿ ಮಿಶನರಿ ಕಾರ್ಯಕ್ಕೆ ಹಣಕಾಸಿನ ನೇರವು ನೀಡಿದ್ದ. ಶ್ರೀಮಂತ ಬ್ರಿಟಿಷ್ ವ್ಯಕ್ತಿ ಕಾಸ ಮೇಜರ (Casa Major) ಕೈಟಿಯನ್ನು (Kaity, Nilgiri) ಬಾಸೆಲ್ ಮಿಶನಿಗೆ ದಾನವಾಗಿ ನೀಡಿದ್ದ. ಅದೇ ರೀತಿ ಬಾಂಬೆ ಸರಕಾರವು ಬಾಸೆಲ್ ಮಿಶನರಿಗಳ ಸಹಾಯಕ್ಕೆ ಧಾವಿಸಿ ಬೇಟಗೆರಿಯ ಹತ್ತಿರದ ಮಲಸಮುದ್ರದ (Malasamudra) ಪ್ರದೇಶದಲ್ಲಿ 116 ಎಕರೆ ಭೂಮಿಯನ್ನು ಬಾಸೆಲ್ ಮಿಶನಿಗೆ ನೀಡಿತ್ತು.[9] ಹೀಗೆ ಬಾಸೆಲ್ ಮಿಶನಿಗೆ ಬ್ರಿಟಿಷ್ ಅಧಿಕಾರಿಗಳು ತಮ್ಮ ವೈಯಕ್ತಿಕ ನೆಲೆಯಲ್ಲಿ ಸಾಕಷ್ಟು ಬೆಂಬಲವನ್ನು ನೀಡಿದ್ದರು. ಆದರೆ ಪ್ರಥಮ ಜಾಗತಿಕ ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನಿನಲ್ಲಿ ಸಾಕಷ್ಟು ಮೊತ್ತದ ಜರ್ಮನ್ ಅಸ್ತಿತ್ವವನ್ನು ಮನಗಂಡ ಬ್ರಿಟಿಷರು ಅದನ್ನು 'ವೈರಿ ಮಿಶನ್' ಎಂದು ಸಾರುತ್ತಾರೆ ಹಾಗೂ ಬಾಸೆಲ್ ಮಿಶನ್ ಕಾರ್ಯಚರಣೆಯನ್ನು ನಿರ್ಭಂದಿಸುತ್ತಾರೆ. ಬಾಸೆಲ್ ಮಿಶನಿನಲ್ಲಿದ್ದ ಜರ್ಮನ್ ಮಿಶನರಿಗಳು ಜರ್ಮನ್ ಸರಕಾರದ ಗುಪ್ತಚಾರಿಗಳಂತೆ ಕಾರ್ಯನಿರ್ವಹಿಸಬಹುದೆಂಬ ಭಯದಿಂದ ಈ ನಿರ್ಧಾರವನ್ನು ಕೈಗೊಂಡಿತ್ತು. ಆದರೆ ಬಾಸೆಲ್ ಮಿಶನರಿಗಳು ಈ ರೀತಿಯ ಯಾವುದೇ ಕಾರ್ಯದಲ್ಲಿ ಭಾಗಿಯಾಗಿರದೇ ಬ್ರಿಟಿಷರಿಗೆ ವಿಧೇಯರಾಗಿದ್ದರು ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಬ್ರಿಟಿಷ್ ವಸಾಹತುಶಾಹಿ ಆಡಳಿತಕ್ಕೆ ಬಹಳಷ್ಟು ವಿಧೇಯರಾಗಿದ್ದ ಬಾಸೆಲ್ ಮಿಶನರಿಗಳು[10], ಬ್ರಿಟಿಷ್ ಅಧಿಕಾರಿಗಳೊಂದಿಗೆ ಉತ್ತಮ ಸಂಬಂಧವನ್ನು ಇರಿಸಿದ್ದರು. ಆದರೆ 20ನೇ

ಶತಮಾನದಲ್ಲಿ ಭಾರತದಾದ್ಯಂತ ಪ್ರಬಲ ರಾಷ್ಟ್ರೀಯ ಚಳುವಳಿ ಉಗಮಿಸಿದ ಸಂದರ್ಭದಲ್ಲಿ ಭಾರತದ ರಾಷ್ಟ್ರೀಯ ಹೋರಾಟದ ಬಗ್ಗೆ ಬಾಸೆಲ್ ಮಿಶನರಿಗಳ ನಿಲುವುಗಳೇನಾಗಿದ್ದವು? ಬಾಸೆಲ್ ಮಿಶನರಿಗಳು ಸ್ಥಳೀಯ ಕ್ರೈಸ್ತರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಉತ್ತೇಜಿಸಿದ್ದಾರೋ ಅಥವಾ ತಮ್ಮ ಪತ್ರಿಕೆಗಳ ಮೂಲಕ ಸ್ವಾತಂತ್ರ್ಯ ಹೋರಾಟದ ಬಗ್ಗೆ ಯಾವ ರೀತಿಯ ದೃಷ್ಟಿಕೋನಗಳನ್ನು ಹರಿಸಿದ್ದಾರೆ ಎಂಬುದು ಬಾಸೆಲ್ ಮಿಶನ್ ಬಗ್ಗೆ ಉದ್ಭವಿಸುವ ಗಮನಾರ್ಹ ಪ್ರಶ್ನೆಗಳಾಗಿವೆ. ಈ ವಿಚಾರಗಳನ್ನು ಚರ್ಚಿಸುವ ಸಂದರ್ಭದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರೈಸ್ತರ ಭಾಗವಹಿಸುವಿಕೆ ಹೇಗಿತ್ತು? ಹಾಗೂ ಹೋರಾಟದ ಬಗ್ಗೆ ಇತರ ಮಿಶನರಿಗಳ ನಿಲುವುಗಳೇನೆಂಬುದನ್ನು ಚರ್ಚೆಗೊಳಪಡಿಸಬೇಕಾಗಿದೆ.

ರಾಷ್ಟ್ರೀಯ ಹೋರಾಟದಲ್ಲಿ ಕ್ರೈಸ್ತರ ಪಾತ್ರ:

ಭಾರತೀಯ ಕ್ರೈಸ್ತರು ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಆರಂಭದ ಕಾಲದಿಂದಲೇ ಭಾಗವಹಿಸಿದ್ದರು. ಬಂಗಾಲದ ಕ್ರೈಸ್ತರಾಗಿದ್ದ ಕಾಲಿಚರಣ ಬ್ಯಾನರ್ಜಿಯು ಕಾಂಗ್ರೆಸಿನ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಆರಂಭದ ವರ್ಷಗಳಲ್ಲಿ ಭಾರತೀಯ ಕ್ರೈಸ್ತರು ರಾಷ್ಟ್ರೀಯ ಕಾಂಗ್ರೆಸನ್ನು ಬೆಂಬಲಿಸಿ, ಅದರ ಅಧಿವೇಶನಗಳಲ್ಲಿ ಭಾಗವಹಿಸಿದ್ದರು. 1885ರಲ್ಲಿ ಮುಂಬಯಿಯಲ್ಲಿ ನಡೆದ ಕಾಂಗ್ರೆಸಿನ ಮೊದಲ ಅಧಿವೇಶನದಲ್ಲಿ ಭಾಗವಹಿಸಿದ್ದ 72 ಸದಸ್ಯರಲ್ಲಿ ಇಬ್ಬರು ಭಾರತೀಯ ಕ್ರೈಸ್ತರು ಹಾಗೂ ಒಬ್ಬ ಕ್ರೈಸ್ತ ಮಿಶನರಿಯಾಗಿದ್ದರು. 1886ರಲ್ಲಿ ಕಲ್ಕತ್ತಾದಲ್ಲಿ ನಡೆದ 2ನೇ ಅಧಿವೇಶನದಲ್ಲಿ 5 ಭಾರತೀಯ ಕ್ರೈಸ್ತರು ಹಾಗೂ ಒಬ್ಬ ಮಿಶನರಿ ಭಾಗವಹಿಸಿದರೆ, 1887ರಲ್ಲಿ ಮದ್ರಾಸಿನಲ್ಲಿ ನಡೆದ ಅಧಿವೇಶನದಲ್ಲಿ ಹಾಜರಿದ್ದ 607 ಸದಸ್ಯರಲ್ಲಿ 35 ಸದಸ್ಯರು ಕ್ರೈಸ್ತರಾಗಿದ್ದು, ಅವರಲ್ಲಿ 15 ಮಂದಿ ಭಾರತೀಯ ಕ್ರೈಸ್ತರಿದ್ದರು.[11] 1888ರಲ್ಲಿ ಅಲಹಾಬಾದ್‌ನಲ್ಲಿ ನಡೆದ ನಾಲ್ಕನೇ ಅಧಿವೇಶನದಲ್ಲಿ 22 ಮಂದಿ ಭಾರತೀಯ ಕ್ರೈಸ್ತರು, 16 ಮಂದಿ ಕ್ರೈಸ್ತ ಮಿಶನರಿಗಳಿದ್ದರೆ, 1889ರ ಮುಂಬಯಿ ಅಧಿವೇಶನದಲ್ಲಿ 31 ಭಾರತೀಯ ಕ್ರೈಸ್ತರು, 23 ಕ್ರೈಸ್ತ ಮಿಶನರಿಗಳು ಹಾಗೂ 3 ಕ್ರೈಸ್ತ ಸ್ತ್ರೀಯರು ಭಾಗವಹಿಸಿದ್ದರು.[12] ತದನಂತರ 1890ರ ಕಲ್ಕತ್ತಾ ಅಧಿವೇಶನದಲ್ಲಿ 14 ಭಾರತೀಯ ಕ್ರೈಸ್ತರು ಹಾಗೂ 1891ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ 11 ಭಾರತೀಯ ಕ್ರೈಸ್ತರು ಭಾಗವಹಿಸಿದ್ದರು.[13] ಹೀಗೆ ಕಾಂಗ್ರೆಸಿನ ಆರಂಭದಿಂದಲೇ ಭಾರತೀಯ ಕ್ರೈಸ್ತರು ಅದರ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲು ಆರಂಭಿಸಿದುದನ್ನು ಗಮನಿಸಬಹುದು. 19ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಭಾರತೀಯ ಕ್ರೈಸ್ತರ ಮೇಲೆ ಹಾಗೂ ಭಾರತೀಯ ಚರ್ಚುಗಳ ಮೇಲೆ ಪ್ರಬಲ ನಿಯಂತ್ರಣ ಹೊಂದಿದ್ದ ಯುರೋಪಿಯನ್ ಮಿಶನರಿಗಳು ಅವರನ್ನು ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಭಾಗವಹಿಸುವಂತೆ ಅಷ್ಟೊಂದು ಉತ್ತೇಜಿಸಲಿಲ್ಲ. ಅದೇ ರೀತಿ ಕೆಲವೊಂದು ಮಿಶನರಿಗಳು,

ಭಾರತೀಯ ಕ್ರೈಸ್ತರು ಕಾಂಗ್ರೆಸ್ ಸೇರುವುದರ ಮಹತ್ವದ ಬಗ್ಗೆ ಸಂಶಯ ಪಡುವವರಾದರು.[14] ಡಬ್ಲ್ಯೂ ಹಾರ್ಪರ್ ಎಂಬ ಮಿಶನರಿಯು ಭಾರತೀಯ ಕ್ರೈಸ್ತರು ಹಿಂದೂ ಜನರೊಂದಿಗೆ ಸೇರಿಕೊಳ್ಳುವುದರಿಂದ ಅಪಾಯವಿದೆ ಎಂದು ಎಚ್ಚರಿಸಿದ್ದನು. ಮುಸಲ್ಮಾನರು ಹಾಗೂ ಫಾರ್ಸಿಗಳು ಈಗಾಗಲೇ ಕಾಂಗ್ರೆಸ್‌ನಿಂದ ದೂರವಾಗಿದ್ದು, ಈಗ ಅದು ಕೇವಲ ಹಿಂದೂ ಮತ್ತು ಕ್ರೈಸ್ತರ ಸಂಘವಾಗಿ ಉಳಿದಿದೆ. ಕ್ರೈಸ್ತರು ಎಷ್ಟರ ಮಟ್ಟಿಗೆ ಕಡಿಮೆ ಸಂಖ್ಯೆಯಲ್ಲಿದ್ದಾರೆಂದರೆ, ಅವರನ್ನು ಅಲ್ಪಸಂಖ್ಯಾತರು ಎಂದು ಹೇಳುವುದು ಕಷ್ಟ ಸಾಧ್ಯವಾಗಿದ್ದು, ಮುಂದೆ ಅವರು ಹಿಂದೂಗಳ ಕರುಣೆಯಲ್ಲಿರಬೇಕಾದೀತು ಎಂದು ಎಚ್ಚರಿಸಿದ್ದನು. ಆದರೆ ಆರಂಭದಲ್ಲಿ ಕಾಂಗ್ರೆಸ್ ಬಗ್ಗೆ ಈ ರೀತಿಯ ಅಭಿಪ್ರಾಯ ಒಂದಿದ್ದ ಮಿಶನರಿಗಳ ಸಂಖ್ಯೆ ವಿರಳವಾಗಿತ್ತು. ಹೆಚ್ಚಾಗಿ ಆರಂಭದಲ್ಲಿ ಮಿಶನರಿಗಳು ಕಾಂಗ್ರೆಸ್ ಪರವಾಗಿದ್ದರು ಎಂಬುದನ್ನು ಗಮನಿಸಬಹುದು. ಮಿಶನರಿಗಳಾದ ಟಿ. ಇ ಸ್ಲೇಟರ್, ಆ್ಯಂಡ್ರೂಸ್ ಹಾಗೂ ಇ. ಗ್ರೀವ್ಸ್ ಭಾರತೀಯ ಕ್ರೈಸ್ತರು ರಾಜಕೀಯದಲ್ಲಿ ಹಾಗೂ ಕಾಂಗ್ರೆಸ್‌ನಲ್ಲಿ ಭಾಗವಹಿಸಬೇಕೆಂದು ತಿಳಿಸಿದ್ದರು.[15]

ಆರಂಭದಲ್ಲಿ ಭಾರತೀಯ ಕ್ರೈಸ್ತರು ರಾಷ್ಟ್ರೀಯ ಕಾಂಗ್ರೆಸಿನ ಚಟುವಟಿಕೆಗಳಲ್ಲಿ ಭಾಗವಹಿಸಿದರೂ, ನಂತರದಲ್ಲಿ ಅವರ ಭಾಗವಹಿಸುವಿಕೆಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. 1890ರ ಅಧಿವೇಶನದಲ್ಲಿ 14, 1892ರಲ್ಲಿ ಇಬ್ಬರು, 1896ರಲ್ಲಿ 9, 1901ರಲ್ಲಿ 6 ಹೀಗೆ ರಾಷ್ಟ್ರೀಯ ಕಾಂಗ್ರೆಸಿನ ಚಟುವಟಿಕೆಗಳಲ್ಲಿ ಕ್ರೈಸ್ತರ ಭಾಗವಹಿಸುವಿಕೆ ಗಣನೀಯವಾಗಿ ಇಳಿಕೆಯಾಗಿರುವುದನ್ನು ಗಮನಿಸಬಹುದು. ಕಾಂಗ್ರೆಸ್‌ನಲ್ಲಿ ಭಾರತೀಯ ಕ್ರೈಸ್ತರ ಭಾಗವಹಿಸುವಿಕೆಯಲ್ಲಿ ಆಗಿರುವ ಇಳಿಕೆಗೆ ಸಂಬಂಧಿಸಿದಂತೆ ಕಾರಣವಾಗಿರುವ ಕೆಲವು ಅಂಶಗಳನ್ನು ನಾವು ಗಮನಿಸಬಹುದು. ಕಾಂಗ್ರೆಸಿನ ಆರಂಭದಲ್ಲಿ ಬ್ರಿಟಿಷ್ ಅಧಿಕಾರಿಗಳು ಅದರಿಂದ ತಮ್ಮ ಆಡಳಿತಕ್ಕೆ ಧಕ್ಕೆಯಾಗದೆಂದು ಭಾವಿಸಿದ್ದು, ಅದು ಭಾರತೀಯರಿಗೆ ತಮ್ಮ ಭಾವನೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿರುವ ವೇದಿಕೆಯಾಗಬಹುದೆಂದು ನಿರೀಕ್ಷಿಸಿದ್ದರು. ಅದೇ ರೀತಿ ಅದರ ಆರಂಭದಲ್ಲಿ ಕಾಂಗ್ರೆಸಿನ ಬೇಡಿಕೆಗಳು ಸಾಮಾನ್ಯವಾಗಿದ್ದು, ಅದರ ನಾಯಕರ ಭಾಷಣಗಳಾಗಲೀ ಅಥವಾ ಅಧಿವೇಶನಗಳಲ್ಲಿನ ನಿರ್ಣಯಗಳಾಗಲೀ ಬ್ರಿಟಿಷ್ ವಿರೋಧಿಯಾಗಿರಲಿಲ್ಲ. ಮಾತ್ರವಲ್ಲದೇ ಅದು ಕ್ರಾಂತಿಕಾರಿ ಅಂಶಗಳನ್ನು ಹೊಂದಿರಲಿಲ್ಲ. ಕಾಂಗ್ರೆಸ್ ಆರಂಭದಲ್ಲಿ ಬ್ರಿಟಿಷರಿಗೆ ವಿಧೇಯತೆಯನ್ನು ತೋರಿಸುತ್ತಾ, ಬ್ರಿಟಿಷ್ ಅಧಿಕಾರದ ಅಗತ್ಯತೆಯನ್ನು ಹಾಗೂ ಅಧೀನತೆಯಲ್ಲಿ ಮುಂದುವರಿಯುವ ಆಸಕ್ತಿಯನ್ನು ವ್ಯಕ್ತಪಡಿಸಿರುತ್ತದೆ. ಆದರೆ ಕಾಂಗ್ರೆಸಿನಲ್ಲಿ ತೀವ್ರಗಾಮಿಗಳ ನಾಯಕತ್ವ ಯಾವಾಗ ಬೆಳೆಯುತ್ತದೋ ಹಾಗೂ ಅದು ಯಾವಾಗ ಬ್ರಿಟಿಷ್ ಆಡಳಿತದ ಕಿತ್ತೊಗೆಯುವಿಕೆಗೆ ಹೋರಾಟ ಆರಂಭಿಸುತ್ತದೋ ಆ ಹಂತದಲ್ಲಿ ಬ್ರಿಟಿಷ್ ಅಧಿಕಾರಿಗಳು

ಕಾಂಗ್ರೆಸಿನ ಚಟುವಟಿಕೆಗಳ ಬಗ್ಗೆ ಸಂಶಯ ಪಡುವವರಾಗುತ್ತಾರೆ. ಅದರ ಕಡೆ ವಿರೋಧಿ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ ಮಾತ್ರವಲ್ಲದೇ ಬ್ರಿಟಿಷ್ ಪಾರ್ಲಿಮೆಂಟ್ ಕಾಂಗ್ರೆಸನ್ನು ಖಂಡಿಸುತ್ತದೆ. ಆದುದರಿಂದ ಕಾಂಗ್ರೆಸಿನ ಪರವಾಗಿದ್ದ ಮಿಶನರಿಗಳು ಕಾಂಗ್ರೆಸನ್ನು ವಿರೋಧಿಸಲು ಆರಂಭಿಸುತ್ತಾರೆ ಹಾಗೂ ಕ್ರೈಸ್ತರು ಕೂಡಾ ಅದರಿಂದ ದೂರವಿರುವಂತೆ ಎಚ್ಚರಿಸುತ್ತಾರೆ. ಕೆಲವು ಕ್ರೈಸ್ತರು ಕಾಂಗ್ರೆಸಿನೊಂದಿಗೆ ಸೇರಿ, ಬ್ರಿಟಿಷ್ ಅಧಿಕಾರಿಗಳ ಒಲವು ಮತ್ತು ಬೆಂಬಲವನ್ನು ಕಳೆದುಕೊಳ್ಳುವುದು ಮೂರ್ಖತನವಾದೀತು ಎಂದು ವಾದಿಸುತ್ತಾರೆ. ಏಕೆಂದರೆ ಭಾರತೀಯ ಕ್ರೈಸ್ತರಿಗೆ ಬ್ರಿಟಿಷ್ ಸರಕಾರದಲ್ಲಿ ಉದ್ಯೋಗಗಳು ಲಭಿಸುತ್ತಿದ್ದವು. ಮಿಶನರಿಗಳು ಕಾಂಗ್ರೆಸಿನಿಂದ ದೂರ ಸರಿದ ಸಂದರ್ಭದಲ್ಲಿ ಮಿಶನರಿಗಳನ್ನೇ ಅವಲಂಬಿಸಿದ್ದ ಭಾರತೀಯ ಕ್ರೈಸ್ತರೂ ಕಾಂಗ್ರೆಸಿನ ಮೇಲೆ ಅನುಮಾನ ಪಟ್ಟು ಅದರಿಂದ ದೂರ ಸರಿಯುತ್ತಾರೆ. ಒಂದು ಕಡೆ ಭಾರತೀಯ ಕ್ರೈಸ್ತರು ತಾವು ಕಾಂಗ್ರೆಸಿನಲ್ಲಿ ಭಾಗವಹಿಸಿದರೆ ಬ್ರಿಟಿಷರು ಭಾರತೀಯ ಕ್ರೈಸ್ತರನ್ನು ದ್ರೋಹಿಗಳೆಂದೂ (ಅವಿಧೇಯರೆಂದು) ಪರಿಗಣಿಸಿಯಾರು ಎಂದು ಭಯ ಪಡುವವರಾದರು. ಮತ್ತೊಂದು ಕಡೆ ಕಾಂಗ್ರೆಸ್ ತನ್ನ ಹೋರಾಟದಲ್ಲಿ ಯಶಸ್ವಿಯಾಗಿ ಭಾರತವು ಸ್ವತಂತ್ರವಾದರೆ, ತಾವು ಬಹುಸಂಖ್ಯಾತ ಹಿಂದೂಗಳ ಕೈಯಲ್ಲಿ ಸಿಲುಕಬಹುದೆಂಬ ಭಯವೂ ಅವರನ್ನು ಕಾಡಿತ್ತು. ಹೀಗೆ ಭಾರತೀಯ ಕ್ರೈಸ್ತರು ಬ್ರಿಟಿಷ್ ಸರಕಾರದ ಅನುಕಂಪವನ್ನು ಉಳಿಸಿಕೊಳ್ಳಲು, ಬ್ರಿಟಿಷ್ ಅಧಿಕಾರದಿಂದ ಲಾಭವನ್ನು ಪಡೆದುಕೊಳ್ಳಲು, ಬಹುಸಂಖ್ಯಾತ ಹಿಂದೂಗಳ ಕಡೆಗಿದ್ದ ಅನುಮಾನಗಳಿಂದ ಹಾಗೂ ಬ್ರಿಟಿಷರು ಭಾರತವನ್ನು ಬಿಟ್ಟರೆ ಏನಾದೀತು? ಎಂಬ ಕಾರಣಗಳಿಂದಾಗಿ ಕಾಂಗ್ರೆಸಿನಿಂದ ಅದೇ ರೀತಿ ರಾಷ್ಟ್ರೀಯ ಹೋರಾಟದಿಂದ ದೂರ ಉಳಿಯುವಂತಾದರು.[16]

ರಾಷ್ಟ್ರೀಯ ಚಳುವಳಿಯಿಂದ ಕ್ರೈಸ್ತರ ಪ್ರತ್ಯೇಕತೆಯು 20ನೇ ಶತಮಾನದಲ್ಲಿಯೂ ಮುಂದುವರಿಯಿತು. ರಾಷ್ಟ್ರೀಯ ಮಟ್ಟದಲ್ಲಿ ಪ್ರೊಟೆಸ್ಟಂಟ್ ಸಭೆಗಳನ್ನು ಒಗ್ಗೂಡಿಸುವ ಸಂಸ್ಥೆಯಾಗಿದ್ದ 'ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಿಲ್' ರಾಷ್ಟ್ರೀಯ ಹೋರಾಟದ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಲು ವಿಫಲವಾಗುತ್ತದೆ. ಮತ್ತೊಂದೆಡೆ ಭಾರತದಲ್ಲಿದ್ದ ಬ್ರಿಟಿಷ್ ಮಿಶನರಿಗಳಿಗೆ ತಮ್ಮ ದೇಶದ ಸರಕಾರದ ವಿರುದ್ಧ ನಿಲ್ಲುವುದು ಅಸಾಧ್ಯವಾಯಿತು. ಇನ್ನುಳಿದಂತೆ ಬ್ರಿಟಿಷೇತರ ಮಿಶನರಿಗಳು ಜಾಗತಿಕ ಯುದ್ಧದ ನಂತರ ಬ್ರಿಟಿಷರ ಕಠಿಣ ಕಾನೂನಿನನ್ವಯ ಕಾರ್ಯಚರಿಸಬೇಕಾಯಿತು. ಅದರಂತೆ ಮಿಶನರಿಗಳು ರಾಜಕೀಯ ಚಟುವಟಿಕೆಗಳಿಂದ ದೂರವಿರಬೇಕಾಗಿತ್ತು. ಸರಕಾರದೊಂದಿಗೆ ಸ್ನೇಹಯುತವಾದ ಸಹಕಾರದಿಂದ ಕಾರ್ಯ ನಿರ್ವಹಿಸಬೇಕಾಗಿತ್ತು. ಶೈಕ್ಷಣಿಕ ಚಟುವಟಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಿಶನರಿಗಳು ತಮ್ಮ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳು ಬ್ರಿಟಿಷ್ ಸರಕಾರಕ್ಕೆ ವಿಧೇಯರಾಗಿರುವಂತೆ ನೋಡಿಕೊಳ್ಳಬೇಕಿತ್ತು.

20ನೇ ಶತಮಾನದಲ್ಲಿ ಬಹುಪಾಲು ಮಿಶನರಿಗಳು ಭಾರತೀಯ ಕ್ರೈಸ್ತರು ಬ್ರಿಟಿಷರಿಗೆ ವಿಧೇಯರಾಗಿರುವುದನ್ನೇ ಅಪೇಕ್ಷಿಸಿದ್ದರು. ಆದರೆ 20ನೇ ಶತಮಾನದಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಭಾರತೀಯ ಕ್ರೈಸ್ತರು ಭಾಗವಹಿಸಬೇಕೆಂದು ಪ್ರತಿಪಾದಿಸಿದ್ದ ಹಲವು ಭಾರತೀಯ ಕ್ರೈಸ್ತರು ಮತ್ತು ಮಿಶನರಿಗಳಿದ್ದರು. ಅವರಲ್ಲಿ ಕೆಲವರೆಂದರೆ ಆ್ಯಂಡ್ರೊಸ್, ಕೆ. ಟಿ. ಪೌಲ, ಎಸ್. ಕೆ ದತ್ತಾ, ವಿ. ಎಸ್. ಅಜರಾಯ ಮುಂತಾದವರು[17]. 'ಇಂಡಿಯನ್ ಕ್ರಿಶ್ಚಿಯನ್ ಅಸೋಸಿಯೇಶನ್'ನ (Indian Christian Assoiciation) ಅಧ್ಯಕ್ಷರಾಗಿದ್ದ ಜೆ. ಆರ್. ಚಿತಂಬರ್‌ರವರು (Rev. J. R Chitamber) ವಿವರಿಸುವಂತೆ ಭಾರತೀಯ ಕ್ರೈಸ್ತರು, ಅವರ ಸಹಚರರನ್ನು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವಂತೆ ಉತ್ತೇಜಿಸುತ್ತಿದ್ದು ಅವರು ನಿಜವಾದ ದೇಶಪ್ರೇಮಿಗಳಾಗಿದ್ದಾರೆ. ಆದರೆ ಅವರ ಅಕ್ರೈಸ್ತ ಸ್ನೇಹಿತರು ಅವರನ್ನು ಕಡೆಗಣಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದರು. ಭಾರತೀಯ ಕ್ರೈಸ್ತರು ಅವರ ಕೆಲಸಗಳಿಗಾಗಿ ವಿದೇಶಿ ಹಣವನ್ನು ಬಳಸಿಕೊಂಡರೂ ಅವರ ದೇಶಭಕ್ತಿ ನಾಶವಾಗಿಲ್ಲ. ಅದೇ ರೀತಿ ಭಾರತೀಯ ಕ್ರೈಸ್ತರು ತೀವ್ರಗಾಮಿಗಳೊಂದಿಗೆ ಸೇರಲು ಸಾಧ್ಯವಿಲ್ಲ ಎಂಬುದಾಗಿ ಹರ್ವೆಸ್ಟ್ ಫಿಲ್ಡ್ ವಿವರಿಸಿತ್ತು.[18]

ಭಾರತದ ರಾಷ್ಟ್ರೀಯ ಚಳುವಳಿಯ ಭಾಗವಾಗಿ ಆರಂಭವಾದ 'ಹೋಮ್ ರೂಲ್ ಚಳುವಳಿ'ಯು ಮದ್ರಾಸ್ ಪ್ರಾಂತ್ಯದ ಮಿಶನರಿಗಳಿಗೆ ಬಹಳಷ್ಟು ಸಮಸ್ಯೆ ಹಾಗೂ ಆತಂಕಕ್ಕೆ ಕಾರಣವಾಗುತ್ತದೆ. ಈ ಹೋರಾಟದ ನಾಯಕಿಯಾದ ಅನಿ ಬೆಸೆಂಟ್‌ರನ್ನು (Annie Besant) ಮಿಶನರಿಗಳು ಬಹಳಷ್ಟು ಟೀಕಿಸುತ್ತಾರೆ. ಬೆಸೆಂಟರು ಈ ಹೋರಾಟದ ನಾಯಕಿಯಾಗಿರುವುದು ದೌರ್ಭಾಗ್ಯ ಎಂಬುದಾಗಿ ವಿಷಾದಿಸುತ್ತಾರೆ. ಈ ಹೋರಾಟದ ಸಂದರ್ಭದಲ್ಲಿ ಮಿಶನರಿಗಳು ಬೆಸೆಂಟರೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡಲಿಲ್ಲ ಮಾತ್ರವಲ್ಲದೇ ಭಾರತೀಯ ಕ್ರೈಸ್ತರು ಬೆಸೆಂಟರ ಹೋರಾಟದಿಂದ ದೂರವಿರಬೇಕೆಂದು ತಿಳಿಸುತ್ತಾರೆ ಹಾಗೂ ಇದಕ್ಕೆ ಹೊರತಾಗಿ ಭಾರತೀಯ ಕ್ರೈಸ್ತರು ಬ್ರಿಟಿಷ್ ಸರಕಾರಕ್ಕೆ ವಿಧೇಯರಾಗಬೇಕೆಂದು ತಿಳಿಸುತ್ತಾರೆ. ಬ್ರಾಹ್ಮಣೇತರ ಚಳುವಳಿಯನ್ನು (Non-Brahmin Movement) ಮಿಶನರಿಗಳು ಹೋಮ್ ರೂಲ್ ಚಳುವಳಿಯ ವಿರುದ್ಧ ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳುತ್ತಾರೆ. ಕೆಲವೊಂದು ಮಿಶನರಿಗಳು ಬ್ರಾಹ್ಮಣೇತರ ಚಳುವಳಿಯನ್ನು ಪ್ರಬಲವಾಗಿ ಪ್ರೋತ್ಸಾಹಿಸುವುದನ್ನು ಗಮನಿಸಬಹುದು. ಭಾರತದಲ್ಲಿನ ಬ್ರಾಹ್ಮಣರ ಪ್ರಾಬಲ್ಯದ ವಿರುದ್ಧ ಹೊಸದಾದ ರಾಜಕೀಯ ಸಂಘಟನೆಯಾದ 'ಜಸ್ಟಿಸ್ ಪಾರ್ಟಿ'ಯು (Justice Party) ರಕ್ಷಕನಂತೆ ಕಾರ್ಯನಿರ್ವಹಿಸಲಿದೆ ಎಂಬ ಅಭಿಪ್ರಾಯವನ್ನು ಮಿಶನರಿಗಳು ವ್ಯಕ್ತಪಡಿಸಿದ್ದರು. ಭಾರತೀಯರ ಸ್ವಾಯತ್ತ ಆಳ್ವಿಕೆಗೆ ಸಿದ್ಧರಾಗುವವರೆಗೆ, ಭಾರತೀಯರಿಗೆಲ್ಲರಿಗೂ ನ್ಯಾಯಯುತವಾದ ಆಳ್ವಿಕೆಯನ್ನು

ಒದಗಿಸಲು ಬ್ರಿಟಿಷ್ ಆಳ್ವಿಕೆಯೇ ಅಗತ್ಯವಾಗಿದೆ ಎಂದು ಮಿಶನರಿಗಳು ಪ್ರತಿಪಾದಿಸಿದ್ದರು.[19] ರೌಲತ್ ಹೋರಾಟವು (Rowlatt Satyagraha) ಭಾರತದಲ್ಲಿ ಮಿಶನರಿಗಳಿಗೆ ಬಹಳಷ್ಟು ಸಂದಿಗ್ಧ ಪರಿಸ್ಥಿತಿಯನ್ನು ತಂದೊಡ್ಡಿತು. ಲಾಹೋರಿನಲ್ಲಿ ಪ್ರೆಸ್‌ಬೇಟೇರಿಯನ್ ಮಿಶನರಿಗಳು (Presbyterian Missionaries) ನಡೆಸುತ್ತಿದ್ದ ಪೋರ್‌ಮಾನ್ ಕ್ರಿಶ್ಚಿಯನ್ ಕಾಲೇಜಿನ (Forman Christian College) ವಿದ್ಯಾರ್ಥಿಗಳು ರೌಲತ್ ಹೋರಾಟದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಕಾಲೇಜಿನ ಮೇಲೆ ಕ್ರಮಕೈಗೊಳ್ಳುವುದಾಗಿ ಒತ್ತಡ ಹೇರುತ್ತದೆ. ಕಾಲೇಜಿನ ಒಟ್ಟು 750 ವಿದ್ಯಾರ್ಥಿಗಳಲ್ಲಿ 50 ವಿದ್ಯಾರ್ಥಿಗಳನ್ನು ಬಿಟ್ಟು ಇತರ ಎಲ್ಲಾ ವಿದ್ಯಾರ್ಥಿಗಳು ಹೋರಾಟದಲ್ಲಿ ಭಾಗವಹಿಸುತ್ತಾರೆ. ಆದುದರಿಂದ ಮಿಶನರಿಗಳು ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅದರಂತೆ ಒಬ್ಬ ವಿದ್ಯಾರ್ಥಿಯನ್ನು ಕಾಲೇಜಿನಿಂದ ತೆಗೆದು ಹಾಕಿ, ಇತರ 6 ವಿದ್ಯಾರ್ಥಿಗಳನ್ನು ಅಮಾನತುಗೊಳಿಸಿ, ಇತರ ಎಲ್ಲಾ ವಿದ್ಯಾರ್ಥಿಗಳಿಗೆ ದಂಡ ವಿಧಿಸಲಾಗುತ್ತದೆ. ಈ ಹೋರಾಟದ ಸಂದರ್ಭದಲ್ಲಿ ಮಿಶನರಿಗಳು ಬ್ರಿಟಿಷರ ಪರವಹಿಸುವುದು ಮಾತ್ರವಲ್ಲದೇ, ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿದ್ದ ವಿದ್ಯಾರ್ಥಿಗಳಿಗೆ ರೌಲತ್ ಕಾಯ್ದೆ ಬಗ್ಗೆ ತಿಳಿ ಹೇಳುವ ಕಾರ್ಯವನ್ನು ಮಾಡುತ್ತಾರೆ. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಅದರಿಂದ ಸಮಸ್ಯೆಗೊಳಗಾಗಿದ್ದ ಪ್ರೆಸ್‌ಬೇಟೇರಿಯನ್ ಮಿಶನರಿಗಳು, ಮುಕ್ತವಾಗಿ ಬ್ರಿಟಿಷ್ ಸರಕಾರಕ್ಕೆ ತಮ್ಮ ಬೆಂಬಲ ಹಾಗೂ ಸಹಕಾರವನ್ನು ಘೋಷಿಸಿದ್ದರು.[20]

1915 ಡಿಸೆಂಬರ್ 28ರಂದು ನಡೆದ ಅಖಿಲ ಭಾರತೀಯ ಕ್ರಿಶ್ಚಿಯನ್ ಕಾನ್ಫರೆನ್ಸ್ (All India Christian Conference) ಭಾರತೀಯ ಕ್ರೈಸ್ತರು ಅನುಸರಿಸಬೇಕಾದ ನೀತಿಯ ಬಗ್ಗೆ ಉಲ್ಲೇಖಿಸುತ್ತಾ, ಅವರು ಬ್ರಿಟಿಷ್ ಸರಕಾರ ನೀತಿಗೆ ಮತ್ತು ಸರಕಾರಕ್ಕೆ ವಿಧೇಯರಾಗಿರಬೇಕು ಮಾತ್ರವಲ್ಲದೆ ಅವರ ದೇಶಕ್ಕೂ ವಿಧೇಯರಾಗಿರಬೇಕೆಂದು ತಿಳಿಸಿತ್ತು.[21] ಮುಂದುವರಿದು 1920 ಕ್ಕಾಗುವಾಗ, ಕ್ರೈಸ್ತರ ನೀತಿಗಳಲ್ಲಿ ಇನ್ನಷ್ಟು ಬದಲಾವಣೆಗಳಾದುದನ್ನು ಗಮನಿಸಬಹುದು. 1920ರಲ್ಲಿ ಕಲ್ಕತ್ತಾದಲ್ಲಿ ನಡೆದ 7ನೇ 'ಆಲ್ ಇಂಡಿಯಾ ಕಾನ್ಫರೆನ್ಸ್ ಆಫ್ ಇಂಡಿಯನ್ ಕ್ರಿಶ್ಚಿಯನ್ಸ್' (All India Conference of Indian Christians) ದೇಶದ ಆರೋಗ್ಯದಾಯಕ ರಾಜಕೀಯ ಚಳುವಳಿಗಳಲ್ಲಿ ಭಾರತೀಯ ಕ್ರೈಸ್ತರು ಕ್ರಿಯಾತ್ಮಕವಾಗಿ ಭಾಗವಹಿಸಬೇಕು ಹಾಗೂ ದೇಶಕ್ಕೆ ಉತ್ತಮವಾದುದನ್ನು ಬೆಂಬಲಿಸಬೇಕು ಮತ್ತು ದೇಶಕ್ಕೆ ಧಕ್ಕೆಯಾಗುವಂತಹದ್ದನ್ನು ತಿರಸ್ಕರಿಸಬೇಕೆಂಬ ನಿರ್ಣಯವಾಗಿತ್ತು. ಅದೇ ಸಂದರ್ಭದಲ್ಲಿ ಕಾಂಗ್ರೆಸ್‌ನಲ್ಲಿ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅದರ ನೀತಿ ಮತ್ತು ಧೋರಣೆಗಳ ಆಧಾರದ ಮೇಲೆ ಭಾರತೀಯ ಕ್ರೈಸ್ತರು ಕಾಂಗ್ರೆಸನ್ನು ಸೇರಬೇಕೋ

ಬೇಡವೋ ಎಂಬುದನ್ನು ನಿರ್ಧರಿಸಬೇಕೆಂಬ ನಿರ್ಣಯವನ್ನೂ ತೆಗೆದುಕೊಳ್ಳಲಾಗಿತ್ತು. 1921ರಲ್ಲಿ ನಡೆದ 'ಆಲ್ ಇಂಡಿಯ ಕಾನ್ಫರೆನ್ಸ್ ಆಫ್ ಇಂಡಿಯನ್ ಕ್ರಿಶ್ಚಿಯನ್ಸ್'ನಲ್ಲಿ ಭಾರತೀಯ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವಂತಾಗಬೇಕೆಂಬ ಚಿಂತನೆಗಳು ಹೊರ ಹೊಮ್ಮುತ್ತವೆ.[22] ಹೀಗೆ ಭಾರತೀಯ ಕ್ರೈಸ್ತರು ರಾಷ್ಟ್ರೀಯ ಹಿತಾಸಕ್ತಿಗಳಲ್ಲಿ ಗುರುತಿಸಿಕೊಳ್ಳುವ ಮನೋಭಾವವನ್ನು ಹೊಂದಿದ್ದರು ಎಂಬುದು ಈ ಮೇಲಿನ ವಿಚಾರಗಳಿಂದ ತಿಳಿಯಬಹುದು. 20ನೇ ಶತಮಾನದಲ್ಲಿ ಭಾರತೀಯ ಕ್ರೈಸ್ತ ಸಮುದಾಯದಲ್ಲಿ ಉಗಮಿಸಿದ ಶಿಕ್ಷಿತ ವರ್ಗವು ತನ್ನ ಸಮುದಾಯದ ಪರವಾಗಿ ಮಾತನಾಡಲು ಆರಂಭಿಸುತ್ತದೆ. ಇವರು ವಿವಿಧ ಉದ್ಯೋಗಗಳಲ್ಲಿದ್ದು ಆರ್ಥಿಕವಾಗಿ ಸಧೃಡವಾಗಿದ್ದು, ಮಿಶನರಿಗಳ ಪ್ರಬಲ ನಿಯಂತ್ರಣದಲ್ಲಿ ಇರಲಿಲ್ಲವೆಂಬುದನ್ನು ಗಮನಿಸಬಹುದು.

ಕಾಂಗ್ರೆಸಿನತ್ತ ಕ್ರೈಸ್ತ ಪತ್ರಿಕೆಗಳ ದೃಷ್ಟಿಕೋನ:

ಭಾರತದಲ್ಲಿದ್ದ ಕೆಲವೊಂದು ಕ್ರೈಸ್ತ ಪತ್ರಿಕೆಗಳು ಕೂಡಾ ಕಾಂಗ್ರೆಸಿನ ಹಾಗೂ ರಾಷ್ಟ್ರೀಯ ಹೋರಾಟದ ಬಗ್ಗೆ ಭಾರತೀಯ ಕ್ರೈಸ್ತರಿಗೆ ಮಾರ್ಗದರ್ಶನ ನೀಡುವ ಕಾರ್ಯಗಳನ್ನು ನಿರ್ವಹಿಸುವುದನ್ನು ಗಮನಿಸಬಹುದು. 1890ರಲ್ಲಿ ಮೆಡ್ರಾಸ್‌ನಿಂದ ಆರಂಭಿತವಾದ 'ದಿ ಕ್ರಿಶ್ಚಿಯನ್ ಪ್ಯಾಟ್ರಿಯೋಟ್' (The Christian Patriot) ಎಂಬ ವಾರ ಪತ್ರಿಕೆಯು ಭಾರತೀಯರಿಗೆ ಮಾರ್ಗದರ್ಶನ ಮಾಡುವ ಕೆಲಸ ನಿರ್ವಹಿಸಿದ್ದು, ರಾಷ್ಟ್ರೀಯ ಹೋರಾಟ ಮತ್ತು ಕಾಂಗ್ರೆಸ್ ಬಗ್ಗೆ ಚರ್ಚೆಗಳನ್ನು ನಡೆಸುತ್ತದೆ. ಇದು 'ದಿ ಗಾರ್ಡಿಯನ್'ನ ಆರಂಭದ ಮೊದಲು ಪ್ರೊಟೆಸ್ಟೆಂಟ್ ಕ್ರೈಸ್ತರಿಂದ ನಡೆಸಲ್ಪಡುತ್ತಿದ್ದ ಏಕೈಕ ಇಂಗ್ಲೀಷ್ ವಾರ ಪತ್ರಿಕೆಯಾಗಿತ್ತು. ಕಾಂಗ್ರೆಸಿನಲ್ಲಿ ತೀವ್ರಗಾಮಿಗಳ ಉದಯದ ಬಳಿಕ 'ಕ್ರಿಶ್ಚಿಯನ್ ಪ್ಯಾಟ್ರಿಯೋಟ್' ಭಾರತೀಯ ಕ್ರೈಸ್ತರು ಕಾಂಗ್ರೆಸಿನಿಂದ ದೂರವಿರುವಂತೆ ತಿಳಿಸುತ್ತದೆ. ಸ್ವದೇಶಿ ಚಳುವಳಿಯು ತನ್ನ ಉನ್ನತ ಘಟ್ಟಕ್ಕೆ ತಲುಪಿದ ಕಾಲದಲ್ಲಿ ಪತ್ರಿಕೆಯು, ಕಾಂಗ್ರೆಸ್ ಯಾವುದೇ ಭಾರತೀಯ ಕ್ರೈಸ್ತ ಪ್ರತಿನಿಧಿಗಳನ್ನು ಒಳಗೊಂಡಿಲ್ಲ ಎಂಬುದಾಗಿ ತಿಳಿಸುತ್ತದೆ. ಪ್ರಾರಂಭದಿಂದಲೇ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಕಾಲಿಚರಣ್ ಬ್ಯಾನರ್ಜಿಯವರನ್ನು ಅಧ್ಯಕ್ಷರಾಗಿ ಮಾಡಲು ವಿಫಲವಾದ ಕಾಂಗ್ರೆಸ್‌ನ ಧೋರಣೆಯನ್ನು ಉಲ್ಲೇಖಿಸುತ್ತಾ, ಪತ್ರಿಕೆಯು ಕಾಂಗ್ರೆಸ್ ಭಾರತೀಯ ಕ್ರೈಸ್ತರತ್ತ ಕುರುಡನಂತೆ ವರ್ತಿಸುತ್ತಿದ್ದು, ಅದು ಸಂಪೂರ್ಣ ಭಾರತೀಯ ಕ್ರೈಸ್ತರ ಬೆಂಬಲವನ್ನು ಗಳಿಸುವಲ್ಲಿ ವಿಫಲವಾಗಿದೆ. ಆದುದರಿಂದ ಭಾರತೀಯ ಕ್ರೈಸ್ತರು ಅದನ್ನು ಸೇರದಿರುವಂತೆ 'ಕ್ರಿಶ್ಚಿಯನ್ ಪ್ಯಾಟ್ರಿಯೋಟ್' ತಿಳಿಸುತ್ತದೆ. ಪ್ರಮುಖ ಅಲ್ಪ ಸಂಖ್ಯಾತರ (ಕ್ರೈಸ್ತರ) ಆಸಕ್ತಿಯನ್ನು ಕಡೆಗಣಿಸಿದ್ದರಿಂದ ಕಾಂಗ್ರೆಸ್ ರಾಷ್ಟ್ರೀಯ ಸ್ವರೂಪದಾಗಿಲ್ಲ ಎಂಬುದಾಗಿ ಕಾಂಗ್ರೆಸನ್ನು ಪತ್ರಿಕೆಯು ಖಂಡಿಸುತ್ತದೆ. ಕಾಂಗ್ರೆಸ್ ಕೇವಲ ಬ್ರಾಹ್ಮಣರನ್ನು ಒಳಗೊಂಡಿದ್ದು, ಮುಸ್ಲಿಮರನ್ನು ಹಾಗೂ ಮುಖ್ಯವಾಗಿ 90% ದಷ್ಟು ಇರುವ ಕೃಷಿಕರ ಪ್ರಧಾನ್ಯವೇ

ಇಲ್ಲದ ಕಾಂಗ್ರೆಸ್ ರಾಷ್ಟ್ರೀಯ ಸ್ವರೂಪದಲ್ಲ ಎಂದಿದೆ. ಪತ್ರಿಕೆಯು ಸ್ವದೇಶಿ ಚಳುವಳಿಯ ಪ್ರತಿಪಾದಕರನ್ನು ಭಾರತವು ಎಂದೂ ಕಾಣದ 'ಸ್ವಾರ್ಥದ ಧಾರ್ಮಿಕ ತೀವ್ರಗಾಮಿ'ಗಳೆಂದು (Selfish Religious Extrimists) ಕರೆದು, ಕಾಂಗ್ರೆಸ್‌ನ್ನು 'ಕ್ರೂರ ಹಿಂದೂ ಪರ ಸಂಘಟನೆ' (Violent Pro-Hindu Body) ಎಂಬುದಾಗಿ ಬಣ್ಣಿಸುತ್ತದೆ. ಆದುದರಿಂದ ಪತ್ರಿಕೆಯು ಬ್ರಿಟಿಷ್ ಸರಕಾರವನ್ನು ಬೆಂಬಲಿಸುವಂತೆ ತಿಳಿಸುತ್ತಾ, ಬ್ರಿಟಿಷರು ಭಾರತೀಯ ಕ್ರೈಸ್ತರ ಉತ್ತಮ ಸ್ನೇಹಿತರಾಗಿದ್ದು, ಭಾರತೀಯ ಕ್ರೈಸ್ತರು ಸರಕಾರದ ಪರ ವಹಿಸುವುದರಿಂದ ಅವರಿಗೆ ಭದ್ರತೆ ಮತ್ತು ಅವರ ಬೆಂಬಲ ಲಭಿಸಲಿದೆ ಎಂದು ವಾದಿಸುತ್ತದೆ.[23] ಕಾಂಗ್ರೆಸಿನಲ್ಲಿ ತೀವ್ರಗಾಮಿಗಳ ಪತನದ ನಂತರ ಪತ್ರಿಕೆ ತನ್ನ ವಾದದ ಬಗ್ಗೆ ಮರುಪರಿಶೀಲಿಸುವ ಪ್ರಯತ್ನ ಮಾಡುತ್ತದೆ ಹಾಗೂ ಕಾಂಗ್ರೆಸಿನ ಧೋರಣೆಯನ್ನು ಗಮನಿಸಿ ಅದನ್ನು ಸೇರುವ ಚಿಂತನೆ ಮಾಡಬೇಕು ಎಂಬುದಾಗಿ ಭಾರತೀಯ ಕ್ರೈಸ್ತರಿಗೆ ತಿಳಿಸುತ್ತದೆ. ಪತ್ರಿಕೆಯು ಕಾಂಗ್ರೆಸಿನ ಹೋರಾಟದ ಇತರ ವಿಚಾರಗಳ ಬಗ್ಗೆ ಚರ್ಚಿಸಿದ್ದು, ಅದರ ಕೆಲವೊಂದು ಉತ್ತಮ ಕಾರ್ಯ ಚಟುವಟಿಕೆಗಳನ್ನು ಅದು ಗೌರವಿಸಿ ಗಣನೆಗೆ ತೆಗೆದುಕೊಂಡಿತ್ತು.[24] ಹೀಗೆ ಈ ಪ್ರೊಟೆಸ್ಟೆಂಟ್ ಪತ್ರಿಕೆಯು ಕಾಂಗ್ರೆಸ್‌ನಲ್ಲಿ ಭಾರತೀಯ ಕ್ರೈಸ್ತರಿಗೆ ಸೂಕ್ತ ಸ್ಥಾನಮಾನ ನೀಡದ್ದನ್ನು ವಿರೋಧಿಸಿತ್ತು. ಆದರೆ ಕಾಂಗ್ರೆಸಿನ ಬಗ್ಗೆ ಎಚ್ಚರಿಕೆ ವಹಿಸಿ ಅದರಲ್ಲಿ ಭಾಗವಹಿಸುವಂತೆ ತಿಳಿಸಿತ್ತು.

ಕಾಂಗ್ರೆಸಿನ ಆರಂಭದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದ ಭಾರತೀಯ ಕ್ರೈಸ್ತರು ತೀವ್ರಗಾಮಿಗಳ ಕಾಲಾವಧಿಯಲ್ಲಿ ಕಾಂಗ್ರೆಸಿನಿಂದ ದೂರ ಉಳಿದರು. ಆದರೆ ತದನಂತರ 20ನೇ ಶತಮಾನದಲ್ಲಿ ಕೆಲವೊಂದು ಭಾರತೀಯ ಕ್ರೈಸ್ತರು ಮತ್ತು ಮಿಶನರಿಗಳು ಕಾಂಗ್ರೆಸ್ ಹಾಗೂ ರಾಷ್ಟ್ರೀಯ ಹೋರಾಟದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿರುವುದನ್ನು ಗಮನಿಸಬಹುದು. ಇಂಗ್ಲೆಂಡಿನ ಮಿಶನರಿಯಾಗಿದ್ದ ಸಿ. ಎಫ್, ಆ್ಯಂಡ್ರೂಸ್, ಭಾರತೀಯ ಕ್ರೈಸ್ತನಾಗಿದ್ದ ಕೆ. ಟಿ. ಪೌಲ ರಾಷ್ಟ್ರೀಯ ಹೋರಾಟವನ್ನು ಸಕ್ರೀಯವಾಗಿ ಪ್ರೋತ್ಸಾಹಿಸಿ, ಕ್ರೈಸ್ತರು ಅದರಲ್ಲಿ ಭಾಗವಹಿಸುವಂತೆ ಕರೆ ನೀಡುತ್ತಾರೆ. ಅಮೇರಿಕನ್ ಮೆಥೊಡಿಸ್ಟ್ ಮಿಶನರಿಗಳಾದ ಸ್ಟಾನ್ಲೀ ಜೋನ್ಸ್ (Stanley Jones), ಜೆ. ಬಿ. ಹಾಲ್ಸಟೆಡ್ (G. B. Halstead), ಮೌರಿಸ್ ಬಾಲ್‌ಹಂಗೆರ್ (Maurice Ballanger), ಬ್ರಿಟಿಷ್ ಮಿಶನರಿಯಾಗಿದ್ದ ಎಲ್‌ವಿನ್ (Elwin), ಸೊಸೈಟಿ ಫಾರ್ ದಿ ಫ್ರಾಪೋಗೇಶನ್ ಆಫ್ ಗಾಸ್ಪೆಲ್ ಮಿಶನಿನ, ಮಿಶನರಿಯಾಗಿದ್ದ ಜ್ಯಾಕ್ ಸಿ. ವಿನ್ಸ್‌ಲೋ (Jack C. Winslow), ಭಾರತೀಯ ಕ್ರೈಸ್ತರಾಗಿದ್ದ ಎಸ್. ಕೆ. ಜೋರ್ಜ್ (S. K. George), ಜೋರ್ಜ್ ಜೋಸೆಫ್ (George Joseph), ಅಮೃತ್ ಕೌರ್ (Amrit Kaur), ಜೆ. ಸಿ. ಕುಮಾರಪ್ಪ (J. C.

Kumarappa), ಹೆಚ್. ಸಿ. ಮುಖರ್ಜಿ (H. C. Mookerjee) ಮುಂತಾದವರು[25] ರಾಷ್ಟ್ರೀಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದುದನ್ನು ಗಮನಿಸಬಹುದು. ಮಹಾತ್ಮಾ ಗಾಂಧೀಜಿಯವರು ರಾಷ್ಟ್ರೀಯ ಹೋರಾಟಕ್ಕೆ ಧುಮುಕುವುದರೊಂದಿಗೆ ಅದು ದೇಶದಾದ್ಯಂತ ಪ್ರಬಲಗೊಳ್ಳುವುದು ಮಾತ್ರವಲ್ಲದೇ, ದೇಶದ ಎಲ್ಲಾ ವರ್ಗದ ಜನರು ಹೋರಾಟದಲ್ಲಿ ಭಾಗವಹಿಸಲು ಆರಂಭಿಸುತ್ತಾರೆ. ಗಾಂಧೀಜಿಯವರ ಹೋರಾಟದ ಪ್ರಭಾವವು ಕ್ರೈಸ್ತರ ಮೇಲೂ ಆಗಿರುತ್ತದೆ. ಆದರೆ ಇಡೀ ಸಮುದಾಯವೇ ಹೋರಾಟದಲ್ಲಿ ಭಾಗಿಯಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಕೆ. ಟಿ ಪೌಲರವರು ಕ್ರೈಸ್ತ ಸಮುದಾಯ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಬೇಕೆಂದು ಪ್ರಬಲವಾಗಿ ವಾದಿಸುತ್ತಾರೆ. ಆದರೆ ಅದು ಬಹುಸಂಖ್ಯಾತ ಕ್ರೈಸ್ತರ ಮನೋಭಾವವನ್ನು ವ್ಯಕ್ತಪಡಿಸಲಿಲ್ಲ. ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಭಾರತೀಯ ಕ್ರೈಸ್ತರು ಭಾಗವಹಿಸಲಿಲ್ಲ. ಅಖಿಲ ಭಾರತೀಯ ಕ್ರೈಸ್ತರ ಕೂಟವು, ರಾಷ್ಟ್ರೀಯ ಹೋರಾಟಕ್ಕೆ ಬೆಂಬಲವಿತ್ತರೂ ಅಸಹಕಾರ ಚಳುವಳಿಯನ್ನು ಸಂಪೂರ್ಣವಾಗಿ ವಿರೋಧಿಸಿತ್ತು. 1930 ಮತ್ತು 1940 ದಶಕಗಳಲ್ಲಿ ಭಾರತೀಯ ಕ್ರೈಸ್ತರು ಹೆಚ್ಚಾಗಿ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿ, ಕಾಂಗ್ರೆಸಿನ ಕಡೆ ಒಲವಿದ್ದವರಾಗುತ್ತಾರೆ.[26]

ರಾಷ್ಟ್ರೀಯ ಹೋರಾಟದಲ್ಲಿ ಮಿಶನರಿಗಳ ಭಾಗವಹಿಸುವಿಕೆ ನಿಯಂತ್ರಿಸಲು ಬ್ರಿಟಿಷರ ಪ್ರಯತ್ನ:

ಭಾರತೀಯ ಕ್ರೈಸ್ತರು ಹಾಗೂ ಮುಖ್ಯವಾಗಿ ಮಿಶನರಿಗಳು ರಾಷ್ಟ್ರೀಯ ಹೋರಾಟ ಮತ್ತು ಕಾಂಗ್ರೆಸನ್ನು ಬೆಂಬಲಿಸುವುದು, ಭಾಗವಹಿಸುವುದು ಬ್ರಿಟಿಷ್ ಸರಕಾರ ಮತ್ತು ಅದರ ಅಧಿಕಾರಿಗಳಿಂದ ವಿರೋಧಿಸಲ್ಪಡುತ್ತದೆ. ಆದುದರಿಂದ ಬ್ರಿಟಿಷ್ ಸರಕಾರ ಇವರುಗಳನ್ನು ನಿಯಂತ್ರಿಸಲು ಸಮರ್ಪಕವಾದ ನೀತಿ ನಿಯಮಗಳನ್ನು ಸಿದ್ಧಪಡಿಸುತ್ತದೆ. ಈ ನೀತಿ ನಿಯಮಗಳೇ 'ಮೆಮೊರ್‍ಯಾಂಡ'ಗಳಾಗಿವೆ. ಇವು ಭಾರತದಲ್ಲಿ ಮಿಶನರಿ, ಶೈಕ್ಷಣಿಕ ಹಾಗೂ ಪರೋಪಕಾರಿ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದೇಶಿಯರಿಗೆ, ಭಾರತಕ್ಕೆ ಪ್ರವೇಶ ನೀಡುವ ಕುರಿತು ಹಾಗೂ ಅವರು ಅನುಸರಿಬೇಕಾದ ಇತರ ವಿಚಾರಗಳ ಕುರಿತು ಜಾಗತಿಕ ಸಮರದ ನಂತರ ತಕ್ಷಣದಲ್ಲಿ ಬ್ರಿಟಿಷ್ ಸರಕಾರ ಜಾರಿಗೆ ತಂದ ನಿಬಂಧನೆಗಳಾಗಿವೆ. ಆರಂಭದಲ್ಲಿ ಇವುಗಳನ್ನು ವೈರಿ ದೇಶದ ನಾಗರೀಕರ (Enemy Nationals) ಚಟುವಟಿಕೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಜಾರಿಗೆ ತರಲಾಗುತ್ತದೆ. ಆದರೆ ಬಹುಬೇಗ ಬ್ರಿಟಿಷ್ ಸರಕಾರ ಇವುಗಳನ್ನು ವಿದೇಶಿ ಮಿಶನರಿಗಳು (Non British) ರಾಷ್ಟ್ರೀಯ ಹೋರಾಟವನ್ನು ಬೆಂಬಲಿಸುವುದನ್ನು ನಿಯಂತ್ರಿಸಲು ಬಳಸಲು ಮುಂದಾಗುತ್ತದೆ. ಮೆಮೊರ್‍ಯಾಂಡಗಳು ಭಾರತದಲ್ಲಿ ಮಿಶನರಿಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಪರಿಣಾಮಕಾರಿ ಅಸ್ತ್ರವಾಗಿ ಪರಿಣಮಿಸುತ್ತವೆ. ಅದೇ ರೀತಿ ಮಿಶನರಿಗಳು ತಮ್ಮ ಶಿಕ್ಷಣ ಸಂಸ್ಥೆಗಳ

ಮೂಲಕ ಜನಸಾಮಾನ್ಯರ ಮೇಲೆ ಪ್ರಭಾವ ಬೀರಲು ಶಕ್ತರೆಂಬುದನ್ನು ಮನಗಂಡ ಬ್ರಿಟಿಷ್ ಸರಕಾರ ಈ ಕಾನೂನುಗಳನ್ನು ಜಾರಿಗೊಳಿಸುತ್ತದೆ.[27] 'ಮೆಮೊರ್ಯಾಂಡ'ಗಳ ಪ್ರಕಾರ ಯಾವುದೇ ಮಿಶನರಿಗಳೂ ಬ್ರಿಟಿಷರಿಗೆ ಅವಿಧೇಯರಾಗಿದ್ದಾರೆಂದು ಕಂಡುಬಂದರೆ ಅವರುಗಳ ಮೇಲೆ ಕ್ರಮಕೈಗೊಳ್ಳಬಹುದಿತ್ತು. ಸರಕಾರವು ಮಿಶನರಿಯ ಬಗ್ಗೆ ಸ್ವತಂತ್ರವಾದ ತನಿಖೆ ನಡೆಸುವಂತೆ ಮಿಶನರಿ ಸಂಘಕ್ಕೆ ತಿಳಿಸಬಹುದಿತ್ತು ಅಥವಾ ಆ ಸಂಘವನ್ನು ತೆಗೆದು ಮನ್ನಣೆಗೊಳಪಡದ ಮಿಶನರಿ ಸಂಘಗಳ ಪಟ್ಟಿಗೆ ಸೇರಿಸಬಹುದಿತ್ತು ಅಥವಾ ಸರಕಾರ ತನ್ನ ಅನುದಾನವನ್ನು ನಿಲ್ಲಿಸಬಹುದಿತ್ತು ಅಥವಾ ಮಿಶನರಿಗಳನ್ನು ಭಾರತದಿಂದ ಹೊರಹಾಕಬಹುದಿತ್ತು. ಮಿಶನಿನ ಕೈಕೆಳಗೆ ಅಥವಾ ನಿಯಂತ್ರಣದಲ್ಲಿ ಉದ್ಯೋಗದಲ್ಲಿದ್ದ ಭಾರತೀಯ ಕ್ರೈಸ್ತರನ್ನು ರಾಷ್ಟ್ರೀಯ ಚಳುವಳಿಯಿಂದ ದೂರವಿರಿಸಲು ಬ್ರಿಟಿಷ್ ಸರಕಾರ ಮೆಮೊರ್ಯಾಂಡಗಳನ್ನು ಬಳಸಿಕೊಳ್ಳುತ್ತದೆ. ಅಷ್ಟು ಮಾತ್ರವಲ್ಲದೇ ಮಿಶನರಿ ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಹೋರಾಟದಿಂದ ದೂರವಿಡಲು ಇವು ಸರಕಾರಕ್ಕೆ ಸಹಾಯಕವಾಗುತ್ತವೆ. ಬಾಸೆಲ್ ಮಿಶನ್ ನಡೆಸುತ್ತಿದ್ದ ಶೈಕ್ಷಣಿಕ ಸಂಸ್ಥೆಗಳ ಕೆಲವು ವಿದ್ಯಾರ್ಥಿಗಳು ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಈ ಸಂದರ್ಭದಲ್ಲಿ ಕೆನರಾದ ಜಿಲ್ಲಾಧಿಕಾರಿಯು ಬಾಸೆಲ್ ಮಿಶನರಿಗಳಿಗೆ ಎಚ್ಚರಿಕೆಯನ್ನು ರವಾನಿಸಿ, ಇಂತಹ ಘಟನೆಗಳು ಮರುಕಳಿಸಿದರೆ ಸಂಸ್ಥೆಗಳ ನೊಂದಣಿ (Registration) ಹಾಗೂ ಅನುದಾನವನ್ನು ರದ್ದುಪಡಿಸುವುದಾಗಿ ತಿಳಿಸುತ್ತಾರೆ.[28] ಹೀಗೆ ಮಿಶನ್ ಶಾಲೆಗಳ ವಿದ್ಯಾರ್ಥಿಗಳು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವುದನ್ನು ತಡೆಯಲು ಬ್ರಿಟಿಷ್ ಸರಕಾರಕ್ಕೆ ಈ ಮೆಮೊರ್ಯಾಂಡಗಳು ಬಹಳಷ್ಟು ಸಹಕಾರಿಯಾಗುತ್ತವೆ ಮಾತ್ರವಲ್ಲದೇ ಅಂತಹ ಸಂಸ್ಥೆಗಳ ವಿರುದ್ಧ ಕ್ರಮಕೈಗೊಳ್ಳುವ ಅವಕಾಶವನ್ನು ಬ್ರಿಟಿಷ್ ಸರಕಾರ ಹೊಂದಿತ್ತು.

ಭಾರತದಲ್ಲಿ ಸ್ವಾತಂತ್ರ್ಯ ಹೋರಾಟವು ತೀವ್ರಗೊಂಡ ಕಾಲದಲ್ಲಿ ಬ್ರಿಟಿಷ್ ಸರಕಾರವು ಭಾರತೀಯ ಕ್ರೈಸ್ತರು ಅದರಲ್ಲಿ ಭಾಗವಹಿಸುವುದನ್ನು ಅಪೇಕ್ಷಿಸುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಬ್ರಿಟಿಷ್ ಸರಕಾರವು ಮನ್ನಣೆಗೊಳಪಟ್ಟ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ (Recognised Educational Institutions) ಎಚ್ಚರಿಕೆಯನ್ನು ರವಾನಿಸಿ, ಸಂಬಂಧಪಟ್ಟ ಸಂಸ್ಥೆಯ ಯಾವುದೇ ಉದ್ಯೋಗಿಗಳಾಗಲೀ ಹಾಗೂ ಇತರರರಾಗಲೀ ಸರಕಾರದ ವಿರುದ್ಧ ನಿರ್ದೇಶಿಸಲ್ಪಟ್ಟ ರಾಜಕೀಯ ಹೋರಾಟಗಳಲ್ಲಿ ಭಾಗವಹಿಸಕೂಡದು ಎಂಬುದಾಗಿ ನೇರವಾಗಿ ತಿಳಿಸುತ್ತದೆ. ಈ ರೀತಿ ಮನ್ನಣೆಗೊಳಪಟ್ಟ ಶಿಕ್ಷಣ ಸಂಸ್ಥೆಯ ಉದ್ಯೋಗಿಗಳು ಸರಕಾರಿ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುವುದು ಹಾಗೂ ಬೆಂಬಲಿಸುವುದನ್ನು ಪರಿಣಾಮಕಾರಿಯಾಗಿ ತಡೆಯಲಾಗುತ್ತದೆ.[29] ಬ್ರಿಟಿಷ್ ಸರಕಾರ ಮೆಮೊರ್ಯಾಂಡಗಳನ್ನು ರಾಷ್ಟ್ರೀಯ ಹೋರಾಟ ಪ್ರಬಲವಾದಂತಹ ಕಾಲದಲ್ಲಿ ಬಳಸಲು ಮುಖ್ಯ ಕಾರಣವೆಂದರೆ ಕೆಲವೊಂದು ಮಿಶನರಿಗಳು ಹಾಗೂ ಭಾರತೀಯ ಕ್ರೈಸ್ತರು

ಪ್ರಬಲವಾಗಿ ರಾಷ್ಟ್ರೀಯ ಹೋರಾಟದಲ್ಲಿ ಗುರುತಿಸಿಕೊಂಡದ್ದು. ಬ್ರಿಟಿಷ್ ಮಿಶನರಿಯಾಗಿದ್ದ ಆ್ಯಂಡ್ರೂಸ್, ಮಹಾತ್ಮಾ ಗಾಂಧೀಜಿಯವರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. 1921ರ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಆ್ಯಂಡ್ರೂಸ್‌ರವರು ಭಾಷಣ ಮಾಡುವಂತೆ ಗಾಂಧಿ ತಿಳಿಸಿದ್ದರು. ಜಲಿಯನ್ ವಾಲಾಬಾಗ್ ದುರಂತದ ಬಗ್ಗೆ ಸ್ವತಂತ್ರವಾದ ತನಿಖೆ ನಡೆಸಿ, 'ಸ್ವಾತಂತ್ರ್ಯ ತಕ್ಷಣದ ಅಗತ್ಯ' (Independence the Immediate need) ಎಂಬ ಕರಪತ್ರವನ್ನು ಸಿದ್ಧಪಡಿಸಿದ್ದರು. ಇದನ್ನು ನೆಹರೂರವರು 'ಸಾಮಾನ್ಯ ಮತ್ತು ಸ್ವಚ್ಛ ರಾಷ್ಟ್ರೀಯತೆ' (Nationalism Pure and Simple) ಎಂಬುದಾಗಿ ಉಲ್ಲೇಖಿಸಿದ್ದರು.[30] ಅಮೇರಿಕಾದ ಮೆಥೋಡಿಸ್ಟ್ ಮಿಶನರಿಗಳಾದ ಸ್ಟಾನ್ಲೇ ಜೋನ್ಸ್, ಜಿ. ಬಿ ಹಾಲ್ಸಟೆಡ್, ಮೌರೀಸ್ ಮುಂತಾದವರು ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಪೂರಕವಾದ ಹಾಗೂ ಗಾಂಧೀಜಿಯವರ ಹೋರಾಟದ ಕಾರ್ಯಕ್ರಮಗಳನ್ನು ಬೆಂಬಲಿಸಿದರಿಂದ ಇವರನ್ನು ಬ್ರಿಟಿಷ್ ಸರಕಾರ ದೇಶದಿಂದ ಹೊರ ಹಾಕುವುದನ್ನು ಗಮನಿಸಬಹುದು. ಸ್ಟಾನ್ಲೇ ಜೋನ್ಸ್‌ರವರು ಅಮೇರಿಕಾಕ್ಕೆ ತೆರಳಿ ಮರಳಿ ಭಾರತಕ್ಕೆ ಹೋಗಲು ವಿಸಾ (Visa) ಕೇಳಿದಾಗ ಅದನ್ನು ನಿರಾಕರಿಸಲಾಗುತ್ತದೆ. ಅದೇ ರೀತಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಬಹಳಷ್ಟು ಒಲವು ಇರಿಸಿದ್ದ ಹಾಗೂ ಗಾಂಧೀಜಿಯವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಬ್ರಿಟಿಷ್ ಮಿಶನರಿಯಾದ ಎಲ್ವಿನ್‌ರವರನ್ನು ಬ್ರಿಟಿಷ್ ಸರಕಾರ ಕಠಿಣವಾಗಿ ನಿಯಂತ್ರಿಸುತ್ತದೆ. 1932ರ ಕಾಲದಲ್ಲಿ ಎಲ್ವಿನ್‌ರವರು ತನ್ನ ಅಸ್ವಸ್ಥ ತಾಯಿಯನ್ನು ನೋಡಲು ಇಂಗ್ಲೆಂಡಿಗೆ ತೆರಳಲು ಸಿದ್ಧತೆ ನಡೆಸಿ, ತನ್ನ ಪಾಸ್‌ಪೋರ್ಟ್‌ನ್ನು ನವೀಕರಿಸಲು ಪ್ರಯತ್ನಿಸುತ್ತಾರೆ. ಈ ಸಂದರ್ಭದಲ್ಲಿ ಎಚ್ಚರಿಕೆಯ ಕ್ರಮ ಅನುಸರಿಸಿದ ಬ್ರಿಟಿಷ್ ಸರಕಾರ ಎಲ್ವಿನ್‌ರವರು ಭಾರತಕ್ಕೆ ಮರಳಲು ಪೂರ್ಣಾವಧಿಯ ಪಾಸ್‌ಪೋರ್ಟ್‌ನ್ನು ಇಂಗ್ಲೆಂಡಿನಲ್ಲೇ ಪಡೆಯಬಹುದೆಂದು ತಿಳಿಸಿ ತಕ್ಷಣ ಇಂಗ್ಲೆಂಡಿಗೆ ತೆರಳುವಂತೆ ಸೂಚಿಸುತ್ತದೆ. ತದನಂತರ ಇಂಗ್ಲೆಂಡಿಗೆ ತೆರಳಿ ಅಲ್ಲಿಂದ ಪಾಸ್‌ಪೋರ್ಟ್ ಪಡೆಯಲು ಅವರು ಪ್ರಯತ್ನಿಸಿದಾಗ ಅದನ್ನು ನೀಡಲು ಬ್ರಿಟಿಷ್ ಸರಕಾರ ನಿರಾಕರಿಸುತ್ತದೆ.[31] ಈ ರೀತಿ ಬ್ರಿಟಿಷ್ ಸರಕಾರ ಯಾವುದೇ ದೇಶದ ಮಿಶನರಿಗಳು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವುದು ಹಾಗೂ ಬೆಂಬಲಿಸುವುದನ್ನು ಬಯಸಲಿಲ್ಲ. ಆದರೆ ಮಿಶನರಿಗಳು ಸಕ್ರಿಯವಾಗಿ ಮಿಶನರಿ ಕಾರ್ಯದಲ್ಲಿ ತೊಡಗುವುದಕ್ಕೆ ಯಾವುದೇ ಅಡಚಣೆಯನ್ನು ಸರಕಾರ ಮಾಡಿರಲಿಲ್ಲ.

1921ರಲ್ಲಿ 'ಹರ್ವೆಸ್ಟ್ ಫಿಲ್ಡ್' ವರದಿ ಮಾಡುವಂತೆ ಕೆಲವು ಭಾರತೀಯ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗಿದ್ದಾರೆ ಎಂದು ತಿಳಿಸುತ್ತಾ, ಆದರೆ ಅವರ ಸಂಖ್ಯೆ ಬಹಳಷ್ಟು

ವಿರಳವಾಗಿದೆ ಎಂದೂ ತಿಳಿಸುತ್ತದೆ. 1922ರಲ್ಲಿ ಅಖಿಲ ಭಾರತ ಭಾರತೀಯ ಕ್ರೈಸ್ತರ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ ಎಸ್. ಕೆ. ದತ್ತರವರು ಭಾರತೀಯ ಕ್ರೈಸ್ತರು ತಮ್ಮ ರಾಜಕೀಯ ಕಾರ್ಯ ಚಟುವಟಿಕೆಗಳಿಂದಾಗಿ ಬಂಧನಕ್ಕೆ ಒಳಗಾಗಿದ್ದಾರೆ ಎಂದು ತಿಳಿಸಿದ್ದರು.[32] ಹೀಗೆ ಬ್ರಿಟಿಷ್ ಸರಕಾರ ಮೆಮೊರ್ಯಾಂಡಗಳನ್ನು ಬಳಸಿ ಮಿಶನರಿಗಳು ತಮ್ಮ ಕ್ರೈಸ್ತರು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸದಂತೆ ತಡೆಯುವ ಪ್ರಯತ್ನವನ್ನು ಮಾಡಿದ್ದರು. ಅದೇ ರೀತಿ ಭಾಗವಹಿಸಿದ ಕ್ರೈಸ್ತರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲು ಬ್ರಿಟಿಷ್ ಸರಕಾರ ಮುಂದಾಗಿತ್ತು ಎಂಬುದು ಮೇಲಿನ ವಿಚಾರಗಳಿಂದ ಸ್ಪಷ್ಟವಾಗುತ್ತದೆ. ಭಾರತೀಯ ಕ್ರೈಸ್ತರಿಗೆ ಪ್ರತ್ಯೇಕ ಚುನಾವಣಾ ಕಣಗಳು ಬೇಕೆಂಬುದನ್ನು ಮಿಶನರಿಗಳು ಹಾಗೂ ಭಾರತೀಯ ಕ್ರೈಸ್ತ ನಾಯಕರು ತಿರಸ್ಕರಿಸಿದ್ದರು ಎಂಬುದು ಗಮನಾರ್ಹ ವಿಚಾರವಾಗಿದ್ದು, ಅವರು ಸಾಮಾನ್ಯ ಭಾರತೀಯರಂತೆ ಆಡಳಿತ ವ್ಯವಸ್ಥೆಯಲ್ಲಿ ಮುಂದುವರಿಯಲು ಬಯಸಿದ್ದರು. ಹೀಗೆ ರಾಷ್ಟ್ರೀಯ ಮಟ್ಟದಲ್ಲಿ ಕೆಲವು ಭಾರತೀಯ ಕ್ರೈಸ್ತರು ಸಕ್ರೀಯವಾಗಿ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದರೆ ಕರ್ನಾಟಕದಲ್ಲಿ ಪ್ರೋಟೆಸ್ಟೆಂಟ್ ಕ್ರೈಸ್ತರ ರಾಜಕೀಯ ಭಾಗವಹಿಸುವಿಕೆ ಬಹಳಷ್ಟು ವಿರಳವಾಗಿತ್ತು. ಕರ್ನಾಟಕದಲ್ಲಿ ಕ್ಯಾಥೋಲಿಕ್ ಕ್ರೈಸ್ತರ ರಾಜಕೀಯ ಭಾಗವಹಿಸುವಿಕೆ ಸ್ವಲ್ಪ ಮಟ್ಟಿನಲ್ಲಿ ಕಂಡುಬರುತ್ತದೆ.[33]

ಕರ್ನಾಟಕದ ಅದರಲ್ಲೂ ಬಾಸೆಲ್ ಮಿಶನ್ ಕಾರ್ಯಚರಿಸುತ್ತಿದ್ದ ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಪ್ರದೇಶಗಳ ಮೇಲೆ ರಾಷ್ಟ್ರೀಯ ಚಳುವಳಿಯ ಪ್ರಭಾವವು ಪ್ರಾರಂಭದಿಂದಲೂ ಪ್ರಬಲವಾಗಿ ಬೀಸಿರಲಿಲ್ಲ. ಮಹಾತ್ಮ ಗಾಂಧೀಜಿಯವರು ರಾಷ್ಟ್ರೀಯ ಹೋರಾಟಕ್ಕೆ ಪ್ರವೇಶ ಮಾಡುವುದರೊಂದಿಗೆ ರಾಷ್ಟ್ರೀಯ ಹೋರಾಟವು ಜನಾಂದೋಲನವಾಗಿ ರೂಪುಗೊಳ್ಳುತ್ತದೆ ಹಾಗೂ ದೇಶದಾದ್ಯಂತ ಹರಡುವುದನ್ನು ಗಮನಿಸಬಹುದು. ಈ ಬೆಳವಣಿಗೆಗಳು ಬಾಸೆಲ್ ಮಿಶನ್ ಕ್ರೈಸ್ತರ ಮೇಲೂ ಪ್ರಭಾವ ಬೀರದೆ ಇರುವುದಿಲ್ಲ. ಆದರೆ ಬಾಸೆಲ್ ಮಿಶನ್ ಕ್ರೈಸ್ತರು ಅಲ್ಪಸಂಖ್ಯಾತರಾಗಿದ್ದು ಮಿಶನರಿಗಳ ಪ್ರಬಲ ನಿಯಂತ್ರಣಕ್ಕೆ ಒಳಪಟ್ಟಿದ್ದರು ಎಂಬುದನ್ನು ಗಮನಿಸಬೇಕಾಗಿದೆ. ಬ್ರಿಟಿಷ್ ಆಡಳಿತದ ಕಾಲದಲ್ಲಿ ಮಿಶನರಿಗಳು ಕ್ರೈಸ್ತ ಸಮುದಾಯ ರಾಷ್ಟ್ರೀಯ ಹೋರಾಟದಿಂದ ದೂರವಿರುವಂತೆ ನೋಡಿಕೊಳ್ಳಬೇಕಿತ್ತು. ಭಾರತೀಯ ಕ್ರೈಸ್ತರು ಮಿಶನರಿಗಳಿಗೆ ವಿಧೇಯರಾಗಿದ್ದು, ಮಿಶನರಿಗಳು ಹಾಗೂ ಕ್ರೈಸ್ತರು ಬ್ರಿಟಿಷ್ ಸರಕಾರಕ್ಕೆ ಬೆಂಬಲ ಹಾಗೂ ವಿಧೇಯತೆ ವ್ಯಕ್ತಪಡಿಸಿದ್ದರಿಂದ ಭಾರತೀಯ ಕ್ರೈಸ್ತರು ತಮ್ಮ ದೇಶವಾಸಿಗಳಿಂದ 'ಪಾಶ್ಚಾತ್ಯ ಧರ್ಮ'ದವರೆಂದೂ, ವಸಾಹತುಶಾಹಿಗಳ ಧರ್ಮದವರೆಂದೂ, ಪರದೇಶದ ಧರ್ಮದವರೆಂದೂ ಕರೆದುಕೊಳ್ಳಬೇಕಾಯಿತು. ಈ ವಾದವನ್ನು ಭಾರತೀಯ ಕ್ರೈಸ್ತರು ಎದುರಿಸಿ ಅದನ್ನು ಅಸತ್ಯವೆಂದು ತೋರಿಸಬೇಕಾಗಿತ್ತು.[34]

20ನೇ ಶತಮಾನದಲ್ಲಿ ದಕ್ಷಿಣ ಭಾರತದ ಕ್ರೈಸ್ತರಲ್ಲಿ ಜನ ಸಾಮಾನ್ಯರೊಂದಿಗೆ ಗುರುತಿಸಿಕೊಳ್ಳಬೇಕೆಂಬ ಜಾಗೃತಿ ಹಾಗೂ ಸ್ವಪ್ರಜ್ಞೆ (Self Consciousness and a new sense of Public presence) ಬೆಳೆಯಲಾರಂಭಿಸಿತ್ತು ಹಾಗೂ ಈ ಅಂಶಗಳು ಅವರು ನಿಯಂತ್ರಿಸುತ್ತಿದ್ದ ಪತ್ರಿಕೆಗಳಿಂದ ದೃಢವಾಗುತ್ತದೆ. 20ನೇ ಶತಮಾನದಲ್ಲಿ ಪ್ರತಿಯೊಬ್ಬರು ತನ್ನನ್ನು ರಾಷ್ಟ್ರಿಯ ಹೋರಾಟದೊಂದಿಗೆ ಗುರುತಿಸಿಕೊಳ್ಳುವ ಅಗತ್ಯತೆಯನ್ನು ಮನಗಂಡಿದ್ದರು.[35] ಈ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ತಮ್ಮನ್ನು ರಾಷ್ಟ್ರೀಯ ಹೋರಾಟದಲ್ಲಿ ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಿರುವುದನ್ನು ಗಮನಿಸಬಹುದು. ಕೆಲವೊಂದು ಶಿಕ್ಷಿತ ಬಾಸೆಲ್ ಮಿಶನ್ ಕ್ರೈಸ್ತರು ತಮ್ಮ ಸಮುದಾಯವು ಮಿಶನರಿಗಳ ಪ್ರಬಲ ನಿಯಂತ್ರಣದಲ್ಲಿ ಗುಲಾಮರಾಗಿ ಸಿಲುಕಿ, ದೇಶಾಭಿಮಾನವನ್ನು ಕಳಕೊಂಡಿರುವುದಾಗಿ ಎಚ್ಚರಿಸುತ್ತಾ, ತಾವು ಅತ್ತ ಕಡೆ ದೇಶಿಯರೂ ಅಲ್ಲ ಇತ್ತ ವಿದೇಶಿಯರೂ ಅಲ್ಲ ಎಂಬ ಮನೋಭಾವ ಬೆಳೆಯುವಂತಾಗಿದೆ ಎಂದು ವಿಷಾದಿಸಿದರು. ಈ ಸುಶಿಕ್ಷಿತ ಕ್ರೈಸ್ತರು, ಬಾಸೆಲ್ ಮಿಶನ್ ಕ್ರೈಸ್ತರು ದೇಶಿಯತೆ ಹಾಗೂ ರಾಷ್ಟ್ರೀಯತೆಗೆ ಎದುರಾಗಿ ನಿಲ್ಲದೇ ಅದರೊಂದಿಗೆ ಬೆರೆತು ಮುಂದುವರಿಯಬೇಕೆಂದು ಕರೆ ನೀಡಿದ್ದರು.[36] ಬಾಸೆಲ್ ಮಿಶನ್ ಕ್ರೈಸ್ತರು ಪರದೇಶದಿಂದ ಬಂದವರಲ್ಲ. ಅವರು ಭಾರತೀಯರೇ ಆಗಿದ್ದು, ಅವರು ಮತಾಂತರ ಹೊಂದಿ ಕ್ರೈಸ್ತರಾಗಿದ್ದಾರಷ್ಟೇ ಎಂಬ ಎಚ್ಚರಿಕೆಯನ್ನು ಶಿಕ್ಷಿತ ಕ್ರೈಸ್ತರು ಪದೇ ಪದೇ ನೀಡಿದ್ದರು. ವಿವೇಚನೆ ಇಲ್ಲದೇ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುತ್ತಿದ್ದ ಬಾಸೆಲ್ ಮಿಶನ್ ಕ್ರೈಸ್ತರನ್ನು ಎಚ್ಚರಿಸುತ್ತಾ, ದೇಶಿಯತೆಯನ್ನು ಮರೆತು ಪಾಶ್ಚಾತ್ಯ ವಿಚಾರಗಳನ್ನು ಅನುಸರಿಸುವುದರಿಂದ ನಾವು ಬ್ರಿಟಿಷರ ಬೆಂಬಲಿಗರೆಂಬ ಚಿತ್ರಣ ಸೃಷ್ಟಿಯಾಗಲಿದೆ ಎಂದು ಎಚ್ಚರಿಸುವುದನ್ನು ಗಮನಿಸಬಹುದು. ಎಲ್ಲಾ ವಿಚಾರದಲ್ಲೂ ವಿದೇಶಿಯತೆಯನ್ನು ಅನುಸರಿಸುವುದನ್ನು ಬಿಟ್ಟು ದೇಶಿಯ ಆಚಾರ, ವಿಚಾರ, ಕಲೆ, ಸಂಸ್ಕೃತಿಯನ್ನು ಅನುಸರಿಸಿ ದೇಶಿಯರಾಗಬೇಕೆಂಬ ಕರೆಯನ್ನು ನೀಡಲಾಗುತ್ತದೆ. ಅದೇ ರೀತಿ ಬಾಸೆಲ್ ಮಿಶನ್ ಕ್ರೈಸ್ತರಿಗೆ ಎಲ್ಲಿಯವರೆಗೆ ಪರದೇಶಿಯರ ಸಹಾಯವಿಲ್ಲದೇ ಮುಂದುವರಿಯಲು ಅಸಾಧ್ಯವೋ ಅಲ್ಲಿಯವರೆಗೆ ಅವರು ಸ್ವತಂತ್ರರಲ್ಲ ಎಂಬ ಎಚ್ಚರಿಕೆಯನ್ನೂ ಬಾಸೆಲ್ ಮಿಶನ್ ಕ್ರೈಸ್ತರಿಗೆ ನೀಡಲಾಗುತ್ತದೆ.[37] ಈ ರೀತಿ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ದೇಶಿಯತೆಯ ಪ್ರಜ್ಞೆ ಜಾಗೃತವಾಗುತ್ತಿದ್ದ ಕಾಲದಲ್ಲಿ ಕರ್ನಾಟಕದಲ್ಲಿನ ಕ್ಯಾಥೋಲಿಕ್ ಕ್ರೈಸ್ತರಲ್ಲಿಯೂ ರಾಷ್ಟ್ರೀಯತೆ ಕಲ್ಪನೆ ಬೆಳೆಯುತ್ತಿತ್ತು. ಕ್ಯಾಥೋಲಿಕ್ ಸಮುದಾಯದ ಕೆಲವು ನಾಯಕರು ತಮ್ಮ ಸಮುದಾಯವು ತಟಸ್ಥವಾಗಿರದೆ ದೇಶದಲ್ಲಿನ ಬದಲಾಗುವ ಪರಿಸ್ಥಿತಿಗೆ ಹೊಂದಿಕೊಂಡು ತನ್ನ ನೀತಿಗಳನ್ನು ರೂಪಿಸಬೇಕೆಂಬ ಕರೆಯನ್ನು ನೀಡಿದ್ದರು.[38] ಈ ರೀತಿ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ 20ನೇ ಶತಮಾನಕ್ಕಾಗುವಾಗ ರಾಷ್ಟ್ರೀಯತೆ ಪ್ರಜ್ಞೆ ಬೆಳೆಯಲಾರಂಭಿಸಿತ್ತು ಎಂಬುದನ್ನು ಗಮನಿಸಬಹುದು.

20ನೇ ಶತಮಾನದ ಆರಂಭದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಕೆಲವು ಸಂಘಟನೆಗಳನ್ನು ಕಟ್ಟಿಕೊಂಡು ಅವುಗಳ ಮೂಲಕ ಸರಕಾರಕ್ಕೆ ತಮ್ಮ ಬೇಡಿಕೆಗಳನ್ನು ಮಂಡಿಸಿ ತಮ್ಮ ಸಮುದಾಯದ ಅಭಿವೃದ್ಧಿಗೆ ಪ್ರಯತ್ನಿಸುವುದನ್ನು ಗಮನಿಸಬಹುದು. 1925ರಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಕ್ಯಾಥೋಲಿಕ್ ಕ್ರೈಸ್ತರೊಂದಿಗೆ ಜಂಟಿಯಾಗಿ 'ಕೆನರಾ ಇಂಡಿಯನ್ ಕ್ರಿಶ್ಚಿಯನ್ ಸಿವಿಕ್‌ಲೀಗ್'ನ್ನು (Kanara Indian Christian Civic League) ಸ್ಥಾಪಿಸಿದರು. ಭಾರತೀಯ ಕ್ರೈಸ್ತರ ಆಸಕ್ತಿಗಳನ್ನು ರಕ್ಷಿಸಿ ಅವರ ಒಳಿತಿಗಾಗಿ ಕೆಲಸ ನಿರ್ವಹಿಸುವ ಉದ್ದೇಶದೊಂದಿಗೆ ಇದು ಸ್ಥಾಪನೆಯಾಗುತ್ತದೆ. ಇದು ಶಿಕ್ಷಿತ ಯುವಕರಿಗೆ ಸರಕಾರಿ ಉದ್ಯೋಗಗಳನ್ನು ಒದಗಿಸಲು, ಭೂರಹಿತ ಬಡ ಕ್ರೈಸ್ತರಿಗೆ ಜಿಲ್ಲಾಧಿಕಾರಿಯ ಮೂಲಕ ಸರಕಾರದ ಖಾಲಿ ಭೂಮಿಯನ್ನು ಪಡೆದುಕೊಳ್ಳಲು ಹಾಗೂ ಕ್ರೈಸ್ತರ ಹಕ್ಕುಗಳ ರಕ್ಷಣೆಗಾಗಿ ಕಾರ್ಯನಿರ್ವಹಿಸಿತ್ತು.[39] ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಸದಸ್ಯರು ಭಾಗಿಯಾಗಿದ್ದ ಇನ್ನೊಂದು ಕ್ರೈಸ್ತ ಸಂಘಟನೆ ಎಂದರೆ 'ಕರ್ನಾಟಕ ಇಂಡಿಯಾ ಕ್ರೈಸ್ತ ಸಮಾಜ'. ಧಾರವಾಡ, ಬೆಳಗಾಂವ್, ಕಾರವಾರ ಮತ್ತು ಬಿಜಾಪುರ ಪ್ರದೇಶಗಳ ದೇಶಿಯ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟೆಂಟ್ ಕ್ರೈಸ್ತರು ಜಂಟಿಯಾಗಿ ಇದನ್ನು 1923ರಲ್ಲಿ ಸ್ಥಾಪಿಸುತ್ತಾರೆ. ದೇಶಿಯ ಕ್ರೈಸ್ತರ ಒಳಿತಿಗಾಗಿ ಕಾರ್ಯ ನಿರ್ವಹಿಸುವುದು ಇದರ ಉದ್ದೇಶವಾಗಿತ್ತು.[40] ದಕ್ಷಿಣ ಕೆನರಾದಲ್ಲಿ ಕ್ಯಾಥೋಲಿಕ್ ಕ್ರೈಸ್ತರು ಬಾಸೆಲ್ ಮಿಶನ್ ಕ್ರೈಸ್ತರಿಗಿಂತ ಮೊದಲೇ ಎಂದರೆ 1914ರಲ್ಲೇ 'ದಿ ಕ್ಯಾಥೋಲಿಕ್ ಅಸೋಸಿಯೇಶನ್ ಆಫ್ ಸೌತ್ ಕೆನರಾ' (The Catholic Association of South Kanara) ಎಂಬ ಸಂಘವನ್ನು ಕಟ್ಟಿಕೊಂಡು ಅದು ತನ್ನ ಸಮುದಾಯಕ್ಕಾಗಿ ಕಾರ್ಯಾಚರಿಸುತಿತ್ತು.[41] ಹೀಗೆ ಬಾಸೆಲ್ ಮಿಶನ್ ಕ್ರೈಸ್ತರು ಕ್ರೈಸ್ತ ಸಂಘಟನೆಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಸಮಾಜದ ಒಳಿತಿಗಾಗಿ ಹಾಗೂ ವೃದ್ಧಿಗಾಗಿ ಪ್ರಯತ್ನವನ್ನು ನಡೆಸಿದ್ದರು. ಆದರೆ ಬಾಸೆಲ್ ಮಿಶನ್ ಕ್ರೈಸ್ತರು ತಮ್ಮದೇ ಆದ ಸ್ವತಂತ್ರವಾದ ಒಂದು ಸಂಘಟನೆಯನ್ನು ಹೊಂದಿರದೇ ಕ್ಯಾಥೋಲಿಕ್ ಕ್ರೈಸ್ತರೊಂದಿಗೆ ಜಂಟಿಯಾಗಿ ಸಂಘಗಳನ್ನು ಸ್ಥಾಪಿಸಿದ್ದರು.

ರಾಷ್ಟ್ರೀಯ ಹೋರಾಟದ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರ ಹಾಗೂ ಪತ್ರಿಕೆಗಳ ಧೋರಣೆಗಳು:

ಬಾಸೆಲ್ ಮಿಶನ್ ಕ್ರೈಸ್ತ ಸಮುದಾಯದ ಧ್ವನಿ ಅದು ಪ್ರಕಟಗೊಳಿಸುತ್ತಿದ್ದ ಎರಡು ಪತ್ರಿಕೆಗಳಲ್ಲಿ ಪ್ರತಿಫಲಿಸುತ್ತದೆ. 'ಕ್ರೈಸ್ತ ಹಿತವಾದಿ'ಯು ಬಾಸೆಲ್ ಮಿಶನರಿಗಳ ಔಪಚಾರಿಕ ಪತ್ರಿಕೆಯಾಗಿದ್ದು, ಇದು ಮಂಗಳೂರಿನಿಂದ ಪ್ರಕಟಗೊಳ್ಳುತ್ತಿದ್ದು, ಒಂದು ಮಾಸಿಕವಾಗಿತ್ತು. 1924ರಲ್ಲಿ ಆರಂಭವಾದ ಈ ಪತ್ರಿಕೆಯ ಸಂಪಾದಕರಾಗಿ ಸ್ಥಳೀಯ ಪಾದ್ರಿಯಾದ ಪೆಡ್ರಿಕ್ ಜತ್ತನ್ನ ಕಾರ್ಯ ನಿರ್ವಹಿಸುತ್ತಿದ್ದರು. ಈ ಪತ್ರಿಕೆಯು ಧಾರ್ಮಿಕ ಹಾಗೂ ಮಿಶನ್ ವಾರ್ತೆಗಳ ಕಡೆ ಹೆಚ್ಚು

ಗಮನಹರಿಸಿದ್ದರೂ ಕೆಲವೊಂದು ಸಂದರ್ಭದಲ್ಲಿ ಭಾರತದ ರಾಜಕೀಯ ವಿಚಾರಗಳನ್ನು ಚರ್ಚೆಗೆ ಒಳಪಡಿಸಿತ್ತು. ಹಿತವಾದಿಯು ಅಭಿಪ್ರಾಯಪಡುವಂತೆ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯು ದೇಶದಲ್ಲಿ ಶಾಂತಿ ಅಭಿವೃದ್ಧಿಗೆ ಕಾರಣವಾಗಿದ್ದು, ಭಾರತೀಯರು ಅದರ ವಿರುದ್ಧ ಹೋರಾಡುವುದು ಅನಗತ್ಯವಾಗಿದೆ ಎಂಬುದೇ ಪತ್ರಿಕೆಯ ವಾದವಾಗಿತ್ತು. 1927ರಲ್ಲಿ ಮರಳಿ ಭಾರತಕ್ಕೆ ಬಂದ ಬಾಸೆಲ್ ಮಿಶನರಿಗಳು 'ಕ್ರೈಸ್ತ ಹಿತವಾದಿ' ಪತ್ರಿಕೆಯನ್ನು ಮುಂದುವರಿಸುವುದಲ್ಲದೇ ಅದಕ್ಕೆ ಹೊಸ ರೂಪವನ್ನು ನೀಡುತ್ತಾರೆ. ಬಾಸೆಲ್ ಮಿಶನರಿಗಳು ಈ ಪತ್ರಿಕೆಯಲ್ಲಿ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ 'ತನಗೆ ರಾಜಕೀಯ ವಿಚಾರಗಳನ್ನು ಪ್ರಸ್ತಾಪಿಸಿ ಯಾವುದೊಂದು ಪಕ್ಷದ ಪರವಹಿಸಿ ಸರಕಾರವನ್ನಾಗಲೀ ಇತರರನ್ನಾಗಲೀ ಖಂಡಿಸುವ ಅಥವಾ ದೂಷಿಸುವ ಉದ್ದೇಶವಿಲ್ಲ' ಎಂದು ಸ್ಪಷ್ಟಪಡಿಸಿದ್ದರು. ಅದೇ ರೀತಿ ಕ್ರೈಸ್ತನಾದ ತಾನು ಕ್ರೈಸ್ತರ ಅಭಿಪ್ರಾಯಗಳು ಹೇಗಿರುವುದು ಎಂಬುದನ್ನು ಅಗತ್ಯ ಬಿದ್ದಾಗ ತಿಳಿಸುವುದಾಗಿಯೂ ದಾಖಲಿಸುತ್ತದೆ.[42] ಈ ಮೇಲಿನ ವಾದಗಳಿಂದ ಬಾಸೆಲ್ ಮಿಶನರಿಗಳು ರಾಜಕೀಯ ವಿಚಾರಗಳ ಬಗ್ಗೆ ಹಾಗೂ ಬ್ರಿಟಿಷ್ ಸರಕಾರದ ಬಗ್ಗೆ ಎಚ್ಚರಿಕೆಯ ನಡೆಯನ್ನು ತೋರಿರುವುದನ್ನು ಗಮನಿಸಬಹುದು.

ಬಾಸೆಲ್ ಮಿಶನ್ ಕ್ರೈಸ್ತರಿಗೆ ಸಂಬಂಧಿಸಿದ ಮತ್ತೊಂದು ಪತ್ರಿಕೆ ಎಂದರೆ ಸತ್ಯವ್ರತ. ಈ ಪತ್ರಿಕೆಯು ಒಂದು ಮಾಸಿಕವಾಗಿದ್ದು, ಬಾಸೆಲ್ ಮಿಶನ್ ಕ್ರೈಸ್ತರಾಗಿದ್ದ ಎಸ್. ಇ. ಐಮನ್‌ರವರು ಇದರ ಸಂಪಾದಕರು ಹಾಗೂ ಪ್ರಕಾಶಕರಾಗಿದ್ದರು. ಈ ಪತ್ರಿಕೆಯನ್ನು ಮಂಗಳೂರಿನ ಕಾಂನ್‌ಟೂನ್‌ಮೆಂಟ್ ಸ್ಟ್ರೀಟ್‌ನಲ್ಲಿದ್ದ (Contonment Street) ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್‌ನಲ್ಲಿ (Saraswati Printing Works Limited) ಮುದ್ರಿಸಲಾಗುತ್ತಿತ್ತು. ಪತ್ರಿಕೆಯು ತನ್ನ ಮೊದಲ ಆವೃತ್ತಿಯಲ್ಲಿಯೇ ತನ್ನ ಉದ್ದೇಶವನ್ನು ಸ್ಪಷ್ಟಪಡಿಸಿತ್ತು. ಬಾಸೆಲ್ ಮಿಶನ್ ಕ್ರೈಸ್ತರಿಗೆ ಸಂಬಂಧಪಟ್ಟ ಸಾಮಾಜಿಕ, ಆರ್ಥಿಕ, ವಿಚಾರಗಳತ್ತ ಗಮನಹರಿಸಿ, ತನ್ನ ಸಮುದಾಯದ ಸಾಮಾಜಿಕ ಸೇವೆ ಮಾಡುವ ಉದ್ದೇಶ ತನಗಿದೆ ಎಂದು ಅದು ತಿಳಿಸಿತ್ತು. ಸತ್ಯವ್ರತವು ತಾನು ದೇಶದ ರಾಜಕೀಯ ವಿಚಾರಗಳ ಬಗ್ಗೆ ತಟಸ್ಥನಾಗಿರುವುದಾಗಿ ಹೇಳಿದ್ದರೂ ರಾಷ್ಟ್ರೀಯತೆಯ ಸ್ಫೂರ್ತಿ ಹಾಗೂ ಆಗಿನ ರಾಜಕೀಯ ವಿಚಾರಧಾರೆಗಳು ಅದರ ಮೊದಲ ಪ್ರಕಾಶನದಲ್ಲೇ ಬಿಂಬಿತವಾಗಿದ್ದವು. ಅದು ತನ್ನ ಮೊದಲ ಸಂಚಿಕೆಯಲ್ಲಿಯೇ ರವೀಂದ್ರನಾಥ ಠಾಗೋರರ 'ದಿ ಫ್ಯೆಚುರ್ ಆಫ್ ಫಾದರ್ ಲ್ಯಾಂಡ್' (The Future of Father Land) ಎಂಬ ರಾಷ್ಟ್ರೀಯತೆಯ ಗೀತೆಯನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಪ್ರಕಟ ಪಡಿಸಿತ್ತು.[43] ಸತ್ಯವ್ರತವು ಸ್ವರಾಜ್ (Swaraj) ಕಲ್ಪನೆಯ ಬಗ್ಗೆ ಚರ್ಚಿಸುತ್ತಾ, ಬಾಸೆಲ್ ಮಿಶನ್ ಚರ್ಚುಗಳನ್ನು ವಿದೇಶಿ ಮಿಶನರಿಗಳ ದಾಸ್ಯದಿಂದ

ಬಿಡುಗಡೆಗೊಳಿಸಲು ಸ್ವರಾಜ್ ಚಿಂತನೆಯನ್ನು ಬಳಸಿಕೊಂಡಿದೆ. ಬಾಸೆಲ್ ಮಿಶನ್ ಕ್ರೈಸ್ತರು ವಿದೇಶಿ ಮಿಶನರಿಗಳ ನಿಯಂತ್ರಣದಿಂದ ಸಂಪೂರ್ಣವಾಗಿ ಹೊರಬಂದು ಸ್ವತಂತ್ರ ಮತ್ತು ಸ್ವಾಯತ್ತವಾದ ಸಮಾಜವಾಗಬೇಕು ಎಂಬುದು ಪತ್ರಿಕೆಯ ವಾದವಾಗಿತ್ತು. ಮಿಶನರಿಗಳು ಸ್ಥಳೀಯ ಕ್ರೈಸ್ತರನ್ನು ಕಡೆಗಣಿಸಿದ್ದು, ಚರ್ಚುಗಳಲ್ಲಿ ಸ್ವಯಂ ಆಡಳಿತದ ಚಿಂತನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ ಎಂಬ ಗುರುತರವಾದ ಆರೋಪವನ್ನು ಪತ್ರಿಕೆ ಮಿಶನರಿಗಳ ಮೇಲೆ ಮಾಡಿತ್ತು.[44] ಹೀಗೆ ಮಿಶನರಿಗಳು ಸ್ಥಳೀಯ ಕೈಸ್ತರು ಸ್ವತಂತ್ರ ಹಾಗೂ ಸ್ವಾಯತ್ತ ಸಮಾಜವಾಗಿ ಬೆಳೆಯಲು ಅಡ್ಡಿಯಾಗಿದ್ದಾರೆ ಎಂಬ ಚಿಂತನೆಯನ್ನು ಪತ್ರಿಕೆಯು ಹೊರಹಾಕಿತ್ತು.

ಮಿಶನರಿ ಪತ್ರಿಕೆಯಾದ 'ಕ್ರೈಸ್ತ ಹಿತವಾದಿ' ಹಾಗೂ ಬಾಸೆಲ್ ಮಿಶನ್ ಕ್ರೈಸ್ತನೊಬ್ಬನಿಂದ ನಡೆಸಲ್ಪಡುತ್ತಿದ್ದ 'ಸತ್ಯವ್ರತ' ಪತ್ರಿಕೆಗಳಲ್ಲಿ ರಾಷ್ಟ್ರೀಯತೆಯ ಕಡೆ ಮಿಶನರಿಗಳ ಅಭಿಪ್ರಾಯ ಹಾಗೂ ದೇಶಿಯ ಕ್ರೈಸ್ತರ ಚಿಂತನೆಗಳು ಯಾವ ರೀತಿಯಲ್ಲಿದ್ದವು ಎಂಬುದನ್ನು ತಿಳಿದುಕೊಳ್ಳಬಹುದು. 1914ರಲ್ಲಿ ಜಾಗತಿಕ ಯುದ್ಧದ ಸಂದರ್ಭದಲ್ಲಿ ಬ್ರಿಟಿಷ್ ಸರಕಾರ ಭಾರತದಲ್ಲಿ ಬಾಸೆಲ್ ಮಿಶನನ್ನು ನಿರ್ಬಂಧಿಸುತ್ತದೆ. ಇದರಿಂದಾಗಿ ಮಿಶನ್ ಕಾರ್ಯದಲ್ಲಿದ್ದ ಮಿಶನರಿಗಳು ಬಂಧನಕ್ಕೆ ಒಳಗಾಗುತ್ತಾರೆ ಅಥವಾ ಸ್ವದೇಶಕ್ಕೆ ಹೋಗಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಭಾಗಶಃ ಸ್ವಾಯತ್ತತೆ ಹಾಗೂ ಸ್ವ–ಆಡಳಿತವನ್ನು ಪಡೆದುಕೊಳ್ಳುವುದನ್ನು ಗಮನಿಸಬಹುದು. ಬಾಸೆಲ್ ಮಿಶನ್ ಕ್ರೈಸ್ತರು ತಮ್ಮ ಚರ್ಚುಗಳ ಆಡಳಿತದಲ್ಲಿ ಭಾಗಿಯಾಗಲು ಆರಂಭಿಸುತ್ತಾರೆ. ಮತ್ತೊಂದೆಡೆ ಅವರು ಮೊದಲಿದ್ದ ಜರ್ಮನ್ ಮಿಶನರಿಗಳ ಪ್ರಬಲ ನಿಯಂತ್ರಣದಿಂದ ಮುಕ್ತರಾಗುತ್ತಾರೆ. ಈ ಸನ್ನಿವೇಶವು ಬಾಸೆಲ್ ಮಿಶನ್ ಕ್ರೈಸ್ತರು ತಮ್ಮ ಸಮುದಾಯದ ಬಗ್ಗೆ, ತಮ್ಮ ಚರ್ಚುಗಳ ಬಗ್ಗೆ, ಅವುಗಳ ಆಡಳಿತದ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಮಾತ್ರವಲ್ಲದೇ ದೇಶದಲ್ಲಿ ನಡೆಯುತ್ತಿದ್ದ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಚಿಂತಿಸುವಂತೆ ಮಾಡುತ್ತದೆ. 1914ರ ವರೆಗೆ ಬಾಸೆಲ್ ಮಿಶನ್ ಕ್ರೈಸ್ತರು, ಬಾಸೆಲ್ ಮಿಶನರಿಗಳ ಬಿಗುವಾದ ನಿಯಂತ್ರಣದಲ್ಲಿದ್ದರು. ಯಾವಾಗ ಮಿಶನರಿಗಳು ಬ್ರಿಟಿಷ್ ಸರಕಾರ ಅದರ ಅಧಿಕಾರಿಗಳನ್ನು ಮುಕ್ತವಾಗಿ ಬೆಂಬಲಿಸಿ ಹೊಗಳಿದಂತಹ ಕಾಲದಲ್ಲಿ ಸ್ಥಳೀಯ ಕ್ರೈಸ್ತರು ಮಿಶನರಿಗಳ ದಾರಿಯನ್ನೇ ಅನುಸರಿಸಬೇಕಿತ್ತು. ಅಷ್ಟು ಮಾತ್ರವಲ್ಲದೇ 1914ರ ವರೆಗೆ ಬಾಸೆಲ್ ಮಿಶನರಿಗಳೇ, ಬಾಸೆಲ್ ಮಿಶನ್ ಕ್ರೈಸ್ತ ಸಮುದಾಯದ ಧ್ವನಿಯಾಗಿದ್ದರು ಎಂಬುದನ್ನು ಗಮನಿಸಬೇಕಾಗಿದೆ. ಆದರೆ ಬಾಸೆಲ್ ಮಿಶನರಿಗಳ ನಿರ್ಗಮನವು ಬಾಸೆಲ್ ಮಿಶನ್ ಕೈಸ್ತರ ವರ್ತನೆಗಳಲ್ಲಿ ಹಾಗೂ ಚಿಂತನೆಗಳಲ್ಲಿ ಬದಲಾವಣೆಗೆ ಕಾರಣವಾಗುತ್ತದೆ ಎಂಬುದನ್ನು ಗಮನಿಸಬೇಕಾಗಿದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದ ನಂತರ 1927ರಲ್ಲಿ ಬಾಸೆಲ್ ಮಿಶನರಿಗಳು ಮರಳಿ ಬಂದರೂ ಅವರು ತಾವು ಮೊದಲು ಹೊಂದಿದಷ್ಟು ಪ್ರಬಲವಾದ

ನಿಯಂತ್ರಣವನ್ನು ಕ್ರೈಸ್ತರ ಮೇಲೆ ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಬಾಸೆಲ್ ಮಿಶನಿನ ಈ ಎರಡನೇ ಹಂತದ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು, ಬಾಸೆಲ್ ಮಿಶನರಿಗಳ ಮೇಲೂ ಟೀಕಾ ಪ್ರಹಾರ ನಡೆಸಿದ್ದರು ಎಂಬುದನ್ನು ಗಮನಿಸಬೇಕಾಗಿದೆ.

1920ರ ದಶಕದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಸ್ವತಂತ್ರರಾಗಿ ಚಿಂತನೆ ನಡೆಸಲು ಆರಂಭಿಸಿದ್ದರು. ಸ್ವತಂತ್ರ ಎಂಬ ಶಬ್ದಕ್ಕೆ ವಿಶಾಲವಾದ ಅರ್ಥವಿದ್ದು ಬಂಧೀಖಾನೆಯಲ್ಲಿರುವ ಖೈದಿಗೆ ತನಗೆ ಅದು ಬೇಕು ಅಥವಾ ಬೇಡ ಎಂದು ಹೇಳುವ ಸ್ವಾತಂತ್ರ್ಯವಿದೆ. ಆದರೆ ಬಾಸೆಲ್ ಮಿಶನ್ ಕೈಸ್ತರು ಅಷ್ಟರ ಮಟ್ಟಿಗೂ ಸ್ವತಂತ್ರರಾಗಿ ಉಳಿದಿಲ್ಲ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದರು. ಎಲ್ಲಿಯವರೆಗೆ ಬಾಸೆಲ್ ಮಿಶನ್ ಕ್ರೈಸ್ತರು ವಿದೇಶಿಯರ ಸಹಾಯವಿಲ್ಲದೆ ಬೆಳೆಯುವುದಿಲ್ಲವೋ ಅಲ್ಲಿಯವರೆಗೆ ಬಾಸೆಲ್ ಮಿಶನ್ ಕ್ರೈಸ್ತರು ಸ್ವತಂತ್ರರಲ್ಲ ಎಂಬುದಾಗಿ ಎಚ್ಚರಿಸಿದ್ದರು. ವಿದೇಶದಿಂದ ಇಲ್ಲಿಗೆ ಬಂದಿರುವ ಹಲವು ಸಮುದಾಯದವರು ದೇಶಿಯತೆಯನ್ನು ಅನುಸರಿಸಿ ಸ್ವತಂತ್ರ ಸಮಾಜಗಳಾಗಿ ಬೆಳೆದಿದ್ದಾರೆ. ಆದರೆ ಬಾಸೆಲ್ ಮಿಶನ್ ಕೈಸ್ತರು ದೇಶಿಯರೇ ಆಗಿದ್ದು ಕೇವಲ ಮತಾಂತರ ಹೊಂದಿದವರಾಗಿ ಸ್ವತಂತ್ರ ಸಮಾಜವಾಗಲು ಕಷ್ಟವಾಗಿದೆ ಎಂಬುದಾಗಿ ಬಾಸೆಲ್ ಮಿಶನ್ ಕ್ರೈಸ್ತರು ವ್ಯಸನಪಟ್ಟಿದ್ದರು. ಬಾಸೆಲ್ ಮಿಶನ್ ಕೈಸ್ತರು ಎಲ್ಲಾ ರೀತಿಯಲ್ಲೂ ದೇಶಿಯತೆಯನ್ನು ಮರೆತು, ವಿದೇಶಿಯತೆಯನ್ನು ಅನುಸರಿಸುವುದೇ ಇದಕ್ಕೆ ಕಾರಣವೆಂಬುದು ಅವರ ಅಭಿಪ್ರಾಯವಾಗಿತ್ತು.[45] ಹೀಗೆ ಸ್ವತಂತ್ರವಾದ ಪರಿಕಲ್ಪನೆಯನ್ನು ಬಾಸೆಲ್ ಮಿಶನ್ ಕ್ರೈಸ್ತ ಸಮಾಜದಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಿದ್ದ ಬಾಸೆಲ್ ಮಿಶನ್ ಕ್ರೈಸ್ತರು ವಿದೇಶಿಯತೆಯನ್ನು ಅನುಸರಿಸುವುದನ್ನು ಪ್ರಬಲವಾಗಿ ಖಂಡಿಸಿ ದೇಶಿಯರಾಗಲು ಕರೆ ನೀಡಿದ್ದರು. ಈ ವಿಚಾರವು ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ರಾಷ್ಟ್ರೀಯ ಮನೋಭಾವ ಪ್ರಬಲವಾಗಿ ಇತ್ತೆಂಬುದನ್ನು ತೋರಿಸುತ್ತದೆ. 'ಸತ್ಯವ್ರತವು' ಪಾಶ್ಚಾತ್ಯರನ್ನು ಹಾಗೂ ಬ್ರಿಟಿಷರನ್ನು ಪ್ರಬಲವಾಗಿ ಟೀಕೆಗೆ ಗುರಿಪಡಿಸಿದೆ. ಬಾಸೆಲ್ ಮಿಶನ್ ಕ್ರೈಸ್ತರು ಪಾಶ್ಚಾತ್ಯ ಆದರ್ಶಗಳನ್ನು ಅನುಸರಿಸುತ್ತಾ ಬ್ರಿಟಿಷ್ ಸಾಮ್ರಾಜ್ಯ ರಚನೆಗೆ ಸಹಾಯಕರಾಗಿದ್ದಾರೆ. ಇದರಿಂದಾಗಿ ಬಾಸೆಲ್ ಮಿಶನ್ ಕ್ರೈಸ್ತರು ತಮ್ಮ ಸ್ವಂತಿಕೆಯನ್ನು ಕಳೆದುಕೊಂಡಂತಾಗಿದೆ. ಪಾಶ್ಚಾತ್ಯರು ಎಲ್ಲಾ ಖಂಡಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿ ಅಲ್ಲಿನ ಮೂಲ ನಿವಾಸಿಗಳನ್ನು ನಿರ್ನಾಮ ಮಾಡಿದ್ದಾರೆ. ಮುಂದೆ ಈ ಪಾಶ್ಚಾತ್ಯ ಬ್ರಿಟಿಷರು ನಮ್ಮ ಭಾರತವನ್ನು ಬಿಟ್ಟಾರೋ ಎಂದು ಪ್ರಶ್ನಿಸುತ್ತಾ, ಈ ಗಂಡಾಂತರಕ್ಕೆ ಕ್ರೈಸ್ತ ಸಮಾಜವು ಬಲಿಬೀಳಬಾರದೆಂದೂ, ದೇಶದ್ರೋಹಿಗಳಾಗಬಾರದೆಂದೂ ಕರೆ ನೀಡುತ್ತಾ, ಒಂದು ವೇಳೆ ಬ್ರಿಟಿಷರನ್ನು ಬೆಂಬಲಿಸಿದರೆ ಪರದೇಶಿಯರ ಗುಲಾಮರಾಗಬೇಕಾದೀತು ಎಂದು ಬಾಸೆಲ್ ಮಿಶನ್ ಕ್ರೈಸ್ತರಿಗೆ ಪತ್ರಿಕೆ ಎಚ್ಚರಿಸಿದೆ. ಪಾಶ್ಚಾತ್ಯರಿಂದ ಚೀನಾ ದೇಶಕ್ಕೆ ಗಂಡಾಂತರವಾಗಲಿದೆ ಎಂದು ತಿಳಿದು ಪ್ರೊಟೆಸ್ಟೆಂಟ್ ಕ್ರೈಸ್ತರಾದ

ಡಾಕ್ಟರ್ ಸನ್ಯತ್ ಸೇನ್ ಹಾಗೂ ಜನರಲ್ ಫೆಂಗ್ ದೇಶವನ್ನು ರಕ್ಷಿಸಿದಂತೆ ಬಾಸೆಲ್ ಮಿಶನ್ ಕ್ರೈಸ್ತರು ದೇಶದಿಂದ ಬ್ರಿಟಿಷರನ್ನು ಕಿತ್ತೊಗೆಯಲು ಹೋರಾಡುತ್ತಾ ದೇಶ ಸೇವೆ ಮಾಡುವಂತೆ ಪತ್ರಿಕೆ ಬಾಸೆಲ್ ಮಿಶನ್ ಕ್ರೈಸ್ತರಿಗೆ ಕರೆನೀಡಿತ್ತು. ಪ್ರೊಟೆಸ್ಟೆಂಟ್ ಕ್ರೈಸ್ತರು ವಿದೇಶಿ ಮಿಶನರಿಗಳ ನಿಯಂತ್ರಣದಲ್ಲಿ ತಮ್ಮ ದೇಶಿಯ ಅಸ್ಥಿತ್ವವನ್ನು ಕಳಕೊಂಡಿದ್ದು, ಅವರು ಇತ್ತ ದೇಶಿಯರು ಅಲ್ಲ, ಅತ್ತ ವಿದೇಶಿಯರೂ ಅಲ್ಲ ಎಂಬ ದ್ವಂದ್ವಕ್ಕೆ ಬಲಿಯಾಗಿದ್ದಾರೆ. ಕ್ರೈಸ್ತರ ಈ ವರ್ತನೆಯಿಂದಾಗಿ ಅವರು ತಮ್ಮದೇ ದೇಶದಲ್ಲಿ ವಿದೇಶಿಯರೆಂದು ಚಿಂತಿಸುವಂತಾಗಿದ್ದು, ಇದು ಅವರನ್ನು ಬ್ರಿಟಿಷ್ ಸಾಮ್ರಾಜ್ಯದ ಸೇವಕರಂತೆ ಮಾಡಿದೆ ಎಂಬುದು ಪತ್ರಿಕೆಯ ವಾದವಾಗಿದೆ. ಆದುದರಿಂದ ಬಾಸೆಲ್ ಮಿಶನ್ ಕ್ರೈಸ್ತರು ದೇಶಿಯತೆಯ ಭಾಗವಾಗಿ, ಕ್ರೈಸ್ತತ್ವದ ಆದರ್ಶಗಳನ್ನು ಬಿಡದೆ ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗಬೇಕೆಂದು ಪತ್ರಿಕೆ ಬಾಸೆಲ್ ಮಿಶನ್ ಕ್ರೈಸ್ತರಿಗೆ ಕರೆ ನೀಡಿದೆ. ಭಾರತ ದೇಶವು ಹಲವು ಧರ್ಮಗಳನ್ನು ಒಪ್ಪಿಕೊಂಡಿರುವ ದೇಶವಾಗಿದ್ದು, ಧರ್ಮದ ವಿಚಾರಕ್ಕಾಗಿ ದೇಶದ್ರೋಹಿಗಳಾಗಬಾರದು ಎಂಬುದು ಪತ್ರಿಕೆಯ ವಾದವಾಗಿತ್ತು.[46]

ಸತ್ಯವ್ರತವು ಸ್ವತಂತ್ರದ ಬಗ್ಗೆ ಗಂಭೀರವಾದ ಚರ್ಚೆಯನ್ನು ಮಾಡುತ್ತಾ, ಮಿಶನಿನ ಸ್ಥಾಪನೆಯ ಹಿಂದೆ ಬಂಡವಾಳಶಾಹಿಗಳ ಕೈವಾಡವಿದೆ ಎಂಬ ಬಲವಾದ ಶಂಕೆಯನ್ನು ವ್ಯಕ್ತಪಡಿಸಿದೆ. ಬ್ರಿಟಿಷರು ನಮ್ಮನ್ನು ಬಿಟ್ಟು ಹೋಗುತ್ತಾರೆಂದು ಕನಸಿನಲ್ಲಿಯೂ ನೆನೆಯಲು ಸಾಧ್ಯವಿಲ್ಲ. ಅದೇ ರೀತಿ ಸ್ವಾತಂತ್ರ್ಯ ಕೊಡಿ ಎಂದು ಕೇಳಿದಾಗಲೇ ಕೊಡುವವರಲ್ಲ. ಆದುದರಿಂದ ಸ್ವಾತಂತ್ರ್ಯವನ್ನು ಪಡೆಯಲು ಪ್ರಬಲ ಹೋರಾಟದ ಅಗತ್ಯವಿದ್ದು, ಅದರಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ಭಾಗಿಯಾಗಬೇಕಿದೆ ಎಂದಿದೆ. ಮಿಶನ್ ಸ್ಥಾಪನೆ ಮಾಡುವುದು ಪಾಶ್ಚಾತ್ಯ ದೇಶದವರ ಕಸುಬಾಗಿದ್ದು, ಬಂಡವಾಳಶಾಹಿಗಳು ವಸಾಹತುಗಳನ್ನು ಸುಲಭವಾಗಿ ತಮ್ಮ ನಿಯಂತ್ರಣಕ್ಕೆ ಒಳಪಡಿಸಿ ಅದನ್ನು ಶೋಷಿಸಲು ಮಿಶನನ್ನು ಬಳಸಿಕೊಂಡಿದ್ದಾರೆ ಎಂಬುದಾಗಿ ಟೀಕಿಸಿದೆ. ಬಂಡವಾಳಶಾಹಿಗಳ ಈ ಪ್ರೊಪಗಾಂಡಕ್ಕೆ ಮಿಶನರಿಗಳನ್ನು ಬಳಸಲಾಗಿದೆ ಹಾಗೂ ದೇಶಿಯ ಕ್ರೈಸ್ತರು ಇದಕ್ಕೆ ಬಲಿಯಾಗಿದ್ದಾರೆ. ಸಾಮ್ರಾಜ್ಯಶಾಹಿಯನ್ನು ಬಲಿಷ್ಠಗೊಳಿಸಲು ಮಿಶನ್‌ಗಳನ್ನು ಬಳಸಲಾಗಿದೆ ಎಂಬುದೇ ಪತ್ರಿಕೆಯ ವಾದವಾಗಿದೆ.[47] ಪಾಶ್ಚಾತ್ಯ ಸಂಸ್ಕೃತಿಯನ್ನು ಕುರುಡಾಗಿ ಅನುಸರಿಸುತ್ತಿದ್ದ ಸ್ಥಳೀಯ ಕ್ರೈಸ್ತರನ್ನು ಎಚ್ಚರಿಸಿರುವ 'ಸತ್ಯವ್ರತವು' ಬಾಸೆಲ್ ಮಿಶನ್ ಕ್ರೈಸ್ತರು ಭಾರತೀಯ ಕ್ರೈಸ್ತರಾಗಿದ್ದು, ಪಾಶ್ಚಾತ್ಯ ಜೀವನ ಶೈಲಿಯನ್ನು ಅನುಸರಿಸುವುದು ಬಾಸೆಲ್ ಮಿಶನ್ ಕ್ರೈಸ್ತ ಭ್ರಮೆಯಾಗಿದೆ ಎಂದಿದೆ. ಪ್ರಸ್ತುತ ಕಾಲವು ರಾಷ್ಟ್ರೀಯತೆಯ, ದೇಶಿಯತೆ ಕಾಲವಾಗಿದ್ದು, ಬಾಸೆಲ್ ಮಿಶನ್ ಕ್ರೈಸ್ತರು ಇದಕ್ಕೆ ಎದುರಾಗಿ ನಿಲ್ಲದೇ ಸ್ವಾಯತ್ತ ಚರ್ಚ್ ಆಡಳಿತ ಹಾಗೂ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಭಾಗಿಯಾಗಬೇಕೆಂಬ ಕರೆಯನ್ನು ನೀಡಿತ್ತು.[48] ಭವಿಷ್ಯತ್ತಿನಲ್ಲಿ ರಾಷ್ಟ್ರವು

ಸ್ವರಾಜ್ಯವನ್ನು ಪಡೆಯಲಿದ್ದು ಈಗಿರುವ ಹಾಗೆ, ಕ್ರೈಸ್ತರು ಮುಂದುವರಿದರೆ ಸ್ವಾಯತ್ತ ಸರಕಾರದಲ್ಲಿ ಕ್ರೈಸ್ತರಿಗೆ ಸ್ಥಾನ ಲಭಿಸದೇ ಹೋದೀತು. ಆದುದರಿಂದ ಬಾಸೆಲ್ ಮಿಶನ್ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗುವಂತೆ ಪತ್ರಿಕೆ ತಿಳಿಸುತ್ತದೆ.

1920ರ ದಶಕದ ನಂತರ ಕ್ರೈಸ್ತ ಹಿತವಾದಿಯು ರಾಷ್ಟ್ರೀಯ ಹೋರಾಟ ಹಾಗೂ ಅವುಗಳಿಗೆ ಸಂಬಂಧಿಸಿದ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸುವುದನ್ನು ಗಮನಿಸಬಹುದು. 1924ರ ಕಾಲದಲ್ಲಿ ಪತ್ರಿಕೆಯು ಭಾರತೀಯರು ಬೇಡಿಕೆ ಮಂಡಿಸುತ್ತಿದ್ದ ಸ್ವರಾಜ್ಯದ ಬಗ್ಗೆ ಪ್ರಬಲ ಚರ್ಚೆಯನ್ನು ನಡೆಸುತ್ತದೆ. ಈ ಚರ್ಚೆಯಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತದ ಬಗ್ಗೆ ಪತ್ರಿಕೆ ಕಾಳಜಿಯನ್ನು ವ್ಯಕ್ತಪಡಿಸುತ್ತಾ, ಜಾಗತಿಕ ಯುದ್ಧದ ಸಂದರ್ಭದಲ್ಲಿ ಭಾರತೀಯರಿಗೆ ಬ್ರಿಟಿಷರು ನೀಡಿರುವ ಸುಳ್ಳು ಭರವಸೆಗಳನ್ನು ಐತಿಹಾಸಿಕವೆಂದು ಬಿಂಬಿಸುವ ಪ್ರಯತ್ನವನ್ನು ಪತ್ರಿಕೆ ನಡೆಸಿದೆ. 1909ರ ಮಿಂಟೋ ಮಾರ್ಲೆ ಸುಧಾರಣೆಗಳ ಬಳಿಕ ಭಾರತೀಯರು ಅದನ್ನು ವಿರೋಧಿಸಿ ಗಲಭೆಗಳನ್ನು ನಡೆಸಿದರೂ, ಬ್ರಿಟಿಷ್ ಸರಕಾರ ಭಾರತೀಯರಿಗೆ ಸ್ವರಾಜ್ಯವನ್ನು ಕೊಡಬೇಕೆಂಬ ಚಿಂತನೆಯನ್ನು ಬಿಟ್ಟುಬಿಡಲಿಲ್ಲ. 1917ರಲ್ಲಿ ಬ್ರಿಟಿಷ್ ಸರಕಾರ ಆಡಳಿತದಲ್ಲಿ ಹೆಚ್ಚು ಭಾರತೀಯರಿಗೆ ಪ್ರಾತಿನಿಧ್ಯ ನೀಡಬೇಕು ಹಾಗೂ ಸ್ವತಂತ್ರಾಡಳಿತೆಯ ಸಂಸ್ಥೆಗಳನ್ನು ಹೆಚ್ಚಿಸಬೇಕೆಂದು ನಿರ್ಧರಿಸಿ, 1919ರಲ್ಲಿ ಭಾರತೀಯರಿಗೆ ಹೊಸ ಸುಧಾರಣೆಗಳನ್ನು ಜಾರಿಗೊಳಿಸಿತು. ಆದರೆ ಭಾರತೀಯರು ಇದಕ್ಕೂ ವಿರೋಧ ವ್ಯಕ್ತಪಡಿಸಿದ್ದಾರೆ ಎಂದಿದೆ. ಮತ್ತೊಂದೆಡೆ ಪತ್ರಿಕೆಯು ಭಾರತದಲ್ಲಿ ಹಲವಾರು ಜಾತಿಗಳಿದ್ದು, ಇವು ಭಾರತಕ್ಕೆ ಕೆಡುಕಾಗಿದ್ದು ಸುಧಾರಣೆಗಳಿಗೂ ಅಡ್ಡಿಯಾಗಿದೆ ಎನ್ನುತ್ತಾ, ಹಿಂದೂ ಮುಸಲ್ಮಾನರನ್ನು ಒಟ್ಟುಗೂಡಿಸುವಲ್ಲಿ ಗಾಂಧೀಜಿಯವರು ಮಾಡಿದ ಪ್ರಯತ್ನಗಳು ವಿಫಲವಾಗಿವೆ ಎಂದು ಅಭಿಪ್ರಾಯಪಟ್ಟಿದೆ.[49] ಭಾರತದಲ್ಲಿ 'ಸ್ವರಾಜ್ಯ' ಸ್ಥಾಪನೆಗೆ ಭಾರತದಲ್ಲಿನ ಜಾತಿ ವ್ಯವಸ್ಥೆ ಮಾರಕವಾಗಿದೆ ಎಂಬುದೇ ಪತ್ರಿಕೆಯ ವಾದ. ಕ್ರೈಸ್ತ ಹಿತವಾದಿಯು ತನ್ನ ವಾದದಲ್ಲಿ ಬ್ರಿಟಿಷರನ್ನು ಸಮರ್ಥಿಸುವ ಪ್ರಯತ್ನವನ್ನು ಮಾಡಿರುವುದನ್ನು ಗಮನಿಸಬಹುದು. ಭಾರತದಲ್ಲಿ ಶೂದ್ರರೆಂಬ, ಪಂಚಮರೆಂಬ ಕೀಳು ಜಾತಿಯವರಿದ್ದು ಇವರು ದೇಶದ ಮೂಲ ನಿವಾಸಿಗಳಾಗಿದ್ದಾರೆ. ಆದರೆ ಇವರಿಗಿಂತ ಬಲಿಷ್ಠರಾದ ಪರದೇಶಿಯರು ಇವರ ಮೇಲೆ ದಾಳಿ ಮಾಡಿ ಇವರನ್ನು ಗುಲಾಮರನ್ನಾಗಿಸಿ ಅವರ ಈ ಸ್ಥಿತಿಗೆ ಕಾರಣವಾಯಿತು. ಆದರೆ ಬ್ರಿಟಿಷ್ ಸರಕಾರ ಎಲ್ಲರಿಗೂ ಸಮಾನವಾದ ಕಾನೂನುಗಳನ್ನು ಜಾರಿಗೆ ತಂದು ಶೂದ್ರರ, ಪಂಚಮರ ಸ್ಥಾನಗಳು ಸುಧಾರಿಸಿವೆ. ಹೀಗೆ ಈ ಬಡ ಜನರ ಹಿತಚಿಂತನೆ ಮಾಡಿರುವುದು ಬ್ರಿಟಿಷ್ ಸರಕಾರವಾಗಿದ್ದು, ಭಾರತೀಯರಲ್ಲ ಎಂದಿರುವ ಪತ್ರಿಕೆ, ಬ್ರಿಟಿಷ್ ಸರಕಾರ ಭಾರತಕ್ಕೆ ಏಕ ಪ್ರಕಾರದ ಕಾನೂನಿನ ಆಡಳಿತ ನೀಡಿದೆ

ಹಾಗೂ ಈ ರೀತಿ ಸಮಾಜದಲ್ಲಿನ ಬಡವರನ್ನು ಮರೆತು ಒಮ್ಮೆಲೇ ಸ್ವರಾಜ್ಯವನ್ನು ನೀಡುವುದು ಹೇಗೆ? ಎಂದು ಪ್ರಶ್ನಿಸಿದೆ.[50]

ಬ್ರಿಟಿಷ್ ಸರಕಾರದ ಪರವಹಿಸುತ್ತ ಹಿತವಾದಿಯು ಭಾರತದಲ್ಲಿನ ಶಾಂತಿ, ಶಿಕ್ಷಣದ ಪ್ರಗತಿ ಇತರ ಹಲವು ಸುಧಾರಣೆಗಳು ಬ್ರಿಟಿಷರು ಭಾರತೀಯರಿಗೆ ನೀಡಿರುವ ಕೊಡುಗೆಗಳಾಗಿವೆ. ಬ್ರಿಟಿಷರು ಜಾರಿಗೆ ತಂದ ಆಧುನಿಕ ಶಿಕ್ಷಣ ವ್ಯವಸ್ಥೆಯಿಂದಾಗಿ ಭಾರತೀಯರಲ್ಲಿ ಪ್ರಗತಿಯುಂಟಾಗಿ ಭಾರತದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳಾಗಿವೆ ಎಂದು ವಾದಿಸಿದೆ.[51] ಈ ರೀತಿ ಆ ಕಾಲದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರು ರಾಷ್ಟ್ರೀಯ ಹೋರಾಟದ ಕಡೆ ಹೋಗದಂತೆ ತಡೆಯುವ ಹಾಗೂ ಸ್ಥಳೀಯ ಕ್ರೈಸ್ತರಲ್ಲಿ ಬ್ರಿಟಿಷ್ ಸರಕಾರದ ಬಗ್ಗೆ ಉತ್ತಮ ಅಭಿಪ್ರಾಯ ರೂಪಿಸುವ ಕೆಲಸವನ್ನು ಪತ್ರಿಕೆ ನಿರ್ವಹಿಸಿತ್ತು ಎಂಬುದನ್ನು ಗಮನಿಸಬಹುದು. ಈ ಮೇಲಿನ ರೀತಿಯ ಮಿಶನರಿಗಳ ಹಾಗೂ ಪತ್ರಿಕೆಯ ಅಭಿಪ್ರಾಯಗಳು ಬಾಸೆಲ್ ಮಿಶನ್ ಕ್ರೈಸ್ತರ ಮೇಲೆ ಪರಿಣಾಮ ಬೀರಲು ಶಕ್ತವಾಗಿದ್ದವು. ಹಿತವಾದಿಯು ಭಾರತೀಯರ ಮತ್ತೊಂದು ಬೇಡಿಕೆಯಾದ 'ಡೊಮಿನಿಯನ್ ಸ್ಟೇಟಸ್' ಬಗ್ಗೆ ಚರ್ಚಿಸುತ್ತಾ, ವಸಾಹತುವಿನ ಪ್ರಜೆಗಳು ಒಗ್ಗಟ್ಟಾದ ಸದೃಢ ಜನಾಂಗದ ಸ್ಥಿತಿಗೆ ತಲುಪಿದರೆ, ಆ ವಸಾಹತು 'ಡೊಮಿನಿಯನ್ ಸ್ಟೇಟಸ್'ಗೆ ಮುಟ್ಟಿದಾಗಿರುತ್ತದೆ. ಆದರೆ ಭಾರತವು ಒಗ್ಗಟ್ಟಾಗಿಲ್ಲ. ಭಾರತದಲ್ಲಿ ಮತೀಯ ಬೇಧಗಳಿದ್ದು ಸಾರ್ವಜನಿಕ ಭದ್ರತೆ ಇಲ್ಲದಾಗಿದೆ. ಆದುದರಿಂದ ಭಾರತಕ್ಕೆ 'ಡೊಮಿನಿಯನ್ ಸ್ಟೇಟಸ್' ಸಿಗದಿರಲು ಬ್ರಿಟಿಷರು ಕಾರಣರಲ್ಲ. ಬದಲು ಭಾರತದಲ್ಲಿನ ಸ್ಥಿತೀಯೇ ಮುಖ್ಯ ಕಾರಣವಾಗಿದೆ ಎಂಬುದು ಪತ್ರಿಕೆಯ ವಾದವಾಗಿದೆ. ಪ್ರಸ್ತುತ ಭಾರತವು ಈಗಿನ ಪರಿಸ್ಥಿತಿಗೆ ಏಕಾಏಕಿ ಮುಟ್ಟಲಿಲ್ಲ. ಹಲವು ಬ್ರಿಟಿಷ್ ಅಧಿಕಾರಿಗಳ ಕಠಿಣ ಶ್ರಮದಿಂದ ಭಾರತವು ಈ ಹಂತಕ್ಕೆ ತಲುಪಿದೆ. ಅದೇ ರೀತಿ ಭಾರತಕ್ಕೆ 'ಡೊಮಿನಿಯನ್ ಸ್ಟೇಟಸ್'ನ್ನು ನೀಡುವುದು ಬ್ರಿಟಿಷ್ ಸರಕಾರದ ಮತ್ತೊಂದು ಉದ್ದೇಶವಾಗಿದ್ದು, ಅದಕ್ಕಾಗಿ ಭಾರತೀಯರು ಬಹು ತಾಳ್ಮೆಯಿಂದ ಬ್ರಿಟಿಷರೊಂದಿಗೆ ಸಹಕರಿಸಬೇಕಾಗಿದೆ ಎಂದಿದೆ.[52] ಭಾರತವು ಹಂತ ಹಂತವಾಗಿ ಪ್ರಗತಿಯನ್ನು ಬ್ರಿಟಿಷ್ ಅಧಿಕಾರವಧಿಯಲ್ಲಿ ದಾಖಲಿಸಿದ್ದು, ಭಾರತೀಯರು ಬ್ರಿಟಿಷರ ವಿರುದ್ಧ ಹೋರಾಡದೇ ಅವರೊಂದಿಗೆ ಸಹಕರಿಸಬೇಕಾಗಿದೆ ಎನ್ನುವ ವಾದವಿದೆ. ಬ್ರಿಟಿಷ್ ಸರಕಾರ ಭಾರತೀಯರಿಗೆ ತೋರ್ಪಡಿಸಿದ ಸಹಾನುಭೂತಿಯ ಬಗ್ಗೆ ಭಾರತೀಯರಲ್ಲಿ ತಪ್ಪಾದ ಗ್ರಹಿಕೆಗಳಿವೆ ಹಾಗೂ ಇವು ಕಾರಣ ರಹಿತವಾಗಿದೆ. ಭಾರತಕ್ಕೆ 'ಡೊಮಿನಿಯನ್ ಸ್ಟೇಟಸ್' ಸಿಗಲಿಕ್ಕೆ ತಡವಾಗಿದ್ದರೆ, ಅದಕ್ಕೆ ಭಾರತೀಯರೇ ಕಾರಣ ಎಂದು ಪತ್ರಿಕೆ ಅಭಿಪ್ರಾಯಪಟ್ಟಿದೆ.[53] ಲೇಖಕರ ಪ್ರಕಾರ ಜಾತಿ ಪದ್ಧತಿ ಹಾಗೂ ಭಾರತದ ಹಣಕಾಸಿನ ದುಸ್ಥಿತಿ ಭಾರತಕ್ಕಿರುವ ಬಹುದೊಡ್ಡ ತಡೆಗೋಡೆಗಳಾಗಿವೆ. ಗಾಂಧೀಜಿಯವರು ಹಿಂದೂ, ಮುಸಲ್ಮಾನರ ಏಕತೆ, ಅಸ್ಪೃಶ್ಯತಾ ನಿಷೇಧ ಮುಂತಾದ ವಿಚಾರಗಳನ್ನು ಸಾರಿ ಬಹು ನಿರೀಕ್ಷೆ ಹುಟ್ಟಿಸಿ,

ತದನಂತರ ಎಲ್ಲಿಯೂ ಮರೆಯಾಗಿ ಎಲ್ಲರಿಗೂ ನಿರಾಶೆಯುಂಟುಮಾಡಿದ್ದಾರೆ. ಗಾಂಧೀಜಿಯವರ ಕಾನೂನು ಭಂಗ ಚಳುವಳಿಯ ಬಗ್ಗೆ ಉಲ್ಲೇಖಿಸುತ್ತಾ, ಪರದೇಶದ ಆಮದಾದ ಬಟ್ಟೆಗಳನ್ನು ಸುಡುವುದರಿಂದ ಯಾವುದೇ ಪ್ರಗತಿಯಾಗದು. ಇದು ಮತ್ತೊಂದು ದೇಶಕ್ಕೆ ಮಾಡುವ ಅವಮಾನದ ಕೃತ್ಯವಾಗಿದೆ. ಗಾಂಧೀಜಿಯವರ ಅಸಹಕಾರ ಚಳುವಳಿಯು ದೇಶದಲ್ಲಿ ಹಲವು ಸಮಸ್ಯೆಗಳಿಗೆ ಕಾರಣವಾಗಿದೆ ಎಂದಿದ್ದಾರೆ.[54] ಈ ರೀತಿ ಲೇಖಕರು ಗಾಂಧೀಜಿಯವರ ಹೋರಾಟಗಳು ಜನರಲ್ಲಿ ನಿರಾಶೆಯುಂಟುಮಾಡಿದ್ದವು. ಅವು ವಿಫಲವಾಗಿದೆ ಎಂಬ ಚಿತ್ರಣವನ್ನು ನೀಡುವ ಪ್ರಯತ್ನವನ್ನು ಮಾಡಿದ್ದಾರೆ.

ಬ್ರಿಟಿಷ್ ವಸಾಹತು ಸರಕಾರದ ಕಾಲದಲ್ಲಿನ ವಿವಿಧ ಹೋರಾಟಗಳನ್ನು ಹಿತವಾದಿಯು ಚರ್ಚೆಗೆ ಒಳಪಡಿಸಿರುವುದನ್ನು ಗಮನಿಸಬಹುದು. ಮಹಾತ್ಮಾ ಗಾಂಧೀಜಿಯವರ ಹೋರಾಟಗಳಾದ ಉಪ್ಪಿನ ಸತ್ಯಾಗ್ರಹ ಹಾಗೂ ಕಾನೂನು ಭಂಗ ಚಳುವಳಿಗಳ ಬಗ್ಗೆ ಚರ್ಚಿಸುತ್ತಾ ಉಪ್ಪನ್ನು ತಯಾರಿಸಿ ಮಾರುವುದು ಸರಕಾರವಾಗಿದ್ದು, ಈ ವಿಚಾರದಲ್ಲಿ ಗಾಂಧೀಜಿಯವರು ಅನಗತ್ಯವಾದ ಗದ್ದಲವನ್ನು ಮಾಡಿದ್ದಾರೆ ಎಂದು ಪತ್ರಿಕೆ ಗಾಂಧೀಜಿಯವರ ಹೋರಾಟವನ್ನು ಟೀಕಿಸಿದೆ. ಮಹಾತ್ಮಾ ಗಾಂಧೀಜಿಯವರ ಬಗ್ಗೆ ಗೌರವವನ್ನು ಹೊಂದಿದ್ದ ಪತ್ರಿಕೆ ಅವರ ವ್ಯಕ್ತಿತ್ವದ ಬಗ್ಗೆ ಅವರು ಗಳಿಸಿದ ಪ್ರಖ್ಯಾತಿಯ ಬಗ್ಗೆ ಉತ್ತಮವಾದ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಿದೆ. ಪತ್ರಿಕೆಯು ಗಾಂಧೀಜಿಯವರನ್ನು ಯೇಸುಕ್ರಿಸ್ತರೊಂದಿಗೆ ತುಲನೆ ಮಾಡುವ ಪ್ರಯತ್ನ ಪಟ್ಟಿದೆ. ಕ್ರಿಸ್ತರು ದೇವರ ರಾಜ್ಯಕ್ಕೆ ಶ್ರಮಿಸಿದರು. ಆದರೆ ಗಾಂಧೀಜಿಯವರು ಲೋಕ ರಾಜ್ಯಕ್ಕಾಗಿ ಹೋರಾಡುತ್ತಿದ್ದಾರೆ. ಅದಕ್ಕಾಗಿ ತಮ್ಮ ಚಮತ್ಕಾರದ ಮಾತುಗಳಿಂದ ಜನರನ್ನು ಗುಂಪು ಗುಂಪಾಗಿ ಸೇರಿಸಿ ಗಲಾಟೆ ಮಾಡುತ್ತಿದ್ದಾರೆ. ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿ ಅನೇಕರು ಅದರಲ್ಲಿ ಭಾಗವಹಿಸಿ ಸರಕಾರದ ಶಿಕ್ಷೆಗೆ ಒಳಗಾಗಿದ್ದಾರೆ. ಇದು ಅವರ ಕುಟುಂಬಗಳಿಗೆ ಸಂಕಷ್ಟವನ್ನೇ ತಂದೊಡ್ಡಿದೆ. ಗಾಂಧೀಜಿಯವರೊಂದಿಗೆ ಹಲವಾರು ವ್ಯಕ್ತಿಗಳಿದ್ದು ಅವರಿಗೆ ದಿನಕ್ಕೆ 5 ಆಣೆ ಖರ್ಚಾಗುತ್ತಿದೆ. ಈ ಹಣ ಯಾರದು? ಇದರಿಂದ ಬಡವರ ಉದ್ಧಾರವಾಗುವುದೇ? ಎಂದು ಪ್ರಶ್ನಿಸುತ್ತಾ, ಇದು ಬಡವರಿಗೆ ಹೊರೆಯಾಗಿದೆ. ವಿದೇಶಿ ಬಟ್ಟೆ ಬರೆಗಳನ್ನು ರಾಶಿ ರಾಶಿ ಸುಡಲಾಗುತ್ತಿದೆ. ಇದರಿಂದ ಯಾವ ಲಾಭವೋ ಇಲ್ಲ. ಇದನ್ನು ವ್ಯರ್ಥವಾಗಿ ಯಾಕೆ ಸುಡಬೇಕಾಗಿದೆ ಎಂದು ಪ್ರಶ್ನಿಸುತ್ತಾ, ಎಷ್ಟೋ ಬಡವರು ಬಟ್ಟೆ ಇಲ್ಲದೇ ಬಿದಿಯಲ್ಲಿ ಬಿದ್ದು ಶ್ರಮಪಡುತ್ತಿದ್ದಾರೆ. ಈ ಸುಡುವ ಬಟ್ಟೆಗಳನ್ನು ಅವರಿಗಾದರೂ ದಾನ ಮಾಡಬಾರದೆ? ಎಂದು ಹಿತವಾದಿ ಪ್ರಶ್ನಿಸಿದೆ.[55] ಗಾಂಧೀಜಿಯವರ ಹೋರಾಟಗಳು ದೇಶದಲ್ಲಿ ಸಮಸ್ಯೆಗಳಿಗೆ ಕಾರಣವಾಗಿದೆ ಎಂದು ಪತ್ರಿಕೆ ಅಭಿಪ್ರಾಯಪಟ್ಟಿದೆ.

ಹಿತವಾದಿಯು ಗಾಂಧೀಜಿಯವರ ಹೋರಾಟದ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸುತ್ತಾ, ಗಾಂಧೀಜಿಯವರು ಬಡವರ ಚಿಂತೆಯುಳ್ಳವರಲ್ಲವೇ? ಹೀಗಿರುವಾಗ ಅವರು ಹೋದ ಊರುಗಳ ಜನರಿಂದ ಹಣವನ್ನು ಸಂಗ್ರಹಿಸುತ್ತಿರುವುದೇಕೆ? ಹೀಗೆ ಸಂಗ್ರಹಿಸಿದ ಹಣದ ಮೊತ್ತ ಎಷ್ಟೋ ಲಕ್ಷವಾಗಿರಬಹುದು. ಮಂಗಳೂರಿಗೆ ಬಂದಾಗಲೂ ಗಾಂಧೀಜಿ ಹಣ ಸಂಗ್ರಹಿಸಿದ್ದಾರೆ. ಅದರ ಲೆಕ್ಕವೆಷ್ಟು? ಹಾಗೂ ಅದನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ? ಎಂಬೆಲ್ಲಾ ಪ್ರಶ್ನೆಗಳನ್ನು ಕೇಳುತ್ತಾ ಅವರ ಹಿಂಬಾಲಕರಾಗಿರುವ ಕಾಂಗ್ರೆಸಿಗರ ಮೇಲೆ ತನಗೆ ಅನುಮಾನಗಳಿವೆ ಎಂದಿದೆ. ಗಾಂಧೀಜಿಯವರ ಅಸಹಕಾರ ಚಳವಳಿಯ ಬಗ್ಗೆ ಪ್ರಸ್ತಾಪಿಸುತ್ತ ದೇಶಕ್ಕೆ ಸ್ವರಾಜ್ಯ ತಂದು ಕೊಡುವುದಾಗಿ ದೇಶದಾದ್ಯಂತ ಜನರನ್ನು ಅದಕ್ಕೆ ಪ್ರೇರೇಪಿಸಿ ಗದ್ದಲ ಎಬ್ಬಿಸಿದ್ದರು. ಇದರಿಂದಾಗಿ ಎಷ್ಟೋ ಜನರು ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ಆದರೆ ಸ್ವರಾಜ್ಯ ಸಿಗಲಿಲ್ಲ. ಇದರಿಂದ ಅಸಹಕಾರ ಚಳುವಳಿಯು ವ್ಯರ್ಥವೆಂಬುದಾಗಿ ಗಾಂಧೀಜಿಯವರಿಗೂ ತಮ್ಮ ತಪ್ಪಿನ ಅರಿವಾಯಿತು. ಹೀಗಿರುವಾಗ ಮತ್ತೊಮ್ಮೆ ಈ ಉಪ್ಪಿನ ಸತ್ಯಾಗ್ರಹವೇಕೆ? ಎಂದು ಪತ್ರಿಕೆ ಪ್ರಶ್ನಿಸಿದೆ. ಈ ಹೋರಾಟದ ಸಂದರ್ಭದಲ್ಲಿ ಉಪ್ಪನ್ನು ಹೆಚ್ಚು ಹೆಚ್ಚು ಬೆಲೆಗೆ ಮಾರಾಟ ಮಾಡಿ ಎಷ್ಟೋ ಹಣ ಸಂಗ್ರಹಿಸಿದ್ದಾರೆ. ಕಮಲಾದೇವಿ ಚಟ್ಟೋಪಾಧ್ಯಾಯರು ಒಬ್ಬರೇ 30,000 ರೂಪಾಯಿ ಸಂಗ್ರಹಿಸಿದ್ದಾರೆ. ಇವರು ತಯಾರಿಸಿದ ಉಪ್ಪನ್ನು ಬಡವರಿಗೆ ಯಾಕೆ ಧರ್ಮಾರ್ಥವಾಗಿ ಕೊಡಲಿಲ್ಲ? ಇದೇನು ಹಣ ಸಂಪಾದಿಸುವ ಹೊಸ ಉಪಾಯವೇ? ಎಂದು ಪ್ರಶ್ನಿಸಿದೆ. ಗಾಂಧೀಜಿಯವರನ್ನು ದುಂಡು ಮೇಜಿನ ಪರಿಷತ್ತುಗಳಲ್ಲಿ ಭಾಗವಹಿಸುವಂತೆ ಬ್ರಿಟಿಷ್ ಸರಕಾರ ಆಮಂತ್ರಿಸಿದರೂ, ಅದನ್ನು ತಿರಸ್ಕರಿಸಿ, ಅದರಲ್ಲಿ ಏನಾಗಬಹುದೆಂಬುದನ್ನು ಗಮನಿಸದೇ, ಈ ರೀತಿ ಚಳವಳಿ ಎಬ್ಬಿಸುವುದು ನ್ಯಾಯವೋ ಎಂದು ಪತ್ರಿಕೆ ವಾಚಕರಲ್ಲಿ ಪ್ರಶ್ನಿಸಿದೆ.[56] ಹೀಗೆ ರಾಷ್ಟ್ರೀಯ ಹೋರಾಟದ ಬಗ್ಗೆ ಗಾಂಧೀಜಿಯವರ ಹೋರಾಟಗಳ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಹಲವು ಅನುಮಾನಗಳನ್ನು ಉಂಟು ಮಾಡುವ ಲೇಖನಗಳನ್ನು ಪತ್ರಿಕೆ ಪ್ರಕಟಿಸುತ್ತದೆ. ಜೊತೆಗೆ ಗಾಂಧೀಜಿಯವರ ಈವರೆಗಿನ ಹೋರಾಟಗಳು ಯಶಸ್ವಿಯಾಗಿಲ್ಲ. ಮುಂದಿನ ಹೋರಾಟಗಳು ಯಶಸ್ವಿಯಾಗುವುದಿಲ್ಲ ಎಂಬುದು ಪತ್ರಿಕೆಯ ಬಲವಾದ ನಂಬಿಕೆಯಾಗಿತ್ತು. ಈ ರೀತಿ ಪತ್ರಿಕೆ ತನ್ನ ಓದುಗರನ್ನು ರಾಷ್ಟ್ರೀಯ ಹೋರಾಟದಿಂದ ದೂರವಿರಿಸುವ ಪ್ರಯತ್ನವನ್ನು ಮಾಡಿತ್ತು ಎನ್ನಬಹುದು.

ಕಾಂಗ್ರೆಸಿನ ಕಾನೂನು ಭಂಗ ಚಳುವಳಿಯಿಂದ ದೇಶ ಸಂಕಷ್ಟವನ್ನು ಎದುರಿಸುವಂತಾಗಿದೆ. ಚಳುವಳಿಯಿಂದಾಗಿ ದೊಡ್ಡ ಕಾರ್ಖಾನೆಗಳು, ಗಿರಣಿಗಳು ಹಲವು ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುತ್ತಿವೆ. ಕೆಲವು ಕಾರ್ಖಾನೆಗಳು ಮುಚ್ಚಲ್ಪಡುತ್ತಿವೆ. ಈ ರೀತಿ ಚಳುವಳಿಯು ಬಡವರಿಗೆ ಸಂಕಷ್ಟವನ್ನುಂಟುಮಾಡಿದೆ. ಕಾಂಗ್ರೆಸಿನ ಚಳುವಳಿಯಿಂದ ದೇಶದಲ್ಲಿನ

ವ್ಯಾಪಾರ ಪತನವಾಗುತ್ತಾ ಹೋಗಿದೆ. ಇದು ರೈಲ್ವೆಯ ಮೇಲೂ ಪರಿಣಾಮ ಬೀರಿದೆ. ಈ ಹೋರಾಟದಲ್ಲಿ ಭಾಗವಹಿಸಿದ ಅನೇಕರಿಗೆ ಶಿಕ್ಷೆಯಾಗಿ ಅವರ ಕುಟುಂಬಗಳು ಸಂಕಷ್ಟಕ್ಕೆ ತುತ್ತಾಗಿವೆ. ಕಾರ್ಮಿಕರು ಬಡತನಕ್ಕೆ ತುತ್ತಾಗಿದ್ದಾರೆ. ಹೀಗೆ ಕಾಂಗ್ರೆಸಿನ ಇಂತಹ ಹೋರಾಟಗಳಿಂದ ದೇಶ ದಿವಾಳಿಯಾಗುವ ಹಂತಕ್ಕೆ ತಲುಪಿದೆಂಬ ವಾದವನ್ನು ಪತ್ರಿಕೆ ಹೊರಹಾಕಿದೆ.[57] ಪತ್ರಿಕೆಯು ಗಾಂಧೀಜಿಯವರ ಹೋರಾಟದ ಬಗ್ಗೆ ಬಹಳಷ್ಟು ತಾತ್ಸರದ ಮನೋಭಾವವನ್ನು ವ್ಯಕ್ತಪಡಿಸಿದೆ. ಪತ್ರಿಕೆಯು ಕಾಂಗ್ರೆಸಿನ ಹೋರಾಟದಿಂದ ದೇಶದ ವ್ಯಾಪಾರ ವಾಣಿಜ್ಯದ ಮೇಲಾಗಿರುವ ಪರಿಣಾಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ, ಕಾಂಗ್ರೆಸಿನ ಈ ರೀತಿಯ ಚಳುವಳಿಯ ಕಡೆಗೆ ತನ್ನ ಓದುಗರು ಹೇಗೆ ವರ್ತಿಸಬೇಕೆಂದು ಅವರು ತಿಳಿದುಕೊಳ್ಳಬಹುದು ಎಂದು ತಿಳಿಸಿದೆ.[58] ಹೀಗೆ ಪರೋಕ್ಷವಾಗಿ ಪತ್ರಿಕೆ ಸ್ಥಳೀಯರು ರಾಷ್ಟ್ರೀಯ ಹೋರಾಟದಿಂದ ದೂರವಿರುವಂತೆ ಉತ್ತೇಜಿಸಿದೆ ಎನ್ನಬಹುದು. 1931ರ ಏಪ್ರಿಲ್ 8 ರಂದು ಹೈದರಾಬಾದ್‌ನ ಭಾಷಣವೊಂದರಲ್ಲಿ ಗಾಂಧೀಜಿಯವರು ಮಿಶನರಿಗಳನ್ನು ಖಂಡಿಸುತ್ತಾ, ಭಾರತಕ್ಕೆ ಸ್ವರಾಜ್ಯ ಸಿಕ್ಕಿದರೆ, ಮಿಶನರಿಗಳು ವಿದ್ಯೆ, ಆರೋಗ್ಯ ಮತ್ತು ಇತರ ಸಾಮಾಜಿಕೆ ಸುಧಾರಣೆ ಕಾರ್ಯಗಳನ್ನು ಬಿಟ್ಟು, ಮತಪ್ರಚಾರದ ಕಾರ್ಯವನ್ನು ನಿಲ್ಲಿಸದಿದ್ದರೆ ಅವರನ್ನು ದೇಶ ಬಿಟ್ಟು ಹೋಗುವಂತೆ ನಾನು ಹೇಳುವೆನು[59] ಎಂದಿದ್ದರು. ಇದು ಮಿಶನರಿಗಳಿಂದ, ಕ್ರೈಸ್ತರಿಂದ ಹಾಗೂ ಇತರರಿಂದ ಪ್ರಬಲವಾಗಿ ವಿರೋಧಿಸಲ್ಪಟ್ಟಿತ್ತು. ಹಿತವಾದಿಯು ಗಾಂಧೀಜಿಯವರ ವಾದವನ್ನು ಟೀಕಿಸುತ್ತಾ, ಪರದೇಶಗಳ ಮಿಶನುಗಳ ಮೂಲಕ ಇಡೀ ಲೋಕವೇ ಮಾರ್ಪಟ್ಟಿದೆ. ಅದೇ ರೀತಿ ಪರದೇಶಗಳ ಮಿಶನುಗಳಿಂದ ಭಾರತವು ಮಾರ್ಪಟ್ಟಿದೆ. ಮಿಶನರಿಗಳು ಆತ್ಮೀಯ ಕಾರ್ಯಗಳನ್ನು ಬೋಧಿಸುತ್ತಿರುವರು. ಆದರೆ ಗಾಂಧೀಜಿಯವರು ದೇಶಿಯ ಕಾನೂನಿಗೆ ವಿರೋಧವಾಗಿ ಬೋಧಿಸಿ ಚಳುವಳಿಗಳನ್ನು ಎಬ್ಬಿಸಿ ಇಡೀ ಭಾರತವೇ ಸಂಕಷ್ಟಕ್ಕೆ ಗುರಿಯಾಗುವಂತೆ ಮಾಡಿದ್ದಾರೆ. ಆದುದರಿಂದ ಹೆಚ್ಚು ಖಂಡನೆಗೆ ಗುರಿಯಾಗಬೇಕಾದವರು ಗಾಂಧೀಜಿಯವರೋ? ಮಿಶನರಿಗಳೋ? ಎಂದು ಪ್ರಶ್ನಿಸಿದೆ.[60] ಅದೇ ರೀತಿ ಗಾಂಧೀಜಿಯವರು ಭಾರತದಲ್ಲಿ ಪಾನ್ ಇಸ್ಲಾಮಿಕ್ ಚಳುವಳಿಯನ್ನು (Pan-Islamic Movement) ಬೆಂಬಲಿಸಿ, ಪಾನ್-ಕ್ರೈಸ್ತ ಸಂಬಂಧವನ್ನು (Pan-Christian Network) ತಿರಸ್ಕರಿಸಿದ್ದರಿಂದ ಅವರು ಕ್ರೈಸ್ತ ವಿರೋಧಿಯಾಗಿಯೇ ಬಿಂಬಿಸಲ್ಪಡುತ್ತಾರೆ. ಆದುದರಿಂದ ಕೆಲವೇ ಕೆಲವು ಗಾಂಧೀ ಬೆಂಬಲಿಗರು ಕ್ರೈಸ್ತರಲ್ಲಿ ಕಂಡು ಬರುತ್ತಾರೆ.[61]

1930ರ ಕಾನೂನು ಭಂಗ ಚಳುವಳಿಯ ಸಂದರ್ಭದಲ್ಲಿ ಮಿಶನ್ ಚಟುವಟಿಕೆಗಳು ಸಂಕಷ್ಟಕ್ಕೆ ಗುರಿಯಾಗಿದ್ದವು. ಏಕೆಂದರೆ ಜನರು ರಾಜಕೀಯ ವಿಚಾರಗಳತ್ತಾ ಹೆಚ್ಚು ತಿರುಗಿದ್ದರು. ಬೆಂಗಳೂರು ಪ್ರದೇಶದ ಶಾಲೆಗಳಲ್ಲಿನ ಬಹುಪಾಲು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯ ಸ್ಫೂರ್ತಿ

ಬೆಳೆದಿತ್ತು. ಆದುದರಿಂದ ಅವರು ರಾಷ್ಟ್ರೀಯ ಹೋರಾಟಗಳಲ್ಲಿ ಭಾಗವಹಿಸಿದ್ದರು.[62] ರಾಷ್ಟ್ರೀಯ ಹೋರಾಟದ ಕಾಲದಲ್ಲಿ ಕ್ರೈಸ್ತತ್ವಕ್ಕೆ ಮತಾಂತರ ಹೊಂದಿದವರನ್ನು ಅವರ ಮೊದಲಿನ ಮತಕ್ಕೆ ಮತಾಂತರಿಸುವ ಪ್ರಯತ್ನವನ್ನು ಗಾಂಧೀಜಿ ಬೆಂಬಲಿಗರು ನಡೆಸಿರುವುದನ್ನು ಗಮನಿಸಬಹುದು. ಅದೇ ರೀತಿ ಮಿಶನರಿಗಳಿಗೆ ಮತ ಪ್ರಚಾರ ನಡೆಸುವುದಕ್ಕೂ ಅಡ್ಡಿ ಪಡಿಸಿದ ಹಲವು ಘಟನೆಗಳನ್ನು ಗಮನಿಸಬಹುದು. ಆದುದರಿಂದ ಕ್ರೈಸ್ತ ಹಿತವಾದಿಯು ಕಾಂಗ್ರೆಸಿಗರ ವರ್ತನೆಯನ್ನು ಹಿಂಸೆಯೋ ಅಹಿಂಸೆಯೋ ಎಂಬುದಾಗಿ ಪ್ರಶ್ನಿಸುತ್ತಾ ಖಂಡಿಸುತ್ತದೆ.[63] ಹೀಗೆ ಮಿಶನ್ ಪತ್ರಿಕೆಯಾದ ಕ್ರೈಸ್ತ ಹಿತವಾದಿಯು ನಿರಂತರವಾಗಿ ರಾಷ್ಟ್ರೀಯ ಹೋರಾಟಕ್ಕೆ ವಿರೋಧವುಳ್ಳ ನಿಲುವುಗಳ ಲೇಖನಗಳನ್ನು ಪ್ರಕಟಿಸುತ್ತಾ ಪರೋಕ್ಷವಾಗಿ ತನ್ನ ಓದುಗರನ್ನು ಹೋರಾಟದಿಂದ ದೂರವಿರಿಸಲು ಪ್ರಯತ್ನಿಸಿದೆ ಎನ್ನಬಹುದು. ಅದೇ ರೀತಿ ಮಿಶನರಿಗಳು ರಾಷ್ಟ್ರೀಯ ಹೋರಾಟದ ಪರವಾಗಿರಲಿಲ್ಲ ಎಂಬುದನ್ನು ತಿಳಿಯಬಹುದು. ಇದಕ್ಕೆ ವಿರುದ್ಧವಾಗಿ ಬ್ರಿಟಿಷ್ ಪರವಾದ ಅಭಿಪ್ರಾಯಗಳನ್ನು ಹೊಂದಿದ್ದ ಮಿಶನರಿಗಳು, ಬ್ರಿಟಿಷ್ ವಸಾಹತುಶಾಹಿ ಸರಕಾರವನ್ನು ಬೆಂಬಲಿಸುತ್ತಾ ತಮ್ಮ ಪತ್ರಿಕೆಗಳಲ್ಲಿ 'ಇಂಗ್ಲೀಷರು ಇಂಡಿಯಾದಲ್ಲಿ ಮಾಡಿದ್ದೇನು?' ಎಂಬ ಶೀರ್ಷಿಕೆಯಡಿ ಭಾರತದಲ್ಲಿ ಬ್ರಿಟಿಷ್ ಸರಕಾರದ ಕಾರ್ಯಸಾಧನೆಗಳನ್ನು ವಿವರಿಸಿ ವೈಭವೀಕರಿಸಿರುವುದನ್ನು ಗಮನಿಸಬಹುದು.[64]

ಬ್ರಿಟಿಷ್ ಸರಕಾರವು ಮಾಂಟೆಗೋ ಚೆಮ್ಸ್‌ಫರ್ಡ್ ಸುಧಾರಣೆಯಲ್ಲಿ ಕೋಮು ಆಧಾರದ ಮೇಲೆ ಚುನಾವಣಾ ಕಣಗಳನ್ನು (Communal Electorate) ಜಾರಿಗೆ ತಂದದ್ದುದರಿಂದ ಕ್ರೈಸ್ತರಿಗೆ ತಮ್ಮ ರಾಜಕೀಯ ಹಕ್ಕುಗಳನ್ನು ಅನುಭವಿಸುವ ಅವಕಾಶ ಲಭಿಸುತ್ತದೆ. ಈ ಸುಧಾರಣೆಯ ಪ್ರಕಾರ ಕೆನರಾ ಕ್ರೈಸ್ತರಿಗೆ ಮದ್ರಾಸ್ ಶಾಸಕಾಂಗ ಸಭೆಯಲ್ಲಿ ಒಂದು ಸ್ಥಾನವನ್ನು ಕಲ್ಪಿಸಲಾಗುತ್ತದೆ. ಈ ಸಂದರ್ಭದಲ್ಲಿ ಕ್ರೈಸ್ತರು ಮುಖ್ಯವಾಗಿ ಕ್ಯಾಥೋಲಿಕರು ಇದು ತಮ್ಮ ಸಮುದಾಯದ ವೃದ್ಧಿಗೆ ಉತ್ತಮ ಅವಕಾಶವೆಂದು ಅದನ್ನು ಬಳಸಿಕೊಳ್ಳಲು ಮುಂದಾಗುತ್ತಾರೆ. ಆದರೆ ಮದ್ರಾಸ್ ಪ್ರಾಂತ್ಯದಲ್ಲಿನ ಪ್ರೊಟೆಸ್ಟೆಂಟ್ ಕ್ರೈಸ್ತ ಸಮುದಾಯ ಪ್ರತ್ಯೇಕ ಚುನಾವಣಾ ಕಣಗಳನ್ನು (Separate Electorate) ತಿರಸ್ಕರಿಸುತ್ತದೆ. ಪ್ರೊಟೆಸ್ಟೆಂಟ್ ನಾಯಕರುಗಳಾದ ಕೆ. ಟಿ. ಪೌಲ್, ವಿ. ಎಸ್. ಅಜಾರಿಯ, ಜೆಸುದಾಸನ್ ಮುಂತಾದವರು ಇದು ದೇಶದ ಹಿತಾಶಕ್ತಿಗೆ ವಿರುದ್ಧವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಬಾಸೆಲ್ ಮಿಶನ್ ಕ್ರೈಸ್ತರ ಅಭಿಪ್ರಾಯಗಳು ಭಿನ್ನವಾಗಿರುವುದನ್ನು ಗಮನಿಸಬಹುದು. 1926ರಲ್ಲಿ ಬಲ್ಮಠದಲ್ಲಿ ಸಭೆ ಸೇರಿದ ಇವರು, ಮದ್ರಾಸ್ ಪ್ರಾಂತ್ಯದ ಪಶ್ಚಿಮ ಕರಾವಳಿಯಲ್ಲಿ ಕ್ಯಾಥೋಲಿಕರು ಬಹು ಸಂಖ್ಯಾತರಾಗಿದ್ದು ಪ್ರೊಟೆಸ್ಟೆಂಟರು ಇಲ್ಲಿಂದ ಚುನಾವಣೆಯನ್ನು ಗೆಲ್ಲುವ ಸಾಧ್ಯತೆನೇ ಇಲ್ಲವೆಂದು ತಿಳಿಸುತ್ತಾ, ಸರಕಾರದ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯುತ್ತಾರೆ. ಆದುದರಿಂದ ಶಾಸಕಾಂಗ ಸಭೆಗೆ ತಮ್ಮ

ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸಲು ತಮ್ಮ ಸಮುದಾಯದಿಂದ ಒಬ್ಬ ಪ್ರತಿನಿಧಿಯನ್ನು ನಾಮಂಕನಗೊಳಿಸಬೇಕೆಂದು ಗವರ್ನರ್‌ರಿಗೆ ಬೇಡಿಕೆಯನ್ನು ಮಂಡಿಸುತ್ತಾರೆ.[65]

ಸತ್ಯವ್ರತವು ಮಾಂಟೆಗೋ ಚೆಮ್ಸ್‌ಫರ್ಡ್ ಸುಧಾರಣೆಗಳ ಬಗ್ಗೆ ಚರ್ಚೆ ನಡೆಸುತ್ತಾ, ಬಾಸೆಲ್ ಮಿಶನ್ ಕ್ರೈಸ್ತರಿಗೆ ಈ ಸುಧಾರಣೆಗಳಿಂದ ಯಾವ ಒಳಿತುಗಳಾಗಿವೆ ಎಂಬುದನ್ನು ವಿಮರ್ಶಿಸುತ್ತದೆ. ಪತ್ರಿಕೆಯು ಕ್ರೈಸ್ತರಿಗೆ ಮದ್ರಾಸ್ ಶಾಸಕಾಂಗ ಸಭೆಯಲ್ಲಿ ಪ್ರತ್ಯೇಕ ಸ್ಥಾನವನ್ನು ಒದಗಿಸಿದಿದ್ದಕ್ಕೆ ಕೃತಜ್ಞತೆ ಸಲ್ಲಿಸಿದ್ದು, ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟೆಂಟ್ ಕ್ರೈಸ್ತರನ್ನು ಒಟ್ಟಾಗಿ ಸೇರಿಸಿದ್ದಕ್ಕೆ ಪ್ರಬಲ ಆಕ್ಷೇಪವನ್ನು ಪತ್ರಿಕೆ ವ್ಯಕ್ತಪಡಿಸಿದೆ. ಅದು ವಿವರಿಸುವಂತೆ ಎರಡೂ ಪಂಗಡಗಳ ಆಚಾರ ವಿಚಾರಗಳು ಭಿನ್ನವಿರುವುದು ಮಾತ್ರವಲ್ಲದೇ ಕ್ಯಾಥೋಲಿಕ ಕ್ರೈಸ್ತರು ಬಹುಸಂಖ್ಯಾತರಾಗಿದ್ದು ಯಾವ ಪ್ರೊಟೆಸ್ಟೆಂಟ್ ಕೈಸ್ತನಾದರೂ ಗೆದ್ದು ಬರುವುದು ಅಸಾಧ್ಯವಾಗಿದೆ ಎಂದು ತನ್ನ ಅಸಮಾಧಾನವನ್ನು ಪತ್ರಿಕೆ ಹೊರ ಹಾಕಿದೆ. ಕಳೆದ 6 ವರ್ಷಗಳಲ್ಲಿ ಈ ಚುನಾವಣಾ ಕ್ಷೇತ್ರದಿಂದ ಆರಿಸಿ ಹೋದ ಕ್ಯಾಥೋಲಿಕ್ ಸದಸ್ಯರು ಪ್ರೊಟೆಸ್ಟೆಂಟ್ ಕ್ರೈಸ್ತರ ಹಿತಾಸಕ್ತಿಗೆ ಕಾರ್ಯಚರಿಸಲೇ ಇಲ್ಲ ಎಂದು ಆಪಾದಿಸಿರುವ ಪತ್ರಿಕೆಯು, ಪ್ರೊಟೆಸ್ಟೆಂಟ್ ಕ್ರೈಸ್ತರ ಕಷ್ಟಗಳನ್ನು, ಸಮಸ್ಯೆಗಳನ್ನು ಸರಕಾರದ ಮುಂದಿಡಲು, ಮದ್ರಾಸ್ ಶಾಸಕಾಂಗ ಸಭೆಯಲ್ಲಿ ಯಾವ ಪ್ರತಿನಿಧಿಯೂ ಇಲ್ಲವೆಂದೂ ವಿಷಾದಿಸಿದೆ. ಪರಿಸ್ಥಿತಿ ಹೀಗಿರುವುದರಿಂದ ಪ್ರೊಟೆಸ್ಟೆಂಟ್ ಕ್ರೈಸ್ತರರನ್ನು ಪ್ರತಿನಿಧಿಸಲು ಸರಕಾರ ಒಬ್ಬ ಸದಸ್ಯನನ್ನು ನೇಮಿಸಬೇಕೆಂಬ ಬೇಡಿಕೆಯನ್ನು ಬ್ರಿಟಿಷ್ ಸರಕಾರದ ಮುಂದಿಟ್ಟಿತ್ತು.[66] ಹೀಗೆ ಬಾಸೆಲ್ ಮಿಶನ್ ಕ್ರೈಸ್ತರು 1920ರ ದಶಕದಲ್ಲಿ ದೇಶದ ರಾಜಕೀಯ ಪರಿಸ್ಥಿತಿಯನ್ನು ಉತ್ತಮವಾಗಿ ತಿಳಿದವರಾಗಿದ್ದು ತಮ್ಮ ಸಮುದಾಯವನ್ನು ರಾಜಕೀಯವಾಗಿ ಪ್ರತಿನಿಧಿಸುವ ಪ್ರಯತ್ನವನ್ನು ಮಾಡಿದ್ದರು. ಅದೇ ರಾಷ್ಟ್ರೀಯ ಹೋರಾಟದ ಬಗ್ಗೆ ಬಾಸೆಲ್ ಮಿಶನ್ ಕ್ರೈಸ್ತರು ತಟಸ್ಥವಾಗಿರದೇ ಅದರಲ್ಲಿ ಭಾಗವಹಿಸಬೇಕೆಂಬ ಆಸಕ್ತಿಯೂ ಬಾಸೆಲ್ ಮಿಶನ್ ಕ್ರೈಸ್ತರಲ್ಲಿತ್ತು ಎಂಬುದನ್ನು ಗಮನಿಸಬಹುದು.

ಕರ್ನಾಟಕದಲ್ಲಿನ ಮತ್ತೊಂದು ಕ್ರೈಸ್ತ ಸಮುದಾಯವಾದ ಕ್ಯಾಥೋಲಿಕರು 20ನೇ ಶತಮಾನದ ಆರಂಭದಲ್ಲಿಯೇ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದರು. ವಸಾಹತು ಸರಕಾರದಡಿಯಲ್ಲಿ ಈ ಸಮುದಾಯ ಬಹಳಷ್ಟು ಉತ್ತಮ ಹುದ್ದೆಗಳನ್ನು ಅನುಭವಿಸಿರುತ್ತದೆ. ಈ ಸಮುದಾಯದ ಧ್ವನಿಯು ಅದು ಪ್ರಕಟಪಡಿಸುತ್ತಿದ್ದ ಪತ್ರಿಕೆಯಾದ 'ಕೊಂಕ್ಣಿ ದಿರ್ವೆ'ಯಲ್ಲಿ (Konkni Dirven) ಪ್ರತಿಫಲಿಸುತ್ತದೆ.[67] ಈ ಪತ್ರಿಕೆಯು ಪ್ರಖ್ಯಾತ ರಾಷ್ಟ್ರೀಯ ನಾಯಕರಾದ ಗೋಖಲೆ, ಚಿತ್ತರಂಜನ್ ದಾಸ್ ಮುಂತಾದ ನಾಯಕರ ಬಗ್ಗೆ ಲೇಖನಗಳನ್ನು ಪ್ರಕಟಿಸಿತ್ತು. 1925ರಲ್ಲಿ ಚಿತ್ತರಂಜನ್ ದಾಸ್‌ರವರು ಮರಣ ಹೊಂದಿದ ಸಂದರ್ಭದಲ್ಲಿ ಅವರನ್ನು ಹೊಗಳಿ ಹಲವು ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದರೆ 'ಸೌತ್ ಕೆನರಾ ಕಥೋಲಿಕ್

ಅಸೋಸಿಯೇಶನ್' (South Kanara Catholic Association) ಅವರ ಕುಟುಂಬಕ್ಕೆ ಸಾಂತ್ವಾನವನ್ನು ತಿಳಿಸುತ್ತಾ, ಒಂದು ಪತ್ರವನ್ನು ರವಾನಿಸಿತ್ತು. ಆದರೆ ಇದೇ ಸ್ಥಾನ ಗಾಂಧೀಜಿಯವರಿಗೆ ಕ್ರೈಸ್ತರ ಪತ್ರಿಕೆಗಳಲ್ಲಿ ಲಭಿಸಲಿಲ್ಲ. ಗಾಂಧೀಜಿಯವರ ಅಸಹಕಾರ ಹಾಗೂ ಕಾನೂನುಭಂಗ ಚಳುವಳಿಗಳು ಕ್ರೈಸ್ತರಿಂದ ಮನ್ನಣೆಯನ್ನು ಗಳಿಸದಿರುವುದನ್ನು ಗಮನಿಸಬಹುದು. ಅದೇ ರೀತಿ ಗಾಂಧೀಜಿಯವರು ಮಿಶನರಿಗಳ ಚಟುವಟಿಕೆಯ ವಿರುದ್ಧ ಮಾಡಿದ ಭಾಷಣಗಳು ಪ್ರಬಲವಾಗಿ ಕ್ರೈಸ್ತರಿಂದ ಖಂಡಿಸಲ್ಪಡುತ್ತವೆ. ಆದುದರಿಂದ ಕ್ರೈಸ್ತರಲ್ಲಿ ಕೆಲವೇ ಕೆಲವು ಗಾಂಧೀ ಬೆಂಬಲಿಗರು ಕಂಡುಬರುತ್ತಾರೆ.[68] ಮೊಂಟೇಗ್ಯೋ ಚೆಮ್ಸ್ ಫೋರ್ಡ್ ಸುಧಾರಣೆಗಳು ಜಾರಿಯಾದಾಗ ಕ್ಯಾಥೋಲಿಕ್ ಕ್ರೈಸ್ತರು ಅದರ ಸಂಪೂರ್ಣ ಲಾಭಪಡೆಯಲು ಮುಂದಾಗುತ್ತಾರೆ. ಅದೇ ರೀತಿ ಜೆ. ಎ. ಸಲ್ಡಾನ, (J. A. Saldanha), ಎಸ್. ಎಲ್. ಮಾಥ್ಯಾಯಸ್‌ರಂತಹ (S. L. Mathias) ಪ್ರಬಲ ನಾಯಕರು ರಾಜಕೀಯದಲ್ಲಿ ಗುರುತಿಸಿಕೊಂಡಿರುತ್ತಾರೆ. ಮಾತ್ರವಲ್ಲದೆ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿದ್ದು, ರಾಷ್ಟ್ರೀಯ ಹೋರಾಟದಲ್ಲಿ ಗುರುತಿಸಿಕೊಂಡಿರುತ್ತಾರೆ.

ರಾಷ್ಟ್ರೀಯ ಹೋರಾಟದಲ್ಲಿ ಬಾಸೆಲ್ ಮಿಶನ್ ಕ್ರೈಸ್ತರ ಪಾತ್ರ:

ಕ್ಯಾಥೋಲಿಕ್ ಕ್ರೈಸ್ತರ ಹಾಗೇ ಬಾಸೆಲ್ ಮಿಶನ್ ಕ್ರೈಸ್ತರಲ್ಲಿಯೂ ಕೆಲವು ನಾಯಕರು ರಾಷ್ಟ್ರೀಯ ಹೋರಾಟದಲ್ಲಿ ಗುರುತಿಸಿಕೊಂಡಿರುವುದನ್ನು ಗಮನಿಸಬಹುದು. 1920ರವರೆಗೆ ಸ್ಥಳೀಯ ಬಾಸೆಲ್ ಮಿಶನ್ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿರುವುದು ಕಂಡುಬರುವುದಿಲ್ಲ. ಮಹಾತ್ಮಾ ಗಾಂಧೀಜಿಯವರು ಕರ್ನಾಟಕದ ಪ್ರದೇಶಗಳಿಗೆ (ಮಂಗಳೂರು, ಬೆಳಗಾವಿ) ಭೇಟಿ ನೀಡಿದ ತರುವಾಯ ರಾಷ್ಟ್ರೀಯ ಹೋರಾಟ ಪ್ರಬಲಗೊಳ್ಳುವುದನ್ನು ಗಮನಿಸಬಹುದು. ಇದರ ಪ್ರಭಾವವು ಬಾಸೆಲ್ ಮಿಶನ್ ಕ್ರೈಸ್ತರ ಮೇಲೂ (ಮುಖ್ಯವಾಗಿ ಶಿಕ್ಷಿತರ ಮೇಲೆ) ಆಗುತ್ತದೆ. ಬಾಸೆಲ್ ಮಿಶನ್ ಕ್ರೈಸ್ತ ಸಮುದಾಯದಿಂದ ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾದ ಪ್ರಮುಖ ನಾಯಕನೆಂದರೆ ಸತ್ಯಮಿತ್ರ ಬಂಗೇರ (Satyamitra Bangera). ಇವರು ಉಡುಪಿಯವರಾಗಿದ್ದು, ಮುಲ್ಕಿಯಲ್ಲಿದ್ದ ಬಾಸೆಲ್ ಮಿಶನಿನ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. 1920ರಲ್ಲಿ ಗಾಂಧೀಜಿ ಮಂಗಳೂರಿಗೆ ಭೇಟಿ ನೀಡಿದ ಕಾಲದಲ್ಲಿ ಅವರಿಂದ ಪ್ರೋತ್ಸಾಹಿತರಾಗಿ ತಮ್ಮ ಶಿಕ್ಷಕ ವೃತ್ತಿಯನ್ನು ತ್ಯಜಿಸಿ, ರಾಷ್ಟ್ರೀಯ ಹೋರಾಟಕ್ಕೆ ಧುಮುಕಿರುತ್ತಾರೆ. 1921 ಏಪ್ರಿಲ್‌ನಲ್ಲಿ ಇವರು ಡಾ. ಆರ್. ಎಸ್. ಶೆಣೈಯವರೊಂದಿಗೆ (Dr. R. S. Shenoy) ಸೇರಿ ಉಡುಪಿ ಸ್ಥಳೀಯರ ಸಭೆ ಕರೆದು 'ಸೌತ್ ಕೆನರಾ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ'ಯನ್ನು (South Kanara District Congress Committee) ಹುಟ್ಟು ಹಾಕಲು ನಿರ್ಧರಿಸುತ್ತಾರೆ. ಈ ಕಮಿಟಿಯ ಅಧ್ಯಕ್ಷರಾಗಿ ಶೇಟ್ ನಾನ್‌ಲಾಲ್

ಗೋವಿಂದಾಜಿ ಪಾಂಡ್ಯರವರು ಆಯ್ಕೆಯಾದರೆ (Shet Nanlal Govindaji Pandya) ಬಂಗೇರ, ಶೆಣೈ ಮತ್ತು ಇತರರು ಅದರ ಸದಸ್ಯರಾಗಿದ್ದು, ಕಾಂಗ್ರೆಸನ್ನು ಸಂಘಟಿಸುವ ಕೆಲಸವನ್ನು ನಿರ್ವಹಿಸುತ್ತಾರೆ. ಸತ್ಯಮಿತ್ರ ಬಂಗೇರವರರು ಅಸಹಕಾರ, ಕಾನೂನುಭಂಗ ಹಾಗೂ ಇತರ ಹೋರಾಟಗಳಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ಕಾಂಗ್ರೆಸ್‌ನಲ್ಲಿ ಸಕ್ರೀಯವಾಗಿರುತ್ತಾರೆ. ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ ಮತ್ತೊಬ್ಬ ಬಾಸೆಲ್ ಮಿಶನ್ ಕ್ರೈಸ್ತನೆಂದರೆ ಸಿಮ್ಸನ್ ಸೋನ್ಸ್ (Simpson Soans). ಇವರು ಗಾಂಧೀಜಿ ಕರೆಕೊಟ್ಟ ಹೋರಾಟಗಳಲ್ಲಿ ಭಾಗವಹಿಸಿದ್ದರು. ತದನಂತರ ಟ್ರೇಡ್ ಯುನಿಯನ್ ನಾಯಕರಾಗಿ, ಕಮ್ಯುನಿಸ್ಟ್ ಹೋರಾಟಗಳಲ್ಲಿ ಗುರುತಿಸಿಕೊಳ್ಳುತ್ತಾರೆ. ಬಾಸೆಲ್ ಮಿಶನ್ ಕ್ರೈಸ್ತ ಸಮುದಾಯದಿಂದ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ ಮಹಿಳೆ ಇ. ಸೋನ್ಸ್. ಇವರು ಮಂಗಳೂರಿನವರಾಗಿದ್ದು 'ಭಗಿನಿ ಸಮಾಜ್' (Bhagini Samaj) ಎಂಬ ಮಹಿಳಾ ಸಂಘಟನೆಯನ್ನು 1937ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಿ ಇದರ ಅಧ್ಯಕ್ಷರಾಗಿದ್ದರು. ಇದು 1926ರಲ್ಲಿ ಚೆನ್ನೈನ ಅಡ್ಯಾರ್‌ನಲ್ಲಿ (Adyar) ಸ್ಥಾಪನೆಯಾದ 'ಆಲ್ ಇಂಡಿಯಾ ವುಮೆನ್ಸ್ ಅಸೋಸಿಯೇಶನ್'ನ (All India Womens Association) ಶಾಖೆಯಾಗಿ ಆರಂಭವಾಗುತ್ತದೆ. ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ ಇತರ ಬಾಸೆಲ್ ಮಿಶನ್ ಕ್ರೈಸ್ತರೆಂದರೆ ಚನ್ನಪ್ಪ ಉತ್ತಂಗಿ (Channappa Uttangi), ಎಬ್ನೇಜರ್ ಸೋನ್ಸ್ (Ebenezer Soans), ಶಾದ್ರಕ್ ಸೋನ್ಸ್ (Shadrack Soans), ರಾಜೀವ ಕೋಟ್ಯಾನ್ (Rajeeva Kotian), ತಿಯೋಡೊರ್ ಮೈಕಲ್ ಸೋನ್ಸ್ (Theodore Michael Soans), ಡಿ. ಡಿ ಅಶ್ವಲ್ (D. D. Ashwal). ಹೀಗೆ ಹಲವು ಬಾಸೆಲ್ ಮಿಶನ್ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗಿದ್ದರು. ಈ ಬಾಸೆಲ್ ಮಿಶನ್ ಕ್ರೈಸ್ತರ ವಿರುದ್ಧ ಬಾಸೆಲ್ ಮಿಶನ್ ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ.[69] ಬಾಸೆಲ್ ಮಿಶನ್ ಕ್ರೈಸ್ತರು ಮಿಶನರಿಗಳ ವಿರುದ್ಧ ನಡೆಸಿದ ಹೋರಾಟದಲ್ಲಿ, ಚರ್ಚ್ ಆಡಳಿತದಲ್ಲಿ ಸ್ವಾಯತ್ತತೆಗಾಗಿ ನಡೆಸಿದ ಹೋರಾಟಗಳಲ್ಲಿ ಬಾಸೆಲ್ ಮಿಶನ್ ಕ್ರೈಸ್ತರ ರಾಷ್ಟ್ರೀಯ ಮನೋಭಾವವನ್ನು ಗಮನಿಸಬಹುದು. ಈ ಹೋರಾಟಗಳು ವಿದೇಶಿಯರ ನಿಯಂತ್ರಣದಿಂದ ಮುಕ್ತಿಗಾಗಿ ಶಿಕ್ಷಿತ ಬಾಸೆಲ್ ಮಿಶನ್ ಕ್ರೈಸ್ತರು ನಡೆಸಿದ್ದರು ಎಂಬುದನ್ನು ಗಮನಿಸಬಹುದು.

1914ರಲ್ಲಿ ಮಿಶನರಿಗಳನ್ನು ನಿರ್ಬಂಧಿಸಿದ್ದರಿಂದ ಬಾಸೆಲ್ ಮಿಶನ್ ಕೈಸ್ತರು ಮಿಶನರಿಗಳ ನಿಯಂತ್ರಣದಿಂದ ಸ್ವತಂತ್ರರಾಗುತ್ತಾರೆ ಹಾಗೂ ಬಾಸೆಲ್ ಮಿಶನ್ ಚರ್ಚುಗಳು ಸ್ಥಳೀಯ ಕ್ರೈಸ್ತರ ಸ್ವಾಯತ್ತ ಆಡಳಿತಕ್ಕೆ ಒಳಪಡುತ್ತವೆ. 1939ರಲ್ಲಿ ಬಾಸೆಲ್ ಮಿಶನನ್ನು ನಿರ್ಬಂಧಿಸಿದ್ದರಿಂದ ಬಾಸೆಲ್

ಮಿಶನ್ ಕ್ರೈಸ್ತರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಮುಕ್ತರಾಗುತ್ತಾರೆ. 1947ರಲ್ಲಿ ಭಾರತ ಸ್ವತಂತ್ರವಾದ ನಂತರ ಯಾವುದೇ ಬಾಸೆಲ್ ಮಿಶನರಿಗಳು ತಮ್ಮ ಕಾರ್ಯದಿಂದ ಹಿಂದೆ ಸರಿಯಲಿಲ್ಲ. ಅವರು ಹೊಸ ವ್ಯವಸ್ಥೆಯಲ್ಲಿ ತಮ್ಮ ಕಾರ್ಯವನ್ನು ಮುಂದುವರಿಸುತ್ತಾರೆ. ಬ್ರಿಟಿಷ್ ವಸಾಹತು ಸರಕಾರದ ಕಾಲದಲ್ಲಿ ಬಾಸೆಲ್ ಮಿಶನರಿಗಳಿಗೆ ಬ್ರಿಟಿಷ್ ಸರಕಾರದ ಬೆಂಬಲ ಅಗತ್ಯವಿತ್ತು. ಅದೇ ರೀತಿ ಬಾಸೆಲ್ ಮಿಶನರಿಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಿರಲಿಲ್ಲ. ಅದಕ್ಕೆ ಹೊರತಾಗಿ ಬಾಸೆಲ್ ಮಿಶನರಿಗಳು ಸ್ಥಳಿಯ ಕ್ರೈಸ್ತರು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗುವುದನ್ನು ತಡೆಹಿಡಿಯುವ ಪ್ರಯತ್ನಗಳನ್ನು ಮಾಡಿದ್ದರು. ಬಾಸೆಲ್ ಮಿಶನರಿಗಳು ಬ್ರಿಟಿಷ್ ಪರವಾದ ತಮ್ಮ ಅಭಿಪ್ರಾಯಗಳ ಮೂಲಕ ಸ್ಥಳೀಯ ಕ್ರೈಸ್ತರ ಮೇಲೆ ಬಹಳಷ್ಟು ಪ್ರಭಾವ ಬೀರಿದರು. ಅದೇ ರೀತಿ ಬ್ರಿಟಿಷ್ ಸರಕಾರವು ಬಾಸೆಲ್ ಮಿಶನ್ ನಿಯಂತ್ರಣದ ಯಾವುದೇ ವ್ಯಕ್ತಿಗಳು ಅಥವಾ ಸಂಘಟನೆಗಳು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗುವುದನ್ನು ಇಷ್ಟಪಡಲಿಲ್ಲ. ಬಾಸೆಲ್ ಮಿಶನ್ ಮಂಗಳೂರು ಮತ್ತು ಉಡುಪಿಯಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತಿತ್ತು. ಗಾಂಧೀಜಿಯವರ ಕಾನೂನು ಭಂಗ ಚಳುವಳಿಯ ಸಂದರ್ಭದಲ್ಲಿ ಈ ವಿದ್ಯಾ ಸಂಸ್ಥೆಗಳಿಂದ ಕೆಲವು ವಿದ್ಯಾರ್ಥಿಗಳು ಹೋರಾಟದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಕೆನರಾದ ಕಲೆಕ್ಟರ್‌ರವರು ಬಾಸೆಲ್ ಮಿಶನಿಗೆ ಈ ವಿಚಾರದ ಬಗ್ಗೆ ಎಚ್ಚರಿಕೆ ನೀಡುವುದನ್ನು ಗಮನಿಸಬಹುದು. ಈ ರೀತಿಯ ಘಟನೆಗಳು ಮರುಕಳಿಸಿದರೆ ಶಾಲೆಗಳಿಗೆ ನೀಡಲಾಗಿದ್ದ ಮನ್ನಣೆ (Registrations) ಹಾಗೂ ಅನುದಾನವನ್ನು ಹಿಂತೆಗೆದುಕೊಳ್ಳುವುದಾಗಿ ಅವರು ಎಚ್ಚರಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಶಾಲಾ ಸಂಸ್ಥೆಗಳಿಗೆ ಸಂಬಂಧಿಸಿದ ಯಾವುದೇ ವ್ಯಕ್ತಿಗಳು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿರ್ಬಂಧವಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.[70] ಆದುದರಿಂದ ಬಾಸೆಲ್ ಮಿಶನರಿಗಳು ರಾಷ್ಟ್ರೀಯ ಹೋರಾಟದಿಂದ ದೂರವಿದ್ದು, ಧಾರ್ಮಿಕ ಕಾರ್ಯದಲ್ಲಿ ಮಾತ್ರ ಮುಂದುವರಿದರು. ಆದರೆ ಪರೋಕ್ಷವಾಗಿ ಬಾಸೆಲ್ ಮಿಶನರಿಗಳು ರಾಷ್ಟ್ರ ರಚನೆಯ ಕಾರ್ಯಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಗಳನ್ನು ಅವರು ಜಾರಿಗೆ ತಂದ, ಶಿಕ್ಷಣ, ಆರೋಗ್ಯ ಚಟುವಟಿಕೆಗಳು, ಕೈಗಾರಿಕೆಗಳು ಇತ್ಯಾದಿಗಳ ಮೂಲಕ ನೀಡಿದ್ದಾರೆ. ಬಾಸೆಲ್ ಮಿಶನರಿಗಳಿಂದಾಗಿ ಹೊಸ ಅರುಣೋದಯ ಕಾಲ ಪ್ರಾರಂಭವಾಯಿತೆಂದರೆ ತಪ್ಪಾಗಲಾರದು.

ಬಾಸೆಲ್ ಮಿಶನ್, ಮಿಶನರಿಗಳು ಹಾಗೂ ಅವರ ಸಮರ್ಥಕರು ರಾಷ್ಟ್ರೀಯ ಹೋರಾಟದ ಬಗ್ಗೆ ಯಾವ ನಿಲುವುಗಳನ್ನು ಹೊಂದಿದ್ದರು ಎಂಬುದನ್ನು ಮಿಶನರಿ ಪತ್ರಿಕೆಯಾದ ಕ್ರೈಸ್ತ ಹಿತವಾದಿಯ ಮೂಲಕ ತಿಳಿದುಕೊಳ್ಳಬಹುದು. ಭಾರತದ ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯ ಹೋರಾಟದ ಬಗ್ಗೆ ಮಿಶನರಿಗಳ ದೃಷ್ಟಿಕೋನ ಟೀಕಾತ್ಮಕವಾಗಿತ್ತು ಹಾಗೂ ಕಟುವಾಗಿತ್ತು. ಇದು

ಅವರು ಬ್ರಿಟಿಷ್ ವಸಾಹತುಶಾಹಿ ಸರಕಾರದ ಬಗ್ಗೆ ಅನುಸರಿಸಿದ ಮೃದುವಾದ (Uncritical) ನೀತಿಗೆ ವಿರುದ್ಧವಾಗಿತ್ತು. ಅದೇ ರೀತಿ ಮಿಶನರಿಗಳ ನಿಯಂತ್ರಣದಲ್ಲಿದ್ದವರು (Pastors, Evangelists, Teachers and others) ಬಹುವಾಗಿ ಮಿಶನರಿಗಳ ವಿಚಾರಧಾರೆಗಳನ್ನೇ ಒಪ್ಪಿಕೊಳ್ಳುವುದನ್ನು ಗಮನಿಸಬಹುದು. ಭಾರತವು ಸ್ವಾತಂತ್ರ್ಯದ ಅಂಚಿಗೆ ಚಲಿಸುತ್ತಿದ್ದ ಕಾಲಘಟ್ಟದ ಕೊನೆಗೆ ಮಿಶನರಿಗಳ ಟೀಕೆಗಳು ಮೃದುವಾಗುತ್ತವೆ. ಮಿಶನರಿಗಳು ಅಭಿಪ್ರಾಯ ಪಡುವಂತೆ ಬ್ರಿಟಿಷ್ ವಸಾಹತು ಆಳ್ವಿಕೆಯು ಭಾರತಕ್ಕೆ ಉತ್ತಮವಾಗಿದ್ದು, ಅದು ಆಧುನಿಕ ಶಿಕ್ಷಣ, ಆರೋಗ್ಯ, ರೈಲ್ವೆ ಇತ್ಯಾದಿ ಉತ್ತಮವಾದ ಅಂಶಗಳನ್ನು ಭಾರತಕ್ಕೆ ನೀಡಿ, ಭಾರತಕ್ಕೆ ಒಳಿತನ್ನು ಮಾಡಿದೆ. ಭಾರತೀಯರ ಸ್ವಾತಂತ್ರ್ಯದ ಬೇಡಿಕೆಯು ಅಸಂಬದ್ಧವಾಗಿದೆ. ಯಾಕೆಂದರೆ ಭಾರತೀಯರು ತಮ್ಮನ್ನು ತಾವೇ ಆಡಳಿತ ಮಾಡಲು ಬೇಕಾದ ಯೋಗ್ಯತೆಗಳನ್ನು ಗಳಿಸಿ ಸಮರ್ಥರಾಗಿಲ್ಲ ಎಂಬುದು ಮಿಶನರಿಗಳ ವಾದವಾಗಿತ್ತು. ಮತ್ತೊಂದೆಡೆ ಮಿಶನರಿಗಳು ರಾಷ್ಟ್ರೀಯತೆಯನ್ನು ಅನುಮಾನದ ದೃಷ್ಟಿಯಿಂದ ಕಂಡು ಅದು ಧರ್ಮಪ್ರಚಾರ ಹಾಗೂ ದೇಶಿಯ ಕ್ರೈಸ್ತರಿಗೆ ಸಮಸ್ಯೆಯನ್ನು ಉಂಟುಮಾಡಬಹುದು ಎಂಬ ಅಭಿಪ್ರಾಯ ಬಾಸೆಲ್ ಮಿಶನರಿಗಳದ್ದಾಗಿತ್ತು. ರಾಷ್ಟ್ರೀಯ ಹೋರಾಟಗಾರರ ಸ್ವದೇಶ, ಸ್ವರಾಜ್ಯ, ಸ್ವಾತಂತ್ರ್ಯ ಮುಂತಾದ ಅಂಶಗಳಿಗೆ ಮಿಶನರಿಗಳ ಯಾವುದೇ ಪೂರಕವಾದ ನಿಲುವುಗಳಿರದೆ ಅವುಗಳನ್ನು ಟೀಕಿಸಿದ್ದರು.

ಸಂದರ್ಭ ಸೂಚಿ:

1. ಯು. ಮೇಯರ್, ಇಂಡಿಜೆನೈಸೇಶನ್– ಎ ಕ್ರಿಟಿಕಲ್‌ವ್ಯೂವ್ ಆಫ್ ದಿ ಡಿಸ್ಕಶನ್ ಇನ್ ಇಂಡಿಯಾ 1942–65, *ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಯೂವ್*, ಸಂಪುಟ 7, ನಂ. 2, ಡಿಸೆಂಬರ್, 1973, ಪುಟ 97.
2. ಸ್ಟೇಫನ್ ನೈಲ್, *ಎ ಹಿಸ್ಟರಿ ಆಫ್ ಕ್ರಿಶ್ಚಿಯನ್ ಮಿಶನ್ಸ್,* ಪೆಂಗ್ವಿನ್ ಬುಕ್ಸ್, 1964, ಪುಟ 450.

   "We have seen the East India Company, Jealously attempting to keep every missionary out of its territory"
3. ಎಸ್. ಡಿ. ಎಲ್. ಅಲಗೋಡಿ, *ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ,* ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, 2001, ಪುಟ 17–18.
4. ಬ್ಯಾಪ್ಟಿಸ್ಟ್ ಮಿಶನರಿ ಸೊಸೈಟಿ, ಚರ್ಚ್ ಮಿಶನರಿ ಸೊಸೈಟಿ, ಲಂಡನ್ ಮಿಶನರಿ ಸೊಸೈಟಿ, ವೆಸ್ಲಿಯನ್ ಮಿಶನರಿ ಸೊಸೈಟಿ ಇತ್ಯಾದಿ.
5. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ,* ಪುಟ 18–21. ವಿಲಿಯಂ ಕೇರಿಯನ್ನು ಲಾರ್ಡ್ ವೆಲ್ಲೆಸ್ಲಿಯು ತಾನು ಸ್ಥಾಪಿಸಿದ ಪೋರ್ಟ ವಿಲಿಯಂ ಕಾಲೇಜಿನಲ್ಲಿ ಅಧ್ಯಾಪಕನನ್ನಾಗಿ ನೇಮಿಸಿದ್ದನು.
6. ಅದೆ, ಪುಟ 22–24.
7. ಕೊಜಿ ಕಮಶೀಮ, *ಮಿಶನರಿಸ್ ಆ್ಯಂಡ್ ಎ ಹಿಂದೂ ಸ್ಟೇಟ್ ಟ್ರಾವಂಕೂರ್ 1858–1936*, ಒಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಒಕ್ಸ್‌ಫರ್ಡ್, 1998, ಪುಟ 55.
8. British officials those who helped the Basel mission in India in different capacities were, Findlay Anderson; Nelson; H. M. Blair, F.N. Maltby; W. Stokes; A. N. Shaw; G. Casa Major; L. strange; H. V. Conolly; Gen. G. W. walker; Sir. W. Robison; Gen. G. S. Dobbie; H.S. Thomas; J. Elphinstone etc.
9. ಎಮ್. ಡಿ. ಡೇವಿಡ್, ಸೋಶಿಯಲ್ ಬ್ಯಾಕ್‌ಗ್ರ್ಯಾಂಡ್ ಆಫ್ ಬಾಸೆಲ್ ಮಿಶನ್ ಕ್ರಿಶ್ಚಿಯನ್ಸ್: ದಿ ಪ್ರಾಬ್ಲಮ್ ಆಫ್ ಕಾಸ್ಟ್, *ಇಂಡಿಯಾನ್ ಚರ್ಚ್ ಹಿಸ್ಟರಿ ರಿವ್ಯೂವ್*, ಸಂಪುಟ 18, ನಂ. 2, ಡಿಸೆಂಬರ್, 1984, ಪುಟ 149.
10. ಬಾಸೆಲ್ ಮಿಶನ್ ಸಂಘದ ಶತಮಾನೋತ್ಸವದ ಸಂದರ್ಭದಲ್ಲಿ ಸರಕಾರಕ್ಕೆ ಬರಕೊಂಡ ಸ್ಮಾರಕಪತ್ರ, *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ 3, ಸಂಚಿಕೆ 10, ಮಂಗಳೂರು, 16ನೇ ನವೆಂಬರ್, 1934, ಪುಟ 185–186.

ಯೂರೋಪಿನ ಮಹಾಯುದ್ಧದ ಕಾಲದಲ್ಲಿ ಈ ಮಿಶನಿಗೆ ಸೇರಿದ ಜರ್ಮನಿಯ ಮಿಶನರಿಗಳಿಗೆ ಸರಕಾರವು ತೋರಿಸಿದ ದಯೆಯನ್ನು ಈ ಸಂದರ್ಭದಲ್ಲಿ ನಾವು ಪುನಃ ಸ್ಮರಿಸುವವರಾಗಿದ್ದೇವೆ. ಉಪಾಯಾಂತರವಿಲ್ಲದೆ ಜರ್ಮನ್ ಮಿಶನರಿಗಳನ್ನು ಹಿಂದೂ ದೇಶದಿಂದ ಹಿಂದೆ ಕಳುಹಿಸಬೇಕಾಗಿ ಬಂದರೂ 1919 ರಿಂದ 1927 ರವರೆಗೆ ಜರ್ಮನ್ ಮಿಶನರಿಗಳು ಇಲ್ಲದ ಸಮಯದಲ್ಲಿ ಈ ಜಿಲ್ಲೆಯ ಮಿಶನರಿ ಕೆಲಸ ಸುಸೂತ್ರವಾಗಿ ನಡೆಯುವಂತೆ ಸಹಾಯಮಾಡಿದುದಕ್ಕೆ ನಾವು ಸರಕಾರಕ್ಕೆ ತುಂಬ ಕೃತಜ್ಞರಾಗಿರುವೆವು. ಯೂರೋಪಿನ ಯುದ್ಧವು ಮುಗಿದ ಮೇಲೆ ಜರ್ಮನ್ ಮಿಶನರಿಗಳು ಪುನಃ ಇಲ್ಲಿಗೆ ಬಂದು ತಮ್ಮ ಸ್ಥಾನಗಳಲ್ಲಿದ್ದುಕೊಂಡು ತಮ್ಮ ಕೆಲಸವನ್ನು ಮುಂದೆ ಸಾಗಿಸುವಂತೆ ಸಹಕರಿಸಿದ ಸರಕಾರದ ಉಪಕಾರಗಳನ್ನು ಸ್ಮರಿಸುವೆವು.

ಈ ಶತಾಬ್ಧದ ಅಂತ್ಯದಲ್ಲಿ ನಾವು ಬ್ರಿಟಿಷ್ ಸರಕಾರದ ನ್ಯಾಯವಾದ ಆಡಳಿತದೊಳಗೆ ಇದ್ದು ತನ್ಮೂಲಕ ಪಡೆದ ಉಪಕಾರಗಳನ್ನು ನೆನಸಿಕೊಂಡು ಉಪಕಾರ ಸ್ಮರಣೆ ಮಾಡದೆ ಇದ್ದರೆ ನಿಜವಾಗಿಯೂ ನಾವು ನಮ್ಮ ಕರ್ತವ್ಯದಲ್ಲಿ ಹಿಂದೆ ಬಿದ್ದಂತಾಗುವುದು. ಈ ಸಂದರ್ಭದಲ್ಲಿ ಪುನಃ ನಾವು ರಾಜಭಕ್ತಿಯಲ್ಲಿಯೇ ಇರುವೆವು ಅಲ್ಲದೆ ದೇವರ ಕೃಪೆಯಿಂದ ಇನ್ನೂ ಇದೇ ರೀತಿಯ ಭಕ್ತಿಯಲ್ಲಿ ಉಳಿಯುವೆವೆಂದು ದೃಢಪಡಿಸುತ್ತೇವೆ.

11. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 160–161.

ಮದ್ರಾಸಿನ ಪೀಟರ ಪೌಲ ಪಿಳ್ಳೈ ಎಂಬ ಭಾರತೀಯ ಕ್ರೈಸ್ತನು ಕಾಂಗ್ರೆಸಿನ ಸ್ಥಾಪಕ ಸದಸ್ಯರುಗಳಲ್ಲಿ ಒಬ್ಬನಾಗಿದ್ದನು. (Belongs to C.M.S)

ಜಿ. ಎ. ಓಡ್ಡೈ (G. A. Oddie), ಇಂಡಿಯಾನ್ ಕ್ರಿಶ್ಚಿಯನ್ಸ್ ಆ್ಯಂಡ್ ದಿ ನ್ಯಾಶನಲ್ ಕಾಂಗ್ರೆಸ್ 1885–1910, *ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಯೂವ್*, ಸಂಪುಟ 2, ನಂ. 1, ಜೂನ್ 1968, ಪುಟ 45–46.

12. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 162.
13. ಅದೆ, ಪುಟ 177.
14. *ಹರ್ವೆಸ್ಟ್ ಫಿಲ್ಡ್*, ಸಂಪುಟ 9, ಮಾರ್ಚ್, 1889, ಪುಟ 289.
15. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 165.
16. ಜಿ. ಎ. ಓಡ್ಡೈ, *ಪೂರ್ವೋಕ್ತ*, 48–50. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 165–168.
17. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 168–170.

18. ಇಂಡಿಯನ್ ಕ್ರಿಶ್ಚಿಯನ್ಸ್ ಆ್ಯಂಡ್ ದಿ ನ್ಯಾಶನಲ್ ಮೂವ್‌ಮೆಂಟ್, *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ 12, ನಂ 5, ಮೇ 1921, ಪುಟ 163–164.
19. ವೈ. ವಿನ್ಸೆಂಟ್ ಕುಮಾರ ಡೋಸ್, ದಿ ಅಟಿಟ್ಯುಡ್ ಆಫ್ ದಿ ಪ್ರೋಟೆಸ್ಟೆಂಟ್ ಮಿಶನರೀಸ್ ಇನ್ ಮೆಡ್ರಾಸ್ ಪ್ರೆಸಿಡೆನ್ಸ್ ಟುವಾರ್ಡ್ ಹೋಮ್ ರೂಲ್ ಆ್ಯಂಡ್ ನಾಂನ್ ಬ್ರಾಹ್ಮಣೀಸಮ್ 1916–1917, *ಇಂಡಿಯಾನ್ ಚರ್ಚ್ ಹಿಸ್ಟರಿ ರಿವ್ಹೀವ್*, ಸಂಪುಟ 25, ನಂ. 2, ಡಿಸೆಂಬರ್ 1990, ಪುಟ 102–107.
20. ಜೋನ್ ಸಿ. ಬಿ. ವೇಬ್‌ಸ್ಟಾರ್, ಪ್ರಿಸ್‌ಬೇಟೇರಿಯನ್ ಮಿಶನರೀಸ್ ಆ್ಯಂಡ್ ಗಾಂಧೀಯನ್ ಪೋಲಿಟಿಕ್ಸ್ 1919–1922, *ಇಂಡಿಯಾನ್ ಚರ್ಚ್ ಹಿಸ್ಟರಿ ರಿವ್ಹಿವ್*, ಸಂಪುಟ 19, ನಂ. 1, ಜೂನ್ 1985, ಪುಟ 31–35.

    C. Herbert Rice of Forman Christian college stated the " the American missions in India protected and aided by the government are bound in honour and in reason to stand by the Government and have done so and will do so we are not distinguished from 'Europeans' by the ordinary people Nor are we in a position to proclaim ourselves different as being missionaries and non-Britishers. Our work has been protected and subsidized from the beginning by the Government and is in fact a practical expression of the best that is meant for India by a Christian Government.
21. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ 36, ನಂ. 2, ಮೈಸೂರು, ಫೆಬ್ರವರಿ 1916, ಪುಟ 63.

    'As regards our external policy we have in the first place to consider our relations with the Government. It is clear that out foremost duty is to be loyal, as even in the past to the government under which we live in peace with all men and which has conferred such great and enduring benefits on the people of India. At the sometime however Nation we must also be loyal to the public and I am one of those who firmly adhere to the principle and believe that loyalty to Government is always compatible with loyalty to our country'
22. ಪೀಟರ್ ವಿಲ್ಸನ್ ಪ್ರಭಾಕರ್, *ದಿ ಬಾಸೆಲ್ ಮಿಶನ್ ಇನ್ ಸೌತ್ ಕೆನರಾ 1834–1947*, 1988, ಪುಟ 299–301.

23. ವೈ. ವಿನ್ಸ್‌ಂಟ್ ಕುಮಾರ ಡೋಸ್, ದಿ ಸ್ವದೇಶೀ ಮೂವ್‌ಮೆಂಟ್ ಆ್ಯಂಡ್ ದಿ ಅಟಟ್ಯುಡ್ ಆಫ್ ದಿ ಪ್ರೋಟೆಸ್ಟೆಂಟ್ ಕ್ರಿಶ್ಚಿಯನ್ ಎಲಿಟ್ ಇನ್ ಮೆಡ್ರಾಸ್ 1905–1907, *ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಹಿವ್*, ಸಂಪುಟ 22, ನಂ. 1, ಜೂನ್ 1988, ಪುಟ 5–19.

The Christian patriot argued that the 'advocated of Swadeshi were the most selfish religious extremists India had ever probably seen. The congress was dubbed as a Violent pro-Hindu body based on Hindu principles although the congress was known as a socio political organization the congress movement leased to be national because the congress had become notoriously Hindu in character.

24. ಅದೆ, ಪುಟ 19–20.

The congress resolutions on the subjects like the disabilities of Indian in south Africa and racial bigotry found its approval and support. The effort taken by the congress in training the 'educated public mind" to understand the meaning of constitutionalism" was applauded.

25. ಡಿ. ಅರ್ಥರ್ ಜಯಕುಮಾರ್, *ಕ್ರಿಶ್ಚಿಯನ್ಸ್ ಆ್ಯಂಡ್ ದಿ ನ್ಯಾಶನಲ್ ಮೂವ್‌ಮೆಂಟ್*, ಸೆಂಟರ್ ಫಾರ್‌ಕಂಟೆಫರರಿ ಕ್ರಿಶ್ಚಿಯಾನಿಟಿ, ಬೆಂಗಳೂರು, 2009, ಪುಟ 95–97, 124.

26. ಎಸ್. ಡಿ. ಎಲ್. ಅಳಗೋಡಿ, *ಪೂರ್ವೋಕ್ತ*, ಪುಟ 172–173.

27. ಡಿ. ಅರ್ಥರ್ ಜಯಕುಮಾರ್, *ಪೂರ್ವೋಕ್ತ*, ಪುಟ 3.

These were rules regarding the admission into India of Aliens desiring to undertake missionary educational or philanthropic work in India after the war. Memorandum 'A' was applicable to protestant Christian societies and organization's which were recognized by the Government memorandum 'B" was intended for Roman catholic societies and organization and memorandum 'C' was for individuals and other Christian societies which were unrecognized' The earliest memoranda were issued by Government at the beginning of 1919 they were revised in 1921 1940 and 1942.

28. ಅದೆ, ಪುಟ 2–3, 120, 140.

29. ಅದೆ, ಪುಟ 141.

30.ಅದೆ, ಪುಟ 60.

31.ಅದೆ, ಪುಟ 95–98.

32.ಅದೆ, ಪುಟ 121–122.

33.ಅರ್ಥುರ್ ಜಯಕುಮಾರ್, ಕರ್ನಾಟಕ ಕ್ರಿಶ್ಚಿಯನ್ಸ್ ಆ್ಯಂಡ್ ಪೋಲಿಟಿಕ್ಸ್, *ಇಂಡಿಯನ್ ಚರ್ಚ್ ಹಿಸ್ಟರಿ ರಿವ್ಹಿವ್*, ಸಂಪುಟ 13, ನಂ 1, ಜೂನ್ 1979, ಪುಟ 5.

34.ಡಾ. ಡೆನಿಸ್ ಫೆರ್ನಾಂಡಿಸ್, ರೆಸ್ಪೋನ್ಸ್ಸ್ ಆಫ್ ಕೆನರಾ ಕ್ರಿಶ್ಚಿಯನ್ಸ್ ಟು ದಿ ನ್ಯಾಶನಲ್ ಮೂವ್‌ಮೆಂಟ್ ಇನ್ ದಿ ಅರ್ಲಿ 20th ಸೆಂಚುರಿ ಇಂಡಿಯಾ, *ಪ್ರೋಸಿಡಿಂಗ್ಸ್ ಆಫ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್*, 2013, ಪುಟ 79.

35.ಅದೆ, ಪುಟ 79–80.

36.ಭಾರತೀಯ ಕ್ರೈಸ್ತ ಬಂಧುಗಳಿಗೊಂದು ಮಾತು, *ಸತ್ಯವ್ರತ*, ಸಂಪುಟ–1, ಸಂಚಿಕೆ 5, ಮಂಗಳೂರು, ಫೆಬ್ರವರಿ 1926, ಪುಟ 5–6.

37.ಸ್ವತಂತ್ರ ಸಭೆಯ ಕಲ್ಪನೆ, *ಸತ್ಯವ್ರತ*, ಸಂಪುಟ 2, ಸಂಚಿಕೆ 4, ಮಂಗಳೂರು, ಜನವರಿ 1927, ಪುಟ 11.

38.ಡಾ. ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 80.

39.ಕನ್ನಡ ಸೀಮೆಯ ಇಂಡಿಯಾ ಕ್ರೈಸ್ತ ಸಮಾಜಗಳು, *ಕ್ರೈಸ್ತ ಹಿತವಾದಿ*, ಸಂಪುಟ 1, ಸಂಚಿಕೆ 2, ಮಂಗಳೂರು, ಮೇ 1925, ಪುಟ 169. ಡಾ. ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 3–4.

Both protestants and Catholics of Mangalore were the members of this league. Dr. L.P Fernandes was the president Mr. A. J Lobo and Mr. A. Soans were vice presidents and Mr. J. H. A Mascarenhas was the Honorary secretary in 1925. They wrote letters to pastors and priests about the formation of a league and to cooperator with them for the welfare of the Christians of the regions (konkni dirven, vol. 14, No. 6, March 1925, Mangalore.)

The League expressed its concern over the migration of Christians to Bombay and therefore demanded the government to provide job

opportunities for educated Christians in Mangalore and around (konkni dirven, vol. 14, No. 20, July 1925, Mangalore, P. 185.)

The League found that in rural areas many Christians were chalgeni tenants and were worst sufferers under the Hindu Landlords. In 1925 the league wrote to the collector of South Kanara to transfer the land near Gurpur Church for the landless Christians and the collector gave his consent to the proposal (konkni dirven, English supplement, Vol-14, No 30, September 1925, Mangalore, P iii.)

Those who were above 21 years including women could become the members of this League. It had a core committee with 25 members annually elected by the general body. In the first year there were 17 Roman Catholics and 8 Protestants in the core committee, it gave a call to local leaders and priests to establish its branches at the parish level.

40.ಕನ್ನಡ ಸೀಮೆಯ ಇಂಡಿಯಾ ಕ್ರೈಸ್ತ ಸಮಾಜಗಳು, *ಪೂರ್ವೋಕ್ತ*, ಪುಟ 169–170.

ಸಂಘಕ್ಕೆ ಎನ್. ಎಸ್ ಅಥವಾಲೆರವರು ಅಧ್ಯಕ್ಷರಾಗಿದ್ದರು. ಈ ಸಮಾಜವು ಬ್ರಿಟಿಷ್ ಸರಕಾರ ಕ್ರೈಸ್ತ ಸಮಾಜವನ್ನು ಸುಧಾರಿಸಿದ ಸಮಾಜವೆಂದು ಕರೆದುದನ್ನು ಪ್ರಬಲವಾಗಿ ಟೀಕಿಸುತ್ತಾ ಈ ನಿರ್ಣಯವು ಕ್ರೈಸ್ತ ಸಮಾಜದ ಬೆಳವಣಿಗೆಗೆ ಅಡ್ಡಿಯಾಗಿದೆ ಎಂದೂ ಬ್ರಿಟಿಷ್ ಸರಕಾರ ಈ ನಿರ್ಣಯವನ್ನು ತಕ್ಷಣ ವಾಪಾಸು ಪಡೆದು ಕ್ರೈಸ್ತರನ್ನು ಹಿಂದಿರುವ ಸಮಾಜಗಳ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯನ್ನು ಮಂಡಿಸುತ್ತದೆ ಈ ಸಂಘವು ಕ್ರೈಸ್ತರ ಐಕ್ಯಕ್ಕೆ ಕರೆ ನೀಡುತ್ತಾ ಅವರ ಅಭಿವೃದ್ಧಿಗಾಗಿ ವಿವಿಧ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ತಿಳಿಸಿತ್ತು. ಅದೇ ರೀತಿ ಈ ಸಂಘವು ಬ್ರಿಟಿಷರಿಗೆ ವಿಧೇಯತೆಯನ್ನು ತೋರಿಸಿತ್ತು ಎಂಬುದನ್ನು ಗಮನಿಸಬೇಕಾಗಿದೆ.

41.ಡಾ. ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 80–81.

Its founder was Bishop of Mangalore Fr. Fraketti was its president in the initial days, when the governor of Madras visited Mangalore it presented its demands such as to reduce the price of Toddy since it was the drink of the peasant and working class Catholics of the region to provide Government jobs for Catholics in Railways and Telegraphs like the of Eurasians to allow them to possess guns without license and since Christians lost valuable

lands of the region during Tippu's persecution, transfer empty land to Christians. The association gave another memorandum to the Education minister in 1925. It requested more representation for Catholics in the District educational council of South Kanara, safeguarding the religious instruction to the catholic children as per the canon Low and printed out that cathooic Elementary schools suffer in the event of the compulsory elementary eductin scheme being adopted by the municipality of Mangalore (Konkni driven, vol. 14, No 38, 20th November 1925, p i.)

42.*ಕ್ರೈಸ್ತ ಹಿತವಾದಿ*, ಸಂಪುಟ 5, ಸಂಚಿಕೆ 1, ಮಂಗಳೂರು, 1ನೇ ಜುಲೈ, 1928, ಪುಟ 1–2.

43.*ಸತ್ಯವ್ರತ*, ಸಂಪುಟ 1, ಸಂಚಿಕೆ 1, ಮಂಗಳೂರು, ಅಕ್ಟೋಬರ್ 1925, ಪುಟ 1–3. ಡಾ. ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 82.

44.ಸತ್ಯವ್ರತ, *ಪೂರ್ವೋಕ್ತ*, ಪುಟ 6–13.

45.ಸ್ವತಂತ್ರ ಸಭೆಯ ಕಲ್ಪನೆ, *ಸತ್ಯವ್ರತ*, ಸಂಪುಟ 2, ಸಂಚಿಕೆ 4, ಮಂಗಳೂರು, ಜನವರಿ 1927, ಪುಟ 10–11.

46.ಅದೆ, ಪುಟ 12. ಡಾ. ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 83.

47.ಅದೆ, ಪುಟ 13.

48.*ಸತ್ಯವ್ರತ*, ಸಂಪುಟ 1, ಸಂಚಿಕೆ 5, ಮಂಗಳೂರು, ಫೆಬ್ರವರಿ 1926, ಪುಟ 5–6.

49.ಇಂಡಿಯಕ್ಕೆ ಸಿಕ್ಕಬೇಕಾದ ಸ್ವರಾಜ್ಯದ ವಿಷಯದಲ್ಲಿ ಕೆಲವು ಮುಖ್ಯ ಆಲೋಚನೆಗಳು, *ಕ್ರೈಸ್ತ ಹಿತವಾದಿ*, ಸಂಪುಟ 1, ಸಂಚಿಕೆ 4, ಅಕ್ಟೋಬರ್, 1924, ಪುಟ 51–53.

50.ಇಂಡಿಯಕ್ಕೆ ಸಿಕ್ಕಬೇಕಾದ ಸ್ವರಾಜ್ಯದ ವಿಷಯದಲ್ಲಿ ಕೆಲವು ಮುಖ್ಯ ಆಲೋಚನೆಗಳು, *ಕ್ರೈಸ್ತ ಹಿತವಾದಿ*, ಸಂಪುಟ 1, ಸಂಚಿಕೆ 5, ನವೆಂಬರ್, 1924, ಪುಟ 67–69.

51.ಇಂಗ್ಲೀಷರು ಇಂಡಿಯಾದಲ್ಲಿ ಮಾಡಿದ್ದೇನು?, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 11, ಮಂಗಳೂರು, ಮೇ 1928, ಪುಟ 171. ಇಂಗ್ಲೀಷರು ಇಂಡಿಯಾದಲ್ಲಿ ಮಾಡಿದ್ದೇನು?, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 12, ಮಂಗಳೂರು, ಜೂನ್ 1928, ಪುಟ 186–187.

52.ಹೆಚ್. ಐ. ಪೇಡ್ರಿಕ್ಸ್, ಬ್ರಿಟಿಷ್ ಇಂಡಿಯಾದ ರಾಜ್ಯಭಾರ ಪದ್ಧತಿಯ ವಿಕಾಸಗತಿ, *ಕ್ರೈಸ್ತ ಹಿತವಾದಿ*, ಸಂಪುಟ 6, ಸಂಚಿಕೆ 22, ಮಂಗಳೂರು, ಜೂನ್ 1 1930, ಪುಟ 171–172.

53.ಹೆಚ್. ಐ. ಪೇಡ್ರಿಕ್ಸ್, ಬ್ರಿಟಿಷ್ ಇಂಡಿಯಾದ ರಾಜ್ಯಭಾರ ಪದ್ಧತಿಯ ವಿಕಾಸಗತಿ, *ಕ್ರೈಸ್ತ ಹಿತವಾದಿ*, ಸಂಪುಟ 6, ಸಂಚಿಕೆ 24, ಮಂಗಳೂರು, 1 ನೇ ಜುಲೈ, 1930, ಪುಟ 189.

54.ಹೆಚ್. ಐ. ಪೇಡ್ರಿಕ್ಸ್, ಬ್ರಿಟಿಷ್ ಇಂಡಿಯಾದ ರಾಜ್ಯಭಾರ ಪದ್ಧತಿಯ ವಿಕಾಸಗತಿ, *ಕ್ರೈಸ್ತ ಹಿತವಾದಿ*, ಸಂಪುಟ 7, ಸಂಚಿಕೆ 1, ಮಂಗಳೂರು, 16 ನೇ ಜುಲೈ, 1930, ಪುಟ 4–5.

55.ಮಹಾತ್ಮ ಗಾಂಧಿಯವರ ಉಪ್ಪಿನ ಕರದ ಕಾನೂನು ಭಂಗದ ಚಳವಳಿ, *ಕ್ರೈಸ್ತಹಿತವಾದಿ*, ಸಂಪುಟ 6, ಸಂಚಿಕೆ 20, ಮಂಗಳೂರು, 1ನೇ ಮೇ, 1930, ಪುಟ 154–155.

56.ಅದೆ, ಪುಟ 155–156.

57.ಕಾಂಗ್ರೆಸ್ ಚಳವಳದಿಂದ ಇಂಡಿಯಕ್ಕುಂಟಾಗುವ ಅನಿಷ್ಟ ಸ್ಥಿತಿಯು, *ಕ್ರೈಸ್ತ ಹಿತವಾದಿ*, ಸಂಪುಟ 7, ಸಂಚಿಕೆ 4, ಮಂಗಳೂರು, 1ನೇ ಸೆಪ್ಟೆಂಬರ್, 1930, ಪುಟ 26–27.

58.*ಕ್ರೈಸ್ತಹಿತವಾದಿ*, ಸಂಪುಟ 7, ಸಂಚಿಕೆ 5, ಮಂಗಳೂರು, 16ನೇ ಸೆಪ್ಟೆಂಬರ್, 1930, ಪುಟ 34–35.

59.*ಕ್ರೈಸ್ತಹಿತವಾದಿ*, ಸಂಪುಟ 7, ಸಂಚಿಕೆ 20, ಮಂಗಳೂರು, 1ನೇ ಮೇ, 1931, ಪುಟ 153.

60.*ಕ್ರೈಸ್ತಹಿತವಾದಿ*, ಸಂಪುಟ 7, ಸಂಚಿಕೆ 21, ಮಂಗಳೂರು, 16ನೇ ಮೇ, 1931, ಪುಟ 166.

61.ಡಾ, ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 82.

62.ಎನ್. ಸಿ. ಸಾರ್ಜೆಂಟ್, *ಫ್ರೆಮ್ ಮಿಶನ್ಸ್ ಟು ಚರ್ಚ್ ಇನ್ ಕರ್ನಾಟಕ*, ದಿ ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ಮೆಡ್ರಾಸ್, 1987, ಪುಟ 86.

63.*ಕ್ರೈಸ್ತಹಿತವಾದಿ*, ಸಂಪುಟ 7, ಸಂಚಿಕೆ 22, ಮಂಗಳೂರು, 1ನೇ ಜೂನ್, 1931, ಪುಟ 174.

64.ಇಂಗ್ಲೀಷರು ಇಂಡಿಯಾದಲ್ಲಿ ಮಾಡಿದ್ದೇನು?, *ಕ್ರೈಸ್ತ ಹಿತವಾದಿ*, ಸಂಪುಟ 4, ಸಂಚಿಕೆ 11, ಮಂಗಳೂರು, ಮೇ 1928, ಪುಟ 171. ಇಂಗ್ಲೀಷರು ಇಂಡಿಯಾದಲ್ಲಿ ಮಾಡಿದ್ದೇನು?, *ಕ್ರೈಸ್ತ ಹಿತವಾದಿ*, ಸಂಪುಟ 11, ಸಂಚಿಕೆ 12, ಮಂಗಳೂರು, ಜೂನ್ 1928, ಪುಟ 186–187.

65.ಡಾ ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 84.

66.ಮದ್ರಾಸ್ ನ್ಯಾಯವಿಧಾಯಕ ಸಭೆಯೂ ಪೋತೆಸ್ತಾಂತ ಕ್ರೈಸ್ತ ಸಮಾಜವೂ, *ಸತ್ಯವ್ರತ*, ಸಂಪುಟ 2, ಸಂಚಿಕೆ 2, ಮಂಗಳೂರು, ನವೆಂಬರ್ 1926, ಪುಟ 3–4.

67.ಡಾ. ಡೆನಿಸ್ ಫೆರ್ನಾಂಡಿಸ್, *ಪೂರ್ವೋಕ್ತ*, ಪುಟ 83.

Konkni dirven a catholic fortnightly was started in 1912 which represented catholic issues both in Konkani and in its English supplements. In the

beginning it concentrated mainly on social and economic problems of the Catholics, related to educations, beggary and issues related to catholic women, their dress, education and so on. Apart from news on international affairs, it also printed a series of stories on the First World War. After 1920's the Journal started highlighted civic and political matters related to elections to the local bodies communal electorate, infrastructure facilities, and political issues of Christians and so on. It also published the stories of great Indian leaders who sacrificed their lives for the public cause such as Gokhale and swami kannu pillai when an article on Gokhale first appeared in 1923 there were a few opposed it for glorification of non catholic leaders in a catholic Journal. Instead the suggestion came to highlight the stories of some catholic saints to inspire the younger generation of the community. However many supported the publication of such articles arguing that religious issues and patriotism are two separate issues and these things cannot be mixed up moreover the argument was that the stories of national leaders would inspire the Catholics of the region towards patriotism (Konkni Dirven, November 16 to December 16, 1923.)

68.*ಕ್ರೈಸ್ತ ಹಿತವಾದಿ,* ಸಂಪುಟ 7, ಸಂಚಿಕೆ 20, ಮಂಗಳೂರು, 1ನೇ ಮೇ, 1931, ಪುಟ 153.

69.ಪೀಟರ್ ವಿಲ್ಸನ್ ಪ್ರಭಾಕರ, *ಪೂರ್ವೋಕ್ತ,* ಪುಟ 303–304.

70.ಅರ್ಥೊರ್ ಜಯಕುಮಾರ್, *ಪೂರ್ವೋಕ್ತ,* ಪುಟ 140–141.

ಅಧ್ಯಾಯ: ಆರು

ಉಪಸಂಹಾರ

ಅಧ್ಯಾಯ: ಆರು
ಉಪಸಂಹಾರ

ಬಾಸೆಲ್ ಮಿಶನ್ ಸ್ವಿಡ್ಜರ್ಲ್ಯಾಂಡಿನ ಬಾಸೆಲ್‌ನಲ್ಲಿ ಸ್ಥಾಪಿತವಾಗಿದ್ದ ಒಂದು ಮಿಶನರಿ ಸಂಘವಾಗಿದ್ದು, 1834ರಲ್ಲಿ ಅದು ಭಾರತದಲ್ಲಿ ತನ್ನ ಕಾರ್ಯವನ್ನು ಆರಂಭಿಸುತ್ತದೆ. ಭಾರತಕ್ಕೆ ಬಂದ ಆರಂಭದಿಂದಲೇ ಅದು ಬ್ರಿಟಿಷ್ ಅಧಿಕಾರಿಗಳ ಸಹಾಯ ಪಡೆದು, ತನ್ನ ದೀರ್ಘಾವಧಿಯಲ್ಲಿ ವಿವಿಧ ಅಧಿಕಾರಿಗಳಿಂದ ವಿಭಿನ್ನ ರೀತಿಯ ಬೆಂಬಲವನ್ನು ಪಡೆದಿರುತ್ತದೆ. ಬಾಸೆಲ್ ಮಿಶನ್ ದಕ್ಷಿಣ ಕೆನರಾ, ಹೊನ್ನಾವರ, ದಕ್ಷಿಣ ಮರಾಠ, ಮಲಬಾರ್, ಕೊಡಗು ಹಾಗೂ ನೀಲಗಿರಿ ಪ್ರದೇಶಗಳಲ್ಲಿ ತನ್ನ ಮಿಶನರಿ ಕಾರ್ಯವನ್ನು ಆರಂಭಿಸಿರುತ್ತದೆ. ಬಾಸೆಲ್ ಮಿಶನ್ ಇತರ ಮಿಶನ್ ಸಂಘಗಳಿಗಿಂತ ಭಿನ್ನವಾಗಿದ್ದು, ಅದು ಕೇವಲ ಮತಾಂತರ ಕಾರ್ಯದಲ್ಲಿ ಮಗ್ನವಾಗಿರದೇ, ಬೃಹತ್ ಕೈಗಾರಿಕೆಗಳನ್ನು ಹಾಗೂ ಇತರ ಚಟುವಟಿಕೆಗಳನ್ನು ನಿರ್ವಹಿಸಿತು. 1834ರಿಂದ ನಿರಂತರವಾಗಿ 1914ರವರೆಗೆ ಕಾರ್ಯನಿರ್ವಹಿಸಿದ ಬಾಸೆಲ್ ಮಿಶನರಿಗಳು ಜಾತಿ ರಹಿತವಾದ ಒಂದು ಚಿಕ್ಕ ಕ್ರೈಸ್ತ ಸಮುದಾಯವನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗುತ್ತಾರೆ. ಬಾಸೆಲ್ ಮಿಶನರಿಗಳು ತನ್ನ ಸ್ಥಳೀಯ ಕ್ರೈಸ್ತರ ಮೇಲೆ ಪ್ರಬಲ ನಿಯಂತ್ರಣವನ್ನು ಹೊಂದಿದ್ದುದನ್ನು ಗಮನಿಸಬಹುದು. ಬಾಸೆಲ್ ಮಿಶನರಿಗಳು ಭಾರತದಲ್ಲಿನ ಬ್ರಿಟಿಷ್ ವಸಾಹತುಶಾಹಿಯನ್ನು ಮುಕ್ತವಾಗಿ ಹೊಗಳುತ್ತಾ, ಅದನ್ನು ಸಮರ್ಥಿಸುವುದನ್ನು ಗಮನಿಸಬಹುದು. ಆದರೆ 1914ರ ಪ್ರಥಮ ಜಾಗತಿಕ ಯುದ್ಧದ ಸಂದರ್ಭದಲ್ಲಿ ಮಿಶನ್ ಸಂದಿಗ್ಧ ಪರಿಸ್ಥಿತಿಗೆ ಒಳಗಾಗುತ್ತದೆ. ಬಾಸೆಲ್ ಮಿಶನರಿಗಳು ಪ್ರಥಮ ಜಾಗತಿಕ ಸಮರ ಹಾಗೂ ಅದರಿಂದಾಗಿ ಮಿಶನಿನ ಮೇಲೆ ಆಗಬಹುದಿದ್ದ ಪ್ರತಿಕೂಲ ಪರಿಣಾಮಗಳ ಬಗ್ಗೆ ಯಾವುದೇ ಊಹೆಯನ್ನು ಮಾಡಿರಲಿಲ್ಲ. ಅಷ್ಟು ಮಾತ್ರವಲ್ಲದೇ ಬ್ರಿಟಿಷ್ ವಸಾಹತುಶಾಹಿಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದ ಬಾಸೆಲ್ ಮಿಶನರಿಗಳು ಬ್ರಿಟಿಷ್ ಸರಕಾರವು ತಮ್ಮ ವಿರುದ್ಧ ಕಠಿಣ ಧೋರಣೆಗಳನ್ನು ತಳೆದುಕೊಳ್ಳಬಹುದು ಎಂಬ ನಿರೀಕ್ಷೆಯನ್ನೂ ಮಾಡಿರಲಿಲ್ಲ. ಆದುದರಿಂದ ಇಂತಹ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಲು ಯಾವುದೇ ಮುಂಜಾಗ್ರತೆಯನ್ನು ಕೈಗೊಳ್ಳದ ಬಾಸೆಲ್ ಮಿಶನರಿಗಳು ಹಾಗೂ ಮಿಶನ್ ಸಂಕಷ್ಟಕ್ಕೆ ಗುರಿಯಾಗುತ್ತದೆ.

ಬಾಸೆಲ್ ಮಿಶನಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಹುಪಾಲು ಮಿಶನರಿಗಳು ಜರ್ಮನರಾಗಿದ್ದರು. ಜಾಗತಿಕ ಸಮರದಲ್ಲಿ ಜರ್ಮನಿಯು ಬ್ರಿಟನ್ನಿನ ವಿರುದ್ಧ ಯುದ್ಧದಲ್ಲಿ ಭಾಗಿಯಾಗಿದ್ದುದರಿಂದ ಬಾಸೆಲ್ ಮಿಶನಿನಲ್ಲಿದ್ದ ಎಲ್ಲಾ ಜರ್ಮನ್ ಮಿಶನರಿಗಳನ್ನು ಸರಹದ್ದಿನ ಬಂಧನಕ್ಕೆ ಒಳಪಡಿಸಿ, ತದನಂತರ ಅವರುಗಳನ್ನು ಅವರ ದೇಶಕ್ಕೆ ಕಳುಹಿಸುವ ಯೋಜನೆಯನ್ನು ಬ್ರಿಟಿಷ್ ಸರಕಾರ ರೂಪಿಸುತ್ತದೆ. ಅದರಂತೆ ಮಿಶನಿನಲ್ಲಿದ್ದ ಎಲ್ಲಾ ಜರ್ಮನ್ ಮಿಶನರಿಗಳನ್ನು

ತೆರವುಗೊಳಿಸಿದುದರಿಂದ ಮಿಶನಿನಲ್ಲಿ ಉಳಿದ ಕೆಲವೇ ಕೆಲವು ಸ್ವಿಸ್ ಮಿಶನರಿಗಳು ತಾವು ಈವರೆಗೂ ನಿರ್ವಹಿಸದ ಕಠಿಣ ಜವಾಬ್ದಾರಿಗಳನ್ನು ಹೊರಬೇಕಾಗುತ್ತದೆ. ಇದರಿಂದ ಸ್ಪಷ್ಟವಾಗುವ ವಿಚಾರವೆಂದರೆ ಬಾಸೆಲ್ ಮಿಶನಿನಲ್ಲಿದ್ದ ಜರ್ಮನ್ ಮಿಶನರಿಗಳು ಮಿಶನಿನ ಎಲ್ಲಾ ಪ್ರಮುಖ ಜವಾಬ್ದಾರಿಗಳನ್ನು ತಾವೇ ಸ್ವತಃ ನಿರ್ವಹಿಸುತ್ತಿದ್ದು, ಸ್ವಿಸ್ ಮಿಶನರಿಗಳು ಅವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಿರಬೇಕು. ಬಾಸೆಲ್ ಮಿಶನಿನ, ಮಿಶನ್ ವ್ಯವಸ್ಥೆಯಲ್ಲಿ ಅದು ಹಲವು ದೇಶಿಯ ಕ್ರೈಸ್ತರ ಸಹಯೋಗವನ್ನು ಪಡೆದಿತ್ತು. ಮಿಶನಿನ ವರದಿಗಳು ಈ ಸ್ಥಳೀಯ ಏಜೆಂಟರುಗಳ [Native agents] ಕಾರ್ಯದ ಬಗ್ಗೆ ನಿರ್ಲಕ್ಷ್ಯವನ್ನು ತೋರಿರುವುದನ್ನು ಗಮನಿಸಬಹುದು. ಈ ಸ್ಥಳೀಯ ಏಜೆಂಟರುಗಳ ಸಹಾಯವಿಲ್ಲದೇ ಮಿಶನರಿಗಳು ಯಶಸ್ವಿ ಚಟುವಟಿಕೆಗಳನ್ನು ನಡೆಸುವುದು ಕಷ್ಟಕರವಾಗಿತ್ತು. ಬಾಸೆಲ್ ಮಿಶನರಿಗಳು ಅವರ ಈ ಸ್ಥಳೀಯ ಸಹಾಯಕರ ಮೇಲೆ ನಿಗಾ ಇರಿಸುತ್ತಿದ್ದು, ಅವರನ್ನು ಕಾಲ ಕಾಲಕ್ಕೆ ತರಬೇತುಗೊಳಿಸುತ್ತಿದ್ದರು. ಹೀಗೆ ವಸಾಹತುಶಾಹಿ ಆಡಳಿತದಲ್ಲಿ ಯುರೋಪಿಯನ್ನರು ಉನ್ನತ ಹುದ್ದೆಗಳಲ್ಲಿ ಮುಂದುವರೆದು, ಕೆಲಹಂತದಲ್ಲಿ ದೇಶಿಯರನ್ನು ಬಳಸಿ, ತಮ್ಮ ಚಿಂತನೆ ನೀತಿಗಳನ್ನು ಜಾರಿಗೆ ತಂದ ಹಾಗೆ, ಮಿಶನ್ ವ್ಯವಸ್ಥೆಯಲ್ಲಿ ಬಾಸೆಲ್ ಮಿಶನರಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸಿ ಸ್ಥಳೀಯರ ಮೂಲಕ ಕೆಳ ಹಂತದಲ್ಲಿ ತಮ್ಮ ಮಿಶನನ್ನು ಮುಂದುವರೆಸಿದ್ದರು. ಹೀಗೆ ಭಾರತೀಯರು ಶ್ರಮವನ್ನು ಒದಗಿಸಿಕೊಟ್ಟರೆ ಹೊರತು, ಬುದ್ಧಿಶಕ್ತಿಯನ್ನಲ್ಲ ಎಂಬ ಚಿಂತನೆ ಮಿಶನರಿಗಳಲ್ಲೂ ಇದ್ದಂತೆ ತೋರುತ್ತದೆ. ಆದುದರಿಂದ 1914ರಲ್ಲಿ ಜರ್ಮನ್ ಮಿಶನರಿಗಳು ನಿರ್ಗಮಿಸುವಂತಹ ಕಾಲದಲ್ಲಿ ಈ ಸ್ಥಳೀಯ ಏಜೆಂಟರುಗಳಿಗೆ ಯಾವುದೇ ಜವಾಬ್ದಾರಿಗಳನ್ನು ನೀಡದೇ, ಎಲ್ಲವನ್ನೂ ಸ್ವಿಸರಿಗೆ ವಹಿಸಿ ಹೊರಟು ಹೋಗುತ್ತಾರೆ. ಬಹುಶಃ ಯುದ್ಧ ಬಹುಬೇಗ ಮುಗಿದು, ತದನಂತರ ವಾಪಾಸ್ಸು ಮಿಶನಿಗೆ ಮರಳಿ ತಮ್ಮ ಹಳೆ ಜವಾಬ್ದಾರಿಗಳನ್ನು ಪುನಃ ವಹಿಸಿಕೊಳ್ಳಬಹುದೆಂಬ ಚಿಂತನೆ ಈ ಮಿಶನರಿಗಳಲ್ಲಿದ್ದಿರಬೇಕು.

1914ರವರೆಗೆ ಬಾಸೆಲ್ ಮಿಶನರಿಗಳೊಂದಿಗೆ ಬಹಳಷ್ಟು ಉತ್ತಮ ಸಂಬಂಧವನ್ನು ಹೊಂದಿದ್ದ ಬ್ರಿಟಿಷ್ ವಸಾಹತುಶಾಹಿ ನೀತಿಯು, ಯುದ್ಧ ಆರಂಭವಾಗುವುದರೊಂದಿಗೆ ತಕ್ಷಣದಲ್ಲಿ ತಿರುವು ಪಡೆದುಕೊಳ್ಳುವುದನ್ನು ಗಮನಿಸಬಹುದು. ಯುದ್ಧ ಆರಂಭವಾದ ಕೂಡಲೇ ಸ್ವಿಸ್ ಮೂಲದ ಮಿಶನರಿ ಸಂಘವಾಗಿದ್ದ ಬಾಸೆಲ್ ಮಿಶನ್‌ನಲ್ಲಿ ಸಾಕಷ್ಟು ಮೊತ್ತದ ಜರ್ಮನರ ಪ್ರಬಲ ಅಸ್ತಿತ್ವವಿರುವುದನ್ನು ಮನಗಂಡ ಬ್ರಿಟಿಷ್ ಸರಕಾರ ಅದನ್ನು 'ವೈರಿ ದೇಶದ ಮಿಶನ್' ಎಂದು ಸಾರಿ, ಅದರ ಚಟುವಟಿಕೆಗಳನ್ನು ಭಾರತದಲ್ಲಿ ನಿರ್ಬಂಧಿಸುತ್ತದೆ. ಹೀಗೆ ಜಾಗತಿಕ ಯುದ್ಧ ಆರಂಭವಾಗುವುದರೊಂದಿಗೆ ಮಿಶನ್ ಹಾಗೂ ವಸಾಹತುಶಾಹಿ ನಡುವಿನ ಸಂಬಂಧದ ಮಧ್ಯೆ ಒಂದು ಅಂತರ ಬೆಳೆಯುತ್ತದೆ. ಮತ್ತೊಂದೆಡೆ ಈ ಹಂತದಲ್ಲೂ ಜರ್ಮನ್ ಮಿಶನರಿಗಳು ಬ್ರಿಟಿಷ್

ಸರಕಾರದೊಂದಿಗೆ ಕೆಲವೊಂದು ಚರ್ಚೆಗಳನ್ನು ನಡೆಸಿದ್ದರೂ, ವಸಾಹತು ಸರಕಾರದ ಮೇಲೆ ಟೀಕೆಗಳನ್ನು ಮಾಡದಿರುವುದು ವಿಶೇಷವೇ ಸರಿ. ಅತ್ತ ಸ್ವಿಡ್ಜರ್ಲ್ಯಾಂಡಿನಲ್ಲಿ ಬಾಸೆಲ್ ಮಿಶನ್ ಈ ನಿರ್ಬಂಧದ ನಂತರವೂ ತನ್ನ ಜರ್ಮನ್ ಸಹಚರ ಹಾಗೂ ಬೆಂಬಲಿಗರೊಂದಿಗೆ ನಿಕಟ ಸಂಪರ್ಕವನ್ನು ಮುಂದುವರಿಸುತ್ತದೆ. ಬಾಸೆಲ್ ಮಿಶನ್ ಮೇಲಿನ ನಿರ್ಬಂಧವು ಕೇವಲ ರಾಜಕೀಯವಾಗಿರುತ್ತದೆ. ಏಕೆಂದರೆ ಬಾಸೆಲ್ ಮಿಶನಿನಲ್ಲಿದ್ದ ಜರ್ಮನ್ ಮಿಶನರಿಗಳನ್ನು ವೈರಿ ದೇಶದ ಮಿಶನರಿಗಳೆಂಬ ಕಾರಣದಿಂದ ನಿರ್ಬಂಧಿಸಿ ಸ್ವಿಸ್ ಮಿಶನರಿಗಳಿಗೆ ಮಿಶನಿನಲ್ಲಿ ಮುಂದುವರಿಯಲು ಅವಕಾಶ ಕಲ್ಪಿಸಲಾಗುತ್ತದೆ ಹಾಗು ಈ ಹೊಸ ವ್ಯವಸ್ಥೆಯಲ್ಲಿ ಮಿಶನ್ ಮುಂದುವರಿಯುತ್ತದೆ. ಆದರೆ ಅದನ್ನು ನಿರ್ವಹಿಸುವ ಮಿಶನರಿಗಳು ಮಾತ್ರ ಬದಲಾಗುತ್ತಾರೆ.

ಬಾಸೆಲ್ ಮಿಶನರಿಗಳನ್ನು ತಮ್ಮ ಮಿಶನ್ ಠಾಣ್ಯಗಳಿಂದ ಏಕಾಏಕಿ ತೆಗೆದು ಹಾಕಿದ್ದು, ಸ್ಥಳೀಯ ಕ್ರೈಸ್ತರನ್ನು ಚಿಂತಾಗ್ರಸ್ತರನ್ನಾಗಿ ಮಾಡುತ್ತದೆ. ಏಕೆಂದರೆ 1914ರವರೆಗೆ ಬಾಸೆಲ್ ಮಿಶನ್ ಕ್ರೈಸ್ತರ ಎಲ್ಲಾ ಬೇಕು ಬೇಡಗಳನ್ನು ಪೂರೈಸಿ ಅವರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದ ಜರ್ಮನ್ ಮಿಶನರಿಗಳು ತೆರಳುವುದರಿಂದ, ಬಾಸೆಲ್ ಮಿಶನ್ ಕ್ರೈಸ್ತರು ಸೂಕ್ತ ಮಾರ್ಗದರ್ಶನವಿಲ್ಲದೇ ಪರದಾಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲದೇ ಮಿಶನರಿಗಳ ಅನುಪಸ್ಥಿತಿಯಲ್ಲಿ ಪರಿಸ್ಥಿತಿಯನ್ನು ನಿಭಾಯಿಸಿಕೊಂಡುಹೋಗುವ ಪ್ರಜ್ಞೆ ಆ ಕ್ರೈಸ್ತರಲ್ಲಿ ಇದ್ದಿರಲಿಲ್ಲವೇನೋ? ಆದುದರಿಂದ ಜರ್ಮನ್ ಮಿಶನರಿಗಳ ತೆರಳುವಿಕೆ ಮಿಶನ್ ಹಾಗೂ ಇಲ್ಲಿ ಉಳಿದ ಮಿಶನರಿಗಳಿಗೆ ಬಹಳಷ್ಟು ಸಂಕಷ್ಟಗಳನ್ನು ತಂದೊಡ್ಡುತ್ತದೆ. ಜರ್ಮನ್ ಮಿಶನರಿಗಳ ಹಿಂತಿರುಗುವಿಕೆಯು ಈವರೆಗೆ ಅವರ ನಿಯಂತ್ರಣದಲ್ಲಿದ್ದ ಬಾಸೆಲ್ ಮಿಶನ್ ಕ್ರೈಸ್ತರು ಸ್ವತಂತ್ರರಾಗುವಂತೆಯೂ ಮಾಡುತ್ತದೆ. ಈ ರೀತಿ ಜಾಗತಿಕ ಯುದ್ಧ ಮಿಶನಿನ್ನತ್ತ ವಸಾಹತು ನೀತಿಯಲ್ಲಿ ಬದಲಾವಣೆಗೆ ಮಾತ್ರ ಕಾರಣವಾಗದೇ, ಮಿಶನರಿ ಹಾಗೂ ಸ್ಥಳೀಯ ಕ್ರೈಸ್ತರ ಸಂಬಂಧದಲ್ಲೂ ಬದಲಾವಣೆಗೆ ಕಾರಣವಾಗುತ್ತದೆ. ಮಿಶನರಿಗಳ ನಿಯಂತ್ರಣದಿಂದ ಮುಕ್ತರಾದ ಬಾಸೆಲ್ ಮಿಶನ್ ಕ್ರೈಸ್ತರು ನಂತರದಲ್ಲಿ ಸ್ವತಂತ್ರ ಚಿಂತನೆಗಳನ್ನು ಮಾಡಲಾರಂಭಿಸುವುದು ಮಾತ್ರವಲ್ಲದೇ ಮಿಶನರಿಗಳ ಮೇಲೆ ಟೀಕೆಗಳನ್ನು ಮಾಡಲಾರಂಭಿಸುವುದನ್ನು ಗಮನಿಸಬಹುದು. ಬಾಸೆಲ್ ಮಿಶನರಿಗಳು, ಬಾಸೆಲ್ ಮಿಶನ್ ಕ್ರೈಸ್ತರಿಗೆ ಉನ್ನತ ವಿದ್ಯಾಭ್ಯಾಸವನ್ನು ಕಲ್ಪಿಸಲಿಲ್ಲವೆಂಬ ಆರೋಪವನ್ನು ಮಾಡುತ್ತಾರೆ. ಮುಂದುವರಿದು ಮಿಶನರಿಗಳ ನಿಯಂತ್ರಣದಿಂದ ಮುಕ್ತರಾಗಿ ಸ್ವತಂತ್ರ ಚರ್ಚ್ ವ್ಯವಸ್ಥೆಯನ್ನು ಹುಟ್ಟು ಹಾಕಬೇಕೆಂದು ವಾದಿಸುವುದನ್ನು ಗಮನಿಸಬಹುದು. ಹೀಗೆ ಜಾಗತಿಕ ಸಮರವು ಮಿಶನ್‌ನಲ್ಲಿ ಹಲವು ದ್ವಂದ್ವಗಳನ್ನು ಹುಟ್ಟುಹಾಕುತ್ತದೆ. ಬ್ರಿಟಿಷ್ ಸರಕಾರ ಮಿಶನ್‌ನಲ್ಲಿ ಪ್ರಬಲ ಜರ್ಮನ್ ಅಸ್ತಿತ್ವಗಳನ್ನು ಕಂಡು ಅದನ್ನು ನಿರ್ಬಂಧಿಸಿತೇ ಹೊರತು, ಯಾವುದೇ

ಪೂರ್ವಯೋಜಿತ ಉದ್ದೇಶಗಳಿಂದಾಗಿರಲಿಲ್ಲ. ಅದೇ ರೀತಿ ಬಾಸೆಲ್ ಮಿಶನ್ ಆಸಕ್ತಿಗಳು ಹಾಗೂ ವಸಾಹತುಶಾಹಿ ಆಸಕ್ತಿಗಳು ಎಂದೂ ವಿರುದ್ಧವಾಗಿರಲಿಲ್ಲ. ಜರ್ಮನ್ ಮಿಶನರಿಗಳು ತಮ್ಮ ದೇಶಕ್ಕೆ ಯಾವುದೇ ರೀತಿಯಲ್ಲಿ ಸಹಾಯ ಮಾಡಿಯಾರು ಎಂಬ ಕಾರಣದಿಂದ ಮುಂಜಾಗ್ರತಾ ಕ್ರಮವಾಗಿ ವಸಾಹತು ಸರಕಾರ ಈ ನಿಲುವನ್ನು ತಳೆದಿರಬೇಕು. 1924ರಲ್ಲಿ ಮಿಶನರಿಗಳನ್ನು ಹಾಗೂ 1927ರಲ್ಲಿ ಮಿಶನನ್ನು ಪುನಃ ಭಾರತದಲ್ಲಿ ಕಾರ್ಯಾಚರಿಸಲು ಅನುವು ಮಾಡಿಕೊಟ್ಟಿದ್ದ ಬ್ರಿಟಿಷ್ ಸರಕಾರದ ನೀತಿಯು ಅದಕ್ಕೆ ಮಿಶನರಿಗಳ ಅಥವಾ ಮಿಶನ್ ಕಡೆ ಯಾವುದೇ ದ್ವೇಷವಿರಲಿಲ್ಲವೆಂಬುದನ್ನು ತಿಳಿಸುತ್ತದೆ.

ಪ್ರಥಮ ಜಾಗತಿಕ ಯುದ್ಧವು ಬಾಸೆಲ್ ಮಿಶನಿನ ವೃದ್ಧಿಗೆ ತಡೆಯುಂಟುಮಾಡಿತು ಹಾಗೂ ಅದರ ನಂತರ 1927ರಲ್ಲಿ ಮಿಶನ್ ಮರಳಿ ಕಾರ್ಯ ಆರಂಭಿಸಿದರೂ ಅದು ಇದ್ದಂತಹ ಕಾರ್ಯವನ್ನು ಮುಂದುವರಿಸಲು ಪರದಾಡಿತೇ ವಿನಃ ತನ್ನ ಚಟುವಟಿಕೆಗಳನ್ನು ಯವುದೇ ರೀತಿಯಲ್ಲೂ ವಿಸ್ತರಿಸಲಾಗಲಿಲ್ಲ. ಪ್ರಥಮ ಜಾಗತಿಕ ಯುದ್ಧದ ಕಾಲದಲ್ಲಿ ಬಾಸೆಲ್ ಮಿಶನಿನ ಆಸ್ತಿಗಳೆಲ್ಲವನ್ನು ಬ್ರಿಟಿಷ್ ಸರಕಾರ ತನ್ನ ವಶಕ್ಕೆ ತೆಗೆದುಕೊಂಡು ವೈರಿ ಆಸ್ತಿಯ ಮೇಲ್ವಿಚಾರಕರ [Custodian of enemy property] ನಿಯಂತ್ರಣಕ್ಕೆ ವಹಿಸುತ್ತದೆ. ಇಲ್ಲಿಯೂ ಬ್ರಿಟಿಷ್ ಸರಕಾರ ಮಿಶನ್ ಆಸ್ತಿಯ ಬಗ್ಗೆ, ಭವಿಷ್ಯತ್ತಿನಲ್ಲಿ ಅದರ ಬಳಕೆಯ ಬಗ್ಗೆ ಜವಾಬ್ದಾರಿಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಬಾಸೆಲ್ ಮಿಶನಿನ ಆಸ್ತಿಗಳೆಲ್ಲವನ್ನೂ ವೈರಿ ಆಸ್ತಿಯ ಮೇಲ್ವಿಚಾರಕರ ನಿಯಂತ್ರಣಕ್ಕೆ ವಹಿಸಿ, ಮಿಶನ್ ಮುಂದುವರಿಯುವಂತಾಗಲು ಸೂಕ್ತ ಬದಲಿ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ಈ ಬದಲಿ ವ್ಯವಸ್ಥೆಗಳು ಸೂಕ್ತವಾಗಿದೆಯೇ ಎಂದು ಪರಿಶೀಲಿಸಿ ಬಾಸೆಲ್ ಮಿಶನಿನ ಆಸ್ತಿಗಳನ್ನು ಆಯಾ ಪ್ರದೇಶಗಳಲ್ಲಿ ಬಾಸೆಲ್ ಮಿಶನಿನ ಕಾರ್ಯವನ್ನು ಮುಂದುವರಿಸುತ್ತಿರುವ ಸಂಘಗಳಿಗೆ ವರ್ಗಾಯಿಸುವಂತೆ ನಿರ್ದೇಶಿಸುತ್ತದೆ. ಆದರೆ ದುರಾದೃಷ್ಟವಶಾತ್ ಬಾಸೆಲ್ ಮಿಶನ್ ಠಾಣ್ಯಗಳು ವಿಭಿನ್ನ ಮಿಶನ್‌ಗಳ ನಿರ್ವಹಣೆಗೆ ವಹಿಸಲ್ಪಟ್ಟು, ಮಿಶನ್ ಹರಿದು ಹಂಚಿಹೋಗುತ್ತದೆ. ಬಾಸೆಲ್ ಮಿಶನರಿಗಳ ನಿರ್ಗಮನದ ಬಳಿಕ ಮಿಶನಿನ ಆಯಾಕಟ್ಟಿನ ಜವಾಬ್ದಾರಿಗಳು ಬ್ರಿಟಿಷ್ ಮಿಶನರಿಗಳ ನಿಯಂತ್ರಣದಲ್ಲಿರುವಂತೆ ಬ್ರಿಟಿಷ್ ಸರಕಾರ ನೋಡಿಕೊಳ್ಳುತ್ತದೆ. ಈ ಬ್ರಿಟಿಷ್ ಮಿಶನರಿಗಳು ಬಾಸೆಲ್ ಮಿಶನಿನ ಚರ್ಚುಗಳನ್ನು ಸ್ವಾಯತ್ತತೆಯತ್ತ ಮುಂದುವರಿಯುವ ಪ್ರಕ್ರಿಯೆಗೆ ಚಾಲನೆ ನೀಡುತ್ತಾರೆ. ಆದರೆ ಈ ಪ್ರಕ್ರಿಯೆಯು ಮಿಶನಿನಲ್ಲಿ ಗೊಂದಲಕ್ಕೆ ಕಾರಣವಾಗುವುದನ್ನು ಗಮನಿಸಬಹುದು. ಚರ್ಚ್ ಆಡಳಿತದಲ್ಲಿ ದೇಶಿಯ ಕ್ರೈಸ್ತರ ಭಾಗವಹಿಸುವಿಕೆಯು, ಗುಂಪುಗಾರಿಕೆಯನ್ನು ಹುಟ್ಟುಹಾಕಿ, ಪರ–ವಿರೋಧ ಪಕ್ಷಗಳು ಉದ್ಭವಿಸುತ್ತವೆ. ಈ ಗುಂಪುಗಳ ನಡುವಿನ ಕಲಹ ಕೆಲವೊಂದು ಹಂತದಲ್ಲಿ ಕೋರ್ಟ್ ಮೆಟ್ಟಿಲೇರುವುದನ್ನು ಗಮನಿಸಬಹುದು.

ಬಾಸೆಲ್ ಮಿಶನಿನ ಕೈಗಾರಿಕೆಗಳನ್ನು ಬ್ರಿಟಿಷ್ ಸರಕಾರ ಜಾಗತಿಕ ಯುದ್ಧದ ಸಂದರ್ಭದಲ್ಲಿ ತನ್ನ ನಿಯಂತ್ರಣಕ್ಕೆ ಪಡೆಯುತ್ತದೆ. ಇದರೊಂದಿಗೆ 1914ರವರೆಗೆ ಮಿಶನ್‌ಗೆ ಅಪಾರವಾದ ಹಣಕಾಸನ್ನು ಒದಗಿಸುತ್ತಿದ್ದ ಕೈಗಾರಿಕೆಗಳು ಪತನದತ್ತ ಮುಂದುವರಿಯುತ್ತವೆ. 1919ರ ನಂತರ ಈ ಕೈಗಾರಿಕೆಗಳ ಸಂಪೂರ್ಣ ಜವಾಬ್ದಾರಿಯನ್ನು ಬ್ರಿಟಿಷ್ ಸರಕಾರ 'ಕಾಮನ್‌ವೆಲ್ತ್ ಟ್ರಸ್ಟ್'ಗೆ ವಹಿಸುತ್ತದೆ. ಬಾಸೆಲ್ ಮಿಶನ್ ಕೈಗಾರಿಕೆಗಳು ಕಾಮನ್‌ವೆಲ್ತ್ ಟ್ರಸ್ಟ್‌ನ ನಿಯಂತ್ರಣದಲ್ಲಿ ಯಾವುದೇ ಪ್ರಗತಿಯನ್ನು ದಾಖಲಿಸುವಲ್ಲಿ ವಿಫಲವಾಗುತ್ತವೆ. ಅದೇ ರೀತಿ ಈ ಕೈಗಾರಿಕೆಗಳಿಂದ ಮಿಶನ್‌ಗೆ ಬರುತ್ತಿದ್ದ ಹಣವು ಕಡಿಮೆಯಾಗುತ್ತದೆ. ಕ್ರಮೇಣ 'ಕಾಮನ್‌ವೆಲ್ತ್ ಟ್ರಸ್ಟ್' ಕೆಲವು ಕೈಗಾರಿಕೆಗಳನ್ನು ಮುಚ್ಚುತ್ತದೆ ಹಾಗೂ ಕೆಲವು ಕೈಗಾರಿಕೆಗಳನ್ನು ಮಾರಾಟ ಮಾಡುತ್ತದೆ. ಹೀಗೆ ಬಾಸೆಲ್ ಮಿಶನಿನ ಹೆಸರನ್ನು ಜಗತ್ತಿನಾದ್ಯಂತ ಪ್ರಖ್ಯಾತವಾಗುವಂತೆ ಮಾಡಿದ್ದ ಕೈಗಾರಿಕೆಗಳು ಜಾಗತಿಕ ಯುದ್ಧ ಹಾಗೂ ಬ್ರಿಟಿಷರ ಕಠಿಣ ನಿಲುವುಗಳಿಂದಾಗಿ ತನ್ನ ಅಂತ್ಯವನ್ನು ಕಾಣಬೇಕಾಯಿತು. ಮಿಶನ್ ವಿರುದ್ಧ ಬ್ರಿಟಿಷ್ ಸರಕಾರ ಅನುಸರಿಸಿದ್ದ ಕೆಲವು ನೀತಿಗಳು ಬಹಳಷ್ಟು ಕುತೂಹಲಕಾರಿಯಾಗಿವೆ. 'ಮಿಶನ್ ಟ್ರಸ್ಟ್ ಮದ್ರಾಸ್' ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಕಾಮನ್‌ವೆಲ್ತ್‌ಗೆ ವರ್ಗಾಯಿಸುವ ಸಂದರ್ಭದಲ್ಲಿ, ಬಾಸೆಲ್ ಮಿಶನ್ ಪ್ರಿಂಟಿಂಗ್ ಪ್ರೆಸ್ ಹಾಗೂ ಟ್ರ್ಯಾಕ್ಟ್ ಡಿಪೋಜಿಟರಿಗಳನ್ನು ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ವರ್ಗಾಯಿಸುತ್ತದೆ. ಬಹುಶಃ ಇವು ಮಿಶನ್ ಚಟುವಟಿಕೆಗೆ ಸಹಾಯಕವಾಗಬಹುದೆಂಬ ಕಾರಣದಿಂದ ಬ್ರಿಟಿಷ್ ಸರಕಾರ ಈ ವರ್ಗಾವಣೆ ಮಾಡಿರಬೇಕು. ಅದೇ ರೀತಿ ಕೈಗಾರಿಕೆಗಳಿಂದ ಬರುವ ಲಾಭವನ್ನು ಬಾಸೆಲ್ ಮಿಶನ್ ಕಾರ್ಯನಿರ್ವಹಿಸುತ್ತಿದ್ದ ಪ್ರದೇಶದಲ್ಲಿ ಧಾರ್ಮಿಕ, ಶೈಕ್ಷಣಿಕ ಹಾಗೂ ಪರೋಪಕಾರಿ ಕೆಲಸಗಳಿಗೆ ಬಳಸಿಕೊಳ್ಳಬೇಕೆಂದು ಸೂಚಿಸಿದ್ದ ಸರಕಾರ ಅದರ ನಿಬಂಧನೆಗಳಂತೆ ಕೈಗಾರಿಕೆಗಳನ್ನು ನಡೆಸುವಲ್ಲಿ ಕಾಮನ್‌ವೆಲ್ತ್ ವಿಫಲವಾದರೆ, ಬ್ರಿಟಿಷ್ ಸರಕಾರ ಅದರ ನಿಯಂತ್ರಣಕ್ಕೆ ವಹಿಸಿದ್ದ ಕೈಗಾರಿಕೆಗಳನ್ನು ಮರಳಿಪಡೆಯುವಂತೆಯೂ ಸ್ಪಷ್ಟವಾಗಿ ತಿಳಿಸಿರುತ್ತದೆ. ಹೀಗೆ ಬ್ರಿಟಿಷ್ ವಸಾಹತು ಸರಕಾರ ಕೈಗಾರಿಕೆಗಳನ್ನು ತನ್ನ ನಿಯಂತ್ರಣಕ್ಕೆ ಪಡೆದರೂ, ಅವುಗಳನ್ನು ಬಾಸೆಲ್ ಮಿಶನಿನ ಉದ್ದೇಶದಲ್ಲೇ ಮುಂದುವರಿಸಿದ್ದು ವಿಶೇಷವಾಗಿದೆ.

ಬಾಸೆಲ್ ಮಿಶನ್ ಕೈಗಾರಿಕಾ ಇತಿಹಾಸದಲ್ಲಿ ದಾಖಲಾಗಿರುವ ಇನ್ನೊಂದು ಆಸಕ್ತಿಯ ವಿಚಾರವೆಂದರೆ ಬಾಸೆಲ್ ಮಿಶನ್ ವ್ಯಾಪಾರಿ ಸಂಘದ ದೀರ್ಘಕಾಲದ ಕಾನೂನು ಹೋರಾಟ ಹಾಗೂ ಅದರಲ್ಲಿನ ಯಶಸ್ಸು. ಜಾಗತಿಕ ಯುದ್ಧದ ಸಂದರ್ಭದಲ್ಲಿ ಮಿಶನರಿ ಹಾಗೂ ವ್ಯಾಪಾರಿ ಸಂಘಗಳ ನಡುವೆ ಬಿರುಕು ಮೂಡುತ್ತದೆ. ಒಂದು ಕಡೆ ಮಿಶನರಿ ಸೊಸೈಟಿಯು ತನ್ನ ಜರ್ಮನ್ ಸಹಚರರೊಂದಿಗೆ ನಿಕಟ ಸಂಪರ್ಕವನ್ನು ಮುಂದುವರಿಸಿದರೆ, ಮತ್ತೊಂದು ಕಡೆ ವ್ಯಾಪಾರಿ ಕಂಪನಿಯು ತನ್ನ ಕೈಗಾರಿಕೆಗಳನ್ನು ಉಳಿಸಿಕೊಳ್ಳಲು ಮುಂದಾಗುತ್ತದೆ. ವ್ಯಾಪಾರಿ ಕಂಪನಿಯ

ಮುಖ್ಯಸ್ಥರಾಗಿದ್ದ ವಿಲ್‌ಹೆಲ್ಮ್ ಪ್ರೈಸ್‌ವೇರ್ಕ್ ಇಮ್ಮ್‌ಹೋಫ್‌ರವರು [Wilhelm Preiswerk Imhoff] 1919ರಲ್ಲಿ ಇಂಗ್ಲೆಂಡಿಗೆ ತೆರಳಿ ಕಾಮನ್‌ವೆಲ್ತ್ ಟ್ರಸ್ಟ್ ಹಾಗೂ ಬ್ರಿಟಿಷ್ ಮಿಶನರಿಗಳ ಮನವೊಲಿಸಲು ವಿಫಲವಾದ ನಂತರ, ಪ್ರಬಲ ರಾಜಕೀಯ ನಾಯಕ ಹಾಗೂ ಹೌಸ್ ಆಫ್ ಲಾರ್ಡ್ಸ್‌ನ ಸದಸ್ಯ ಟೆಂಪಲ್ಟನ್‌ರ ಸಹಾಯದಿಂದ ಕಾನೂನಿನ ಹೋರಾಟ ನಡೆಸಿ, 1952ರಲ್ಲಿ ತಾನು ಭಾರತದಲ್ಲಿ ಕಳೆದುಕೊಂಡು ಕೈಗಾರಿಕೆಗಳಿಗೆ ಪರಿಹಾರವನ್ನು ಪಡೆದುಕೊಳ್ಳುತ್ತಾರೆ. ಬಾಸೆಲ್ ಮಿಶನಿನಲ್ಲಿ ಜರ್ಮನರು ತಮ್ಮ ಪ್ರಬಲ ಆಸ್ಥಿತ್ವವನ್ನು ಇಟ್ಟುಕೊಂಡದ್ದು ಬಾಸೆಲ್ ಮಿಶನ್ ಕೈಗಾರಿಕೆಗಳನ್ನು ಬ್ರಿಟಿಷ್ ಸರಕಾರ ತನ್ನ ನಿಯಂತ್ರಣಕ್ಕೆ ಪಡೆದುಕೊಳ್ಳುವಂತೆ ಮಾಡುತ್ತದೆ. ಪುನಃ ಯುದ್ಧದ ಕಾಲದಲ್ಲಿ ಮಿಶನ್ ಜರ್ಮನರೊಂದಿಗೆ ನಿಕಟ ಸಂಪರ್ಕದಲ್ಲಿರುತ್ತದೆ. ಆದುದರಿಂದ ವ್ಯಾಪಾರಿ ಕಂಪನಿ ಮಿಶನ್‌ನಿಂದ ದೂರವಾಗುತ್ತದೆ. ಮಿಶನ್ ಸೊಸೈಟಿಗೆ ಬಹುಪಾಲು ಮಿಶನರಿಗಳು ಹಾಗೂ ಹಣಕಾಸು ಜರ್ಮನ್ ಮೂಲದಿಂದಲೇ ಬರುತ್ತಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

ಯುದ್ಧದ ಕಾಲದಲ್ಲಿ ಮಿಶನ್ ಎದುರಿಸಿದ ಸಂದಿಗ್ಧ ಪರಿಸ್ಥಿತಿಗೆ ಮಿಶನ್ ಹಾಗೂ ಮಿಶನರಿ ನೀತಿಗಳೇ ಕಾರಣವೆನ್ನಬಹುದು. 1834ರಿಂದ 1914ರವರೆಗಿನ ತಮ್ಮ ದೀರ್ಘ ಇರುವಿಕೆಯ ಕಾಲದಲ್ಲಿ ದೇಶಿಯ ಕ್ರೈಸ್ತರಿಗೆ ಯಾವುದೇ ಸ್ವತಂತ್ರ ಜವಾಬ್ದಾರಿ ಹಾಗೂ ನಾಯಕತ್ವವನ್ನು ನೀಡದೆ, ಅವರಿಗೆ ತರಬೇತಿಯನ್ನು ಒದಗಿಸಿ, ನಿರಂತರವಾಗಿ ದೇಶಿಯ ಕ್ರೈಸ್ತರನ್ನು ಮಿಶನರಿ ಪರಾಮರ್ಶೆಯಲ್ಲಿಯೇ ಮುಂದುವರಿಸಿದ್ದು, 1914ರ ನಂತರದ ಸಂದಿಗ್ಧತೆಗೆ ಕಾರಣವಾಯಿತೆನ್ನಬಹುದು. ಒಂದು ವೇಳೆ ದೇಶಿಯ ಕ್ರೈಸ್ತರಿಗೆ ನಾಯಕತ್ವ ಹಾಗೂ ಜವಾಬ್ದಾರಿಯನ್ನು ಮೊದಲೇ ವಹಿಸಿದ್ದರೆ, ಬಾಸೆಲ್ ಮಿಶನರಿಗಳ ಅನುಪಸ್ಥಿತಿಯಲ್ಲಿ ಬಾಸೆಲ್ ಮಿಶನ್ ಚರ್ಚುಗಳು ಸ್ವತಂತ್ರವಾಗಿ ಮುಂದುವರಿಯಲು ಸಮಸ್ಯೆಗಳಾಗುತ್ತಿರಲಿಲ್ಲವೇನೋ? ಅದೇ ರೀತಿ ಬ್ರಿಟಿಷ್ ಮಿಶನರಿಗಳು (ಟಾಮ್ಲಿನ್‌ಸನ್) ಬಾಸೆಲ್ ಮಿಶನ್ ಚರ್ಚುಗಳು ಸ್ವಾಯತ್ತತೆಯತ್ತ ಮುಂದುವರಿಯುವಂತಾಗಲು ಕೈಗೊಂಡ ಕ್ರಮಗಳು ಹಾಗೂ ಇದರಿಂದಾಗಿ ನಂತರದಲ್ಲಿ ಉದ್ಭವಿಸಿದ ಬಿಕ್ಕಟ್ಟುಗಳನ್ನು ತಪ್ಪಿಸಬಹುದಿತ್ತು.

ಜಾಗತಿಕ ಯುದ್ಧದಿಂದಾಗಿ ಬಾಸೆಲ್ ಮಿಶನಿನಲ್ಲಿ ಆದಂತಹ ಮತ್ತೊಂದು ಬದಲಾವಣೆ ಎಂದರೆ 'ಕೆನರೀಸ್ ಇವ್ಯಾಂಜಲಿಕಲ್ ಮಿಶನ್'ನ ಸ್ಥಾಪನೆ. ಬಾಸೆಲ್ ಮಿಶನ್ ಠಾಣ್ಯಗಳ ಸಂದಿಗ್ಧ ಪರಿಸ್ಥಿತಿಯನ್ನು ಗಮನಿಸಿದ ಸ್ವಿಸರು ಬಾಸೆಲ್ ಮಿಶನಿನ ಅನುಮತಿಯೊಂದಿಗೆ ಬರ್ನೆಯಲ್ಲಿ [Berne] ಒಂದು ಮಿಶನರಿ ಸಂಘವನ್ನು ಸ್ಥಾಪಿಸಿ, ಭಾರತದಲ್ಲಿನ ಬಾಸೆಲ್ ಮಿಶನಿನ ಕಾರ್ಯವನ್ನು ಮುಂದುವರಿಸಲು ಮುಂದಾಗುತ್ತಾರೆ. ಆದರೆ ಯುದ್ಧವು ದೀರ್ಘಕಾಲ ಮುಂದುವರಿಯುವ ಲಕ್ಷಣಗಳು ಗೋಚರಿಸಿದ್ದರಿಂದ ಅದು ಈ ಕಾರ್ಯವನ್ನು ಒಂದು ಶಾಶ್ವತವಾದ ಕಮಿಟಿಗೆ

ವರ್ಗಾಯಿಸಲು ಮುಂದಾಗುತ್ತದೆ. ಮತ್ತೊಂದೆಡೆ ಭಾರತದಲ್ಲಿನ ಬಾಸೆಲ್ ಮಿಶನಿನಲ್ಲಿ ಉಳಿದಿದ್ದ ಸ್ವಿಸ್ ಮಿಶನರಿಗಳು ತಾವೇ ಮಿಶನ್ ಕಾರ್ಯವನ್ನು ಮುಂದುವರಿಸಲು ನಿರ್ಧರಿಸುತ್ತಾರೆ. ಆದುದರಿಂದ ಈ ಮಿಶನರಿಗಳನ್ನು ಬೆಂಬಲಿಸಲು ಸ್ವಿಡ್ಜರ್ಲ್ಯಾಡ್‌ನಲ್ಲಿ ಒಂದು ಸಹಾಯಕ ಕಮಿಟಿಯಾದ 'ಲೌಸನ್ [Lausanne] ಕಮಿಟಿ'ಯು ರಚನೆಯಾಗುತ್ತದೆ. ಹೀಗೆ 1919ರಲ್ಲಿ ಬಾಸೆಲ್ ಮಿಶನ್ ಕಾರ್ಯವನ್ನು 'ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ'ದಲ್ಲಿ ಮುಂದುವರೆಸಲು ಇದಕ್ಕೆ ಬ್ರಿಟಿಷ್ ಸರಕಾರ ಅನುಮತಿಯನ್ನು ನೀಡುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಈ ಎರಡು ಪ್ರದೇಶಗಳ ಮಿಶನ್ ಕಾರ್ಯವನ್ನು 1927ರವರೆಗೆ ನಿರ್ವಹಿಸಿರುತ್ತದೆ. ಲೌಸನ್ ಕಮಿಟಿಯು ಮಿಶನ್‌ಗೆ ಹಣಕಾಸು ಹಾಗೂ ಮಿಶನರಿಗಳನ್ನು ಒದಗಿಸುತ್ತಿತ್ತು ಹಾಗೂ ಕೆನರೀಸ್ ಇವ್ಯಾಂಜಲಿಕಲ್ ಮಿಶನ್, ಮಿಶನಿನ ಜವಾಬ್ದಾರಿಯನ್ನು ವಹಿಸಿರುತ್ತದೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಉನ್ನತ ಮಟ್ಟದಲ್ಲಿ ಇಂಗ್ಲೀಷ್ ಮಿಶನರಿಗಳೇ ನಿರ್ವಹಿಸುತ್ತಿದ್ದರು ಎಂಬುದು ಗಮನಿಸಬೇಕಾದ ವಿಚಾರವಾಗಿದೆ. ಆದರೆ ಈ ಹೊಸ ವ್ಯವಸ್ಥೆಯು ಮಿಶನಿನ ಸುಲಭವಾದ ಮುಂದುವರಿಕೆಗಿಂತ, ವ್ಯವಸ್ಥೆಯಲ್ಲಿ ಹಲವು ಸಮಸ್ಯೆಗಳಿಗೆ ಕಾರಣವಾಗುವುದನ್ನು ಗಮನಿಸಬಹುದು. ಕೆನರೀಸ್ ಇವ್ಯಾಂಜಲಿಕಲ್ ಮಿಶನನ್ನು ಬಾಸೆಲ್ ಮಿಶನ್ ಕ್ರೈಸ್ತರು ಪ್ರಶ್ನಾತೀತವಾಗಿ ಒಪ್ಪಿಕೊಳ್ಳುವುದಿಲ್ಲ. ಬದಲು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಮತ್ತು ಅದರ ಮಿಶನರಿಗಳ ವಿರುದ್ಧ ಟೀಕಾ ಪ್ರಹಾರಗಳನ್ನು ಮಾಡುತ್ತಾರೆ. 1914ರವರೆಗೆ ಬಾಸೆಲ್ ಮಿಶನರಿಗಳ ವಿರುದ್ಧ ಧ್ವನಿ ಎತ್ತದ ಬಾಸೆಲ್ ಮಿಶನ್ ಕ್ರೈಸ್ತರು ನಂತರದಲ್ಲಿ ಬಾಸೆಲ್ ಮಿಶನರಿಗಳ ವಿರುದ್ಧವು ಟೀಕೆಗಳನ್ನು ಮಾಡಲಾರಂಭಿಸುತ್ತಾರೆ. 1914ರ ಜಾಗತಿಕ ಯುದ್ಧದ ಸಂದರ್ಭದಲ್ಲಿ ಜರ್ಮನ್ ಮಿಶನರಿಗಳು, ಮಿಶನಿನಲ್ಲಿದ್ದ ಅವರ ಭಾರತೀಯ ಸಹೋದ್ಯೋಗಿಗಳನ್ನು ಹಾಗೂ ಸ್ನೇಹಿತರನ್ನು ಪರಿಗಣನೆಗೆ ತೆಗೆದುಕೊಳ್ಳದೇ ಎಲ್ಲಾ ಜವಾಬ್ದಾರಿಗಳನ್ನು ಸ್ವಿಸ್‌ರಿಗೆ ವಹಿಸಿದರು ಎಂಬ ಆರೋಪವನ್ನು ಮಾಡಿದ್ದ ಸ್ಥಳೀಯ ಕ್ರೈಸ್ತರು, ಬಾಸೆಲ್ ಮಿಶನರಿಗಳು ಇಲ್ಲಿನ ಕ್ರೈಸ್ತರಿಗೆ ಉನ್ನತ ವಿದ್ಯಾಭ್ಯಾಸವನ್ನು ನೀಡಲಿಲ್ಲ ಎಂದಿದ್ದರು. ಮತ್ತೊಂದೆಡೆ ಸ್ವಿಡ್ಜರ್ಲ್ಯಾಂಡಿನಲ್ಲೂ ಜರ್ಮನ್ ಭಾಷಾ ಸ್ವಿಸ್‌ರು ಹೊಸದಾದ ಸ್ವಿಸ್ ಮಿಶನ್‌ಗೆ ಭಾರೀ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಬಾಸೆಲ್ ಮಿಶನಿನ ಮುಂದುವರಿಕೆಗೆ ಬೇಕಾದ ಹಣವನ್ನು ಬಾಸೆಲ್ ಮಿಶನ್ ಕೈಗಾರಿಕೆಗಳು ಪೂರೈಸುತ್ತಿದ್ದು, ಸ್ವಿಸ್‌ರ ಹಣದ ಅಗತ್ಯವಿಲ್ಲವೆಂಬುದಾಗಿ ಸ್ವಿಡ್ಜರ್ಲ್ಯಾಂಡಿನಲ್ಲಿ ಜರ್ಮನ್ ಭಾಷಾ ಸ್ವಿಸ್‌ರು ಪ್ರಚಾರ ಮಾಡುತ್ತಿದ್ದರು. ಈ ರೀತಿಯಾಗಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಆರಂಭದಿಂದಲೇ ಭಾರೀ ವಿರೋಧವನ್ನು ಎದುರಿಸಬೇಕಾಯಿತು.

ಯುದ್ಧದ ಕಾಲಾವಧಿಯಲ್ಲಿ ಬಾಸೆಲ್ ಮಿಶನಿನ ಮಿಶನ್ ಪ್ರದೇಶವಾದ ನೀಲಗಿರಿಯನ್ನು ವೆಸ್ಲಿಯನ್ ಮಿಶನರಿಗಳಿಗೆ ವಹಿಸಲಾಗುತ್ತದೆ. ಬಾಸೆಲ್ ಮಿಶನರಿಗಳ ಅನುಪಸ್ಥಿತಿಯಲ್ಲಿ ವೆಸ್ಲಿಯನ್

ಮಿಶನರಿಗಳನ್ನು ಒಪ್ಪಿಕೊಂಡಿದ್ದ ನೀಲಗಿರಿಯ ಬಾಸೆಲ್ ಮಿಶನ್ ಕ್ರೈಸ್ತರು 1927ರಲ್ಲಿ ಬಾಸೆಲ್ ಮಿಶನರಿಗಳು ಮರಳಿದ ಬಳಿಕ ತಮ್ಮ ಉಸ್ತುವಾರಿಯನ್ನು ಬಾಸೆಲ್ ಮಿಶನರಿಗಳೇ ನಡೆಸಬೇಕೆಂದು ಬೇಡಿಕೆ ಮಂಡಿಸುತ್ತಾ, ವೆಸ್ಲಿಯನರನ್ನು ತಿರಸ್ಕರಿಸುತ್ತಾರೆ. ಇದು ನಂತರದಲ್ಲಿ ನೀಲಗಿರಿಯ ಬಾಸೆಲ್ ಮಿಶನ್ ಕ್ರೈಸ್ತರು ಸ್ವತಂತ್ರವಾದ ದೇಶಿಯ ಮಿಶನ್ ಸ್ಥಾಪನೆಗೆ ಕಾರಣವಾಗುತ್ತದೆ. ಜಾಗತಿಕ ಯುದ್ಧದ ಸಂದರ್ಭದಲ್ಲಿ ಕೊಡಗಿನ ಬಾಸೆಲ್ ಮಿಶನಿನ ಕಾರ್ಯವನ್ನು ವೆಸ್ಲಿಯನ್ ಮಿಶನ್‌ಗೆ ವಹಿಸಿದ್ದು ಭಾರೀ ಬಿಕ್ಕಟ್ಟಿಗೆ ಕಾರಣವಾಗುತ್ತದೆ. ವೆಸ್ಲಿಯನರು ಎಲ್ಲಾ ವಿಧದಲ್ಲೂ ಬಾಸೆಲ್ ಮಿಶನರಿಗಳಿಗಿಂತ ಭಿನ್ನವಾಗಿದ್ದಾರೆಂದು ಹೇಳುತ್ತಾ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ವೆಸ್ಲಿಯರನ್ನು ತಿರಸ್ಕರಿಸುತ್ತಾರೆ. ವೆಸ್ಲಿಯವರು ಕೊಡಗಿನ ಆರಾಧನಾ ಕ್ರಮ ಹಾಗೂ ಇತರ ಕೆಲವು ಬದಲಾವಣೆಗಳನ್ನು ನಡೆಸಿ, ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರನ್ನು ವೆಸ್ಲಿಯನೀಕರಣಗೊಳಿಸಲು ಪ್ರಯತ್ನಿಸಿದ್ದು ಇಲ್ಲಿನ ಬಿಕ್ಕಟ್ಟು ಉಲ್ಬಣವಾಗಿ ಸಂಧಾನವೇ ಅಸಾಧ್ಯವಾಗುತ್ತದೆ. ಹೀಗೆ ಕೊಡಗಿನ ಬಾಸೆಲ್ ಮಿಶನ್ ಕ್ರೈಸ್ತರು ವೆಸ್ಲಿಯರನ್ನು ಪ್ರಬಲವಾಗಿ ವಿರೋಧಿಸುತ್ತಾ ಮುಂದುವರೆಯುತ್ತಾರೆ ಹಾಗೂ ಅಂತಿಮವಾಗಿ ಬಾಸೆಲ್ ಮಿಶನರಿಗಳು ಭಾರತಕ್ಕೆ ಮರಳಿದ ಬಳಿಕ ಕೊಡಗಿನ ಉಸ್ತುವಾರಿಯನ್ನು ಅವರಿಗೆ ವಹಿಸುವುದರೊಂದಿಗೆ ಇಲ್ಲಿನ ಬಿಕ್ಕಟ್ಟು ಅಂತ್ಯವಾಗುತ್ತದೆ.

ಬಾಸೆಲ್ ಮಿಶನಿನ ಮಲಬಾರ್ ಪ್ರದೇಶವು ಅದರ ಇತರ ಮಿಶನ್ ಪ್ರದೇಶಗಳಿಗಿಂತ ಭಿನ್ನವಾಗಿದ್ದು, ಇದು ಜಾಗತಿಕ ಯುದ್ಧದ ಸಂದರ್ಭದಲ್ಲಿ 'ಸೌತ್ ಇಂಡಿಯಾ ಯುನೈಟೆಡ್ ಚರ್ಚ್'ನ್ನು ಸೇರಿಕೊಳ್ಳುತ್ತದೆ. ಆದರೆ 1925ಕ್ಕಾಗುವಾಗ ಸೌತ್ ಇಂಡಿಯಾ ಯುನೈಟೆಡ್ ಚರ್ಚ್ ತನಗೆ ಇಲ್ಲಿನ ಮಿಶನ್ ಕಾರ್ಯವನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ತಿಳಿಸುತ್ತದೆ. ಇದು ಮತ್ತೊಂದು ಬಾರಿ ಬಾಸೆಲ್ ಮಿಶನರಿಗಳು ಭಾರತದಲ್ಲಿ ತಮ್ಮ ಕಾರ್ಯ ಆರಂಭಿಸಲು ಕಾರಣವಾಗುತ್ತದೆ. ಹೀಗೆ ಬಾಸೆಲ್ ಮಿಶನಿನ ಮಲಬಾರ್ ಪ್ರದೇಶವು ಅದರ ಎಲ್ಲಾ ಮಿಶನ್ ಪ್ರದೇಶಗಳಿಗಿಂತ ಮೊದಲು ಬಾಸೆಲ್ ಮಿಶನರಿಗಳ ಸೇವೆಯನ್ನು ಮರಳಿ ಪಡೆದಿತ್ತು. ಜಾಗತಿಕ ಯುದ್ಧವು ಬಾಸೆಲ್ ಮಿಶನಿನ ಮಲಬಾರ್ ಚರ್ಚ್ ಹಲವು ಮಿಶನುಗಳ ಒಕ್ಕೂಟವಾದ ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ್ನು ಸೇರಲು ಕಾರಣವಾಯಿತು. ಬಾಸೆಲ್ ಮಿಶನ್ ಮರಳಿದ ಬಳಿಕವು ಮಲಬಾರ್, ಸೌತ್ ಇಂಡಿಯಾ ಯುನೈಟೆಡ್ ಚರ್ಚ್‌ನ ಭಾಗವಾಗಿಯೇ ಮುಂದುವರಿಯುತ್ತದೆ. ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠ ಪ್ರದೇಶಗಳು ಬಾಸೆಲ್ ಮಿಶನರಿಗಳ ಅನುಪಸ್ಥಿತಿಯಲ್ಲಿ ಸ್ವಿಸ್ ಮಿಶನರಿಗಳ ನಿಯಂತ್ರಣದಲ್ಲಿ ಮುಂದುವರೆಯುತ್ತವೆ. ಇಲ್ಲಿನ ಜವಾಬ್ದಾರಿಯನ್ನು ನಿರ್ವಹಿಸಲು ರಚನೆಯಾದ ಹೊಸ ಮಿಶನ್ ಸಂಘವಾದ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ನಿರಂತರವಾಗಿ ವಿರೋಧಗಳನ್ನು ಎದುರಿಸಬೇಕಾಗುತ್ತದೆ. ಈ

